Digitized by Arya Samaj Foundation Chennai and eGangotri

# ನಮ್ಮ ವೀರ ವನಿತೆಯರು

ಲೇಖಕಿ: ಕಮಲಾ ಸಂಪಳ್ಳಿ

CC-0. In Public Domain. Gurukul Kangri Collection, Haridwar

ain. Gurukul Kangri C

ಕಮಲಾ ಗಂಪಳ್ಳಿ

# ನಮ್ಮ ವೀರ ವನಿತೆಯರು

amaj Foundation Che

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

# ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಮ್ಮ ವೀರ ವನಿತೆಯರು

DONATION 8260

पुस्तकालय
8260
गुरुकुल कांगड़ी विश्वविद्यालय

ಲೇಖಕಿ :
ಕಮಲಾ ಸಂಪಳ್ಳಿ

Forwarded Free of Cost and with
the Compliments of the Department
of Education. Govt. of India, New Delhi.

(Kamala Sampalli)

ಪ್ರಕಾಶಕರು :
ಕಮಲಾ ಸಂಪಳ್ಳಿ
ನಂ. 35, 'ಅಭಿರಾಮ', ಎಂ. ಎಸ್. ಎಚ್. ಕಾಲೋನಿ, 2ನೇ ಹಂತ,
ಆನಂದನಗರ, ಹೆಬ್ಬಾಳ, ಬೆಂಗಳೂರು-560 024
ದೂರವಾಣಿ : 331435

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

SWATANTRYA SANGRAMADLLI NAMMA VEERA VANITEYARU—Published by Kamala Sampalli, Principal, Vanivilas Education Institute, Bangalore-4.

Pages 320 + xii

© ಲೇಖಕರವು

ಮೊದಲ ಮುದ್ರಣ : 1992

ಬೆಲೆ ರೂ. 45-00

ಪುಸ್ತಕ ದೊರೆಯುವ ಸ್ಥಳ :
ನಂ. 35, 'ಅಭಿರಾಮ', ಎಂ. ಎಸ್. ಎಚ್. ಕಾಲೋನಿ,
2ನೇ ಹಂತ, ಆನಂದನಗರ, ಹೆಬ್ಬಾಳ, ಬೆಂಗಳೂರು-24.

ಮುದ್ರಕರು :
ರಶ್ಮಿ ಮುದ್ರಣ
ಸುಧಾಮನಗರ, ಬೆಂಗಳೂರು-27

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

# ಮುನ್ನುಡಿ

ವೀರ ವನಿತೆಯರನ್ನು ಕುರಿತ ಲೇಖನಗಳನ್ನೊಳಗೊಂಡ ಈ ಪುಸ್ತಕಕ್ಕೆ ಗ್ರಂಥ ಕರ್ತೆಯರು ಇಚ್ಛಿಸಿದಂತೆ ಮುನ್ನುಡಿಯ ರೂಪದಲ್ಲಿ ನಾಲ್ಕು ಮಾತು ಬರೆಯುವುದು ನನಗೆ ಅತ್ಯಂತ ಸಂತೋಷದ ವಿಷಯ. ಇದಕ್ಕೆ ಮುಖ್ಯ ಕಾರಣ, ಈ ವೀರನಾರಿಯರಲ್ಲಿ, ಕೆಲವೇ ಕೆಲವು ಮಂದಿಯನ್ನುಳಿದು, ಮಿಕ್ಕವರೆಲ್ಲರ ನಿಕಟ ಪರಿಚಯದ ಭಾಗ್ಯ ನನಗಿತ್ತೆಂಬುದು ಮತ್ತು ಸ್ವಾತಂತ್ರ್ಯದ ಸಮರದ ಆಗುಹೋಗುಗಳನ್ನು ಆ ಕಾಲದಲ್ಲಿ ಪ್ರತ್ಯಕ್ಷವಾಗಿ ಅರಿಯುವ ಅವಕಾಶ ನನಗೆ ಲಭಿಸಿದುದರಿಂದ ಈ ಮಹಿಳೆಯರ ಪಾತ್ರದ ನಿಜವಾದ ಹಿರಿಮೆಯು ನನಗೆ ಗೋಚರವಾಯ್ತು ಎಂಬುದು. ನಮ್ಮ ಸ್ವಾತಂತ್ರ್ಯ ಸಾಧನೆಯ ಇತಿಹಾಸದಲ್ಲಿ ಇದು ಅತಿ ಮುಖ್ಯವಾದ ಅಂಶ. ಇದನ್ನು ನಮ್ಮ ನಾಡಿನ ಜನರು ತಿಳಿದುಕೊಳ್ಳುವುದು ತುಂಬಾ ಆವಶ್ಯಕ. ಈ ಸಾಮಗ್ರಿಯು ಕೇವಲ ತಾತ್ಕಾಲಿಕವಾಗಿ ಅಲ್ಲ, ನಿರಂತರವಾದ ಬೆಲೆಯುಳ್ಳದ್ದಾಗಿರುತ್ತದೆ.

ಇದನ್ನೆಲ್ಲಾ ಸಂಗ್ರಹಿಸಲು ಶ್ರೀಮತಿ ಕಮಲಾರವರು ಅತ್ಯಂತ ಶ್ರದ್ಧೆಯಿಂದ, ಆಸಕ್ತಿಯಿಂದ ಶ್ರಮಿಸಿದ್ದಾರೆ. ಇದರಲ್ಲಿ ಒಂದು ವಿಶೇಷವಾದ ಅಂಶವೆಂದರೆ ಈ ಪುಸ್ತಕದಲ್ಲಿ ಚಿತ್ರಿತವಾಗಿರುವ ಮಹಿಳೆಯರಲ್ಲಿ ಹೆಚ್ಚು ಕಡಿಮೆ ಎಲ್ಲರನ್ನೂ ಕಂಡು ಅವರಿಂದಲೇ ನೇರವಾಗಿ ವಿಷಯಗಳನ್ನು ತಿಳಿದುಕೊಂಡಿದ್ದಾರೆ. ಇದರ ಪರಿಣಾಮವಾಗಿ ಲೇಖನದ ವಸ್ತುವಿನ ಪ್ರಾಮಾಣ್ಯ ಮತ್ತು ನಿಖರತೆ ಅತ್ಯಂತ ಖಚಿತವಾಗಿರುವುದು. ಈ ರೀತಿಯ ಸಾಹಿತ್ಯದಲ್ಲಿ ಇದು ಅತ್ಯಂತ ಅಮೂಲ್ಯವಾದ ಗುಣ ಎಂದು ಹೇಳಬೇಕಾದ್ದಿಲ್ಲ. ಇನ್ನೊಂದು ಗಮನಾರ್ಹ ಅಂಶವೆಂದರೆ ಶ್ರೀಮತಿ ಕಮಲಾವರರು ಕಂಡ ಮಹಿಳೆಯರಲ್ಲಿ ಕೆಲವರು ಈಗಾಗಲೇ ಕಣ್ಮರೆಯಾಗಿದ್ದಾರೆ. ಶ್ರೀಮತಿ ಕಮಲಾರವರ ಶ್ರಮದ ಫಲವಾಗಿ ಅವರ ಅನುಭವಗಳು ನಮಗೆ ದೊರಕಿದಂತಾಗಿವೆ.

ಶ್ರೀಮತಿ ಕಮಲಾರವರು ಅತ್ಯಂತ ಶ್ರೇಷ್ಠ ಸಾಂಸ್ಕೃತಿಕ ಪರಂಪರೆಗೆ ಸೇರಿದವರು. ಸ್ವತಃ ವಿದ್ಯಾಧುರೀಣರು, ನುರಿತ ಲೇಖಕರು. ಅವರದು ಗಾಢವಾದ ದೇಶ ಪ್ರೇಮ. ಇದೆಲ್ಲದರ ಅತ್ಯಂತ ಸ್ತುತ್ಯ ಫಲವೇ ಈ ಪುಸ್ತಕ. ಇಂಥ ಮೌಲಿಕ ಕೊಡುಗೆಗಾಗಿ ನಮ್ಮ ನಾಡಿನ ಜನರೆಲ್ಲರ ಕೃತಜ್ಞತೆಗೆ ಅವರು ಪಾತ್ರರು.

ನಿಟ್ಟೂರು ಶ್ರೀನಿವಾಸರಾವ್
(ಕರ್ನಾಟಕ ರಾಜ್ಯ ಮಾಜಿ ಮುಖ್ಯ ನ್ಯಾಯಾಧೀಶರು)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

Forwarded Free of Cost and with
the Compliments of the Department
f Education. Govt. of India, New Delhi.

(Kamala Sampalli)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

# ಡಾ|| ಜಿ. ಎಸ್. ದೀಕ್ಷಿತ್‌ರವರ ನುಡಿಗಳಲ್ಲಿ

ಈ ಪುಸ್ತಕದ ಲೇಖಕಿಯಾದ ಶ್ರೀಮತಿ ಕಮಲಾ ಸಂಪಳ್ಳಿಯವರು ಜಗ್ಗು ಮನೆತನದಲ್ಲಿ ಹುಟ್ಟಿದವರು. ಈ ಮನೆತನದವರು ಮೈಸೂರ ಒಡೆಯರ ಕಾಲದಲ್ಲಿ ಆಸ್ಥಾನ ವಿದ್ವಾಂಸರಾಗಿದ್ದರು. ಅವರಲ್ಲಿ ಕೆಲವರು ಕವಿಗಳಾಗಿ ಅನೇಕ ಪ್ರಶಸ್ತಿಗಳನ್ನು ಗಳಿಸಿದರು.

ಲೇಖಕಿಯ ತಂದೆ ಶ್ರೀ ಜಗ್ಗು ಶಿಂಗರಯ್ಯಂಗಾರ್ಯರು ಶಿಕ್ಷಕರಾಗಿದ್ದರು. ಸಂಸ್ಕೃತದಲ್ಲಿ ಪ್ರಕಾಂಡ ಪಂಡಿತರು. ಅಂತಹ ಮನೆತನಕ್ಕೆ ಶೋಭಿಸುವ ಹಾಗೆ ಕಮಲಾ ಸಂಪಳ್ಳಿಯವರೂ ಉತ್ತಮ ಶಿಕ್ಷಕಿ ಎನಿಸಿಕೊಂಡು ರಾಜ್ಯ ಪ್ರಶಸ್ತಿ ಮತ್ತು ಇನ್ನೂ ಅನೇಕ ಪ್ರಶಸ್ತಿಗಳನ್ನು ಗಳಿಸಿದ್ದಾರೆ. ಇತಿಹಾಸ ವಿಷಯವನ್ನು ತೆಗೆದುಕೊಂಡು ಎಂ. ಎ. ಪದವೀಧರರಾಗಿದ್ದಾರೆ. ಇತಿಹಾಸ ವಿದ್ಯಾರ್ಥಿ ಮತ್ತು ಶಿಕ್ಷಕಿಯಾಗಿದ್ದುದರಿಂದ ನಮ್ಮ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಇವರಿಗೆ ಆಸ್ಥೆ ಹುಟ್ಟಿದ್ದುದರಲ್ಲಿ ಆಶ್ಚರ್ಯವಿಲ್ಲ.

ನಮ್ಮ ಸ್ವಾತಂತ್ರ್ಯ ಸಂಗ್ರಾಮವು ಜಗತ್ತಿನ ಇತಿಹಾಸದಲ್ಲಿ ನಡೆದ ಇತರ ಸ್ವಾತಂತ್ರ್ಯ ಸಂಗ್ರಾಮಗಳಿಗಿಂತ ಭಿನ್ನವಾಗಿದೆ. ಅಹಿಂಸಾ ಮಾರ್ಗವು ನಮ್ಮ ಈ ಸಂಗ್ರಾಮದ ವೈಶಿಷ್ಟ್ಯ. ಇದಕ್ಕೆ ಮಹಾತ್ಮಾ ಗಾಂಧಿಯವರ ನೇತೃತ್ವವು ಕಾರಣವೆಂಬುದು ಎಲ್ಲರಿಗೂ ತಿಳಿದಿದೆ. ಈ ಸಂಗ್ರಾಮದ ಯಶಸ್ಸಿಗೆ ಪುರುಷರಷ್ಟೇ ಮಹಿಳೆಯರೂ ಕಾರಣ. ಮಹಿಳೆಯರ ಮಹತ್ವ ಪಾತ್ರಕ್ಕೆ ಸರಿಯಾದ ಮನ್ನಣೆ ಇದುವರೆಗೂ ದೊರೆತಿಲ್ಲ. ಅದನ್ನು ದೊರಕಿಸುವುದೇ ಈ ಪುಸ್ತಕದ ಮುಖ್ಯ ಉದ್ದೇಶ.

1930–31ರಲ್ಲಿ ಮಹಾತ್ಮಾ ಗಾಂಧಿಯವರು ಆರಂಭಿಸಿದ ಸತ್ಯಾಗ್ರಹದಲ್ಲಿ ಮೊಟ್ಟ ಮೊದಲು ಭಾರತೀಯ ವನಿತೆಯರು ಬಹು ಸಂಖ್ಯೆಯಲ್ಲಿ ಭಾಗವಹಿಸಿದರು. ಸಾವಿರಾರು ವರ್ಷದ ನಮ್ಮ ಇತಿಹಾಸದಲ್ಲಿ ಯಾವ ಚಳವಳಿಯಲ್ಲೂ ಇಷ್ಟು ಜನ ಮಹಿಳೆಯರು ಭಾಗವಹಿಸಿರಲಿಲ್ಲ. ಧೈರ್ಯ, ಸಾಹಸ, ತ್ಯಾಗಗಳಲ್ಲಿ ಮಹಿಳೆಯರು ಪುರುಷರಿಗಿಂತ ಕಡಿಮೆಯಿರಲಿಲ್ಲ. ಕರ್ನಾಟಕದಲ್ಲಿ ನಡೆದ ಸತ್ಯಾಗ್ರಹದಲ್ಲಿ ಪುರುಷರೂ ಸ್ತ್ರೀಯರೂ ಮನೆಮಠಗಳನ್ನು ಕಳೆದುಕೊಂಡು ನಿರ್ಗತಿಕರಾದರು. ಈ ದಾರುಣ ಚಿತ್ರ ಎಂತಹವರ ಮನಸ್ಸನ್ನೂ ಕಲಕುತ್ತದೆ. ನಮ್ಮ ಲೇಖಕಿಯು ಇಂತಹ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ವನಿತೆಯರನ್ನು ನೇರಾಗಿ ಕಂಡು ಅವರ ಕರುಣ ಕಥೆಯನ್ನು ಅವರ ಬಾಯಿಂದಲೇ ಕೇಳಿ ಅವರ ಮಾತಿನಲ್ಲಿಯೇ ಬರೆದಿದ್ದಾರೆ. ಕೇಳಿದ್ದನ್ನು ಕೇಳಿದ ಹಾಗೆ ಬರೆಯುವ ಕಲೆಯನ್ನು ಇವರು ಸಾಧಿಸಿದ್ದಾರೆ. ಆದುದರಿಂದ ಈ ಪುಸ್ತಕವು ಹೃದಯಸ್ಪರ್ಶಿಯಾಗಿದೆ. ಇವರು ಬರೆದಿರುವ ವೀರ ವನಿತೆಯರ ಜೀವನ ನಮ್ಮ ಯುವತಿಯರಿಗೆ ಸ್ಫೂರ್ತಿದಾಯಕವಾಗಿದೆ.

"ವನಿತಾ" ಮಾಸಪತ್ರಿಕೆಯ ಸಂಪಾದಕರು ಶ್ರೀಮತಿ ಸಂಪಳ್ಳಿಯವರಿಗೆ ಪ್ರೋತ್ಸಾಹ ನೀಡಿ, ಇವರು ಬರೆದ ಲೇಖನಮಾಲೆಯನ್ನು ಮುದ್ರಿಸಿ, ಕನ್ನಡಿಗರಿಗೆ ಮಹದುಪಕಾರವನ್ನು ಮಾಡಿದ್ದಾರೆ. ಅವುಗಳನ್ನು ಓದಿ ಅನೇಕರು ಮೆಚ್ಚಿಗೆಯ ಪತ್ರಗಳನ್ನು ಬರೆದಿದ್ದಾರೆ. ಇಂತಹ ಲೇಖನಗಳು ಸಂಗ್ರಹವಾಗಿ ಪುಸ್ತಕರೂಪವಾಗಿರುವುದು ಬಹಳ ಸಂತೋಷದ ವಿಷಯ. ಈ ಪುಸ್ತಕವು ಜನಪ್ರಿಯವಾಗುವುದರಲ್ಲಿ ಸಂದೇಹವಿಲ್ಲ.

ಈ ಲೇಖಕಿಯು ಗೃಹಿಣಿಯಾಗಿದ್ದು ತಮ್ಮ ಜವಾಬ್ದಾರಿಯನ್ನು ನಿರ್ವಹಿಸುತ್ತಿರುವುದರ ಜೊತೆಗೆ ಒಂದು ದೊಡ್ಡ ಕಾಲೇಜಿನ ಮುಖ್ಯಸ್ಥರಾಗಿ ಕೆಲಸ ಮಾಡುತ್ತಿದ್ದಾರೆ. ಇಂತಹ ಮಹಿಳೆಗೆ ಮನೆಯಲ್ಲಿ ಪ್ರೋತ್ಸಾಹವಿರುವುದರಿಂದ ಈ ಪುಸ್ತಕ ಬರೆಯಲು ಸಾಧ್ಯವಾಗಿದೆ. ಇವರ ಯಜಮಾನರು ಈ ಪುಸ್ತಕವನ್ನು ಬರೆಯಲು ಉತ್ತೇಜಿಸಿದುದರ ಜೊತೆಗೆ, ಮಾಹಿತಿ ಸಂಗ್ರಹಿಸಲು ಬೇರೆ ಬೇರೆ ಊರುಗಳಿಗೆ ಇವರನ್ನು ಕರೆದುಕೊಂಡು ಹೋಗಿದ್ದಾರೆ. ಇದು ಅತಿಶಯದ ಸಂಗತಿ. ಈ ಅನುಕೂಲದ ಲಾಭವನ್ನು ಉಪಯೋಗಿಸಿಕೊಂಡು ಕಮಲಾ ಸಂಪಳ್ಳಿಯವರು ಹೆಚ್ಚು ಹೆಚ್ಚಾಗಿ ಇಂತಹ ಅಮೂಲ್ಯವಾದ ಲೇಖನಗಳನ್ನು ಬರೆದು ನಮ್ಮ ಯುವತಿಯರಿಗೆ ಆದರ್ಶ ಜೀವನ ಹೇಗಿರುತ್ತೆಂಬುದನ್ನು ತೋರಿಸಿಕೊಡಬೇಕೆಂಬುದು ನನ್ನ ಹಾರೈಕೆ.

ಡಾ|| ಜಿ. ಎಸ್. ದೀಕ್ಷಿತ್

ಕರ್ನಾಟಕ ಇತಿಹಾಸ ಅಕಾಡೆಮಿಯ ಅಧ್ಯಕ್ಷರು, ಬೆಂಗಳೂರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

# ಲೇಖಕಿಯ ಎರಡು ಮಾತು

ಯಾವುದೇ ರಂಗದಲ್ಲಾಗಲೀ ಮಹಿಳೆಯ ಪಾತ್ರವನ್ನು ಮೆಚ್ಚುವ ಸ್ವಭಾವ ನನ್ನದು. ನಮ್ಮ ದೇಶದ ಸ್ವಾತಂತ್ರ್ಯದಲ್ಲಿ ಮಹಿಳೆಯರ ಪಾತ್ರ ಅತಿ ಮಹತ್ವದ್ದಾಗಿತ್ತೆಂಬ ವಿಚಾರವು ನನ್ನ ಮನದಾಳವನ್ನು ಹೊಕ್ಕಿತ್ತು. ಭಾರತದ ಸಂಪೂರ್ಣ ಪ್ರಗತಿಯೇ ಸ್ವಾತಂತ್ರ್ಯದ ಸತ್ಯ ಸಾರಾಂಶ. ಆದ್ದರಿಂದ ಪುರುಷರಷ್ಟೇ ಸ್ತ್ರೀಯರೂ ಇಲ್ಲಿ ಸಾಧಿಸಬೇಕಾದ ಕೆಲಸವಿದೆಯೆಂದು ಗಾಂಧೀಜಿ ಪದೇ ಪದೇ ಹೇಳುತ್ತಿದ್ದುದು ಹೆಣ್ಣನ್ನು ಮನೆಯೊಳಗಿಂದ ಸಂಗ್ರಾಮಕ್ಕೆ ಎಳೆಯಿತು ಎಂಬ ವಿಷಯವೇ ಈ ಲೇಖನಕ್ಕೆ ಮುಖ್ಯ ಕಾರಣ, ಸಂಗ್ರಾಮದಲ್ಲಿ ಮಹಿಳೆಯರ ಪಾತ್ರ, ಮಹಿಳೆಯ ಧೈರ್ಯ, ಸಾಹಸ, ಸಮಯ ಸ್ಫೂರ್ತಿ, ದೇಶಪ್ರೇಮ, ತಾಳ್ಮೆ, ತ್ಯಾಗ, ಬಲಿದಾನ– ಇವುಗಳನ್ನು ಬೆಳಕಿಗೆ ತರಬೇಕೆಂದು ಕಾತುರವಿದ್ದ ನನ್ನ ಮನಸ್ಸನ್ನು ಅರಿತಂತೆ, 1986ರಲ್ಲಿ ಒಂದು ದಿನ ಕನ್ನಡ ಸಂಚಿಕೆ "ವನಿತಾ"ದವರು ನನಗೊಂದು ಪತ್ರ ಬರೆದರು, "ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಮ್ಮ ವೀರ ವನಿತೆಯರು" ಶೀರ್ಷಿಕೆಯನ್ನು ಇದೇ ವರ್ಷದ ಆಗಸ್ಟ್ ತಿಂಗಳಿಂದ ಪ್ರಾರಂಭಿಸುತ್ತಿದ್ದೇವೆ. ನೀವು ಸಹಕರಿಸುವಿರಾ ?" ಎಂದಿತ್ತು ಆ ಪತ್ರದಲ್ಲಿ. ವನಿತೆಯರ ಬಗ್ಗೆ ಬರೆದ ಲೇಖನಗಳನ್ನು ಪ್ರಕಟಿಸುವ ವನಿತಾ ಇತ್ತ ಆಹ್ವಾನದ ಅವಕಾಶವನ್ನು ಸದುಪಯೋಗಪಡಿಸಿಕೊಂಡೆನು. ಮಾಸಪತ್ರಿಕೆಯಾದ "ವನಿತಾ" ತಿಂಗಳಿಗೊಂದರಂತೆ ನನ್ನ 33 ಲೇಖನಗಳನ್ನೂ 2 ವರ್ಷ 9 ತಿಂಗಳುಗಳಲ್ಲಿ (1986ರ ಆಗಸ್ಟ್ ತಿಂಗಳಿಂದ ಪ್ರಾರಂಭಿಸಿ) ಪ್ರಕಟಿಸಿತು. ಇದಕ್ಕಾಗಿ ವನಿತಾ ವಾಹಿನಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುವುದು ನನ್ನ ಪ್ರಥಮ ಕರ್ತವ್ಯ.

ಈ ಲೇಖನಗಳು ಯಾವ ಪುಸ್ತಕದಿಂದಲೂ ಆರಿಸಿ ಬರೆದುದಲ್ಲ. ನೇರ ಸಂದರ್ಶನ, ದಾಖಲೆಗಳು ಮತ್ತು ಈ ವ್ಯಕ್ತಿಗಳ ಬಗ್ಗೆ ಪ್ರಕಟಣೆಗಳು- ಇವುಗಳ ಆಧಾರದಿಂದ ಬರೆದುದರಿಂದ ಅನೇಕ ಓದುಗರಿಗೆ ಈ ಶೀರ್ಷಿಕೆಯು ಆಸಕ್ತಿ ಹುಟ್ಟಿಸಿತು. ಇದೇ ನನಗೆ ಸ್ಫೂರ್ತಿದಾಯಕವಾಯಿತು. ಎಳೆಂಟು ಮಹಿಳೆಯರನ್ನು ಬಿಟ್ಟರೆ ಮಿಕ್ಕೆಲ್ಲರನ್ನೂ ಅವರಿದ್ದ ಸ್ಥಳಕ್ಕೇ ಹೋಗಿ ಭೇಟಿಯಾಗಿ ಮಾತನಾಡಿಸಿದ್ದೇನೆ, ತಾವಾಗಿಯೇ ಹೇಳಿದ ಅವರ ಅನುಭವ, ಅವರ ತ್ಯಾಗ ಜೀವನ, ಕಣ್ಣೆದುರು ಚಿತ್ರಿಸಿದಂತೆ ವಿವರಿಸಿದ ರೋಮಾಂಚಕ ಘಟನೆಗಳ ನಿರೂಪಣೆ. ಈಗ ಅವರಿರುವ ನಿಜ ಬಾಳ್ವೆ, ಇಂದಿನ ಪರಿಸರದ ಸತ್ಯತೆ–ಇವೆಲ್ಲವೂ ತಿಳಿದಂತಾಯಿತು. ಅವರಿಂದ ನಾನೂ ಕಲಿತ ವಿಷಯ ಅಪಾರ. ಇದಕ್ಕಾಗಿ ಈ ವನಿತೆಯರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


"ಮಹಾತ್ಮನಿಂದಲೇ ಪ್ರಥಮ ಪ್ರೇರಣೆ ಪ್ರಾರಂಭವಾದದ್ದು....ಈ ಮಾಂತ್ರಿಕನ ಮಾತಿನಿಂದ ನಾವು ಮರುಳಾದವು. ಆ ಮಹಾತ್ಮ ನಮ್ಮಿಂದ ಯೋಚಿಸಲೂ ಸಾಧ್ಯವಿಲ್ಲದ ಕೆಲಸವನ್ನು ತೆಗೆಸಿದ್ದಾನೆ" ಎಂದಿದ್ದಾರೆ ಈ ವೀರ ವನಿತೆಯರು.

"ಗೃಹಕೃತ್ಯದಲ್ಲೇ ನಿಮ್ಮ ಇಡೀ ಜೀವನವನ್ನು ಕಳೆಯಬೇಡಿ. ನಿಮ್ಮ ಜೀವನದ ಗುರಿ ಅಷ್ಟೇ ಅಲ್ಲ" ಎಂದು ಎಚ್ಚರಿಸಿದ ಮಹಾತ್ಮರ ಮಾತು ಈ ನಾರಿಯರನ್ನು ಎಬ್ಬಿಸಿತು. ಸಂಗ್ರಾಮಕ್ಕೆ ಹೆಣ್ಣು ಮಕ್ಕಳು ಹೊರಡುವುದೇ ? ಎಂದು ಹಾಸ್ಯ ಮಾಡಿದ ಅಂದಿನ ಸಮಾಜವನ್ನು ಗಾಂಧೀಜಿ ಸಮಾಧಾನಪಡಿಸಿದರು.

ಆದರೂ, ಸಂಗ್ರಾಮಕ್ಕೆ ಸೇರಲು ಮಹಾತ್ಮ ಗಾಂಧಿ ಯಾರನ್ನೂ ಬಲಾತ್ಕರಿಸಲಿಲ್ಲವೆಂಬುದನ್ನು ಈ ವನಿತೆಯರೆಲ್ಲಾ ಸ್ಪಷ್ಟಪಡಿಸಿದ್ದಾರೆ. ತಾವಾಗಿಯೇ ದೇಶಸೇವೆಗೆ ಹೊರಟು ಮುಖಂಡರಾಗಿಯೂ ಮತ್ತು ಸಹಕಾರಿಗಳಾಗಿಯೂ ದುಡಿದ ಈ ಎಲ್ಲಾ ಮಹಿಳೆಯರ ತ್ಯಾಗ, ಕಷ್ಟ ಸಹಿಷ್ಣುತೆ ಒಂದೇ ವಿಧವಾಗಿದೆ. ಮುಖ್ಯ ನಾಯಕರ ಪಾತ್ರಕ್ಕಿಂತ ಹೆಚ್ಚಾಗಿ ಅದರ ಹಿನ್ನೆಲೆಯಲ್ಲಿದ್ದು ಇಡೀ ಕುಟುಂಬ ಎದುರಿಸುತ್ತಿದ್ದ ಪರಿಸ್ಥಿತಿ, ಹೆಂಗಸರೂ ಮತ್ತು ಮಕ್ಕಳೂ ಅನುಭವಿಸುತ್ತಿದ್ದ ನೋವು, ಅಂದಿನ ದೈನಂದಿನ ಸ್ಥಿತಿಯ ಚಿತ್ರಣವನ್ನು ಓದುಗರ ಮುಂದೆ ಇಡುವುದೇ ನನ್ನ ಉದ್ದೇಶ.

ನಾನು ಈ ಮಹಿಳೆಯರನ್ನು ಸಂದರ್ಶಿಸಿ ಬರೆದದ್ದು 1986ರಿಂದ 1989ರ ವರೆಗೆ. ಈ ಪುಸ್ತಕ ಮುದ್ರಣವಾಗಿದ್ದು 1992ರಲ್ಲಿ. ಈ ಮಧ್ಯೆ ಪುಸ್ತಕರೂಪಕ್ಕೆ ಬರುವುದರೊಳಗೆ ಕೆಲವು ವೀರ ವನಿತೆಯರು ಇನ್ನಿಲ್ಲವಾಗಿದ್ದಾರೆ. ಆದರೂ ಸಹ, ಯಾವ ಕಾರಣದಿಂದಲೂ ವನಿತಾದ ಪ್ರಕಟಣೆಯನ್ನು ವ್ಯತ್ಯಾಸ ಮಾಡದೆ ಹಾಗೆಯೇ ಮುದ್ರಣವಾಗಲು ಸಲಹೆ ಕೊಟ್ಟ ಡಾ|| ಚಿ. ನಾ. ಮಂಗಳಾರವರಿಗೆ ನಾನು ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

33 ಲೇಖನಗಳೂ ಸೇರಿ ಒಂದು ಪುಸ್ತಕವಾಗಬೇಕೆಂದು ಹಾರೈಸಿದ ಮತ್ತು ಈ ಪುಸ್ತಕಕ್ಕಾಗಿ ಕೆಲವು ನುಡಿಗಳನ್ನು ಬರೆದುಕೊಟ್ಟ ಡಾ|| ದೀಕ್ಷಿತ್‌ರವರಿಗೆ ಕೃತಜ್ಞತೆಗಳು.

ಕರ್ನಾಟಕ ರಾಜ್ಯದ ಮಾಜಿ ಮುಖ್ಯ ನ್ಯಾಯಾಧೀಶರಾದ ಸನ್ಮಾನ್ಯ ಶ್ರೀ ನಿಟ್ಟೂರು ಶ್ರೀನಿವಾಸರಾವ್‌ರವರು ಮುನ್ನುಡಿ ಬರೆಯಲು ಒಪ್ಪಿಕೊಂಡುದು ನನ್ನ ಭಾಗ್ಯವೆಂದೆಣಿಸುತ್ತೇನೆ. ಮಾನ್ಯರಿಗೆ ನಾನು ಬರೆದಿರುವ ಅನೇಕ ಮಹಿಳೆಯರ ಪರಿಚಯವಿರುವುದರ ಜೊತೆಗೆ ಚಳವಳಿಗಳಲ್ಲಿ ಭಾಗವಹಿಸಿ ಅವರ ಸ್ವಭಾವ ಮತ್ತು ಕೆಲಸಗಳನ್ನು ಚೆನ್ನಾಗಿ ಅರಿತಿದ್ದಾರೆ. ಆಗಸ್ಟ್ ತಿಂಗಳು ನಿಟ್ಟೂರು ಶ್ರೀನಿವಾಸರಾವ್‌ರವರ ಜನನ. ಇವರು 1930, 1932, 1942ರ ಚಳವಳಿಗಳಲ್ಲಿ ಪ್ರಮುಖ ಪಾತ್ರ ವಹಿಸಿ, ಹಿಂದೀ ಪ್ರಚಾರಕ್ಕಾಗಿ ಶ್ರಮಿಸಿದ ಮುಖಂಡರು. 50 ವರ್ಷಗಳಿಗಿಂತಲೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಮಿಗಿಲಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ನೆಂಟಸ್ತಿಕೆ ಇರುವ, ಗಾಂಧಿ ಶಾಂತಿ ಪ್ರತಿಷ್ಠಾನದ ಅಧ್ಯಕ್ಷರಾಗಿರುವ, ಗಾಂಧೀಜಿಯವರ ಆತ್ಮಕಥೆಯನ್ನು ಕನ್ನಡಕ್ಕೆ ತರ್ಜುಮೆ ಮಾಡಿ ತೃಪ್ತಿಪಟ್ಟಿರುವ ಇಂತಹ ರಾಷ್ಟ್ರಪ್ರೇಮಿ, ದೇಶಭಕ್ತರಾದ ಶ್ರೀ ಶ್ರೀ ನಿಟ್ಟೂರು ಶ್ರೀನಿವಾಸರಾವ್‌ರವರು ಈ ಪುಸ್ತಕಕ್ಕೆ ಮುನ್ನುಡಿ ಬರೆದುಕೊಟ್ಟಿರುವುದಕ್ಕಾಗಿ ನಾನು ಅವರಿಗೆ ಎಂದೆಂದೂ ಚಿರಋಣಿಯಾಗಿದ್ದೇನೆ.

ಕ್ವಿಟ್ ಇಂಡಿಯಾ ಚಳವಳಿಯ ಸುವರ್ಣ ಮಹೋತ್ಸವದ ವರ್ಷದಲ್ಲಿ ಎಂದರೆ 1992ರಲ್ಲಿ ಈ ಪುಸ್ತಕ ಸಿದ್ಧವಾದುದು ನನಗೆ ಆನಂದದಾಯಕವಾಗಿದೆ. ಪುಸ್ತಕ ಮುದ್ರಣದ ಪೂರ್ಣ ಜವಾಬ್ದಾರಿಯನ್ನು ವಹಿಸಿಕೊಂಡ ರಶ್ಮಿ ಮುದ್ರಣದವರಿಗೆ ನನ್ನ ಕೃತಜ್ಞತೆಗಳು.

ಶ್ರೀ ಜಿ. ನಾರಾಯಣ, ಕರ್ನಾಟಕ ರಾಜ್ಯದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಭಾವಚಿತ್ರದೊಂದಿಗೆ ಲೇಖನಗಳು ಬರಬೇಕೆಂದು ಸಲಹೆ ಕೊಟ್ಟು, ಅವರ ಸಲಹೆಯನ್ನು ಸಾಧಿಸಿದುದಕ್ಕಾಗಿ ಬಹಳ ಮೆಚ್ಚಿಗೆಯನ್ನು ತೋರಿಸಿ, ವೀರ ಮಹಿಳೆಯರ ಬಗ್ಗೆ ಬರೆದ ಲೇಖನಗಳು ಒಂದು ಶಾಶ್ವತ ಪುಸ್ತಕ ರೂಪಕ್ಕೆ ಬಂದುದಕ್ಕಾಗಿ ನನ್ನನ್ನು ಪ್ರೋತ್ಸಾಹಿಸಿದ್ದಾರೆ. ಶ್ರೀ ಜಿ. ನಾರಾಯಣರವರಿಗೆ ನನ್ನ ಗೌರವವನ್ನು ಸಲ್ಲಿಸುತ್ತೇನೆ.

ವನಿತಾದಲ್ಲಿ ಈ ಲೇಖನಮಾಲೆ ಪ್ರಕಟವಾಗಲು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಅನೇಕ ಮಹನೀಯರೂ ಮತ್ತು ಮಹಿಳೆಯರೂ ನನಗೆ ಸಹಾಯ ನೀಡಿದ್ದಾರೆ. ಅಭಿಮಾನಿಗಳೇಕರು ಪತ್ರ ಮುಖೇನ ಈ ಲೇಖನಗಳಿಗಾಗಿ ಅಭಿನಂದಿಸಿದ್ದಾರೆ. ಅಂತಹ ಅಭಿಮಾನಿಗಳಲ್ಲಿ ಒಬ್ಬರಾದ ಡಾ॥ ಸೂರ್ಯನಾಥ ಕಾಮತರ ಹೆಸರನ್ನು ಇಲ್ಲಿ ಹೇಳುವುದು ನನಗೆ ಹೆಮ್ಮೆಯ ವಿಷಯವಾಗಿದೆ. ಹುಬ್ಬಳ್ಳಿ, ಧಾರವಾಡ, ಮೈಸೂರು, ನಂಜನಗೂಡು, ತುಮಕೂರು, ಬೆಳಗಾವಿ-ಇತ್ಯಾದಿ ಊರುಗಳಿಗೂ ಮತ್ತು ಬೆಂಗಳೂರಿನ ಅನೇಕ ಸ್ಥಳಗಳಿಗೂ ಈ ವನಿತೆಯರನ್ನು ಹುಡುಕಿ ಹೋಗುವಾಗ ನನ್ನ ಪತಿಯ ಸಹಕಾರ, ಸೌಹಾರ್ದತೆ ಸಂಪೂರ್ಣವಾಗಿದ್ದು ನನ್ನ ಜೊತೆಯಲ್ಲಿ ತಾವೂ ಬಂದು ಸಹಾಯ ನೀಡಿದರಾದ್ದರಿಂದ ಅವರಿಗೂ ನನ್ನ ಕೃತಜ್ಞತೆಗಳು.

ಈ ಎಲ್ಲರ ಪ್ರೋತ್ಸಾಹದಿಂದ ಮೂಡಿಬಂದ ವನಿತಾದ ಲೇಖನಗಳು ಈಗ ಪುಸ್ತಕ ರೂಪವಾಗಿರುವುದಕ್ಕೂ ಅನೇಕರ ಅಪೇಕ್ಷೆಯೇ ಕಾರಣವಾಗಿದೆ.

ಕಮಲಾ ಸಂಪಳ್ಳಿ
ಪ್ರಿನ್ಸಿಪಾಲ್, ವಾಣಿವಿಲಾಸ ವಿದ್ಯಾಸಂಸ್ಥೆ,
ಬೆಂಗಳೂರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

# ಪರಿವಿಡಿ


| | | | |
|---|---|---|---|
| 1 | ಮಾತಾ ತಪಸ್ವಿನಿ | ... | 1 |
| 2 | ತಾಯಿ ಮಹಾದೇವಿ | ... | 7 |
| 3 | ತಪಸ್ವಿನಿ ಉಮಾಬಾಯಿ ಕುಂದಾಪುರ | ... | 12 |
| 4 | 1942ರ ಕ್ರಾಂತಿರಂಗದ ರಾಷ್ಟ್ರನಾಯಕಿ ಅರುಣಾ ಆಸಿಫ್ ಅಲಿ | ... | 29 |
| 5 | ಮಹಿಳಾ ಆಂದೋಲನಾ ಧುರೀಣೆ ಕಮಲಾದೇವಿ ಚಟ್ಟೋಪಾಧ್ಯಾಯ | ... | 28 |
| 6 | ಲೌಕಿಕ ರಂಗದ ಅಲೌಕಿಕ ಅತಿಮಾನುಷ ಪ್ರತಿಭೆಯು ಪ್ರಭಾವತಿ ದೇವಿ | ... | 38 |
| 7 | ಕರ್ಮಯೋಗಿ ಕಸ್ತೂರಿಬಾ | ... | 49 |
| 8 | ಕರ್ನಾಟಕದ ಕಸ್ತೂರಬಾ ಯಶೋಧರಾ ದಾಸಪ್ಪ | ... | 62 |
| 9 | ಗಾಂಧೀಜಿ ವಾತ್ಸಲ್ಯವನ್ನು ಗೆದ್ದ ಕನ್ನಡತಿ ತಿರುಮಲೆ ರಾಜಮ್ಮ (ಭಾರತಿ) | ... | 68 |
| 10 | ಕಮಲಾ ನೆಹರು | ... | 81 |
| 11 | ಡಾಕ್ಟರ್ ಸುಶೀಲ ನಯ್ಯಾರ್ | ... | 94 |
| 12 | ಹರಿಜನಪ್ರಿಯೆ ನಾಗಮ್ಮ ಸರದಾರ ವೀರನಗೌಡ ಪಾಟೀಲ | ... | 108 |
| 13 | ಲೀಲಾವತಿ ವೆಂಕಟೇಶ ಮಾಗಡಿ | ... | |
| 14 | ಹಾವೇರಿಯ ಜಂಗಮ ಕೊಪ್ಪದ ಮನ್ನಂಗಿ ದೇವಕ್ಕ ರಮಾನಂದ | ... | |
| 15 | ಜಿ. ಸಿ ಭಾಗೀರತಮ್ಮ | ... | 136 |
| 16 | ಸ್ತ್ರೀ ಶಕ್ತಿ ಜಾಗೃತಿ ಸಂಘಟನಾ ಚತುರೆ ಶಕುಂತಲಾ ಕುರ್ತಕೋಟಿ | ... | 147 |
| 17 | ಕನ್ನಡ ಕುಲನಾರಿ ಸುಬ್ಬಮ್ಮ ಜೋಯಿಸ್ | ... | 154 |
| 18 | ನಿತ್ಯನೂತನ ಶಿಕ್ಷಣದ ಕನಸು ಕಂಡ ಸರಸ್ವತಿ ನಟರಾಜನ್ | ... | 160 |
| 19 | ವಿದ್ಯಾಧರೆ ಎಂ. ಆರ್. ಲಕ್ಷಮ್ಮ | ... | 170 |


CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


20 ಸುಶೀಲಾ ಭೀಮಕುಮಾರ್ ... 177

21 ಶಾಂತಾಬಾಯಿ ದತ್ತಾತ್ರೇಯ ಕರಮರಕರ ... 187

22 ರಮಾಬಾಯಿ ಜೀವನರಾವ್ ಯಾಳಗಿ ... 196

23 ಅಡಿಯಿಂದ ಮುಡಿಯುವರೆಗಿನ ಸಂಪ್ರದಾಯಸ್ಥೆ
ಪಿ. ಆರ್ ಜಯಲಕ್ಷ್ಮಮ್ಮ ... 206

24 ಸೀತಮ್ಮ ಸುಬ್ರಹ್ಮಣ್ಯ ಶಾಸ್ತ್ರಿ ... 215

25 ಕರನಿರಾಕರಣ ಚಳವಳಿಯ ಧೀಮಂತ ನಾಯಕಿ
ಗೌರಮ್ಮ ಸರದಾರ ವೆಂಕಟರಾಮಯ್ಯ ... 228

26 ಸುಶೀಲಾಬಾಯಿ ಕುಲಕರ್ಣಿ ... 239

27 ಪ್ರಮೀಳಾ ಬಾಯಿ ದೇಶಪಾಂಡೆ ... 251

28 ಪವಿತ್ರ ವ್ಯಕ್ತಿತ್ವ ವಾಹಿನಿ ಅನ್ನಪೂರ್ಣಾದೇವಿ
ತಿಮ್ಮಾರೆಡ್ಡಿ ... 262

29 ತ್ಯಾಗ, ವೈರಾಗ್ಯ ನಿಧಿ ಮೈಸೂರಿನ ಸುನಂದಮ್ಮ
ತಾಂಡೂರು ನರಸಿಂಹ ಅಯ್ಯಂಗಾರ್ ... 269

30 ಅನ್ನಪೂರ್ಣಮ್ಮ ನಂಜಪ್ಪ ... 278

31 ದೀನದಲಿತರ ದುಃಖಿಗಳ ಆಪ್ತ ಬಂಧು ಕಮಲಾನಾಯ್ಡು ... 283

32 ಶಾರದಮ್ಮ ಗೋವಿಂದರಾವ್ ... 293

33 ಆಜೀ ರಂಗನಾಯಕಿ ... 296

34 ಗಾಂಧೀ ನಾಮಸ್ಮರಣ ಪುನೀತೆ ಬಿ ಕಾಮಾಕ್ಷಮ್ಮ ... 307


Forwarded Free of Cost and with
the Compliments of the Department
of Education. Govt. of India, New Delhi.

(Kamala Sampalli)

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

## ಮಾತಾ ತಪಸ್ವಿನಿ

"ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡ ಮಹಿಳೆಯರ ಪಾತ್ರವನ್ನು ಸುವರ್ಣಾಕ್ಷರದಲ್ಲಿ ಬರೆದಿಡಬೇಕು."

"ಉಪ್ಪಿನ ಸತ್ಯಾಗ್ರಹದ ಸಂದರ್ಭದಲ್ಲಿ ಮುನ್ನುಗ್ಗಿದ ಮಹಿಳೆಯರ ತಂಡದ ದೃಶ್ಯ ಎಲ್ಲರನ್ನೂ ಬೆದರಿಸುವಂತಿತ್ತು."

"ಅವಿದ್ಯಾವಂತರೆನಿಸಿದ ವನಿತೆಯರೂ ಸಹ ಅಹಿಂಸಾತ್ಮಕ ಮತ್ತು ಅಸಹಕಾರ ಚಳವಳಿಯಲ್ಲಿ ಅತ್ಯಂತ ಉತ್ತಮ ರೀತಿಯಲ್ಲಿ ನಡೆದುಕೊಂಡಿದ್ದಾರೆ."

"ಬ್ರಿಟಿಷ್ ಸರ್ಕಾರದ ಕ್ರೋಧವನ್ನೂ ಶಿಕ್ಷೆಯನ್ನೂ ತಾಳ್ಮೆಯಿಂದಲೂ, ಧೈರ್ಯದಿಂದಲೂ ಸಹಿಸಿದ್ದಾರೆ. ಅಹಿಂಸಾ ಚಳವಳಿಗೆ ನಿಜವಾದ ಅರ್ಥವನ್ನು ಕೊಟ್ಟು ಕಾರ್ಯಗತ ಮಾಡಿದವರು ಮಹಿಳೆಯರು."

ಮಹಾತ್ಮಾ ಗಾಂಧಿಯವರ ಈ ವಾಕ್ಯಗಳು ನಮ್ಮ ವನಿತೆಯರ ಸಾಹಸವನ್ನೂ ಸಹಿಷ್ಣುತೆಯನ್ನೂ, ಸಾಧನೆಯನ್ನೂ ಚಿತ್ರಿಸುತ್ತವೆ.

ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಮಹಿಳೆಯರ ಕ್ರಾಂತಿ ಚಟುವಟಿಕೆಗಳು ಅವರ ಪ್ರಚಂಡ ಸಾಮರ್ಥ್ಯವನ್ನು ನಿರೂಪಿಸಿ ರೋಮಾಂಚಕಾರಕವಾಗಿವೆ. ಹಿನ್ನೆಲೆಯಲ್ಲಿದ್ದು ರಾಜಕೀಯ ಸಂಘಟನೆಯನ್ನು ತಂದರು. ಅಪರಾಧಿಗಳೆಂದು ಬ್ರಿಟಿಷರ ಕೈಗೆ ಸಿಕ್ಕಿಬಿದ್ದು ಖೈದಿಗಳಂತೆ ಹಿಡಿಯಲ್ಪಟ್ಟು ಯುವತಿಯರನೇಕರು ಸೆರೆಮನೆಯಲ್ಲಿ ಕಾಲಕಳೆಯಬೇಕಾಯಿತು. ಸ್ತ್ರೀಯರಲ್ಲಿ ಜಾಗೃತಿಯನ್ನು, ಸ್ಫೂರ್ತಿಯನ್ನೂ ತುಂಬುವ ಪ್ರಮುಖ ಪಾತ್ರವನ್ನು ವಹಿಸಿದರು. ತ್ಯಾಗ ಜೀವಿಗಳಾಗಿದ್ದು ಸ್ವಾತಂತ್ರ್ಯ ಗಳಿಸಿ ಕೊಟ್ಟರು. ಭಾರತ ಸ್ವಾತಂತ್ರ್ಯಕ್ಕಾಗಿ ನೀಡಿದ ಇವರ ಕೊಡುಗೆ ಚಿರಸ್ಮರಣೀಯ.

ಗಾಂಧೀಜಿಯವರು ತಾವು ಕೈಗೊಂಡ ಸ್ವಾತಂತ್ರ್ಯ ಸಂಗ್ರಾಮದ ಕಾರ್ಯಗಳಲ್ಲಿ ಮಹಿಳೆಯರಿಗೂ ಉತ್ತೇಜನವಿತ್ತರು. ಮಹಾತ್ಮಾರವರ ಘೋಷಣೆಯೇ ಹೀಗಿತ್ತು.

"ನಮ್ಮದು ಅಹಿಂಸಾ ಚಳವಳಿ. ಇದರಲ್ಲಿ ಮಾನವನ ಶಕ್ತಿಯನ್ನು ಅಳೆಯಬೇಕಾಗಿಲ್ಲ. ತಾಳ್ಮೆ, ತ್ಯಾಗ, ನಿಶ್ಚಲತೆ ಅಗತ್ಯವಾಗಿದೆ. ಈ ಗುರಿ ಸಾಧನೆಗೆ ಪುರುಷರಿಗಿಂತ ಸ್ತ್ರೀ ದಕ್ಷಳೆಂದು ನಿರೂಪಿತವಾಗಿದೆ."

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಆದರೆ ಮಹಾತ್ಮರು ಯಾರನ್ನೂ ಬಲಾತ್ಕಾರವಾಗಿ ಚಳವಳಿಗೆ ಎಳೆಯಲಿಲ್ಲ. ಮಹಾತ್ಮರ ವಾಣಿಯಿಂದ, ಮಹಾತ್ಮರ ವ್ಯಕ್ತಿ ಪ್ರಭಾವದಿಂದ ಸೆಳೆಯಲ್ಪಟ್ಟು ತಾವಾಗಿಯೇ ಮಹಿಳೆಯರು ಲೆಕ್ಕಕ್ಕೆ ಮೀರಿದಷ್ಟು ಸಂಖ್ಯೆಯಲ್ಲಿ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿದರು. ತಾವು ತಮಗಾಗಿ, ತಮ್ಮ ದೇಶಕ್ಕಾಗಿ ಮಾಡಿದ ಸೇವೆ ಸಾರ್ಥಕವೆಂದು ತೃಪ್ತಿಪಟ್ಟರು. ಗೃಹಕೃತ್ಯಕ್ಕೇ ತಮ್ಮ ಜೀವನವನ್ನು ಮುಡುಪಾಗಿಟ್ಟ ಮಹಿಳೆಯರೂ ಮನೆಯ ಹೊರಗೆ ಬಂದು ಚಳವಳಿಯಲ್ಲಿ ಭಾಗವಹಿಸಿದರು. ಈ ಪಾತ್ರದ ಹಿನ್ನೆಲೆಯಲ್ಲಿ ಅಡಗಿದ್ದ ಮೋಡಿ—ಗಾಂಧಿಯವರ ದಿವ್ಯವಾಣಿ, ದಿವ್ಯ ಸಂದೇಶ—ಎಂದು ಈ ವೀರವನಿತೆಯರು ಸಾರಿ ಹೇಳಿದ್ದಾರೆ.

ಭಾರತದ ಕ್ರಾಂತಿಕಾರೀ ಚಟುವಟಿಕೆಯ ಪ್ರಪ್ರಥಮ ಮಹಿಳೆ ಮಾತಾ ತಪಸ್ವಿನಿ. 1857 ರಿಂದ 1907ರವರೆಗೆ ಸತತವಾಗಿ ಐವತ್ತು ವರ್ಷಗಳ ಕಾಲ ಸ್ವಾತಂತ್ರ್ಯಕ್ಕಾಗಿ ಶ್ರಮಿಸಿದ ಮಹಾತ್ಯಾಗಿ.

ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು 1857ರಲ್ಲಿ ನಡೆಯಿತು. ಈ ಸಂಗ್ರಾಮವು ಮಹಾತ್ಮ ಗಾಂಧಿಯವರ ಕಾಲಕ್ಕೂ ಮುಂಚೆಯೇ ಜರುಗಿತು.

ಮಹಾತ್ಮಾಜಿಯವರು ಕಾಂಗ್ರೆಸ್ ಸಂಸ್ಥೆಯ ಕಾರ್ಯಕ್ರಮಕ್ಕೆ ಕಾಲಿಡುವ ಮೊದಲು ಭಾರತೀಯರು ಬ್ರಿಟಿಷರ ವಿರುದ್ಧ ಸಶಸ್ತ್ರಧಾರಿಗಳಾಗಿ, ಕತ್ತಿ ಗುರಾಣಿ ಹಿಡಿದು ಯುದ್ಧರಂಗದಲ್ಲಿ ಶತ್ರುಗಳನ್ನು ಎದುರಿಸುತ್ತಿದ್ದರು. ಮಹಿಳೆಯರೂ ರಣರಂಗದ ತರಬೇತಿ ಪಡೆಯುತ್ತಿದ್ದರು. ಅಂತಹ ಧೀರ ಮಹಿಳೆಯರಲ್ಲೊಬ್ಬರು ಮಾತಾ ತಪಸ್ವಿನಿ, ಝಾನ್ಸಿರಾಣಿ ಲಕ್ಷ್ಮೀಬಾಯಿಯ ಜೊತೆಯಲ್ಲಿ ಅಶ್ವಾರೋಹಿಯಾಗಿ ಯುದ್ಧಭೂಮಿಗೆ ನುಗ್ಗಿ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬ್ರಿಟಿಷರೊಡನೆ ಯುದ್ಧ ಮಾಡಿದ ವೀರ ಮಹಿಳೆ ಮಾತಾಜೀ, ಝಾನ್ಸಿರಾಣಿ ರಣರಂಗದಲ್ಲಿ ಮಡಿದು ದೇಶಕ್ಕಾಗಿ ಬಲಿದಾನವಾದರು. ಮಾತಾ ತಪಸ್ವಿನಿ ರಣರಂಗದಿಂದ ಹೊರಬಂದು ಕ್ರಾಂತಿ ವೀರ ನಾಯಕಿಯಾಗಿ ಮಹಿಳಾ ಸಂಘಟನಾ ಕಾರ್ಯವನ್ನು ಕೈಗೊಂಡರು. ಪ್ರಥಮ ಸಂಗ್ರಾಮದಲ್ಲಿ ಭಾರತೀಯರಿಗೆ ಸೋಲಾಗಲು ಕಾರಣವೇನೆಂದು ತಪಸ್ವಿನಿ ಅರಿತು ಬ್ರಿಟಿಷರ ಕಣ್ಣನ್ನು ತಪ್ಪಿಸಿ, ಮಹಿಳೆಯರಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ಸ್ಫೂರ್ತಿ ತರಲು ನಿರಂತರ ಶ್ರಮಿಸಿ ಅನೇಕ ಸ್ಥಳಗಳಿಗೆ ವೇಷ ಮರೆಸಿಕೊಂಡು ಹೋಗಿ ಮಹಿಳೆಯರಿಗೆ ಕ್ರಾಂತಿಕಾರೀ ಕಾರ್ಯಗಳಲ್ಲಿ ತರಬೇತು ಕೊಟ್ಟರು. ಭಾರತ ಕ್ರಾಂತಿವೀರ ಪ್ರಥಮ ಮಹಿಳೆ ಮಾತಾ ತಪಸ್ವಿನಿಯ ನಿಜವಾದ ಹೆಸರು ಗಂಗಾಬಾಯಿ.

ಬ್ರಿಟಿಷರಿಗೆ ಈಕೆಯ ಹೆಸರು ಪ್ರಖ್ಯಾತವಾಗಿ ತಿಳಿದಿದ್ದುದು ಮಾತಾ ತಪಸ್ವಿನೀ ಎಂದೇ. ಇವರು ಗುಪ್ತ ಚಟುವಟಿಕೆಗಳ ವೀರನಾಯಕಿ ಗಂಗಾಬಾಯಿ ಎನ್ನುವುದು ಬ್ರಿಟಿಷರಿಗೆ ಪತ್ತೆಯಾಗಲೇ ಇಲ್ಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಗಂಗಾಬಾಯಿಯ ಮಾತಾಪಿತರು ಪವಿತ್ರ ಗಂಗಾಮಾತೆಯ ವರಪ್ರಸಾದದಿಂದ ತಮಗೆ ಪುತ್ರಿ ಜನನವಾಯಿತೆಂಬ ನಂಬಿಕೆಯಿಂದ ಮಗುವಿಗೆ ಗಂಗಾ ಎಂದೇ ನಾಮಕರಣ ಮಾಡಿದರು.

ಬಾಲ್ಯದಿಂದ ಗಂಗಾಬಾಯಿಯು ಸಂಸ್ಕೃತ ವಿದ್ಯಾಭ್ಯಾಸದ ಜೊತೆಗೆ ವ್ಯಾಯಾಮ ಮತ್ತು ಯುದ್ಧೋಚಿತ ಶಿಕ್ಷಣವನ್ನು ಪಡೆದಳು. ಅಂದಿನ ಕಾಲದಲ್ಲಿ ಶ್ರೀಮಂತ ಕುಟುಂಬದ ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ತೊಂದರೆ ಇರಲಿಲ್ಲ. ಸಾರ್ವಜನಿಕ ಶಾಲೆಗಳಿಗೆ ಹೋಗಲು ಸಾಮಾಜಿಕ ನಿರ್ಬಂಧವಿದ್ದುದರಿಂದ ಹಣವಂತರ ಮನೆಯ ಹೆಣ್ಣುಮಕ್ಕಳು ಮನೆಯಲ್ಲೇ ಇದ್ದು ವಿದ್ಯೆ ಕಲಿಯಲು ಅವಕಾಶವಿತ್ತು. ಸಂಸ್ಕೃತ ವಿದ್ಯಾಭ್ಯಾಸವನ್ನು ಮಾಡಿದ ಗಂಗಾಬಾಯಿಗೆ ಭಾರತ ದೇಶದ ಸಂಸ್ಕೃತಿಯ ಬಗೆಗೆ ಅಭಿಮಾನ ಬೆಳೆಯಿತು. ತನ್ನ ದೇಶ ಯಾವುದರಲ್ಲಿಯೂ ಕಡಿಮೆಯಿಲ್ಲವೆಂದು ಆ ಪುಟ್ಟ ಹುಡುಗಿ ಹೆಮ್ಮೆ ಪಡುತ್ತಿದ್ದಳು.

ದೇಶಪ್ರೇಮದಿಂದಲೂ ಜ್ಞಾನ ತೇಜಸ್ಸಿನಿಂದಲೂ ಅಸ್ತ್ರಾಭ್ಯಾಸದಿಂದಲೂ ರೂಪವತಿಯಾಗಿ ಮತ್ತು ಸಾಹಸಿಯಾಗಿ ಬೆಳೆಯುತ್ತಿದ್ದ ಗಂಗಾಬಾಯಿಗೆ ಅನುರೂಪನಾದ ವರನು ಸಿಕ್ಕಿದುದರಿಂದ ವಿವಾಹದ ಏರ್ಪಾಡಾಯಿತು. ಮದುವೆಯೂ ನಡೆದು ಹೋಯಿತು.

ಸುಗುಣವಂತೆ, ಸುಂದರಿಯಾದ ತಮ್ಮ ಮಗಳು ಸಂಸಾರದಲ್ಲಿ ಸುಖವಾಗಿ ಬಾಳುತ್ತಾಳೆಂದು ಗಂಗಾಬಾಯಿಯ ತಂದೆ-ತಾಯಿ ಸಂತೋಷದಿಂದಿದ್ದರು. ಆದರೆ ವಿಧಿ ನಿಯಮವೇ ಬೇರೆಯಾಗಿತ್ತು.

ವಿವಾಹವಾದ ಕೆಲವು ದಿನಗಳಲ್ಲಿಯೇ ಪತಿಯನ್ನು ಕಳೆದುಕೊಂಡು ಗಂಗಾಬಾಯಿ ಬಾಲವಿಧವೆಯಾದಳು.

ವಿಧವೆಯಾದಂದಿನಿಂದ ಗಂಗಾಬಾಯಿಗೆ ಯಾವುದರಲ್ಲೂ ಆಸಕ್ತಿಯಿಲ್ಲದೆ ಹೋಯಿತು. ಜೀವನದಲ್ಲಿ ಜಿಗುಪ್ಸೆಯುಂಟಾಯಿತು. ಸದಾ ನಾಲ್ಕು ಗೋಡೆಗಳ ಮಧ್ಯೆ ಇದ್ದು ದೇವರ ಧ್ಯಾನ ಮಾಡುತ್ತಾ, ಆಧ್ಯಾತ್ಮಿಕ ಗ್ರಂಥಗಳನ್ನು ಪಠಿಸುತ್ತಾ ಕಾಲ ಕಳೆಯುತ್ತಿದ್ದಳು. ಧ್ಯಾನಾಸಕ್ತಳಾಗಿ ಕೆಲವು ದಿನಗಳು ಆಹಾರ ನಿದ್ರೆಯನ್ನೂ ಬಿಟ್ಟು ಕುಳಿತುಬಿಡುತ್ತಿದ್ದಳು. ಹುಟ್ಟಿದ ಒಬ್ಬಳೇ ಮಗಳನ್ನು ಪ್ರೀತಿ, ಮಮತೆಯಿಂದ ಸಾಕಿ, ಧೈರ್ಯೋತ್ಸಾಹ ಕಲಿಸಿ ಹೆಮ್ಮೆಯಿಂದಿದ್ದ ತಂದೆತಾಯಿಗಳು ಗಂಗಾಬಾಯಿಯ ಈ ದುಃಸ್ಥಿತಿಯನ್ನು ಕಂಡು ಕಣ್ಣೀರಿಟ್ಟರು. ಆದರೆ ಗಂಗಾ ಯಾವ ಕಡೆಗೂ ಗಮನ ಕೊಡದೆ ತನ್ನ ಪಾಡಿಗೆ ತಪಸ್ಸನ್ನಾಚರಿಸಿ ಕಣ್ಣುಮುಚ್ಚಿ ಕುಳಿತುಕೊಳ್ಳುತ್ತಿದ್ದಳು. ಯಾರೊಂದಿಗೂ ಮಾತಾಡಲು ಇಚ್ಛಿಪಡುತ್ತಿರಲಿಲ್ಲ. ಧ್ಯಾನಾಸಕ್ತಳಾಗಿ ಕುಳಿತು ನೆಮ್ಮದಿ ಕಾಣುತ್ತಿದ್ದಳು. ಮಹಾಚತುರೆ, ಬುದ್ಧಿಶಾಲಿ, ವಿವೇಕವುಳ್ಳ ತಮ್ಮ ಮಗಳು ಹೀಗೆ ಒಂದೇ ಕಡೆ ಕುಳಿತು ಮೌನವಾಗಿರುವುದನ್ನು ಕಂಡು ಮಾತಾಪಿತರ ಹೃದಯ ದಹಿಸಿತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಈ ಶರೀರವನ್ನು ಆದಷ್ಟು ದಂಡಿಸಬೇಕೆಂದು ಹಟ ತೊಟ್ಟು ಗಂಗಾಬಾಯಿ ಒಂದು ದಿನ ರಾತ್ರಿ ಸದ್ದಿಲ್ಲದೆ ಮನೆ ಬಿಟ್ಟು ಹೋಗಿ ತಾಮ್ರ ಪರ್ಣಿ ನದಿಯ ದಡದಲ್ಲಿ ಪಂಚಾಗ್ನಿ ಮಧ್ಯೆ ಕುಳಿತು ಕಠಿಣ ತಪಸ್ಸು ಆಚರಿಸಲು ಪ್ರಾರಂಭಿಸಿದಳು. ವಿಷಯ ತಿಳಿದ ಗಂಗಾಬಾಯಿಯ ಮಾತಾಪಿತರು ಧಾವಿಸಿ ಬಂದು ನೋಡಿದಾಗ, ಸುಕೋಮಲ ಬಾಲೆ ಸುಡುವ ಬೇಸಿಗೆಯಲ್ಲಿ ಧಗ ಧಗ ಉರಿಯುತ್ತಿರುವ ಬೆಂಕಿಯ ಮಧ್ಯೆ ಧ್ಯಾನಾಸಕ್ತಳಾಗಿ ಕುಳಿತಿರುವುದನ್ನು ಕಂಡರು, ಚೀರಿದರು. "ಇದೇನಮ್ಮ ಗಂಗಾ? ಎದ್ದು ಬಾಮ್ಮಾ" ಎಂದು ಕೂಗಿ ನಿಸ್ಸಹಾಯಕರಾದರು. ತದೇಕ ಚಿತ್ತದಿಂದ ಘೋರ ತಪಸ್ಸು ಮಾಡುತ್ತಾ ಅಚಲಳಾಗಿ ಕುಳಿತಿದ್ದ ಗಂಗಾಬಾಯಿಯನ್ನು ಕೊನೆಗೆ ಬಲಾತ್ಕಾರ ದಿಂದ ಮನೆಗೆ ಕರೆದುಕೊಂಡು ಬಂದು ಅವಳ ತಂದೆ ತಾಯಿ ಅವಳಿಗೆ ಬುದ್ಧಿ ಮಾತು ಹೇಳಿದರು. ಉಪದೇಶ ಮಾಡಿದರು. ಗಂಗಾ ತಾನು ಏನು ಮಾಡಬೇಕೆಂದು ತೋಚದೆ ಮೂಕಾದಳು.

ಕೆಲವು ದಿನಗಳುರುಳಿದುವು. ಗಂಗಾಬಾಯಿಯ ತಂದೆ ಸ್ವರ್ಗಸ್ಥರಾದರು. ಅವರ ಕೆಲಸದ ಜವಾಬ್ದಾರಿಯನ್ನು ಗಂಗಾಬಾಯಿಯೇ ನೋಡಿಕೊಳ್ಳಬೇಕಾಯಿತು.

ತನ್ನ ತಪಸ್ಸಿಗೆ ಭಂಗವಾಗಿ ಮನೆಗೆ ಹಿಂದಿರುಗಬೇಕಾದುದೂ ಮತ್ತು ತನ್ನ ತಂದೆ ದೈವಾಧೀನರಾದುದೂ ಗಂಗಾಬಾಯಿಯ ಮನಸ್ಸಿನ ಮೇಲೆ ತೀವ್ರ ಪರಿಣಾಮ ವುಂಟಾಯಿತು. ಈ ಘಟನೆ ಅವಳ ಜೀವನದಲ್ಲಿ ಒಂದು ತಿರುವು. ದೇಶ ಸೇವೆ ಮಾಡಿ ತನ್ನ ಜೀವನವನ್ನು ಸಾರ್ಥಕಪಡಿಸಿಕೊಳ್ಳಬೇಕೆಂದು ಇಚ್ಛಿಸಿದಳು. ಇದಕ್ಕೆ ತಕ್ಕ ಪರಿಸರವೂ ಸಕಾರಣವಾಗಿ ಸಮಯವನ್ನೊದಗಿಸಿತು.

ಗಂಗಾಬಾಯಿಯ ತಂದೆ ಬ್ರಿಟಿಷ್ ಅಧಿಕಾರಿಗಳ ಕೈಕೆಳಗೆ ಒಂದು ಸಂಸ್ಥಾನದ ಆಡಳಿತ ಜವಾಬ್ದಾರಿಯನ್ನು ನೋಡಿಕೊಳ್ಳುತ್ತಿದ್ದರು. ಅವರ ಮರಣಾನಂತರ ಗಂಗಾಬಾಯಿಯೇ ಅವರ ಸ್ಥಾನವನ್ನು ವಹಿಸಿಕೊಂಡು ಸಂಸ್ಥಾನದ ಆಡಳಿತವನ್ನು ನಿರ್ವಹಿಸಬೇಕಾಯಿತು. ಯುವತಿ ಗಂಗಾಬಾಯಿ ಇಚ್ಛೆಪಟ್ಟೇ ಸಂಪೂರ್ಣವಾಗಿ ತನ್ನ ತಂದೆಯ ಜವಾಬ್ದಾರಿಯಲ್ಲಿದ್ದ ಜಾಗವನ್ನು ಸ್ವಾಧೀನಪಡಿಸಿಕೊಂಡಳು.

ಬ್ರಿಟಿಷರ ಬಂಧನಕ್ಕೊಳಗಾಗಿದ್ದ ಭಾರತೀಯರ ಸ್ಥಿತಿಯು ಗಂಗಾಬಾಯಿಯ ಮನಸ್ಸನ್ನು ನಾಟಿತ್ತು. ತನ್ನ ತಂದೆಯ ವಿರುದ್ಧ ಹೋಗದೆ ಇಷ್ಟು ದಿನಗಳೂ ಸುಮ್ಮನಿದ್ದ ಈ ಯುವತಿ ಈಗ ಬ್ರಿಟಿಷರ ವಿರುದ್ಧ ಸಿಡಿದೆದ್ದು ನಿಂತಳು. ಬ್ರಿಟಿಷರಿಗೆ ಶತ್ರುವಾದಳು, ಬ್ರಿಟಿಷರ ಮೇಲೆ ಬಂಡಾಯ ಹೂಡಲು ನಿಶ್ಚಯಿಸಿದಳು. ಆದರೆ ಇದೊಂದೂ ಬ್ರಿಟಿಷರಿಗೆ ತಿಳಿಯದಂತೆ ವಿಷಯವನ್ನು ಗುಪ್ತವಾಗಿಟ್ಟಿದ್ದಳು. ತನ್ನ ಸಂಸ್ಥಾನದ ಕೋಟೆಯ ಪಹರೆಯನ್ನು ಭದ್ರಪಡಿಸಿ ಶಸ್ತ್ರಾಗಾರರನ್ನು ಚುರುಕು ಗೊಳಿಸಿದಳು. ಇವಳ ಚಟುವಟಿಕೆಗಳು ಬ್ರಿಟಿಷರಿಗೆ ಸಂದೇಹವನ್ನುಂಟು ಮಾಡಿದುವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಬ್ರಿಟಿಷರು ಗಂಗಾಬಾಯಿಯ ಸಂಸ್ಥಾನದ ಮೇಲೆ ವಿಶೇಷ ಗಮನವನ್ನಿಡಲು ಪ್ರಾರಂಭಿಸಿದರು. ಇವಳ ವ್ಯವಹಾರ ಬ್ರಿಟಿಷರನ್ನು ಬೆದರುಗೊಳಿಸಿತು. ಕೂಡಲೇ ಬ್ರಿಟಿಷರು ತಮ್ಮ ಕೈಕೆಳಗೆ ಅಧಿಕಾರದಲ್ಲಿದ್ದ ಗಂಗಾಬಾಯಿಯನ್ನು ಬಂಧಿಸಿ ತಿರುಚನಾಪಳ್ಳಿಯ ಜೈಲಿನಲ್ಲಿಟ್ಟರು. ಗಂಗಾಬಾಯಿಗೆ ಬ್ರಿಟಿಷರ ಮೇಲೆ ಮತ್ತಷ್ಟು ಕ್ರೋಧವುಂಟಾಯಿತು. ಸಂಸ್ಥಾನವು ಬ್ರಿಟಿಷರಿಂದ ಕಸಿದುಕೊಳ್ಳಲ್ಪಟ್ಟು ಅವಳಿಗೆ ಸಹಿಸಲಾರದ ಮನೋವೇದನೆಯಾಯಿತು.

ಜೈಲಿನಿಂದ ಬಿಡುಗಡೆ ಹೊಂದುವ ವೇಳೆಗೆ ಹೆತ್ತ ತಾಯಿಯನ್ನೂ ಕಳೆದುಕೊಂಡು ಒಂಟಿಯಾದ ಗಂಗಾಬಾಯಿ ನೈಮಿಷಾರಣ್ಯಕ್ಕೆ ಬಂದು ಅಲ್ಲಿ ಗೌರೀಶಂಕರನ ಭಕ್ತೆಯಾಗಿ ತನ್ನ ಹೆಸರನ್ನೂ, ಉಡುಪನ್ನೂ ಬದಲಾಯಿಸಿಕೊಂಡಳು. ಹೆಸರು ತಪಸ್ವಿನಿ ಎಂದಾಯಿತು. ವೇಷವೂ ತಪಸ್ವಿನಿಯದೇ ಆಯಿತು.

ಹೆಸರು ಮಾತಾ ತಪಸ್ವಿನಿಯಾಗಿದ್ದರೂ, ಈ ಮಾತಾಜಿ ಭಾರತೀಯ ಮಹಿಳೆಯರಲ್ಲಿ ಸ್ಫೂರ್ತಿ ತುಂಬಿ ಬ್ರಿಟಿಷರ ವಿರುದ್ಧ ಮಹಿಳೆಯರನ್ನು ಎಚ್ಚರಿಸುವ ಕ್ರಾಂತಿವೀರ ವನಿತೆಯಾದರು. ಬ್ರಿಟಿಷರಿಗೆ ತಾನು ಗಂಗಾಬಾಯಿಯೆಂದು ಪತ್ತೆಯಾಗದಿರಲು ಹೆಸರನ್ನು, ಉಡುಪನ್ನೂ ಬದಲಾಯಿಸಿಕೊಂಡರು. ಅನೇಕ ಸ್ಥಳಗಳಿಗೆ ಹೋಗಿ ಜನರಲ್ಲಿ ಜಾಗೃತಿಯನ್ನುಂಟುಮಾಡಿದರು.

ತನಗೆ ಬೆಂಬಲವಾಗಿ ನಿಲ್ಲುವ ವ್ಯಕ್ತಿಯನ್ನು ತಪಸ್ವಿನಿಯು ಕಣ್ಣು ಹುಡುಕುತ್ತಿತ್ತು. ಅದೇ ವೇಳೆಗೆ ಸರಿಯಾಗಿ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪ್ರಮುಖ ಪಾತ್ರವನ್ನು ವಹಿಸಲಿದ್ದ ನಾನಾಸಾಹೇಬ್‌ರವರ ಸಂದರ್ಶನವಾಯಿತು. ಅವರೊಡನೆ ಮಾತಾಡಿದುದು ಮಾತಾಜಿಗೆ ತೃಪ್ತಿಕೊಟ್ಟಿತು. ನಾನಾಸಾಹೇಬ್‌ರವರ ಜೊತೆಯಲ್ಲಿ ನೇಪಾಳಕ್ಕೆ ಹೋದರು. ಬ್ರಿಟಿಷರ ವಿರುದ್ಧ ಹೂಡಬೇಕೆಂದಿದ್ದ ಮಾತಾಜಿಯ ಒಳಸಂಚು ಕಾರ್ಯಗತವಾಗಲು ಆ ಸ್ಥಳವು ಅನುಕೂಲವಾಗಿತ್ತು.

ಮಾತಾಜಿಯವರು ಗಂಗಾ ಮಂದಿರಗಳೆಂಬ ದೇವಸ್ಥಾನಗಳನ್ನು ಸ್ಥಾಪಿಸುವ ನೆಪದಲ್ಲಿ ನೇಪಾಳದ ಜನರಲ್ಲಿ ಗುಪ್ತವಾಗಿ ಬ್ರಿಟಿಷರ ವಿರುದ್ಧ ರಾಜಕೀಯ ಉತ್ಸಾಹವನ್ನೆಬ್ಬಿಸಿದರು. ಗಂಗಾ ಮಂದಿರಗಳಲ್ಲಿ ಓಡಾಡುತ್ತಿದ್ದ ಮಾತಾ ತಪಸ್ವಿನಿಯು ಆಧ್ಯಾತ್ಮಿಕ ತತ್ವೋಪದೇಶಕರೆಂದು ಬ್ರಿಟಿಷರಿಗೆ ಪರಿಚಯವಾಗಿತ್ತು ಅಷ್ಟೆ. ಈಕೆ ದಕ್ಷಿಣ ಸಂಸ್ಥಾನ ಒಂದರ ಒಡತಿಯಾಗಿದ್ದ ರಾಣಿ ಗಂಗಾಬಾಯಿ ಎಂದು ಯಾರಿಗೂ ಪತ್ತೆಯಾಗಲಿಲ್ಲ.

ನೇಪಾಳದಿಂದ ಕಲ್ಕತ್ತಾಕ್ಕೆ ಬಂದು ಮಾತಾ ತಪಸ್ವಿನಿಯು ಬಾಲಗಂಗಾಧರ ತಿಲಕರನ್ನು ಭೇಟಿಯಾದರು. ಕ್ರಾಂತಿಕಾರಕ ಚಟುವಟಿಕೆಗಳನ್ನು ಹೆಚ್ಚಿಸಬೇಕೆಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಸಲಹೆ ಕೊಟ್ಟ ತಿಲಕರ ಮಾರ್ಗದರ್ಶನದಲ್ಲಿ ಕ್ರಾಂತಿಯೆಬ್ಬಿಸಲು ಸಿದ್ಧತೆಗೆ ಅಣಿ ಮಾಡಲು ಹೊರಟರು.

ಕಲ್ಕತ್ತಾದಲ್ಲಿ ಮಹಿಳಾ ವಿದ್ಯಾಲಯ ಮಹಾಕಾಳೀ ಪಾಠಶಾಲೆಯನ್ನು ಮಾತಾಜಿ ಸ್ಥಾಪಿಸಿದರು. ಈ ವಿದ್ಯಾಲಯದಲ್ಲಿ ಮಾತಾ ತಪಸ್ವಿನಿಯು ಭಾರತೀಯ ಮಹಿಳೆಯರಿಗೆ ಕೊಡುತ್ತಿದ್ದ ಶಿಕ್ಷಣವು ರಾಷ್ಟ್ರೀಯ ಬಂಡಾಯವನ್ನೆಬ್ಬಿಸುವ ಕ್ರಾಂತಿ ಮಾರ್ಗದ ಶಿಕ್ಷಣ. ಈ ತಪಸ್ವಿನಿಯನ್ನು ಬ್ರಿಟಿಷರು ಕೇವಲ ಮಹಿಳಾ ವಿದ್ಯಾಲಯದ ಸ್ಥಾಪಕರೆಂದು ತಿಳಿಸಿದ್ದರು. ಕತ್ತಿ ಗುರಾಣಿ ಹಿಡಿದು ಸಂಗ್ರಾಮದಲ್ಲಿ ಶತ್ರುಗಳನ್ನು ಸದೆಬಡಿಯುವಷ್ಟು ಮಹಿಳೆಯರಲ್ಲಿ ಧೈರ್ಯೋತ್ಸಾಹವನ್ನು ತುಂಬಿ ಯುದ್ಧಕ್ಕೆ ಸಿದ್ಧಮಾಡುವುದೇ ತಪಸ್ವಿನಿಯ ಉದ್ದೇಶವೆನ್ನುವುದು ಕೆಲವರಿಗೆ ಮಾತ್ರ ಗೊತ್ತಿತ್ತು.

1857ರಲ್ಲಿ ನಡೆದ ಬೃಹತ್ ಭಾರತ ಬಂಡಾಯದಲ್ಲಿ ಇಷ್ಟೊಂದು ಜನ ಭಾರತೀಯರು ಕ್ರಾಂತಿ ಹೂಡಿದುದು ಬ್ರಿಟಿಷರನ್ನು ಬೆರಗುಗೊಳಿಸಿತು. ಮಾತಾ ತಪಸ್ವಿನಿಯಂತಹ ವೀರ ವನಿತೆ ಹಿನ್ನೆಲೆಯಲ್ಲೇ ಇದ್ದು ಕಿಚ್ಚೆಬ್ಬಿಸಿದುದು ನಂಬಲಸಾಧ್ಯ ವಾದ ಸಾಧನೆಯಾಗಿತ್ತು. ಈ ಬಂಡಾಯವನ್ನು ಬ್ರಿಟಿಷರು ಅಲ್ಲಲ್ಲೇ ಅಡಗಿಸಿ ದೇಶಭಕ್ತ ಭಾರತೀಯರನೇಕರನ್ನು ಕೊಂದು ಆಹುತಿ ತೆಗೆದುಕೊಂಡರು.

1857ರ ಮಹಾ ಕ್ರಾಂತಿಯೇ ಭಾರತ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ, ಈ ಸಂಗ್ರಾಮದಲ್ಲಿ ರಾಷ್ಟ್ರ ನಾಯಕಿಯಾಗಿದ್ದ ಝಾನ್ಸಿರಾಣಿ ಲಕ್ಷ್ಮೀಬಾಯಿಯ ಜೊತೆ ಯಲ್ಲಿ ಅಶ್ವಾರೋಹಿಯಾಗಿ ರಣರಂಗಕ್ಕೆ ನುಗ್ಗಿ ಮಾತಾ ತಪಸ್ವಿನಿ ಯುದ್ಧಮಾಡಿದರು. ಲಕ್ಷ್ಮೀಬಾಯಿಯನ್ನು ಬ್ರಿಟಿಷರು ಬಲಿತೆಗೆದುಕೊಂಡರು. ತಪಸ್ವಿನಿಯು ಜೀವಸಹಿತ ಯುದ್ಧಭೂಮಿಯಿಂದ ಹೊರಬಿದ್ದರು.

ಈ ಸಂಗ್ರಾಮದ ನಂತರ ಸಂಘಟನಾ ಕಾರ್ಯವು ಅತಿ ಮುಖ್ಯವಾದುದೆಂದು ತಪಸ್ವಿನಿಯವರು ಹಗಲಿರುಳು ಮಹಿಳೆಯರ ಸಂಘಟನೆಗಾಗಿ ಶ್ರಮಿಸಿದರು. ಸನ್ಯಾಸಿಯಾಗಿದ್ದು, ದೇಶಭಕ್ತೆ ವೀರವನಿತೆಯಾಗಿದ್ದು ಬ್ರಿಟಿಷರ ವಿರುದ್ಧ ಗುಪ್ತವಾಗಿ ಕೆಲಸ ಮಾಡುತ್ತಾ ಯುವತಿಯರಲ್ಲಿ ದೇಶಭಕ್ತಿ ಸ್ಫೂರ್ತಿಯನ್ನೂ, ಸ್ವಾತಂತ್ರ್ಯ ಆಂದೋಲನದ ಕಿಚ್ಚನ್ನೂ ತುಂಬಿದರು. ಇದರ ಪರಿಣಾಮವೇನಾಯಿತೆಂದರೆ ಅನೇಕ ವಿದ್ಯಾವತಿಯವರಾದ ಯುವತಿಯವರು ಮದ್ದು ಗುಂಡು ತಯಾರಿಸುವುದರಲ್ಲಿ ನಿಪುಣರಾಗಿ ಕಂಡಲ್ಲಿ ಬ್ರಿಟಿಷರನ್ನು ಕೊಂದು ಪತ್ತೆಯಾಗದೆ ಪಲಾಯನ ಮಾಡು ತ್ತಿದ್ದರು. ಕೆಲವರು ಶತ್ರುಗಳ ಕೈಗೆ ಸಿಕ್ಕಿಬಿದ್ದು ಶಿಕ್ಷೆಗೊಳಗಾದರು. ನೇಪಾಳದ ಮಹಾರಾಜರಿಂದ ಆಶೀರ್ವಾದ ಪಡೆದು ಬ್ರಿಟಿಷರ ವಿರುದ್ಧ ಶಸ್ತ್ರಾಸ್ತ್ರಗಳನ್ನು ತಯಾರಿ ಸಲು ನೇಪಾಳದಲ್ಲಿ ಒಂದು ಕಾರ್ಖಾನೆಯನ್ನೇ ಸ್ಥಾಪಿಸಿದ ಮಾತಾ ತಪಸ್ವಿನಿ ಪ್ರಪ್ರಥಮ ಕ್ರಾಂತಿವೀರ ಮಹಿಳೆ.

ಮಾತಾ ತಪಸ್ವಿನಿ ಅನೇಕ ವೀರ ಮಹಿಳೆಯರಿಗೆ ಮಾರ್ಗದರ್ಶಕರಾದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

# ತಾಯಿ ಮಹಾದೇವಿ

ಗಾಂಧಿ ಸ್ಮಾರಕ ಭವನದ ಪಕ್ಕದಲ್ಲೊಂದು ಆಶ್ರಮ. ಕಿಕ್ಕಿರಿದು ನೆರೆದ ಜನ ಸಂದಣಿಯ ಬೆಂಗಳೂರು ನಗರದ ಮಧ್ಯದಲ್ಲಿರುವ ಪ್ರಶಾಂತ ಆಶ್ರಮವಿದು. ಹಗಲು ರಾತ್ರಿ ಸಂಚರಿಸುವ ಸಾವಿರಾರು ವಾಹನಗಳ ಗಲಭೆಯನ್ನು ಮೆಟ್ಟಿ, ಎತ್ತರದ ಸೌಧಗಳ ನಡುವೆ ನೆಲೆಯಾಗಿರುವ ವಿಶಾಲ ಆಶ್ರಮವಿದು. ಪಚ್ಚೆಮರ ಹೂಬಳ್ಳಿಗಳು ಸ್ವೇಚ್ಛೆಯಾಗಿ ಬೆಳೆದು ಕಣ್ಮನಗಳನ್ನು ತಣಿಸುವ ಪ್ರಕೃತಿಗೆ ಸ್ಥಳಾವಕಾಶವಿತ್ತಿರುವ ಅಪೂರ್ವ ಆಶ್ರಮವಿದು.

ಈ ಆಶ್ರಮ ವಲ್ಲಭನಿಕೇತನ ವಿನೋಬಾ ಆಶ್ರಮವೆಂದು ಪ್ರಸಿದ್ಧವಾಗಿದೆ.

ಈ ಆಶ್ರಮದ ಒಡತಿ ದೇಶಭಕ್ತಳಾದ ಓರ್ವ ಸನ್ಯಾಸಿನಿ. ಈಕೆಯೇ ಮಹಾದೇವಿತಾಯಿ.

ಅಡ್ಡಿ ಆತಂಕವಿಲ್ಲದೆ ಯಾರು ಬೇಕಾದರೂ ಯಾವ ವೇಳೆಯಲ್ಲಾದರೂ ಮಹಾತಾಯಿಯ ದರ್ಶನ ಪಡೆಯಬಹುದು. ತಾಯಿಯನ್ನು ಮಾತಾಡಿಸಬಹುದು. ಈಕೆಯನ್ನು ಎಲ್ಲರೂ "ತಾಯಿ" ಎಂದೇ ಕರೆಯುವುದು. ಈಗ ಆಶ್ರಮದಲ್ಲಿರುವ ಆಶ್ರಿತರಿಗೆ ನಿಜವಾದ ತಾಯಿಯೇ ಆಗಿದ್ದಾರೆ.

ಹಿಂದೆ ಭಾರತ ದೇಶಕ್ಕೆ ತಾಯಿಯಂತೆ ನಿಂತು, ದೇಶದಾದ್ಯಂತ ಕಾಲು ನಡಿಗೆಯಲ್ಲಿ ಸುತ್ತಿ ಸ್ತ್ರೀಯರಲ್ಲೂ, ಪುರುಷರಲ್ಲೂ ಸ್ವಾತಂತ್ರ್ಯದ ಜ್ವಾಲಾಮುಖಿಯನ್ನೆಬ್ಬಿಸಿದ ಧೀರ ಮಹಿಳೆ.

ಆಶ್ರಮಕ್ಕೆ ಹೋದವರನ್ನು ತಾನಾಗಿಯೇ ಮಾತಾಡಿಸುತ್ತಾ, "ಕೌನ್" "ಯಾರು" ಎಂದು ಹೊರಗೆ ಬರುವರು. ಶುಭ್ರ ವಸ್ತ್ರಧಾರಿಯಾಗಿ, ಒಂದೆಳೆ ತುಳಸಿ ಮಾಲೆ ಕೊರಳಲ್ಲಿ ಹಾಕಿ, ಸನ್ಯಾಸಿನಿಯಂತೆ ಶಿಖೆ ಏರಿಸಿದ ಈಕೆಯನ್ನು ನೋಡಿದ ಕೂಡಲೇ ಇವರೇ ಮಹಾದೇವಿಯೆಂದು ಗುರ್ತಿಸಬಹುದು. ನಮ್ಮ ಪರಿಚಯವಾದ ಮೇಲೆ ಅವರ ನಗುಮುಖ ಮಾತೃವನ್ನು ಕಂಡಂತೆ ಆತ್ಮೀಯತೆ ತರುತ್ತದೆ.

ಈ ಮಾರ್ಚ್‌ಗೆ ೮೧ ವರ್ಷ ದಾಟಿದ ಈ ವೃದ್ಧೆ ಚುರುಕಾಗಿ ಆಶ್ರಮದಲ್ಲಿ ಓಡಾಡುತ್ತಾ, ಆಧ್ಯಾತ್ಮಿಕತೆಯೇ ರೂಪತಾಳಿದಂತೆ ಕಾಣುವ ನಿರಾಡಂಬರ ಸೌಮ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ವ್ಯಕ್ತಿ. ಇವರು ಇಂದಿನ ಕರ್ನಾಟಕ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಯುತ ಶ್ರೀ ರಾಮಕೃಷ್ಣ ಹೆಗ್ಡೆಯವರ ಸೋದರಿ.

೧೯೨೭ ರಿಂದ ೧೯೪೭ರ ವರೆಗೆ ಸ್ವಾತಂತ್ರ್ಯ ಚಳುವಳಿಯಲ್ಲಿ ಮಹಾದೇವಿ ಯವರು ಮುಖ್ಯ ಪಾತ್ರಧಾರಿ. ಅದಕ್ಕೆ ಮುಂಚೆ ಹನ್ನೆರಡು ವರ್ಷ ವಯಸ್ಸಿನ ಬಾಲ್ಯದಲ್ಲೇ ಬಾಲ್ಯ ವಿವಾಹವನ್ನು ವಿರೋಧಿಸಿದ ಕ್ರಾಂತಿಕಾರಿ. ದೇಶೋದ್ಧಾರ, ಸತತ ಸಮಾಜ ಸೇವಾ ಪ್ರವೃತ್ತಿಯ ಈ ಮಹಾವ್ಯಕ್ತಿ, "ದೇಶಕ್ಕಾಗಿ ನಾನೇನು ಮಾಡಿದ್ದೇನೆ? ಸರ್ವತ್ಯಾಗ ಮಾಡಿ, ಬಲಿದಾನ ನೀಡಿದ ದೇಶಭಕ್ತರು ಹಾಸಿಕೊಟ್ಟ ಕಲ್ಲ ಮೇಲೆ ಸುಖವಾಗಿ ನಿಂತಿರುವವರು ನಾವು" ಎನ್ನುತ್ತಾರೆ.

ಸುಮಾರು ನೂರು ಜನರಿದ್ದ ಅವಿಭಕ್ತ ಕುಟುಂಬದಲ್ಲಿ ಜನಿಸಿದ ಹೆಣ್ಣು ಮಹಾದೇವಿ. ಸಿದ್ಧಾಪುರದ ದೊಡ್ಡ ಮನೆ ಹೆಗ್ಡೆಯವರ ಮನೆತನ ಹೆಗ್ಗಳಿಕೆಯ ವಂಶ. ಧರ್ಮಕ್ಕೆ ಕೇಂದ್ರವಾಗಿ, ಸಾತ್ವಿಕತೆಯ ಸ್ವರೂಪವಾಗಿ, ವೇದಾಧ್ಯಯನದ ಜ್ಞಾನಪೀಠವಾಗಿ, ಸದಾ ಅನ್ನಸಂತರ್ಪಣೆಯ ಆಗರವಾಗಿ, ಸೌಹಾರ್ದತೆಯೇ ಸಂಸಾರ ವಾಗಿ ಬಾಳಿ ಹೆಸರು ಪಡೆದ ಪ್ರಸಿದ್ಧ ಮನೆತನ. ಗ್ರಾಮ ಸ್ವರಾಜ್ಯವಿದ್ದಾಗ, ಈ ವಂಶದ ಹಿರಿಯರು ಎಲ್ಲೇ ಜಗಳವಾಗಲಿ, ಪಂಚರಾಗಿ ಪಾತ್ರವಹಿಸಿ, ಧರ್ಮದಿಂದ ತೀರ್ಮಾನ ಕೊಡುತ್ತಿದ್ದ ಪುಣ್ಯ ಪುರುಷರು.

ಇಂತಹ ಸುಸಂಸ್ಕೃತ ಕುಟುಂಬದಲ್ಲಿ ಜನನ ತಾಳಿದ್ದು ನನ್ನ ಪುಣ್ಯವೆನ್ನುತ್ತಾರೆ ಮಹಾದೇವಿಯವರು.

ಮಹಾದೇವಿ ತಾಯಿಯವರಿಗೆ ಮದುವೆಯಾದದ್ದು ಜ್ಞಾಪಕವೇ ಇಲ್ಲ. ಹತ್ತು ವರ್ಷದ ಹುಡುಗಿ, ಗಂಡ ಸತ್ತಾಗ, ಕೇಶಮುಂಡನ ಮಾಡಿಸಿಕೊಂಡಿದ್ದು ನೆನಪಿದೆ.

ಸಕೇಶಂ ವಿಧವಾಂ ದೃಷ್ಟ್ವಾ ಸಚೇಲ ಸ್ನಾನಂ ಆಚರೇತ್, ವಿಧವಾ ಕಂಚುಕಿಂ ವರ್ಜಯೇತ್, ಮುಂತಾಗಿ ಹೇಳಿದ ಒಬ್ಬ ಪೂರ್ವಾಚರರ ವಾಕ್ಯಗಳು ಇವರ ಕಿವಿಯಲ್ಲಿ ನಿರಂತರ ಧ್ವನಿಗೈದು, ಇದರ ಪರಿಣಾಮ—ಮಹಾದೇವಿಯವರ ಜೀವನದಲ್ಲೇ ಒಂದು ಪ್ರಮುಖ ಘಟ್ಟದ ತಿರುವನ್ನುಂಟು ಮಾಡಿತು. ಈ ಮಾತಿನಿಂದ ಬಹಳ ನೊಂದಳು ಪುಟ್ಟ ಹುಡುಗಿ ಮಹಾದೇವಿ. ಇದು ಶಾಸ್ತ್ರ ಸಮ್ಮತವಲ್ಲವೆಂದು ವಾದಿಸಿ, ಅಂದಿನಿಂದ ಸಮಾಜವನ್ನು ತಿದ್ದುವ ಛಲವಂತಳಾದಳು.

ಕೇಶ ತೆಗೆಯುವುದು, ಕುಪ್ಪಸ ಹಾಕದಿರುವುದು—ಇದೆಂತಹ ಅನಿಷ್ಟ ಪದ್ಧತಿ ಎಂದು ಧೈರ್ಯದಿಂದ ಚರ್ಚಿಸಿದ ಈ ಹುಡುಗಿಯ ಸಾಮರ್ಥ್ಯ ಅಂದಿನ ಸಮಾಜದ ಮುಖಂಡರ ಗಮನವನ್ನು ಸೆಳೆಯಿತು. ಸಮಾಜ ಆಂದೋಳನದಲ್ಲಿ ಮಹಾದೇವಿಯ ಪಾತ್ರ ಪ್ರಾರಂಭವಾದುದು ಹೀಗೆ.

"ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕುವ ಪ್ರೇರಣಾ ಶಕ್ತಿ ಬಂದುದು ಸರ್ದಾರ್ ಶ್ರೀ ವೆಂಕಟರಾಮಯ್ಯನವರಿಂದಲೇ" ಎನ್ನುತ್ತಾರೆ ಗುರುಭಕ್ತಿಯಿಂದ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



"ದೇಶಕಾರ್ಯಕ್ಕಾಗಿ ಅವರು ನನ್ನ ಗುರುಗಳಾಗಿ ಬಂದರು. ನಾಲ್ಕು ಮಕ್ಕಳ ತಾಯಿಯಾದ ತಮ್ಮ ಹೆಂಡತಿ ಗೌರಮ್ಮನ ಉದಾಹರಣೆ ಕೊಟ್ಟು, ಬೋಧಿಸಿ ಚಳುವಳಿಯಲ್ಲಿ ಭಾಗವಹಿಸಲು ಆತ್ಮಬಲದ ಚೈತನ್ಯವಿತ್ತರು."

ಗೌರಮ್ಮನೊಡನೆ ಮಹಾದೇವಿಯವರೂ, ದೇಶಸೇವೆಗಾಗಿ ಮುಂದಾದರು. ಆಂದೋಲನವನ್ನು ಮಟ್ಟಹಾಕಲು ಬ್ರಿಟಿಷ್ ಆಳರಸರು ಕೈಗೊಂಡ ಬರ್ಬರ ಕಾರ್ಯಾಚರಣೆಯಿಂದ ಜನತೆ ಹೌಹಾರುತ್ತಿದ್ದಾಗ, ಮೊದಮೊದಲು ಭಯವಾಗಿ, ಬೇಕಾದಷ್ಟು ಹೊಡೆತ ತಿಂದು, ಒಂದು ಸಲ ಜೈಲಿ ಹೋಗಿ ಬಂದ ಮೇಲೆ ಧೈರ್ಯವಂತರಾಗಿ ಮಹಾದೇವಿಯವರು ಹೆಚ್ಚು ಜವಾಬ್ದಾರಿಯ ಮುಖಂಡತ್ವ ವಹಿಸಿಕೊಂಡರು.

ಅವರ ಜೈಲುವಾಸದ ಒಂದು ಅನುಭವವನ್ನು ಹೀಗೆ ಹೇಳುತ್ತಾರೆ-- "ಎರಡನೆಯ ಸಲ ಹಿಂಡಲಗಿ ಜೈಲಿಗೆ ಹಾಕಿದಾಗ, ನಮ್ಮ ಜೊತೆಯಲ್ಲಿದ್ದ ಗುಜರಾತಿ, ಮರಾಠಿ ದೇಶಭಕ್ತ ಖೈದಿಗಳನ್ನು ಬೇರ್ಪಡಿಸಿ, ರತ್ನಾಗಿರಿಗೆ ವರ್ಗಾಯಿಸಿದರು. ಒಬ್ಬಿಬ್ಬರು ಕರ್ನಾಟಕದವರು ಮಾತ್ರ ಇದ್ದ ನಮ್ಮ ಜೊತೆಗೆ ಕ್ರಿಮಿನಲ್ ಖೈದಿಗಳನ್ನು ತಂದು ತುಂಬಿದರು. ಇವರು ನಮ್ಮ ಪ್ರಾರ್ಥನೆ, ಶ್ಲೋಕ. ಪಠಣಗಳಿಗೆ ಅಡ್ಡಿಯಾಗುವಂತೆ ಕುಣಿದು ಕುಪ್ಪಳಿಸಿ ಕಿರುಚಾಡಿದಾಗ, ಅವರಿಂದ ಸ್ವಲ್ಪ ಬೇರೆಯಾಗಿರಲು ನಾವು ಇಚ್ಛಿಪಟ್ಟೆವು. ಇದನ್ನು ಜೈಲಿನ ಅಧಿಕಾರಿ ಆಕ್ಷೇಪಿಸಿದಾಗ, ನಾನು ಸರ್ಕಾರದ ವಿರುದ್ಧ ಉದ್ವೇಗಗೊಂಡು, "ಕೈ ಬೊಕ್ಕೆ ಬಂದರೂ ದಪ್ಪ ಉಡುಪುಗಳನ್ನು ಎಂಟು ಗಂಟೆಗಳ ಕಾಲ ಹೊಲೆದು ಕೊಟ್ಟು ಸರ್ಕಾರದ ನಿಯಮದ ಪ್ರಕಾರ ಮಜೂರಿ ತೀರಿಸುತ್ತೇವೆ. ಆದರೆ ಇಂತಹ ಖೈದಿಗಳೊಂದಿಗೆ ಒಂದೇ ಕೊಠಡಿಯಲ್ಲಿರಲು ಹಿಂಸೆಯಾಗುತ್ತದೆ. ನಾವು ದೇಶಕ್ಕಾಗಿ ಮಡಿಯಲು ಬಂದ ಖೈದಿಗಳು" ಎಂದಾಗ, ಜೈಲಿನ ಅಧಿಕಾರಿ, ಈಕೆಯದು ಪ್ರತಿಷ್ಠೆಯ ಮಾತು ಎಂದುಕೊಂಡು, ಮಾರನೆಯ ದಿನ ನನ್ನನ್ನು ಕಠಿಣ ಶಿಕ್ಷೆಗೆ ಒಳಪಡಿಸಿ ಗಾಳಿ ಬೆಳಕಿಲ್ಲದ ಸಣ್ಣ ಸೆಲ್ಲಿಗೆ ಹಾಕಿದರು. ಮಲ ಮೂತ್ರ ವಿಸರ್ಜನೆಗೆ ಅಲ್ಲಿರುವ ಅನಾನುಕೂಲತೆಯನ್ನು ನೆನಪಿಸಿಕೊಳ್ಳಲು ಅಸಹ್ಯ. ಅಲ್ಲಿದ್ದ ಹದಿನೆಂಟು ದಿನಗಳೂ ನಾನು ಒಂದು ತೊಟ್ಟು ನೀರೂ ಕುಡಿಯದೆ, ಕೊಟ್ಟ ಹಣ್ಣು, ಆಹಾರವನ್ನು ನಿರಾಕರಿಸಿದೆ.

"ಇವರು ಗಾಂಧಿ ಹುಚ್ಚರು ಎಂದು ಅಧಿಕಾರಿ ಹಾಸ್ಯ ಮಾಡಿದಾಗ, 'ನೀವೂ ಇಂತಹ ಹುಚ್ಚರಾಗದಿರುವುದು ನಿಮ್ಮ ದುರದೃಷ್ಟ'ವೆಂದು ಧಾರ್ಷ್ಟ್ಯದಿಂದ ಹೇಳಿದೆ.... ಜೈಲಿನಿಂದ ಬಿಡುಗಡೆಯಾದ ಮೇಲೆ ನನ್ನ ಶಾರೀರಿಕ ನಿಶ್ಶಕ್ತಿಗೆ ಚಿಕಿತ್ಸೆಯನ್ನೇ ಮಾಡಬೇಕಾಯಿತು" ಎಂದು ವಿವರಿಸಿ ಅಂದಿನ ದಿನಗಳನ್ನು ನೆನೆಸಿಕೊಂಡು ಹರ್ಷದಿಂದ ಹಸನ್ಮುಖಿಯಾಗುತ್ತಾರೆ.

"ಹಿಂಡಲಗಿ ಜೈಲಿನ ವಾಸ ನನಗೆ ಮಂಗಳದ ನಾಂದಿಯಾಯಿತು. ಆದ್ದರಿಂದ ಆ ಜೈಲು ಖಾನೆಯನ್ನು ಮಂಗಳದ ಮನೆಯೆಂದೇ ತಿಳಿಯುತ್ತೇನೆ. ಉಪವಾಸ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ನೀಡಿದ ನೈತಿಕಬಲ ಹಾಗೂ ಆತ್ಮ ಸಂಸ್ಕಾರ, ಚಿತ್ತಸ್ಥಿಮಿತ ಎಂತಹ ಸ್ಥಿತಿಗತಿಯ ಯನ್ನಾದರೂ ಎದುರಿಸುವ ಧೈರ್ಯವನ್ನೂ, ಶಕ್ತಿಯನ್ನೂ ನನಗೆ ನೀಡಿತು."

೧೯೩೪ರಲ್ಲಿ ಹರಿಜನ ಯಾತ್ರೆಯ ನಿಮಿತ್ತವಾಗಿ ಬಾಪೂಜಿ ಕರ್ನಾಟಕಕ್ಕೆ ಬಂದಾಗ ಮಹಾದೇವಿಯ ಆನಂದಕ್ಕೆ ಪಾರವೇ ಇಲ್ಲ. ಬಾಪೂಜಿಯನ್ನು ಭೇಟಿಯಾಗ ಬೇಕು, ನೇರವಾಗಿ ಅವರೊಂದಿಗೆ ಮಾತಾಡಬೇಕು ಮುಂತಾಗಿ ಕುತೂಹಲ.

ಲಕ್ಷಾಂತರ ಜನ ಅವರ ದರ್ಶನಕ್ಕಾಗಿ ಕಾದಿರುವಾಗ ತನಗೆ ಅವಕಾಶ ಸಿಕ್ಕು ತ್ತದೆಯೇ ಎಂದು ನಿರಾಶರಾಗದೆ ಮಹಾದೇವಿ, ಗಾಂಧೀಜಿ ಇಳಿದುಕೊಂಡಿದ್ದ ಭವನದ ಹೊರಗೆ ರಾತ್ರಿಯೆಲ್ಲಾ ಜಾಗರಣೆ ಮಾಡಿ ಕಾದು ನಿಂತರು. ಬೆಳಗಿನ ಝಾವ ನಾಲ್ಕು ಗಂಟೆಗೆ ಪ್ರಾರ್ಥನೆಯ ಸೂಚನಾ ಗಂಟೆ ಹೊಡೆಯಲು, ಹೊರಗೆ ಬಂದು ನೂಲುತ್ತಾ ಕುಳಿತ ಮಹಾತ್ಮರನ್ನು ಕಂಡು ವಂದಿಸಿ, ಮಹಾದೇವಿ ತನ್ನ ಪರಿಚಯ ಮಾಡಿಕೊಟ್ಟರು ಹದಿನೆಂಟು ದಿನ ಜೈಲಿನ ಉಪವಾಸದ ದಿನಗಳು, ಗಾಂಧೀಜಿಯವರೊಡನೆ ಸಂದರ್ಶನಕ್ಕೆ ಅರ್ಹತೆ ಕೊಟ್ಟು ಮಹಾದೇವಿಗೆ ಅವಕಾಶ ಕಲ್ಪಿಸಿತು.

"ವಾರ್ಧಾಕ್ಕೆ ಬರುತ್ತೀಯಾ?"—ಎಂದರಷ್ಟೆ ಮಹಾತ್ಮಾಜಿ.

ಅದಷ್ಟೇ ಆಶ್ವಾಸನೆ ಸಾಕು ದೇಶಭಕ್ತೆಗೆ !

ಡಾ॥ ಹರ್ಡಿಕರ್ ಜೊತೆ ಮಾಡಿಕೊಂಡು, ತಂದೆಯವರ ಅಪ್ಪಣೆ ಪಡೆದು ಬಾಪೂ ಸಾನಿಧ್ಯದ ಕೃಪೆಗಾಗಿ ತೆರಳಿದರು.

ವಾರ್ಧಾ ಆಶ್ರಮದ ಶಿಕ್ಷಣ ರಾಷ್ಟ್ರ ಶಿಕ್ಷಣ, ಕಠಿಣ ಶಿಕ್ಷಣ. ಸ್ವಾವಲಂಬನೆಯ ಜೀವ ಸಾಧನ. ಶಿಸ್ತಿನ ಸಿಪಾಯಿಯಂತಹ ಕಟ್ಟುನಿಟ್ಟು. ಇಲ್ಲಿ ಬಾಪೂಜಿ ಕೊಡು ತ್ತಿದ್ದ ಒಂದು ಪರೀಕ್ಷೆ. ಪಾಯಖಾನೆ ಎತ್ತಿ ಗೊಬ್ಬರ ಮಾಡುವುದು, ಚರಕದಲ್ಲಿ ನೂಲು ತೆಗೆಯಲು ಕಲಿಯುವುದು, ಮಹಾದೇವಿ ಈ ಪರೀಕ್ಷೆಯಲ್ಲಿ ಗೆದ್ದರು. ಅನೇಕ ಗ್ರಾಮಗಳಿಗೆ ಹೋಗಿ ನೂಲು ತೆಗೆಯುವುದನ್ನು ಹೇಳಿಕೊಟ್ಟರು.

ಶ್ರೀ ಗಿರಿಧರ ರಾಜ ಹಿಮಾಲಯ ಹೈ.
ನಿಸರ್ಗ ರಮಣೀಯತಾಕೆ ಆಗರ—

ಎಂದು ಓದಿ ತಿಳಿದದ್ದ ಮಹಾದೇವಿಗೆ ಪ್ರಕೃತಿ ನೆಲೆಯಾದ ಹಿಮಾಲಯಕ್ಕೆ ಹೋಗುವ ಆಸೆಯಾಯಿತು. ವಾರ್ಧಾದಲ್ಲಿ ರಜೆಯ ದಿನಗಳಲ್ಲಿ ಬಾಪೂಜಿ ಅಪ್ಪಣೆ ಪಡೆದು ಹೊರಟರು. ಇವರೊಂದಿಗಿದ್ದ ಇವರ ಆಪ್ತ ಗೆಳತಿ ಅಮೆರಿಕಾದ ಹುಡುಗಿ ಯೊಬ್ಬಳು. ಇವಳಿಗೆ ಬಾಪೂಜಿ ಇಟ್ಟ ಹೆಸರು ತಾರಾ.

ಹಿಮಾಲಯ ಪರ್ಯಟನೆ ಮಾಡುತ್ತಿದ್ದಾಗ, ತಾರಾಗೆ ಆರೋಗ್ಯ ಕೆಟ್ಟಿತು. ದೇವಪ್ರಯಾಗದಲ್ಲೇ ನಿಂತು ಆಕೆಯ ಶುಶ್ರೂಷೆ ಮಾಡಬೇಕಾಯಿತು. ಮಹಾದೇವಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ತಾಯಿಯವರ ಸಾಮಾಜಿಕ ಜೀವನದಲ್ಲಿ ಜನ ಶುಶ್ರೂಷೆಯ ದಿನಗಳು ಪ್ರಾರಂಭ ವಾದುದು ಹೀಗೆ.

ತಾರಾ ಅಲ್ಲಿಯೇ ತೀರಿಕೊಂಡದ್ದರಿಂದ, ಆಕೆಯ ಇಚ್ಛೆಯ ಪ್ರಕಾರ, ಶ್ರೇಷ್ಠ ಹಿಂದೂ ಸಂಸ್ಕೃತಿಯ ಪದ್ಧತಿಯಂತೆ ಶವಸಂಸ್ಕಾರ ಮಾಡಿ, ಮಹಾ ದೇವಿ ಹಿಂತಿರುಗಿದರು. ಡೆಹರಾಡೂನಿಗೆ ಬಂದು ಹಿಂದಿ ಭಾಷೆ ಕಲಿತರು.

ಉಚ್ಚ, ನೀಚ ಜಾತಿ ಬೇಧದಲ್ಲಿ ನಂಬಿಕೆ ಇಡದ ಸದ್ಭಾವನೆಯ ಮಹಾದೇವಿ ತಾಯಿಯ ಬಳಿಗೆ ಆಶ್ರಯ ಬೇಕೆಂದು ಬಂದ ಪ್ರಥಮ ಹೆಣ್ಣು ಅತ್ಯಂತ ಕೀಳು ಜಾತಿಯ ಹರಿಜನ ಹುಡುಗಿ. ಅವಳ ಕರುಣಾಜನಕ ಸ್ಥಿತಿಯನ್ನು ಕಂಡು ಮಹಾ ದೇವಿ ಅವಳನ್ನಪ್ಪಿಕೊಂಡು, ಮಗಳಂತೆ ಭಾವಿಸಿ, ಪ್ರೀತಿಯಿಂದ ಸಾಕಿ ಸಲಹಿ ಮದುವೆ ಮಾಡಿಸಿದರು.

"ಮಹಾತಾಯೀ ನಿಮ್ಮಿಂದ ನಾನು ಉದ್ಧಾರವಾದೆ, ಪುನೀತಳಾದೆ" ಎಂದಾಗ ಮಹಾದೇವಿತಾಯಿ ಹೇಳಿದ ಮಾತು ಹೀಗೆ—

"ದೇವರು ನನ್ನಿಂದ ಇದೊಂದು ಕೆಲಸ ಮಾಡಿಸಿ, ಕುಲಕೋಟಿಯನ್ನೇ ಉದ್ಧಾರ ಮಾಡುವ ಶಕ್ತಿ ಕರುಣಿಸಿದ. ನಿಮ್ಮಂತಹವರ ಸೇವೆಯಿಂದ ನಾವು ಪವಿತ್ರ ವಾಗುತ್ತೇವೆ. ಉದ್ಧಾರವಾದುದು ನೀನಲ್ಲ ಮಗಳೇ, ನಾನು" ಎಂದರಂತೆ.

"ಇಂದಿಗೂ ಆಕೆಗೆ ನನ್ನಲ್ಲಿ ಕೃತಜ್ಞತೆ. ಈಗ ಮೊನ್ನೆಯವರೆಗೂ ತನ್ನ ಸಂಸಾರದೊಂದಿಗೆ ಬಂದು, ಇಲ್ಲಿ ಆಶ್ರಮದಲ್ಲಿ ನನ್ನೊಂದಿಗೆ ಇದ್ದು ಹೋದಳು" ಎಂದು ಆ ಹರಿಜನ ಹುಡುಗಿಯನ್ನು ಮತ್ತೊಮ್ಮೆ ಜ್ಞಾಪಿಸಿಕೊಂಡರು.

"ನಮ್ಮ ಕುಟುಂಬದಲ್ಲಿ ಸುಮಾರು ಎಲ್ಲರೂ ಹರಿಜನ ಸೇವೆ ಮಾಡಿದ್ದೇವೆ" ಎನ್ನುತ್ತಾರೆ ಮಹಾದೇವಿತಾಯಿ.

"ಒಂದು ಸಲ ನಾನು ಮೈಸೂರಿಗೆ ಹೋಗಿದ್ದಾಗ, ಈ ಹುಡುಗಿಯನ್ನು ನನ್ನ ಚಿಕ್ಕಮ್ಮನ (ಶ್ರೀ ರಾಮಕೃಷ್ಣ ಹೆಗ್ಡೆಯವರ ತಾಯಿ) ಬಳಿ ಬಿಟ್ಟು ಹೋಗಿದ್ದೆ, ಹುಡುಗಿಗೆ ಕಾಲರಾ ರೋಗ ಬಂತು. ಆಗ ನನ್ನ ಚಿಕ್ಕಮ್ಮನೇ ಅವಳ ಸೇವೆ ಮಾಡಿದ್ದರು" ಎಂದು ಹೆಮ್ಮೆಯಿಂದ ತಾಯಿ ಹೇಳುತ್ತಾರೆ.

ಬಾಪೂಜಿ ಮತ್ತು ಆಚಾರ್ಯ ವಿನೋಬಾರವರೊಂದಿಗೆ ಮಹಾದೇವಿಯವರ ಮುಂದಿನ ಬಾಳ್ವೆಯ ದಿನಗಳು ಕಳೆದುವು. ವಿನೋಬಾಜಿಯ ಕೊನೆಯ ಉಸಿರಿರುವವರೆಗೂ ಅವರ ಶುಶ್ರೂಷೆ ಮಾಡಿದರು. ಅವರ ಸೇವೆಯಿಂದ ಪವಿತ್ರ ಳಾದೆನೆಂದು ತೃಪ್ತಿಪಟ್ಟರು. ಆ ಸೇವೆಯ ಫಲವೇ ಈ ಆಶ್ರಮದ ಒಡೆತನ· ವಿನೋಬಾಜಿ ಆಶ್ರಮದ ಮೇಲ್ವಿಚಾರಣೆಯನ್ನು ಮಹಾದೇವಿಗೆ ಒಪ್ಪಿಸಿದರು. ಪರಮ ಸಾತ್ವಿಕರೂ ಬ್ರಹ್ಮಚಾರಿಯೂ ಆಗಿದ್ದ ವಲ್ಲಭ ಸ್ವಾಮಿಯನ್ನು ದಕ್ಷಿಣ ಭಾರತದ ಕಾರ್ಯಕಲಾಪಗಳಿಗೆ ನಿಯಮಿಸಿ ದ್ದುದರಿಂದ ಆಶ್ರಮಕ್ಕೆ ವಲ್ಲಭನಿಕೇತನ ವೆಂದು ಹೆಸರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



# ತಪಸ್ವಿನಿ
# ಉಮಾಬಾಯಿ ಕುಂದಾಪುರ

"ನನಗೇಕೆ ಸನ್ಮಾನ? ಮುಖ್ಯಮಂತ್ರಿಗಳು ಮನೆಗೆ ಬಂದು ಸತ್ಕರಿಸುವಷ್ಟು ನಾನೇನು ಅಂಥ ದೊಡ್ಡ ಕೆಲಸ ಮಾಡಿದ್ದೇನೆ?"

೧೯೮೮ ರ ರಾಜ್ಯೋತ್ಸವ ಪ್ರಶಸ್ತಿಯನ್ನು ರಾಜ್ಯದ ಮುಖ್ಯಮಂತ್ರಿ ಶ್ರೀ ರಾಮಕೃಷ್ಣ ಹೆಗಡೆಯವರು ತಮ್ಮ ಮನೆಗೆ ಬಂದು ನೀಡಿ ಸತ್ಕರಿಸಿದಾಗ ಪ್ರಶಸ್ತಿ ವಿಜೇತೆ ಉಮಾಬಾಯಿ ಕುಂದಾಪುರ ಅವರಿಂದ ಹೊರಟ ಉದ್ಗಾರ ಇದು. ಆದರೆ ಹಲವು ಗಣ್ಯರ ಹೇಳಿಕೆಗಳಿಂದ ಅವರು ಎಂತಹ ವ್ಯಕ್ತಿತ್ವದವರೆಂದು ತಿಳಿಯಬಹುದು.

"ಬಂದವರಿಗೆ ಊಟ ಅಲ್ಲಿ, ಭಗಿನೀಮಂಡಳಿ ಅಲ್ಲಿ, ರಾಷ್ಟ್ರೀಯ ಕನ್ಯಾಶಾಲೆ ಅಲ್ಲಿ, ಸೇವಾದಳದ ಸೈನಿಕ ಶಿಕ್ಷಣ ಅಲ್ಲಿ, ಸ್ಟಡಿ ಸರ್ಕಲ್ ಅಲ್ಲಿ, ಹಿಂದೀ ವರ್ಗಗಳು ಅಲ್ಲಿ, ಚರಖಾ ಜಯಂತಿ ಅಲ್ಲಿ, ಸೂತ್ರಯಜ್ಞ ಅಲ್ಲಿ, ಕಾಂಗ್ರೆಸ್ ಕಮಿಟಿ ಸಭೆಗಳು ಅಲ್ಲಿ, ಸಾರ್ವಜನಿಕ ಸಭೆಗಳೂ ಅಲ್ಲಿ. ಅಷ್ಟೇಕೆ ೧೯೩೧ರಲ್ಲಿ ಪಂಡಿತ ನೆಹರೂರವರಿಂದ ಉದ್ಘಾಟಿಸಲ್ಪಟ್ಟ ಅಖಿಲ ಭಾರತ ಔದ್ಯೋಗಿಕ ಪ್ರದರ್ಶನವೂ ಅಲ್ಲೇ. ಹುಬ್ಬಳ್ಳಿಯಲ್ಲಿ ಕಾಂಗ್ರೆಸ್ ಹುಟ್ಟಿದ್ದು, ಬೆಳೆದದ್ದು ಕಳೆಯೇರಿದ್ದು ಎಲ್ಲ ಕರ್ನಾಟಕ ಪ್ರೆಸ್ಸಿನಲ್ಲೇ. ನಾನು ರಾಜಕೀಯ ಶಿಕ್ಷಣ ಪಡೆದದ್ದು ಕರ್ನಾಟಕ ಪ್ರೆಸ್ಸಿನ ಆವರಣದಲ್ಲೇ, ಅಲ್ಲಿನ ಮಣ್ಣಿನ ಸುಗಂಧದಲ್ಲಿ ನನ್ನ ರಾಷ್ಟ್ರ ಸೇವಾ ಜೀವನವು ವಿಕಸಿಸುತ್ತಾ ಬಂದಿತು. ಇಂತಹ ಕರ್ನಾಟಕ ಪ್ರೆಸ್ಸಿನ ಒಡತಿ ಮತ್ತಾರೂ ಅಲ್ಲ, ಶ್ರೀಮತಿ ಉಮಾಬಾಯಿ ಕುಂದಾಪುರ. ಇವರ ದರ್ಶನ ನವರಾಷ್ಟ್ರ ಸೇವಕರಿಗೊಂದು ಸ್ಫೂರ್ತಿಯಾಗಿತ್ತು." ಶ್ರೀ ಕೆ. ಎ. ವೆಂಕಟರಾಮಯ್ಯನವರು ಕೆಲವೇ ನುಡಿಗಳಲ್ಲಿ ಉಮಾಬಾಯಿಯವರ ವ್ಯಕ್ತಿತ್ವವನ್ನು ನಿರೂಪಿಸಲು ಯತ್ನಿಸಿದ್ದಾರೆ. ಪ್ರಶಸ್ತಿಯ ಅರ್ಹತೆಗೆ ಇದೇನು ಸಣ್ಣ ವಿಷಯವಿಲ್ಲ. ಆದರೆ ತಾವು ಮಾಡಿದ ಮಹತ್ಕಾರ್ಯವನ್ನು ಏನೇನೂ ಅಲ್ಲವೆಂಬಂತೆ ನುಡಿದ ಉಮಾಬಾಯಿಯವರ ಮಾತುಗಳು ಮಾತ್ರ ಆಡದೇ ಮಾಡುವ ಉತ್ತಮರ ವ್ಯಕ್ತಿತ್ವಕ್ಕೆ ಉದಾಹರಣೆಯಾಗಿ ನಿಲ್ಲಬಲ್ಲವು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ತಲೆಯಲ್ಲಷ್ಟೇ ಜನರಿಗೆ ಕೊಡುವ ಹಸಿರು ಫಲಗಳನ್ನಿಟ್ಟುಕೊಂಡು ತಾನು ಮಾತ್ರ ಕೊರಡಿನಂತೆ ಏಕಾಕಿಯಾಗಿ ಬೆಳೆವ ತೆಂಗಿನ ಮರದಂತೆ ಉಮಾಬಾಯಿಯವರ ಜೀವನದಲ್ಲಿ ಸ್ವಸುಖದ ಮಾತೇ ಇಲ್ಲ. ಎಲ್ಲವೂ ರಾಷ್ಟ್ರಾರ್ಪಣ.

ಇಂತಹ ವ್ಯಕ್ತಿಯ ವಿಳಾಸವನ್ನು ಹುಬ್ಬಳ್ಳಿಯ "ಸಂಯುಕ್ತ ಕರ್ನಾಟಕ"ದಿಂದ ದೊರಕಿಸಿಕೊಂಡು ಅವರನ್ನು ಹುಡುಕಿಕೊಂಡು ಅವರ ಮನೆಗೆ ಹೋದಾಗ ರಾತ್ರಿ ೯–೧೦ ಗಂಟೆ. ಆದರೆ ಅವರ ಆತ್ಮೀಯತೆ, ಆದರ, ಆತಿಥ್ಯ ಮಾತ್ರ ಮರೆಯು ವಂತಿಲ್ಲ. ೯೫ರ ಇಳಿವಯಸ್ಸಿನಲ್ಲೂ ಸಾಮಾಜಿಕ ಚಟುವಟಿಕೆಗಳಲ್ಲಿ ಉಡುಗದ ಹುರುಪು, ಜೀರ್ಣವಾಗದ ನೆನಪು ಕಂಡು ವಿಸ್ಮಯಪಟ್ಟೆ. ಇಂದಿಗೂ ಭಗಿನೀ ಮಂಡಳದ ಜವಾಬ್ದಾರಿ ಅವರದೇ. ರಾತ್ರಿಯ ಊಟದ ನಂತರ ಲೋಕಾಭಿರಾಮ ವಾದ ಮಾತುಕತೆಯಲ್ಲಿ ಅವರ ನೆನಪಿನ ಉಗ್ರಾಣದಿಂದ ಹಲವು ವಿಷಯಗಳು ಹೊರ ಬಂದವು. ಅವರ ಮಾತಿನಲ್ಲೇ ಗಮನಿಸೋಣ:

ಮುಂಬೈನ ನಮ್ಮ ಮನೆ ಎದುರು ಇದ್ದ ಮನೆಯೊಂದರಲ್ಲಿ ಓರ್ವ ಬಿಳಿ ಮೀಸೆ ಮುದುಕ ಕೂಡುತ್ತಿದ್ದ. ಹಲವಾರು ಜನ ಆತನನ್ನು ಪ್ರತಿನಿತ್ಯ ಭೇಟಿಯಾಗು ತ್ತಿದ್ದರು. ಆತ ಯಾರು ಎಂದು ನನಗೆ ಗೊತ್ತಿರಲಿಲ್ಲ. ಒಂದು ದಿನ ಆ ವ್ಯಕ್ತಿ ತೀರಿ ಕೊಂಡ. ಆತನ ಅಂತಿಮ ಯಾತ್ರೆಯ ದಿನ ಸಹಸ್ರ ಸಹಸ್ರ ಜನ ಸೇರಿದ್ದರು. ಪ್ರತಿನಿತ್ಯ ನಾನು ನೋಡುವ ಈ ಸರ್ವೇ ಸಾಧಾರಣ ಮನುಷ್ಯನಿಗೆ ಇಂತಹ ಗೌರವ ಸಿಗಲು ಕಾರಣವೇನು? ಈ ಮುದುಕ ಅಷ್ಟೊಂದು ಜನಪ್ರಿಯ ಹೇಗಾದ? ನನಗಂತೂ ಅಚ್ಚರಿ. ಆದರೆ ವಿಚಾರಿಸಿದಾಗ ಗೊತ್ತಾಯಿತು, ಅವರೇ ಲೋಕ ಮಾನ್ಯ ಟಿಳಕರೆಂದು. ಗಾಂಧೀಜಿಯವರ ಕುರಿತೂ ನನಗೆ ಗೊತ್ತಿರಲಿಲ್ಲ. ಅಬ್ಬಾ ಅದೆಂತಹ ದೊಡ್ಡ ಮೆರವಣಿಗೆ! ಗಾಂಧೀಜಿಯವರೂ ಕೂಡ ಟಿಳಕರ ಪಾರ್ಥಿವ ಶರೀರಕ್ಕೆ ಹೆಗಲು ನೀಡಿದ್ದರು. ಎಂತಹ ವ್ಯಕ್ತಿತ್ವ! ಇಂತಹ ವ್ಯಕ್ತಿಯೋರ್ವರನ್ನು ಪ್ರತಿನಿತ್ಯ ಕಂಡರೂ ಗುರುತಿಸಲಿಲ್ಲವಲ್ಲಾ ಎನ್ನುವ ಕೊರಗು ನನಗೆ ಇಂದಿಗೂ ಇದೆ. ಮುಂಬಯಿಯ ಚೌಪಾಟಿಯಲ್ಲಿ (ಸಮುದ್ರ ದಂಡೆಯಲ್ಲಿ) ಅವರ ಅಂತ್ಯಕ್ರಿಯೆ ನಡೆಯಿತು. ಲಕ್ಷಾಂತರ ಜನ ಸೇರಿದ್ದರು. ಅವರೆಲ್ಲ ಒಟ್ಟು ಸೇರುವಂತೆ ಮಾಡಿದ "ಸ್ವರಾಜ್ಯ ನಮ್ಮ ಜನ್ಮಸಿದ್ಧ ಹಕ್ಕು" ಎಂದು ಮಲಗಿದ್ದ ಭಾರತೀಯರನ್ನು ಎಚ್ಚರಿ ಸಿದ, ಲೋಕಮಾನ್ಯರ ಹಿರಿಮೆಯನ್ನು ಅರಿತುಕೊಂಡೆ. ಇದೇ ಘಟನೆ ದೇಶ ಕಾರ್ಯಕ್ಕೆ ದುಡಿಯುವಂತೆ ನನ್ನನ್ನು ಪ್ರೇರೇಪಿಸಿದ್ದು. ಕಾಂಗ್ರೆಸ್ ಸೇರಲು ಕಾರಣ ವಾಗಿದ್ದು."

೧೮೯೨ರಲ್ಲಿ ದಕ್ಷಿಣ ಕನ್ನಡದ ಕುಂದಾಪುರದಲ್ಲಿ ಜನಿಸಿದ ಉಮಾಬಾಯಿ ಯವರ ತವರು ಮನೆಯ ಹೆಸರು ಭವಾನಿ. ತಂದೆ ಗೋಳಿಕೇರಿ ಕೃಷ್ಣರಾಯರು. ತಾಯಿ ತುಂಗಾಬಾಯಿ. ಸಾಲಾಗಿ ಐದು ಗಂಡು ಮಕ್ಕಳು, ಹೆಣ್ಣು ಸಂತಾನ ಬೇಕೆಂದು ದೇವರ ಸೇವೆ ಮಾಡಿದಾಗ ಹುಟ್ಟಿದ ಮಗಳೇ ಭವಾನಿ. ಮನೆಯವರೆಲ್ಲರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಅಚ್ಚುಮೆಚ್ಚಿನ ಹುಡುಗಿ. ಈಕೆಯು ಆರು ವರ್ಷದ ಮಗುವಾಗಿರುವಾಗಲೇ ತಂದೆ ಉದ್ಯೋಗಕ್ಕಾಗಿ ಮುಂಬೈಗೆ ಹೋದರು. ೧೯೦೫ ರಲ್ಲಿ ಕೆ. ಆನಂದರಾಯರ ಏಕ ಮಾತ್ರ ಪುತ್ರ ಸಂಜೀವರಾಯರೊಂದಿಗೆ ಭವಾನಿಯ ಮದುವೆಯಾಗಿ ಮುಂದೆ ಉಮಾಬಾಯಿ ಆದರು. ಈ ಹಂತದಲ್ಲಿ ಮಾತಾಪಿತೃಗಳನ್ನು ಕಳೆದುಕೊಂಡ ಉಮಾಬಾಯಿ. ಕ್ಷಯರೋಗಕ್ಕೆ ತುತ್ತಾದ ಪತಿಯನ್ನು ೧೯೨೩ ರಲ್ಲಿ ಅಗಲಿದರು. ಆದರೆ ಮಾವನವರಾದ ಕೆ. ಆನಂದರಾಯರು ತೋರಿದ ಪಿತೃವಾತ್ಸಲ್ಯ ಅನನ್ಯ. ಮಾವನವರ ಕುರಿತು ಉಮಾಬಾಯಿಯವರೇ ಹೇಳುವಂತೆ :

"ಆಗ ನಾನು ಮದುವೆಯಾಗಿ ಮುಂಬೈನಲ್ಲಿದ್ದೆ. ಮುಂಬೈ ಹೈಕೋರ್ಟ್‌ನಲ್ಲಿ ಅಸಿಸ್ಟೆಂಟ್ ಓರಿಯಂಟಲ್ ಟ್ರಾನ್ಸ್‌ಲೇಟರ್ ಆಗಿದ್ದ ನನ್ನ ಮಾವನವರಾದ ಕೆ. ಆನಂದರಾಯರು ಸ್ತ್ರೀ ಶಿಕ್ಷಣ, ಸ್ತ್ರೀ ಪ್ರಗತಿಯಲ್ಲಿ ಬಹಳ ಆಸಕ್ತಿಯುಳ್ಳವರು ಸುಧಾರಪ್ರಿಯರು. ಅವರ ಪ್ರೋತ್ಸಾಹವೇ ೧೯೧೯ರಲ್ಲಿ ನಾನು ಮೆಟ್ರಿಕ್ ಮುಗಿಸಲು ಕಾರಣ. ಸಂಪ್ರದಾಯಸ್ಥರ ಮನೆಯ ಹೆಣ್ಣುಮಗಳು ಮನೆಯ ಹೊಸಿಲು ದಾಟು ವುದೇ ಜನರ ಹುಬ್ಬೇರುವಂತೆ, ಕುತ್ಸಿತ ಟೀಕೆಗಳಿಗೆ ಕಾರಣವಾಗುವ ಆ ಕಾಲದಲ್ಲಿ, ಸಮಾಜದ ವಿಷಯದಲ್ಲಿ ಅಕ್ಕರೆ ತೋರಲು ನನ್ನ ಮಾವನವರು ವಿಶೇಷವಾಗಿ ಪ್ರೋತ್ಸಾಹಿಸಿದರು. ಹೀಗೆ ಸಾಮಾಜಿಕ ಅಕ್ಕರೆ ಇರುವವರನ್ನು ಹುಡುಕಿಕೊಂಡು, ಆಸಕ್ತಿ ತೋರಿಸಿದವರಲ್ಲಿ ಆ ಕುರಿತು ಚರ್ಚಿಸಿ ಮನೆಗೆ ಬರುವಾಗಲೆಲ್ಲ ರಾತ್ರಿ ಗಂಟೆ ಎಂಟಾಗಿತ್ತು. ಹೀಗೆ ಕಷ್ಟಪಟ್ಟು ಹನ್ನೊಂದು ಜನರನ್ನು ಸೇರಿಸಿದೆವು. ನಂತರ ಒಳ್ಳೆಯ ಭಾಷಣಕಾರರನ್ನು ಕರೆತಂದು ಭಾಷಣ ಕೇಳಲಿಕ್ಕೆ ಬಂದವರನ್ನು ಸದಸ್ಯ ರನ್ನಾಗಿ ಮಾಡುತ್ತಿದ್ದೆವು."

ಹೀಗೆ ಸಾಮಾಜಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲುಗೊಳ್ಳಲು ಅವರು ನೀಡಿದ ಉತ್ತೇಜನವೇ ಮುಂಬಯಿಯ "ಸಾರಸ್ವತ ಸಮಾಜ" ಇಂದು ಬೃಹತ್ತಾಗಿ ಬೆಳೆದು ನಿಲ್ಲಲು ಒಂದು ಕಾರಣವೆಂದರೆ ತಪ್ಪಾಗಲಾರದು.

"ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಆನಂದರಾಯರ ಮನೆ ಅನೇಕ ಸಮಾಜ ಸುಧಾರಕರ ಆಶ್ರಯಸ್ಥಾನವಾಗಿತ್ತು. ಮಹಿಳಾ ಪ್ರಗತಿಯ ಕಾರ್ಯವನ್ನು ಆರಂಭಿಸಿದ್ದ ಮಹರ್ಷಿ ಅಣ್ಣಾಸಾಹೇಬ್ ಕರ್ವೆಯವರು ಆಗಾಗ ಆನಂದರಾಯರ ಮನೆಗೆ ಬರುತ್ತಿದ್ದರು. ಕರ್ವೆಯವರ ಸಾನ್ನಿಧ್ಯ ಉಮಾಬಾಯಿ ಯವರಿಗೆ ಎಳವೆಯಲ್ಲೇ ಸಮಾಜ ಕಾರ್ಯದಲ್ಲಿ ಪ್ರವೃತ್ತವಾಗುವಂತೆ ಪ್ರೇರೇಪಣೆ ನೀಡಿತು. ಆ ದಿಸೆಯಲ್ಲಿ ಆಕೆಯ ಮಾವನವರು ಅನೇಕ ಸೌಕರ್ಯ, ಸೌಲಭ್ಯಗಳನ್ನು ಒದಗಿಸಿದರು" ಎಂದು ಶ್ರೀ ರಾ. ವೆ. ಕರಿಗುದರಿಯವರು ಹೇಳಿದ್ದಾರೆ.

ಟಿಳಕರ ನಿಧನಾನಂತರ ೧೯೨೦ ರಲ್ಲಿ ನಾಗಪೂರ ಕಾಂಗ್ರೆಸ್ ಅಧಿವೇಶನದ ಸಮಯದಲ್ಲಿ ಉಮಾಬಾಯಿ ಕಾಂಗ್ರೆಸ್ ಸೇರಿದರು. ಅದು ಅವರ ಸಾಮಾಜಿಕ ಚಟುವಟಿಕೆಗಳಿಗೆ ವಿಶಾಲ ವ್ಯಾಪ್ತಿಯನ್ನೊದಗಿಸಿತು. ಪತಿ ಸಂಜೀವರಾಯರೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ತಂದೆಗೆ ತಕ್ಕ ಮಗ, ಸತಿಗೆ ತಕ್ಕ ಪತಿಯಾಗಿದ್ದರು. ಉಮಾಬಾಯಿ ಖಾದಿ ಆಂದೋಲನದಲ್ಲಿ ತೊಡಗಿದಾಗ ಸಂಜೀವರಾಯರೂ ಖಾದಿ ಪ್ರೇಮಿಯಾದರು. ಉಮಾಬಾಯಿ ರಚಿಸಿದ "ಸ್ವದೇಶೀ ವ್ರತ" ಎಂಬ ನಾಟಕವನ್ನು ರಂಗಭೂಮಿಯಲ್ಲಿ ಅಭಿನಯಿಸಲು ಸಂಜೀವರಾಯರು ಯಶಸ್ವಿಯಾಗುವಂತೆ ಸಹಕರಿಸಿದರು.

ಆದರೆ ಕ್ಷಯರೋಗಕ್ಕೆ ತುತ್ತಾದ ಪತಿಯ ನಿಧನಾ ನಂತರ (೧೯೨೩) ಮುಂಬಯಿ ಬಿಟ್ಟು ಹುಬ್ಬಳ್ಳಿಯಲ್ಲಿ ನೆಲೆಸಿದರು. ನಾಡಿನ ಅಭ್ಯುದಯವಾಗ ಬೇಕಾದರೆ ಮಹಿಳೆಯ ಉದ್ಧಾರ ಅವಶ್ಯವೆಂದು ಹರ್ಡೀಕರರು ತಮ್ಮ ಅಣ್ಣನ ಮಗಳು ಬಾಲವಿಧವೆ ಗಂಗೂತಾಯಿ ಶೀವಡೆಯವರಿಗೆ ರಾಷ್ಟ್ರೀಯತೆ, ಸಾರ್ವಜನಿಕ ಕಾರ್ಯಗಳನ್ನು ಹೇಳಿಕೊಡುತ್ತಿದ್ದರು. ನಾಡಿನ ಭಗಿನಿಯರ ಉನ್ನತಿಗಾಗಿ ಮಹಿಳೆಯರದೇ ಆದ ಒಂದು ಸಂಸ್ಥೆಯ ಅಗತ್ಯವಿದೆಯೆಂದರಿತ ಹರ್ಡೀಕರರು ೧೯೨೩ರಲ್ಲಿ ಹುಬ್ಬಳ್ಳಿಯಲ್ಲಿ 'ಭಗಿನಿಮಂಡಲ'ವನ್ನು ಸ್ಥಾಪಿಸಿದರು. ಗಂಗೂತಾಯಿಯವರ ಸಲಹೆಯಂತೆ ಉಮಾಬಾಯಿಯವರು ಇದೇ ಭಗಿನಿ ಮಂಡಳಿ ಸೇರಿದರು. ೭೩ರ ವೃದ್ಧ ಪುತ್ರವಿಯೋಗದಿಂದ ನೊಂದ ಆನಂದರಾಯರು ಉಮಾಬಾಯಿಯವರಲ್ಲಿ ತೋರಿದ ಪಿತೃವಾತ್ಸಲ್ಯ ಪುನಃ ಸಾಮಾಜಿಕ ರಂಗಕ್ಕೆ ಪ್ರವೇಶಿಸಲು ಪ್ರೇರೇಪಣೆ ನೀಡಿತು. ಹಲವರ ದುಃಖದಲ್ಲಿ ಉಮಾಬಾಯಿ ತಮ್ಮ ದುಃಖವನ್ನು ಮರೆತರು.

೧೯೨೪ರಲ್ಲಿ ಬೆಳಗಾವಿಯಲ್ಲಿ ನಡೆಯಬೇಕಾಗಿದ್ದ ಕಾಂಗ್ರೆಸ್ ಅಧಿವೇಶನಕ್ಕೆ ಸ್ವಯಂಸೇವಿಕೆಯರು ಬೇಕಾಗಿತ್ತು. ಇಂತಹ ಸ್ವಯಂ ಸೇವಕಿಯರನ್ನು ಕಲೆಹಾಕಿ, ಅವರಿಗೆ ಶಿಕ್ಷಣ ಕೊಡುವ ಕೆಲಸವನ್ನು ಡಾ. ಹರ್ಡೀಕರ್ ಉಮಾಬಾಯಿಯವರಿಗೆ ಒಪ್ಪಿಸಿದರು. ಕನ್ನಡ ನಾಡಿನನಲ್ಲೆಲ್ಲಾ ಸಂಚರಿಸಿ ಸ್ವಯಂಸೇವಿಕೆಯರನ್ನು ಕಲೆಹಾಕಿ, ಅವರನ್ನು ತರಬೇತು ಮಾಡಿ ಮುಖಂಡರು ಮೆಚ್ಚುವಂತೆ ಉಮಾಬಾಯಿ ಕೆಲಸವನ್ನು ನಿರ್ವಹಿಸಿದರು. ಈ ಸಂದರ್ಭವನ್ನು ನೆನೆದು ಉಮಾಬಾಯಿಯವರು ಹೀಗೆನ್ನುತ್ತಾರೆ. "ಬೆಳಗಾವಿಯ ಈ ಅಧಿವೇಶನದಲ್ಲಿ ಗಾಂಧೀಜಿಯವರೇ ಅಧ್ಯಕ್ಷತೆ ವಹಿಸಿದ್ದರು. ಗಂಗಾಧರರಾವ್ ದೇಶಪಾಂಡೆಯವರೂ ಈ ಅಧಿವೇಶ ಕೆಲಸದಲ್ಲಿ ಮುಖ್ಯಸ್ಥರು. ನಾನು ಬೆಂಗಳೂರು, ಮಂಗಳೂರು, ಉಡುಪಿ ಎಲ್ಲಾ ಭಾಗವನ್ನೂ ಸುತ್ತಿ ೧೦೧ ಸ್ವಯಂಸೇವಿಕೆಯರನ್ನು ಸಿದ್ಧಪಡಿಸಿದೆ. ಆ ಮುಖಂಡರಿಗೆ ನಾನು ಹೇಳಿದೆ, ೧೦೧ ಹುಡುಗಿಯರನ್ನು ತಯಾರು ಮಾಡುತ್ತೇನೆ. ಒಂದೇ ನಮೂನೆ ಸೀರೆ ಆಗ ಬೇಕೆನ್ನುತ್ತೀರಿ. ಯಾರಿಗೆ ಸಾಧ್ಯವಿಲ್ಲವೋ ಅಂತಹವರಿಗೆ ನೀವೇ ಕೊಡಬೇಕು ಎಂದು ಹೇಳಿ ಮುಖಂಡರನ್ನು ಒಪ್ಪಿಸಿದೆ. ನಮ್ಮ ಜೊತೆ ಸೇರಿ ಕೆಲಸಮಾಡಲು ಇಷ್ಟಪಟ್ಟು ಕೆಲವರು ವಿಧವೆಯರೂ ಬಂದರು. ಕೇಶ ಮುಂಡನ ಮಾಡಿದ ವಿಧವೆಯರು ತಮಗೂ ರಾಷ್ಟ್ರ ಸೇವೆಯ ಅವಕಾಶ ನೀಡಲು ಕೇಳುತ್ತಿದ್ದರು, ಕಣ್ಣೀರಿಡುತ್ತಿದ್ದರು. ಅವರ ಚೈತನ್ಯ ನೋಡಿ ಅಚ್ಚರಿಪಟ್ಟ ನಾನು ಅಧಿವೇಶನದ ಕಾಲದಲ್ಲಿ ಪಾಠ ಶಾಲೆಯ ಉಸ್ತುವಾರಿಯನ್ನು ಅವರಿಗೆ ನೀಡಿದೆ. ನಾನೇನೋ ಅವರಿಗೆ ಮಹೋಪಕಾರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಮಾಡಿದಂತೆ ಆ ವಿಧವೆಯರು ಕೃತಜ್ಞತೆಯ ಕಂಬನಿ ಮಿಡಿದಿದ್ದು ನನಗಿನ್ನೂ ನೆನಪಿದೆ." ಕ್ಷಣಕಾಲ ಉಮಾಬಾಯಿ ಭಾವುಕವಾದರು.

ಮಹಿಳೆಯರಿಗೆ ರಾಷ್ಟ್ರೀಯ ಪದ್ಧತಿಯಲ್ಲಿ ಶಿಕ್ಷಣ ನೀಡಲೆಂಬ ಉದ್ದೇಶದಿಂದ ಹುಬ್ಬಳ್ಳಿಯ ಕಿಲ್ಲೆಯ ಒಂದು ಸಣ್ಣ ಮನೆಯಲ್ಲಿ ಭಗಿನೀ ಮಂಡಳಿಯವರಿಂದ ಟಿಳಕ ಕನ್ಯಾ ಶಾಲೆಯನ್ನು ಪ್ರಾರಂಭಿಸಲಾಗಿತ್ತು. ಉಮಾಬಾಯಿ ಈ ಶಾಲೆಯ ಸಂಪೂರ್ಣ ಹೊಣೆ ಹೊತ್ತನಂತರ ಅದಕ್ಕೆ ಪ್ರಶಸ್ತವಾದ ಸ್ಥಳ ದೊರಕಿಸಿ ಕೊಡುವ ಸಲುವಾಗಿ ಕರ್ನಾಟಕ ಪ್ರೆಸ್‌ಗೆ ಶಾಲೆಯನ್ನು ಸ್ಥಳಾಂತರಿಸಿದರು. ಕರ್ನಾಟಕ ಪ್ರೆಸ್ ಕಾಂಗ್ರೆಸ್ ಚಟುವಟಿಕೆಯ ಒಂದು ಕೇಂದ್ರವಾಗಿತ್ತು. ಉಮಾಬಾಯಿಯವರ ಮಾವನವರಾದ ಆನಂದರಾಯರು ಹುಬ್ಬಳ್ಳಿ ತಾಲ್ಲೂಕು ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದರು. ಶಿಕ್ಷಣದ ಜೊತೆ ಮಹಿಳೆಯರಲ್ಲಿ ಸ್ವಾತಂತ್ರ್ಯ ಪ್ರಜ್ಞೆಯನ್ನು, ರಾಷ್ಟ್ರೀಯ ಜಾಗೃತಿಯನ್ನು ಬಿತ್ತಿ ಬೆಸೆಯುವಲ್ಲಿ ಟಿಳಕ ಕನ್ಯಾಶಾಲೆ ಸಮರ್ಥ ಸಾಧನವಾಯಿತು. ಅಂದ ಮೇಲೆ ಬ್ರಿಟಿಷ್ ಸರಕಾರದ ಕೃಪಾದೃಷ್ಟಿ ಎಷ್ಟರಮಟ್ಟಿಗೆ ಎಂದು ಹೇಳಬೇಕಾದ್ದಿಲ್ಲ. ಆದರೂ ಯಾರೂ ವಿಚಲಿತರಾಗಲಿಲ್ಲ. ಈ ಶಾಲೆ ೧೦ ವರ್ಷಕಾಲ ನಡೆಯಿತು. ೧೯೨೮ರ ಸಮಯದಲ್ಲಿ ಹುಬ್ಬಳ್ಳಿಯ ಮಂಡಳವು ಕೇಂದ್ರವಾಗಿ ಬೇರೆ ಬೇರೆ ಜಿಲ್ಲೆಗಳಲ್ಲಿ ಇದೇ ವಿಧದ ಒಟ್ಟು ೧೪ ಸಂಸ್ಥೆಗಳು ಸುಸಂಘಟಿತವಾಗಿ ಕಾರ್ಯ ಮಾಡಲಾರಂಭಿಸಿದವು.

೧೯೨೭–೨೮ರಲ್ಲಿ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್‌ನ ಉಪಾಧ್ಯಕ್ಷೆಯಾಗಿ ಉಮಾಬಾಯಿ ಆಯ್ಕೆಯಾಗಿದ್ದರು. (ಅಧ್ಯಕ್ಷರು ಕೌಜಲಗಿ ಶ್ರೀನಿವಾಸರಾಯರು-ಇವರನ್ನು ಕರ್ನಾಟಕದ ಹೆಬ್ಬುಲಿ ಎಂದು ಕರೆಯುತ್ತಿದ್ದರು). ಡಾ॥ ನಾ. ಸು. ಹರ್ಡೀಕರರ ಹಿಂದೂಸ್ಥಾನಿ ಸೇವಾದಳದೊಂದಿಗೆ ಇವರ ಸಂಬಂಧ ಮೊದಲಿನಿಂದಲೂ ಇದ್ದಿತು. ಸೇವಾದಳದ ಅಖಿಲ ಭಾರತ ಸ್ತ್ರೀ ವಿಭಾಗ ಪ್ರಾರಂಭವಾದ ನಂತರ ಶ್ರೀಮತಿ ಕಮಲಾದೇವಿ ಚಟ್ಟೋಪಧ್ಯಾಯ, ಸಫಿಯಾಖಾನ್ ಅವರೊಡನೆ ಉಮಾಬಾಯಿಯವರು ಸಹ ಕಾರ್ಯದರ್ಶಿನಿಯಾಗಿದ್ದರು.

೧೯೩೨ರ ಆಂದೋಲನದಲ್ಲಿ ಭಗಿನಿಮಂಡಳ ಸಕ್ರಿಯವಾಗಿ ಪಾಲುಗೊಂಡ ಕಾರಣ ಬ್ರಿಟಿಷ್ ಸರಕಾರ ಇದನ್ನು "ಅಕ್ರಮಕೂಟ" ಎಂದು ಸಾರಿ ಉಮಾಬಾಯಿಯವರನ್ನು ಹಿಂಡಲಗಿ ಸೆರೆಮನೆಯಲ್ಲಿ ಹಾಕಿತು. ಅಲ್ಲಿಂದ ಯರವಾಡಾ ಜೈಲಿಗೆ ಸಾಗಿಸಲಾಯಿತು. ಆಮೇಲೆ ೧೯೩೩ ರಲ್ಲಿ ಅಲ್ಲಿಂದ ಬಿಡುಗಡೆಯಾಗಿ ಬರುತ್ತಲೂ ಮಾವನವರು ಸ್ವರ್ಗಸ್ಥರಾದರು. ಪಿತೃವಾತ್ಸಲ್ಯ ಹರಿಸಿದ ವ್ಯಕ್ತಿಯ ನಿಧನದಿಂದ ಶೋಕ ಒಂದೆಡೆಯಾದರೆ, ಉಮಾಬಾಯಿಯವರಿಗೆ ಆಸರೆಯಾಗಿದ್ದ ಅವರ ಸೋದರಳಿಯ ರಮಾಕಾಂತರೂ ಬಂಧಿತರಾಗಿದ್ದರು. ದೇಶದ ಹೊಣೆ ಹೊತ್ತಿರುವುದರಿಂದ ವೈಯಕ್ತಿಕ ದುಃಖ ದುಮ್ಮಾನಗಳಿಂದ ಕಂಗೆಡಲಾದೀತೆ? ಬ್ರಿಟಿಷ್ ಸರಕಾರದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಎಚ್ಚರಿಕೆಯನ್ನು ಧಿಕ್ಕರಿಸಿ ಕರ್ನಾಟಕ ಪ್ರೆಸ್‌ನ್ನು ಸಂಪೂರ್ಣವಾಗಿ ಕಾಂಗ್ರೆಸ್ ಚಟುವಟಿಕೆಗಳಿಗೆ ಮೀಸಲಾಗಿ ಕೊಟ್ಟರು.

ಇದರ ಹಿನ್ನೆಲೆಯಲ್ಲೇ ಬಿಹಾರದಲ್ಲಿ ಭೂಕಂಪ. ಡಾ॥ ಹರ್ಡೀಕರರ ಆದೇಶದಂತೆ ಸಂತ್ರಸ್ತ ಭಗಿನಿಯರ ಸೇವೆ ಮಾಡಲು ಬಿಹಾರಕ್ಕೆ ತೆರಳಿದರು. ಅನ್ನ, ನೀರು, ನೆರಳು, ದೊರೆಯದೇ, ನಿರ್ಗತಿಕರಾಗಿ, ರೋಗರುಜಿನಕ್ಕೆ ತುತ್ತಾದ ಆರ್ತರನ್ನು ಹಲವು ಸ್ವಯಂ ಸೇವಿಕೆಯರೊಂದಿ ಶುಶ್ರೂಷೆಗೈದರು.

ಭೂಕಂಪದಿಂದ ತೊಂದರೆಗೊಳಗಾದ ಬಿಹಾರದ ಜನರ ಆರೈಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಬಾಬೂ ರಾಜೇಂದ್ರಪ್ರಸಾದ್ ಹಾಗೂ ನೆಹರೂ ಅವರ ಸಂಪರ್ಕವೂ ಉಮಾಬಾಯಿಯವರಿಗೆ ದೊರೆಯಿತು. ವೈದ್ಯಕೀಯ ನೆರವೂ ಬೇಕಾದ್ದರಿಂದ ದೇಶದ ನಾನಾ ಭಾಗಗಳಿಂದ ವೈದ್ಯರು ಬಿಹಾರಿಗೆ ಹೋಗಿದ್ದರು. ಅಂತಹವರಲ್ಲಿ ಹುಬ್ಬಳ್ಳಿಯ ಡಾ॥ ಸಾವಿತ್ರಿಬಾಯಿ ಮಹಾಜನ ಒಬ್ಬರು. "ಉಮಾಬಾಯಿಯವರ ಅವಿರತ ದುಡಿಮೆ, ಸಹನಶೀಲತೆ ಸೇವಾಭಾವ ಈ ಗುಣಗಳನ್ನು ಬಿಹಾರದ ಆ ಕಠಿಣ ಪ್ರಸಂಗದಲ್ಲಿ ಕಂಡೆನು" ಎಂದು ಬಿಹಾರದ ಮೋಂಜಿರ್‌ನಲ್ಲಿ ಉಮಾಬಾಯಿಯವರ ಕಾರ್ಯದಕ್ಷತೆಯನ್ನು ಸಾವಿತ್ರಿಬಾಯಿ ಬಾಯ್ತುಂಬ ಹೊಗಳಿದ್ದಾರೆ.

ಬಿಹಾರದಿಂದ ಬಂದ ಕೂಡಲೇ ೧೯೩೫-೩೬ ರಲ್ಲಿ ನಡೆದ ಪ್ರಾಂತೀಯ ಚುನಾವಣೆಗಳಲ್ಲಿ ಕಾಂಗ್ರೆಸ್ ಪರ ಪ್ರಚಾರ ಮಾಡಿದರು. ಶಿಶು ಸಂಗೋಪನಾ ಕಾರ್ಯ, ಪ್ರೌಢ ಶಿಕ್ಷಣ ಕಾರ್ಯ, ಕಸ್ತೂರಬಾ ವಿಶ್ವಸ್ಥ ನಿಧಿಯ ಕಾರ್ಯ ಇವನ್ನೆಲ್ಲ ವಹಿಸಿಕೊಂಡರು (ವಿಶ್ವಸ್ಥ ನಿಧಿಗೆ ಉಮಾಬಾಯಿ ಕರ್ನಾಟಕದ ಪ್ರತಿನಿಧಿಯಾಗಿದ್ದರು.)

೧೯೪೨ ರ ಚಲೇಜಾವ್ ಚಳವಳಿ ಸಂದರ್ಭ ಒಂದು ಘಟನೆಯ ಕುರಿತು ಬುರ್ಲಿ ಬಿಂದು ಮಾಧವರಾಯರ ವಿವರಣೆ ನೋಡಿ :

"ಸರಕಾರ ಚಳವಳಿಗಾರರ ಬೇಟೆಯಾಡತೊಡಗಿತ್ತು. ಸರಕಾರದ ಕಣ್ಣು ತಪ್ಪಿಸಿ ಅಲೆಯುತ್ತಿರುವ ನಮಗೆ ಕೈಯಲ್ಲಿ ಕಾಸಿಲ್ಲ, ಹೊಟ್ಟೆಗೆ ಅನ್ನವಿಲ್ಲ, ಹೀಗೆ ಉಪವಾಸದಿಂದ ಬಳಲಿದ ೬೦ ಜನ ಉಮಾಬಾಯಿಯವರ ನೆರವು ಕೇಳಲು ರಾತ್ರಿ ೧೨-೩೦ಕ್ಕೆ ಅವರ ಮನೆಗೆ ಹೋಗಿ ಬಾಗಿಲು ತಟ್ಟಿದ್ದೆವು. ನನ್ನ ಜೊತೆ ಶ್ರೀ ರಂಗ ಕಾಮತರನ್ನೂ ಕರೆದುಕೊಂಡು ಹೋಗಿದ್ದೆ. ಅನುಮಾನದಲ್ಲೇ ಬಾಗಿಲು ತೆರೆದು ಕೊಂಡರೂ ವೇಷ ಬದಲಾಯಿಸಿಕೊಂಡು ಬಂದ ನಮ್ಮನ್ನು ಕಂಡು ಉಮಾಬಾಯಿ ನಗುತ್ತ ಸ್ವಾಗತಿಸಿದರು. ಎರಡು ದಿನಗಳ ಕಾಲ ಅನ್ನದ ಮುಖ ಕಾಣದಿದ್ದ ನಮಗೆ ಆ ಅಪರಾತ್ರಿಯಲ್ಲಿ ಉಮಾಬಾಯಿಯವರು ಅಡಿಗೆ ಮಾಡಿ ಉಣಬಡಿಸಿದರು. ಆಮೇಲೆ ನಮ್ಮಿಬ್ಬರನ್ನು ಮಮತೆಯಿಂದ ಬೆನ್ನು ತಟ್ಟಿ 'ಬಹಳ ಜೋಕೆ ಎಚ್ಚರಿಕೆಯಿಂದ ಮುನ್ನುಗ್ಗಬೇಕು' ಎಂದರು. 'ನಮ್ಮಿಬ್ಬರ ಹೊಟ್ಟೆ ತುಂಬಿದರೆ ಮಾತ್ರ ಸಾಲದು ಇನ್ನೂ ೫೮ ಜನರು ಉಪವಾಸದಲ್ಲಿದ್ದಾರೆ' ಎಂದ ಕೂಡಲೇ ಐದುನೂರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ರೂಪಾಯಿ ತೆಗೆದುಕೊಟ್ಟರು. 'ಬರ್ಲಿ, ಎಚ್ಚರಿಕೆ, ತಲೆತಪ್ಪಿಸಿಕೊಂಡು ಕಾರ್ಯ ಮಾಡುವವರಿಗೆ ಗುಂಡು ಹಾಕಲು ಅಪ್ಪಣೆಯಾಗಿದೆಯಂತೆ' ಎಂದು ಹೇಳುವಾಗ ಅವರ ಕಣ್ಣುಗಳು ನೀರಿನ ಕೊಳಗಳಾಗಿದ್ದವು, ಕಂಠ ತುಂಬಿಬಂದಿತ್ತು. ಈ ನೆರವನ್ನು ನಾನೆಂದೂ ಮರೆಯಲಾರೆ."

"ಉಮಾಬಾಯಿಯವರು ನಡೆಸಿದ ಟಿಳಕ ಕನ್ಯಾಶಾಲೆಯನ್ನು ನಾನು ನೋಡಿಬಂದೆ. ಎಷ್ಟೋ ಎಡರು-ತೊಡರುಗಳನ್ನೆದುರಿಸಿ ಸತತ ಪರಿಶ್ರಮದಿಂದ ಈ ಶಾಲೆಯನ್ನು ನಡೆಸುತ್ತಿರುವ ಆ ಮಹಿಳೆಗೆ ಉದ್ದಂಡ ನಮಸ್ಕಾರ ಹಾಕಬೇಕೆಂದು ಎನಿಸಿತು" ನಾಡಿನ ಹಿರಿಯ ಸಾಹಿತಿ ಪಂಜೆ ಮಂಗೇಶರಾಯರ ನುಡಿಗಳಿವು. ಪಂಜೆ ಯರ ಸೊಸೆ ಯರವಾಡಾ ಕಾರಾಗೃಹದಲ್ಲಿ ಉಮಾಬಾಯಿಯವರ ಸಹ ವಾಸಿನಿ ಯಾಗಿದ್ದ ಕೃಷ್ಣಾಬಾಯಿ "ಸಾಮಾಜಿಕ ಸೇವೆಯನ್ನು ಮಾಡುವುದರಲ್ಲಿ ಎಷ್ಟು ಆಸಕ್ತಿ ಯಿತ್ತೋ ಅದಕ್ಕಿಂತ ಹೆಚ್ಚಿನ ಆಸಕ್ತಿಯನ್ನು ಬಂಧು-ಬಳಗದವರಲ್ಲಿ ಉಮಾಬಾಯಿ ತೋರುತ್ತಿದ್ದರು. ಉಮಾಬಾಯಿಯವರ ಮನೆ ಮಾದರಿಯದು. ಮನೆಯಲ್ಲಿ ಸ್ವಚ್ಛತೆ ಸುವ್ಯವಸ್ಥೆ ಎಲ್ಲೆಡೆಯೂ ಕಂಡುಬರುವುದು. ಆದರಾತಿಥ್ಯಕ್ಕೆ ಎಲ್ಲೂ ಕುಂದಿಲ್ಲ. ಬಳಗದವರಿಗೆಲ್ಲ ಉಮಾಬಾಯಿಯವರ ಮನೆಯೋ ಆಸರೆ. ಇವರು ತಮ್ಮ ಬಳಗದದರ ಸೇವೆ ಮಾಡುವುದು ನೋಡಿದರೆ ಸದಾ ಪರಿವಾರದಲ್ಲೇ ಮಗ್ನ ರಾದಂತೆ ತೋರುವುದು. ಬಂಧುಗಳ ಮನೆಯಲ್ಲಿ ಮದುವೆಯಾದರೆ ಅಲ್ಲಿ ಉಮಾ ಬಾಯೀಯವರ ನೆರವು ಇದ್ದೇ ಇರುತ್ತದೆ" ಎಂದು ಆತ್ಮೀಯವಾಗಿ ನುಡಿದಿದ್ದಾರೆ.

"ತನಗೆ ಸ್ವಂತ ಮಕ್ಕಳಿಲ್ಲದಿದ್ದರೂ ಸಮಾಜದ ಮಕ್ಕಳನ್ನೇ ತನ್ನ ಮಕ್ಕಳೆಂದು ಭಾವಿಸಿ ಅವರ ಏಳ್ಗೆಗಾಗಿ ತಮ್ಮ ಇಡೀ ಆಯುಷ್ಯವನು ಮುಡಿಪಾಗಿಟ್ಟು ಸ್ತ್ರೀ ಸಮಾಜದ ಉದ್ಧಾರಕ್ಕಾಗಿ ಹಗಲಿರುಳು ದುಡಿಯುತ್ತಿದ್ದಾರೆ" ಎಂದು ಡಿ. ಕೆ. ಭಾರದ್ವಾಜರು ಹೃದಯ ತುಂಬಿ ನುಡಿದಿದ್ದಾರೆ.

"ತಮ್ಮ ಸ್ವಂತ ಸುಖದ ಮೂಲವೇ ನಾಶವಾದಾಗ ಇತರರಿಗೆ ಸುಖ–ಸಮಾ ಧಾನಗಳನ್ನೊದಗಿಸಿಕೊಟ್ಟು ಅದನ್ನು ನೋಡಿ ತಾವು ತೃಪ್ತಿಪಡೆಯುತ್ತಿದ್ದರು. ಆ ಸಾಧನೆಯಲ್ಲೇ ತಮ್ಮ ದುಃಖವನ್ನು ಮರೆಯಲು ನಿಶ್ಚಯಿಸಿ ಉಮಾಬಾಯಿಯವರು ತಮ್ಮ ಇಡೀ ಜೀವನವನ್ನೇ ಕಳೆಯುತ್ತಿದ್ದಾರೆ" ಆನಂದಾಶ್ರಮದ ಶ್ರೀಮತಿ ಸರಸ್ವತಿ ಬಾಯಿಯವರ ಅಭಿಪ್ರಾಯವಿದು.

"ಉಮಾಬಾಯಿಯವರು ಮಾಡುತ್ತಿರುವ ಶ್ರೇಷ್ಠ ಕೆಲಸಕ್ಕಾಗಿ ಮಾತ್ರವಲ್ಲದೆ, ಅವರು ಪ್ರತಿಯೊಬ್ಬ ಸಹಕಾರಿಯ ಬಗ್ಗೆ ತೋರುವ ಆತ್ಮೀಯತೆಯ ಕಾರಣದಿಂದ ಅವರ ಸುತ್ತ–ಮುತ್ತ ಕಾರ್ಯಕರ್ತೆಯರು ಬಂದು ನೆರೆಯುತ್ತಾರೆ" ಉಮಾಬಾಯಿ ಯವರ ಕಾರ್ಯಕ್ಷಮತೆಯ ಕುರಿತು ಸುಚೇತಾ ಕೃಪಲಾನಿಯವರ ಮೆಚ್ಚುಗೆಯ ನುಡಿಗಳಿವು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಈ ಮೇಲಿನವೆಲ್ಲ ಉಮಾಬಾಯಿಯವರು ಕೈಗೊಂಡ ಹಲವು ಕಾರ್ಯಗನಳ್ನು ಕಂಡು ಮೆಚ್ಚಿದ ನಾಡಿನ ಕೆಲವು ಹಿರಿಯರ ಆತ್ಮೀಯ ನುಡಿಗಳು. ಇಂತಹ ಉಮಾಬಾಯಿಯವರ ಅರವತ್ತನೆಯ ಜನ್ಮದಿನೋತ್ಸವವನ್ನು ಭಗಿನಿಮಂಡಳ ವಿಜೃಂಭಣೆಯಿಂದ ಆಚರಿಸಿ ಆ ದಿನ ಅವರನ್ನು ಸತ್ಕರಿಸುವ ಸಮಾರಂಭವಿಟ್ಟಾಗ "ಇದಕ್ಕಾಗಿ ಹಣ, ಕಾಲ ನಿಮ್ಮ ಪ್ರತಿಭೆಗಳನ್ನು ಏಕೆ ವ್ಯಯ ಮಾಡುವಿರಿ" ಎಂದರಂತೆ ಉಮಾಬಾಯಿ, ಎಂತಹ ಸರಳ ವ್ಯಕ್ತಿತ್ವ.

ಆದರೆ ಆ ಸಂದರ್ಭದಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯರು ನುಡಿದ ಮಾತುಗಳು ಗಮನಾರ್ಹ. "ಶ್ರೀಮತಿ ಉಮಾಬಾಯಿಯವರನ್ನು ಗೌರವಿಸುವುದೆಂದರೆ ಮುಂದಿನ ಪೀಳಿಗೆಗಾಗಿ ಹೊಸ ಜಗತ್ತನ್ನು ನಿರ್ಮಾಣ ಮಾಡಲು ಕಲ್ಲು ಮುಳ್ಳುಗಳನ್ನು ತುಳಿಯುತ್ತ ಹೋಗಿ ಸುರಕ್ಷಿತ ದಾರಿಯನ್ನು ಸ್ಥಿರಮಾಡಿದ ಪ್ರಾರಂಭದ ಸಾಹಸಿ ಕಾರ್ಯಕರ್ತರನ್ನು ಅಭಿನಂದಿಸುವುದಾಗಿದೆ."

ಆಗಿನ ಕಾಲದ ಭಗಿನಿ ಮಂಡಳದಲ್ಲಿದ್ದ ಜನರು ಎಂತಹವರು ಎಂಬ ಬಗ್ಗೆ ಉಮಾಬಾಯಿಯವರ ವಿವರಣೆ ನೋಡಿ.

"ಆಗಿನ ಕಾಲದ ಭಗಿನಿ ಸಮಾಜದಲ್ಲಿದ್ದವರಲ್ಲಿ ಕಲಿತವರು ಕಡಿಮೆ. ಅನೇಕರು ಅಡಿಗೆ ಮನೆಯ ಆಚೆಯ ಜಗತ್ತನ್ನರಿಯದವರು. ಇಲ್ಲಸಲ್ಲದ ಮಾನಾಪಮಾನ ಕಲ್ಪನೆಗಳು ಕೆಲವರಲ್ಲಿದ್ದವು. ಕಲಿತವರಲ್ಲೇ ಕೆಲವರಲ್ಲಿ ಮೇಲು–ಕೀಳೆಂಬ ಭಾವನೆ ಇತ್ತು. ಇಂತಹ ಸಂಕುಚಿತ ಬುದ್ಧಿಯ ಅನೇಕ ಬಗೆಯ ಭಗಿನಿಯರನ್ನು ಕೂಡಿಸಿ ಅವರಲ್ಲಿ ಸಾರ್ವಜನಿಕ ಕಾರ್ಯದ ಕುರಿತು ಆಸಕ್ತಿ ಹುಟ್ಟಿಸುವುದು ಬಹು ಕಷ್ಟದ ಕೆಲಸ" ಎನ್ನುತ್ತಾರೆ ಉಮಾಬಾಯಿ.

ಆದರೆ ಈಗಿನ ರಾಜಕಾರಣ, ಆಡಳಿತದ ಬಗೆಗೆ ಪ್ರಸ್ತಾವಿಸಿದಾಗ, ಲಂಚಗುಳಿತನ, ರಾಷ್ಟ್ರದ ಬಗ್ಗೆ ಪ್ರೀತಿ ಇಲ್ಲದ್ದು, ಆಡಳಿತದ ಬಗ್ಗೆ ನಿರ್ಲಕ್ಷ್ಯ, ಸ್ವಜನ ಪಕ್ಷಪಾತಗಳಿಂದ ಅವರು ನೊಂದಿರುವುದು ಗೊತ್ತಾಗುತ್ತದೆ. "ಬ್ರಿಟಿಷರ ಆಡಳಿತವಿದ್ದಾಗ ಪಾರತಂತ್ರ್ಯವೇನೋ ಇತ್ತು. ಆದರೆ ಪ್ರಾಮಾಣಿಕತೆಯಾದರೂ ಇತ್ತು. ಸ್ವಾತಂತ್ರ್ಯ ಸಿಕ್ಕಮೇಲೆ ಬಡವರ ಉದ್ಧಾರ ಆಗುತ್ತದೆ. ಒಳ್ಳೆಯ ದಿನಗಳು ಬರುತ್ತವೆ ಎಂದು ಕೊಂಡಿದ್ದು ಸುಳ್ಳಾಯಿತು" ಎಂದು ನೊಂದು ನುಡಿಯುತ್ತಾರೆ.

ಯಾರಾದರೂ ಉಮಾಬಾಯಿಯವರ ಗುಣಗಳನ್ನು ಕೊಂಡಾಡಿದಾಗ ತಮ್ಮ ಈ ಗುಣಗಳಿಗೆ ಮಾವನವರಾದ ಆನಂದರಾಯರ ಶಿಸ್ತು, ಕಾರ್ಯನಿಷ್ಠತೆ ಹಾಗೂ ಮಮತೆಗಳೇ ಕಾರಣವೆಂದು ಇಂದಿಗೂ ನಮ್ರವಾಗಿ ನೆನೆಯುತ್ತಾರೆ.

ಉಮಾಬಾಯಿಯವರ ರಾಷ್ಟ್ರಪ್ರೇಮ, ಕಾರ್ಯಕ್ಷಮತೆ, ಕರ್ತವ್ಯಬುದ್ಧಿ ಯುವ ಜನಾಂಗಕ್ಕೆ ಆದರ್ಶವಾಗಬೇಕು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

## ೧೯೪೨ ರ ಕ್ರಾಂತಿರಂಗದ ರಾಷ್ಟ್ರನಾಯಕಿ

# ಅರುಣಾ ಆಸಿಫ್ ಅಲಿ

ದೆಹಲಿಗೆ ಹೋದಾಗ ಶ್ರೀಮತಿ ಅರುಣಾರವರನ್ನು ಕಾಣದೆ ಬರುವುದು ಅವಿವೇಕ. ಕಂಡು ಮಾತಾಡಿದ ಮೇಲೆ ಅವರ ಅಸಾಧಾರಣ ವ್ಯಕ್ತಿತ್ವದ ಅರಿವಾಗಿ, ಈ ಅರಿವು ನಮ್ಮಲ್ಲೇ ಉಳಿದರೆ ಸಾಲದು, ಸರ್ವರಿಗೂ ತಿಳಿಸಬೇಕೆನ್ನುವ ಉತ್ಸಾಹ ಮೂಡಿ ಮುದುಡಿದ್ದ ಲೇಖನದ ಸ್ಫೂರ್ತಿಯುಂಟಾಗುತ್ತದೆ. ಅರುಣಾರವರನ್ನು ನೇರಾಗಿ ಕಂಡ ಅನಿರೀಕ್ಷಿತ ಅತ್ಯಾನಂದದ ಅನುಭವವಿದು,

ದೆಹಲಿ ಗೇಟಿನ ಪಶ್ಚಿಮಕ್ಕಿರುವ ಜನಭರಿತವಾದ, ವಿಶಾಲವಾದ ದರಿಯಾ ಗಂಜ್‌ನ ಒಂದು ರಸ್ತೆಗೆ ಆಸಿಫ್ ಅಲಿ ರಸ್ತೆ ಎಂದೇ ಹೆಸರು. ದೆಹಲಿಯಲ್ಲಿ ಯಾರನ್ನು ಕೇಳಿದರೂ ಈ ರಸ್ತೆಯ ಪರಿಚಯ ಸುಲಭವಾಗಿ ಸಿಕ್ಕುತ್ತದೆ. ಅಂತಹ ಜನಪ್ರಿಯ ರಸ್ತೆಯಲ್ಲಿ ವ್ಯಾಪಾರ ವ್ಯವಹಾರ ಜನಜಂಗುಳಿಯ ಓಡಾಟದ ಮಧ್ಯದಲ್ಲೇ ಅರುಣಾ ರವರ ವಾಸದ ಮನೆ.

ಅರುಣಾರವರ ಪತಿ ಆಸಿಫ್ ಅಲಿಯವರು ದೆಹಲಿಯ ಮುನಿಸಿಪಲ್ ಕಮಿಟಿಯ ಸದಸ್ಯರಾಗಿದ್ದ ಸಮಯದಲ್ಲಿ ದರಿಯಾಗಂಜ್‌ನ ಭಾಗವನ್ನು ಒಡೆದು ದೊಡ್ಡ ರಸ್ತೆ ನಿರ್ಮಾಣ ಮಾಡುವ ಯೋಜನೆಯನ್ನು ಸರ್ಕಾರ ಹಾಕಿಕೊಂಡಾಗ, ಆಸಿಫ್ ಅಲಿಯವರು ಬಹಳ ನೊಂದುಕೊಂಡು, 'ನಮ್ಮ ದೇಶದ ಚರಿತ್ರೆಯ ಚೂರನ್ನೇ ಕತ್ತರಿಸಿ ಹಾಕಿದಂತಾಗುತ್ತದೆ' ಎಂದು ವಾದಿಸಿ ಸತ್ಯಾಗ್ರಹ ಹೂಡಿ ದರಿಯಾಗಂಜನ್ನು ರಕ್ಷಿಸಿದರಂತೆ. ಅವರ ಈ ಸೇವೆಯ ಸ್ಮರಣೆಗಾಗಿ ಅಲ್ಲಿಯ ರಸ್ತೆಗೆ ಅವರ ಹೆಸರನ್ನೇ ಇಡಲಾಗಿದೆ. ಅರುಣಾರವರಿಗೆ ಈ ರಸ್ತೆಯಲ್ಲಿರುವ ಒಂದು ಗೃಹದಲ್ಲಿ ವಾಸ ಮಾಡುವುದು ಹಿತವೆನ್ನಿಸಿದೆ. ಆದರೆ ಅರುಣಾರವರು ಮನೆಯಲ್ಲಿರುವುದೇ ಅಪರೂಪ. ಅವರ ಕಾರ್ಯಾಲಯವಿರುವ ಲಿಂಕ್‌ಹೌಸ್‌ನಲ್ಲೇ ಅವರೊಡನೆ ಭೇಟಿಗೆ ಅವಕಾಶ. ಬೆಳಿಗ್ಗೆ ಹತ್ತು ಘಂಟೆಗೆ ಮನೆ ಬಿಟ್ಟರೆ ರಾತ್ರಿ ಹತ್ತು ಘಂಟೆಗೇ ಪುನಃ ಅವರು ಮನೆಗೆ ಬರುವುದೆಂದು ತಿಳಿದ ನಂತರ, ಅರುಣಾರವರನ್ನು ಭೇಟಿಯಾಗುವ ವೇಳೆಯನ್ನು ಗೊತ್ತುಮಾಡಿಕೊಳ್ಳಲು ಲಿಂಕ್‌ಹೌಸ್‌ಗೆ ಟೆಲಿಫೋನ್ ಮಾಡಿದಾಗ ಒಬ್ಬ ಯುವತಿಯ ಮಧುರ ಕಂಠದ ಮಾತು ಕೇಳಿಸಿತು. ದೂರವಾಣಿಯಲ್ಲಿ ಮಾತಾಡಿದವರ ವಾಣಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಸ್ಪಷ್ಟವಾಗಿತ್ತು. ಎಪ್ಪತ್ತೇಳು ವರ್ಷ ವಯಸ್ಸಿನ ಅರುಣಾರವರೇ ಮಾತಾಡುತ್ತಿರುವುದೆಂದು ತಿಳಿದು ಅಚ್ಚರಿಯಾಯಿತು. ಮಧ್ಯಾಹ್ನ ಮೂರು ಘಂಟೆಗೆ ಬರಬಹುದು. ನಾಲ್ಕು ಘಂಟೆಯ ನಂತರ ನನಗೆ ಕೆಲಸವಿದೆ ಎಂದರು. ಕಾಲವನ್ನು ಅಳೆದು ಮಾತಾಡುವ ಇಷ್ಟು ವಯಸ್ಸಾದ ವ್ಯಕ್ತಿಯೊಡನೆ ಮಾತಾಡುವ ಕುತೂಹಲ ಹೆಚ್ಚಿತು. ಅನೇಕ ಸಂಘ ಸಂಸ್ಥೆಗಳ ಸಮಾರಂಭಗಳಲ್ಲಿ ಭಾಗವಹಿಸುತ್ತಿರುವ ಇವರು ದೂರದರ್ಶನದಲ್ಲಿ ನಮಗೆ ಆಗಾಗ ಕಾಣಿಸಿಕೊಳ್ಳುತ್ತಿದ್ದರೂ ನೇರಾಗಿ ಕಾಣುವ ಆತುರವಾಯಿತು.

8260

ಲಿಂಕ್ ಹೌಸ್ ಎನ್ನುವುದು "ಲಿಂಕ್" ಪತ್ರಿಕೆ ಮುದ್ರಣವಾಗುವ ಕಾರ್ಯಾಲಯ, ಈ ಪತ್ರಿಕೆಗೂ ಮತ್ತು ಪೇಟ್ರಿಯಟ್ ಎಂಬ ದೆಹಲಿಯ ದೈನಂದಿನ ಪತ್ರಿಕೆಗೂ ಅರುಣಾರವರೇ ಛೇರ್‌ಮನ್. ಭಾರತೀಯ ಮಹಿಳಾ ಸಂಘಟನೆಯ ರಾಷ್ಟ್ರಮಟ್ಟದ ಸಂಸ್ಥೆಗೆ ಅಧ್ಯಕ್ಷರಾಗಿಯೂ ಕೆಲಸ ಮಾಡುತ್ತಿದ್ದಾರೆ.

ಅತಿ ವಿಶಾಲವಾದ, ಬಹಳ ಚುರುಕಾಗಿ ಅನೇಕ ಜನ ಕೆಲಸ ಮಾಡುವ ಪತ್ರಿಕೆಯ ಕಾರ್ಯಾಲಯವಾದ ಲಿಂಕ್ ಹೌಸ್‌ನಲ್ಲಿಯ ಒಂದು ಪ್ರಧಾನ ಕೊಠಡಿಯಲ್ಲಿ ಕಾರ್ಯಮಗ್ನರಾಗಿರುವ ಅರುಣಾರವರನ್ನು ಕಾಣಲು ಯಾರು ಬೇಕಾದರೂ ಸುಲಭವಾಗಿ ಒಳಗೆ ಹೋಗುವಂತಿಲ್ಲ. ಅವರ ಕೆಲಸಕ್ಕೆ ಅಡ್ಡಿಯಾಗಲು ಬಿಡುವುದಿಲ್ಲ. ಆದರೆ ವೇಳೆಯನ್ನು ಕೊಟ್ಟಾಗ ಮಾತಿಗೆ ಅರುಣಾ ತಪ್ಪುವವರಲ್ಲ. ಮೂರು ಘಂಟೆಗೆ ಸರಿಯಾಗಿ ಒಳಗೆ ಪ್ರವೇಶ ಸಿಕ್ಕಿತು. ಅರುಣಾರವರ ಕೆಲಸದ ಘನತೆಯನ್ನು ಅವರ ಕೊಠಡಿ ಸ್ಪಷ್ಟಪಡಿಸುತ್ತಿತ್ತು. ಹೋದ ಕೂಡಲೇ ಅವರ ಮುಗುಳ್ನಗೆ ಸ್ವಾಗತ ಬಯಸಿತು. ಅವರೊಡನೆ ಕುಳಿತಿದ್ದ ಪ್ರೊಫೆಸರ್‌ನ್ನು ಪರಿಚಯ ಮಾಡಿಕೊಟ್ಟು, 'ನಾನೂ ಮತ್ತು ಪ್ರೊಫೆಸರ್ ಒಂದು ಬರವಣಿಗೆಯ ಕೆಲಸದಲ್ಲಿ ತೊಡಗಿದ್ದೇವೆ'—ಎಂದರು ಅರುಣಾ.

ತೊಂದರೆಯಾಯಿತೇ ಎಂದಾಗ, "ನನಗೇನೂ ಇಲ್ಲ, ಪ್ರೊಫೆಸರನ್ನು ಕ್ಷಮೆ ಕೇಳಬೇಕು ಅಷ್ಟೆ" ಎಂದು ಹುಸಿನಗೆ ನಕ್ಕರು. ನಗುಮೊಗ ಮಾತ್ರವಲ್ಲ, ಆಹ್ಲಾದಕರ ಅಂತಃಕರಣವೂ ಅರುಣಾರವರಿಗಿದೆಯೆಂದು ಅರ್ಥವಾಯಿತು.

ಮಾತಿಗೆ ಮೊದಲು ಪ್ರಾರಂಭಿಸಿದವರು ಅರುಣಾರವರೇ.

"ನೀವು ದೆಹಲಿಗೆ ಬಂದ ಕಾರಣವೇನು ?" ಎಂದರು.

ನೀಪಾ ತರಬೇತಿಗಾಗಿ ಎಂದು ಹೇಳಿ ವಿವರಿಸಿದೆನು. NIEPA—National Integration Educational Planning and Administration. ಈ ತರಬೇತಿಯ ವಿಷಯ ಅವರಿಗೆ ಆಸಕ್ತಿ ಹುಟ್ಟಿಸಿತು.

"ಶಾಲಾ ಕಾಲೇಜುಗಳಲ್ಲಿ ನ್ಯಾಷನಲ್ ಇಂಟಿಗ್ರೇಷನ್ ಭಾವನೆಯನ್ನು ಹೇಗೆ ಕಲಿಸುತ್ತೀರಿ?" ಎಂದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



"ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ರಾಷ್ಟ್ರೈಕ್ಯತೆಯ ಕಾರ್ಯಕ್ರಮಗಳನ್ನು ಹಾಕಿಕೊಂಡು ಸಂಗೀತ, ಸಾಹಿತ್ಯ, ನೃತ್ಯ, ನಾಟಕಗಳ ಮೂಲಕ ವಿದ್ಯಾರ್ಥಿನಿಯರಿಂದಲೇ ಮಾಡಿಸುತ್ತೇವೆ" ಎಂದಾಗ ಅರುಣಾರವರ ಮುಖವರಳಿತು.

"ಭಾರತವನ್ನು ಬಿಟ್ಟು ಬೇರೆ ದೇಶಕ್ಕೆ ಹೋಗಿರುವಿರಾ?" ಎಂದರು.

"ಇಲ್ಲ" ಎಂಬ ನನ್ನ ಉತ್ತರಕ್ಕೆ ಅವರ ಉದ್ದೇಶಪೂರ್ವಕ ಪ್ರಶ್ನೆಯ ಅರ್ಥ ವಾದುದು ಅವರ ಉತ್ತರದಿಂದಲೇ. "ಪರದೇಶದವರು ಸೀರೆ ಉಟ್ಟ ಹೆಂಗಸನ್ನು ಕಂಡರೆ ಇಂದಿರಾಗಾಂಧಿ ಎಂದೇ ಗುರ್ತಿಸುವರು" ಎಂದರು.

ಭಾರತ ಎಂಬ ಪದ ಹೇಗೆ ಎಲ್ಲಾ ಭಾರತೀಯರಿಗೂ ಅನ್ವಯಿಸುತ್ತದೆಯೋ ಹಾಗೆ ಇಂದಿರಾಗಾಂಧಿ ಎಂದರೆ ಭಾರತದ ಹೆಣ್ಣು ಎಂದು ವಿವರಿಸಿದರು. ಭಾರತದ ಮಹಿಳೆಗೆ ಇಂದಿರಾಗಾಂಧಿಯು ಸಂಕೇತ ರಾಷ್ಟ್ರದ ಐಕ್ಯತೆಯನ್ನು ಸ್ಮರಿಸುತ್ತದೆ ಅಲ್ಲವೇ ಎಂದರು.

ಭಾರತೀಯರಲ್ಲಿ ಐಕ್ಯಮತ್ಯದ ಅಗತ್ಯ ಅರುಣಾರವರ ಮನಸ್ಸನ್ನು ಅತಿ ಆಳವಾಗಿ ನಾಟಿದೆ ಎನ್ನುವುದರಲ್ಲಿ ಸಂಶಯವಿಲ್ಲ. ಅವರೇ ಮುಂದುವರಿಸಿದರು—"ನಮ್ಮ ದೇಶವೆಂದರೆ ನನಗೆ ಬಹಳ ಹೆಮ್ಮೆ. ಭಾರತದಂತಹ ದೇಶ ಜಗತ್ತಿನಲ್ಲಿ ಮತ್ತೊಂದಿಲ್ಲ. ಭಾರತವನ್ನು ಯಾವುದರಲ್ಲೂ ಯಾರೂ ಮೀರಿಸಲಾರರು" ಎಂದು ಹೇಳುತ್ತಾ ಸ್ವಲ್ಪ ವ್ಯಾಕುಲಗೊಂಡು ಹೀಗೆಂದರು:

"ಈ ಭೂಮಿಯಲ್ಲಿ ಮಹಾತ್ಮರು ಹುಟ್ಟಿ ತ್ಯಾಗವನ್ನೂ, ಅಹಿಂಸೆಯನ್ನೂ, ಸೇವೆಯನ್ನೂ ಹೇಳಿಕೊಟ್ಟರು. ಈಗ ಇದೇ ಭೂಮಿಯಲ್ಲಿ ದುಷ್ಟರೂ, ಕೊಲೆ ಪಾತಕರೂ ಹೆಚ್ಚುತ್ತಿದ್ದಾರೆ. ಮನುಷ್ಯತ್ವ ಹೋಗಿ ರಾಕ್ಷಸೀ ಸ್ವಭಾವ ಬರುವಂತೆ ತರಬೇತಿ ಕೊಡುವಗಂತೆ. ಒಡವೆಗಾಗಿ ಮನೆಯೊಳಗೆ ನುಗ್ಗಿ ಹೆಣ್ಣೊಬ್ಬಳನ್ನು ಕೊಲೆ ಮಾಡಿದರೆಂದು ಕೇಳಿ ಮೈ ನಡುಗುತ್ತದೆ. ಬಂಗಾಳದಲ್ಲಿ ನಡೆಯುತ್ತಿರುವ ಅಕೃತ್ಯಗಳನ್ನು ಕೇಳಲಾರದೆ ಪ್ರಧಾನಿ ಶ್ರೀ ರಾಜೀವ್ ಗಾಂಧಿಯವರನ್ನು ಕಂಡು, 'ನನ್ನ ಸೇವೆಯ ಅವಶ್ಯಕತೆ ಅಲ್ಲಿದೆ. ಬಂಗಾಳ ನನ್ನ ಜನ್ಮಭೂಮಿ. ನನ್ನನ್ನು ಕಳುಹಿಸಿ ಕೊಡಿ' ಎಂದೆ. 'ನಾಲ್ಕು ದಿಕ್ಕಿಗೂ ನನ್ನಂತಹ ನಾಲ್ಕು ಜನರನ್ನು ನೇಮಿಸಿ' ಎಂದೆ. 'ನಿಮ್ಮ ಆರೋಗ್ಯದ ಕಡೆ ನನ್ನ ಗಮನವಿದೆ' ಎನ್ನುತ್ತಾರೆ. ಆದ್ದರಿಂದ ನಾನು ಹೇಳುವುದೇನೆಂದರೆ, ನಾವು ಹಿಂದೆ ದುಡಿದು ಕಟ್ಟಿಕೊಟ್ಟ ಮನೆಯನ್ನು ಇಂದಿನ ಪೀಳಿಗೆಯಾದ ನೀವು ಉಳಿಸಿಕೊಳ್ಳಬೇಕು".

ಅರುಣಾರವರ ಧ್ವನಿ ನಿರರ್ಗಳವಾಗಿ ಅನಾಯಾಸವಾಗಿ ಧಾರೆಯಾಗಿ ಹರಿದು ವಿವೇಕವಾಣಿಯಾಗಿ ನಮ್ಮಲ್ಲಿ ಪ್ರತಿಧ್ವನಿಗೈಯುತ್ತದೆ. ಮಾತಿನ ಮುತ್ತು ಹೊರ ಚೆಲ್ಲಿದರೆ ಎಲ್ಲಿ ಒಡೆದು ಹೋಗುತ್ತದೋ ಎಂಬ ಜಿಪುಣತನವಿಲ್ಲದೆ. ಧಾರಾಳವಾಗಿ ಮಾತಾಡುವ ವ್ಯಕ್ತಿ ಅರುಣಾ ಆಸಿಫ್ ಅಲಿ. ತಾವೆ ಪ್ರಶ್ನೆ ಹಾಕಿ ಬಹಳ ಜಾಣತನದಿಂದ ತಮ್ಮ ಜೀವನ ತತ್ವವನ್ನೂ, ಭಾರತೀಯರ ಕರ್ತವ್ಯವನ್ನೂ ಅರುಣಾ ಹೇಳಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಕೊಳ್ಳುತ್ತಾರೆ. ನನ್ನ ಕರ್ತವ್ಯ ಮುಗಿಯಿತೆಂದು ಅವರು ಸುಮ್ಮನೆ ಕುಳಿತುಕೊಳ್ಳು ವವರಲ್ಲ. ಅವರೊಂದಿಗೆ ಮಾತಾಡಿದವರಲ್ಲಿ ತಾನಾಗಿ ಸ್ಫೂರ್ತಿ ತುಂಬುವಂತೆ ಮಾಡು ತ್ತಾರೆ. ಮಾತಾಡಿ ಸುಮ್ಮನೆ ಹೋಗಲು ಬಿಡುವುದಿಲ್ಲ. ನಾವು ಅವರಲ್ಲಿ ಒಂದು ಪ್ರತಿಜ್ಞೆ ಮಾಡಬೇಕು. ಸಮಾಜಸೇವೆ ಮಾಡುವ ದೀಕ್ಷೆ ತೊಡಬೇಕು. ಆಗಲೇ ಅವರಿಗೆ ಸಮಾಧಾನ. ಹಳ್ಳಿಗಳ ಕಡೆ ನಿಮ್ಮ ಗಮನವಿರಲಿ ಎಂದು ಎಚ್ಚರಿಸುತ್ತಾರೆ. ರಾಷ್ಟ್ರೀಯ ಸೇವಾ ಯೋಜನೆಯ ಅಂಗವಾಗಿ ನನ್ನ ವಿದ್ಯಾರ್ಥಿನಿಯರು ಕನ್ನಲ್ಲಿ ಎಂಬ ಗ್ರಾಮಕ್ಕೆ ಹೋಗಿ, ಅಲ್ಲಿ ಅವರು ಸುಮಾರು ಹತ್ತು ದಿನಗಳಲ್ಲಿ ಕೈಗೊಂಡ ಸೇವಾ ವೃತ್ತಿಯ ವಿವರವನ್ನು ಕೇಳಿ ಬಹಳ ಆನಂದಪಟ್ಟರು. ನಮ್ಮ ಶಾಲೆಗೆ ಹತ್ತಿರದಲ್ಲೇ ಇರುವ ಅನಾಥ ಮತ್ತು ಬಡ ಹೆಣ್ಣು ಮಕ್ಕಳ ಸೇವಾ ಸದನಕ್ಕೆ ನನ್ನ ವಿದ್ಯಾರ್ಥಿನಿ ಯರೂ ಮತ್ತು ಉಪಾಧ್ಯಾಯಿನಿಯರೂ ಹೋಗಿ ಸೇವಾ ಕಾರ್ಯಗಳನ್ನು ಮಾಡು ತ್ತಿದ್ದಾರೆ ಎಂದಾಗ ಬಹಳ ಹರ್ಷಗೊಂಡರು. ಹೆಣ್ಣುಮಕ್ಕಳು ಹೆಚ್ಚು ಹೆಚ್ಚಾಗಿ ಸಮಾಜ ಸೇವೆಗಾಗಿ ಮುಂದೆ ಬರಬೇಕು ಎಂಬ ಅವರ ಇಚ್ಛೆಯನ್ನು ಹೇಳಿದರು.

'ಮತ್ತೇನಾದರೂ ನೀವು ನನ್ನನ್ನು ಕೇಳುವುದಿದೆಯೇ'—ಎಂದರು.

ಇಷ್ಟು ಹೊತ್ತೂ ಅವರ ಮಾತಿನಿಂದ ನನ್ನ ಮನಃಪಟಲದಲ್ಲಿ ಅವರ ಒಂದು ಚಿತ್ರಣ ರೂಪುಗೊಳ್ಳುತ್ತಿತ್ತು. ರಾಷ್ಟ್ರದ ಐಕ್ಯತೆ ಮತ್ತು ಸೇವೆಯೇ ಅವರ ಜೀವನದ ಜೀವಾಧಾರ, ಅವರ ಉಸಿರಿನ ಉಸಿರು. ಅವರ ನಾಡಿಯ ಮಿಡಿತವೆಂದು ಅರ್ಥ ಮಾಡಿಕೊಳ್ಳುತ್ತಾ, ಅರುಣಾ ಎಂಬ ಹೆಸರನ್ನಿಟ್ಟುಕೊಂಡ ಈ ಹಿಂದೂ ಹೆಣ್ಣು ಆಸಿಫ್ ಅಲಿ ಎಂಬ ಮುಸ್ಲಿಮರನ್ನು ಸೇರಿ ತೋರಿದ ಮಾದರಿ ಅವರ ನಡೆಯೂ ನುಡಿಯೂ ಒಂದೇ ಎಂಬುದನ್ನು ಸಾಧಿಸಿದೆ ಎನ್ನಿಸಿತು. ಆದರೂ ಈ ಸಂಬಂಧ ಹೇಗೆ ಬೆಳೆಯಿತೆಂದು ಕೇಳುವ ಧೈರ್ಯ ಅವರು ಕೊಟ್ಟ ಅವಕಾಶದಿಂದಾಗಿ.

"ಆಸಿಫ್ ಅಲಿಯವರನ್ನು ನೀವು ಸಂಧಿಸಿದುದು ಹೇಗೆ? ಅವರಿಂದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪ್ರಭಾವಿತರಾದಿರಾ?" ಎಂದೆ.

"ಓ! ವೈಯಕ್ತಿಕ ವಿಷಯಕ್ಕೇ ಗುರಿಯಿಟ್ಟಿದ್ದೀರಿ"–ಎಂದು ಮಂದಸ್ಮಿತರಾಗಿ ಮುಂದುವರಿಸಿದರು. "ನಾನು ಜನಿಸಿದುದು ಬಂಗಾಳದ ಬ್ರಾಹ್ಮಣ ಗಂಗೂಲಿ ವಂಶ ದಲ್ಲಿ. ನಮ್ಮ ತಂದೆಯವರ ಮನೆಯಲ್ಲಿ ಬ್ರಹ್ಮ ಸಮಾಜದ ಆದರ್ಶಗಳಿಂದ ಸ್ಫೂರ್ತಿ ಗೊಂಡುದರಿಂದ ಚಿಕ್ಕ ವಯಸ್ಸಿನಿಂದ ಜಾತಿಬೇಧ ಅರಿಯದೇ ಬೆಳೆದವಳು ನಾನು. ಆಸಿಫ್ ಅಲಿಯವರನ್ನು ಮದುವೆಯಾದ ವಿಷಯ ಈ ಪುಸ್ತಕದಲ್ಲಿದೆ" ಎಂದು ಹೇಳಿ ಸುಧೀರ್ ಪಂತ್ ಬರೆದ ''Asaf ali-Patriot and Humanist'' ಎಂಬ ಇಂಗ್ಲಿಷ್ ನಲ್ಲಿ ಬರೆದ ಪುಸ್ತಕ ಕೊಟ್ಟರು.

"ನೀವು ಚಿಕ್ಕ ವಯಸ್ಸಿನಿಂದ ಮುನ್ನುಗ್ಗುವ ಧಾರ್ಷ್ಟೀಕ ಸ್ವಭಾವದವರೆಂದು ಕೇಳಿದ್ದೇವೆ. ಈಗಲೂ ಇಷ್ಟು ಉತ್ಸಾಹವಿರುವ ನೀವು ನಿಮ್ಮ ಯೌವನದಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಅತ್ಯುಜ್ವಲ ಕ್ರಿಯಾತ್ಮಕ ವ್ಯಕ್ತಿಯಾಗಿದ್ದಿರಬಹುದು. ದೇಶಸೇವೆಯು ನಿಮ್ಮ ದಿನಗಳು ಪ್ರಾರಂಭವಾದುದು ಯಾವಾಗ?"-ಎಂಬುದಕ್ಕೆ ಅರುಣಾರ ವಿವರ.

"ವಿದ್ಯಾರ್ಥಿನಿಯಾಗಿದ್ದಾಗಲೇ ನನಗೆ ಬ್ರಿಟಿಷ್ ಪ್ರಭುತ್ವದ ಮೇಲೆ ಕೋಪಾವೇಶವಿತ್ತು. ನನ್ನ ಗೆಳತಿಯರನ್ನು ಸೇರಿಸಿಕೊಂಡು ಪುಂಡಾಟ ಮಾಡಿ ಬ್ರಿಟಿಷರನ್ನು ಹೆದರಿಸಿ ಓಡಿಸುವ ಯೋಜನೆಯನ್ನು ಹಾಕುತ್ತಿದ್ದೆ. ಹದಿನೆಂಟು ವರ್ಷವಾದಾಗ ವಿದ್ಯಾಭ್ಯಾಸವನ್ನು ಬಿಟ್ಟು ದೇಶಕ್ಕಾಗಿ ಕೆಲಸ ಮಾಡಲು ತೊಡಗಿದೆ. ನನ್ನ ಭಂಡತನ ಮತ್ತು ಧೈರ್ಯ ಬ್ರಿಟಿಷರ ಗಮನವನ್ನು ನನ್ನೆಡೆಗೆ ಸೆಳೆಯಿತು. ಇದರ ಪರಿಣಾಮ ನನ್ನ ಬಂಧನ. ಬಂದೀಖಾನೆಯ ವಾಸವನ್ನು ಮೂರು ನಾಲ್ಕುಸಲ ಅನುಭವಿಸಿದ್ದೇನೆ. ಒಂದು ಸಲವಂತೂ ಬ್ರಿಟಿಷರ ಕೈಗೆ ಸಿಕ್ಕದೆ ಛಲಮಾಡಿ, ನೆಲಮಾಳಿಗೆಯಲ್ಲೇ ಗುಪ್ತವಾಗಿ ವಾಸಿಸುತ್ತಾ ಬಿರುಸಾದ ಭೀಕರ ಕ್ರಾಂತಿಯನ್ನೆಬ್ಬಿಸಿ ಆಳರಸರಿಗೆ ಚುರುಕು ಮುಟ್ಟಿಸಿದ್ದೇನೆ. ಇದೇ ೧೯೪೨ರ ಕ್ರಾಂತಿಯ ನನ್ನ ಪವಾಡ. ಮಹಾತ್ಮಾಜಿಯವರು ನನ್ನ ಬಗ್ಗೆ ಚಿಂತಿಸಿ, ಕಠಿಣ ಶಿಕ್ಷೆಗೆ ಗುರಿಯಾಗಬಹುದೆಂದು ಹೆದರಿ, ನನ್ನನ್ನು ಶರಣಾಗೆಂದು ಹೇಳಿ ಕಳುಹಿಸಿದರು. ಮಹಾತ್ಮಾಜಿಯವರಿಗೆ ಸಮಾಧಾನ ಹೇಳಿ, ನನ್ನ ಹಠವನ್ನು ಮುಂದುವರಿಸಿ, ನಾನು ಕಣ್ಣುಮರೆಯಾಗಿರಬೇಕಾದ ಕಟ್ಟಳೆಯನ್ನು ಬ್ರಿಟಿಷರೇ ತೆಗೆದುಹಾಕುವಂತ ಮಾಡಿದ್ದೇನೆ. ಜೈಲುವಾಸಕ್ಕಿಂತ ನನ್ನ ಗೂಢವಾಸ ಜನಪ್ರಿಯವಾಗಿದೆ" ಎಂದು ಹೇಳಿ ಅರುಣಾ ನಗುತ್ತಾರೆ.

ಆ ನಗುವಿನ ಹಿಂದೆ ಅಡಗಿರುವ ಅವರ ಕಷ್ಟದ ಪರಂಪರೆಯು ಇನ್ನೂ ಅವರ ಮುಖದಲ್ಲಿ ಕಾಣುವುದಿಲ್ಲ. ಅದೆಂತಹ ಧೈರ್ಯ ಸಾಹಸದ ಕೆಚ್ಚೆದೆಯ ವೀರನಾಯಕಿ!

"ನಿಮ್ಮ ರಾಜ್ಯವಾದ ಕರ್ನಾಟಕ ಮತ್ತು ತಮಿಳುನಾಡಿನ ಪ್ರತಿ ಜಿಲ್ಲೆಯಲ್ಲೂ ಪ್ರವಾಸ ಮಾಡಿ ಜನರಲ್ಲಿ ದೇಶಸೇವೆಯ ಜಾಗೃತಿಯನ್ನುಂಟುಮಾಡಿದ್ದೇನೆ. ನಾವೆಲ್ಲಾ ಆಗ ಬಾವುಟ ಹಿಡಿದು ಮೆರವಣಿಗೆ ಹೊರಡುವ ಸಾಮಾನ್ಯರ ಗುಂಪಾಗಿದ್ದೆವು. ರಾಷ್ಟ್ರದ ಮುಖ್ಯ ನಾಯಕರಾಗುತ್ತೇವೆಂಬ ಭಾವನೆಯೂ ನಮ್ಮಲ್ಲಿರಲಿಲ್ಲ" ಎನ್ನುತ್ತಾರೆ. ೧೯೪೨ರ ಕ್ರಾಂತಿಯಲ್ಲಿ ಅರುಣಾ ವ್ಯವಹರಿಸುತ್ತಿದ್ದ ಕೇಂದ್ರ ದೆಹಲಿಯಾಗಿದ್ದರೂ ದಕ್ಷಿಣ ಭಾರತವನ್ನೂ ತಲುಪಿ ತಮ್ಮ ಮುಖಂಡತ್ವದ ಪ್ರಭಾವವನ್ನು ಬೀರಿದ್ದಾರೆ.

ನಿಮ್ಮ ದೇಶಸೇವಾ ಚಟುವಟಿಕೆಯಲ್ಲಿ ಗಾಂಧೀಜಿಯವರ ಪ್ರಭಾವವೇನು ? ಎನ್ನುವುದಕ್ಕೆ ಉತ್ತರ ಒಂದೇ ಪದ–"ಅತ್ಯದ್ಭುತ" ಎಂದು ಹೇಳಿ ಅನಂತರ ವಿವರಣೆ ಕೊಟ್ಟರು—"ನಾವೆಲ್ಲಾ ಬರೀ ಒಣಗಿದ ಹುಲ್ಲುಕಡ್ಡಿಗಳ ಹಾಗೆ, ಆ ಹುಲ್ಲುಕಡ್ಡಿಗೆ ಜೀವ, ಶಕ್ತಿ, ಚೈತನ್ಯ ತುಂಬಿಸಿದವರು ಗಾಂಧೀಜಿಯವರೇ. ನಾನು ಮೊದಮೊದಲು ಉಗ್ರಗಾಮಿಯೇ ಆಗಿದ್ದೆ. ಬ್ರಿಟಿಷರೊಡನೆ ಯುದ್ಧ ಮಾಡಲೂ ತಯಾರಾಗಿದ್ದೆ. ಆದರೆ ಗಾಂಧೀಜಿ ನನಗೆ ಅಹಿಂಸಾ ತತ್ವದ ಮಹಿಮೆಯನ್ನು ಬೋಧಿಸಿದರು. ಅವರ ಮಾರ್ಗದರ್ಶನ ಪ್ರಭಾವ ನನ್ನ ಮೇಲೆ ಆಶ್ಚರ್ಯಕರವಾದ ಪರಿಣಾಮವಾಯಿತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಗಾಂಧೀಜಿ ಮಾರ್ಗದರ್ಶಕರಾದರೆ, ಪಂಡಿತ ನೆಹರೂರವರ ವೈಯಕ್ತಿಕ ಪ್ರಭಾವ ನಮ್ಮಲ್ಲಿ ಇನ್ನೂ ಹೆಚ್ಚಿನ ಪ್ರಭಾವ ಬೀರಿದೆ.

ಅಂತರರಾಷ್ಟ್ರೀಯ ಭಾವನೆ ನಮ್ಮನ್ನು ಸೋಂಕುವಂತೆ ಮಾಡಿದವರು ನೆಹರೂರವರೇ. ಉತ್ಸಾಹ ತುಂಬಿದ ಯುವಕ ನೆಹರೂ ನಮ್ಮೆಲ್ಲರೊಂದಿಗೆ ಬಹಳ ಸರಳವಾಗಿ ಮಿಳಿತವಾಗುತ್ತಿದ್ದರು. ಶುಷ್ಕ ಮಾತುಗಳಿಂದ ಬೇಸರಗೊಳಿಸದೆ ಯುವಕ ಯುವತಿಯರನ್ನು ದೇಶಸೇವೆಯ ಕಡೆಗೆ ಅತಿ ಬೇಗ ಆಕರ್ಷಿಸಿ ನಿಯಮಿಸುತ್ತಿದ್ದರು. ನೆಹರೂ ಇದ್ದೆಡೆ ಖುಷಿಯಾದ ವಾತಾವರಣವಿರುತ್ತಿತ್ತು. ಅವರ ಮುಖಂಡತ್ವದಲ್ಲಿ ಕೆಲಸ ಮಾಡುವುದು ಅತಿಸುಲಭವೆನಿಸುತ್ತಿತ್ತು" ಎಂದು ನೆಹರೂರವರ ವ್ಯಕ್ತಿತ್ವವನ್ನು ಸ್ಮರಿಸುತ್ತಾರೆ ಅರುಣಾ.

"ಇಂದಿನ ಯುವಜನರಿಗೆ ನಿಮ್ಮ ಸಂದೇಶವೇನು?" ಇದಕ್ಕೆ ಅವರ ಜವಾಬು "ಮಹಾತ್ಮಾಗಾಂಧಿ ಮತ್ತು ನೆಹರೂರವರ ಬಗ್ಗೆ ಹೆಚ್ಚು ಹೆಚ್ಚಾಗಿ ಓದಿ ಅದೇ ನನ್ನ ಸಂದೇಶ. ಇಂದು ಜನರು ಜೀವನದ ಮೌಲ್ಯವನ್ನೇ ಮರೆತಿದ್ದಾರೆ. ಮಾಡುವ ಕೆಲಸವೆಲ್ಲಾ ಕೇವಲ ತೋರುವಿಕೆಯಾಗಿದೆ. ದೇವಾಲಯಕ್ಕೆ ಹೋಗುವುದರಲ್ಲೂ ತಮ್ಮ ಧ್ಯೇಯವನ್ನೇ ಮರೆತು ಯಾಂತ್ರಿಕವಾಗಿ ಹೋಗಿ ಬರುತ್ತಾರೆ. ನಾವು ಮಾಡುವ ಕೆಲಸದಲ್ಲಿ ಧ್ಯೇಯವಿರಬೇಕು, ಸಂಕಲ್ಪವಿರಬೇಕು" ಎಂದು ಒತ್ತಿ ಹೇಳುತ್ತಾರೆ.

ತೆಳುವಾದ ಶರೀರವಿರುವ ಅರುಣಾ ಎಷ್ಟು ಬೇಕಾದರೂ ಮಾತಾಡಬಲ್ಲರು. ಎಷ್ಟಾದರೂ ಬರೆಯಬಲ್ಲರು. ಮನೋ ಇಚ್ಛೆಯ ಅಗಾಧ ಕೆಲಸವನ್ನೂ ಮಾಡಬಲ್ಲರು. "ನನಗೆ ಓಡಾಡುವಷ್ಟು ಶಕ್ತಿ ಇದೆಯೋ ಎಂದು ಕೆಲವರಿಗೆ ಸಂಶಯ" ಎಂದು ಹೇಳುತ್ತಾ ತಾವೇ ಟೀಯನ್ನು ಬೆರಸಿಕೊಟ್ಟು, ಮುಸಿನಗೆಯಾಡಿ ಸಿಹಿ ಮಾತಾಡಿ ಕಳುಹಿಸಿಕೊಟ್ಟರು.

ಅಸಹಕಾರ ಚಳುವಳಿಯಿಂದ ಪ್ರಾರಂಭವಾಗಿ ಅರುಣಾರವರ ವ್ಯಕ್ತಿತ್ವ ಭಾರತೀಯ ರಾಜಕೀಯದಲ್ಲಿ ಶೋಭಿಸಿತು. ಭಾರತಾದ್ಯಂತ ಅಸಹಕಾರ ಚಳವಳಿಯನ್ನು ಬಿರುಸಾಗಿ ನಡೆಸಲು ಅರುಣಾ ಅನೇಕ ಸಭೆಗಳನ್ನು ಸೇರಿಸಿದರು. ಮೆರವಣಿಗೆಗಳನ್ನು ಹೊರಡಿಸಿದರು. ದೆಹಲಿಯಲ್ಲಿ ಬಂಧಿತರಾದ ಅಸಂಖ್ಯಾತ ರಾಜಕೀಯ ಖೈದಿಗಳ ವಿಮೋಚನೆಗಾಗಿ ಉಪವಾಸ ಸತ್ಯಾಗ್ರಹ ಕೈಗೊಂಡರು.

ಬ್ರಿಟಿಷ್ ಸರ್ಕಾರ ಇವರನ್ನು ಜನರ ಸಂಪರ್ಕದಿಂದ ಪ್ರತ್ಯೇಕಿಸಿ ಅಂಬಾಲಾದ ಜೈಲಿನಲ್ಲಿಟ್ಟು ಏಕಾಂತವಾಸವನ್ನು ವಿಧಿಸಿತು. ಹಿನ್ನೆಲೆಯಲ್ಲೇ ಇದ್ದು ಕ್ರಾಂತಿಯೆಬ್ಬಿಸಿದಾಗ, ಅರುಣಾರವರನ್ನು ಹಿಡಿದುಕೊಡುವವರಿಗೆ ೫೦೦೦ ರೂ. ಬಹುಮಾನವೆಂದು ಬ್ರಿಟಿಷ್ ಸರ್ಕಾರ ಪ್ರಕಟಿಸಿತ್ತು. ಸರಿಯಾದ ನಾಯಕರಿಲ್ಲದೆ ಕಂಗಾಲಾದಾಗ ಈ ಪ್ರಚಂಡ ನಾಯಕಿ ಭಾರತೀಯ ಕ್ರಾಂತಿ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ಕೊಟ್ಟು ಅಧ್ಯಕ್ಷತೆ ವಹಿಸುತ್ತಿದ್ದರು. ಬೊಂಬಾಯಿಯ ಮೈದಾನದಲ್ಲಿ ನಡೆದ ಧ್ವಜಾರೋಹಣ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಸಮಾರಂಭವನ್ನು ಯಶಸ್ವಿಯಾಗುವಂತೆ ನಡೆಸಿಕೊಟ್ಟು ಭಾರತೀಯರನ್ನು ಪ್ರಚೋದಿಸುವ ಸ್ಫೂರ್ತಿದಾಯಕ ಭಾಷಣ ಮಾಡಿದರು. ಪೋಲೀಸರು ಸಭೆಯನ್ನು ಚದುರಿಸಲು ಪ್ರಯತ್ನಿಸುತ್ತಿದ್ದಾಗಲೂ ಧೈರ್ಯಗೆಡದೆ ಜನರಲ್ಲಿ ಉತ್ಸಾಹ ತುಂಬಿದರು. ಅರುಣಾರವರ ಮತ್ತೊಂದು ಸಾಧನೆ 'ಇನ್‌ಕ್ವಿಲಾಬ್' ಎಂಬ ಪ್ರಸಿದ್ಧ ಮಾಸ ಪತ್ರಿಕೆಯನ್ನು ಹೊರಡಿಸಿದುದು.

ಈ ವೀರ ಮಹಿಳೆಯ ಸಾಧನೆಯನ್ನು ಪ್ರಶಂಸಿಸಿ "೧೯೪೨ರ ಕ್ರಾಂತಿಯ ನಾಯಕಿ" ಬಿರುದು ಕೊಟ್ಟು ಅವರನ್ನು ಅಭಿನಂದಿಸಿರುವುದು ಸಹಜ.

ಅರುಣಾರವರ ಬಗ್ಗೆ ಮಹಾತ್ಮಾಜಿ ಹೀಗೆ ಹೇಳಿದ್ದಾರೆ. "ಮದ್ದು ಗುಂಡು ತಯಾರಿಸಿ ಕ್ರಾಂತಿ ಎಬ್ಬಿಸುವ ಬದಲು, ಹಿಂದೂ ಮುಸ್ಲಿಮರಲ್ಲಿ ಒಗ್ಗಟ್ಟು ತರಲು ಅರುಣಾ ಅರ್ಹರಾಗಿದ್ದಾರೆ".

ಆಸಿಫ್ ಅಲಿಯವರು ಅರುಣಾರವರನ್ನು ಮೊದಲು ಕಂಡು ಬೆರಗಾದುದು ಪ್ಯಾರೆಲಾಲ್ ಬ್ಯಾನರ್ಜಿಯವರ ಮನೆಯಲ್ಲಿ. ಆಸಿಫ್ ಅಲಿಯವರು ಒಂದು ಸಲ ಪ್ಯಾರೆಲಾಲ್‌ರವರ ಮನೆಯಲ್ಲಿ ಇಳಿದುಕೊಂಡಿದ್ದಾಗ, ಅವರ ಸೊಸೆಯ ತಂಗಿಯಾದ ಅರುಣಾ ತನ್ನ ಸೌಂದರ್ಯದಿಂದ, ಚುರುಕುತನದಿಂದ, ರಾಷ್ಟ್ರಭಕ್ತಿಯಿಂದ ಆಸಿಫ್ ಅಲಿಯವರನ್ನು ಆಕರ್ಷಿಸಿದ್ದರು. ಪ್ರತಿಯಾಗಿ ಸುಸಂಸ್ಕೃತ ನಡೆ, ನುಡಿ, ಗಾಂಭೀರ್ಯ ಸುಜ್ಞಾನ, ಘನತೆಯ ಆಸಿಫ್ ಅಲಿಯ ವ್ಯಕ್ತಿತ್ವ ಅರುಣಾರನ್ನು ಆಕರ್ಷಿಸಿತು.

ದೆಹಲಿಯ ಕಾಂಗ್ರೆಸ್ ಅನುಯಾಯಿಗಳಲ್ಲಿ ಆಸಿಫ್ ಅಲಿ ಪ್ರಮುಖ ವ್ಯವಸ್ಥಾಪಕರೆಂದೂ, ಬ್ರಿಟಿಷ್ ಸರ್ಕಾರಕ್ಕೆ ತೊಂದರೆ ಕೊಡುವಂತಹ ಕ್ರಾಂತಿ ಕಾರ್ಯಗಳಲ್ಲಿ ಅತಿ ನಿಪುಣರೆಂದೂ ಬ್ರಿಟಿಷರ ಗಮನಕ್ಕೆ ಬಂದ ವ್ಯಕ್ತಿ. ನಮ್ಮ ದೇಶದಲ್ಲಿ ನಮಗೇ ಸ್ವತಂತ್ರವಿಲ್ಲದ ಸ್ಥಿತಿಯನ್ನು ಸಹಿಸಲಾರೆವು—ಎಂದು ವಾದಿಸಿ, ಸ್ವಯಂ ಸೇವಕರ ಬೃಹತ್ ಸಂಸ್ಥೆಯನ್ನು ನಿರ್ಮಿಸಿ, ಪ್ರತಿಯೊಬ್ಬರೂ ಪ್ರತಿಜ್ಞೆ ತೆಗೆದುಕೊಳ್ಳುವಂತೆ ಮೋಡಿ ಮಾಡಿ ಜನರನ್ನು ತನ್ನೆಡೆಗೆ ಸೆಳೆದ ಚಾಣಾಕ್ಷ ನಾಯಕ ಆಸಿಫ್ ಅಲಿ.

ಇಂತಹ ಅಪೂರ್ವ ವ್ಯಕ್ತಿಗೆ ಮಾರುಹೋಗಿ ಅರುಣಾ, ಆಸಿಫ್‌ರವರ ಜೀವನ ಸಂಗಾತಿಯಾದರು.

ಇವರಿಬ್ಬರ ಮದುವೆ ಪ್ರೇಮಾಂಕುರದ ಕುರುಹಲ್ಲ. ದೇಶಸೇವೆಗೆ ಕರೆಕೊಟ್ಟ ಆಸಿಫ್ ಅಲಿಯವರನ್ನು ಅರುಣಾ ಗೌರವಿಸತೊಡಗಿದರು. ಇಬ್ಬರ ಜೀವನದ ಗುರಿಯೂ ಒಂದೇ ಆಗಿತ್ತು. ಒಬ್ಬರನ್ನೊಬ್ಬರು ಚೆನ್ನಾಗಿ ಅರಿತುಕೊಂಡ ನಂತರವೇ ವಿವಾಹ ನಡೆದುದು ಆಸಿಫ್‌ರವರ ಜೀವನ ಅರುಣಾರವರೊಂದಿಗೆ ಬಹಳ ಸಮಂಜಸವಾಗಿ ಹೊಂದಿಕೊಂಡು ಬೆಸೆಯಿತು. ಈ ಬೆಸುಗೆ ದೇಶಸೇವೆಯಲ್ಲಿ ಕೊನೆತನಕ ಇವರಿಬ್ಬರಿಗೂ ಸ್ಫೂರ್ತಿದಾಯಕವಾಗಿತ್ತು. ಅರುಣಾರವರನ್ನು ಜೈಲಿಗೆ ಹಾಕಿದಾಗ, ಅರುಣಾ ಗುಪ್ತಗಾಮಿಯಾಗಿ ಸಂಚರಿಸಿದಾಗ ಆಸಿಫ್‌ರವರ ಹೃದಯ ಅರುಣಾಗಾಗಿ ಮರುಗಿ ಕರಗುತ್ತಿತ್ತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಆಸಿಫ್ ಅಲಿಯವರು ೧೯೪೮ರಲ್ಲಿ ಒರಿಸ್ಸಾ ಸಂಸ್ಥಾನದ ಗವರ್ನರ್ ಆದಮೇಲೆ ಅರುಣಾಗೆ ಜವಾಬ್ದಾರಿ ಕಾರ್ಯಗಳ ಹೊಣೆ ಹೆಚ್ಚಾಯಿತು. ೧೯೫೨ರಲ್ಲಿ ಆಸಿಫ್ ಅಲಿ ಸ್ವಿಟ್ಸರ್ಲೆಂಡಿನ ರಾಯಭಾರಿಯಾಗಿ ನೇಮಕವಾದರು. ಅಲ್ಲಿಂದ ಅರುಣಾಗೆ ಪತ್ರಬರೆದು, "ನನ್ನ ದೇಶಕ್ಕೆ ಆದಷ್ಟು ಬೇಗ ಬಂದು ಸೇರಬೇಕೆಂದು ಆಸೆ. ರಾಜಕೀಯ ಕಾರ್ಯಭಾರ ಬೇಡವೆನ್ನಿಸಿದೆ. ಒಂಟಿ ಜೀವನ ಬಂದೀಖಾನೆಯ ಜೀವನಕ್ಕಿಂತ ಕಷ್ಟವಾಗಿ ತೋರುತ್ತಿದೆ. ಜಾಮಿಯಾ ನಗರದ ಬಳಿ ಒಂದು ಗುಡಿಸಲನ್ನು ಕಟ್ಟಿಕೊಂಡು ನಿನ್ನೊಡನೆ ಇದ್ದು ಸರಳ ಜೀವನ ನಡೆಸಬೇಕೆನ್ನಿಸಿದೆ. ಸಾಹಿತ್ಯಾಭಿರುಚಿ ಇರುವ ನನಗೆ ಬರವಣಿಗೆಯಲ್ಲಿ ತೊಡಗಬೇಕೆನ್ನಿಸಿದೆ" ಎಂದು ತಿಳಿಸಿದರು.

ಆಸಿಫ್ ಅಲಿಯವರ ಈ ಇಚ್ಛೆ ಪೂರೈಸಲಿಲ್ಲ. ಸ್ವಿಟ್ಸರ್ಲೆಂಡಿನಲ್ಲಿರುವಾಗಲೇ ಹೃದಯಾಘಾತದಿಂದ ೧೯೫೩ರಲ್ಲಿ ಆಸಿಫ್‌ರವರು ಇಹಲೋಕವನ್ನು ತ್ಯಜಿಸಿದರು.

ಸಂತಾನವಿಲ್ಲದ ಅರುಣಾ ತನಗಾಗಿ ಸಂಸಾರವಿಲ್ಲವೆಂದು ಕೊರಗುವುದಿಲ್ಲ.

ಭಾರತ ದೇಶವೇ ನನ್ನ ಸಂಸಾರವೆಂದು ಹೆಮ್ಮೆಯಿಂದ, ಹರ್ಷದಿಂದ ಅರುಣಾ ಹೇಳಿಕೊಳ್ಳುವರು.

ಅರುಣಾರವರ ದೇಶ ಸೇವಾರಂಗ ಬಹು ವ್ಯಾಪಿತವಾದುದು. ೧೯೪೭–೪೮ರಲ್ಲಿ ದೆಹಲಿ ಪ್ರದೇಶದ ಕಾಂಗ್ರೆಸ್ ಸಂಸ್ಥೆಗೆ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟು ಕಾಂಗ್ರೆಸ್ ವತಿಯಿಂದ ರೂಪುಗೊಂಡ ಕಾರ್ಯಕ್ರಮಗಳ ಮುಖಂಡತ್ವ ವಹಿಸಿದರು. ೧೯೪೮ರಲ್ಲಿ ಡಾ॥ ರಾಧಾಕೃಷ್ಣನ್‌ರವರ ನಾಯಕತ್ವದಲ್ಲಿ ಹೊರಟ ತಜ್ಞರ ಸಮಿತಿಯ ಸದಸ್ಯರಾಗಿ ಹೋಗಿ ಮೆಕ್ಸಿಕೋದಲ್ಲಿ ನಡೆದ ಯುನೆಸ್ಕೊ ಅಧಿವೇಶನದಲ್ಲಿ ಭಾಗವಹಿಸಿದರು. ೧೯೫೦ರಲ್ಲಿ ಸಮಾಜವಾದಿ ಸಂಘವನ್ನು ಸ್ಥಾಪಿಸಿ, ಸಾಮಾನ್ಯ ನೌಕರರ ಪ್ರಗತಿಗಾಗಿ ಶ್ರಮಿಸಿದರು. ೧೯೫೮ರಲ್ಲಿ ದೆಹಲಿಯ ಪ್ರಪ್ರಥಮ ಮೇಯರ್ ಆಗಿ ಆಯ್ಕೆಯಾದರು. ಭಾರತ–ರಷ್ಯಾಗಳ ಸಂಯುಕ್ತ ಸಾಂಸ್ಕೃತಿಕ ಸಂಘದ ಪ್ರಧಾನ ಸದಸ್ಯರಾಗಿ ಕಾರ್ಯ ನಿರ್ವಹಿಸಿದರು. ಆಫ್ರಿಕಾ-ಏಷ್ಯಾಗಳ ನಡುವೆ ಬೆಳೆದ ಒಕ್ಕೂಟ ಸಮಾವೇಶಗಳಲ್ಲಿ ಉತ್ತಮ ಅಧಿಕಾರಿಯಾಗಿ ಕೆಲಸ ಮಾಡಿದರು. ಅಖಿಲ ಭಾರತ ಶಾಂತಿ ನಿಮಿತ್ತ ಸಂಸ್ಥೆಯ ಮುಖ್ಯಾಧಿಕಾರಿಯಾಗಿ ಶಾಂತಿ ಸೌಹಾರ್ದತೆಯ ವಾತಾವರಣ ಕಲ್ಪಿಸಲು ದುಡಿದರು. ಅನೇಕಬಾರಿ ರಷ್ಯಾದಲ್ಲಿ ಪ್ರವಾಸ ಮಾಡಿ ಶಾಂತಿ ಸಂದೇಶದ ನಾಯಕಿಯೆನಿಸಿ "ಲೆನಿನ್ ಶಾಂತಿ ಬಹುಮಾನ" ವಿಜೇತೆಯಾದರು. ಈಗ "ಲಿಂಕ್" ಮತ್ತು "ಪೇಟ್ರಿಯಟ್" ಪತ್ರಿಕೆಗಳೆರಡರ ಪ್ರಕಟಣೆಯ ಜವಾಬ್ದಾರಿಯನ್ನೂ ಎರಡೂ ಕಂಪೆನಿಗಳ ವ್ಯವಹಾರದೊಂದಿಗೆ ವಹಿಸಿಕೊಂಡಿದ್ದಾರೆ. ಮಹಿಳಾ ಸಂಘಟನೆಯ ಸಂಸ್ಥೆಗೆ ಅಧ್ಯಕ್ಷರಾಗಿದ್ದಾರೆ. ದೇಹಕ್ಕೂ ಬುದ್ಧಿಗೂ ವಿರಾಮವಿಲ್ಲದ ದುಡಿಮೆ ಅರುಣಾರವರದು. ೧೯೦೯ರಲ್ಲಿ ಜನಿಸಿದ ಅರುಣಾ ತರುಣಿಯಂತೆ ಈಗಲೂ ಉತ್ಸಾಹ ಭರಿತರಾಗಿ ಸೇವಾನಿರತರಾಗಿದ್ದಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

## ಮಹಿಳಾ ಆಂದೋಲನಾ ಧುರೀಣೆ

# ಕಮಲಾದೇವಿ ಚಟ್ಟೋಪಾಧ್ಯಾಯ

ಕಮಲಾದೇವಿ, ಜೀವನ ಮತ್ತು ದೇಶದ ಸ್ವಾತಂತ್ರ್ಯ ಹೋರಾಟ ಇವೆರಡೂ ಹಾಸುಹೊಕ್ಕಾಗಿ ಒಂದಕ್ಕೊಂದು ಹೊಸೆದುಕೊಂಡಿದೆಯೋನೋ ಎನ್ನುವಷ್ಟು ದೇಶಕ್ಕಾಗಿ ಜೀವನವನ್ನು ಮೀಸಲಾಗಿಟ್ಟ ವ್ಯಕ್ತಿ. ಆದ ಕಾರಣ ಅವರನ್ನು ಕುರಿತು ಬರೆಯುವ ಕುತೂಹಲ, ಆದಮ್ಯ ಆಕಾಂಕ್ಷೆಗೆ ಶ್ರಮ ನೀಡಬಾರದು ಎನ್ನುವಂತೆ ಅವರೇ ಬೆಂಗಳೂರಿಗೆ ಆಗಮಿಸಿರುವುದು ನನ್ನ ಅದೃಷ್ಟ. ಸ್ವಾತಂತ್ರ್ಯ ದಿನಾಚರಣೆಯಂದೇ ಅವರನ್ನು ಭೇಟಿಯಾಗಿದ್ದು ನನ್ನ ಜೀವನದ ಮರೆಯಲಾಗದ ಒಂದು ಅನನ್ಯ ಸಂದರ್ಭ.

ಯಾವುದೋ ಬರವಣಿಗೆಯಲ್ಲಿ ಮಗ್ನರಾಗಿದ್ದ ಶ್ರೀಮತಿ ಕಮಲಾದೇವಿಯವರು ನನ್ನನ್ನು ಕಂಡೊಡನೆ, ಪೆನ್ನು ಕೆಳಗಿಟ್ಟು, ಕನ್ನಡಕ ತೆಗೆದು, ತಮ್ಮ ಪಕ್ಕದಲ್ಲಿದ್ದ ಆಸನ ತೋರಿಸಿ ಕುಳಿತುಕೊಳ್ಳಲು ಹೇಳಿದರು. ಧ್ವನಿ ಬಹಳ ಕುಗ್ಗಿದಂತಿತ್ತು. ಆದರೆ ಕಣ್ಣಿನ ಕಾಂತಿಯಾಗಲೀ, ಮೈಯ ಹೊಂಬಣ್ಣವಾಗಲೀ ಕಂದಿಲ್ಲ,

ದೂರವಾಣಿಯಲ್ಲಿ ಅವರೊಡನೆ ಮಾತಾಡಿ, ಅವರನ್ನು ಸಂದರ್ಶಿಸಲು ಒಪ್ಪಿಗೆ ತೆಗೆದುಕೊಂಡ ಮೇಲೆ ಎರಡು ಸಲ ಹೋದಾಗಲೂ, ಸಮಾರಂಭಗಳ ಗೌರವ ಆಹ್ವಾನದಿಂದ ಹೋಗಿದ್ದ ಕಾರಣ ಅವರನ್ನು ಮನೆಯಲ್ಲಿ ಕಾಣಲಾಗಲಿಲ್ಲ.

"ಈವತ್ತು ನಿಮ್ಮನ್ನು ನೋಡಲು ಅವಕಾಶವಾಗಿದ್ದು ನನಗೆ ಬಹಳ ಆನಂದ ವಾಗುತ್ತಿದೆ" ಎಂದಾಗ,

"ನಾನೆಲ್ಲಿ ಹೋಗುತ್ತೇನೆ ? ಮೈ ಸ್ವಾಸ್ಥ್ಯವಿಲ್ಲದೆ ಮನೆಯಲ್ಲೇ ಕುಳಿತು ಎರಡು ತಿಂಗಳು ಕಳೆದೆ, ಆಗಾಗ್ಗೆ ಜ್ವರ ಬರುತ್ತಿರುತ್ತದೆ" ಎನ್ನುತ್ತಾರೆ.

ಅವರ ಈ ಮಾತಿನಲ್ಲಿ ಅವರ ಚುರುಕು ಸ್ವಭಾವವನ್ನೂ, ಶರೀರ ದುರ್ಬಲತೆಯಿಂದ ಕಳವಳಗೊಂಡ ಮನದ ಆವೇಗವನ್ನೂ, ಈ ಜೀವನದ ಸಂಧ್ಯೆಯಲ್ಲೂ ಒಂದು ಗಳಿಗೆಯೂ ಸುಮ್ಮನೆ ಕುಳಿತಿರದೆ ಜನಸೇವೆ ಮಾಡುತ್ತಾ ದುಡಿಯುವ ಅವರ ಪ್ರಕೃತಿಯನ್ನೂ ತಿಳಿಯಬಹುದು.

ಕಮಲಾದೇವಿ ಚಟ್ಟೋಪಾಧ್ಯಾಯವರಿಗೆ ಈಗ ಎಂಭತ್ತಮೂರು ವಯಸ್ಸು. ಹೆಚ್ಚು ಓಡಾಟವಾಗಲೀ, ಮಾತಾಡುವುದಾಗಲೀ ಅವರಿಗೆ ಆಯಾಸವಾಗುವುದೆಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಡಾಕ್ಟರಿಂದ ಸಲಹೆ. ನನ್ನ ಉದ್ದುದ್ದ ಮಾತುಗಳಿಗೆ ಅವರಿಂದ ಬಂದ ಮುತ್ತಿನಂತಹ ಒಂದೊಂದೇ ನುಡಿ ಅವರ ವ್ಯಕ್ತಿತ್ವದ ಪರಿಪೂರ್ಣ ಪರಿಚಯ ನೀಡಿತು.

ಕಮಲಾದೇವಿಯವರಿಗೆ ದೇಶದ ಸ್ವಾತಂತ್ರ್ಯ ಹೋರಾಟದ ಸಲುವಾಗಿ ತಾವು ಸೃಷ್ಟಿಸಿದ್ದ ಸೇವಾದಳವೆಂದರೆ ಬಹಳ ಅಭಿಮಾನ, ರಾಷ್ಟ್ರಮಟ್ಟದಲ್ಲಿ ನಾನಾ ಕಡೆಗಳಿಂದ, ನಾನಾ ಜಾತಿ ವರ್ಗಗಳಿಂದ ಬಂದ ಸಾವಿರಾರು ಸ್ತ್ರೀಯರನ್ನು ತಮ್ಮ ಸೋದರಿಯರಂತೆ ಕಂಡು, ತಮ್ಮ ಘನ ವ್ಯಕ್ತಿತ್ವದಿಂದ, ಅಸಾಧಾರಣ ಮುಖಂಡತ್ವದಿಂದ ದೇಶದ ಸ್ವಾತಂತ್ರ್ಯಕ್ಕಾಗಿ, ಸಮಾಜ ಕಲ್ಯಾಣಕ್ಕಾಗಿ ತರಬೇತಿ ನೀಡಿ ಒಬ್ಬೊಬ್ಬರನ್ನೂ ಸಮರ್ಥ ಸೇವಿಕೆಯರನ್ನಾಗಿ ಮಾಡಿದರು. ಅವರ ಈ ಸಾಧನೆ ಮಹಿಳೆಯರ ವ್ಯಕ್ತಿತ್ವಕ್ಕೆ ಹೆಗ್ಗಳಿಕೆ ತಂದ ಅಪೂರ್ವ ಸಾಧನೆ.

"ಸುಮಾರು ಅರವತ್ತು ವರ್ಷಗಳ ಹಿಂದೆ ಸ್ತ್ರೀಯರು ಸೇವಾದಳಕ್ಕೆ ಸೇರಲು ಇಷ್ಟೊಂದು ಮಂದಿ ಬರುತ್ತಿದ್ದರೇ ?" ಎಂದ ನನ್ನ ಪ್ರಶ್ನೆಗೆ—

"ಅವರಲ್ಲಿ ನಿಜವಾಗಿ ಆಸಕ್ತಿ ಇತ್ತು. ಆಗ ಬಂದರು...ಈಗ ಹೊರಗೆ ಬರುತ್ತಾರೆ. ಆದರೆ ಕಾರ್ಯೋನ್ಮುಖರಾಗಿ ಹಿಂದಿನ ಹಾಗೆ ಸೇರುವುದಿಲ್ಲ" ಎನ್ನುತ್ತಾರೆ ಕಮಲಾದೇವಿಯವರು.

ಎಂತಹ ಅರ್ಥಗರ್ಭಿತ ಮಾತು ಎಂದುಕೊಂಡೆ

"ಉಪ್ಪಿನ ಸತ್ಯಾಗ್ರಹ ಸಮಯದಲ್ಲಿ ನೀವು ಮುಖ್ಯಪಾತ್ರ ವಹಿಸಿ, ಮಹಾತ್ಮಾಜಿಯವರನ್ನು ಕುರಿತು, ಹೆಂಗಸರೂ ಈ ಚಳವಳಿಯಲ್ಲಿ ಭಾಗವಹಿಸಲು ಅವಕಾಶ ಕೊಡಬೇಕೆಂದು ಒತ್ತಾಯಪಡಿಸದಿದ್ದರೆ ಬಹುಶಃ ಗಾಂಧೀಜಿ ಮತ್ತಾರ ಮಾತನ್ನೂ ಕೇಳುತ್ತಿರಲಿಲ್ಲ. ಆ ಪ್ರಚಂಡ ಕಾರ್ಯ ಸಾಧನೆಯಲ್ಲಿ ಹೆಂಗಸರ ಪಾತ್ರವಿರುತ್ತಿರಲಿಲ್ಲ. ಎನ್ನಿಸುತ್ತದೆ. ಅಲ್ಲವೇ ?" ಎಂದು ಕೇಳಿದರೆ—

"ನೀವು ಈಗ ಹೇಳುತ್ತಿರುವಾಗಲೇ ನನ್ನ ಪಾತ್ರ ಅಷ್ಟು ಮುಖ್ಯವಾಗಿತ್ತೆ ಎನ್ನಿಸುತ್ತದೆ...ನನಗೆ ತೋಚಿದ್ದನ್ನು ಗಾಂಧೀಜಿಯವರಿಗೇ ನೇರಾಗಿ ಹೇಳುವ ಅಭ್ಯಾಸ ನನ್ನದು. ಏಕೆಂದರೆ ...ಅವರು ಪ್ರತಿಯೊಂದನ್ನೂ ಆಳವಾಗಿ ಯೋಚಿಸಿಯೇ ಮನಸ್ಸಿಗೆ ತೆಗೆದುಕೊಳ್ಳುತ್ತಿದ್ದರು" ಎನ್ನುತ್ತಾರೆ.

ಗಾಂಧೀಜಿಯವರು ಮಹಿಳೆಯರಿಂದ ಅಪೇಕ್ಷಿಸುತ್ತಿದ್ದುದು–ವಿದೇಶೀ ವಸ್ತುಗಳ ಮೇಲೆ ಬಹಿಷ್ಕಾರ ಹಾಕುವುದು, ಸಾರಾಯಿ ಅಂಗಡಿಗಳ ಮುಂದೆಧರಣಿ ಸತ್ಯಾಗ್ರಹ ಮಾಡುವುದು, ಚರಕಾದಿಂದ ನೂಲು ತೆಗೆಯುವುದು, ಖಾದೀ ಬಟ್ಟೆಯನ್ನು ಜನಪ್ರಿಯ ಮಾಡುವುದು, ಅಸ್ಪೃಶ್ಯತಾ ನಿವಾರಣೆಗೆ ಸಹಕರಿಸುವುದು.

ಗಂಭೀರವಾದ, ಗುರುತರವಾದ ಸಮಸ್ಯೆಗಳಿಂದ ಮಹಿಳೆಯರನ್ನು ಬಾಪೂಜಿ ದೂರವಿಡುತ್ತಾರೋ ಎಂಬ ಶಂಕೆ ಕಮಲಾದೇವಿಯವರನ್ನು ಕಾಡುತ್ತಿತ್ತು. ಉಪ್ಪಿನ ಸತ್ಯಾಗ್ರಹದ ಯಾತ್ರೆಯಲ್ಲಿ ಹೆಂಗಸರು ಭಾಗವಹಿಸುವುದನ್ನು ಬಾಪೂವರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ವಿರೋಧಿಸಿದ್ದರು. ಆಗ ಕಮಲಾದೇವಿಯವರು, 'ಬಾಪೂ ನೀವು ಇಂತಹ ನಿರ್ಣಯ ಗಳಿಂದ ಮಹಿಳೆಯರ ಕ್ಷೇತ್ರವನ್ನು ಪರಿಮಿತಗೊಳಿಸುತ್ತಿದ್ದೀರಿ. ಅವರ ಕ್ರಿಯಾ ಶೀಲತೆ ಮತ್ತು ಸಾಹಸವನ್ನು ಕಡೆಗಣಿಸುತ್ತಿದ್ದೀರಿ" ಎಂದು ಹೇಳಿದ್ದರು. ಮಹಿಳೆ ಯರ ಬಗ್ಗೆ ಕಮಲಾದೇವಿಯವರಿಗಿದ್ದ ಅಭಿಮಾನ, ನಂಬಿಕೆಯೇ ಬಾಪೂಜಿಯೊಡನೆ ಹೀಗೆ ವಾದಿಸಲು ಧೈರ್ಯ ಕೊಟ್ಟಿತ್ತು.

ಅದಕ್ಕೆ ಬಾಪೂಜಿ "ಮಹಿಳೆಯರನ್ನು ನಾನು ವಿಶಿಷ್ಟ ಕೆಲಸಗಳಲ್ಲಿಯೇ ತೊಡ ಗಿಸಲು ಬಯಸುತ್ತೇನೆ. ಅಹಿಂಸೆ ಮತ್ತು ಸತ್ಯಾಗ್ರಹ ತತ್ವಗಳ ಮುಖ್ಯ ಕಾರ್ಯ ನಿರ್ವಾಹಕರು ಮಹಿಳೆಯರೇ ಎಂದು ಭಾವಿಸಿದ್ದೇನೆ. ಪುರುಷರು ಮಾಡುವುದೆಲ್ಲ ವನ್ನೂ ಮಹಿಳೆಯರು ಮಾಡಲೇಬೇಕೆಂಬ ನಿಯಮವೆಲ್ಲಿದೆ? ಹಾಗೆ ಮಾಡಿದರೇನೇ ಅವರು ಪುರುಷರೊಂದಿಗೆ ಸರಿಸಮಾನರು ಎಂಬ ಭಾವನೆ ನನ್ನಲ್ಲಿಲ್ಲ"–ಎಂದರಂತೆ.

ಮೊದಮೊದಲು ಕಮಲಾದೇವಿಗೆ ಅಹಿಂಸೆಯಲ್ಲಿ ಪೂರ್ಣ ವಿಶ್ವಾಸವಿಲ್ಲವೆಂಬ ಸುದ್ದಿ ಕೇಳಿ ಗಾಂಧೀಜಿಯವರು, "ನಿನಗೆ ಅಹಿಂಸೆಯಲ್ಲಿ ವಿಶ್ವಾಸವಿಲ್ಲದಿರುವುದರಿಂದ ನೀನು ಚಳವಳಿಯಿಂದ ದೂರವಿರಬೇಕು" ಎಂದರಂತೆ.

'ಬಾಪು ಸ್ವಾತಂತ್ರ್ಯ ಸಂಗ್ರಾಮದ ಸೂತ್ರಧಾರಿ. ಅವರಿಂದ ಬೇರೆಯಾಗಿ ದೇಶ ಸೇವೆ ಸಾಧ್ಯವಿಲ್ಲ' ಎಂದುಕೊಂಡ ಕಮಲಾದೇವಿಯವರು ಅಂದಿನಿಂದ ಬಾಪೂಜಿಗೆ ನಿಕಟವಾದರು. ತನ್ನನ್ನೇ ಚಳವಳಿಗೆ ಸಮರ್ಪಣೆ ಮಾಡಿಕೊಂಡರು. ತನ್ನ ಪ್ರತಿ ಯೊಂದು ಕೆಲಸವನ್ನೂ ಬಾಪೂಗೆ ನಿವೇದಿಸಿದರು.

ಸೃಷ್ಟಿ ಸೌಂದರ್ಯದ ಬೀಡಾಗಿ, ಸಹ್ಯಾದ್ರಿ ನೀಲಗಿರಿ ಪರ್ವತಗಳಿಂದ ಸುತ್ತು ವರಿಯಲ್ಪಟ್ಟ ನಿಸರ್ಗದ ರಮ್ಯತಾಣ ಮಂಗಳೂರು ಕಮಲಾದೇವಿಯವರ ಜನ್ಮಸ್ಥಳ. ಅಲ್ಲಿಯ ವಾತಾವರಣದಿಂದಲೇ ಆಕೆ ದೃಢ ನಿಶ್ಚಲರೂ, ನಿರ್ಭೀತರೂ, ಸ್ವಾತಂತ್ರ್ಯ ಪ್ರಿಯರೂ ಆದರೆನ್ನಿಸುತ್ತದೆ.

"ಮಂಗಳೂರು ಎಂತಹವರನ್ನೂ ರಸಿಕರನ್ನಾಗಿ ಮಾಡುತ್ತದ" ಎಂದಿದ್ದಾರೆ ಕಮಲಾದೇವಿಯವರು.

ರಸಿಕತೆಯೇ ತದ್ರೂಪವಾಗಿ ಜನ್ಮತಳೆದ ಕಮಲಾದೇವಿಯಲ್ಲಿ ಸಂಗೀತಕಲೆ, ಅಭಿನಯಕಲೆ, ಕರಕುಶಲಕಲೆ ರಕ್ತಗತವಾಗಿದೆ. ಸ್ವಾತಂತ್ರ್ಯ ಹೋರಾಟದ ಬಿರುಸಾದ ಬಿಡುವಿಲ್ಲದ ಕಾರ್ಯಕ್ರಮಗಳ ಮಧ್ಯೆಯೂ ತನ್ನ ಕಲಾಪ್ರತಿಭೆಯನ್ನು ಮೊಟಕಾಗಲು ಬಿಡದೆ ಅವಕಾಶ ಕಲ್ಪಿಸಿಕೊಂಡು ತಾನು ಹೆಚ್ಚು ಹೆಚ್ಚು ಜ್ಞಾನ ಪಡೆಯುವುದರ ಜೊತೆಗೆ ಬೇರೆಯವರನ್ನೂ ಪ್ರೋತ್ಸಾಹಿಸುವುದರಲ್ಲಿ ತೃಪ್ತಿಪಡುತ್ತಿದ್ದರು.

ಜಗತ್ತಿನ ಪೂರ್ವ ಪಶ್ಚಿಮ ದೇಶಗಳ ಇವರ ಪರ್ಯಟನೆಯ ಅನುಭವ ಕೇವಲ ಸ್ವಾರ್ಥ ಲಾಭವಾಗದೆ ಜನತೆಗೆ ಉಪಕಾರವಾಯಿತು. ಎಲ್ಲಿ ಹೋದರೂ ಭಾರತೀಯ ವಿದ್ಯಮಾನಗಳ ಜೊತೆ ಪಾಶ್ಚಾತ್ಯ ರೀತಿ ನೀತಿಯನ್ನು ಗ್ರಹಿಸಿ ತನ್ನ ದೇಶಕ್ಕೆ ಬೇಕಾದ್ದನ್ನು ಅಳವಡಿಸುವ ಜಾಣ್ಮೆಯ ಈ ಭಾರತದ ಸುಪುತ್ರಿ, "ಅಲ್ಲಿಯ ಮಹಿಳಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಸಂಘಟನೆ ಸಮಾನ ಹಕ್ಕುಗಳಿಗಾಗಿ. ಆದರೆ ಭಾರತೀಯ ಮಹಿಳಾ ಸಂಘಟನೆ ದೇಶ ಸೇವೆಗಾಗಿ, ಸಮಾಜದ ಉನ್ನತಿಗಾಗಿ" ಎನ್ನುವ ಹೆಮ್ಮೆಯ ಹೆಣ್ಣು. ಸ್ವಾತಂತ್ರ್ಯ ಚಳವಳಿಯ ಕಷ್ಟನಿಷ್ಠುರದ ಕುಲುಮೆಯಲ್ಲಿ ಬೆಂದ ಮಹಿಳೆಯರಿಗೆ ಸೇವಾದಳದಲ್ಲೂ ನೀರಸ ಬಾಳ್ವೆ ಬೇಸರವೆಂದು ಜೀವನ ಸೌಂದರ್ಯವನ್ನು ಪರಿಚಯಿಸುವ ಹಾಡು, ನೃತ್ಯ ಕುಶಲ ಕಲೆಗಳ ಮನರಂಜನೆಯನ್ನೊದಗಿಸಿದ ರಸಿಕ ಚತುರೆ ಕಮಲಾದೇವಿ.

ಗಾಂಧೀಜಿಯವರ ಪರಮಭಕ್ತೆಯಾಗಲು ಅವರನ್ನು ಸಿದ್ಧಗೊಳಿಸಿದ ಅವರ ಬಾಲ್ಯದ ಹಿನ್ನೆಲೆ ಅತ್ಯಂತ ಪ್ರಭಾವಕಾರಿ. ಇತ್ತೀಚೆಗೆ ಎಪ್ಪತ್ತೈದನೆಯ ವಾರ್ಷಿಕೋತ್ಸವ ಆಚರಿಸಿದ ಮಂಗಳೂರಿನ ಮಹಿಳಾಸಭಾ ಸ್ಥಾಪನೆಗೆ ಕಾರಣ ಕಮಲಾದೇವಿಯವರ ತಾಯಿಯವರೇ. ಹೆಂಗಸರು ಹರಟೆಗಳಲ್ಲಿ ಕಾಲ ಕಳೆಯದೆ ಉಪಯುಕ್ತ ಕಾರ್ಯಗಳಲ್ಲಿ ನಿರತರಾಗಿದ್ದಂತಹ ಕುಟುಂಬ ಅವರದು. ತಾಯಿ ಮತ್ತು ಸಹೋದರಿಯರ ಉದಾಹರಣೆಯಿಂದ ಹೆಣ್ಣು ಮಕ್ಕಳಿಗಿದ್ದ ಕಷ್ಟ ಕೋಟಲೆಗಳ ಚಿಂತನೆ, ದುಃಖ, ದೀನದಲಿತರ ಮಧ್ಯದಲ್ಲಿ ತಾನೂ ಒಂದಾಗಿದ್ದ ಕರುಣಾಮಯಿ. ಏಸುಕ್ರಿಸ್ತನ ಮಾದರಿ ಶ್ರೀ ಅರವಿಂದ ಆಶ್ರಮದ ಸಾತ್ವಿಕತೆ ಮತ್ತು ಆಧ್ಯಾತ್ಮಿಕ ತತ್ವ ಇವುಗಳ ಪರಿಣಾಮವಾಗಿ ಕಮಲಾದೇವಿಯವರ ಆತ್ಮ ಜನತೆಯ ಸೇವೆಗಾಗಿ ಹಾತೊರೆಯುತ್ತಿತ್ತು. ಭಾರತದ ಹೊರಗಿದ್ದವರಲ್ಲಿ ಅನೇಕರು ಭಾರತದ ಸ್ವಾತಂತ್ರ್ಯಕ್ಕಾಗಿ ಶ್ರಮಿಸುತ್ತಿದ್ದುದನ್ನು ಕಂಡ ಕಮಲಾದೇವಿಯವರು ಗಾಂಧೀಜಿಯವರ ಸಾನ್ನಿಧ್ಯ ಸೇರಿ ಅವರ ಪ್ರೇರಣೆಯಿಂದ ಸ್ವಾತಂತ್ರ್ಯ ಹೋರಾಟದಲ್ಲಿ ಬೆಸೆದುಕೊಂಡರು. ನಿಷ್ಕಾಮಕರ್ಮದಲ್ಲಿ ಮಗ್ನರಾದರು. ಕಾರ್ಯ ಮಾಡುವುದು, ಅದರಲ್ಲೇ ತೃಪ್ತಿ ಪಡೆಯುವುದು ಇಂದಿಗೂ ಕಮಲಾದೇವಿಯವರ ಜೀವನ ಮಂತ್ರ.

"ನಿಮ್ಮ ಜೀವನದಲ್ಲಿ ಅಧಿಕ ಪ್ರಭಾವ ಬೀರಿದ ವ್ಯಕ್ತಿ ಗಾಂಧೀಜಿಯವರೇ ಎನ್ನಿಸುತ್ತದೆ" ಎಂದು ಕೇಳಿದರೆ,

"ನನ್ನ ಬಗ್ಗೆ ಇನ್ನೂ ಹೆಚ್ಚು ವಿವರಗಳು ಬೇಕಾದರೆ ನಾನೇ ಬರೆದ 'ಮೆಮಾಯಿರ್ಸ್' ಓದಿ" ಎಂದರು.

"ನಿಮ್ಮ ಸಾಧನೆಯ ಎರಡು ಮುಖ್ಯ ವಿಷಯಗಳ ಕುರಿತು ಬರೆಯುವುದು ನನ್ನಾಸೆ. ಒಂದು ಸ್ವಾತಂತ್ರ್ಯ ಸಂಗ್ರಾಮ, ಮತ್ತೊಂದು ಕರಕುಶಲ ಕಲೆ" ಎಂದೆ.

ಕೂಡಲೇ" About Theatre?" ಎಂದು ಪ್ರಶ್ನಾರ್ಥಕವಾಗಿ ನೋಡಿದರು. ನಾಟಕವೆಂದರೆ ಅವರಿಗೆ ಬಹು ಪ್ರಿಯವಾದ ವಿಷಯವೆಂದಾಯಿತು.

"ಆಗಲಿ. ಅಂದರೆ ನಿಮ್ಮಿಂದಲೇ ತಿಳಿಯಬೇಕು" ಎಂದಾಗ,

"ಈಗ ಬೇಡ. ಮತ್ತೊಂದು ದಿನ" ಎಂದರು.

ಆಯಾಸಗೊಂಡಿದ್ದರೂ ಸ್ಫೂರ್ತಿ ಕಳೆದುಕೊಳ್ಳದ ಈ ಭಾವಜೀವಿ, ತಮ್ಮ ಹರೆಯದ ದಿನಗಳಲ್ಲಿ ದೇಶ ಸೇವೆಗೆ ಎಷ್ಟರಮಟ್ಟಿಗೆ ಪಾಡುಪಟ್ಟಿರಬಹುದು!

ಅನ್ಯಾಯಗಳ ವಿರುದ್ಧ ಹೋರಾಡುವ ದಿಟ್ಟತನ, ಸಂಕಷ್ಟಗಳನ್ನು ಎದುರಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಸುವ ಗಟ್ಟಿತನ— ಈ ಎರಡು ಗುಣಗಳನ್ನು ಕಮಲಾದೇವಿಯವರು ಪಡೆದಿದ್ದರು.

"ದೇಶ ಸೇವೆಯ ನನ್ನ ಕಾರ್ಯಕ್ಕೆ ಅಂಕುರಾರ್ಪಣವಾಗಿದ್ದು ಡಾ॥ ಹರ್ಡಿಕರ್ ಮತ್ತು ಉಮಾಬಾಯಿ ಕುಂದಾಪುರ–ಇವರುಗಳ ಆಗಮನದ ದಿನದಿಂದ. ಬೆಳಗಾಂ ನಲ್ಲಿ ನಡೆಯಲಿರುವ ಕಾಂಗ್ರೆಸ್ ಅಧಿವೇಶನಕ್ಕೆ ಸ್ವಯಂ ಸೇವಿಕೆಯರನ್ನು ಆರಿಸುವ ವಿಶೇಷ ಉದ್ದೇಶದಿಂದ ಬಂದಿದ್ದ ಈ ಇಬ್ಬರು ಮುಖಂಡರಿಂದಲೇ ನಾನು ಭಾರತ ಸೇವಾ ದಳಕ್ಕೆ ಸೇರಿದುದು" ಎಂದು ಕಮಲಾದೇವಿಯವರು ಬರೆದುಕೊಂಡಿದ್ದಾರೆ.

ಸೇವಾ ದಳಕ್ಕೆ ಸೇರಲು ಬೆಳಗಾಂಗೆ ಹೋದಾಗ ಕಮಲಾದೇವಿಯವರಿಗೆ ಪರೀಕ್ಷೆಯೇ ಕಾದಿತ್ತು. ಕೊರೆಯುವ ಚಳಿಯಲ್ಲಿ ಗುಡಿಸಲಿನಂತಿದ್ದ ಚಪ್ಪರಗಳ ಕೆಳಗೆ ವಾಸ. ಈ ಕಷ್ಟವನ್ನರಿಯದ ಕಮಲಾದೇವಿಯವರಿಗೆ ಇದು ಮೊದಲ ಶಿಕ್ಷೆ. ಕೋಳಿ ಕೂಗುವ ಹೊತ್ತಿಗೇ ಎದ್ದು ತಣ್ಣೀರಿನಲ್ಲಿ ಸ್ನಾನಮಾಡಿ ಸಿದ್ಧವಾಗಬೇಕಾಗಿತ್ತು. ಇದು ಎರಡನೆಯ ಶಿಕ್ಷೆ. ರಾತ್ರಿ ಶಿಬಿರದ ಸುತ್ತಲೂ ಪಹರೆ ಕಾಯುತ್ತಾ ಎಚ್ಚರ ವಾಗಿರಬೇಕಾಗಿತ್ತು. ಇದಕ್ಕೆಲ್ಲಾ ತಮ್ಮ ಮೈಯನ್ನು ಒಗ್ಗಿಸಿಕೊಂಡ ಕಮಲಾದೇವಿ ಸೇವಾ ದಳದ ಅತ್ಯುತ್ತಮ ಸೇವಿಕೆ ಎಂದು ಹೆಸರು ಗಳಿಸಿದರು.

ಈ ಅಧಿವೇಶನದ ಸುಸೂತ್ರವಾಗಿ ನೆರವೇರಿಸಲು ಸ್ವಯಂ ಸೇವಿಕೆಯವರ ಶ್ರದ್ಧೆ ಮತ್ತು ಶ್ರಮ ಕಾರಣವೆಂದು ಗಾಂಧೀಜಿಯವರೇ ಸಭೆಯಲ್ಲಿ ಹೇಳಿದ್ದರು ಎಂದಾಗ ಕಮಲಾದೇವಿಯವರ ಕಾರ್ಯ ನಿರ್ವಹಣೆ ಅದೆಷ್ಟು ದಕ್ಷವಾಗಿತ್ತೆಂಬುದನ್ನು ತಿಳಿಯಬಹುದು.

"ಮಹಾ. ಇದಿಷ್ಟು ಕೆಲಸವೇ ದೇಶ ಸೇವೆಗೆ ಸಾಕೇ?" ಎಂದುಕೊಂಡಿದ್ದ ಅವರ ಭಾವನೆಗೆ, ತಕ್ಕಂತೆ ಮುಂದೆ ಇದೇ ಬೃಹತ್ ಕಾರ್ಯದ ನಿರ್ವಹಣೆಯೇ ಅವರ ಮೇಲೆ ಬಿದ್ದು, ಅವರ ವ್ಯಕ್ತಿತ್ವವನ್ನು ರೂಪಿಸಿತು.

ಬೆಳಗಾವಿಯಲ್ಲಿ ನಡೆದ ಅಧಿವೇಶನವೇ ಕಮಲಾದೇವಿಯವರ ಪ್ರಥಮ ಅನುಭವ. ಸೇವಾ ದಳಕ್ಕೆ ಸೇರುವಾಗ "ನಾನು ನನ್ನನ್ನು ದೇಶದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ಸಮರ್ಪಿಸಿಕೊಳ್ಳುತ್ತೇನೆ" ಎಂದು ಲಿಖಿತ ಪ್ರತಿಜ್ಞೆ ಮಾಡಿದ ಕಮಲಾದೇವಿಯವರು ಸ್ವಾತಂತ್ರ್ಯಾನಂತರ ಇಂದಿಗೂ ಅದರ ನಿಷ್ಠ ಅನುಷ್ಠಾನ ಗೈಯುತ್ತಿದ್ದಾರೆ.

ಬಾಗಲಕೋಟೆಯಲ್ಲಿ ಗೊತ್ತುಮಾಡಿದ್ದ ತರಬೇತಿ ಲಾಠಿ, ದಂಡ, ಕತ್ತಿವರಸೆ, ಸೂರ್ಯ ನಮಸ್ಕಾರ, ಯೋಗಾಸನಗಳ ಅಭ್ಯಾಸ ಪಡೆದರು.

ಮಾರ್ಗರೆಟ್ ಕಸಿನ್ಸ್‌ರ ಸ್ನೇಹವಾದ ಮೇಲೆ ಕಮಲಾದೇವಿಯವರ ಸ್ಪಷ್ಟವಾದ ಸಾರ್ವಜನಿಕ ಸಂಪರ್ಕ ಜೀವನ ಪ್ರಾರಂಭವಾದದ್ದು. ಮಾರ್ಗರೇಟರನ್ನು ಪ್ರೀತಿಯಿಂದ ಗ್ರೆಟ್ಟಾ ಎಂದೇ ಕಮಲಾ ಕರೆಯುತ್ತಿದ್ದರು. ಮಾನವ ಸ್ವಾತಂತ್ರ್ಯ, ಸ್ವಾಭಿಮಾನ ಗ್ರೆಟ್ಟಾರವರಿಗೆ ಬಹು ಪ್ರಿಯವಾದ ವಿಷಯ. ಆದ್ದರಿಂದಲೇ ವಯಸ್ಸಿನಲ್ಲಿ ಹಿರಿಯರಾದರೂ ಕಮಲಾದೇವಿ ಅವರಿಗೆ ಪ್ರಿಯ ಸಂಗಾತಿಯಾದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಲಿರುವ ಚುನಾವಣೆಯಲ್ಲಿ ಯಾವ ಮಹಿಳೆಯನ್ನು ನಿಲ್ಲಿಸಬೇಕೆಂಬ ಪ್ರಶ್ನೆ ಉದ್ಭವಿಸಿತು, ಕಮಲಾದೇವಿಯವರು ಆಗತಾನೇ ಇಂಗ್ಲೆಂಡ್, ಯೂರೋಪು ಪ್ರವಾಸವನ್ನು ಮುಗಿಸಿಕೊಂಡು ಹೊಸ ವಿಷಯಗಳೊಂದಿಗೆ ಬಂದಿದ್ದರು. ಎಲ್ಲ ಮಹಿಳೆಯರ ಪ್ರತಿನಿಧಿಯಾಗಿ ಸ್ಪರ್ಧಿಸಲು ಕಮಲಾದೇವಿಯವರೇ ಏಕಮೇವ ಯೋಗ್ಯ ಹುರಿಯಾಳು ಎಂದು ಮಹಿಳಾ ಪ್ರತಿನಿಧಿ ಸಭೆಯಲ್ಲಿ ನಿರ್ಧರಿಸಲಾಯಿತು. ಚುನಾವಣೆಯಲ್ಲಿ ಗೆಲ್ಲಲಿಲ್ಲ ವಾದರೂ ಕಮಲಾದೇವಿಯವರು ಧೃತಿಗೆಡಲಿಲ್ಲ, ಬದಲಾಗಿ. ಅಧಿಕಾರದಿಂದ ಮೇಲ್ಮೆಗೆ ಬರುವುದು ಸೇವಾತತ್ಪರತೆಗೆ ಬೇಕಿಲ್ಲವೆಂದು ತೀರ್ಮಾನಿಸಿದರು. ಫಲಾಪೇಕ್ಷೆ ಇಲ್ಲದೆ ದುಡಿಯುವೆನೆಂದು ಪ್ರತಿಜ್ಞೆ ಮಾಡಿದರು. ಈ ಪ್ರತಿಜ್ಞೆಯ ಸತ್ಯತೆ ನಮಗೆ ಇಂದಿನ ತನಕ ಕಂಡುಬಂದಿದೆ.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಮಹಿಳೆಯರಲ್ಲಿ ಕಮಲಾದೇವಿ ಯವರು ಯಾವುದೇ ಅಧಿಕಾರಕ್ಕೂ ಆಸೆಪಡದವರು.

೧೯೨೭ರಲ್ಲಿ ಪುಣೆಯಲ್ಲಿ ನಡೆದ ಅಖಿಲ ಭಾರತ ಮಹಿಳಾ ಪರಿಷತ್ತಿನ ಅಧಿವೇಶನ ಸಂದರ್ಭದಲ್ಲಿ ಕಾರ್ಯ ನಿರ್ವಾಹಕ ಸಮಿತಿಯು ಕಮಲಾದೇವಿಯವರನ್ನು ಮುಂದಿನ ವರ್ಷದಿಂದ ಮುಖ್ಯ ಕಾರ್ಯದರ್ಶಿನಿಯನ್ನಾಗಿ ನಿಯಮಿಸಲು ನಿರ್ಧರಿಸಿತು. ಮಹಾಮಹಿಳೆಯರ ಮುಂದೆ ತಾನು ಇನ್ನೂ ಚಿಕ್ಕವಳೆಂದು ಕಮಲಾದೇವಿ ಹೇಳಿದರೂ, ಈ ಜವಾಬ್ದಾರಿಯನ್ನು ವಹಿಸಲು ಧೈರ್ಯ ಕೊಟ್ಟವರು ಗ್ರೆಟ್ಟಾ ಮತ್ತು ಸರೋಜಿನಿ ನಾಯ್ಡು. ಕಮಲಾದೇವಿಯವರ ಪತಿ ಹರೀಂದ್ರನಾಥ ಚಟ್ಟೋಪಾಧ್ಯಾಯರ ಸೋದರಿ ಸರೋಜಿನಿ ನಾಯ್ಡು.

ಪುಣೆಯಲ್ಲಿದ್ದಾಗ ಗೋಪಾಲಕೃಷ್ಣ ಗೋಖಲೆಯವರ ಪರಿಚಯವಾಗಿ, ಸಮಾಜಸೇವೆ ನಮ್ಮ ಕರ್ತವ್ಯವೆಂಬ ಭಾವನೆಯನ್ನು ಅವರಿಂದ ಕಲಿತರು. ಶ್ರೀನಿವಾಸ ಶಾಸ್ತ್ರಿಗಳು ಮತ್ತು ಅನಿಬೆಸೆಂಟ್‌ರವರ ಸಹವಾಸ ಪ್ರಭಾವದಿಂದ ೧೯ ವರ್ಷದ ಯುವತಿಯಾಗಿದ್ದರೂ, ಕಮಲಾದೇವಿಯಲ್ಲಿ ದೊಡ್ಡ ಸಭೆಗಳನು ದ್ದೇಶಿಸಿ ಮಾತಾಡುವ ಸಾಮರ್ಥ್ಯವುಂಟಾಯಿತು. ಅಷ್ಟೇ ಅಲ್ಲ. ಸಭಿಕರನ್ನು ಮುಗ್ಧಗೊಳಿಸಿ ಕೆಲವು ಕಾಯ್ದೆಗಳನ್ನು ಜಾರಿಗೆ ತರುವಂತೆ ಮಾಡಿದರು. ಸ್ವರಾಜ್ಯವೆಂದರೇನು ? ಸಮಾಜದಲ್ಲಿ ಶೋಷಣೆ ಏಕೆ ? ಹೇಗೆ ?...ಈ ವಿಚಾರವಾಗಿ ಇವರು ತಯಾರಿಸಿದ ಕರಡು ಅತ್ಯಂತ ಉಪಯೋಗವಾಯಿತು.

ಬರ್ಲಿನ್‌ನಲ್ಲಿ ಅಂತರ ರಾಷ್ಟ್ರೀಯ ಕಾಂಗ್ರೆಸ್ ಸಭೆ ನಡೆದಾಗ, ಎಲ್ಲಾ ರಾಷ್ಟ್ರಗಳೂ ತಮ್ಮ ತಮ್ಮ ಧ್ವಜವನ್ನು ಹಾರಿಸಿ ಕುಳಿತಿದ್ದರು. ಭಾರತೀಯ ತಂಡಕ್ಕೆ ಧ್ವಜವೇ ಇರಲಿಲ್ಲ. ಕೂಡಲೇ ಕಮಲಾದೇವಿಯವರ ಜಾಣತನದಿಂದ ಭಾರತೀಯ ಮಹಿಳೆಯರು ತಮ್ಮ ಸೀರೆಯ ಸೆರಗನ್ನು ಕತ್ತರಿಸಿ ತ್ರಿವರ್ಣ ಧ್ವಜವನ್ನು ಹಾರಿಸಿ ಸ್ವಾಭಿಮಾನದಿಂದ ಮೆರೆದರು. ಇದೊಂದು ರೋಮಾಂಚಕಾರಿ ಘಟನೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಭಾರತ ಸೇವಾದಳವು ಕಾಂಗ್ರೆಸ್ಸಿನೊಡನೆ ಒಂದಾದ ನಂತರ, ಆಲ್ ಇಂಡಿಯ ನ್ಯಾಷನಲ್ ಕ್ಯಾಂಪ್‌ಗೆ ತರಬೇತಿಗಾಗಿ ಮುಖಂಡರನ್ನು ಆರಿಸಿ ತರುವ ಹೊಣೆ ಕಮಲಾದೇವಿಯವರದಾಯಿತು. ಒಂದು ಕ್ಷಣದಲ್ಲಿ ಹೊರಟು ನಿಂತು ಬಿರುಗಾಳಿಯಂತೆ ದೇಶದ ನಾಲ್ಕು ಮೂಲೆಯನ್ನೂ ಸುತ್ತಿ, ಕಷ್ಟ ಸಹಿಷ್ಣುಗಳಾದ, ತ್ಯಾಗಮಯಿಗಳಾದ, ಜವಾಬ್ದಾರಿಯುತ ಯುವತಿಯರನ್ನೂ, ಮಹಿಳೆಯರನ್ನೂ ಹೊಂಚಿಕೊಂಡು ಬಂದರು. ಕಮಲಾದೇವಿಯವರ ಹೆಸರು ದೇಶಸೇವೆಯ ರಂಗದಲ್ಲಿ ಆಗಲೇ ಬಹು ಪ್ರಚಲಿತವಾಗಿದ್ದರಿಂದ, ಅವರನ್ನು ಫಲ ಪುಷ್ಪ ಗಂಧಗಳೊಂದಿಗೆ ಸ್ವಾಗತಿಸಿ, ಅವರು ಹೇಳಿದಂತೆ ಮಹಿಳೆಯರು ಕೇಳುತ್ತಿದ್ದರು. ಪ್ರತಿಯೊಬ್ಬರೂ, ಹಿರಿಯ ಮುಖಂಡರಿಂದ ಕಿರಿಯರವರೆಗೆ "ಕಮಲಾದೇವಿಯವರೊಡನೆ ನಮ್ಮ ಸಂಪರ್ಕ ಬಂದಿದ್ದು ನಮ್ಮ ಸುದೈವ" ಎನ್ನುತ್ತಿದ್ದರು.

ಸೇವಾದಳದ ಗಣ್ಯರಲ್ಲಿ ಪುರುಷರೂ ಇದ್ದರು. ಅವರಲ್ಲಿ ಹೆಚ್ಚು ಗಲಾಟೆ ಇಲ್ಲದ ಗಂಭೀರ ವ್ಯಕ್ತಿ ವೆಂಕಟರಾಮಯ್ಯನವರು ಎಂದಿದ್ದಾರೆ ಕಮಲಾದೇವಿ. ಉತ್ತರ ಕನ್ನಡದವರಿಗೆ ಸ್ವಭಾವ ಸಹಜವಾದ ದೃಢಮನಸ್ಕತೆ ಹಾಗೂ ಕ್ರಾಂತಿಕಾರಿ ಮನೋಭಾವನೆಗಳನ್ನು ಮೈಗೂಡಿಸಿಕೊಂಡ ವೆಂಕಟರಾಮಯ್ಯನವರು ಹಾಗೂ ಅವರ ಪತ್ನಿ ಗೌರಮ್ಮನವರೂ, ಶ್ರೀಮಂತ ಕುಟುಂಬದಿಂದ ಬಂದಿದ್ದ, ಚಿಕ್ಕವಯಸ್ಸಾದರೂ ಧೈರ್ಯೋತ್ಸಾಹ, ಶ್ರದ್ಧೆ ಇದ್ದ ಮಹಾದೇವಿ ತಾಯಿ–ಇವರುಗಳ ವ್ಯಕ್ತಿತ್ವ ಕಮಲಾದೇವಿಯವರ ಮೇಲೆ ಮತ್ತಷ್ಟು ಪ್ರಭಾವ ಬೀರಿತು.

೧೯೩೬ರಲ್ಲಿ ಪಂಡಿತ ನೆಹರೂರವರು ಕಾಂಗ್ರೆಸ್ಸಿನ ಅಧ್ಯಕ್ಷರಾದ ಮೇಲೆ ಜನತೆಯ ಸಂಪರ್ಕದ ಅವಕಾಶ ಕಮಲಾದೇವಿಯವರಿಗೆ ಹೆಚ್ಚಿತು.

ಗುಜರಾತಿನ ಅಬ್ರಾಮಾ ಹಳ್ಳಿಯಲ್ಲಿ ತರಬೇತಿ ಶಿಬಿರದ ವ್ಯವಸ್ಥೆಯಾದಾಗ, ಕಮಲಾದೇವಿಯವರು ತಮ್ಮ ಹೊಸ ಮಾದರಿಯ ತರಬೇತಿ ವಿಧಾನವನ್ನು ಬಳಸಿ ಮಹಿಳೆಯರು ದೇಶದ ಉತ್ತಮ ನಾಗರಿಕರಾಗುವಂತೆ ಕಲಿಸಿಕೊಟ್ಟರು. ಹೊಸ ಜ್ಞಾನ ಸಂಪಾದನೆಯಾದುದಲ್ಲದೆ ಜೀವನದ ಸರ್ವ ವಿಧದ ಅಭಿವೃದ್ಧಿಯ ಚಟುವಟಿಕೆಗಳನ್ನು ಇಲ್ಲಿ ಕಲಿತರು. ತರಬೇತಿ ಪಡೆದವರೆಲ್ಲಾ "ನಾವು ಗಾಢಾಂಧಕಾರದಿಂದ ಬೆಳಕಿನತ್ತ ಬಂದಂತಾಗಿದೆ" ಎಂದುಕೊಂಡರು.

೧೯೪೨ ಆಗಸ್ಟ್ ೮ನೇ ದಿನ ಗಾಂಧೀಜಿ "ಭಾರತ ಬಿಟ್ಟು ತೊಲಗಿ" ಆಂದೋಲನದ ಕರೆಕೊಟ್ಟರು. ಎಂದೂ ಇಲ್ಲದ ಎತ್ತರಿಸಿದ ಧ್ವನಿಯಲ್ಲಿ ಕೂಗಿ ಹೇಳಿದರು ಬಾಪೂ, "ಭಾರತೀಯರು ಕ್ರಾಂತಿಯನ್ನೇ ಹೂಡಬೇಕಾಗಿದೆ. ದೇಶಕ್ಕೆ ಸ್ವಾತಂತ್ರ್ಯ ಬರುವವರೆಗೂ ನೆಮ್ಮದಿ ಇಲ್ಲವೆಂದು ಪ್ರತಿಜ್ಞೆ ಮಾಡಿ–ಮಾಡು ಇಲ್ಲವೇ ಮಡಿ–ಇದೇ ದಿವ್ಯ ಮಂತ್ರ". ಗಾಂಧೀಜಿ ಕರೆಕೊಟ್ಟಕೂಡಲೇ ಕಮಲಾದೇವಿ ಬೆಂಗಳೂರಿಗೆ ಧಾವಿಸಿದರು. ಮೊದಲಿಂದ ವಿಶಾಲ ಬೆಂಗಳೂರು ನಗರದಲ್ಲಿ ಒಂದು ಆಂದೋಲನವನ್ನೆಬ್ಬಿಸಬೇಕೆಂದಿದ್ದ ಬಯಕೆಯನ್ನು ತೀರಿಸಿಕೊಳ್ಳುವಂತೆ ಇದೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಸಮಯವನ್ನು ಉಪಯೋಗಿಸಿ ಹೊರಟು ಬಂದರು. ತಾನು ಉದ್ದೇಶಿಸಿದ ಕಾರ್ಯಕ್ಕೆ ಬೆಂಬಲ ಕೊಟ್ಟು ಪುರುಷರೂ, ಸ್ತ್ರೀಯರೂ, ಮಕ್ಕಳೂ ಸಹಕರಿಸಿದ್ದುದು ಅವರಿಗೆ ಬಹಳ ಆನಂದವನ್ನುಂಟುಮಾಡಿತು-ಆದರೆ ಕೂಡಲೇ ಕಾದಿತ್ತು ದಸ್ತಗಿರಿ.

ಕಮಲಾದೇವಿಯವರು ಅನೇಕ ಸಲ ಜೈಲುವಾಸದ ಕಹಿಯನ್ನನುಭವಿಸಿದ್ದಾರೆ. ತಮ್ಮ ಒಬ್ಬರ ಅನುಭವದಿಂದ ಜೈಲುವಾಸಿಗಳ ಕಷ್ಟಗಳನ್ನು ತೊಡೆದುಹಾಕಲು ಕ್ರಾಂತಿಯನ್ನೆಬ್ಬಿಸಿ ಉತ್ತಮ ಬದಲಾವಣೆ ತರುವ ಪ್ರಯತ್ನದಲ್ಲಿ ಸಫಲರಾಗಿದ್ದಾರೆ. ವೆಲ್ಲೂರಿನ ಜೈಲಿನಲ್ಲಿದ್ದಾಗ ಕಮಲಾದೇವಿಯವರ ಆರೋಗ್ಯ ಬಹಳ ಹೀನ ಸ್ಥಿತಿಯಲ್ಲಿದ್ದ ಕೂಡಲೇ ಬಿಡುಗಡೆ ಮಾಡುವಂತೆ ವೈದ್ಯರಿಂದ ಸಲಹೆಯಾಯಿತು.

ಮಂಗಳೂರಿಗೆ ಬಂದು ಸ್ವಲ್ಪ ವಿಶ್ರಾಂತಿಯ ಉಸಿರಾಡುವುದಕ್ಕೆ ಆಸ್ಪದವಿಲ್ಲದಂತೆ, ಮುಂಬಯಿಯ ಸಮ್ಮೇಳನಕ್ಕೆ ಬರಬೇಕೆಂದು ಕರೆಬಂತು. ಮುಂಬಯಿಯ ಪೋಲೀಸ್ ಅಧಿಕಾರಿಗಳು ಕಮಲಾದೇವಿಯರನ್ನು ಬರದಂತೆ ತಡೆಹಾಕಿದ್ದಾರೆಂದು ತಿಳಿದು, ಮಧ್ಯರಾತ್ರಿ ಒಂದು ಕಾರಿನಲ್ಲಿ ಹೊರಟು ಗುಪ್ತವಾಗಿ ಮುಂಬಯಿ ತಲುಪಿ ವೇಳೆಗೆ ಸರಿಯಾಗಿ ಸಮ್ಮೇಳನಕ್ಕೆ ಹಾಜರಾದರು.

ಸೇವಾದಳದಲ್ಲೇ ಇದ್ದ ಕಮಲಾದೇವಿಯವರನ್ನು ಕಾಂಗ್ರೆಸ್ ಕಾರ್ಯ ಸಮಿತಿಗೆ ಸೇರುವಂತೆ ಮಾಡಿದವರು ಗಾಂಧೀಜಿಯವರೇ.

ಕಮಲಾದೇವಿಯವರ ಮತ್ತು ಗಾಂಧೀಜಿಯವರ ನಡುವೆ ಇದ್ದ ಆತ್ಮೀಯತೆಯನ್ನು ತಿಳಿಯಲು ಒಂದೆರಡು ಸಂದರ್ಭಗಳ ಸಾಕ್ಷಿ ಸಾಕು—

ಜಯಪ್ರಕಾಶ್‌ನಾರಾಯಣ್‌ರವರು ಜೈಲಿನ ಉತ್ತಮ ಸ್ಥಿತಿಗಾಗಿ ಅನಿರ್ದಿಷ್ಟ ಉಪವಾಸ ಕೈಗೊಂಡಾಗ, ಅವರ ಶರೀರ ದುರ್ಬಲವಾಗುತ್ತಿರುವ ಬಗ್ಗೆ ಯೋಚನಾಕ್ರಾಂತರಾದ ಗಾಂಧೀಜಿ ಕಮಲಾದೇವಿಯವರಿಗೆ ಹೇಳಿ ಕಳುಹಿಸಿ—

"ಈ ಕೆಲಸ ನಿಮ್ಮಿಂದಲೇ ಸಾಧ್ಯ. ಅವರ ಉಪವಾಸ ನಿಲ್ಲಿಸಬೇಕು" ಎಂದರು.

ಮತ್ತೊಂದು ಸಂದರ್ಭದಲ್ಲಿ— "ವಲ್ಲಭಾಯಿ ಪಟೇಲ್ ಉಕ್ಕಿನ ಮನುಷ್ಯ. ಆದರೆ ಅವರ ಮೃದು ವ್ಯಕ್ತಿತ್ವವನ್ನು ನೋಡಲು ನನ್ನೊಂದಿಗೆ ಅವರ ಅತಿಥಿಯಾಗಿ ಅವರ ಮನೆಗೆ ನೀವೂ ಬನ್ನಿ, ಅವರ ಸೌಂದರ್ಯ ರಸಿಕತೆ, ಅವರ ಅಂತಃಕರಣ ನಿಮಗೆ ಇಷ್ಟವಾಗುತ್ತದೆ" ಎಂದು ಕಮಲಾದೇವಿಯನ್ನು ತನ್ನೊಂದಿಗೆ ಕರೆದುಕೊಂಡು ಗಾಂಧೀಜಿ ಕರೆದುಕೊಂಡು ಹೋಗಿದ್ದರು.

ಸ್ವಾತಂತ್ರ್ಯ ಬಂದ ನಂತರ ಗಾಂಧೀಜಿಗೆ ಕೋಮುವಾರು ಗಲಭೆ, ನಿರಾಶ್ರಿತರ ಸಮಸ್ಯೆ—ಮುಂತಾದವುಗಳಿಂದ ತುಂಬ ಮನನೊಂದಿದ್ದರು. ಅಂತಹ ಸಮಯದಲ್ಲೂ, ಕಮಲಾದೇವಿ ತಮ್ಮದೊಂದು ಯೋಜನೆಯನ್ನು (ಪ್ರೊಜೆಕ್ಟ್) ಅವರಲ್ಲಿ ತೆಗೆದುಕೊಂಡು ಹೋಗಿದ್ದಾಗ—

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



"ನೀವು ನನ್ನಲ್ಲಿಗೆ ಬಂದು ಬಹಳ ದಿನಗಳಾದವು, ಏಕೆ ಹೀಗೆ ಮಾಡಿದಿರಿ"—ಎನ್ನುತ್ತಾ ನಿರಾಶ್ರಿತರ ಸಮಸ್ಯೆಗೆ ತಂದಿದ್ದ ಪರಿಹಾರ ಯೋಜನೆಯನ್ನು ಒಂದೊಂದಾಗಿ ಪರಿಶೀಲಿಸಿ, 'ಬಹಳ ಒಪ್ಪಿಗೆಯಾಗಿದೆ. ಮುಂದುವರೆಯಿರಿ, ದೇವರು ನಿಮಗೆ ಶಕ್ತಿ, ಸಾಮರ್ಥ್ಯ ಕೊಟ್ಟು ಜಯ ಲಭಿಸಲಿ'—ಎಂದು ಹರಸಿದರಂತೆ.

"ಅಂತಹ ಮಹಾತ್ಮರು ಗಾಂಧಿ, ಎಂತಹ ಸಂದಿಗ್ಧ ಪರಿಸ್ಥಿತಿಯಲ್ಲೂ ತನ್ನಲ್ಲಿಗೆ ಬಂದವರನ್ನು ವಿಚಾರಿಸಿ ಅರ್ಥಮಾಡಿಕೊಳ್ಳುತ್ತಿದ್ದರು. ಆ ಮಮತೆ ಮತ್ತಾರಲ್ಲಿದೆ?" ಎನ್ನುತ್ತಾರೆ ಕಮಲಾದೇವಿಯವರು.

ಮಾರನೇ ದಿನವೇ ಗಾಂಧೀಜಿಯವರು ಕೊಲೆಯಾದರೆಂಬ ಸುದ್ದಿ ಬಂದಾಗ, ಕಮಲಾದೇವಿಯವರಿಗೆ ನಂಬಲಸಾಧ್ಯವಾಯಿತು. ಸತ್ಯದ ಅರಿವಾಗಿ ಕಣ್ಣು ಕತ್ತಲಿಟ್ಟಿತು. ಕೈಕಾಲು ಶಕ್ತಿಗುಂದಿತು. ಸ್ಫೂರ್ತಿಯೇ ಹೋದಂತಾಯಿತು. ಆದರೆ ಮಹಾತ್ಮರ ಆದೇಶ— ಬದುಕಿರುವವರೆಗೂ ಕಾರ್ಯಕರ್ತರಾಗಬೇಕು ಎಂಬುದೇ' ಆದ್ದರಿಂದ ಕಮಲಾದೇವಿಯವರು ತಾವು ಕೈಗೊಂಡ ಕೆಲಸವನ್ನು ಮುಂದುವರಿಸಬೇಕಾಯಿತು.

ನಿರಾಶ್ರಿತರಾಗಿ ಚತ್ತರ್‌ಪುರದಲ್ಲಿ ಜಮೀನು ಕೊಡಿಸಿ, ಅವರೊಡನೆ ತಾನೂ ಆ ಗ್ರಾಮದಲ್ಲೇ ವಾಸಮಾಡುತ್ತಾ ಅವರಿಗೆ ಜೀವನ ಕಲ್ಪಿಸಿಕೊಟ್ಟರು. ಬರಡುಭೂಮಿ ನಂದನ ವನವಾಯಿತು. ಕರಕುಶಲ ಕೈಗಾರಿಕೆ ಪ್ರೋತ್ಸಾಹಗೊಂಡು ವಿಶ್ವವಿಖ್ಯಾತವಾಯಿತು. ಅಖಿಲ ಭಾರತ ಕರಕುಶಲ ಮಂಡಳಿ ಸ್ಥಾಪಿತವಾಯಿತು. ಕಮಲಾದೇವಿಯವರೇ ಆ ಮಂಡಳಿಯ ಅಧ್ಯಕ್ಷರು. ಸೇವೆಯ ಕಾರ್ಯೋನ್ಮುಖರಾದ ಕಮಲಾ, ತಮ್ಮ ಸ್ವಂತ ಮನೆಯಲ್ಲೇ ರಂಗಸಜ್ಜಿಕೆಯ ವಸ್ತುಸಂಗ್ರಹಾಲಯವನ್ನು ಪ್ರಾರಂಭಿಸಿದರು. ನಾಟಕ ಮತ್ತು ನಾಟ್ಯಕಲಾ ವಿಭಾಗಗಳ ಅಕಾಡೆಮಿ ಸ್ಥಾಪನೆಯಾಯಿತು. ಇವರ ಪ್ರಯತ್ನದಿಂದ ಈಗ ರಾಷ್ಟ್ರೀಯ ನಾಟಕ ಶಾಲೆಯೊಂದು ಸ್ಥಾಪನೆಯಾಗಿದೆ. ಅಕಾಡೆಮಿಯ ಅಧ್ಯಕ್ಷರು ಇವರೇ.

ಭಾರತೀಯ ಸಂಸ್ಕೃತಿಯೊಂದಿಗೆ ಕಲೆಯನ್ನು ಬೆರೆಸಿ ಕಲೆ ಉದ್ಧಾರವಾಗುವುದನ್ನು ಕಂಡು ಆನಂದಿಸುವ ರಸಿಕ ಶಿರೋಮಣಿ ಕಮಲಾದೇವಿಯವರು.

ಇವರ ಕುಟುಂಬ ಇಡೀ ಜಗತ್ತು, ವಿಶ್ವದ ಇಡೀ ಜನಾಂಗ ಇವರಿಗೆ ಸೋದರ ಸೋದರಿಯರಂತೆ, ಎಲ್ಲರಿಗೂ ಇವರು ಕಮಲಾಬೆನ್.

"ಕಮಲಾದೇವಿ ಅತಿ ಚೆಲುವೆ. ಯೌವನದ ಆಕೆಯ ಸೌಂದರ್ಯಕ್ಕೆ ಜನ ಅವರಿದ್ದ ಕಡೆ ಜೇನಿನಂತೆ ಮುತ್ತಿಕೊಳ್ಳುತ್ತಿದ್ದರು. ಕೆಲವು ವೇಳೆ ಅವರನ್ನು ರಕ್ಷಿಸುವುದೇ ನಮಗೆ ಕಷ್ಟವಾಗುತ್ತಿತ್ತು. ಸಾಮಾನ್ಯವಾಗಿ ನಾವು ಸಭೆ ಸೇರುತ್ತಿದ್ದುದು ರಾತ್ರಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



೮ ಗಂಟೆಯ ಮೇಲೆ, ಯಾವ ಸಭೆಗೂ ತಪ್ಪಿಸಿಕೊಳ್ಳದ ಕಮಲಾದೇವಿಯವರು ಬೆಂಗಳೂರಿನಲ್ಲಿ ಮಲ್ಲೇಶ್ವರದ ನಮ್ಮ ಮನೆಗೆ ಸಭೆಯ ಚರ್ಚೆಯಲ್ಲಿ ಭಾಗವಹಿಸಲು ರಾತ್ರಿಯಾದರೂ ಬರುತ್ತಿದ್ದರು. ಬರುವಾಗ ಮುಖ ಮುಚ್ಚುವಂತೆ ತಲೆಯ ಮೇಲೆ ಸೆರಗೆಳೆದು ಓಡೋಡಿ ಬರುತ್ತಿದ್ದರು. ಅವರ ಲಕ್ಷ್ಯವಿದ್ದುದು ಕೆಲಸದ ಕಡೆಗೆ ಪರ ಪುರುಷರಿಗೆ ಬೆಂಕಿಯಂತೆ ಶುದ್ಧ ಚಾರಿತ್ರ್ಯವಿರುವ ಹೆಣ್ಣು ಕಮಲಾದೇವಿ" ಎನ್ನುತ್ತಾರೆ ವಿ. ಎಸ್. ನಾರಾಯಣರಾವ್‌ರವರು.

ವಿ. ಎಸ್. ನಾರಾಯಣರಾವ್‌ರವರಿಗೆ ಈಗ ೮೨ ವರ್ಷ. ಈಗ ಬೆಂಗಳೂರಿನಲ್ಲೇ ನೆಲೆಸಿರುವ ಇವರು ಪತ್ರಕರ್ತರೂ, ಪ್ರಕಾಶಕರೂ ಆಗಿ ಆಂದೋಲನದಲ್ಲಿ ಬಹುಮುಖ್ಯ ಪಾತ್ರ ವಹಿಸಿದ್ದರು.

ನಾರಾಯಣರಾವ್‌ರವರು ಬರೆದಿರುವ ಪುಸ್ತಕಗಳು ಮಾರ್ಗದರ್ಶಕವಾಗಿವೆ. ಮುಖ್ಯವಾಗಿ ಮಹಿಳೆಯರ ಈ ಲೇಖನ ಮಾಲಿಕೆಗೆ ಅವರ ಸಲಹೆ. ಸೂಚನೆ, ವಿವರಗಳು ಸಹಾಯ ನೀಡಿರುವುದರಿಂದ ಕಮಲಾದೇವಿಯವರ ಬಗ್ಗೆ ಹೇಳಿದ ನುಡಿಗಳನ್ನು ಇಲ್ಲಿ ಬರೆಯಲಾಗಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

## ಲೌಕಿಕ ರಂಗದ ಅಲೌಕಿಕ
## ಅತಿಮಾನುಷ ಪ್ರತಿಭೆಯು

# ಪ್ರಭಾವತಿದೇವಿ

ಶ್ರೀ ರಾಮಕೃಷ್ಣ ಪರಮಹಂಸ ಮತ್ತು ಶ್ರೀ ಶಾರದಾದೇವಿಯವರ ತ್ಯಾಗಮಯವಾದ ದಿವ್ಯದಾಂಪತ್ಯದ ಆದರ್ಶ ಆಧ್ಯಾತ್ಮಿಕ ಲೋಕಕ್ಕಾದರೆ, ಶ್ರೀ ಜಯಪ್ರಕಾಶ ನಾರಾಯಣ ಮತ್ತು ಪ್ರಭಾವತಿದೇವಿಯವರ ತ್ಯಾಗಮಯ ದಾಂಪತ್ಯ ದೇಶಸೇವೆಗೆ ಮುಡುಪಾಯಿತು.

ದಾಂಪತ್ಯ ಜೀವನದಲ್ಲಿದ್ದೂ ಬ್ರಹ್ಮಚರ್ಯ ದೀಕ್ಷೆ ಪಡೆದು ದೇಶಸೇವೆಗೆ ಮೀಸಲಾಗಿ ಜೀವನ ನಡೆಸಿದ ತ್ಯಾಗಿ ಪ್ರಭಾವತಿದೇವಿ, ಲೌಕಿಕ ಸಾಮ್ರಾಜ್ಯದ ಅಲೌಕಿಕ ದೇವತಾಮೂರ್ತಿ. ಈಕೆ ಸಂತತಿ ಪಡೆಯದೆಯೇ ಲೋಕಮಾತೃತ್ವ ಧಾರಿಣಿಯಾಗಿ ಸರ್ವ ಜನರ ಜನನಿಯಾಗಿದ್ದರು. ಮಾತೆಯ ಮಮತೆ ಪ್ರೀತಿ ವಾತ್ಸಲ್ಯವನ್ನು ಎಲ್ಲರೂ ಈಕೆಯಲ್ಲಿ ಕಂಡರು. ಲೋಕಕಲ್ಯಾಣದ ನಿಮಿತ್ತವಾಗಿಯೇ ಇವರಲ್ಲಿ ತಾಯಿ ಹೃದಯ ದೈವದತ್ತವಾಗಿತ್ತು.

ಆದರ್ಶ ದಂಪತಿಗಳಾದ ಲೋಕನಾಯಕ ಶ್ರೀ ಜಯಪ್ರಕಾಶ ಮತ್ತು ಪ್ರಭಾವತಿಯವರಿಬ್ಬರ ಜನ್ಮಭೂಮಿಯೂ ಬಿಹಾರ ಪ್ರಾಂತ್ಯ.

ಮೊಟ್ಟಮೊದಲ ಬಾಂಬ್ ಸ್ಫೋಟನೆ ನಡೆದದ್ದು ಬಿಹಾರದಲ್ಲಿ, ಉಜ್ವಲ ರಾಷ್ಟ್ರಭಕ್ತಿಯ ನಿದರ್ಶನವಾದ ಐತಿಹಾಸಿಕ ಹೋರಾಟ "ಚಂಪಾರಣ್ಯ ಸತ್ಯಾಗ್ರಹ" ನಡೆದದ್ದೂ ಬಿಹಾರದಲ್ಲಿ. ಮಹಾತ್ಮ ಗಾಂಧಿಯವರ ಚಳವಳಿ ಅಮೋಘವಾಗಿ ಫಲಿಸಿದುದು ಬಿಹಾರದಲ್ಲಿ. ಈ ಜನಪರ ಕಾರ್ಯಗಳಿಂದ ಪ್ರಭಾವಿತರಾಗಿ ಸತ್ಯಶೋಧನೆಗೆ ಧುಮುಕಿದ ಅತ್ಯುತ್ತಮ ಜನಸೇವಕರಿದ್ದುದು ಬಿಹಾರದಲ್ಲಿ.

ಬ್ರಜ ಕಿಶೋರಬಾಬು ಮತ್ತು ಹರಸೂದಯಾಲರು ಬಿಹಾರದ ಸ್ವಾತಂತ್ರ್ಯ ಹೋರಾಟದ ಗಣ್ಯವ್ಯಕ್ತಿಗಳು. ಈಶ್ವರನ ಸಂಕಲ್ಪವೆಂಬಂತೆ ಇಬ್ಬರೂ ಬೀಗರಾಗಿ ಬಂಧುಗಳೂ ಆದರು. ಪ್ರೀತಿ ವಾತ್ಸಲ್ಯಮೂರ್ತಿಯಾಗಿದ್ದ ಹರಸೂದಯಾಲರು ಪರಿಶುದ್ಧ ಹೃದಯಿ, ಪ್ರಾಮಾಣಿಕ ಜೀವಿ. ಇಂತಹ ಗುಣದ ಗಣಿಯಾಗಿದ್ದ ಹರಸೂದಯಾಲರ ಪುತ್ರ ಜಯಪ್ರಕಾಶನಾರಾಯಣರ ಕೈಹಿಡಿದ ಪ್ರಭಾವತಿ ಬ್ರಜ ಕಿಶೋರ ಬಾಬುಗಳ ಏಕಮಾತ್ರ ಪುತ್ರಿ. ಪ್ರಭಾವತಿಯನ್ನು ಬ್ರಜ ಕಿಶೋರರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಮುದ್ದಾಗಿ ಸಾಕಿ ಸಲಹಿ ಮಗನಂತೆ ಬೆಳೆಸಿದ್ದರು. ಪೈಜಾಮ ಜುಬ್ಬಾ ಉಡುಪಿನಲ್ಲೇ ಬೆಳೆದವಳು ಪ್ರಭಾವತಿ,

ಅತ್ಯುತ್ತಮ ಜನಸೇವಕರೆಂದು ಕೀರ್ತಿ ಪಡೆದ ಬ್ರಜ ಕಿಶೋರಬಾಬು ತಮ್ಮ ಮಗಳು ಪ್ರಭಾವತಿಯನ್ನು ದೇಶಸೇವಾ ದೃಷ್ಟಿಯಿಂದಲೇ ಹರಸುದಯಾಲರ ಮಗನಿಗೆ ಧಾರೆಯೆರೆದು ಕೊಟ್ಟರು.

ಪ್ರಭಾವತಿಯ ಜನ್ಮಸ್ಥಳ ಬಿಹಾರದ ದರ್ಭಾಂಗ, ಇದೇ ಹಿಂದಿನ ಮಿಥಿಲೆಯಾಗಿದ್ದುದು. ೧೯೦೯ರ ಜೂನ್ ೬ರಂದು ಮಿಥಿಲೆ (ದರ್ಭಾಂಗ)ಯಲ್ಲಿ ಜನಿಸಿದರು. ತಾಯಿಯ ಹೆಸರು ಫೂಲ್‌ದೇವಿ.

ಜಯಪ್ರಕಾಶ ನಾರಾಯಣರ ಜನ್ಮಸ್ಥಳ ಬಿಹಾರದ ಸಿತಾ ಬಿದಿಯಾರ. ಸರಯೂ ಮತ್ತು ಜಾಹ್ನವಿ ನದಿಗಳು ಸಂಗಮವಾಗುವ ಪವಿತ್ರ ಸ್ಥಳ ಇದು. ಮಳೆಗಾಲದಲ್ಲಿ ಭೀಕರ ಪ್ರವಾಹವನ್ನು ಎದುರಿಸಿ ನಿಂತ ಸಮರ್ಥ. ಧೀರ ಜನರ ವಾಸಸ್ಥಳ. ಈ ಜನರು ಸಾಹಸಿಗಳು, ಬುದ್ಧಿವಂತರು, ಅಪಮಾನವನ್ನು ಸಹಿಸುವವರಲ್ಲ. ಈ ಜನತೆಯ ಶಕ್ತಿ ಸಾಮರ್ಥ್ಯ ಗೌರವದ ಪ್ರತೀಕವೆಂಬಂತೆ ೧೯೦೨ರಲ್ಲಿ ಅಕ್ಟೋಬರ್ ೨೧ನೇ ದಿನ ವಿಜಯದ ಸಂಕೇತದ ವಿಜಯದಶಮೀ ದಿನ ಜಯಪ್ರಕಾಶರು ಜನಿಸಿದರು. ತಾಯಿ ಫೂಲರಾಣಿಗೆ ಅಂದು ಭಾಗ್ಯ ತಾರೆಯ ಜನನವಾಯಿತೆಂದು ವಿಜಯದಶಮೀ ಸಂಭ್ರಮದ ಜೊತೆಗೆ ಸಂತಸ.

ಪ್ರಭಾವತೀ ಜಯಪ್ರಕಾಶರಿಬ್ಬರ ಮಾತೆಯರ ನಾಮಧೇಯ "ಫೂಲ್" ಎಂದೇ. ಹೂವಿನಷ್ಟೇ ಇಬ್ಬರ ಹೃದಯವೂ ಮೃದು, ಮಧುರ. ಈ ದೇವಿಯರು ತಮ್ಮ ಪುತ್ರ ಪುತ್ರಿಯರನ್ನು ಸತಿಪತಿಯರನ್ನಾಗಿ ಒಂದುಗೂಡಿಸಿ ರಾಷ್ಟ್ರಸೇವೆಗೆ ಸಮರ್ಪಣೆ ಮಾಡಿದರು. ಪ್ರಭಾಗೆ ವಿವಾಹವಾದಾಗ ಹದಿನೈದು ವರ್ಷ. ದಾಂಪತ್ಯ ಜೀವನ ಪ್ರಾರಂಭವಾಗುವ ಮೊದಲೇ ಜಯಪ್ರಕಾಶರು ಹೆಚ್ಚಿನ ವಿದ್ಯಾಭ್ಯಾಸಕ್ಕೆ ಅಮೇರಿಕಾಕೆ, ಹೊರಟರು. ಪ್ರಭಾವತಿ ಗಾಂಧೀಜಿಯ ಆಶ್ರಮ ಸೇರಿದರು.

ಆಕರ್ಷಣೀಯ ವಸ್ತ್ರ ಒಡವೆಗಳ ಮೇಲೆ ಆಸೆ ಇಲ್ಲದ ಅಪೂರ್ವ ಹುಡುಗಿ ಪ್ರಭಾವತಿ. ಯಾವ ಸೊಗಸು ಸಿಂಗಾರವೂ ಬೇಕಿಲ್ಲದೆ ಸದಾ ಏನಾದರೂ ಕೆಲಸ ಮಾಡುವ ಆಸೆ. ಆಳುಗಳಿದ್ದರೂ ಪ್ರಭಾ ತಾನೇ ಕಸ ಗುಡಿಸುವುದು, ಹಾಲು ಕರೆಯುವುದು, ತೋಟದ ಕೆಲಸ, ಅಡಿಗೆ ಕೆಲಸ ಎಲ್ಲಕ್ಕೂ ಮುನ್ನುಗ್ಗುವಳು. ಶಾಲೆಗೆ ಹೋಗದೆ ಮನೆಯಲ್ಲೇ ತಂದೆ ಕಲಿಸಿದ ವಿದ್ಯಾಭ್ಯಾಸ, ತಾಯಿ ಕಲಿಸಿದ ಸಂಪ್ರದಾಯ, ಆಚಾರ ವಿಚಾರ ವಾತಾವರಣದಲ್ಲಿ ಬೆಳೆದವಳು.

ಜಯಪ್ರಕಾಶರು ವಿದೇಶಕ್ಕೆ ಪ್ರಯಾಣ ಮಾಡಿದಾಗ, ಪ್ರಭಾವತಿ ದೇಶಸೇವೆಯ ಸಿದ್ಧತೆಗಾಗಿ ಗಾಂಧಿಜಿಯ ಆಶ್ರಮ ಸೇರಿದಳು. ವಿದೇಶದಲ್ಲಿ ಬಿ ಎ. ಮತ್ತು ಎಂ.ಎ. ಪದವೀಧರರಾಗಿ ಜಯಪ್ರಕಾಶರು ವಿಜ್ಞಾನ, ಸಮಾಜ ಶಾಸ್ತ್ರ. ಗಣಿತ ಮತ್ತು ಅನೇಕ ಕಲಾ ವಿಭಾಗಗಳ ವಿಷಯಗಳನ್ನು ಅಭ್ಯಸಿಸಿ ವಿದ್ವತ್ ಭಂಡಾರವಾದರೆ, ಪ್ರಭಾವತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಸ್ವದೇಶದಲ್ಲಿ ಸ್ವದೇಶೀ ಚಳವಳಿಗೆ ಬೇಕಾದ ಸರಳತೆ ಸಹಿಷ್ಣುತೆ, ಸಮಾಜದರ್ಶನದ ಶಿಕ್ಷಣ ಪಡೆದರು. ಜ್ಞಾನಕೇಸರಿಯ ಗಾಂಭೀರ್ಯ ಜಯಪ್ರಕಾಶರಲ್ಲಿ ಜ್ವಲಿಸಿದರೆ, ಸತ್ಯಮೂರ್ತಿಯಾಗಿ, ಕರ್ತವ್ಯ ತ್ಯಾಗ ಸೇವೆಯ ತ್ರಿಗುಣಗಳ ಗಣೆಯಿಂದ ತೆಗೆದ ಪುಟ ವಿಟ್ಟ ಚಿನ್ನದಂತೆ ಸರಳತೆಯಿಂದ ಪ್ರಭಾ ಪ್ರಕಾಶಿಸಿದರು.

ಭೋಗವಿಲಾಸಕ್ಕೆ ಹೆಸರಾದ ಅಮೆರಿಕಾದಲ್ಲಿದ್ದರೂ ಪರಿಶುದ್ಧ ವಿದ್ಯಾರ್ಥಿ ಜೀವನವನ್ನು ನಡೆಸಿ, ಶೀಲಚಾರಿತ್ರ್ಯದಿಂದ ಎಲ್ಲರಿಂದಲೂ ಪ್ರಶಂಸಿಸಲ್ಪಟ್ಟ ಸ್ಫುರದ್ರೂಪಿ ಜಯಪ್ರಕಾಶರಲ್ಲಿ ವಿದೇಶಿಯರು ಭಾರತದ ನೈತಿಕ ಶಕ್ತಿಯನ್ನು ಕಂಡರು.

ಆಶ್ರಮದ ಕಠಿಣ ಜೀವನ, ಶಿಸ್ತು, ನಿಯಮಗಳನ್ನು ಪ್ರಭಾ ಇಷ್ಟಪಟ್ಟೇ ಒಗ್ಗಿಸಿಕೊಂಡರು. ಮುಂಜಾನೆ ಬೇಗ ಏಳುವುದು, ನೂಲು ತೆಗೆಯುವುದು, ಅಡಿಗೆ ಕೆಲಸ, ಬಟ್ಟೆ ಒಗೆಯುವುದು, ಬಾಪೂರವರ ಸೇವೆ, ಭಗವದ್ಗೀತೆ, ರಾಮಾಯಣ ಪಾಠ ಗಳು ಪ್ರಭಾವತಿಗೆ ಆಸಕ್ತಿಯುತವಾಗಿದ್ದವು. ಬಾಪೂರವರಿಗೆ ಕಾಗದ ಪತ್ರ, ಊಟ ಉಪಚಾರ, ಸ್ನಾನ ಅಚ್ಚುಕಟ್ಟಾಗಿ ನಡೆಯಬೇಕಾಗಿತ್ತು. ಈ ಕೆಲಸವನ್ನು ಪ್ರಭಾ ವಹಿಸಿಕೊಂಡು ಶ್ರದ್ಧೆಯಿಂದ ಭಕ್ತಿಯಿಂದ ಮಾಡುತ್ತಿದ್ದರು. ಪ್ರಭಾಗೆ ಗಾಂಧೀಜಿಯೇ ಮೇಲುಪಂಕ್ತಿ. ಗಾಂಧೀಜಿಯೇ ಗುರು. ಸರಳವಾದ ಬದುಕು, ದೇವರಲ್ಲಿ ಭಕ್ತಿ, ಸೇವೆಯಲ್ಲಿ ಆಸಕ್ತಿ. ಹಣಕಾಸಿನ ಲೆಕ್ಕಾಚಾರ, ಕಾಲ ವ್ಯರ್ಥವಾಗಬಾರದು – ಈ ಮೌಲ್ಯಗಳನ್ನು ಗಾಂಧೀಜಿಯಿಂದ ಪ್ರಭಾ ಕಲಿತರು. ಆಶ್ರಮವಾಸ ಪ್ರಭಾವತಿಗೆ ಹಿತವಾಯಿತು.

ಆಶ್ರಮದಲ್ಲಿ ಚೆನ್ನಾಗಿ ನುರಿತ ಪ್ರಭಾ ಒಂದು ದಿನ ಗಾಂಧೀಜಿಯ ಮುಂದೆ ತನ್ನ ತೀರ್ಮಾನವನ್ನಿಟ್ಟು ಹೀಗೆಂದಳು "ಬಾಪೂ, ದೇಶ ಸೇವೆಗಾಗಿ ನಾನು ಬ್ರಹ್ಮ ಚರ್ಯವನ್ನು ಪಾಲಿಸಬೇಕೆಂದಿದ್ದೇನೆ."

ಈ ಮಾತುಗಳನ್ನು ಕೇಳಿ ಬಾಪೂಗೆ ಸಂತೋಷವೂ ಆಶ್ಚರ್ಯವೂ ಆಯಿತು. ಆದರೂ ನಿರ್ಣಯಕ್ಕೆ ಬರಲು ಪ್ರಭಾ ಒಬ್ಬಳಿಗೇ ಹಕ್ಕಿಲ್ಲವೆಂದೂ ಜಯಪ್ರಕಾಶರು ವಿದೇಶದಿಂದ ಬಂದನಂತರ ತೀರ್ಮಾನ ತೆಗೆದುಕೊಳ್ಳಬಹುದೆಂದೂ ಗಾಂಧೀಜಿ ಹೇಳು ತ್ತಿದ್ದರೂ ಪ್ರಭಾವತಿ ತನ್ನ ನಿರ್ಣಯವನ್ನು ಹಿಂದಕ್ಕೆ ತೆಗೆದುಕೊಳ್ಳಲಿಲ್ಲ.

ಗಾಂಧೀಜಿ ಪ್ರಭಾವತಿಯನ್ನು ತಮ್ಮ ಮಾನಸ ಪುತ್ರಿಯೆಂದು ಸ್ವೀಕರಿಸಿದರು. ನಮ್ರಭಾವ, ಸಾತ್ವಿಕತೆ ಮತ್ತು ಪ್ರೀತಿಸ್ವರೂಪಿಣಿಯಾಗಿದ್ದ ಪ್ರಭಾಳಲ್ಲಿ ಧಾರ್ಮಿಕ ತೇಜಸ್ಸನ್ನು ಜಾಗೃತಗೊಳಿಸಿದರು.

ಮಹಾತ್ಮಾಜಿಯವರ ಸೇವೆಯನ್ನು ಮಾಡಲು ಅನೇಕ ಸ್ತ್ರೀಯರು ನಾಮುಂದು ತಾಮುಂದು ಎಂದು ಸ್ಪರ್ಧೆಯ ಭಾವನೆಯಿಂದ ಬರುತ್ತಿದ್ದರು. ಆದರೆ ಪ್ರಭಾವತಿ ಯಲ್ಲಿ ಸ್ಪರ್ಧಾ ಭಾವನೆ ಇರಲಿಲ್ಲ. ಗಾಂಧೀಜಿಯ ಬಗ್ಗೆ ಅವರ ಸೇವೆ ಸ್ವಾಭಾವಿಕ ವಾಗಿತ್ತು. ಮೂಕವಾಗಿತ್ತು. ಗಾಂಧೀಜಿಯನ್ನು ಉಪಚರಿಸುತ್ತಾ ಕಸ್ತೂರಿ ಬಾ ರವರನ್ನು ಪ್ರಭಾ ಮರೆಯುತ್ತಿರಲಿಲ್ಲ. ಈ ನಿಸ್ಪೃಹ ಸೇವೆಯನ್ನು ಚೆನ್ನಾಗಿ ಅರಿತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಬಾರವರು ಆಗಾಖಾನ್ ಅರಮನೆಯ ಸೆರೆವಾಸದಲ್ಲಿದ್ದಾಗ ಮರಣಾಂತಿಕ ಖಾಯಿಲೆ ಬಿದ್ದಾಗ ಪ್ರಭಾರವರನ್ನೇ ಸೇವೆಗೆ ಕರೆಯಿಸಿಕೊಂಡರು. ಭಾರತೀಯ ನಾರಿತ್ವದ ಸೌಜನ್ಯತೆ ಇವರಲ್ಲಿ ತಾನಾಗಿ ಕಾಣುತ್ತಿತ್ತು.

ಶಾಂತ ಹಾಗೂ ಅಕೃತ್ರಿಮ ಸ್ವಭಾವದಿಂದ ಕೂಡಿದ ಪ್ರಸನ್ನ ಹೃದಯಿ ಪ್ರಭಾವತೀ - ಎಂದು ರಾಷ್ಟ್ರನಾಯಕರು ಅವರನ್ನು ವಿವರಿಸಿದ್ದಾರೆ. ಶ್ರೀ ಜೆ. ಬಿ. ಕೃಪಲಾನಿ ಪ್ರಭಾ ಬಗ್ಗೆ ಹೀಗೆ ಹೇಳಿದ್ದಾರೆ, "ಅತ್ಯಂತ ಸರಳ ಜೀವನ ನಡೆಸಿದರು. ಶೃಂಗಾರ ಅಥವ ವಸ್ತ್ರಾಭರಣಗಳ ಆಕರ್ಷಣೆ ಅವರಿಗೆ ಎಂದೂ ಉಂಟಾಗಲಿಲ್ಲ. ಗಾಂಧೀ ಆಶ್ರಮದ ಸದಸ್ಯೆಯಾಗಿ, ಆಗಾಖಾನ್ ಅರಮನೆಯ ಬಂದೀಖಾನೆಯ ಗಾಂಧೀಜೀ ಸಹಯೋಗಿನಿಯಾಗಿ, ಜಯಪ್ರಕಾಶರ ಜೀವನಸಂಗಾತಿಯಾಗಿ – ಅವರ ಪ್ರತಿಯೊಂದು ರೂಪದಲ್ಲೂ ಇದ್ದ ಪ್ರಮುಖ ಗುಣ, ಭಕ್ತಿ."

ಪ್ರಭಾ ಗಾಂಧೀವಾದೀ ಕ್ರಾಂತಿಯ ಶಿಶುವಾಗಿದ್ದರು. ಕ್ರಾಂತಿಯ ವಿಶೇಷ ಗುಣವನ್ನು ತಮ್ಮ ಅಪೂರ್ವ ಶಕ್ತಿಯಿಂದ ಸಾಧಿಸಿದ್ದರು. ಚಿಕ್ಕ ವಯಸ್ಸಿಂದಲೇ ಸ್ವತಃ ನಿರ್ಣಯ ತೆಗೆದುಕೊಳ್ಳುವ ದೃಢತೆಯುಳ್ಳವರಾಗಿದ್ದರು. ತನ್ನ ಆತ್ಮಸಂಕಲ್ಪದಿಂದ ಪ್ರೇರಿತಳಾದ ಪ್ರಭಾವತಿಯನ್ನು ಉತ್ತಮ ಸೇವೆಗೆ ಸಿದ್ಧಗೊಳಿಸಿದವರು ಗಾಂಧೀಜಿ.

ವಿದೇಶದಲ್ಲಿ ಏಳು ವರ್ಷವಿದ್ದು ಜಯಪ್ರಕಾಶ್ ಭಾರತಕ್ಕೆ ಬಂದರು. ಈ ವೇಳೆಗೆ ಸರಿಯಾಗಿ ಭಾರತದಲ್ಲಿ ಸ್ವಾತಂತ್ರ್ಯದ ಕಿಡಿ ಸಿಡಿದಿತ್ತು...ದೇಶಕ್ಕಾಗಿ ಬಲಿದಾನ ಮಾಡಲು ಸಹಸ್ರಾರು ಜನ ಸಿದ್ಧರಾಗಿದ್ದರು. ಕೋಟಿ ಕಂಠಗಳಿಂದ ಕೇಳಿಬರುತ್ತಿದ್ದ ಸ್ವರಾಜ್ಯ ಘೋಷಣೆಗಳಿಂದ ಭಾರತ ವಾಯುಮಂಡಲ ತುಂಬಿಹೋಗಿತ್ತು. ಇದೇ ಸಮಯದಲ್ಲಿ ಬಿಹಾರಿನ ಮೂಂಗೇರ್‌ರಲ್ಲಿ ರಾಜಕೀಯ ಸಮ್ಮೇಳನ ನಡೆಯಿತು. ಬಾಬು ರಾಜೇಂದ್ರಪ್ರಸಾದರು ಅಧ್ಯಕ್ಷತೆ ವಹಿಸಿದ್ದರು. ಅಲ್ಲದೆ, ಬಾರ್ಡೋಲಿ ಸತ್ಯಾಗ್ರಹದಲ್ಲಿ ವಿಜಯ ದುಂದುಭಿ ಮೊಳಗಿ ಬ್ರಿಟಿಷ್ ಸಾಮ್ರಾಜ್ಯದ ಅಡಿಪಾಯವನ್ನು ಅಲುಗಿಸಿದ ಸರ್ದಾರ್ ವಲ್ಲಭಾಯಿ ಪಟೇಲರೂ ಆಗಮಿಸಿದ್ದರು. ಪೂರ್ಣ ಸ್ವಾತಂತ್ರ್ಯಕ್ಕಾಗಿ ಕರೆ ನೀಡುವ ನಿರ್ಣಯಕ್ಕಾಗಿ ಈ ಸಮ್ಮೇಳನ ಸೇರಿತ್ತು. ಜಯಪ್ರಕಾಶರೂ ಹೋಗಿದ್ದರು. ಭಾವೋದ್ರೇಕಕ್ಕೆ ಮಾರುಹೋಗದ ಜಯಪ್ರಕಾಶರು ಈ ಸಮ್ಮೇಳನದಿಂದ ಪ್ರಭಾವಿತರಾಗಲಿಲ್ಲ.

ಸಮ್ಮೇಳನದ ನಂತರ ಜಯಪ್ರಕಾಶರು ನೇರಾಗಿ ವಾರ್ಧಾದಲ್ಲಿದ್ದ ಗಾಂಧೀ ಆಶ್ರಮಕ್ಕೆ ಹೋದರು. ಪತ್ನಿ ಪ್ರಭಾವತಿಯನ್ನು ಅಲ್ಲಿ ಕಂಡರು. ಏಳು ವರ್ಷ ಗಾಂಧೀಜಿ ಜೊತೆಯಲ್ಲಿದ್ದ ಪ್ರಭಾವತಿಯ ಮುಖದ ತೇಜಸ್ಸು ಪವಿತ್ರ ಚಾರಿತ್ರ್ಯದಿಂದ ಇಮ್ಮಡಿಸಿತ್ತು.

"ಸೇವಾಗ್ರಾಮದ ಋಷಿಯ ಸಾನ್ನಿಧ್ಯದಿಂದ ಪುನೀತಳಾಗಿದ್ದಳು" ಎಂದು ಪಿ. ವೆಂಕೋಬರಾವ್ ಬರೆದಿದ್ದಾರೆ. ಜಯಪ್ರಕಾಶರು ಭಾರತಕ್ಕೆ ಬಂದಕೂಡಲೇ ಬಾಪೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಸಾನ್ನಿಧ್ಯದಲ್ಲಿರಬೇಕೆಂದು ಪ್ರಭಾವತಿಯ ಆಕಾಂಕ್ಷೆ. ಆದರೆ ಜಯಪ್ರಕಾಶರಿಗೆ ಗಾಂಧೀ ವಾದದಲ್ಲಿ ವಿಶ್ವಾಸವಿರಲಿಲ್ಲ. ದೇವರು, ಧರ್ಮ, ಪ್ರಾರ್ಥನೆ, ಸರಳತೆ, ಆಶ್ರಮವಾಸ, ನೂಲುವುದು ಇವೆಲ್ಲಾ ದೇಶೋದ್ಧಾರಕ್ಕೆ ಸಹಾಯವಾಗಲಾರವು. ಬಡವಬಲ್ಲಿದರ ನಡುವೆ ಹೋರಾಟ ನಡೆಯಬೇಕೆಂದು ಪ್ರಭಾವತಿಯೊಡನೆ ವಾದಿಸಿದರು. ಕಾರ್ಲ್ ಮಾರ್ಕ್ಸ್ ತತ್ವದಿಂದ ಪ್ರಚೋದಿತರಾಗಿ ಜಯಪ್ರಕಾಶರು ಅತಿ ಉಗ್ರ ಕ್ರಾಂತಿಕಾರಿ ಯಾಗಿದ್ದರು. ಗಾಂಧೀ ತತ್ವದಿಂದ ಭಿನ್ನವಾಗಿದ್ದರು. ಆದರೂ ಮಹಾನ್ ಭವಿಷ್ಯ ಜಯಪ್ರಕಾಶರನ್ನು ನಿರೀಕ್ಷಿಸುತ್ತಿತ್ತು.

ಪ್ರಭಾವತಿ ಮಾತ್ರ ತಮ್ಮ ನಿರ್ಣಯವನ್ನು ಬದಲಾಯಿಸಲಿಲ್ಲ. ಗಾಂಧೀಜಿ ಯವರೊಂದಿಗೇ ಕೆಲಸ ಮಾಡುವ ದೃಢಸಂಕಲ್ಪ ಕೈಗೊಂಡರು. ಈ ಕಾರಣದಿಂದಾ ಗಿಯೇ ಗಾಂಧಿ ಮಾರ್ಗದಲ್ಲಿ ಸ್ಥಿರವಾಗಿ ಉಳಿದರು. ಅಷ್ಟು ಮಾತ್ರವಲ್ಲ ಜಯ ಪ್ರಕಾಶರನ್ನು ಗಾಂಧೀಜಿ ಮಾರ್ಗದಲ್ಲಿ ಕರೆದೊಯ್ಯಲೂ ಸಮರ್ಥರಾದರು. ಜಯ ಪ್ರಕಾಶರು ಸಶಸ್ತ್ರ ಕ್ರಾಂತಿಯನ್ನು ಪರಿತ್ಯಜಿಸಿ ಸರ್ವೋದಯ ಚಳವಳಿಯನ್ನು ಪ್ರವೇಶಿಸಿದರು. ಇದು ಖಂಡಿತವಾಗಿ ಪ್ರಭಾವತಿಯವರ ವಿಜಯವೇ ಆಗಿತು.

ತನ್ನನ್ನು ದೇಶಕ್ಕೆ ನಿವೇದಿಸಿಕೊಳ್ಳುವುದಲ್ಲದೆ, ದೇಶಭಕ್ತರಾಗಿದ್ದರೂ ತನ್ನ ಪತಿ ಸ್ವಾತಂತ್ರ್ಯ ಸಮರದಲ್ಲಿ ತಪ್ಪು ಹೆಜ್ಜೆ ಹಾಕುತ್ತಿದ್ದಾರೆಂದು ಚಿಂತಿಸಿ, ತನ್ನ ಚಿಂತನ ಧಾರೆಯಿಂದಲೇ ಪತಿಯನ್ನು ಅಹಿಂಸೆಯ ಮಾರ್ಗಕ್ಕೆ ಸೆಳೆದುಕೊಂಡರು. ಪ್ರಭಾವತಿ ಯವರ ಈ ಸಾಧನೆ ಸ್ವಾತಂತ್ರ್ಯ ಚಳವಳಿಗೆ ಮಹಾನ್ ಕೊಡುಗೆಯಾಯಿತು.

ತನ್ನ ಮಾರ್ಗಕ್ಕೇ ಪತಿಯನ್ನು ಆಕರ್ಷಿಸಿದುದಲ್ಲದೆ ಮತ್ತೊಂದು ತ್ಯಾಗ ಮಾರ್ಗಕ್ಕೂ ತನ್ನಂತೆಯೇ ಸಿದ್ಧರಾಗುವಂತೆ ಮಾಡಿದರು. ಇದೇ ಬ್ರಹ್ಮಚರ್ಯ ದೀಕ್ಷೆ. ಏಳು ವರ್ಷ ವಿದೇಶದಲ್ಲಿ ಕಷ್ಟಪಟ್ಟು ವಿದ್ಯಾರ್ಜನೆ ಗಳಿಸಿ ಪತ್ನಿಯನ್ನು ಎಂದಿಗೆ ಕಂಡೇನು ಎಂದು ತವಕಿಸಿ ಬಂದು ಭಾರತ ಸೇರಿದ ಜಯಪ್ರಕಾಶರಿಗೆ ಕಾದಿದ್ದ ಅಸಂತೋಷ ವಿಷಯ—ತನ್ನ ಪತ್ನಿಯು ದಾಂಪತ್ಯ ಜೀವನ ತ್ಯಜಿಸಿ ಸೇವಾಗ್ರಾಮ ಸೇರಿದುದು. ಈ ವಿಷಯ ಮೊದಲು ಒಪ್ಪಿಗೆಯಾಗದಿದ್ದರೂ ಪ್ರಭಾವತಿಯ ಪವಿತ್ರ ವ್ಯಕ್ತಿತ್ವ ಗಾಂಧೀಜಿಯ ಪ್ರೇಮ ವಾತ್ಸಲ್ಯ ಜಯಪ್ರಕಾಶರನ್ನು ಬೆರಗುಗೊಳಿಸಿತು. ಅವರ ಶಿಸ್ತಿನ ಜೀವನದಿಂದ ಮುಗ್ಧರಾದರು.

ಭಾರತೀಯರ ಕಣ್ಮಣಿಯಾಗಿದ್ದ ಈ ಮಹಾ ತಪಸ್ವಿ ಗಾಂಧಿ ತನ್ನ ಅಮೂಲ್ಯ ವೇಳೆಯಲ್ಲಿ ಬಿಡುವು ಮಾಡಿಕೊಂಡು ಜಯಪ್ರಕಾಶರನ್ನು ಅತ್ಯಂತ ಆದರದಿಂದ ನೋಡಿಕೊಳ್ಳುತ್ತಾ ಆಶ್ರಮದ ಸಣ್ಣ ಸಣ್ಣ ಕೆಲಸವನ್ನು ಬಿಡದೆ ಖುದ್ದಾಗಿ ನಡೆಸು ತ್ತಿದ್ದುದು ಜಯಪ್ರಕಾಶರಿಗೆ ಆಶ್ಚರ್ಯವಾಯಿತು. ರಾಷ್ಟ್ರದ ಅಮೂಲ್ಯ ಸಮಯ ವನ್ನು ತನಗಾಗಿ ಕಳೆದರು ಎಂಬುದನ್ನು ಜಯಪ್ರಕಾಶರು ಮರೆಯಲಿಲ್ಲ. ಈ ಋಣ ವನ್ನು ಜಯಪ್ರಕಾಶರು ಮುಂದೆ ತೀರಿಸದೆ ಇರಲಿಲ್ಲ. ತಮ್ಮ ಜೀವಿತವನ್ನೇ ದೇಶ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಕ್ಕಾಗಿ ಮಾಡಿಪ್ಪಾಗಿಟ್ಟರು. ಪತ್ನಿಯ ಅಪೇಕ್ಷೆಯನ್ನು ಸಫಲಗೊಳಿಸಿ ಬ್ರಹ್ಮಚರ್ಯ ವನ್ನು ಶಿರಸಾವಹಿಸಿದರು.

ಗಾಂಧೀಜಿಯ ಜೊತೆಯಲ್ಲಿ ಲಾಹೋರ್ ಕಾಂಗ್ರೆಸ್ ಅಧಿವೇಶನಕ್ಕೆ ಹೋದರು. ಆಗಸ್ಟ್ ಕ್ರಾಂತಿಯ ವೀರನೆಂದು ಪ್ರಖ್ಯಾತರಾದರು. ಗಾಂಧೀಜಿಯ ಅದ್ಭುತ ಶಕ್ತಿ, ಜನತೆಯ ಉತ್ಸಾಹ ಜಯಪ್ರಕಾಶರ ಹೃದಯದಲ್ಲಿ ಅಚ್ಚೊತ್ತಿತು. ಅಂದಿನಿಂದ ಜವಾಹರ್‌ಲಾಲ್ ನೆಹರೂರವರ ಪರಿವಾರದಲ್ಲಿ ಸೇರಿ ಕ್ರಿಯಾಸಕ್ತರಾದರು. ಜಯ ಪ್ರಕಾಶರ ಕಾರ್ಯತನ್ಮಯತೆ ಜವಾಹರರನ್ನು ಆಕರ್ಷಿಸಿತು. ಸ್ವಾತಂತ್ರ್ಯ ಆಂದೋ ಲನ ಆಗಸದಲ್ಲಿ ನವತಾರೆಯಾಗಿ ಶೋಭಿಸಿದರು. ಮಾರು ವೇಷದಲ್ಲಿ ನಿರ್ಭಯರಾಗಿ ಸುತ್ತಾಡಿ ಸಂಘಟನೆಗೆ ಸಲಹೆ ಮತ್ತು ಮಾರ್ಗದರ್ಶನ ಕೊಡುತ್ತಾ ಆಂದೋಲನಕ್ಕೆ ಬೆನ್ನೆಲುಬಾದರು. ಜಯಪ್ರಕಾಶರ ದಕ್ಷತೆ ಮತ್ತು ಬುದ್ಧಿವಂತಿಕೆ ಎಲ್ಲರನ್ನೂ ಚಕಿತ ಗೊಳಿಸುತ್ತಿತ್ತು. ಬ್ರಿಟಿಷ್ ಸರ್ಕಾರ ಇವರನ್ನು "ಕಾಂಗ್ರೆಸ್ ಬ್ರೈನ್" ಕಾಂಗ್ರೆಸ್ ಮೆದುಳು ಎಂದೇ ಕರೆಯುತ್ತಿತ್ತು. ನೆಹರೂ ಮತ್ತು ಜಯಪ್ರಕಾಶ್ ಕಾಂಗ್ರೆಸ್ ಕೆಲಸಕ್ಕೆ ಅಣ್ಣತಮ್ಮಂದಿರಾದರು, ಹಾಗೆಯೇ ಕಮಲಾ ನೆಹರು ಮತ್ತು ಪ್ರಭಾವತಿ ಅಕ್ಕತಂಗಿಯರಾದರು.

ಕಮಲಾ ಮತ್ತು ಪ್ರಭಾರವರ ಅನ್ಯೋನ್ಯತೆ ಸ್ವಾತಂತ್ರ್ಯ ಚಳವಳಿಯ ಹೋರಾಟಕ್ಕೆ ಸ್ಫೂರ್ತಿದಾಯಕವಾಗಿತ್ತು. ಇಬ್ಬರೂ ಮೆರವಣಿಗೆ ಹೊರಡಿಸಿ ಜೈಕಾರ ಮಾಡುತ್ತಾ ಹೊರಟರೆಂದರೆ ತಂಡ ತಂಡವಾಗಿ ಮಹಿಳೆಯರು ಇವರಿಬ್ಬರನ್ನೂ ಅನುಸರಿಸಿ ಹೊರಡುತ್ತಿದ್ದರು. ಎಷ್ಟೋ ದಿನಗಳು ಬೆಳಿಗ್ಗೆ ಹೊರಟರೆ ಮಧ್ಯಾಹ್ನ ಎರಡು ಗಂಟೆಯಾದರೂ ಊಟಕ್ಕೆ ಮನೆಗೆ ಬರುತ್ತಿರಲಿಲ್ಲ. ಇದನ್ನು ಕಂಡು ಕಮಲಾರವರ ಮಾವಂದಿರಾದ ಮೋತಿಲಾಲ್ ನೆಹರು ಅಧಿಕಾರವಾಣಿಯಿಂದ ಕೋಪಿಸಿಕೊಳ್ಳುತ್ತಿದ್ದರು. "ಉರಿಬಿಸಿಲು ಹೆಣ್ಣು ಮಕ್ಕಳು ಇನ್ನೂ ಮನೆಗೆ ಬರ ಲಿಲ್ಲವಲ್ಲಾ, ಎರಡು ಗಂಟೆಯಾದರೂ ಊಟವಿಲ್ಲ" ಎನ್ನುತ್ತಾ ಪುನಃ ಹೋಗಕೂಡ ದೆಂದು ಆಜ್ಞೆ ಮಾಡುತ್ತಿದ್ದರು. ಆದ್ದರಿಂದ ಕಮಲಾ ಮತ್ತು ಪ್ರಭಾ ಮೋತಿ ಲಾಲರ ಕಣ್ಣು ತಪ್ಪಿಸಿ ಹಿತ್ತಲಬಾಗಿಲಿನಿಂದ ನುಸುಳಿ ಮಧ್ಯಾಹ್ನದ ಉರಿಬಿಸಿಲಿನಲ್ಲೇ ಹೊರಟು ಮೆರವಣಿಗೆ ಸೇರುತ್ತಿದ್ದರು.

೧೯೩೨ರ ಫೆಬ್ರವರಿ ಚಳುವಳಿ ಅತಿ ಬಿರುಸಾಗಿ ನಡೆಯಿತು. ಈ ಚಳುವಳಿಯ ಫಲವಾಗಿ ಪ್ರಭಾವತಿಯನ್ನು ಸೆರೆಹಿಡಿದರು. ಪ್ರಕಾಶರೂ ಸೆರೆಯಾದರು. ಪ್ರಭಾವತಿಗೆ ಕಠಿಣ ಸಜಾ ವಿಧಿಸಿ ಲಕ್ನೋ ಜೈಲಿನಲ್ಲಿಟ್ಟರು. ಜೈಲಿನಲ್ಲೂ ಪ್ರಭಾ ಆಶ್ರಮದಂತೆಯೇ ಕಾರ್ಯಕ್ರಮ ಹಾಕಿಕೊಂಡರು. ಪ್ರಾರ್ಥನೆ, ನೂಲುವುದು, ಗೀತಾ ಪಠನ, ರಾಮಾಯಣ ಓದುವುದು. ಮಧ್ಯೆ ಮಧ್ಯೆ ಗಾಂಧೀಜಿ ನೆನಪು ಬರು ತ್ತಿತ್ತು. ನಿಂತಲ್ಲಿ ಕೂತಲ್ಲಿ ಪತಿಯ ಯೋಚನೆ ಬರುತ್ತಿತ್ತು. ಜೈಲಿನ ಊಟ ಸರಿಯಿಲ್ಲದೆ ಪ್ರಭಾ ಖಾಯಿಲೆ ಮಲಗಿದರು. ಬಾಪುವಿಂದ ಬರುತ್ತಿದ್ದ ಸಮಾಧಾನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಪತ್ರಗಳು ಚೈತನ್ಯ ಕೊಡುತ್ತಿದ್ದವು. ಹದಿನಾರು ತಿಂಗಳ ಜೈಲುವಾಸದ ನಂತರ ಪ್ರಭಾವತಿಗೆ ಬಿಡುಗಡೆಯಾಯಿತು.

ಜಯಪ್ರಕಾಶರು ದೆಹಲಿ ಜೈಲಿನಲ್ಲಿದ್ದಾಗ ನಡೆದ ಒಂದು ಘಟನೆ ಸ್ಮರಣೀಯ. ಜಯಪ್ರಕಾಶರನ್ನು ನೋಡಲು ಪ್ರಭಾ ಜೈಲಿಗೆ ಹೋದರು, ಪತ್ರಗಳನ್ನು ಗುಪ್ತ ವಾಗಿ ಹೊರಗೆ ಕಳುಹಿಸಿಕೊಡುತ್ತಿದ್ದುದು ಜಯಪ್ರಕಾಶರ ಪದ್ಧತಿ, ಈ ಕೆಲಸದಲ್ಲಿ ಜಯಪ್ರಕಾಶ್ ಬಹಳ ನಿಪುಣರು ಪ್ರಭಾವತಿ ತನ್ನನ್ನು ನೋಡಲು ಬಂದಾಗ ಇದೇ ಕೆಲಸ ಮಾಡಲು ಪ್ರಯತ್ನಿಸಿದರು. ಆದರೆ ಕಪಟ, ಮೋಸ ಯಾವುದೂ ಪ್ರಭಾವತಿಗೆ ಒಗ್ಗದು, ಗಾಂಧೀಜಿಯ ಆಶ್ರಮದಲ್ಲಿ ಬೆಳೆದ ಧೀರ ರಮಣಿ. ಬಹಿರಂಗವಾದ ಪ್ರತ್ಯಕ್ಷ ವ್ಯವಹಾರದಲ್ಲೇ ಆಕೆಗೆ ವಿಶ್ವಾಸ. ಅದೇ ಅವರ ಜೀವಂತ ಮಂತ್ರವಾಗಿತ್ತು. ಆದರೆ ಜಯಪ್ರಕಾಶರ ಜೀವನ ಸರಣಿಯೇ ಬೇರೆ. ಕಪಟ ಸರ್ಕಾರಕ್ಕೆ ಗುಪ್ತ ನೀತಿಯೇ ಸರಿ ಎನ್ನುತ್ತಿದ್ದರು. ಹೀಗಾಗಿ ತಮ್ಮನ್ನು ಭೇಟಿಯಾಗಲು ಬಂದ ಪ್ರಭಾವತಿಯನ್ನು ಪಕ್ಕದಲ್ಲಿ ಕುಳಿತುಕೊಳ್ಳುವಂತೆ ಹೇಳಿ ಅವರೊಡನೆ ಮಾತಾಡುತ್ತಾ ಮಾತಾಡುತ್ತಾ ತಮ್ಮನ್ನೇ ಗಮನಿಸುತ್ತಿದ್ದ ಸಿ.ಐ.ಡಿ.ಗೆ ತಿಳಿಯದಂತೆ ಒಂದು ಕಂತೆ ಕಾಗದದ ಕಟ್ಟನ್ನು ಪ್ರಭಾ ಹತ್ತಿರ ಮೆಲ್ಲನೆ ಸರಿಸಿದರು, ಪತಿಯ ಈ ಸಾಧನೆ ಪ್ರಭಾಗೆ ಇಷ್ಟವಾಗಲಿಲ್ಲ, ಆ ಕಾಗದದ ಕಟ್ಟನ್ನು ಮುಟ್ಟದೆ ಸುಮ್ಮನಿದ್ದರು. ಇದರಿಂದ ಜಯಪ್ರಕಾಶರಿಗೆ ಬಹಳ ಕೋಪ ಬಂತು. ಪತಿಯ ಕೃತ್ಯದಿಂದ ಪ್ರಭಾವತಿಯೂ ಕೋಪಗೊಂಡರು. ಕಾಗದದ ಕಟ್ಟು ಸಿ.ಐ.ಡಿ. ಕಣ್ಣಿಗೆ ಬಿದ್ದು ಜಯಪ್ರಕಾಶರನ್ನು ವಿಚಾರಣೆಗೆ ಗುರಿಮಾಡಿದರು.

"ನಿಮ್ಮಂತಹವರು ಇಂತಹ ಕೆಲಸ ಮಾಡಬಹುದೇ? ನಿಮಗೆ ದುಃಖವೆನ್ನಿಸುವುದಿಲ್ಲವೇ ?" ಎಂದು ಅಧಿಕಾರಿ ಕೇಳಿದಾಗ.

"ನನಗೆ ಇಂತಹ ಕೆಲಸಕ್ಕಾಗಿ ಏನೂ ಅನ್ನಿಸುವುದಿಲ್ಲ. ಆದರೆ, ಇದೇ ಪ್ರಥಮ ಬಾರಿ ನನ್ನ ಜೀವನದಲ್ಲಿ ವಿಫಲಗೊಂಡಿರುವುದೆಂದು ದುಃಖವಾಗುತ್ತದೆ. ಸಮಯ ಸಿಕ್ಕಾಗ ಮತ್ತೆ ನಾನು ಇದೇ ಕೆಲಸವನ್ನು ಮಾಡದೇ ಬಿಡುವುದಿಲ್ಲ" ಎಂದರು ಜಯ ಪ್ರಕಾಶರು, ಅಧಿಕಾರಿ ತಣ್ಣಗಾದ.

ಈ ಕಡೆ ೧೯೪೨ರ ಮಹಾಹೋರಾಟದಲ್ಲಿ ಪ್ರಭಾವತಿ ಪಾಟ್ನಾದಲ್ಲಿ ಮಹಿಳೆ ಯರನ್ನು ಗುಂಪುಗೂಡಿಸಿ ಚಳವಳಿ ನಡೆಸಿದರು. ವಂದೇ ಮಾತರಂ ಕೂಗು ಆಕಾಶ ವನ್ನು ಮುಟ್ಟುತ್ತಿತ್ತು. ಸೈನಿಕರು ಮಹಿಳೆಯರ ಈ ಮೆರವಣಿಗೆಯನ್ನು ಸುತ್ತು ಗಟ್ಟಿ ಎಲ್ಲರನ್ನೂ ಹಿಡಿದು ಜೈಲಿಗೆ ಹಾಕಿದರು. ಪ್ರಭಾವತಿಯನ್ನು ಭಾಗಲ್‌ಪುರದ ಜೈಲಿನಲ್ಲಿಟ್ಟರು, ಪ್ರಭಾವತಿಗೆ ಜೈಲಿನಲ್ಲಿದ್ದಾಗಲೂ ಸದಾ ದೇಶದ ಚಿಂತೆ. ತನ್ನನ್ನು ನೋಡಲು ಬರುತ್ತಿದ್ದ ಬಂಧುಬಳಗದವರೊಡನೆ ಸ್ನೇಹಿತರೊಡನೆ ಚಳವಳಿಯ ವಿಷಯವನ್ನೇ ಮಾತಾಡುತ್ತಿದ್ದರು. ಚಳವಳಿಯನ್ನು ಹೆಚ್ಚು ಮಾಡಲು ಸಲಹೆ ಕೊಡುತ್ತಿದ್ದರು. ಅದರಂತೆ ಪ್ರಭಾವತಿಯನ್ನು ನೋಡಲು ಹೋದ ಜನರೆಲ್ಲಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ವ್ಯಸನಪಡುವುದಕ್ಕೆ ಬದಲಾಗಿ ಹೆಚ್ಚಿನ ಉತ್ಸಾಹದಿಂದ ಸತ್ಯಾಗ್ರಹಕ್ಕೆ ಬೆಂಬಲ ಕೊಡುತ್ತಿದ್ದರು. ಇದು ಪ್ರಭಾವತಿಯ ಪ್ರಭಾವವೇ.

ಪ್ರಭಾ ಸೆರೆಯಲ್ಲಿದ್ದಾಗಲೇ ಕಸ್ತೂರಿಬಾರವರೂ ಆಗಾಖಾನ್ ಅರಮನೆಯಲ್ಲಿ ಬಂಧಿಸಲ್ಪಟ್ಟು ಖಾಯಿಲೆಯಿಂದ ನರಳುತ್ತಿದ್ದರು. "ನನ್ನ ಮಗಳು ಪ್ರಭಾಳನ್ನು ನೋಡಬೇಕು" ಎಂದು ಹಂಬಲಿಸತೊಡಗಿದರು.

"ನಾವು ಸೆರೆಯಾಳು, ನಮಗೆ ಬೇಕಾದ್ದನ್ನು ಪಡೆಯಲು ಸಾಧ್ಯವೇ?" ಎಂದು ಗಾಂಧೀಜಿ ಬಾರವರನ್ನು ಎಷ್ಟು ಸಮಾಧಾನಪಡಿಸಿದರೂ ಬಾರವರು ಪ್ರಭಾವತಿ ತಮ್ಮ ಹತ್ತಿರ ಇರಬೇಕೆಂದು ಇಚ್ಛಿಸಿದರು. ಸರ್ಕಾರವನ್ನು ಕೇಳಿಕೊಂಡಾಗ ಪೊಲೀಸ್ ಪಹರೆಯಲ್ಲೇ ಪ್ರಭಾವತಿಯನ್ನು ಕರೆತಂದರು. ಪ್ರಭಾವತಿ ತಮ್ಮ ಪ್ರೀತಿಯ ಬಾಗೆ ಕೊನೆಯ ಉಪಚಾರ ಮಾಡಿದರು. ಶಿವರಾತ್ರಿಯ ದಿನ ಬಾ ನಿಧನರಾದರು. ತಾಯಿಯನ್ನು ಕಳೆದುಕೊಂಡ ಮಗುವಿನಂತೆ ಪ್ರಭಾ ಗೋಳಾಡಿದರು. ೧೯೪೭ ಆಗಸ್ಟ್ ಹದಿನೈದು ಭಾರತ ಸ್ವತಂತ್ರವಾಯಿತು. ಆದರೆ ದೇಶದಲ್ಲೆಲ್ಲಾ ಕೋಮುವಾದಿ ಜಗಳ ಪ್ರಾರಂಭವಾಗಿ ಎಲ್ಲೆಲ್ಲೂ ಹಿಂಸೆಯಾಗುತ್ತಿರುವುದನ್ನು ಕೇಳಿ ಗಾಂಧೀಜಿ ಬಹಳ ಸಂಕಟಪಟ್ಟು ಬಂಗಾಳ ಬಿಹಾರ ದೆಹಲಿಗಳಲ್ಲಿ ಓಡಾಡಿ ಶಾಂತಿ ಸ್ಥಾಪನೆಗೆ ಪ್ರಯತ್ನಪಟ್ಟರು. ಕೊನೆಗೆ ೧೯೪೮ರ ಜನವರಿ ಉಪವಾಸವನ್ನು ಹಿಡಿದರು. ಪ್ರಭಾ ಬಾಪೂ ಜೊತೆಯಲ್ಲೇ ಇದ್ದು ಸೇವೆ ಮಾಡಿದಳು. ಉಪವಾಸ ಮುಗಿದ ಮೇಲೆ ಬಾಪೂ ಪ್ರಭಾಳನ್ನು ಜಯಪ್ರಕಾಶರ ಸೇವೆ ಮಾಡಲು ಕಳುಹಿಸಿದರು. ಪಾಟ್ನಾಕ್ಕೆ ಬಂದ ಮಾರನೆಯ ದಿನ ಬಾಪೂ ಗುಂಡಿನೇಟಿಗೆ ಬಲಿಯಾದರೆಂದು ಕೇಳಿದ ಪ್ರಭಾಗೆ ಸಿಡಿಲು ಬಡಿದಂತಾಯಿತು. ಬಾಪುವಿನ ಕೊನೆಯ ದರ್ಶನಕ್ಕಾಗಿ ದೆಹಲಿಗೆ ಧಾವಿಸಿದರು. ದೆಹಲಿ ತಲುಪುವ ವೇಳೆಗೆ ಬಾಪುವಿನ ಚಿತೆಯ ದರ್ಶನವಾಯಿತು ಅಷ್ಟೆ. ತಂದೆಯನ್ನು ಕಳೆದುಕೊಂಡಂತೆ ಪ್ರಭಾ ಗೋಳಾಡಿದರು. ಇನ್ನು ಜಯಪ್ರಕಾಶರ ಹಿಂದೆ ಹೊರಟರು ಪ್ರಭಾ. ಬಾಪುವಿನ ತತ್ತ್ವವನ್ನು ಪಾಲಿಸುವುದೇ ಇಬ್ಬರ ಧ್ಯೇಯವಾಯಿತು.

ಜಯಪ್ರಕಾಶರಿಗೆ ರಾಜಕೀಯ ಓಡಾಟಗಳು ಹೆಚ್ಚಿ ವೇಳೆಗೆ ಸರಿಯಾಗಿ ಊಟ ಉಪಚಾರವಿಲ್ಲದ್ದನ್ನು ಕಂಡು ಪ್ರಭಾ ಪತಿಯ ಯೋಗಕ್ಷೇಮದಲ್ಲಿ ನಿರತರಾದರು. ಪ್ರಭಾವತಿಯ ಸೇವೆ, ಶ್ರದ್ಧೆ ಜಯಪ್ರಕಾಶರನ್ನು ಮೆಚ್ಚಿಸಿತು. ಆಕೆಯ ವಿಚಾರಗಳಿಗೆ ಮನ್ನಣೆ ಕೊಡುತ್ತಾ ಬಂದರು. ಇದೇ ಸಮಯದಲ್ಲಿ ವಿನೋಬಾರವರ ಭೂದಾನ ಯಜ್ಞವೂ ಪ್ರಾರಂಭವಾಯಿತು. ೧೯೫೪ರಲ್ಲಿ ಬೋಧಗಯಾದಲ್ಲಿ ನಡೆದ ಸರ್ವೋದಯ ಸಮ್ಮೇಳನದಲ್ಲಿ ಜಯಪ್ರಕಾಶರು ಎದ್ದು ನಿಂತು, "ಸರ್ವೋದಯ ಸಮಾಜವನ್ನು ಕಟ್ಟುವುದಕ್ಕಾಗಿ ನನ್ನ ಜೀವನವನ್ನೇ ದಾನ ಮಾಡುತ್ತೇನೆ" ಎಂದು ಪ್ರತಿಜ್ಞೆ ಮಾಡಿದರು. ಪ್ರಭಾಗೆ ಈ ಮಾತುಗಳನ್ನು ಕೇಳಿ ಸಂತೋಷ ಉಕ್ಕಿ ಕಣ್ಣೀರು ಧಾರೆಯಾಗಿ ಹರಿಯಿತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



"ಬಾಪೂ ಇದ್ದಾಗಲೇ ಹೀಗಾಗಿದ್ದರೆ ಬಾಪೂಗೆ ಎಷ್ಟು ಶಾಂತಿ ಸಿಗುತ್ತಿತ್ತು!" ಎಂದುಕೊಂಡರು.

ಭೂದಾನ ಕೆಲಸಕ್ಕಾಗಿ ಸತಿಪತಿಯರು ಹಳ್ಳಿಯಿಂದ ಹಳ್ಳಿಗೆ ಪ್ರವಾಸ ಮಾಡಿದರು. ಶ್ರೀರಾಮ ಸೀತೆಯರನ್ನು ಕಂಡಂತೆ ಮಿಥಿಲೆಯ ಜನ ಆನಂದಪಟ್ಟರು. ಸರ್ವೋದಯ ಕೆಲಸಕ್ಕಾಗಿ, ಕೆಲಸಗಾರರಿಗೆ ಶಿಕ್ಷಣ ಕೊಡುವುದಕ್ಕಾಗಿ ಜಯಪ್ರಕಾಶರು ಸೋಬೋದೇವರಾ ಎನ್ನುವ ಒಂದು ಸಣ್ಣಹಳ್ಳಿಯಲ್ಲಿ ಆಶ್ರಮವನ್ನು ಕಟ್ಟಿದರು. ಆಶ್ರಮಕ್ಕೆ ಬಂದವರ ಸೇವೆ ಶುಶ್ರೂಷೆ ಪ್ರಭಾವತಿಯದು, ಯಾರಿಗಾದರೂ ಖಾಯಿಲೆಯಾದರೆ ಪ್ರಭಾವತಿಯ ಉಪಚಾರ ಮಾಡುವುದು. ಎಲ್ಲರ ಕಷ್ಟ ಸುಖವೂ ತನ್ನದೇ ಎಂದು ಸೇವೆ ಮಾಡುತ್ತಿದ್ದ ಪ್ರಭಾವತಿಯನ್ನು ಎಲ್ಲರೂ "ದೀದಿ" (ಚಿಕ್ಕಮ್ಮ) ಎಂದೇ ಕರೆಯುತ್ತಿದ್ದರು. ವಿನೋಬಾರವರನ್ನು ಆಗಾಗ ಕಂಡು ಪ್ರಭಾವತಿ ಸತ್ಯ ಧರ್ಮ ಪ್ರಾರ್ಥನೆ ವಿಚಾರಗಳನ್ನು ತಿಳಿದುಕೊಳ್ಳುತ್ತಿದ್ದರು.

ಸರ್ವೋದಯ ತತ್ವವನ್ನು ಗಾಂಧೀ ವಿಚಾರವನ್ನು ಹೊರದೇಶಗಳಲ್ಲಿಯೂ ಪ್ರಚಾರ ಮಾಡುತ್ತಾ, ಜಯಪ್ರಕಾಶ್ ಮತ್ತು ಪ್ರಭಾವತಿಯರು ಯೂರೋಪು, ಜಪಾನ್, ಅಮೆರಿಕಾ, ಆಸ್ಟ್ರೇಲಿಯಾ ದೇಶಗಳನ್ನು ಸುತ್ತಿ ಸರಳ ಜೀವನ ಸೇವೆಯ ಭಾವವನ್ನು ಆಚರಿಸಿ ಉಪದೇಶಿಸಿದರು.

ಹೀಗೆ ಸುತ್ತಿ ಬರುವಾಗ ನಾಗಾಲ್ಯಾಂಡಿನ ದಂಗೆಕೋರರ ಹಲ್ಲೆಯನ್ನು ಕೇಳಿ ಅಲ್ಲಿ ಶಾಂತಿಯುಂಟು ಮಾಡಲು ಇಬ್ಬರೂ ಅವರ ಮಧ್ಯದಲ್ಲೇ ಇದ್ದು ಅವರ ಮನೆಗಳಿಗೇ ಹೋಗಿ ಅವರ ಕಷ್ಟ ಸುಖಗಳನ್ನು ವಿಚಾರಿಸಿದರು. ಅವರಿಗೆಲ್ಲಾ ಪ್ರಭಾ "ದೀದಿ"ಯೇ ಆದರು.

ಚಂಬಲ್ ಕಣಿವೆಯ ಕಾಡು ಪ್ರದೇಶದ ಡಕಾಯಿತರ ಲೂಟಿ, ಕೊಲೆ, ದರೋಡೆಯನ್ನು ತಪ್ಪಿಸಲು ೧೯೬೦ರಲ್ಲಿ ಅಲ್ಲಿಗೆ ಹೋಗಿ, "ಹಿಂಸೆಯ ಬದುಕು ಬೇಡ, ನೆಮ್ಮದಿಯಾಗಿ ದುಡಿದು, ಜೀವನ ಮಾಡಿ" ಎಂದು ಉಪದೇಶಿಸಿದರು. ಡಕಾಯಿತರು ಶಾಂತಿ ಮಾರ್ಗಕ್ಕೆ ಬರುವುದಾಗಿ ಒಪ್ಪಿಕೊಂಡು ಶರಣಾಗತರಾದರು.

ಬಿಹಾರಿನ ಕ್ಷಾಮ, ಬಂಗ್ಲಾದೇಶದ ಸಮಸ್ಯೆಯೂ ಸೇರಿ ಎಲ್ಲಾ ಕಡೆಯ ಸುತ್ತಾಟದ ಶ್ರಮ ಹೆಚ್ಚಾಗಿ ಜಯಪ್ರಕಾಶ ಮತ್ತು ಪ್ರಭಾವತಿ ಇಬ್ಬರ ಆರೋಗ್ಯವೂ ಕೆಟ್ಟಿತು. ಪ್ರಭಾವತಿಗೆ ಉದರಬಾಧೆ ಪ್ರಾರಂಭವಾಯಿತು. ಯಾರಿಗೂ ತೋರ್ಪಡಿಸಿಕೊಳ್ಳದೆ ನಗು ನಗುತ್ತಾ ಜಯಪ್ರಕಾಶರ ಸೇವೆ ಮಾಡುತ್ತಿದ್ದರು. ಈ ಮಧ್ಯೆ ಮುಸಹರಿ ಎನ್ನುವ ಸ್ಥಳದಲ್ಲಿ ಕೆಲಸಗಾರರನ್ನು ಕೊಲೆ ಮಾಡುತ್ತೇವೆಂದು ಕೆಲವರು ಬೆದರಿಕೆ ಹಾಕಿದಾಗ ಕೂಡಲೇ ಜಯಪ್ರಕಾಶರೂ ಮತ್ತು ಪ್ರಭಾವತಿಯೂ ಅಲ್ಲಿಗೆ ಹೋಗಿ, ಎಲ್ಲರ ಸ್ನೇಹ ಬೆಳೆಸಿಕೊಂಡು ಮನೆಮನೆಗೂ ಹೋಗಿ ಅವರ ಸಂಸಾರದ ಯೋಗಕ್ಷೇಮವನ್ನು ವಿಚಾರಿಸಿದರು. ಅವರ ಮಕ್ಕಳನ್ನು ಚೆನ್ನಾಗಿ ವಿಚಾರಿಸಿಕೊಂಡು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಪ್ರೀತಿ ವಿಶ್ವಾಸವನ್ನು ಪ್ರಭಾ ಸಂಪಾದಿಸಿದರು. ಬೆದಡಿಕೆ ಹಾಕಿದವರ ಮನಸ್ಸು ಕರಗಿ ಮೃದುವಾಗಲು ಪ್ರಭಾವತಿಯ ಪ್ರೀತಿ ಮತ್ತು ಸೇವೆಯೇ ಕಾರಣ.

ಪ್ರಭಾವತಿಗೆ ಕ್ಯಾನ್ಸರ್ ಬಾಯಿಲೆ ಎಂದು ತಿಳಿದು ಭಾರತವೇ ಕೊರಗಿತು. (೧೯೭೩) ಏಪ್ರಿಲ್ ೧೫ರಂದು ಪ್ರಭಾವತಿ ಈ ಪ್ರಪಂಚವನ್ನು ತೊರೆದು ಹೋದರು. ಅಂದು ಜಯಪ್ರಕಾಶರ ತಮ್ಮಂದಿರ ಮಗನ ಮದುವೆ. ನೋವಿನಿಂದ ನರಳುತ್ತಾ ಪ್ರಭಾವತಿ ಹೇಗೋ ಮದುವೆಯಲ್ಲಿ ಓಡಾಡಿ ಮದುವೆ ಶಾಸ್ತ್ರ ಮುಗಿದ ಮೇಲೆ ತನ್ನ ಕರ್ತವ್ಯ ಇಲ್ಲಿಗೆ ಮುಗಿಯಿತೆನ್ನುವಂತೆ ಪ್ರಾಣತ್ಯಾಗ ಮಾಡಿದರು.

ಪ್ರಭಾವತಿಯ ಬದುಕು ಸರಳತೆ, ಶ್ರದ್ಧೆ, ಸೇವೆ, ತ್ಯಾಗ, ಕರ್ತವ್ಯದಿಂದ ತುಂಬಿತ್ತು. ಕೀರ್ತಿಶಾಲಿಯೆನಿಸಿದ್ದ ತನ್ನ ಪತಿಯ ಕಾರ್ಯದಲ್ಲಿ ಪ್ರಭಾಗೆ ವಿಶೇಷ ಆಸಕ್ತಿ. ಪ್ರಕಾಶರ ಸೇವೆಯನ್ನು ಎರಡು ದಶಕಗಳವರೆಗೆ ತಾಯಿ ಮಗುವಿಗೆ ಆರೈಕೆ ಮಾಡುವಂತೆ ಮಾಡಿ ತೃಪ್ತಿಪಟ್ಟರು. ತಮಗೆ ಪ್ರಿಯರಾದವರೆಂಬ ಭಾವನೆಗಿಂತ ಜಯಪ್ರಕಾಶರು ಭಾರತದ ಪ್ರಿಯ ಪುತ್ರರೆಂಬ ಭಾವನೆಯಿಂದ ಹೆಚ್ಚಿನ ಆಸಕ್ತಿ ವಹಿಸಿದ್ದರು.

ಮನೋರಮಾ ಶ್ರೀವಾಸ್ತವ್‌ರವರು ದೀದಿಯವರ ವ್ಯಕ್ತಿತ್ವವನ್ನು ಹೀಗೆ ಚಿತ್ರಿಸುತ್ತಾರೆ, "ಪ್ರಭಾವತಿ ಸಾಮಾನ್ಯವಾಗಿರುವಂತೆಯೇ ಅಸಾಮಾನ್ಯ ವ್ಯಕ್ತಿ. ಚಿಕ್ಕ ಆಕಾರ, ಗೌರವರ್ಣ, ತೆಳ್ಳಗೂ ಇಲ್ಲ ದಪ್ಪಕ್ಕೂ ಇಲ್ಲ. ಗಟ್ಟಿಮುಟ್ಟಾದ ಶರೀರ. ರಾಗದ್ವೇಷಗಳಿಂದ ಮುಕ್ತವಾದ ಮುಖಮಂಡಲದಲ್ಲಿ ಚಿರ ಮುಗುಳುನಗೆ ಶಾಂತ ಚಿತ್ತ, ಸದಾ ಕಾರ್ಯ ಮಗ್ನತೆ. ಮೇಲ್ನೋಟಕ್ಕೆ ಅತಿ ಚಂಚಲ. ಆದರೆ ಅಂತರ್ಯದಲ್ಲಿ ಶಾಂತತೆ. ಗಂಭೀರ, ಸುಸ್ಥಿರ. ಸುಖ ದುಃಖದಲ್ಲಿ ಸಮಭಾವದ ಪ್ರವೃತ್ತಿ. ತನ್ನವರು-ಪರರ ಮಧ್ಯೆ ಸೇತುವೆಯತೆ."

ಪ್ರಭಾವತಿಯವರು ಪ್ರತಿಷ್ಠೆ ಅಥವಾ ಪ್ರಚಾರವನ್ನು ಎಂದೂ ಬಯಸಿದವರಲ್ಲ. ಅವರೆಂದೂ ಭಾಷಣ ಕೊಡಲು ಇಚ್ಛಿಸಲಿಲ್ಲ. ಭಾಷಣದ ಭಾಷೆಗಿಂತ ಪ್ರೇಮದ ಭಾಷೆ ಬಲ್ಲವರಾಗಿದ್ದರು.

ದೀದಿಯವರ ಪ್ರೇಮ ಸರ್ವವ್ಯಾಪಿಯಾಗಿತ್ತು. ಅವರ ಸಂಪರ್ಕಕ್ಕೆ ಬಂದವರೆಲ್ಲಾ ಅವರ ಕುಟುಂಬದ ಪರಿವಾರವಾಗಿ ಹೋಗುತ್ತಿದ್ದರು. ಅತ್ಯಂತ ಕಠಿಣ ಪ್ರಸಂಗಗಳಲ್ಲೂ ತುಂಬು ಉತ್ಸಾಹ, ಧೈರ್ಯ ಮತ್ತು ಪ್ರಸನ್ನತೆಯನ್ನು ಪ್ರಭಾರವರಲ್ಲಿ ಕಾಣಬಹುದಾಗಿತ್ತು, ಎನುತ್ತಾರೆ ಅವರೊಂದಿಗೆ ಕೆಲಸ ಮಾಡಿದ ದೇಶಭಕ್ತರು. ತಮ್ಮಿಂದಾಗಿ ಯಾರಿಗಾದರೂ ಅನಾನುಕೂಲವಾದರೆ ಉಪವಾಸದ ಶಿಕ್ಷೆಯನ್ನು ವಿಧಿಸಿಕೊಳ್ಳುತ್ತಿದ್ದರು.

ತ್ರಿಪುರಾರಿ ಶರಣ್ ಹೇಳುವಂತೆ, ಪ್ರಭಾ ದೀದಿಯವರಲ್ಲಿ ಮನೆ, ಸಮಾಜ ದೇವರು ಈ ಮೂರೂ ತತ್ವಗಳೂ ಏಕಾಕಾರವಾಗಿದ್ದವು. ಆಶ್ರಮದ ಸಾಮೂಹಿಕ ಪ್ರಾರ್ಥನೆಯಲ್ಲಿ ತಪ್ಪದೆ ಭಾಗವಹಿಸುತ್ತಿದ್ದರು. ಆಶ್ರಮವು ಅಂತರ್ಮುಖವಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಬಹಿರ್ಮುಖವಾಗಿ ಬೆಳೆಯಬೇಕೆಂಬುದೇ ದೀದಿಯ ಆಸೆಯಾಗಿತ್ತು. ಆಶ್ರಮಕ್ಕೆ ಬಂದ ಪ್ರತಿಯೊಬ್ಬ ಕಾರ್ಯಕರ್ತರ ಕೊಠಡಿಗೆ ಹೋಗಿ ಅವರ ಆರ್ಥಿಕ ದೈನಿಕ ಜೀವನ ಸಮಸ್ಯೆಗಳನ್ನೂ ಅರಿತುಕೊಳ್ಳುತ್ತಿದ್ದರು. ಆಶ್ರಮದ ಎಲ್ಲಾ ಪ್ರವೃತ್ತಿಗಳ ಮೇಲೂ ಪ್ರಭಾ ದೃಷ್ಟಿ ಇಟ್ಟಿದ್ದರು. ಆಶ್ರಮವಾಸಿಗಳಲ್ಲಿ ಜಗಳವಾದಾಗ, ವಿಚಾರ ಭೇದ ಎಂದು ಪ್ರಭಾಗೆ ಕೋಪವೂ ಬರುತ್ತಿತ್ತು. ಅದು ತೋರಿಕೆಯ ಕೋಪವಾಗಿತ್ತು ಅಷ್ಟೇ. ಕ್ಷಣದಲ್ಲಿ ಅವರಿಗೆ ಕೋಪ ಬಂದಿತ್ತೇ ಎನ್ನುವಂತಿತ್ತು. ಕೃತ್ರಿಮವೇ ಇಲ್ಲದ ಅವರ ಮನಸ್ಸನ್ನು ಪಾರದರ್ಶಕ ಕನ್ನಡಿಯಂತೆ ಕಾಣಬಹುದಾಗಿತ್ತು. ದೀದಿಯವರನ್ನು ಯಾರೂ ಸುಲಭವಾಗಿ ಮೋಸ ಮಾಡುವಂತಿರಲಿಲ್ಲ. ಸುಳ್ಳು, ವಂಚನೆಗಳು ಅವರ ಹತ್ತಿರ ಸುಳಿಯುತ್ತಿರಲಿಲ್ಲ. ಸ್ಪಷ್ಟವಾದಿಯಾಗಿದ್ದರು. ಸ್ನೇಹಪೂರ್ಣ ಭಾಷೆಯಲ್ಲೇ ಅವರ ಮಾತು. ದೀದಿಯವರ ಈ ಗುಣಗಳು ಜಯಪ್ರಕಾಶರಿಗೆ ಬಹಳ ಪ್ರಿಯವಾಗಿದ್ದವು.

ರಾಜನೀತಿ, ಅರ್ಥನೀತಿ, ಸಮಾಜಶಾಸ್ತ್ರ ವಿಷಯಗಳನ್ನು ತಿಳಿದಿದ್ದರು. ಆದರೆ ಪಾರಂಗತರೆನಿಸಿಕೊಳ್ಳಲು ಎಂದೂ ಪ್ರಯತ್ನಿಸಲಿಲ್ಲ.

"ನಾವು ತಿಳಿದಮಟ್ಟಿಗೆ ಒಳ್ಳೆಯ ಕಾರ್ಯ ಮಾಡುತ್ತಿದ್ದೇವೆ. ತಪ್ಪುದಾರಿಯಲ್ಲಿ ಹೋಗುತ್ತಿಲ್ಲವೆಂಬ ಅರಿವು ನಮಗಿದ್ದರೆ ಧೈರ್ಯ ಕೆಡಬೇಕೇಕೆ ? ಯಾವುದೇ ಪರಿಸ್ಥಿತಿಯಲ್ಲೂ ಕೆಲಸದಿಂದ ಹಿಮ್ಮೆಟ್ಟಬೇಡಿ" ಎಂದು ಎಲ್ಲರಲ್ಲೂ ಪ್ರಭಾದೀದಿ ಧೈರ್ಯ ತುಂಬುತ್ತಿದ್ದರು.

ದೀದಿಯವರ ಜೀವನ ಸಜ್ಜನ ಮತ್ತು ಸೇವಕ ಸಮಾಗಮದ ಸಂಗಮ ತೀರ್ಥದಂತಿತ್ತು. ಜಯಪ್ರಕಾಶ್ ನಾರಾಯಣ್‌ರವರ ಮಾತಿನಲ್ಲಿ—"ದೀದಿಯವರು ಜೀವನವನ್ನು ಸಾಧನೆಯೆಂದು ಭಾವಿಸಿದ್ದರೇ ಹೊರತು ಭೋಗದ ಸಾಧನೆಯೆಂದಲ್ಲ. ಜೀವನದಲ್ಲಿ ಅವರು ಹುಡುಕಿದುದು ಯೋಗವನ್ನು ಭೋಗವನ್ನಲ್ಲ. ಪತ್ನೀರೂಪದಲ್ಲಿ ಪತಿ ಸೇವೆ ಅವರ ಧರ್ಮವಾಗಿತ್ತು. ತನ್ನ ಶರೀರದ ಅಗತ್ಯ ತನಗಾಗಿ ಅಲ್ಲ. ಅದರ ಉಪಯೋಗ ಪ್ರಪಂಚಕ್ಕಾಗಿ ಮೀಸಲು ಎಂಬ ವೇದಾಂತ ಅವರ ಜೀವನದಲ್ಲಿ ಕಂಡು ಬರುತ್ತದೆ."

ಜಯಪ್ರಕಾಶರಿಗೆ ಸಾರ್ವಜನಿಕ ಜೀವನದಲ್ಲಿ ಯಾವ ಗೌರವ ಪ್ರತಿಷ್ಠೆಗಳು ಸಲ್ಲುತ್ತಿದ್ದುವೋ ಅವುಗಳಲ್ಲಿ ತಾವು ಪಾಲುದಾರರೆಂದು ಪ್ರಭಾರವರು ಎಂದೂ ಭಾವಿಸಲಿಲ್ಲ. ಸೇವಾಮಯ, ತ್ಯಾಗಮಯ ಜೀವನದಲ್ಲೇ ಅವರಿಗೆ ಸಂತೃಪ್ತಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



# ಕರ್ಮಯೋಗಿ ಕಸ್ತೂರಿಬಾಯಿ

ಸ್ವಾತಂತ್ರ್ಯ ಗಳಿಕೆಯಲ್ಲಿ ಕಾಯಾ, ವಾಚಾ, ಮನಸಾ ಶ್ರಮಿಸಿದ ಮಹಿಳೆಯರಿಗೆ ಕಸ್ತೂರಿಬಾ ಆದರ್ಶ ಮಹಿಳೆ.

ಕಸ್ತೂರಿಬಾ ವಿಶ್ವಕ್ಕೆ ಆದರ್ಶ ನಾರಿ. ಆದರೂ ಅವರ ಬಗ್ಗೆ ಪ್ರತ್ಯೇಕವಾಗಿ ಪುಸ್ತಕಗಳು ಗಾಂಧಿ ಸಾಹಿತ್ಯ ಭಂಡಾರದಲೂ ಅಪರೂಪ. ಕಸ್ತೂರಿಬಾ ಟ್ರಸ್ಟ್‌ನಲ್ಲಿ ಕೆಲವನ್ನು ಕಾಣಬಹುದು. ಡಾ॥ ಸುಶೀಲಾ ನಯ್ಯರ್‌ರವರ ಡೈರಿಯು ಮಾಹಿತಿ ಮಹತ್ವದ್ದಾಗಿದೆ.

"ನನ್ನ ಹೆಂಡತಿಯನ್ನು ನನ್ನ ಮಾರ್ಗಕ್ಕೆ ತರುವ ಭರದಲ್ಲಿ ನಾನು ಆಕೆಯಿಂದ ಅಹಿಂಸಾ ಪಾಠ ಕಲಿತೆ. ನನ್ನ ದೌರ್ಜನ್ಯ ಮತ್ತು ಮೂರ್ಖತೆಯನ್ನು ಈಕೆ ಮೌನದಿಂದ ಸಹಿಸಿದ್ದಾಳೆ. ನಾನು ಈಕೆಯ ಮೇಲೆ ಅಧಿಕಾರ ನಡೆಸಲು ಹುಟ್ಟಿರುವ ಗಂಡಸು ಎಂಬ ಪೊಳ್ಳು ಭಾವನೆಯನ್ನು ದೂರಮಾಡಿದಳು. ಹೀಗಾಗಿ ಈಕೆಯಿಂದ ಅಹಿಂಸಾ ಪಾಠ ಕಲಿತೆ. ತಿಳಿಯದೆಯೇ ನನ್ನ ಗುರುವಾದಳು.

—ಗಾಂಧೀಜಿ

(ಪುಣ್ಯಸ್ಮರಣೆ ಮತ್ತು ಪ್ರಾಯಶ್ಚಿತ್ತ)

ಮಹಾತ್ಮನ ಮಡದಿ ಎನಿಸಿಕೊಳ್ಳುವುದು ಮಹಾ ಕಠಿಣ. ಕಟ್ಟುನಿಟ್ಟು ವ್ರತಾಚರಣೆಯ ಹಠಯೋಗಿ ಬಾಪು. ಧಾರ್ಮಿಕ ಪ್ರಭಾವದ ಪರಿಸರದಲ್ಲೇ ಬೆಳೆದು ಬಂದ ಕಸ್ತೂರಿಬಾಗೆ ಪತಿಯ ಮಾರ್ಗವನ್ನನುಸರಿಸಿ ನಡೆಯಲು ಕಷ್ಟವಾಗಲಿಲ್ಲ. ಪತಿಯ ಸಿದ್ಧಾಂತ, ವ್ರತ, ಆದರ್ಶಗಳನ್ನು ಕಸ್ತೂರಿಬಾ ತಮ್ಮವಾಗಿ ಮಾಡಿಕೊಂಡರು.

ಗಾಂಧಿ ಮತ್ತು ಕಸ್ತೂರಿಬಾರವರನ್ನು ನೇರವಾಗಿ ಕಂಡ ಮತ್ತು ಕಸ್ತೂರಿಬಾ ಆಶ್ರಮದಲ್ಲಿದ್ದ ಬಿ. ಕಾಮಾಕ್ಷಮ್ಮನವರು ಹೀಗೆನ್ನುತ್ತಾರೆ.

"ಸತ್ಯಾಗ್ರಹಿ ಪತಿಯನ್ನನುಸರಿಸಲು ಆಕೆ ಬಹು ದೊಡ್ಡ ಪ್ರಮಾಣದ ತ್ಯಾಗ ಮಾಡಿದ್ದಾರೆ. ತಪಸ್ವಿ ಪುರುಷನ ಹಿಂಬಾಲಕಳಾಗಲು ಮಧ್ಯೆ ಮಧ್ಯೆ ಕಠೋರತೆಯನ್ನು ಸಹಿಸಬೇಕಾಯಿತು. ಕುದಿಯುವ ಜ್ವಾಲಾಮುಖಿಯ ಸಂಗಡ ಇರಬೇಕಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಯಿತು. ಹೆದರದೆ ದಿಟ್ಟ ಹೆಜ್ಜೆಗಳನ್ನಿಟ್ಟ ಬಾರವರು ತಮ್ಮ ಕೊನೆಗಾಲದವರೆಗೆ ವಿಪುಲವಾದ ಆತ್ಮಬಲದಿಂದ ಅಪೂರ್ವ ಸಮರ್ಪಣಾ ಭಾವದಿಂದ ಪತಿಯೊಂದಿಗೆ ನಡೆದರು."

"ಬಾರವರು ಗಾಂಧೀಜಿಗೆ ಕೇವಲ ವಿಧೇಯಳಾದ ಅಥವಾ ವಿವೇಕಿ ಯಾವ ಹೆಂಡತಿ ಮಾತ್ರವಾಗಿರಲಿಲ್ಲ. ನಿಜವಾದ ಅರ್ಥದಲ್ಲಿ ಗಾಂಧೀಜಿಯ ಅರ್ಧಾಂಗಿಯೂ, ಕಷ್ಟಸಹಿಷ್ಣುತೆಯಲ್ಲಿ ಧೈರ್ಯದಲ್ಲಿ ಜವಾಬ್ದಾರಿಯನ್ನು ಹೊರುವುದರಲ್ಲಿ ಎಲ್ಲದರಲ್ಲಿಯೂ ಆಕೆ ನಿಜವಾಗಿಯೂ ಗಾಂಧೀಜಿಗೆ ಸಹಧರ್ಮಿಣಿಯಾದರು. ಆಕೆ ಗಾಂಧೀಜಿಯಿಂದ ಕಲಿತುದು ಎಷ್ಟು ಇತ್ತೊ ಗಾಂಧೀಜಿ ಆಕೆಯಿಂದ ಕಲಿತುದೂ ಅಷ್ಟೇ ಇತ್ತು."

—ಗೊರೂರು ರಾಮಸ್ವಾಮಿ ಅಯ್ಯಂಗಾರ್ ರವರು

ಚಿಕ್ಕಂದಿನಿಂದ ಕಸ್ತೂರಿಬಾ ಧೈರ್ಯಶಾಲಿ, ಕರ್ತವ್ಯಶಾಲಿ, ದೃಢಮನಸ್ಕಳು. ಗಾಂಧೀಜಿಯ ಕೈಹಿಡಿದ ಕೆಲವು ದಿನಗಳಲ್ಲಿಯೇ ಅವರ ಸತ್ಯಪ್ರಿಯತೆ, ಸರಳತೆ, ದೇಶ ಸೇವಾಕಾಂಕ್ಷೆಯನ್ನು ಅರ್ಥಮಾಡಿಕೊಂಡು ಪತ್ನಿಯಾಗಿಯೂ, ದೇಶ ಸೇವಾ ಕಾರ್ಯದಲ್ಲಿ ಸಮಭಾಗಿಯಾಗಿದ್ದು ಪತಿಯೊಡನೆ ಜೀವನಸವೆಸಿದರು.

ಧರ್ಮನಿಷ್ಠೆಯುಳ್ಳ ದಂಪತಿಗಳಾದ ಶ್ರೀ ಗೋಕುಲ್‌ದಾಸ್ ಮಾಕಂಜಿ ಮತ್ತು ಬ್ರಜಕುವರಿಬಾಯಿಗೆ ಕಸ್ತೂರಿಬಾಯಿ ಒಬ್ಬಳೇ ಹೆಣ್ಣು ಮಗಳು. ಹತ್ತು ವರ್ಷದ ಹುಡುಗಿಯಾಗಿದ್ದಾಗಲೇ ಕಸ್ತೂರಿಬಾ ಅಚ್ಚುಕಟ್ಟಾಗಿ ಅಡಿಗೆ ಮಾಡುವುದನ್ನು ಕಲಿತಿದ್ದಳು. ತಾಯಿ ಯ ಜೊತೆ ದೇವಮಂದಿರಗಳಿಗೆ ಹೋಗುತ್ತಿದ್ದಳು.

ತನ್ನ ಹೆಂಡತಿಗೆ ವಿದ್ಯೆ ಕಲಿಸಲೇಬೇಕೆಂಬ ಹಟತೊಟ್ಟ ಗಾಂಧೀಜಿಗೆ ಕಸ್ತೂರಿಬಾ ಹೇಳುತ್ತಿದ್ದುದು "ನನಗೇಕೆ ಓದು ? ಹೆಂಗಸಿಗೆ ಓದು ಬರಹ ಬೇಕಿಲ್ಲ." ಹೀಗೆ ಹಠ ಹಿಡಿದ ಹೆಂಡತಿಯನ್ನು ಗಾಂಧೀಜಿ ಒಂದು ಸಲ ರಾತ್ರಿ ಕತ್ತಲಲ್ಲಿ ಕೊಠಡಿಯಿಂದ ಹೊರಗೆ ಕಳುಹಿಸಿಬಿಟ್ಟರು. ಆಗಿನ್ನೂ ಕಸ್ತೂರಿಬಾ ಚಿಕ್ಕ ಹುಡುಗಿ. ಕತ್ತಲಲ್ಲಿ ಮೆಟ್ಟಲಿಳಿದು ಹೊರಟೇಹೋದಳು. ಮೋಹನ್‌ದಾಸ್‌ಗೆ ಆಶ್ಚರ್ಯವಾಯಿತು. ಕತ್ತಲಲ್ಲಿ ಹೋಗಲು ಮೋಹನ್‌ದಾಸ್ ಗಾಂಧಿಗೆ ಹೆದರಿಕೆ. ಭೂತ ಪ್ರೇತಗಳ ಭಯ. 'ಹಾಗಾದರೆ ಕಸ್ತೂರಿಬಾ ನನಗಿಂತ ಶ್ರೇಷ್ಠಳು' ಎಂದು ಗಾಂಧಿ ಆಶ್ಚರ್ಯಪಟ್ಟಿದ್ದಾರೆ. ಸೆರೆಮನೆಯಲ್ಲಿ ಅನೇಕ ದಿನಗಳನ್ನು ಕಳೆಯಬೇಕಾದಾಗ ಕಸ್ತೂರಿಬಾ ಅಕ್ಷರ ಕಲಿಯಬೇಕಾಗಿತ್ತೆಂದು ಪಶ್ಚಾತ್ತಾಪ ಪಡಬೇಕಾಯಿತು.

ಓದಿಲ್ಲದಿದ್ದರೂ ಈಕೆ ಯಾವ ವಿಚಾರದಲ್ಲೂ ಕಡಿಮೆಯಾಗಿರಲಿಲ್ಲವೆಂದು ಗಾಂಧೀಜಿ "ಸತ್ಯಶೋಧಕ"ದಲ್ಲಿ ಹೇಳುತ್ತಾರೆ.

"ಗಾಂಧೀಜಿಯವರನ್ನು ಸಾಧು, ಸಂತ ಅನ್ನುವರು. ಹಾಗಾದರೆ ಕಸ್ತೂರಿಬಾ ಸಾಧ್ವಿ ಎಂಬ ಬಿರುದಿಗೆ ಅರ್ಹಳು. ಗಂಡಸು ಮಾತ್ರವೇ ಪರಿಪೂರ್ಣ ಮಾನವನಲ್ಲ, ಅದೇ ರೀತಿ ಹೆಂಗಸು ಪರಿಪೂರ್ಣ ಮಾನವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಳಿಲ್ಲ. ಗಂಡಸು–ಹೆಂಗಸು ಇವರಿಬ್ಬರಲ್ಲಿ ಮಾನವ್ಯ–ಮಾನವೀಯತೆ ಸರಿಯಾಗಿ ಹಂಚಿಹೋಗಿದೆ. ಆದ್ದರಿಂದ ಮಾನವಕುಲದ ಭವಿಷ್ಯ ಜೀವನ ಅವರಿಬ್ಬರ ಸಹಚರ್ಯದಿಂದಲೇ ಪರಿಪೂರ್ಣವಾಗಬಲ್ಲದು. ಇದನ್ನು ಕಂಡುಕೊಂಡ ಜೀವನ ಗಾಂಧಿಯವರದು."

—ಶ್ರೀ ರಂಗನಾಥ ರಾಮಚಂದ್ರ ದಿವಾಕರ

"ಗೃಹಿಣೀ ಸಜನಃ ಸಖೀ ಮಿಥಃ ಪ್ರಿಯ ಶಿಷ್ಯಾ ಲಲಿತೇ ಕಲಾವಿದೇ" ಎಂದು ಶೃಂಗಾರ ಶೈಲಿಯಲ್ಲಿ ಕವಿ ವರ್ಣಿಸಿರುವ ಗೃಹಿಣಿಯ ಗುಣವನ್ನು ಕಸ್ತೂರಿಬಾರಲ್ಲಿ ಕಾಣಬಹುದು ಎನ್ನುತ್ತಾರೆ ರಂಗನಾಥ ರಾಮಚಂದ್ರ ದಿವಾಕರರವರು.

ಆಶ್ರಮಕ್ಕೆ ಬಂದ ಅತಿಥಿಗಳ ಆಗು ಹೋಗುಗಳನ್ನು ನೋಡಿಕೊಳ್ಳುವುದರಲ್ಲಿ ಕಸ್ತೂರಿಬಾ ನಿಜವಾದ ವಿಶ್ವಕುಟುಂಬದ ಗೃಹಿಣಿಯಾಗಿದ್ದಳು.

ಎರಡು ಮಹತ್ವದ ವಿಷಯಗಳಲ್ಲಿ ಕಸ್ತೂರಿಬಾ ಗಾಂಧೀಜಿಯ ಸಚಿವೆ ಎನ್ನಬಹುದು. "ನಾನು ಹೇಗೆ ಸತ್ಯಾಗ್ರಹವನ್ನು ಆಚರಿಸಬೇಕೆಂಬುದನ್ನು ಕಸ್ತೂರಬಾಯಿಂದ ಕಲಿತೆ" ಎನ್ನುತ್ತಾರೆ ಮಹಾತ್ಮಾಗಾಂಧಿ. ಮತ್ತೊಂದು ಅಷ್ಟೇ ಮಹತ್ವದ್ದು–ಆಕಳುಗಳ ಕೆಚ್ಚಲಿಗೆ ರಬ್ಬರ್ ನಳಿಕೆ ಹಾಕಿ ಹಾಲು ಹಿಂಡುವುದನ್ನು ಕಂಡ ಗಾಂಧಿ ಹಾಲು ಸೇವಿಸುವುದನ್ನು ಬಿಟ್ಟಿದ್ದರು. ಒಂದು ಸಲ ಗಾಂಧೀಜಿ ಕಾಯಿಲೆಯಿಂದ ನರಳುತ್ತಿದ್ದಾಗ ಹಾಲು ಸೇವಿಸದಿದ್ದರೆ ಉಳಿಯುವುದು ಕಷ್ಟವೆಂದು ವೈದ್ಯರ ಸಲಹೆಯಾಯಿತು. ಆಗ ಕಸ್ತೂರಬಾ ಹೇಳಿದ ಮಾತನ್ನು ಗಾಂಧಿ ಕೇಳಲೇಬೇಕಾಯಿತು. "ನೀವು ಆಕಳ ಹಾಲು ಬಿಟ್ಟಿರುವಿರಿ. ಆದರೆ ಆಡಿನ ಹಾಲು ಸೇವಿಸಲು ನಿಮ್ಮ ಆಕ್ಷೇಪವೇನು ? ಎಂದು ಬಾ ಕೇಳಲು ಬಾಪೂ ಅದನ್ನು ಒಪ್ಪಿ ಜೀವನಪರ್ಯಂತ ಆಡಿನ ಹಾಲು ಸೇವಿಸುತ್ತಿದ್ದರು.

ರಾಟೆಯಲ್ಲಿ ನೂಲುವ ಕಲೆಯನ್ನು ಗಾಂಧಿಯವರು ತಮ್ಮ ಶಿಷ್ಯಳಾದ ಕಸ್ತೂರಿಬಾಗೆ ಕಲಿಸಿದ್ದರು. ಆಕೆ ಅದನ್ನು ಪ್ರೀತಿಯಿಂದ ಕಲಿತು ಕೊನೆಯವರೆಗೂ ಸಾಧಿಸಿ, ಆ ಕಲೆಯ ಮಹಿಮೆ ಮತ್ತು ಹಿರಿಮೆಯನ್ನು ಎಲ್ಲರಿಗೂ ಹೇಳಿಕೊಟ್ಟರು.

ಸಖೀ ಎಂದರೆ ಗೆಳೆತನದಲ್ಲಿ ಮಿತ್ರಭಾವದಿಂದಿರುವುದು. ಪರಸ್ಪರ ಪ್ರೇಮ ಭಾವವು ಜಗಳ ಅಥವಾ ಸಿಟ್ಟನ್ನು ತಡೆಗಟ್ಟಿತ್ತು ಬಾ ಮತ್ತು ಬಾಪೂರವರ ಜೀವನದಲ್ಲಿ.

ಗಂಡ ಹೆಂಡಂದಿರಲ್ಲಿ ಮಿಥಃ ಎಂಬುದು ಬಹಳ ಮಹತ್ವದ್ದು ಎಂದು ದಿವಾಕರರವರು ವಿವರಿಸುತ್ತಾರೆ, "ಒಬ್ಬರಿಗೊಬ್ಬರು ಹೊಂದಿಕೊಂಡು ಹೋಗದಿದ್ದರೆ ಅನರ್ಥವಾಗುತ್ತದೆ. ಗಂಡನ ಹಠನಾರಿತನದ ಬ್ರಹ್ಮಚರ್ಯವ್ರತಕ್ಕೆ ಬಾರವರು ದಕ್ಷಿಣ ಆಫ್ರಿಕಾದ ಜೀವನಕಾಲದಲ್ಲಿಯೇ ಒಪ್ಪಿಕೊಂಡರು. ಕೊನೆಯುಸಿರಿರುವವರೆಗೂ ಅದನ್ನೇ ನಡೆಸಿಕೊಂಡು ಹೋದಳು ಸಾಧ್ವಿ ಕಸ್ತೂರಿಬಾ."

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಪತಿ ದಕ್ಷಿಣ ಆಫ್ರಿಕಾಕ್ಕೆ ಹೊರಟಾಗ, ದಿಟ್ಟತನದಿಂದ ಅವರನ್ನು ಅನುಸರಿಸಿ ಹೊರಟರು. ಅಲ್ಲಿಯ ಜನ ಗಾಂಧಿಯ ಮೇಲೆ ಹುಯಿಲೆಬ್ಬಿಸಿದಾಗ ಗಂಡನ ಕಷ್ಟ ದಲ್ಲಿ ಪಾಲು ಗಾರಳಾಗಿ ಕಸ್ತೂರಿಬಾ ಭಗವಂತನನ್ನು ಪ್ರಾರ್ಥಿಸಿ ಶಾಂತಿ ವಹಿಸಿದರು. ಗಾಂಧೀಜಿಯನ್ನು ಹೊಡೆದು ಗಾಯಪಡಿಸಿದಾಗ ಅದ್ಭುತ ಚಿತ್ತಸ್ಥೈರ್ಯದಿಂದ ವರ್ತಿಸಿದರು. ಮುಂದೆ ಮಹಾತ್ಮಾಗಳಿಗೆ ಇದು ನಾಂದಿಯಾಯಿತು.

ತನ್ನ ಪತಿ ಬ್ಯಾರಿಸ್ಟರ್ ಆಗಿದ್ದಾಗ ಆ ಅಂತಸ್ತಿಗೆ ತಕ್ಕಂತೆಯೂ, ಪತಿ ಸಾರ್ವ ಜನಿಕ ಸೇವೆಗೆ ತನ್ನನ್ನು ಅರ್ಪಿಸಿಕೊಂಡಾಗ ಅದಕ್ಕೆ ತಕ್ಕಂತೆ ಸರಳ ಜೀವನಕ್ಕೆ ಹೊಂದಿ ಕೊಂಡು ಕಸ್ತೂರಬಾ ಸಂಸಾರ ನಡೆಸಿದರು.

೧೯೦೫ರಲ್ಲಿ ದಕ್ಷಿಣ ಆಫ್ರಿಕಾದ ಜೋಹಾನ್ಸ್ ಬರ್ಗ್‌ನಲ್ಲಿ ಗಾಂಧೀಜಿ ಸಾರ್ವ ಜನಿಕ ಸೇವಾಕ್ಷೇತ್ರವನ್ನು ವಿಸ್ತರಿಸಿಕೊಂಡಾಗ, ಇಂಗ್ಲೆಂಡಿನ ಪತ್ರಿಕೆಗಳಲ್ಲಿ ಗಾಂಧೀಜಿ ಯವರ ವರ್ಣಭೇದ ತೊಡೆಯುವ ಚಳವಳಿಯ ಬಗ್ಗೆ ಅಸಂಬದ್ಧ ಲೇಖನಗಳು ಬಂದವು. ಇದಕ್ಕೆ ಪ್ರತಿಯಾಗಿ ಸರಿಯಾದ ಉತ್ತರ ಬರೆಯಬೇಕೆಂಬುದು ಆಫ್ರಿಕಾದ ದಲ್ಲಿ ಗಾಂಧೀಜಿಯ ಆಪ್ತಮಿತ್ರರಾದ ಹೆನ್ರಿ ಎಸ್. ಪೋಲಕರ ಅಭಿಪ್ರಾಯ. ಅಸತ್ಯವು ತಾನಾಗಿಯೇ ಅಳಿದು ಹೋಗುತ್ತದೆ ಎಂದು ಗಾಂಧಿಯ ವಾದ. ಈ ಘಟನೆ ಮಿತ್ರರಿಬ್ಬರಲ್ಲಿ ವಿರಸ ಹುಟ್ಟಲು ಕಾರಣವಾಗಿ ಗಾಂಧಿ ಪೋಲಕರೊಡನೆ ಮಾತಾಡುವುದನ್ನು ಬಿಟ್ಟರು. ಕಸ್ತೂರಿಬಾ ತನ್ನ ಜಾಣ್ಮೆಯಿಂದ ಈ ಬಿಗುವಾನ ವಾತಾವರಣವನ್ನು ಸರಳವಾಗಿ ಸರಸದಿಂದ ಪರಿಹರಿಸಿದರು.

ಗಾಂಧಿಯವರ ಜೀವನಗತಿ ತ್ಯಾಗ, ವೈರಾಗ್ಯ, ಸನ್ಯಾಸದ ಕಡೆಗ ಶರವೇಗದಿಂದ ಧಾವಿಸುತಿಸುತ್ತಿದ್ದಾಗ ಕಸ್ತೂರಿಬಾ ತನ್ನ ಜೀವನವನ್ನು ಅದೇ ಕಡೆಗೆ ಹರಿಸಿದರು. ಅಗತ್ಯವಾದಾಗ ನಮ್ರ ಸೂಚನೆ ಕೊಡುವರು. ವಿರೋಧಿಸುವಾಗ ಜಾಣ್ಮೆಯಿಂದಿಸು ವರು. ಕಠೋರತೆ ಕಂಡಾಗ ಪತಿಯನ್ನು ಸರಸಿಯನ್ನಾಗಿ ಮಾಡುವರು.

ಅವರು ಮಹಾತ್ಮರಾದರೆ ಈಕೆ ಮಹಾತ್ಮಳಾಗಲು ಮಾಡಿದ ತಪಸ್ಸು ಕಡಿಮೆ ಯಲ್ಲ. ಬಾರವರು ಸೋತು ಗೆದ್ದಿದ್ದಾರೆ ಎನ್ನುತ್ತಾರೆ ಕಾಮಾಕ್ಷಮ್ಮ.

೧೯೧೩ರಲ್ಲಿ ಗಾಂಧೀಜಿಯ ಹಿರಿಯ ನೆಂಟರಾದ ಕಾಳಿದಾಸ್ ಗಾಂಧಿ ಊಟಕ್ಕೆ ಬಂದಾಗ, ಅಡಿಗೆ ಮನೆ ಶುಚಿ ಮಾಡುವುದರಿಂದ ಹಿಂಡಿದು ಹೊರಗಿನಿಂದ ಎಲ್ಲಾ ಕೆಲಸಗಳನ್ನು ಬಾರವರೇ ಮಾಡುತ್ತಿದ್ದನ್ನು ಕಂಡು "ಬ್ಯಾರಿಸ್ಟರ್ ಪತ್ನಿಯಾಗಿದ್ದರೂ ನಿಮ್ಮ ಜೀವನಮಟ್ಟ ಸಾಮಾನ್ಯವಾಗಿದೆ." ಎಂದಾಗ ಗಾಂಧೀಜಿ, "ರೇಷ್ಮೆ ಸೀರೆ ಉಡಬೇಡವೆಂದಾಗಲೀ, ಚಿನ್ನದ ಬಳೆ ಧರಿಸಬೇಡವೆಂದಾಗಲೀ ನಾನು ಹೇಳಿಲ್ಲ" ಎಂದರು.

ಅದಕ್ಕೆ ಬಾರವರ ಉತ್ತರ "ನೀವು ಸಾಧು ಸನ್ಯಾಸಿಯಾದ ಮೇಲೆ ನಾನು ಅಲಂಕರಿಸಿಕೊಂಡು ಮಾಡುವುದೇನು ?

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಇದೇ ಬಾರವರ ಜೀವನ ವಿಜಯದ ರಹಸ್ಯ ಬಾಪೂಜಿ ಮಹಾತ್ಮರಾಗಲು ಸಂತ ಹಂತದಲ್ಲಿ ಬಾರವರು ಸಹಕರಿಸಿದ್ದಾರೆ. ಅಫ್ರಿಕಾದ ಭಾರತೀಯರು ಗಾಂಧಿಯನ್ನು "ಬಾಪೂ" ಎಂದೂ ಕಸ್ತೂರಿಬಾರವರನ್ನು "ಬಾ" ಎಂದೂ ಕರೆದರು. ಗುಜರಾತಿ ಭಾಷೆಯಲ್ಲಿ ಬಾಪೂ ಎಂದರೆ ತಂದೆ. ಬಾ ಎಂದರೆ ತಾಯಿ. ಈ ಪತಿ ಪತ್ನಿಯರು ಮುಂದೆ ವಿಶ್ವಕ್ಕೆ ಬಾಪೂ ಮತ್ತು ಬಾ ಎನಿಸಿಕೊಂಡರು.

ಆಶ್ರಮ ವಾಸವನ್ನು ಬಾರವರಿಗೆ ಆಫ್ರಿಕಾದಲ್ಲಿದ್ದಾಗಲೇ ಬಾಪೂ ಅಭ್ಯಾಸ ಮಾಡಿಸಿದರು. ಬಾಡಿಗೆ ಮನೆಯ ಅವಧಿ ತೀರಿದ ಕೂಡಲೇ ಫೀನಿಕ್ಸ್‌ನಲ್ಲಿ ಒಂದು ಆಶ್ರಮ ಸ್ಥಾಪಿಸಿ ಅಲ್ಲಿ ವಾಸಿಸತೊಡಗಿದರು. ಸುತ್ತಲೂ ಭಯಂಕರವಾದ ಕಾಡು, ಸೊಳ್ಳೆಗಳ ಕಾಟ, ಹಾವು-ಚೇಳುಗಳ ಭಯ. ಈ ಆಶ್ರಮ ಜೀವನದಲ್ಲಿ ಅಸಂಗ್ರಹ, ಅಹಿಂಸೆ, ಅಸ್ಪೃಶ್ಯತಾ ನಿವಾರಣೆ, ದೈವ ಭಕ್ತಿ, ಬ್ರಹ್ಮಚರ್ಯ ನಿಯಮಗಳನ್ನು ಅಲ್ಲಿಯ ವಾಸಿಗಳೆಲ್ಲರೂ ಅನುಸರಿಸಬೇಕಾಗಿತ್ತು.

ಆಶ್ರಮವಾಸ ಹೀಗೆ ಪ್ರಾರಂಭವಾಗಿ ಗಾಂಧೀಜಿ ಭಾರತಕ್ಕೆ ಬಂದ ಮೇಲೂ ತಮ್ಮದೆಂದು ಪ್ರತ್ಯೇಕ ಮನೆ ಮಾಡಲಿಲ್ಲ. ಬಾರವರು ಆಶ್ರಮವಾಸಿಗಳಿಗೆಲ್ಲಾ ತಾಯಿಯಾಗಿ ತಮ್ಮ ಜೀವನದ ಕೊನೆಯವರೆಗೂ ಸತತ ಊಟ ಉಪಚಾರ ಮಾಡಿದರು.

ದಕ್ಷಿಣ ಆಫ್ರಿಕಾದಲ್ಲಿದ್ದಾಗ ಒಂದು ವಿಚಿತ್ರ ಸಂಗತಿ ಬಾಪೂಜಿಯವರನ್ನು ದೊಡ್ಡ ಆಂದೋಲನಕ್ಕೆ ಎಳೆಯಿತು. ವಿವಾಹಿತ ಪತಿಪತ್ನಿಯರು ಪುನಃ ರಿಜಿಸ್ಟರ್ ಮದುವೆಮಾಡಿಕೊಳ್ಳಬೇಕೆಂದಾಗ, ಇದೊಂದು ಘೋರ ಅಪಮಾನವೆಂದು ಗಾಂಧೀಜಿ ಈ ಕಾನೂನನ್ನು ಮುರಿಯಲು ಮಹಿಳೆಯರಿಂದ ಸತ್ಯಾಗ್ರಹ ಹೂಡಿಸಲು ನಿರ್ಧರಿಸಿದರು. ತಂಡತಂಡವಾಗಿ ಗಾಂಧೀಜಿಯ ನಾಯಕತ್ವವನ್ನು ಶಿರಸಾವಹಿಸಿ ಬಂದ ಎಲ್ಲಾ ವರ್ಗದ ಮಹಿಳೆಯರನ್ನೂ ಒಟ್ಟುಗೂಡಿಸಿ ಸತ್ಯಾಗ್ರಹದ ತಯಾರಿ ಕೊಟ್ಟರು. ಬಾರವರನ್ನು ಇದರಲ್ಲಿ ಸೇರಿಸಿಕೊಂಡಿರಲಿಲ್ಲ. ಇದರಿಂದ ವ್ಯಥೆಗೊಂಡ ಬಾ,

"ನಾನು ಏನು ಅಪರಾಧ ಮಾಡಿದೆನೆಂದು ನನಗೆ ಬಹಿಷ್ಕಾರ ಹಾಕಿದಿರಿ ?" ಎಂದು ಪತಿಯನ್ನು ಧೈರ್ಯಮಾಡಿ ಕೇಳಿದರು. ಅದಕ್ಕೆ ಬಾಪೂ ನುಡಿದರು, "ನೀನಾಗಿಯೇ ಸತ್ಯಾಗ್ರಹ ಹೂಡಿ ಸೆರೆಮನೆಗೆ ಹೋದರೆ ಬೇಡವೆನ್ನುವುದಿಲ್ಲ. ಆದರೆ ಸೆರೆಮನೆಯ ಕಷ್ಟಗಳಿಗೆ ಹೆದರಿ ಕ್ಷಮಾಪಣೆ ಕೇಳಿದ್ದೇ ಆದರೆ ನನಗೆ ಅವಮಾನ."

"ನಾನು ಸರ್ಕಾರದೊಡನೆ ಕ್ಷಮಾಪಣೆ ಕೇಳಿದರೆ ನನ್ನನ್ನು ತ್ಯಜಿಸಿಬಿಡಿ. ನಾನು ಸತ್ಯಾಗ್ರಹದಲ್ಲಿ ಭಾಗವಹಿಸುತ್ತೇನೆ" ಎಂದರು ಬಾ ದೃಢ ಸಂಕಲ್ಪದಿಂದ.

ಹೀಗೆ ಅಂತರ್ಶಕ್ತಿಯಿಂದ, ಅಂತರ್ಯ ಪ್ರೇರಿತರಾಗಿ ಆತ್ಮಬಲದಿಂದ ಪತಿಯನ್ನನುಸರಿಸಿ ಹೋಗುವ ನಿರ್ಣಯದಿಂದ ಸತ್ಯಾಗ್ರಹದಲ್ಲಿ ಧುಮುಕಿದ ಬಾರವರಿಗೆ ಸಂಸಾರದಲ್ಲಿ ಕಷ್ಟಕೋಟಲೆ, ಸೆರೆಮನೆಯ ಕಠಿಣವಾಸ ಕಾಡಿಸಿತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಕಾರಾಗೃಹದ ಆಹಾರ ಸರಿಹೋಗದೆ ಬಾರವರು ಉಪವಾಸ ಮಾಡುತ್ತಿದ್ದರು. ಆಫ್ರಿಕಾದ ಜೈಲಿನ ಮಹಿಳಾ ವಾರ್ಡನ್ ಆಶ್ಚರ್ಯಪಟ್ಟು, "ಒಂದು ಹೊತ್ತಿನ ಚಾ ಕುಡಿಯದಿದ್ದರೆ ಪ್ರಾಣವೇ ಹೋದಂತೆ ತೋರುವುದು. ಈ ಭಾರತೀಯ ಮಹಿಳಾ ಖೈದಿ ಏನು ಪವಾಡವನ್ನು ಕಲಿತಿರುವಳೋ !" ಎಂದು ಬೆರಗಾದಳಂತೆ.

ಜೈಲಿನಿಂದ ಬಂದ ಮೇಲೆ ಬಾರವರ ಆರೋಗ್ಯ ಕೆಟ್ಟು ಕೈಕಾಲು ಬಾತು ಕೊಂಡಾಗ, ಕೇವಲ ಬೇವಿನ ಸೊಪ್ಪಿನ ರಸದಿಂದ ಗಾಂಧೀಜಿ ಪತ್ನಿಯ ರೋಗವನ್ನು ವಾಸಿಮಾಡಿ, ತಾನೇ ಉಪಚರಿಸಿದರು. ಆರೋಗ್ಯದಿಂದ ಚೇತರಿಸಿಕೊಂಡರೂ, ಬಾರವರಿಗೆ ತನ್ನ ಮಕ್ಕಳ ವಿದ್ಯಾಭ್ಯಾಸ ಸರಿಯಾಗಿ ನಡೆಯಲಿಲ್ಲವಲ್ಲಾ ಎಂಬ ಚಿಂತೆ ಮೂಡಿತು. ಕೊನೆಯವರೆಗೂ ಈ ಮಕ್ಕಳ ಭವಿಷ್ಯ ಮುಳ್ಳಾಗಿ ಚುಚ್ಚುತ್ತಿತ್ತು

ಭಕ್ತಿ ಗೌರವಗಳೊಂದಿಗೆ ಆಫ್ರಿಕದ ಜನತೆ ಪ್ರೀತಿಯಿಂದ ನೀಡಿದ ಹೇರಳ ದ್ರವ್ಯರಾಶಿಯ ಜೊತೆಗೆ ಅವರಿಂದ ಬೀಳ್ಕೊಂಡು ಭಾರತಕ್ಕೆ ಹಿಂದಿರುಗಿದರು. ಈ ನಿಧಿ ನಂತರದಲ್ಲಿ ಸಾರ್ವಜನಿಕ ಕ್ಷೇಮಾರ್ಥ ಉಪಯೋಗವಾಯ್ತು. ಸಾಬರಮತಿ. ದಡದ ಮೇಲೆ ಆಶ್ರಮವೊಂದನ್ನು ನಿರ್ಮಿಸಿ ಅಲ್ಲಿಗೆ ಬಂದ ತಮ್ಮ ಶಿಷ್ಯಕೋಟಿಗೆ ವಿಶ್ವ ಬಂಧುತ್ವ ಪಾಠವನ್ನು ಕಲಿಸಿದರು. ಶಾರೀರಿಕ ಶ್ರಮ, ನಿರ್ಭಯತೆ, ಸ್ವಚ್ಛತೆ, ಸ್ವದೇಶೀ ವ್ರತ ಪರಿಪಾಲನೆ ಆಫ್ರಿಕಾದಲ್ಲಿ ಮಾಡಿದ ಪ್ರತಿಜ್ಞೆಯೊಡನೆ ಈ ವ್ರತವೂ ಪ್ರಾರಂಭವಾಯಿತು. ಸಾಮೂಹಿಕ ಪ್ರಾರ್ಥನೆ ಸಾಮೂಹಿಕ ಭೋಜನ ಆಶ್ರಮದ ನಿತ್ಯ ನಿಯಮವಾಯಿತು. ನಿಯಮಿತ ವೇಳೆಯಲ್ಲಿ ಮಾತ್ರ ಅಡಿಗೆ ಕೆಲಸ ಮಾಡ ಬೇಕು. ಪಾತ್ರೆ ತೊಳೆಯುವುದು, ಕಕ್ಕಸು ಸ್ವಚ್ಛ ಮಾಡುವುದು ಎಲ್ಲರೂ ಮಾಡ ಬೇಕಾದ ಕೆಲಸವಾಯಿತು. ಮೇಲು ಕೀಳು ಭಾವನೆ ಮಾಯವಾಯಿತು.

ಅಹಿಂಸಾತ್ಮಕ ಹೋರಾಟದಲ್ಲಿ ಮಹಿಳೆಯರಿಗೆ ಬಾಪೂ ಪ್ರಥಮ ಸ್ಥಾನ ಕೊಟ್ಟರು. ಮಹಾತ್ಮರ ಪ್ರಕಾರ "ಅಹಿಂಸಾ ಹೋರಾಟದಲ್ಲಿ ಮಹಿಳೆ ಅಬಲೆ ಯಾಗದೆ ಅಂಗರಕ್ಷಕಳಾದಳು." ಗಾಂಧೀ ದಂಪತಿಗಳಿಗಿದ್ದ ವಿಶಿಷ್ಟ ಕಲೆಯೆಂದರೆ, ವಿವಿಧ ಸ್ವಭಾವದ, ವಿದ್ಯಾವಂತ, ಅವಿದ್ಯಾವಂತರಾದ, ಹಳ್ಳಿಯ ಪಟ್ಟಣದ ವನಿತೆ ಯರನ್ನು ಒಟ್ಟುಗೂಡಿಸಿ ಸೇವಾ ಕಾರ್ಯದಲ್ಲಿ ತೊಡಗಿಸುವದು ಎನ್ನುತ್ತಾರೆ ಕಾಮಾಕ್ಷಮ್ಮನವರು.

ಆಶ್ರಮ ನಿಯಮದಂತೆ ಆಶ್ರಮವಾಸಿಗಳು ತಮ್ಮ ಹತ್ತಿರ ಬಿಡಿಕಾಸನ್ನೂ ಇಟ್ಟುಕೊಳ್ಳಕೂಡದಾಗಿತ್ತು. ಬಾರವರ ಹತ್ತಿರ ಇದ್ದ ಸಮಯಕ್ಕೆಂದು ಇಟ್ಟಿದ್ದ ಎರಡೋ ಅಥವಾ ಮೂರು ರೂಪಾಯಿಗಳನ್ನು ಕಂಡ ಗಾಂಧೀಜಿ ಎಲ್ಲರೆದುರು ಬಾರವರನ್ನು ನಿಲ್ಲಿಸಿ ತಪ್ಪನ್ನು ಒಪ್ಪಿಕೊಳ್ಳುವಂತೆ ಮಾಡಿದರು. ತನಗಾದ ಶಿಕ್ಷೆ ಯಿಂದ ಬಾರವರು ತನ್ನ ಪತಿಯನ್ನು ನಿಂದಿಸಲಿಲ್ಲ. ಅದಕ್ಕೆ ಬದಲು ಅವರ ನಿಷ್ಪಕ್ಷ ಪಾತವನ್ನು ಕಂಡು ಗೌರವಿಸಿದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



೧೯೧೯ರಲ್ಲಿ ಬಾ ಶುದ್ಧ ಖಾದೀ ವಸ್ತ್ರಧಾರಿಯಾದರು. ಸನಾತನ ಧರ್ಮದಲ್ಲಿ ಶ್ರದ್ಧೆ ಇದ್ದ ಬಾ ಅವರಿಗೆ ಮೊದಮೊದಲು ಅಸ್ಪೃಶ್ಯತಾ ನಿವಾರಣೆ ಬಗ್ಗೆ ಮನಸ್ಸಿನಲ್ಲಿ ತಳಮಳವಾಗುತ್ತಿತ್ತು. ಗಾಂಧಿಯವರ ಬೋಧನೆಯಿಂದಲೂ, ದಾರಿದ್ರ್ಯ ಮತ್ತು ಅಜ್ಞಾನದಿಂದ ಬಳಲುತ್ತಿರುವ ಅಸ್ಪೃಶ್ಯವನ್ನು ಕಂಡು ಬಾರವರ ಮನ ಕರಗಿತು. ಹರಿಜನರ ಗುಡಿಸಲುಗಳಿಗೆ ಹೋಗಿ ಸೇವೆ ಮಾಡಿದರು. ಹಳ್ಳಿ ಹಳ್ಳಿಗೆ ಕಾಲ್ನಡಿಗೆಯಲ್ಲಿ ಹೋಗಿ ಗ್ರಾಮೀಣ ಸ್ತ್ರೀಯರಿಗೆ ಚರಕಾದಲ್ಲಿ ನೂಲುವುದನ್ನು ಹೇಳಿಕೊಟ್ಟರು. ಅಕ್ಷರ ಜ್ಞಾನವನ್ನುಂಟುಮಾಡಲು ಶ್ರಮಿಸಿದರು.

೧೯೨೨ರಲ್ಲಿ ಬ್ರಿಟಿಷ್ ಸರ್ಕಾರದ ವಿರುದ್ಧ ಅಸಹಕಾರ ಆಂದೋಲನದ ಕಾರಣ ಮಹಾತ್ಮರನ್ನು ಸೆರೆಹಿಡಿದು ಆರು ವರ್ಷ ಕಠಿಣ ಸಜ ವಿಧಿಸಲಾಯಿತು. ಈ ಸುದ್ದಿಯಿಂದ ದೇಶವೇ ತತ್ತರಿಸಿತು. ಆ ಸಮಯದಲ್ಲಿ ಬಾರವರು ಮಾರ್ಗದರ್ಶಕರಾಗಿ ದೇಶದ ಜನಕ್ಕೆ ವಿವೇಕ ನುಡಿದರು.

"ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥೆ ನಮ್ಮ ಮುಂದೆ ಇಟ್ಟ ರಚನಾತ್ಮಕ ಕಾರ್ಯಗಳನ್ನು ಒಗ್ಗಟ್ಟಿನಿಂದ ಮಾಡಿದ್ದೇ ಆದರೆ ಗಾಂಧೀಜಿಯವರನ್ನು ಬಿಡುಗಡೆ ಮಾಡಿಸಬಹುದು" ಎಂದು ಹೇಳಿದ ಅವರ ಹೃದಯಾಂತರಾಳದ ಮಾತುಗಳು ಇಡೀ ದೇಶದ ಮೇಲೆ ಪ್ರಭಾವ ಬೀರಿದವು.

ಮಹಾತ್ಮರನ್ನು ಯರವಾಡಾ ಕಾರಾಗೃಹದಲ್ಲಿಟ್ಟಾಗ ಬಾರವರು ಬಾಪೂ ಇಲ್ಲದೆ ಆಶ್ರಮದಲ್ಲಿ ನಿಲ್ಲಲಾರೆನೆಂದು ಆಶ್ರಮದ ಹೊರಗೆ ಸಂಚಾರ ಮಾಡುತ್ತಾ ಗಾಂಧೀಜಿಯ ಧ್ಯೇಯವೇ ತನ್ನ ಧ್ಯೇಯವೆಂದು ಸಾರ್ವಜನಿಕ ಕಾರ್ಯದಲ್ಲಿ ಮುಳುಗಿ ಯುವತಿಯರನ್ನು ನಾಚಿಸುವಂತೆ ಕಾರ್ಯ ನಿರತರಾದರು. ಆಡಂಬರವಿಲ್ಲದ ನೈಜವಾದ ಅವರ ನುಡಿಗಳು ಜನರ ಹೃದಯವನ್ನು ಮುಟ್ಟುತ್ತಿದ್ದವು, ನಾಯಕನಿಲ್ಲದೆ ಪರಿತಪಿಸಿದ ದೇಶಭಕ್ತರಿಗೆ ಬಾರವರು ಗಾಂಧೀಜಿಯ ಸ್ಥಾನದಲ್ಲಿ ನಿಂತು ವೀರ ರಮಣಿಯಂತೆ ಕ್ರಾಂತಿಯನ್ನು ಮುಂದುವರಿಸಲು ಸ್ಫೂರ್ತಿ ನೀಡಿದರು.

ಸೋನಾಗಡ ತಾಲ್ಲೂಕಿನ ಆದಿವಾಸಿಗಳಲ್ಲಿದ್ದ ಕುಡಿತದ ದುಶ್ಚಟವನ್ನು ತಪ್ಪಿಸಲು ಬಾರವರು ತಾವೇ ಅಲ್ಲಿಗೆ ಹೋಗಿ ಸಾಮೂಹಿಕ ದೇವತಾ ಪ್ರಾರ್ಥನೆಯನ್ನು ಕಲಿಸಿ ಚರಕದಲ್ಲಿ ನೂಲುವುದನ್ನು ಅವರಿಗೆ ಹೇಳಿಕೊಟ್ಟರು.

ಖೇಡಾ ಜಿಲ್ಲೆಯಲ್ಲಿ ಸರ್ಕಾರದ ಜಪ್ತಿಯಿಂದ ಸುಮಾರು ಇಪ್ಪತ್ತಮೂರು ಮನೆಗಳ ಹೆಂಗಸರು ಮತ್ತು ಮಕ್ಕಳು ಪೇಚಾಟಕ್ಕೆ ಸಿಕ್ಕಿದಾಗ, ಬಾರವರು ಕೂಡಲೇ ಅಲ್ಲಿಗೆ ಹೊರಟು ಜನರಿಗೆ ಸಾಂತ್ವನ ನೀಡಿದರು.

"ಸರ್ಕಾರ ನಮ್ಮನ್ನು ಎಷ್ಟು ಹಿಂಸಿಸಿದರೂ ಸಹಿಸಬೇಕು. ನಮ್ಮ ಸ್ವತ್ತನ್ನು ಕಳೆದುಕೊಂಡರೂ ಸರ್ಕಾರಕ್ಕೆ ಕಂದಾಯವನ್ನು ನೀವು ಕೊಡಬಾರದು, ಸೋಲ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಬಾರದು" ಎಂದು ಧೈರ್ಯದ ಮಾತನ್ನು ಜನಸಮೂಹಕ್ಕೆ ಬೋಧಿಸಿ ಸ್ವಾತಂತ್ರ್ಯ ಯುದ್ಧ ಧರ್ಮದ ಮಾರ್ಗವನ್ನು ಎಲ್ಲರಿಗೂ ತಿಳಿಯುವಂತೆ ಹೇಳಿಕೊಟ್ಟರು.

೧೯೩೦ರಲ್ಲಿ ನಡೆದ ಗುಜರಾತ್ ಪ್ರಾಂತ್ಯದ ಕರನಿರಾಕರಣೆಯ ಹೋರಾಟ ಪ್ರಸಿದ್ಧವಾದದು. ಬಾರವರ ನೇತೃತ್ವದಲ್ಲಿ ಮಹಿಳೆಯರು ಕಂಡ ಅದ್ಭುತವಾದ ಜನ ಜಾಗೃತಿಯ ಸಂಕೇತವದು. ಬಾರವರನ್ನು ದಸ್ತಗಿರಿ ಮಾಡಿ ಹತ್ತು ತಿಂಗಳ ಕಠಿಣ ಸಜೆ ವಿಧಿಸಿದರು. ಜೈಲಿನಿಂದ ಬಿಡುಗಡೆಯಾದ ಮೇಲೂ ಪೋಲೀಸರ ಕಣ್ಣುಗಳು ಅವರನ್ನೇ ಹಿಂಬಾಲಿಸುತ್ತಿದ್ದವು.

ಧರಸನಾ ಸತ್ಯಾಗ್ರಹದಲ್ಲಿ ಅನೇಕ ಮಹಿಳೆಯರು ಪ್ರಾಣ ಬಲಿತೆತ್ತರು. ಪೋಲೀಸರನ್ನು ಎದುರಿಸಿ ಪೆಟ್ಟು ತಿಂದ ಮಹಿಳೆಯರನ್ನು ನೋಡಿ ಸಮಾಧಾನ ಹೇಳಿ ಸ್ಫೂರ್ತಿ ನೀಡಲು ಬಾರವರು ಗ್ರಾಮಗಳಿಗೆ ಧಾವಿಸಿ ಹೋಗುತ್ತಿದ್ದರು. ಬಾರವರಿಗೆ ರಕ್ತಕ್ಷಯ ಪ್ರಾರಂಭವಾಗಿ ಮರೋಲಿಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾಗಲೂ ಸತ್ಯಾಗ್ರಹದ ಕಾರಣ ಹೆಣ್ಣು ಮಕ್ಕಳಿಗೆ ಹೆಚ್ಚು ಗಾಯವಾಗಿ ಆಸ್ಪತ್ರೆಗೆ ಸೇರಿದ್ದಾರೆಂಬ ಸುದ್ದಿ ಕೇಳಿದ ಕೂಡಲೇ ತನ್ನ ಅನಾರೋಗ್ಯವನ್ನೂ ಲಕ್ಷಿಸದೆ ಬಾರವರು ಗಾಯಗೊಂಡ ಸತ್ಯಾಗ್ರಹಿಗಳನ್ನು ಕಾಣಲು ಆಸ್ಪತ್ರೆಗೆ ಹೋದರು. ಪೋಲೀಸರ ದೌರ್ಜನ್ಯವನ್ನು ಕಂಡು ಬಾರವರ ಹೃದಯ ಮರುಗಿತು. ರಾಷ್ಟ್ರಮಾತೆಯ ದರ್ಶನ ಪಡೆದ ಆ ಸತ್ಯಾಗ್ರಹಿಗಳು ತಾವು ಪುನೀತರಾದೆವೆಂದು ತಮ್ಮ ಗಾಯದ ನೋವನ್ನು ಮರೆತು ಹರ್ಷಗೊಂಡರು.

ಹೆಣ್ಣು ಮಕ್ಕಳಿಗೆ ತರಬೇತಿ ಕೊಡಲು ಸೂರತ್ ಜಿಲ್ಲೆಯಲ್ಲಿ ಶಿಬಿರ ಪ್ರಾರಂಭಿಸಿದಾಗ ಬಾರವರ ಹೆಸರನ್ನು ಕೇಳಿ ಸಾವಿರಾರು ಹೆಂಗಸರು ಬಂದರು. ಮನೆಮಠವನ್ನು ಹೆಂಡತಿ ಮಕ್ಕಳನ್ನು ಕಳೆದುಕೊಂಡು ನೊಂದ ದೇಶಭಕ್ತರಿಗೆ ನೆರವು ನೀಡಿ ಮಧುರ ವಚನದಿಂದ ಸಮಾಧಾನ ಮಾಡುತ್ತಿದ್ದರು. ಬಾಪೂರವರು ಸೆರೆಯಲ್ಲಿದ್ದಾಗ ಅವರ ಶಕ್ತಿಯೂ ಬಾರವರಲ್ಲಿ ಆವಿರ್ಭವಿಸಿತೋ ಎನ್ನುವಂತೆ ಸಾತ್ವಿಕ ತೇಜಸ್ಸಿನಿಂದ ಜನರ ಮಧ್ಯೆ ಮುನ್ನುಗ್ಗಿ ಹಳ್ಳಿಯವರಿಗೂ ಅರ್ಥವಾಗುವಂತೆ ಸಾತಂತ್ರ್ಯ ಸಂಗ್ರಾಮದ ತಿರುಳನ್ನು ವಿವರಿಸಿದರು. ಇಂತಹ ವಿಶಾಲ ಬಾಂಧವ್ಯದಲ್ಲಿ ತನ್ನ ನಾಲ್ಕು ಮಕ್ಕಳ ಯೋಗಕ್ಷೇಮವನ್ನು ಮರೆತು ಪತಿಯು ಸೆರೆಮನೆಯಲ್ಲಿರುವ ನೋವನ್ನು ಸಹಿಸಿಕೊಂಡು ಬಾರವರು ಸ್ವಾತಂತ್ರ್ಯ ಜ್ಯೋತಿ ಹಿಡಿದು ನಡೆದರು

ಬಾರವರಿಗೆ ೧೯೩೨ರಲ್ಲಿ ಪುನಃ ಒಂಭತ್ತು ತಿಂಗಳ ಕಠಿಣ ಸಜಾ ವಿಧಿಸಲಾಯಿತು. ಕುಟ್ಟುವ, ಬೀಸುವ, ಕಲ್ಲು ಒಡೆಯುವ 'ಸಿ' ಕ್ಲಾಸ್‌ನಲ್ಲಿ ಸರ್ಕಾರ ಬಾರವರನ್ನು ಬಂಧಿಸಿಟ್ಟಾಗ ಬಾರವರ ಮುಖದ ಪ್ರಸನ್ನತೆ ಬಾಡಲಿಲ್ಲ. ಮಹಾತ್ಮನ ಪತ್ನಿ ಎಂಬ ಹೆಮ್ಮೆ ಇಲ್ಲದೆ ನಮ್ರತೆಯಿಂದಿದ್ದರು.

ಈ ಸ್ಥಿತಿ ಕೇಳಿ ಗಾಂಧಿ ನುಡಿದರು, ಕಸ್ತೂರಿಬಾ ನಮ್ರಳಾಗಿ ಸೌಮ್ಯವಾಗಿಯೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಇರುತ್ತಾಳೆ. ಆದರೆ ಸಾಹಸ ಶೌರ್ಯ ಆಕೆಯ ವಿಶೇಷ ಗುಣ. ಹಠ-ಸಿಟ್ಟು ಇದ್ದರೂ ಆಕೆಯಲ್ಲಿ ವೀರತೆ ಎದ್ದುಕಾಣುತ್ತದೆ. ಸರ್ಕಾರ ವಿಧಿಸಿರುವುದನ್ನು ವಿರೋಧಿಸಲಾಗದು.

ಸ್ವರಾಜ್ಯ ಗಳಿಸದೆ ಸಾಬರಮತಿ ಆಶ್ರಮವನ್ನು ಪ್ರವೇಶಿಸುವುದಿಲ್ಲವೆಂಬ ಮಹಾತ್ಮರ ನಿರ್ಧಾರವನ್ನು ತಿಳಿದು ಜಮನಾಲಾಲ್ ಬಜಾಜರು ನೂರು ಎಕರೆ ಜಮೀನನ್ನು ದಾನವಾಗಿ ಕೊಟ್ಟರು. ಅಲ್ಲೇ ೧೯೩೫ರಲ್ಲಿ ಸೇವಾಗ್ರಾಮದ ಆಶ್ರಮ ಸ್ಥಾಪಿತವಾದುದು.

ಈ ಸೇವಾಗ್ರಾಮ ಯಾತ್ರಾಸ್ಥಳವಾಯಿತು. ಭಾರತದ ಹೃದಯವೆನ್ನಿಸಿತು. ಇಡೀ ಜಗತ್ತಿಗೆ ಆಕರ್ಷಣೆಯ ಕೇಂದ್ರವಾಯಿತು. ಕಸ್ತೂರಿಬಾರವರ ಸಾನಿಧ್ಯವನ್ನು ಬಯಸಿ ಗಾಂಧೀಜಿಯ ಮಾರ್ಗದರ್ಶನ ಪಡೆಯಲು ಬಂದ ದೇಶಭಕ್ತರಿಂದ ಸೇವಾಗ್ರಾಮ ತುಂಬಿತು.

ಆಶ್ರಮ ಕಟ್ಟಿ ಬಾಪೂರವರು ಜನರನ್ನು ಸೇರಿಸಿದರೆ, ಬಾರವರು ತಾಯಿಯಂತೆ ಅವರೆಲ್ಲರನ್ನೂ ಕಾಪಾಡುತ್ತಿದ್ದರು. ಹಿಂದೂ ವಿಶ್ವವಿದ್ಯಾಲಯದ ಪ್ರೊಫೆಸರ್‌ರವರ ಹೆಂಡತಿ ಆಶಾದೇವಿ, ರಾಜಕುಮಾರಿ ಅಮೃತಕೌರ್, ವಿಜಯನಗರದ ರಾಣಿ ಪ್ರೇಮಕಂಟಕ್, ಸರೋಜಿನಿ ನಾಯ್ಡು, ಇಂಗ್ಲೆಂಡಿನ ಮಿಸ್ ಸ್ಲೇಡ್, ಸುಶೀಲಾ ನಯ್ಯಾರ್ ಮುಂತಾದ ಮಹಿಳಾಮಣಿಗಳು ಬಾರವರ ಆದರದಲ್ಲಿದ್ದು ದೇಶಸೇವೆ ಮಾಡಿದರು. ಆಶ್ರಮವಾಸಿಗಳಿಗಾಗಿಯೇ ಬಾರವರಿಗೆ ವೇಳೆ ಮೀಸಲಾಗಿತ್ತು. ಬಾಪೂರವರ ಸೇವೆಯನ್ನೂ ತಪ್ಪದೆ ಮಾಡುತ್ತಿದ್ದರು. ಗಡಿಯಾರದ ಮುಳ್ಳನ್ನು ನೋಡಿಕೊಂಡು ವೇಳೆಗೆ ಸರಿಯಾಗಿ ಅವರಿಗೆ ಬೇಕಾದುದನ್ನು ಬಾರವರೇ ನೋಡಿಕೊಳ್ಳುತ್ತಿದ್ದರು.

ಬಾ ಬೆಳಗಿನ ಜಾವ ನಾಲ್ಕು ಗಂಟೆಗೆ ಎದ್ದು ಸಾಮೂಹಿಕ ಪ್ರಾರ್ಥನೆಯಲ್ಲಿ ಭಾಗವಹಿಸುವರು. ಅನಂತರ ಒಂದು ಗಂಟೆ ಕಾಲ ಪೂಜೆಯಲ್ಲಿ ನಿರತರಾಗುವರು. ಗೋವಿನ ಪೂಜೆ, ತುಳಸೀ ಪೂಜೆಗೆ ಬಾರವರು ಪ್ರಾಮುಖ್ಯತೆ ಕೊಟ್ಟಿದ್ದರು. ತನ್ನ ಜೀವನದಲ್ಲಿ ಒಂದು ದಿನವೂ ತುಳಸೀ ಪೂಜೆಯನ್ನು ಬಾ ತಪ್ಪಿಸಲಿಲ್ಲ. ಈಗಲೂ ಬಾರವರು ಪೂಜಿಸುತ್ತಿದ್ದ ತುಳಸೀ ಬೃಂದಾವನವನ್ನು ಸೇವಾಗ್ರಾಮದ ಆಶ್ರಮದಲ್ಲಿ ನೋಡಬಹುದು. ಇದೇ ವಾರ್ಧಾ ಗ್ರಾಮದ ಸೇವಾಗ್ರಾಮ.

ಕೆಲಸದಲ್ಲಿ ಬಾ ಅತಿ ಶಿಸ್ತಿನವರು. ಅಡಿಗೆ ಪದಾರ್ಥಗಳನ್ನು ಯಾವಾಗಲೂ ಮುಚ್ಚಿಡಬೇಕು. ತರಕಾರಿ ಹಣ್ಣು ಬಾಡದಂತೆ ನೋಡಿಕೊಳ್ಳುವುದು, ಆಯಾ ಜಾಗದಲ್ಲಿ ಆಯಾ ವಸ್ತುಗಳನ್ನು ಅಣಿಯಾಗಿ ಇಡುವುದು, ರೊಟ್ಟಿಗಳು ದುಂಡಾಗಿ ನಾಜೂಕಾಗಿ ಒಂದೇ ಸಮನಾಗಿರಬೇಕು, ಸರಿಯಾಗಿ ಬೆಂದಿರಬೇಕು, ಸೀದುಹೋಗಬಾರದು, ತರಕಾರಿಗಳು ಸರಿಯಾದ ಹದದಲ್ಲಿ ಪಕ್ವವಾಗಬೇಕು. ಯಂತ್ರದಲ್ಲಿ ಮಾಡಿದಂತೆ ಒಂದೇ ಅಳತೆಯಲ್ಲಿ ನೂರಾರು ರೊಟ್ಟಿಗಳನ್ನು ಅತಿಬೇಗ ಸಿದ್ಧಪಡಿಸು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ವುದು ಬಾರವರ ವೈಶಿಷ್ಟ್ಯ. ಪಾಕಕಲಾ ನಿಪುಣೆಯಾಗಿದ್ದರೂ ಆಶ್ರಮದಲ್ಲಿ ರುಚಿಗಾಗಿ ಆಹಾರವನ್ನು ತಯಾರಿಸಕೂಡದಾಗಿತ್ತು.

ನುರಿತ ರಾಜಕಾರಣೆಯಲ್ಲದಿದ್ದರೂ ಬಾ ಭಾರತ ದೇಶದ ಬಗ್ಗೆ ಸಾಕಷ್ಟು ಜ್ಞಾನ ಪಡೆದಿದ್ದರು. ಗುಜರಾತಿ, ಹಿಂದಿ ಭಾಷೆಯಲ್ಲಿ ಪತ್ರಿಕೆ ಓದುವುದನ್ನು ಕಲಿತಿದ್ದರು. ಪ್ರತಿದಿನ ಐನೂರು ಸುತ್ತು ನೂಲನ್ನು ನೂಲುತ್ತಿದ್ದರು. ಸಂಜೆಯ ಪ್ರಾರ್ಥನೆಯಾದ ಮೇಲೆ ಆಶ್ರಮದ ಮಹಿಳೆಯರೊಂದಿಗೆ ಉಪಯುಕ್ತವಾದ ವಿಚಾರ ವಿನಿಮಯ ನಡೆಸುತ್ತಿದ್ದರು.

ಬಾಪೂ ಸಂಗ್ರಾಮ ಹೂಡಿದಾಗ ನಾವೇನು ಮಾಡಬೇಕೆಂದು ಮಹಿಳೆಯರು ಬಾರವರನ್ನು ಸುತ್ತುಗಟ್ಟುತ್ತಿದ್ದರು. ಬಾಪೂ ಉಪವಾಸ ಕೈಗೊಂಡಾಗ ಕೆಲವು ವೇಳೆ ಪ್ರಾಣದ ಆಸೆಯನ್ನೂ ಎಲ್ಲರೂ ತೊರೆಯುತ್ತಿದ್ದರು. ಕಸ್ತೂರಿಬಾರವರ ಮೂಕಸಂಕಟ ಬಲ್ಲವರಾರು ?

೧೯೪೨ರಲ್ಲಿ "ಬ್ರಿಟಿಷರೇ, ಭಾರತವನ್ನು ಬಿಟ್ಟು ತೊಲಗಿ" ಚಳವಳಿ ಪ್ರಾರಂಭವಾದಾಗ, ಕಾಂಗ್ರೆಸ್ ಮಹಾಸಭೆಯಲ್ಲಿ ಭಾಗವಹಿಸಲು ಬೊಂಬಾಯಿಗೆ ಮಹಾತ್ಮರು ಹೊರಡಬೇಕಾಗಿತ್ತು. ಬಾರವರೂ ಪ್ರಯಾಣಕ್ಕೆ ಸಿದ್ಧರಾದರು. ಅಷ್ಟೇ ಅಲ್ಲ ತಮ್ಮ ಕೊನೆಯ ಪ್ರಯಾಣಕ್ಕೂ ಸಿದ್ಧಪಡಿಸಿಕೊಂಡರು. ಬಾಪೂಜಿ ತಾನೇ ನೂತು ಕೊಟ್ಟ ಕೆಂಪು ಅಂಚಿನ ಸೀರೆಯನ್ನು ಕಂಡರೆ ಬಾರವರಿಗೆ ಬಲು ಪ್ರೀತಿ. ತಾನೂ ಒಂದು ವೇಳೆ ಜೈಲಿಗೆ ಹೋಗಬೇಕಾಗಬಹುದೆಂದು ತನ್ನ ಮೊಮ್ಮಗಳು ಮನುವನ್ನು ಕರೆದು ಆ ಸೀರೆಯನ್ನು ಬಹಳ ಜೋಪಾನವಾಗಿ ಕಾಪಾಡಬೇಕೆಂದೂ ತಾವು ಸತ್ತ ಮೇಲೆ ಅದನ್ನೇ ಹೊದಿಸಬೇಕೆಂದೂ ತಮ್ಮ ಈ ಅಭಿಲಾಷೆಯನ್ನು ಪೂರೈಸುವುದು ಮನುವಿನ ಜವಾಬ್ದಾರಿಯೆಂದೂ ತಿಳಿಸಿದರು. ಸೇವಾಗ್ರಾಮಕ್ಕೆ ಪುನಃ ಬರಲಾರೆನೆಂದು ಆಶ್ರಮವಾಸಿಗಳಿಗೆ ವಿವೇಕ ಹೇಳಿದರು.

ಬಾ ಮತ್ತು ಬಾಪೂ ಇನ್ನೂ ಬಹಿರಂಗ ಸಭೆಯನ್ನು ಸೇರಲೇ ಇಲ್ಲ. ಅಷ್ಟರಲ್ಲೇ ಆಗಸ್ಟ್ ಒಂಭತ್ತನೇ ತಾರೀಖು ೧೯೪೨ ರಂದು ಇಬ್ಬರನ್ನೂ ದಸ್ತಗಿರಿ ಮಾಡಿದರು.

ಬಾರವರನ್ನು ಬೊಂಬಾಯಿ ಪಟ್ಟಣದ ಅರ್ಥರ್ ರೋಡ್ ಜೈಲಿನಲ್ಲಿ ಹಾಕಿದರು. ಜೈಲಿನಲ್ಲಿ ಬಾರವರ ಮೈ ಸುಡುವಷ್ಟು ಜ್ವರ ಕಾಯುತ್ತಿತ್ತು. ಡಾ॥ ಸುಶೀಲಾ ನಯ್ಯರ್ ಬಾರವರ ಜೊತೆಯಲ್ಲಿ ತಾನೂ ಸೆರೆಯಲ್ಲಿದ್ದು ಬಾರವರನ್ನು ನೋಡಿಕೊಂಡರು. ಗಾಳಿ ಬೆಳಕಿಗೆ ಅಭಾವ, ಜೌಗುನೆಲ, ಮುಗ್ಗು ವಾಸನೆ, ಚರಂಡಿಯ ದುರ್ವಾಸನೆ, ಪಕ್ಕದ ಕೋಣೆಯ ಮಹಿಳಾ ಖೈದಿಗಳ ಅಸಾಧ್ಯ ಗಲಾಟೆ, ಮಕ್ಕಳ ರೋದನ ಇದೆಲ್ಲವನ್ನೂ ಸಹಿಸಿಕೊಳ್ಳಬೇಕಾಗಿತ್ತು.

ಸುಶೀಲಾ ನಯ್ಯಾರ್ ತನ್ನ ಡೈರಿಯಲ್ಲಿ ಅಲ್ಲಿ ನಡೆದ ಪ್ರತಿದಿನದ ವಿಷಯವನ್ನು ಬರೆದಿದ್ದಾರೆ. ಕೆಲವು ದಿನಗಳ ನಂತರ ಬೊಂಬಾಯಿ ಜೈಲಿನಿಂದ ಬಾರವರನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಬಾಪೂ ಇದ್ದ ಪುಣೆಯ ಜೈಲಿಗೆ ರವಾನಿಸಿದರು. ಬಾ ತಾವಾಗಿಯೇ ಸರ್ಕಾರವನ್ನು ಕೇಳಿಕೊಂಡು ಪುಣೆಯ ಜೈಲಿಗೆ ಬರಲಿಲ್ಲವೆಂದು ಖಚಿತವಾದ ಮೇಲೆ ಬಾಪೂ ಬಾಗೊಡನೆ ಮಾತಾಡಿದರು.

ಗಾಂಧೀಜಿ ಇದ್ದ ಪುಣೆಯ ಜೈಲು ಪಾಳುಬಿದ್ದ ಆಗಾಖಾನ್‌ರ ಅರಮನೆಯಾಗಿತ್ತು. ಅಲ್ಲಿದ್ದ ಮಹಾತ್ಮ ಗಾಂಧಿ, ಕಸ್ತೂರಿಬಾ, ಮಹಾದೇವ್ ದೇಸಾಯಿ, ಸರೋಜಿನಿ ನಾಯ್ಡು, ಸುಶೀಲಾ ನಯ್ಯಾರ್ ಇಷ್ಟು ಮಂದಿ ರಾಜಬಂಧಿಗಳಿಗೆ ೨೪ ಗಂಟೆ ಕಾಲವೂ ಬಿಗಿ ಪಹರೆಯಿತ್ತು. ಇಲ್ಲಿ ಪತ್ರಿಕೆ ಓದುವಂತಿರಲಿಲ್ಲ, ಮಾತಾಡುವಂತಿರಲಿಲ್ಲ. ಭೀಕರ ಮೌನ ಆವರಿಸಿತ್ತು. ಬಾರವರು ದೇವರಪೂಜೆ, ಭಗವದ್ಗೀತೆ, ರಾಮಾಯಣ ಪಾರಾಯಣದಲ್ಲಿ ನಿರತರಾಗುತ್ತಿದ್ದರು.

ಅನಿರ್ದಿಷ್ಟ ಕಾಲದವರೆಗೆ ವಿಚಾರಣೆ ಇಲ್ಲದೆ ಜೈಲಿನಲ್ಲಿರಬೇಕಾದುದು ಬಾರವರಿಗೆ ಕಷ್ಟವಾಗಿ ಕಂಡಿತು. ಆಶ್ರಮದ ಪವಿತ್ರ ವಾತಾವರಣ, ಪ್ರತಿದಿನ ತಮ್ಮ ಸುತ್ತಲೂ ಸೇರುತ್ತಿದ್ದ ಹೆಣ್ಣುಮಕ್ಕಳ ಪ್ರೇಮ, ಬಿಡುವಿಲ್ಲದ ಕಾರ್ಯಕ್ರಮ, ಅತಿಥಿ ಸೇವೆ, ದೇಶ ಭಕ್ತಿಯ ವಿಚಾರ ಇವೆಲ್ಲಾ ಜ್ಞಾಪಕಕ್ಕೆ ಬರುತ್ತಿತ್ತು.

ಸೆರೆಮನೆಯವಾಸ ಬಾರವರ ಆರೋಗ್ಯವನ್ನು ಸಂಪೂರ್ಣವಾಗಿ ಕೆಡಿಸಿತು. ಶ್ವಾಸನಾಳ ಊದಿ ಎದೆನೋವು ಬಂತು. ಕಫ ಕಟ್ಟಿ ಉಸಿರಾಡುವಾಗ ಸೆಳೆತ ಕಾಡಿಸಿತು.

೧೯೪೨ನೇ ಡಿಸೆಂಬರ್ ಬಾಪೂಜಿ ಪುನಃ ಉಪವಾಸ (ಜೈಲುಖಾನೆಯಲ್ಲೇ) ಹೂಡುವರೆಂದು ತಿಳಿದು ಎಲ್ಲರಿಗೂ ಯೋಚನೆಯಾಯಿತು. ಸರೋಜಿನಿ ನಾಯ್ಡು ಯಾವಾಗಲೂ ಸರಸದಿಂದ ಮಾತಾಡುವವರು. "ಬಾಪೂಜಿ ನಿಮ್ಮ ಉಪವಾಸ ಬಾರವರನ್ನು ಮುಗಿಸಿ ಬಿಡುವುದು" ಎಂದು ಗಾಂಧೀಜಿಯನ್ನು ಕೀಟಲೆ ಮಾಡಿದರು. ಬಾಪೂ ನಕ್ಕು ಹೇಳಿದರು, "ನಿನಗಿಂತ ಹೆಚ್ಚಾಗಿ 'ಬಾ'ಳನ್ನು ನಾನು ಬಲ್ಲೆ. ಈಕೆಯ ಸ್ಥೈರ್ಯ ನಿನಗೇನು ಗೊತ್ತು ?"

ಬಾರವರಿಗೆ ತನ್ನ ಉಪವಾಸದ ಕಾರಣವನ್ನು ಬಾಪೂ ಹೇಳಿದರು. ಎಂದಿಗೂ ಪತಿಯ ಇಚ್ಛೆಗೆ ವಿರೋಧವಾಗಿ ಬಾ ಹೋದವರಲ್ಲ. ಪತಿಯ ಆರೋಗ್ಯಕ್ಕಾಗಿ ಮನದಲ್ಲೇ ಜಪಿಸಿದರು.

ಮಹಾತ್ಮರ ಉಪವಾಸದ ಹದಿಮೂರನೆಯ ದಿನ ಅವರು ಉಳಿಯುವುದಿಲ್ಲವೆಂದು ಡಾಕ್ಟರ್ ಹೇಳಿದಾಗ, ಸರ್ಕಾರ ಹೆದರಿ ಆಗಾಖಾನ್ ಅರಮನೆಯ ಕಬ್ಬಿಣದ ಸರಪಣಿಯನ್ನು ತೆಗೆದು ಬಾಪೂರವರ ದರ್ಶನಕ್ಕಾಗಿ ಸಾರ್ವಜನಿಕರನ್ನು ಒಳಗೆ ಬಿಟ್ಟಿತು. ಬಂದವರು ಬಾರವರ ಬಳಿ ಮಾತಾಡಿಯೇ ಹೋಗುತ್ತಿದ್ದರು. ಇಂತಹ ಕಷ್ಟ ಪರಿಸ್ಥಿತಿಯಲ್ಲೂ ಎಲ್ಲರ ಕ್ಷೇಮವನ್ನು ಸ್ನೇಹ ಮಮತೆಯಿಂದ ಎಲ್ಲರನ್ನೂ ಬಾ ಮಾತಾಡಿಸುತ್ತಿದ್ದರು.

೩-೩-೪೩ಕ್ಕೆ ಮಹಾತ್ಮರ ಉಪವಾಸ ಮುಕ್ತಾಯವಾಯಿತು. ಇನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಬಂಧನದ ಬಿಡುಗಡೆ ಎಂದು ಎನ್ನುತ್ತಾ ತವಕಿಸಿ ಬಾ'ರವರು ಶಾರೀರಿಕವಾಗಿ ಮಾನಸಿಕವಾಗಿ ಬಳಲಿದರು. ೧೯೪೩ ಅಕ್ಟೋಬರ್ ಎರಡರಂದು ಮಹಾತ್ಮರ ಜನ್ಮದಿನಾಚರಣೆ ಜೈಲಿನಲ್ಲೇ ನಡೆಯಿತು. ಕಸ್ತೂರಿಬಾರವರು ತಮಗೆ ಪ್ರಿಯವಾದ ಬಾಪೂ ಕೊಟ್ಟ ಸೀರೆಯನ್ನು ಉಟ್ಟರು. ಮೀರಾಬಹನ್, ಸುಶೀಲಾ, ಪ್ಯಾರೆಲಾಲ್ ಮನು ಇವರು ವಿನೋದ ಮಾಡಿ ದಂಪತಿಗಳನ್ನು ಭೇಡಿಸಲು ಪಾರ್ಸಿ, ಪಠಾಣರಂತೆ ವೇಷ ಹಾಕಿಕೊಂಡು ಬಂದು ಇಬ್ಬರಿಗೂ ನಮಸ್ಕರಿಸಿದರು. ನಿಜವಾದ ವಿಷಯ ತಿಳಿದು ಗಾಂಧೀಜಿ ಅವರ ಬೆನ್ನ ಮೇಲೆ ಪೆಟ್ಟುಕೊಟ್ಟು ನಕ್ಕರು. ಈ ವಾತಾವರಣ ಹೀಗೆಯೇ ಇರಲಿಲ್ಲ.

ಬಾರವರ ಸ್ಥಿತಿ ಬಹಳ ಚಿಂತಾಜನಕವಾಯಿತು. ಇಂತಹ ಸಮಯದಲ್ಲೂ ವೈದ್ಯರನ್ನು ಕರೆಯಿಸಿಕೊಳ್ಳಲು ಸರ್ಕಾರ ಅನುಮತಿ ಕೊಡದಿರಲು ಗಾಂಧಿ ನೊಂದುಕೊಂಡರು. ಇದೇ ತಿಂಗಳು ವೈದ್ಯರು ಬರದಿದ್ದರೆ ಚಿಕಿತ್ಸೆ ಬೇಕಾಗಿಲ್ಲ ಎಂದು ಗಾಂಧೀಜಿ ಪತ್ರ ಬರೆಯಲು ಕೂಡಲೇ ವೈದ್ಯರನ್ನು ಸರ್ಕಾರ ಕಳುಹಿಸಿತು.

ಬಾರವರು, ರಾಮನಾಮವೇ ಚಿಕಿತ್ಸೆ, ಔಷಧಿಯು ಅಗತ್ಯವಿದೆವೆಂದರು. ೨೨-೪-೪೪ ರಂದು ಮಹಾ ಶಿವರಾತ್ರಿ ಹಿಂದಿನ ರಾತ್ರಿಯಿಂದ ಬಾರವರು ನೀರನ್ನೂ ಕುಡಿದಿರಲಿಲ್ಲ. ಮಗ ದೇವದಾಸ್ ಗಂಗಾಜಲವನ್ನೂ ತುಳಸೀದಳವನ್ನೂ ತಂದಿದ್ದಾನೆ ಎಂದಾಗ ಉದ್ಧರಣೆಯಲ್ಲಿ ಎರಡು ಗುಟುಕು ತೀರ್ಥವನ್ನು ಸೇವಿಸಿದರು. ನಿಸ್ತೇಜರಾದ ಬಾರವರು ಹಾಗೆಯೇ ಬಾಪುವನ್ನು ಒರಗಿ ಮಲಗಿದರು. ಮೃತ್ಯುವಿನ ಸಂಗಡ ಹೋರಾಡುತ್ತಿರುವಾಗಲೂ ತನ್ನ ಪತಿಯು ಊಟದ ಬಗ್ಗೆ ವಿಚಾರಿಸಿಕೊಂಡರು. "ನನ್ನ ಸಾವಿಗಾಗಿ ಯಾರೂ ದುಃಖಿಸಕೂಡದು" ಎಂದು ಗಾಂಧೀಜಿಯವರನ್ನು ಒಂದು ಸಲ ದಿಟ್ಟಿಸಿ ಕಣ್ಣುಮುಚ್ಚಿದರು. ರಾಜಾರಾಂ, ಸೀತಾರಾಂ ಭಜನೆಯ ಭಕ್ತಿನಿನಾದ ಕಿವಿಗೆ ಬೀಳುತ್ತಿತ್ತು. ಹಿಂದೂಗಳಿಗೆ ಪವಿತ್ರವಾದ ಮಹಾಶಿವರಾತ್ರಿಯ ದಿನ ೨೨-೨-೪೪ ತಮ್ಮ ಪತಿಯನ್ನೊರಗಿ ಮಲಗಿದ್ದಂತೆ ಬಾರವರು ಭಗವಂತನ ಸಾನಿಧ್ಯವನ್ನು ಸೇರಿದರು. ಸ್ಥಿತಪ್ರಜ್ಞರಾದ ಮಹಾತ್ಮರೂ ಕಣ್ಣೀರು ಹರಿಸಿದರು. ಜೈಲಿನ ಆವರ ೧ ಸ್ಮಶಾನಭೂಮಿಯಾಯಿತು.

ಆಗಾಖಾನ್ ಜೈಲಿನಲ್ಲಿ ರಾಷ್ಟ್ರೀಯ ವೇದಿಕೆಯ ಮೇಲೆ ಬಲಿಯಾದವರು ಇಬ್ಬರು—ಮಹಾದೇವ್ ದೇಸಾಯಿ ಮತ್ತು ಕಸ್ತೂರಿಬಾಯಿ. ಇವರಿಬ್ಬರ ಸಮಾಧಿ ಈಗ ಪೂನಾ ಬಳಿ ಇರುವ ರಾಷ್ಟ್ರೀಯ ಸ್ಮಾರಕವೆನ್ನಿಸಿಕೊಂಡಿದೆ. ಬಾಪೂಜಿ ಸರ್ಕಾರಕ್ಕೆ ಹೀಗೆ ಬರೆದರು. "ಈ ಸಮಾಧಿಗಳ ಸ್ಥಳ ಅತಿ ಪವಿತ್ರವಾದುದು. ಈ ಜಾಗವನ್ನು ಬೇರೆ ಯಾವ ಕೆಲಸಕ್ಕೂ ಉಪಯೋಗಿಸಬಾರದು. ಎಲ್ಲರೂ ಸಮಾಧಿ ಬಳಿ ಹೋಗಿ ಬರಲು ಅವಕಾಶ ಕೊಡಬೇಕು."

ಆಗಾಖಾನ್ ಅರಮನೆಯು ಗಾಂಧೀ ದಂಪತಿಗಳ ಸೆರೆಮನೆಯಾಗಿದ್ದು, ಅನಂತರ ಕಸ್ತೂರಿಬಾರವರ ಸಮಾಧಿಯಾಗಿ ಈಗ ಗಾಂಧೀ ಸಂಗ್ರಹಾಲಯವಾಗಿದೆ. ಈ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಸಂಗ್ರಹಾಲಯವನ್ನು ಸಂದರ್ಶಿಸಲು ಪ್ರತಿದಿನ ನೂರಾರು ಜನರು ತಂಡ ತಂಡವಾಗಿ ಬರುವರು.

ಕಸ್ತೂರಿಬಾ ಹೆಸರಿನಲ್ಲಿ ಸುಮಾರು ಒಂದು ಕೋಟಿ ರೂಪಾಯಿ ಸಂಗ್ರಹವಾದ ನಿಧಿಯನ್ನು ಗ್ರಾಮಗಳ ಮಕ್ಕಳ ಮತ್ತು ಹೆಂಗಸರ ಯೋಗಕ್ಷೇಮಕ್ಕಾಗಿ ಉಪ ಯೋಗಿಸಲು ಮಹಾತ್ಮರು ನಿರ್ಧರಿಸಿದರು. ಪೂಜ್ಯ ಕಸ್ತೂರಿಬಾ ಹೆಸರಿನಲ್ಲಿ ಮುಂಬಯಿ ಬಳಿ ಇರುವ ಬೋರಿವಿಲಿಯಲ್ಲಿ ಬಹಳ ಯಶಸ್ವಿಯಾಗಿ ಮಹಿಳಾ ಶಿಬಿರ ನಡೆಯಿತು. ಕಸ್ತೂರಿಬಾ ಶಿಕ್ಷಣ ಕೇಂದ್ರಗಳು ಸ್ಥಾಪನೆಯಾದುವು.

ಮಹಾತ್ಮರು ಎಲ್ಲರಿಗೂ ಸೇರಿದವರು ಎಂಬ ಅರಿವಿನಿಂದ ತನ್ನ ಪತಿಯನ್ನು ಬಾರವರು ದೇಶಕ್ಕೆ ಅರ್ಪಣೆ ಮಾಡಿದ್ದರು. ಸಂಗ್ರಾಮದಲ್ಲಿ ಪಾಲುಗೊಂಡವರೆಲ್ಲಾ ತನ್ನವರೆಂದು ಭಾವಿಸಿ ಅವರಿಗಾಗಿ ಸದಾ ಚಿಂತಿಸುತ್ತಿದ್ದರು. ಕೊನೆಗೆ ದೇಶಕ್ಕಾಗಿ ತನ್ನ ಪ್ರಾಣವನ್ನೇ ಅರ್ಪಿಸಿಬಿಟ್ಟರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

# ಕರ್ನಾಟಕದ ಕಸ್ತೂರ ಬಾ
# ಯಶೋಧರಾ ದಾಸಪ್ಪ

"ಪಂಚಕನ್ಯೆಯರ ಸ್ಮರಣೆಯಿಂದ ಪಾಪನಾಶವಾಗುವುದೆಂದು ನಮ್ಮಲ್ಲಿ ನಂಬಿಕೆ. ಆ ಕನ್ಯೆಯರು ಪೌರಾಣಿಕ ವ್ಯಕ್ತಿಗಳು. ಅವರು ಇದ್ದರೋ ಇಲ್ಲವೋ ಬಲ್ಲವರಾರು?... ಆದರೆ ಶ್ರೀಮತಿ ಯಶೋಧರಾ ದಾಸಪ್ಪ ಅವರು ನಮ್ಮ ಜೊತೆಯಲ್ಲಿ ನಮ್ಮ ಕಣ್ಣೆದುರು ಬಾಳಿದರು. ಜನಸೇವೆ ಮಾಡಿದರು. ದೇಶಸೇವೆ ಮಾಡಿದರು. ದೀನರು, ದಲಿತರು, ಸ್ತ್ರೀಯರು, ಮಕ್ಕಳು, ನಿರ್ಗತಿಕ ಮಹಿಳೆಯರು—ಸಮಾಜ ಕಡೆಗಣಿಸಿದ ಎಲ್ಲರ ಸೇವೆಮಾಡಿದರು. ಅವರು ದೇವರು ಕಳುಹಿಸಿಕೊಟ್ಟ ದೂತರೆಂದು ಗ್ರಾಮಾಂತರ ಜನ ನಂಬಿದ್ದರು. ಈ ದೇಶದಲ್ಲಿ ದೇವರೇ ಹುಟ್ಟಿಬಂದರೂ ಅವರಿಗಿಂತ ಹೆಚ್ಚು ಕೆಲಸ ಮಾಡಲು ಸಾಧ್ಯವಿಲ್ಲ."—

ಎಂದು ನುಡಿದು ಶ್ರೀಮತಿ ಯಶೋಧರಾ ದಾಸಪ್ಪ ಅವರನ್ನು "ಕರ್ನಾಟಕದ-ಕಸ್ತೂರಬಾ" ಎಂದು ಕರೆದಿದ್ದಾರೆ ಡಾ|| ಗೊರೂರು ರಾಮಸ್ವಾಮಿ ಅಯ್ಯಂಗಾರ್ ರವರು.

"ತನ್ನ ಜೀವಮಾನವನ್ನೆಲ್ಲಾ ಭಾರತೀಯರ ಸೇವೆಗೆ ಅರ್ಪಿಸಿ, ಪ್ರಾಮಾಣಿಕವಾಗಿ ದುಡಿದಿದ್ದಾರೆ. ಇವರಿಗಿಂತ ಬೇರೆ ದೇವರ್‍ಯಾರು ?" ಎಂದು ಪ್ರಶ್ನಿಸಿದ್ದಾರೆ.

ಇಂತಹ ಒಂದು ಹಿರಿಯ ಚೇತನದ ನೆನಪನ್ನು ಕೊಡುವಂತಿರುವ ಭವ್ಯಮಂದಿರ "ಯಶೋ ನಿವಾಸ" ಯಶಸ್ಸಿನ ಮನೆಯೂ ಹೌದು. ಹಿಂದೆ ಈ ಮನೆಯನ್ನು ಯಶೋಧರಾ ಅವರು ಬ್ರಿಟಿಷರ ವಿರುದ್ಧ ಭೂಗತ ಚಳವಳಿಯ ಪ್ರಮುಖ ನಿರ್ದೇಶನ ಕೇಂದ್ರವನ್ನಾಗಿ ಮಾಡಿಕೊಂಡಿದ್ದರಂತೆ.

ಸ್ವಾತಂತ್ರ್ಯ ಹೋರಾಟದ ದಿನಗಳಲ್ಲಿ ಯಶೋಧರಾ ಅವರ ಪಾತ್ರವನ್ನು ಕುರಿತು ಅವರ ಧೈರ್ಯೋತ್ಸಾಹ, ವೀರ ವ್ಯಕ್ತಿತ್ವವನ್ನು ನೆನಪಿಸಿಕೊಂಡು ತಾವು ಆ ದಿನಗಳಲ್ಲಿ ಅವರ ಜೊತೆಯಲ್ಲೇ ಇದ್ದ ಅನುಭವದೊಂದಿಗೆ ತಾಯಿಯ ಬಗ್ಗೆ ಇತರರು ಹೇಳುತ್ತಿದ್ದುದನ್ನೂ, ತಮ್ಮ ಅಜ್ಜಿ–ತಾತಂದಿರು ಹೇಳಿದ ಘಟನೆಗಳನ್ನು ಹಿನ್ನೆಲೆಯಾಗಿಟ್ಟುಕೊಂಡು ಹೇಳುವ ಅವರ ಕುಮಾರ ತುಳಸೀದಾಸ ದಾಸಪ್ಪ ಹೀಗೆನ್ನುತ್ತಾರೆ—

"ಹೆಣ್ಣುಮಕ್ಕಳನ್ನು ಕೀಟಲೆ ಮಾಡಿ ಅಳುವಂತೆ ಮಾಡುವುದು ಗಂಡುಮಕ್ಕಳಿಗೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಖುಷಿ. ಪುಟ್ಟ ಯಶೋಧರಾಳನ್ನು ಅವಳ ಸಹೋದರರು ಹೊಡೆದು ಅಳಿಸಿದಾಗ, ಏಕೆ ಸುಮ್ಮನೆ ಹೊಡೆದು ಮಗುವನ್ನು ಅಳಿಸುತ್ತಿಯೋ ?" ಎಂದ ತಾಯಿ ಕೇಳುತ್ತಿದ್ದರಂತೆ. ಅದಕ್ಕೆ ಉತ್ತರ—'ಅವ್ವಾ, ಇವಳು ದೊಡ್ಡವಳಾದಾಗ ದೊಡ್ಡಣ್ಣ ಹಾಲಿನಲ್ಲಿ ನಿಂತು ಭಾಷಣ ಮಾಡಿದರೆ ಕೊನೆಯಲ್ಲಿ ಕುಳಿತವರಿಗೂ ಕೇಳಿಸಬೇಕಮ್ಮ, ಇವಳ ಮಾತು. ಅತ್ತರೆ ಧ್ವನಿ ಹೆಚ್ಚಾಗುತ್ತದೆ'—ಎಂದು ತುಂಟಾಟದ ಮಾತಾಡಿದರಂತೆ ಯಶೋಧರೆಯ ಸೋದರರು."

ಇದು ತುಂಟಾಟದ ಮಾತಾಗಿದ್ದರೂ ಭವಿಷ್ಯದ ಸತ್ಯವಾಗಿತ್ತು. ದೊಡ್ಡವರಾದ ಮೇಲೆ ಯಶೋಧರಾ ನಿಜವಾಗಿಯೂ ಬೆಂಗಳೂರಿನ ಅತ್ಯಂತ ದೊಡ್ಡ ಸಭಾ ಮಂದಿರವಾದ ದೊಡ್ಡಣ್ಣ ಹಾಲಿನಲ್ಲಿ ಕಿಕ್ಕಿರಿದು ನೆರೆದ ಜನಸಮೂಹವನ್ನು ಉದ್ದೇಶಿಸಿ ಎಷ್ಟೋ ಸಲ ಭಾಷಣ ಮಾಡಿದ್ದಾರೆ. ಧ್ವನಿವರ್ಧಕವಿಲ್ಲದ ಆ ಕಾಲಕ್ಕೆ ಯಶೋಧರಾ ಅವರ ಕಂಚಿನ ಕಂಠ ಸಹಸ್ರಾರು ಜನರನ್ನು ಆಕರ್ಷಿಸುತ್ತಿತ್ತು. ಉತ್ತಮ ವಿಷಯಗಳ, ಸಾಹಿತ್ಯಿಕ ಮೌಲ್ಯದ ಸುಸಂಸ್ಕೃತ ವಾಕ್ಸರಣಿಯಲ್ಲಿ ಅಸ್ಖಲಿತವಾಗಿ ಇವರು ಮಾಡುವ ಭಾಷಣವನ್ನು ಅಷ್ಟು ದೂರದಿಂದ ಒಂದು ಸಲ ಕೇಳಿಸಿಕೊಂಡ ಶ್ರೀ ವಿ. ಸೀತಾರಾಮಯ್ಯನವರು ಬೆರಗಾಗಿ ಈ ಪ್ರತಿಭಾವಂತಳು ಯಾರೆಂದು ಕುತೂಹಲದಿಂದ ಹತ್ತಿರ ಬಂದು ನೋಡಿದರಂತೆ. ಸಾಹಿತ್ಯ ಸುಧೆಯೆನಿಸಿದ್ದ ವಿ.ಸೀ.ಯವರನ್ನೂ ಮಾತಿನಿಂದ ಆಕರ್ಷಿಸಿದ್ದ ವ್ಯಕ್ತಿ ಯಶೋಧರಾ.

ಶ್ರೀಮಂತ ಕುಟುಂಬದಲ್ಲಿ ಜನಿಸಿ ಸಕಲ ಅನುಕೂಲತೆಗಳನ್ನು ಹೊಂದಿದ್ದರೂ, ಯಶೋಧರಾ ತನ್ನ ಜೀವನದಲ್ಲಿ ಇಚ್ಛಿಸಿದ್ದು ತ್ಯಾಗ ಜೀವನ, ಸೇವೆ, ಬಡತನದ ವಿರುದ್ಧ ಹೋರಾಟ, ದೇಶಸೇವೆಯ ಬಾಳ್ವೆ. ಅವರು ಬಯಸಿದ್ದಕ್ಕಿಂತ ಹೆಚ್ಚು ಹೆಚ್ಚಾಗಿಯೇ ದೇಶಸೇವೆಯ ಅವಕಾಶ ಅವರಿಗೆ ದೊರಕಿತು. ಶ್ರೀಮತಿ ಯಶೋಧರಾರವರ ಜೀವನ ಒಂದು ರೀತಿಯಲ್ಲಿ ತಪಸ್ಸು—ಎಂದಿದ್ದಾರೆ ಅವರೊಂದಿಗಿದ್ದ ಅನೇಕ ಹಿರಿಯ ದೇಶ ನಾಯಕರು.

ಅಂದಿನ ಕಾಲದ ಅತ್ಯುನ್ನತ ಹುದ್ದೆಯಲ್ಲಿದ್ದ, ಮೈಸೂರು ಸಿಂಹ ಎನಿಸಿಕೊಂಡಿದ್ದ ಶ್ರೀ ಕೆ. ಹೆಚ್. ರಾಮಯ್ಯನವರ ಪ್ರಥಮ ಪುತ್ರಿಯಾಗಿ ಯಶೋಧರಾ ಜನಿಸಿದರು. ಗೌಡರ ಮನೆತನವೆನಿಸಿಕೊಂಡರೂ ನನ್ನ ಮಗಳು ವಿದ್ಯಾವಂತೆಯಾಗಬೇಕು, ಬುದ್ಧಿವಂತೆಯಾಗಬೇಕೆಂಬುದು ತಂದೆಯ ಬಯಕೆ.

ತಂದೆ ನಾಲ್ಕು ವರ್ಷ ಉನ್ನತ ವ್ಯಾಸಂಗಕ್ಕಾಗಿ ಲಂಡನ್ನಿಗೆ ಹೋಗಿದ್ದಾಗ, ಏಳು ವರ್ಷದ ಬಾಲಕಿ ಯಶೋಧರಾಗೆ ತಾತನ ಮನೆಯಲ್ಲಿ ರಾಮಾಯಣ, ಮಹಾಭಾರತ ಕಥೆಗಳ ಶ್ರವಣ, ಅನಂತರ ಬಂಕಿಮಚಂದ್ರ, ಶರತ್ ಚಂದ್ರರ ಕನ್ನಡ ಭಾಷಾಂತರ ಕಥೆಗಳೂ, ಪ್ರೊ॥ ಅಳಸಿಂಗ್ರಾಚಾರ್ಯರ, ಗಳಗನಾಥರ ಕಾದಂಬರಿಗಳು ಪ್ರಭಾವ ಬೀರಿದವು.

ಮಗಳು ಜನಿಸಿದಾಗ ಬುದ್ಧನ ನೆನಪು ಬಂದು ಬುದ್ಧನಂತೆಯೇ ಜ್ಞಾನಿಯಾಗಿ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಅಹಿಂಸಾವಾದಿಯಾಗಿ, ಸತ್ಯ ಸ್ವರೂಪಿಣಿಯಾಗಿ, ಸಾಧನೆಯ ಪ್ರತೀಕವಾಗಿರಲೆಂದು ಸಿದ್ಧಾರ್ಥನ ಮಡದಿ 'ಯಶೋಧರಾ' ಎಂಬುದಾಗಿ ಮಾತಾಪಿತರು ಮಗುವಿಗೆ ನಾಮಕರಣ ಮಾಡಿದರು. ವೈರಾಗ್ಯ, ನಿರ್ಭೀತ ಜೀವನ, ಹೃದಯ ವೈಶಾಲ್ಯತೆ— ಇವುಗಳ ಪ್ರತೀಕವಾಗಿದ್ದ ತಂದೆಯ ವ್ಯಕ್ತಿತ್ವ ಬಾಲ್ಯದಲ್ಲೇ ಮಗಳಲ್ಲಿ ಪ್ರಭಾವ ಬೀರಿತ್ತು. ಮಾತಾಪಿತರ ಇಚ್ಛೆಯಂತೆ ಮಗಳು ದೊಡ್ಡವಳಾಗಿ ಬೆಳೆಯುತ್ತಾ ಜನ ಸೇವಾ ತತ್ಪರಳಾದದ್ದು ಇಬ್ಬರಿಗೂ ಅತ್ಯಂತ ಸಮಾಧಾನ.

ತೇಜಸ್ವಿ ತರುಣರೂ, ಜನಪ್ರಿಯ ವಕೀಲರೂ ಆಗಿದ್ದ ಶ್ರೀ ಎಚ್. ಸಿ. ದಾಸಪ್ಪನವರನ್ನು ವಿವಾಹವಾದರು. ದಾಸಪ್ಪನವರ ಕೈಹಿಡಿದುದು ಯಶೋಧರಾಗೆ ಸ್ವಾತಂತ್ರ್ಯ ಹೋರಾಟಕ್ಕೆ ಪ್ರೋತ್ಸಾಹ ಸಿಕ್ಕಿತು.

ಗಾಂಧೀಜಿಯವರ ಸ್ವಾತಂತ್ರ್ಯ ಕರೆ ಯಶೋಧರಾ ಅವರ ಹೃದಯ ಮುಟ್ಟಿ ದಾಸಪ್ಪನವರನ್ನೂ ಎಚ್ಚರಿಸಿತು. ಯಶೋಧರಾ ರೇಷ್ಮೆ ಜರತಾರಿ ಸೀರೆಗಳನ್ನು ಮೂಲೆಗೆಸೆದು ಒರಟಾದ ಖಾದಿ ಸೀರೆ ಧರಿಸಿ ತಕಲಿಯಲ್ಲಿ ನೂಲು ತೆಗೆಯಲಾರಂಭಿಸಿದರು. ದಾಸಪ್ಪನವರಿಗಿರಬೇಕಾಗಿದ್ದ ದರ್ಪ, ಅಧಿಕಾರ, ಪ್ರತಿಷ್ಠಿತ ಜೀವನ ಯಶೋಧರಾರವರ ಉಚ್ಚ ಆದರ್ಶಗಳೆದುರು ತ್ಯಾಗಮಯವಾಗಿ ಮಾರ್ಪಟ್ಟಿತು. ಕಾಂಗ್ರೆಸ್ಸಿನ ಮೇಲಿದ್ದ ಪತ್ನಿಯ ಅಚಲವಾದ ವಿಶ್ವಾಸ ಮತ್ತು ಭಕ್ತಿ ದಾಸಪ್ಪನವರನ್ನೂ ಕಾಂಗ್ರೆಸ್ ಕಡೆಗೇ ಸೆಳೆಯಿತು. ಸ್ವಾತಂತ್ರ್ಯ ಸಮರದಲ್ಲಿ ಇಬ್ಬರೂ ಒಟ್ಟಾಗಿ ಭಾಗವಹಿಸಿದರು. ದಂಪತಿಗಳಲ್ಲೇ ಸೇವೆಯ ಪೈಪೋಟಿ ನಡೆಯಿತು. ಸತಿ-ಪತಿಯರಿಬ್ಬರೂ ಜೀವಮಾನವೆಲ್ಲಾ ರಾಷ್ಟ್ರ ಸೇವಕರಾಗಿಯೇ ಇದ್ದುದು ಒಂದು ಅಪರೂಪದ ಉದಾಹರಣೆ. ಇಬ್ಬರೂ ಈ ಕಾಯಕವನ್ನು ದೇವರ ಸೇವೆಯೆಂದೇ ತಿಳಿದಿದ್ದರು. ಗಾಂಧೀಜಿಯವರು ಇವರ ಪಾಲಿಗೆ ಪ್ರತ್ಯಕ್ಷ ದೈವ. ಗಾಂಧೀಜಿ ಯಶೋಧರಾ ಅವರನ್ನು 'ಮಗಳೇ' ಎಂದೇ ಕರೆಯುತ್ತಿದ್ದರು.

"ಬುದ್ಧಿವಂತ ಮಹಿಳೆ. ಎಲ್ಲರನ್ನೂ ಪ್ರೇಮದಿಂದ ದಯೆಯಿಂದ ಬಂಧಿಸುತ್ತಾಳೆ"—ಎಂದು ಮಹಾತ್ಮಾಜಿ ಯಶೋಧರಾ ಅವರನ್ನು ಹೊಗಳುತ್ತಿದ್ದರಂತೆ. ಬಾಪುವನ್ನು ಕಂಡರೆ ಯಶೋಧರಾಗೆ ತಂದೆಗಿಂತ ಹೆಚ್ಚಿನ ಪ್ರೀತಿ.

ಅನುಕಂಪ ಮತ್ತು ದಿಟ್ಟತನ ಯಶೋಧರಾರವರ ಅನುಪಮ ಗುಣಗಳು. ಕರ್ತವ್ಯನಿಷ್ಠೆ ಮತ್ತು ಕಾರ್ಯದಕ್ಷತೆಯಿಂದ ಅವರ ವರ್ಚಸ್ಸು ಎಲ್ಲಾ ಕ್ಷೇತ್ರಗಳಲ್ಲೂ ಹೆಚ್ಚಿತು. ಸ್ವಾತಂತ್ರ್ಯ ಸಮರದಲ್ಲಿ, ಇವರು ಗಾಂಧೀಜಿಯವರ ರಚನಾತ್ಮಕ ಕಾರ್ಯ ಕ್ಷೇತ್ರದಲ್ಲಿ ಸಮರ್ಪಣಾ ಭಾವದಿಂದ ಕೆಲಸ ಮಾಡಿದರು.

ಮೈಸೂರು ಸಂಸ್ಥಾನದಲ್ಲಿ ನಡೆದ ಮೊದಲ ಸತ್ಯಾಗ್ರಹವೆಂದರೆ, ೧೯೩೮ರ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕು ಶಿವಪುರದಲ್ಲಿ ನಡೆದ ಧ್ವಜ ಸತ್ಯಾಗ್ರಹ. ಚಿರಸ್ಮರಣೀಯವಾದ ಈ ಸತ್ಯಾಗ್ರಹ ಮೈಸೂರು ಕಾಂಗ್ರೆಸ್ಸಿನ ಹುಟ್ಟಿಗೂ ಕಾರಣವೆನ್ನಬಹುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



೧೯೩೮ ಏಪ್ರಿಲ್ ೮ನೇ ತಾರೀಖು ಸತ್ಯಾಗ್ರಹ ನಡೆಸಲು ಶಿವಪುರದ ಮಹಾಸಭೆ ನಿರ್ಣಯಿಸಿ ಅಣಿಯಾಯಿತು. ನಾಡಿನ ಮೂಲೆ ಮೂಲೆಗಳಿಂದ ಜನರು ಜಾತ್ರೆಯಂತೆ ಬಂದು ಸೇರಿದರು. ನೂರೊಂದು ಜೊತೆ ಎತ್ತುಗಳನ್ನು ಹೂಡಿದ ಅಲಂಕೃತ ಗಾಡಿಯಲ್ಲಿ ಮೆರವಣಿಗೆ ಹೊರಟಿತು. ಈ ಸತ್ಯಾಗ್ರಹವನ್ನು ತಡೆಯಲು ಸರ್ಕಾರ ಪ್ರತಿಬಂಧಕಾಜ್ಞೆ ಹೊರಡಿಸಿತ್ತು. ಆಜ್ಞೆ ಮುರಿದು ಧ್ವಜ ಹಾರಿಸಿದರೆ, ಗುಂಡು ಹಾರಿಸಬೇಕೆಂಬ ಬ್ರಿಟಿಷ್ ಸರಕಾರದ ಆದೇಶ ಪಾಲಿಸಲು ಎಂಟು ನೂರು ಮಂದಿ ಸಿಬ್ಬಂದಿ ಹೊಂದಿದ ರಿಸರ್ವ್ ಪೋಲೀಸ್ ಪಡೆ ಸರ್ವಸಿದ್ಧತೆಯಿಂದ ಸಜ್ಜಾಗಿ ಬಂದಿತ್ತು.

ಈ ಭಯಂಕರ ಶಿಕ್ಷೆಯನ್ನು ಕೇಳಿ ಜನರು ಅನ್ಯಾಯವಾಗಿ ಗುಂಡಿಗೆ ಬಲಿಯಾಗುವುದನ್ನು ಯೋಚಿಸಿ ಕೆಲವು ಮುಖಂಡರು ಈ ಹತ್ಯಾಕಾಂಡವನ್ನು ತಪ್ಪಿಸುವ ಸಲುವಾಗಿ ಧ್ವಜಾರೋಹಣ ಮಾಡುವುದು ಬೇಡವೆಂದು ಅಭಿಪ್ರಾಯಪಟ್ಟರು. ಈ ಸಮಯದಲ್ಲಿ,

"ತೊಟ್ಟ ಸಂಕಲ್ಪ ಬಿಡಕೂಡದು. ನಿಮಗೆ ಆಗದಿದ್ದರೆ ಮಹಿಳೆಯರಿಗೆ ಬಿಡಿ. ನಾವು ಧ್ವಜವನ್ನು ಹಾರಿಸುತ್ತೇವೆ. ಅಷ್ಟೇ ಅಲ್ಲ, ಧ್ವಜದ ಗೌರವವನ್ನು ಕಾಪಾಡುತ್ತೇವೆ. ಗುಂಡಿನೇಟು ಬಿದ್ದರೆ ನಮಗೆ ಬೀಳಲಿ" ಎಂದು ಅಬ್ಬರಿಸಿ ಸಭೆಯನ್ನು ನಿಬ್ಬೆರಗುಗೊಳಿಸಿದ ಶ್ರೀಮತಿ ಯಶೋಧರಾ ಮತ್ತು ಶ್ರೀಮತಿ ಟಿ. ಸುನಂದಮ್ಮ ಇವರುಗಳು, ಮಹಿಳೆಯರ ಧೈರ್ಯವನ್ನೂ, ತಾಳ್ಮೆಯನ್ನೂ ನಿರೂಪಿಸಿದರು.

ಸತ್ಯಾಗ್ರಹವನ್ನು ಮುಂದುವರಿಸುವುದೇ ಅಥವಾ ಬೇಡವೇ ಎಂದು ಮೀನ ಮೇಷ ಎಣಿಸುತ್ತಿದ್ದ ನಾಯಕರು ಕೂಡಲೇ ಸತ್ಯಾಗ್ರಹದ ಸಂಕಲ್ಪಕ್ಕೆ ಬದ್ಧರಾದರು. ಕಾರ್ಯಕ್ರಮದಂತೆ ಅಧ್ಯಕ್ಷರು ಧ್ವಜಾರೋಹಣ ಮಾಡಿ ಪ್ರತಿಬಂಧಕಾಜ್ಞೆಯನ್ನು ಮುರಿದರು. ಅಧ್ಯಕ್ಷರ ದಸ್ತಗಿರಿ ಆಯಿತು, ಇತರ ನಾಯಕರೂ ಜೈಲಿನ ದಾರಿ ಹಿಡಿಯಬೇಕಾಯಿತು. ಸತ್ಯಾಗ್ರಹ ನಡೆದಷ್ಟು ದಿನಗಳೂ ಅಹೋರಾತ್ರಿ ಧ್ವಜಸ್ತಂಭದ ಬಳಿ ಮಹಿಳಾ ಸ್ವಯಂಸೇವಕರು ಕಾವಲಿದ್ದು ಸತ್ಯಾಗ್ರಹವನ್ನು ಯಶಸ್ವಿಗೊಳಿಸಿದರು. ಯಶೋಧರಾ ತಮ್ಮ ಎರಡು ಪುಟ್ಟ ಮಕ್ಕಳನ್ನೂ ತಮ್ಮ ಬಳಿಯಲ್ಲೇ ಇಟ್ಟುಕೊಂಡು ಧ್ವಜದ ಗೌರವ ಕಾಪಾಡಿದರು. "ದಿಟ್ಟ ನಾಯಕಿ" ಎನಿಸಿಕೊಂಡರು.

ಶಿವಪುರದ ಧ್ವಜ ಸತ್ಯಾಗ್ರಹದ ಬಿಸಿ ದೇಶದಲ್ಲೆಲ್ಲಾ ಹರಿಡಿತು. ಎಲ್ಲೆಲ್ಲೂ ಸಭೆ ಮೆರವಣಿಗೆಗಳ ಕೋಲಾಹಲ. ಈ ಸತ್ಯಾಗ್ರಹದ ಮಾದರಿಯನ್ನನುಸರಿಸಿ ಕೋಲಾರ ಜಿಲ್ಲೆ ಗೌರಿಬಿದನೂರು ತಾಲ್ಲೂಕಿನ ವಿದುರಾಶ್ವತ್ಥದಲ್ಲಿ ಮತ್ತೊಮ್ಮೆ ಧ್ವಜ ಸತ್ಯಾಗ್ರಹ, ಚಳವಳಿ ಪ್ರಾರಂಭವಾಯಿತು. ಇಲ್ಲಿಯೂ ಮಹಿಳಾ ನಾಯಕತ್ವದ ಬಿರುಸು. ಈ ಸಲ ನ್ಯಾಯಾಧೀಶರ ಆಜ್ಞೆಯಂತೆ ಪೋಲೀಸರು ಹೆಂಗಸರು, ಮಕ್ಕಳೆನ್ನದೆ ಗುಂಡಿನ ಮಳೆಗರೆದರು. ಗುಂಡಿಗೆ ಬಲಿಯಾಗಿ ಪ್ರಾಣ ತೆತ್ತವರೆಷ್ಟೋ ಮಂದಿ. ಧ್ವಜ ಸತ್ಯಾಗ್ರಹದಲ್ಲಿ ಪಾಲ್ಗೊಂಡವರನ್ನು ಬಂಧಿಸಲಾಯಿತು. ಈ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ದುರಂತದ ಸುದ್ದಿಯನ್ನು ತಿಳಿದ ಮಹಾತ್ಮಾಜಿ ಸರ್ಕಾರದೊಡನೆ ಸಂಧಾನ ನಡೆಸಿ ಬಂಧಿತರಾದವರನ್ನು ಬಿಡುಗಡೆ ಮಾಡಿಸಿದರು.

೧೯೪೨ರ ಚಲೇಜಾವ್ ಚಳವಳಿಯಲ್ಲಿ ದಾಸಪ್ಪನವರು ಸೆರೆಮನೆಯಲ್ಲಿದ್ದರೆ, ಯಶೋಧರಮ್ಮನವರಿಗೆ ಮನೆಯಲ್ಲೇ ಸೆರೆ. ಅವರ ಚಲನವಲನಗಳ ಬಗ್ಗೆ ಸರ್ಕಾರ ಸರ್ಪಗಾವಲನ್ನು ವಿಧಿಸಿತ್ತು.

ಈ ಬಿಕ್ಕಟ್ಟಿನ ಸಂದರ್ಭದಲ್ಲಿ ತಾಯಿ ಪಟ್ಟ ಕಷ್ಟವನ್ನು ನೆನೆದು ತುಳಸೀದಾಸ್ ರವರು ಹೀಗೆ ಹೇಳುತ್ತಾರೆ--

"ಸೆರೆಮನೆಯಲ್ಲಿರುವುದೇ ಉತ್ತಮವೆನಿಸುತ್ತಿತ್ತು. ಜೈಲಿನಿಂದ ಹೊರಗೆ ಇದ್ದವರ ಪಾಡು ಅತಿಕಷ್ಟ. ಇವರ ಓಡಾಟದ ಮೇಲೆ ಸರ್ಕಾರದ ಕಣ್ಣು. ನಿರ್ಬಂಧ ಹೆಚ್ಚು. ಹಾಗೆಂದು ಮನೆಯಲ್ಲೇ ಕುಳಿತಿರುವ ಹಾಗಿಲ್ಲ. ಸರ್ವ ಕಾರ್ಯಗಳನ್ನೂ ಗುಪ್ತವಾಗಿದ್ದೇ ಕೈಗೊಳ್ಳಬೇಕಾಗಿತ್ತು. ಈ ವಿಚಾರದಲ್ಲಿ ಪುರುಷರಿಗಿಂತ ಸ್ತ್ರೀಯರ ಸಾಧನೆ ಅಪೋಘವಾದುದು. ಸುಡುವ ಮಧ್ಯಾಹ್ನದ ಬಿಸಿಲಲ್ಲೂ, ಮಧ್ಯರಾತ್ರಿಯ ಕಪ್ಪು ಕತ್ತಲೆಯಲ್ಲೂ ಸರ್ಕಾರದ ಕಣ್ಣು ತಪ್ಪಿಸಿ, ಚುರುಕಾಗಿ ಕೆಲಸ ಸಾಗಿದ್ದರೆ, ಅದು ಹೆಂಗಸರ ಜಾಣ್ಮೆ ಮತ್ತು ಕಷ್ಟ ಸಹಿಷ್ಣುತೆಯಿಂದಲೇ. ಚಿಕ್ಕಮಕ್ಕಳ ತಾಯಂದಿರು, ಬಸುರಿ ಬಾಣಂತಿಯರೆನ್ನದೆ ಎಲ್ಲಾ ಸ್ತ್ರೀಯರೂ ತಮ್ಮ ಪಾಲಿನ ಕರ್ತವ್ಯವನ್ನು ಚಾಚೂ ತಪ್ಪದೆ ಪಾಲಿಸಿದ್ದಾರೆ" ಎಂದು ಶ್ರೀ ತುಳಸೀದಾಸ್‌ರವರು ಮಹಿಳೆಯರನ್ನು ಶ್ಲಾಘಿಸಿದ್ದಾರೆ.

ಯಶೋಧರಮ್ಮ ಮತ್ತು ದಾಸಪ್ಪ ಇಬ್ಬರೂ ಅನೇಕ ತಿಂಗಳುಗಳ ಕಾಲ ಸೇವಾಗ್ರಾಮದಲ್ಲಿ ಬಾಪೂ ಬಳಿ ಇದ್ದರು. ರಚನಾತ್ಮಕ ಕಾರ್ಯದ ದೀಕ್ಷೆಗೆ ಯಶೋಧರಾ ಸರಿಯಾದ ವ್ಯಕ್ತಿಯೆಂದು ಗಾಂಧೀಜಿ ನಿರ್ಧರಿಸಿ ವಹಿಸಿದರು. ಅಂದಿನಿಂದ ಯಶೋಧರಾರವರು ಗಾಂಧೀಜಿಯವರ ನಿರ್ದೇಶನದಂತೆ ಗ್ರಾಮಾಂತರ ಪ್ರದೇಶ ಗಳಲ್ಲಿ ದುಡಿದರು. ಅತಿ ಹಿಂದುಳಿದ ಗ್ರಾಮಗಳಲ್ಲಿ ಕಸ್ತೂರಬಾ ಗ್ರಾಮ ಸೇವಾ ಕೇಂದ್ರಗಳನ್ನು ಸ್ಥಾಪಿಸಿದರು. ಈ ಕೇಂದ್ರಗಳಲ್ಲಿ ಮಹಿಳೆಯರ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ಉತ್ತಮ ಕಾರ್ಯಕ್ರಮಗಳನ್ನೂ ಹಾಕಿಕೊಟ್ಟರು.

ಸ್ವಾತಂತ್ರ್ಯದ ನಂತರ ೧೯೫೦ರ ಚುನಾವಣೆಯಲ್ಲಿ ಕಾಂಗ್ರೆಸ್ಸಿನಲ್ಲಿ ಸಾಹುಕಾರ್ ಚನ್ನಯ್ಯನವರನ್ನು ಸೋಲಿಸಿ ಯಶೋಧರಾ ಕಾಂಗ್ರೆಸ್ ಅಧ್ಯಕ್ಷೆಯಾದರು. ಇವರೇ ಮೈಸೂರು ಸಂಸ್ಥಾನದ ಪ್ರಥಮ ಮಹಿಳಾ ಅಧ್ಯಕ್ಷೆ.

೧೯೫೭ರಲ್ಲಿ ಶ್ರೀ ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿ ಕ್ಯಾಬಿನೆಟ್ ಸಚಿವ ರಾದರು. ಸಮಾಜ ಕಲ್ಯಾಣ ಮಂತ್ರಿಯಾಗಿ ಕೆಲವು ಅಧಿಕೃತ ನೀತಿನಿಯಮಗಳನ್ನು ತಂದರು. ಯಶೋಧರಮ್ಮ ರಾಜ್ಯದ ಮಂತ್ರಿಯಾಗಿದ್ದಾಗ ದಾಸಪ್ಪನವರು ದೆಹಲಿಯ ಸಚಿವರಾಗಿದ್ದರು. ಆಫ್ರಿಕಾದ ಜಾಂಬಿಯಾ ಸ್ವಾತಂತ್ರ್ಯ ಗಳಿಸಿದಾಗ ದಂಪತಿಗಳಿಬ್ಬರೂ ಭಾರತದ ಪ್ರತಿನಿಧಿಗಳಾಗಿ ಹೋಗಿದ್ದರು. ಅಲ್ಲಿನ ಅನಾಥ ಗೃಹಕ್ಕೆ ಭೇಟಿ ಕೊಟ್ಟು, ಕೆಲವು ಅನಾಥ ಬಾಲಕರನ್ನು ದತ್ತು ತೆಗೆದುಕೊಳ್ಳುವುದಾಗಿ ಯಶೋಧರಮ್ಮ ಹೇಳಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ದಾಗ ಅಲ್ಲಿಯ ಜನ ಬೆರಗಾದರು. ದೇಶ, ವರ್ಣ, ಜಾತಿಗಳನ್ನು ಮೀರಿದ ವಾತ್ಸಲ್ಯ ಈ ಮಹಾನ್ ವ್ಯಕ್ತಿಗೆ.

ಪಾನ ನಿರೋಧ ನೀತಿಯನ್ನು ರದ್ದು ಮಾಡಬೇಕೆಂದು ಸರ್ಕಾರ ತೀರ್ಮಾನಿದಾಗ, ಯಶೋಧರಮ್ಮನವರು ಬಹಳ ನೊಂದುಕೊಂಡು ಗಾಂಧೀ ತತ್ವಕ್ಕೆ ಇದು ವಿರೋಧವೆಂದು ತಕ್ಷಣ ರಾಜಿನಾಮೆ ಕೊಟ್ಟು ಮಂತ್ರಿ ಪದವಿಯಿಂದಿಳಿದರು. ಸಮಾಜ ಸೇವೆಯನ್ನು ತಮ್ಮ ಉಸಿರಿರುವವರೆಗೂ ಮಾಡಿದರು.

ಐವತ್ತು ವರ್ಷಗಳ ಸುದೀರ್ಘ ದೇಶಸೇವೆ ಇವರದು. ಈಕೆ ಬಡಜನರ, ಹರಿಜನರ ಸೇವೆಮಾಡಿದ ಪುಣ್ಯ ಮಹಿಳೆ, ಸ್ವಾತಂತ್ರ್ಯಯೋಧೆ, ಕಾಂಗ್ರೆಸ್ಸಿನ ದಿಟ್ಟ ನಾಯಕಿ. ಜನಸೇವೆಯಲ್ಲಿ ಇವರು ಮದರ್ ತೆರೇಸಾ ಎಂದಿದ್ದಾರೆ ಡಾ॥ ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು.

"ಸ್ತ್ರೀ ಶಕ್ತಿಯ ಮೂರ್ತಿರೂಪವೇ ಯಶೋಧರಮ್ಮನವರ ವ್ಯಕ್ತಿತ್ವ" ಎಂದು ಶ್ರೀಮತಿ ಬಿ. ಕಾಮಾಕ್ಷಮ್ಮ ಬರೆದಿದ್ದಾರೆ ತಮ್ಮ ಪುಸ್ತಕದಲ್ಲಿ.

ವಿದ್ಯಾರ್ಥಿ ಜೀವನದಿಂದ ಪ್ರತಿ ಹೆಜ್ಜೆಯಲ್ಲೂ ಗೆಲವು ಕಂಡ ವಿಶೇಷ ವ್ಯಕ್ತಿ ಯಶೋಧರಾ. ಆಟ ಪಾಠ, ಸಂಗೀತ, ನಾಟಕ, ಭಾಷಣ ಸ್ಪರ್ಧೆಯಲ್ಲಿ, ಯಶೋಧರಾಗೆ ಬಹುಮಾನ ಮೀಸಲು.

ಪುರಸಭೆಯ ಚುನಾವಣೆಯಲ್ಲಿ ನಿಂತು ಪ್ರಚಂಡ ಬಹುಮತ ಗಳಿಸಿಗೆದ್ದ ಪ್ರಥಮ ಮಹಿಳೆ. ೧೯೩೮ರಲ್ಲಿ ಮೈಸೂರು ನ್ಯಾಯವಿಧಾಯಕ ಸಭೆ ಚುನಾವಣೆಗೆ ನಿಂತು ಅತ್ಯಂತ ಹೆಚ್ಚಿನ ಮತ ಪಡೆದು ಗೆದ್ದುಬಂದ ಪ್ರಥಮ ಮಹಿಳೆ. ವಿದ್ಯಾರ್ಥಿ ದೆಸೆಯಿಂದಲೇ ಸ್ವಾತಂತ್ರ್ಯ ಹೋರಾಟದ ಬಗ್ಗೆ ಚಿಂತನ ಮಂಥನ ನಡೆದಿತ್ತು. ೧೯೧೮ರಲ್ಲಿ ಮುಂಬಯಿ ಕಾಂಗ್ರೆಸ್ ಅಧಿವೇಶನಕ್ಕೆ ಹೋದಾಗ ಅನೇಕ ಹಿರಿಯ ನಾಯಕರ ದರ್ಶನ ಪಡೆದು, ವಾರ್ಧಾ ಆಶ್ರಮದಲ್ಲಿದ್ದು ಮಹಾತ್ಮಾಜಿಯವರ ಆಧ್ಯಾತ್ಮದ ರಸನಿಮಿಷಗಳನ್ನು ಸವಿದರು. ಶಾಂತಿಯಿಂದ ಕ್ರಾಂತಿಯುಂಟುಮಾಡಿದ ಪವಾಡ ಪುರುಷರ ಆಶ್ರಮ ಜೀವನ ಪ್ರತ್ಯಕ್ಷ ಪಾಠವಾಯಿತು. ಮಹಾತ್ಮರ ಆಪ್ತಶಿಷ್ಯರಾಗಿ, ಅವರ ಒಂದೊಂದು ಆಜ್ಞೆಯನ್ನೂ ಭಕ್ತಿ, ಪ್ರೇಮದಿಂದ ಶಿರಸಾವಹಿಸಿ ಪಾಲಿಸಿದರು.

ಯಶೋಧರಾರವರದು ಧೀರ ಗಂಭೀರವಾಣಿ. ಚಾಕಚಕ್ಯತೆ, ರಸಮಯವಾಗಿ ಭಾಷಣ ಮಾಡುವ ಕಲೆ ಆಕೆಗೆ ಕರಗತವಾಗಿತ್ತು. ಇವರ ಸಂಘಟನಾ ಚಾತುರ್ಯವನ್ನು ಕಂಡು, "ಮೈಸೂರು ಸಂಸ್ಥಾನದ ಏಕೈಕ ಮಹಿಳಾ ಪ್ರತಿನಿಧಿ" ಎಂದು ಬಾಪೂಜಿ ಯಶೋಧರಾರವರಿಗೆ ಗ್ರಾಮೀಣ ಕೆಲಸವನ್ನು ವಹಿಸಿದ್ದರು.

ಪ್ರಪ್ರಥಮವಾಗಿ ನಡೆದ "ಅಖಿಲ ಭಾರತ ಮಹಿಳಾ ಶಿಬಿರ" ತರಬೇತಿಗೆ ಯಶೋಧರಾರವರು ಮೈಸೂರು ಪ್ರಾಂತ್ಯದಿಂದ ಆಯ್ಕೆಯಾಗಿದ್ದರು.

"ತಮ್ಮ ಜೀವನದಲ್ಲಿ ಅವರು ಕಂಡುಕೊಂಡ ಗುರಿ ನಿಸ್ವಾರ್ಥ ಸೇವೆ. ಈ ಗುರಿ ಸಾಧನೆಯಲ್ಲಿ ಅವರದು ಯೋಧನ ದೃಷ್ಟಿ"—ಎಂದಿದ್ದಾರೆ ಅವರನ್ನು ಹತ್ತಿರದಿಂದ ಬಲ್ಲವರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



## ಗಾಂಧೀಜಿ ವಾತ್ಸಲ್ಯವನ್ನು ಗೆದ್ದ ಕನ್ನಡತಿ

## ತಿರುಮಲೆ ರಾಜಮ್ಮ (ಭಾರತಿ)

ತಿರುಮಲೆ ರಾಜಮ್ಮನವರನ್ನು "ಗಾಂಧೀಜಿ ವಾತ್ಸಲ್ಯವನ್ನು ಗೆದ್ದ ಕನ್ನಡತಿ" ಎಂಬ ಗುಣ ವಿಶೇಷಣದಿಂದ ಕರೆದಿರುವವರು ಕಮಲಾ ಹಂಪನಾರವರು. ಸುಮಾರು ಅಷ್ಟಾದಶ ಲೇಖಕರು ರಾಜಮ್ಮನವರನ್ನು ಅಷ್ಟಾದಶ ಗುಣವಿಶೇಷನಾಮದಿಂದ ಕರೆದಿದ್ದಾರೆ. ಇಲ್ಲಿ ಅನ್ವರ್ಥವಾಗುವ ಹೆಸರು–ಕಮಲಾ ಹಂಪನಾರವರ "ಗಾಂಧೀಜಿ ವಾತ್ಸಲ್ಯವನ್ನು ಗೆದ್ದ ಕನ್ನಡತಿ".

"೧೯೨೧ ನೆಯ ವರ್ಷದ ಕಾಂಗ್ರೆಸ್ ಅಧಿವೇಶನ ಅಹಮದಾಬಾದಿನಲ್ಲಿ ನಡೆಯುವುದಿತ್ತು. ಈ ಕಾಂಗ್ರೆಸ್ ಸಮ್ಮೇಳನಕ್ಕಾಗಿ ಹೋಗಿದ್ದ ಯುವಕ ಯುವತಿಯರಿಬ್ಬರು ಅಧಿವೇಶನಕ್ಕೆ ಹೋಗುತ್ತಿದ್ದಾಗ, ಎದುರಿಗೆ ಕಾವಿ ಬಟ್ಟೆಯುಟ್ಟ ಒಬ್ಬ ಎತ್ತರದ ಆಳು ಕಾಣಿಸಿಕೊಂಡರು. ವ್ಯಕ್ತಿಯ ಮುಖದ ಗಾಂಭೀರ್ಯ, ವರ್ಚಸ್ಸಿನ ಕಾಂತಿಯಿಂದ ಆಕರ್ಷಿತರಾದ ಈ ಯುವಕ ಯುವತಿಯರು ಅವರನ್ನೇ ದಿಗ್ಭ್ರಮೆಯಿಂದ ನೋಡುತ್ತಾ ನಿಂತಾಗ ಹಿಂದಿನಿಂದ ವೇಗವಾದ ವಾಹನ ಬಂತು. ಕಣ್ಣುರೆಪ್ಪೆ ಮುಚ್ಚಿ ತೆಗೆಯುವಷ್ಟರಲ್ಲಿ ಕಾವಿಯುಟ್ಟ ಸನ್ಯಾಸಿ ಇಬ್ಬರನ್ನೂ ಬಾಚಿ ತಬ್ಬಿಕೊಂಡು ಪಕ್ಕಕ್ಕೆ ಎಳೆದು ನಿಲ್ಲಿಸಿದರು. ವಾಹನ ಮುಂದೆ ಓಡಿತು... ನೀವು ಯಾರು? ಎಲ್ಲಿಂದ ಬಂದಿದ್ದೀರಿ?' ಎಂದು ಸ್ವಾಮೀಜಿ ಪ್ರಶ್ನಿಸಿದರು.... ಈ ಯುವಕ ಯುವತಿಯಗೇ ಶ್ರೀ ತಿರುಮಲೆ ತಾತಾಚಾರ್ಯಶರ್ಮ ಮತ್ತು ಅವರ ಪತ್ನಿ ರಾಜಮ್ಮ. ಆ ಸ್ವಾಮೀಜಿಯೇ ಶ್ರೀ ಶ್ರದ್ಧಾನಂದಜಿಯವರು"—ಎಂದು ಪ್ರಾರಂಭಿಸುತ್ತಾರೆ ತಿ. ತಾ. ಶರ್ಮರ ಪುತ್ರ ಶ್ರೀರಂಗಾಚಾರ್ಯರು.

"ಇಷ್ಟು ಚಿಕ್ಕ ವಯಸ್ಸಿನಲ್ಲಿ ಹೆಂಡತಿಯೊಡನೆ ಕಾಂಗ್ರೆಸ್ ತೀರ್ಥಯಾತ್ರೆ ಹೊರಟಿರುವ ನಿನಗೆ ದೇವರ ಪೂರ್ಣ ಅನುಗ್ರಹವಿರಲಿ. ಇನ್ನು ಮೇಲೆ ಯಾತ್ರೆ ಮಾಡಬೇಕಾದದ್ದು ಕಾಂಗ್ರೆಸ್ ಕ್ಷೇತ್ರಕ್ಕೆ" ಎಂದು ನಗುಮೊಗದಿಂದ, ವಾತ್ಸಲ್ಯ ಹೃದಯದಿಂದ, ಮಧುರವಾಣಿಯಿಂದ ಶ್ರದ್ಧಾನಂದರು ಆಶೀರ್ವದಿಸಿದ ಸಮಯವನ್ನು ಆಗಾಗ ನಮ್ಮ ತಂದೆ ಸ್ಮರಿಸುತ್ತಿದ್ದರು... 'ಇಂತಹ ಉತ್ಸವಕ್ಕೆ, ದೇಶದ ಮಹಾಕಾರ್ಯಕ್ಕೆ ನಿಮ್ಮಂತೆಯೇ ಎಲ್ಲಾ ಯುವಕರೂ ಬರಬೇಕು' ಎಂದು ಸ್ವಾಮೀಜಿ ನುಡಿದಾಗ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ನಾವೇ ಧನ್ಯ ದಂಪತಿಗಳು ಎಂದುಕೊಂಡರಂತೆ... ಈ ಘಟನೆಯ ಸ್ಮರಣೆ ನನ್ನ ಮೇಲೆ ಎಷ್ಟು ಪ್ರಭಾವ ಬೀರಿದೆ ಗೊತ್ತೆ? ನನ್ನ ಮಾತಾಪಿತರ ಈ ಭಾವನೆಯೇ ನನ್ನಲ್ಲಿ ಸಂಸ್ಕಾರವಾಗಿ ಬೆಳೆದು ಬಂದಿದೆ. ನಾನು ಕನ್ನಡ ಭಾಷೆಯನ್ನು ಪ್ರೀತಿಸಿದರೆ, ಭಾರತ ಸಂಸ್ಕೃತಿಯಲ್ಲಿ ಮೈಮರೆತು ಬೆರೆತರೆ, ಅದು ನನ್ನಲ್ಲಿ ನನ್ನ ತಾಯಿಯಿಂದ ಅಂತರ್ಯಾ ವಾಗಿ ಹುಟ್ಟಿಬಂದಿರುವ ಗುಣ. ಇದೇ ನನ್ನ ತಾಯಿ ನನಗೆ ಬಿಟ್ಟುಹೋಗಿರುವ ಐಶ್ವರ್ಯ" ಎನ್ನುತ್ತಾರೆ ಶ್ರೀ ರಂಗರವರು.

ಅಹಮದಾಬಾದಿನ ಅಧಿವೇಶನದಲ್ಲಿ ನಡೆಯಲಿರುವ ಅಖಿಲ ಭಾರತ ಸಂಗೀತ ಸಮ್ಮೇಳನದಲ್ಲಿ ಭಾಗವಹಿಸಲು ಶ್ರೀಮತಿ ರಾಜಮ್ಮನವರಿಗೆ ಕರೆಯೋಲೆ ಬಂದಿತ್ತು. ಆಗಲೇ ಪ್ರಸಿದ್ಧ ಸಂಗೀತಗಾರಳೆಂದು ಹೆಸರು ಪಡೆದಿದ್ದ ರಾಜಮ್ಮನಿಗೆ ಅಧಿವೇಶನದ ಅವಕಾಶವನ್ನು ಕಳೆದುಕೊಳ್ಳಲು ಇಷ್ಟವಿರಲಿಲ್ಲ. ಪತಿಗೆ ಆಗ ಪ್ರಾಚ್ಯ ಸಂಶೋಧನಾ ಇಲಾಖೆಯಲ್ಲಿ ಸರ್ಕಾರಿ ಕೆಲಸ. ಕಾಂಗ್ರೆಸ್ ಅಧಿವೇಶನಕ್ಕೆ ಹೋದರೆ ಸರ್ಕಾರದ ಗೂಢಚಾರರು ಹಿಡಿಯಬಹುದೆಂಬ ಶಂಕೆಯನ್ನು ಪತ್ನಿಯಲ್ಲಿ ಹೇಳಿ ಕೊಂಡಾಗ, "ನಾವೇನು ಕಾಂಗ್ರೆಸ್ ಪ್ರತಿನಿಧಿಗಳಾಗಿ ಹೋಗುತ್ತಿದ್ದೇವೆಯೇ? ಸಂಗೀತ ಸಮ್ಮೇಳನಕ್ಕೆ ಹೋಗುತ್ತಿದ್ದೇವೆ" ಎಂದು ಪತಿಯನ್ನು ರಾಜಮ್ಮ ಪ್ರಯಾಣಕ್ಕೆ ಸಿದ್ಧ ಪಡಿಸಿದರು.

ಮಹಾತ್ಮಾಜಿಯವರನ್ನು, ದೇಶಭಕ್ತರನ್ನು, ಸಂಗೀತ ವಿದ್ವಾಂಸರನ್ನೂ ಕಾಣುವ ಹಂಬಲವಿತ್ತು ರಾಜಮ್ಮನಿಗೆ. ಮಹಾತ್ಮಾಜಿಯವರನ್ನು ಸಂದರ್ಶಿಸಲು ಚಕ್ರವರ್ತಿ ರಾಜಗೋಪಾಲಾಚಾರಿಯವರಿಂದ ಪತ್ರ ದೊರಕಿತು. "ಈ ಪತ್ರ ತಂದಿರುವ ತರುಣಿ ದೇಶಾಭಿಮಾನಿ ಕಲಾವಿದೆ ಚೆನ್ನಾಗಿ ವೀಣೆ ನುಡಿಸುತ್ತಾಳೆ, ಹಾಡುತ್ತಾಳೆ. ಹಾಡಿಸಿ ಕೇಳುವುದಾದರೆ ಸಂತೋಷ. ಅವಕಾಶವಿಲ್ಲವಾದರೆ ನಿಮ್ಮ ಸ್ವಂತ ಪುತ್ರಿಯಂತೆ ತಿಳಿದು ಹರಸಬೇಕು."

ರಾಜಾಜಿಯವರ ಮೆಚ್ಚಿಗೆಯ ಈ ನುಡಿಗಳ ಪರಿಣಾಮ, ಗಾಂಧೀಜಿಯವರು ತಿರುಮಲೆ ರಾಜಮ್ಮನವರನ್ನು ಗುರುತಿಸಿದ್ದು ಮಾತ್ರವಲ್ಲದೆ ಅಹಮದಾಬಾದಿನಲ್ಲಿರು ವವರೆಗೂ ಪ್ರತಿನಿತ್ಯವೂ ಪ್ರಾರ್ಥನಾ ಸಮಯದಲ್ಲಿ ರಾಜಮ್ಮನವರು ಹಾಡ ಬೇಕೆಂದು ಇಚ್ಛಿಸಿದರು.

ಮತ್ತೊಮ್ಮೆ ೧೯೨೪ರಲ್ಲಿ ಬೆಳಗಾಂವನಲ್ಲಿ ರಾಷ್ಟ್ರೀಯ ಮಹಾಸಭೆ ನಡೆದಾಗ, ರಾಜಮ್ಮನವರು ಸಭೆಗೆ ಹೋಗಲಾಗಲಿಲ್ಲ. ಗಾಂಧೀಜಿಯವರು ಈ ವಿಚಾರವನ್ನು ಗಮನಿಸಿ ಮುದವೀಡು ಕೃಷ್ಣರಾಯರಿಗೆ ತಿಳಿಸಿ ರಾಜಮ್ಮನವರಿಗೆ ತಂತಿ ಸಮಾಚಾರ ಕಳುಹಿಸಿ ಕರೆಯಿಸಿಕೊಂಡರು. ಬೆಂಗಳೂರಿಗೆ ಮಹಾತ್ಮಾಜಿಯವರು ಬಂದಿದ್ದಾಗಲೂ ಅವರಿಗೆ ರಾಜಮ್ಮನವರ ಸಂಗೀತ ಔತಣ ಬೇಕಾಯಿತು. ಗಾಂಧೀಜಿಯವರ ಮೇಲಿನ ಭಕ್ತಿಯ ಸಂಕೇತವಾಗಿ ಈ ದಂಪತಿಗಳು ತಮ್ಮ ಒಬ್ಬ ಮಗನನ್ನು ಬಾಪೂ ಎಂದೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಕರೆಯುತ್ತಿದ್ದರಂತೆ. ಇಷ್ಟರಮಟ್ಟಿಗೆ ಬಾಪೂಜಿಯ ವಾತ್ಸಲ್ಯವನ್ನು ಗಳಿಸಬೇಕಾದರೆ ರಾಜಮ್ಮ ಸಾಮಾನ್ಯ ವ್ಯಕ್ತಿಯೇ ?

ರಾಜಮ್ಮನ ಜನನ ೧೯೦೦ರಲ್ಲಿ ತುಮಕೂರಿನಲ್ಲಿ. ತಂದೆ ಶ್ರೀ ರಾಘವಾಚಾರ್ಯರು ಪ್ರೌಢಶಾಲೆಯ ಉಪಾಧ್ಯಾಯರು. ಜೀವನದಲ್ಲಿ ತುಂಬಾ ಶಿಸ್ತಿನ ವ್ಯಕ್ತಿ. ತಾಯಿ ಬಹಳ ಜಾಣೆ, ಉದಾರಿ, ಸ್ನೇಹಸ್ವಭಾವ, ಬಾಲ್ಯದಿಂದ ರಾಜಮ್ಮನಿಗೆ ಎಲ್ಲಾ ವಿಷಯಗಳಲ್ಲೂ ಕುತೂಹಲ. ನಾಲ್ಕು ವರ್ಷದವಳಾಗಿದ್ದಾಗಲೇ ಹಾಡನ್ನು ಗಮನವಿಟ್ಟು ಆಲಿಸುತ್ತಿದ್ದಳು. ಶಾಲೆಯಲ್ಲಿ ಓದುತ್ತಿದ್ದಾಗ 'ಸಾವಿತ್ರಿ' ಎಂಬ ಸಂಗೀತ ನಾಟಕದಲ್ಲಿ ಸಾವಿತ್ರಿ ಪಾತ್ರವನ್ನು ಅಸಾಧಾರಣವಾಗಿ ನಿರ್ವಹಿಸಿ ತನ್ನ ಕೌಶಲ್ಯದಿಂದ ಪ್ರೇಕ್ಷಕರ ಮೆಚ್ಚಿಗೆಗಳಿಸಿ ಬಹುಮಾನ ಪಡೆದಿದ್ದಳು. ರಾಜಮ್ಮನಿಗೆ ಸಂಗೀತದಷ್ಟೇ ಸಾಹಿತ್ಯದಲ್ಲೂ ಅಭಿರುಚಿ. ಹನ್ನೊಂದನೆಯ ವಯಸ್ಸಿನಲ್ಲಿ ತಿರುಮಲೆ ತಾತಾಚಾರ್ಯರೊಂದಿಗೆ ವಿವಾಹವಾದ ನಂತರವೂ ಸಂಗೀತ ಸಂಗಮವಾಗಿ ಬೆಳೆಯುತ್ತಿದ್ದ ರಾಜಮ್ಮನ ಶಾಂತ ರೀತಿಯ ಜೀವನವು ಕ್ರಾಂತಿಯ ಕಡೆಗೆ ತಿರುಗಲು ಕಾರಣ ಮದರಾಸಿನಲ್ಲಾದ ಮಹಾತ್ಮಾಜಿಯವರ ದರ್ಶನ. ಗಾಂಧೀಜಿ ಬಗ್ಗೆ ಮೊದಲು ಮೂಡಿದ್ದ ಪೂಜ್ಯ ಭಾವನೆಗಳೆಲ್ಲಾ ಅವರನ್ನು ಕಾಣುತ್ತಿದ್ದಂತೆಯೇ ಇಮ್ಮಡಿಗೊಂಡುವು. ಮೊಟ್ಟಮೊದಲನೆಯದಾಗಿ ರಾಷ್ಟ್ರ ಭಕ್ತಿಗೀತೆ "ದೇಶಸೇವಾನಿರತರಾಗಿರೈ" ಎಂಬ ಕವನವನ್ನು ರಚಿಸಿ ಸಭೆಯಲ್ಲಿ ಹಾಡಿದರು. ಅಂದಿನಿಂದ ರಾಜಮ್ಮನ ತನುಮನಗಳಲ್ಲಿ ದೇಶ ಸೇವೆಯ ಮಂತ್ರ ಮಿಡಿಯಲಾರಂಭಿಸಿತು. ಅದೇ ದಿವಸ ನಾಲ್ಕು ಆಣೆ ಕೊಟ್ಟು ಕಾಂಗ್ರೆಸ್ಸಿನ ಸದಸ್ಯೆಯಾದರು.

"ಭಾರತದಿಂದ ಬ್ರಿಟಿಷರನ್ನು ಓಡಿಸುವ ಸಲುವಾಗಿ ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ ಭಾರತ ಜನ ಎಚ್ಚೆತ್ತು, ಕಾರ್ಯ ಸಾಧಿಸಲು ಧೈರ್ಯದಿಂದ ಉತ್ಸಾಹದಿಂದ ಮುನ್ನುಗ್ಗುತ್ತಿದ್ದ ಕಾಲ ಅದು. ನಾಡು ನುಡಿಗಳ ಅಭಿಮಾನಿಗಳಾದ ಈ ಕಿರುವಯಸ್ಸಿನ, ಬಿಸಿ ರಕ್ತದ ತರುಣ ದಂಪತಿಗಳ ಮನಸ್ಸನ್ನು ಸಹಜವಾಗಿಯೇ ಆಗಿನ ವಾತಾವರಣ ಸೆರೆಹಿಡಿಯಿತು. ಇಲ್ಲಿಯವರೆಗೂ ಕಲಿತ ವಿದ್ಯೆಯೆಲ್ಲಾ ದೇಶ ಸೇವೆಯ ಕಾರ್ಯಕ್ಕೆ ಮೀಸಲಾಯಿತು. ಅಂದಿನ ಜನತೆಗೆ ಬ್ರಿಟಿಷರಿಂದ ಆಗುತ್ತಿದ್ದ ಅನ್ಯಾಯಗಳನ್ನು ಕುರಿತು ಕೆಲವು ಹಾಡುಗಳೂ, ಮತ್ತೆ ಕೆಲವು ಉತ್ಸಾಹಿ ತರುಣ ದೇಶ ಪ್ರೇಮಿಗಳಿಗ ಸ್ಫೂರ್ತಿಯನ್ನು ಪ್ರಚೋದಿಸುವ ಗೀತೆಗಳೂ ರಚನೆಯಾದುವು" ಎಂದು ಬರೆದಿದ್ದಾರೆ ಕಮಲಾ ಹಂಪನಾ.

ತಿರುಮಲೆ ತಾತಾಚಾರ್ಯರ ಆಪ್ತ ಸ್ನೇಹಿತರಲ್ಲೊಬ್ಬರು ಶ್ರೀ ಹ. ವೆಂ. ನಾಗರಾಜರಾವ್, ಇವರ ಮಾತಿನಲ್ಲಿ ತಿ. ತಾ. ಶರ್ಮಾರವರು, "ಜೀವನದ ಯಾವುದೇ ಒಂದು ಘಳಿಗೆಯಲ್ಲಿ ಅಪ್ಪಿ ತಪ್ಪಿಯೂ ವಿಶ್ರಾಂತಿ ಪಡೆಯಲಿಚ್ಛಿಸದ, ಸದಾ ಪ್ರಜ್ಞಾ ಪೂರ್ಣರಾದ, ಪ್ರತಿಜ್ಞಾ ಬದ್ಧರಾದ, ತಾಯ್ನುಡಿ ಹಾಗೂ ತಾಯ್ನಾಡಿನ ಬಿಚ್ಚುಗತ್ತಿಯ ಪಹರೆಗಾರ".

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ತಿ. ತಾ. ಶರ್ಮ ೧೯೧೯ರಲ್ಲಿ ಪ್ರಾಚ್ಯ ಸಂಶೋಧನ ಇಲಾಖೆಗೆ ಸೇರಿ ಹರಿದು ಹಂಚಿಹೋಗಿದ್ದ ಕನ್ನಡ ಶಾಸನಗಳನ್ನು ಹುಡುಕಿ ಓದುವುದರಲ್ಲಿ ನಿಷ್ಣಾತರಾದರು. ಅನೇಕ ಶಾಸನಗಳು ಬೆಳಕಿಗೆ ಬಂದು ಕನ್ನಡ ಚರಿತ್ರೆಯ ಮೇಲೆ ಹೊಸ ಬೆಳಕು ಚೆಲ್ಲಿದುವು.

ತಿರುಮಲೆ ತಾತಾಚಾರ್ಯ ಶರ್ಮರು ಪ್ರಾಚ್ಯ ಸಂಶೋಧನಾ ಇಲಾಖೆಯಿಂದ ರಾಷ್ಟ್ರೀಯ ಹೋರಾಟ ರಂಗಕ್ಕೆ ಧುಮುಕಲು ಮಾರ್ಗದರ್ಶಿಯಾದವರು ಆಂಧ್ರ ಕೇಸರಿ ಎನಿಸಿದ ಟಂಗುಟೂರಿ ಪ್ರಕಾಶಂರವರು. ೧೯೨೧ರಲ್ಲಿ ಗಾಂಧೀಜಿ ಅಸಹಕಾರ ಚಳವಳಿಗೆ ಕರೆ ಕೊಟ್ಟಾಗ ಪ್ರಕಾಶಂ ಸತ್ಯಾಗ್ರಹದಲ್ಲಿ ಕಾಲಿಟ್ಟರು. ತಮ್ಮ ವಕೀಲಿ ವೃತ್ತಿಯನ್ನು ತ್ಯಜಿಸಿ ಅದೇ ವರ್ಷ ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿಯಾದರು. ೧೯೨೬ರಲ್ಲಿ ಕೇಂದ್ರ ಶಾಸನ ಸಭೆಗೆ ಸ್ಪರ್ಧಿಸಿ ಪ್ರಕಾಶಂರವರು ಗಣನೀಯ ಬಹುಮತ ದಿಂದ ಆಯ್ಕೆಯಾದರು. ರಾಜಾಜಿಯ ಸಲಹೆಯಂತೆ ಸ್ವರಾಜ್ಯ ಎಂಬ ದಿನ ಪತ್ರಿಕೆ ಯನ್ನು ಆರಂಭಿಸಿದರು. ರಾಜಾಜಿ ಮುಖ್ಯಮಂತ್ರಿಯಾಗಿದ್ದಾಗ ಪ್ರಕಾಶಂ ಕಂದಾಯ ಮಂತ್ರಿಯಾದರು. ೧೯೪೬ರ ಸಾರ್ವತ್ರಿಕ ಚುನಾವಣೆಯಲ್ಲಿ ಗೆದ್ದು ಕಾಂಗ್ರೆಸ್ ಪಕ್ಷದ ಶಾಸಕರ ನಾಯಕರಾಗಿ ಆಯ್ಕೆಯಾಗಿ ಮುಖ್ಯಮಂತ್ರಿಗಳಾದರು.

ಇಂತಹ ರಾಜಕೀಯ ಧುರೀಣ ವ್ಯಕ್ತಿ ಪ್ರಕಾಶಂ ಶರ್ಮಾರವರ ಮೇಲೆ ಪ್ರಭಾವ ಬೀರಿದರು. ತಿ. ತಾ. ಶರ್ಮಾರವರು ಟಿ. ಪ್ರಕಾಶಂ ಬಗ್ಗೆ ಹೀಗೆನ್ನುತ್ತಾರೆ, "ಉದಕಮಂಡಲದಲ್ಲಿ ಅತ್ಯುನ್ನತ ಸ್ಥಾನದಲ್ಲಿ ಗವರ್ನರ್ ಭವನಕ್ಕೂ ಮಿಗಿಲೆನಿಸಿದ್ದುದು ಟಂಗುಟೂರಿ ಪ್ರಕಾಶಂರವರ "ಗೋದಾವರೀ ಭವನ". ನಮ್ಮಿಬ್ಬರ ಮೇಲೆ ಪ್ರಕಾಶಂರವರಿಗೆ ವಿಶೇಷ ಅಭಿಮಾನ, ನನ್ನ ಶ್ರೀಮತಿಯನ್ನು "ಅಮ್ಮಾಯೀ" ಎಂದೇ ಕರೆಯುವರು. ಕನ್ನಡದಲ್ಲಿ ಗೀತೆಗಳನ್ನು ರಚಿಸಿದ್ದೀಯೇ ತೆಲುಗಿನಲ್ಲಿ ರಚಿಸ ಬಾರದೇಕೆ" ಎಂದು ಕೇಳಿ ನನ್ನ ಶ್ರೀಮತಿಯವರಿಂದ ತೆಲುಗು ಗೀತೆಗಳನ್ನು ರಚನೆ ಮಾಡಿಸಿದರು. ಪ್ರಕಾಶಂ ದಂಪತಿಗಳನ್ನು ಔತಣಕ್ಕಾಗಿ ಮನೆಗೆ ಕರೆದು ಸತ್ಕರಿಸಿದಾಗ ಶ್ರೀಮತಿಯವರ ಪಾಕಶಾಸ್ತ್ರ ಪ್ರಾವೀಣ್ಯತೆ ಕುರಿತು ಪ್ರಕಾಶಂರವರು ಹೊಗಳಿದ್ದೂ ಹೊಗಳಿದ್ದೆ ! "ವೀಣೆ ಮೀಟುವ ರಾಜಮ್ಮನವರ ಹಸ್ತ ರುಚಿಯಾದ ಅಡಿಗೆಯನ್ನೂ ಮಾಡಬಲ್ಲದಾಗಿತ್ತು" ಎಂಬುದು ಇಲ್ಲಿ ಎಷ್ಟು ಸ್ಪಷ್ಟ !

ಶ್ರೀ ಕೆ. ರಂಗೈಯ್ಯಂಗಾರ್ ನಡೆಸುತ್ತಿದ್ದ ಮೈಸೂರ್ ಕ್ರಾನಿಕಲ್ ಎಂಬ ಪತ್ರಿಕೆಯನ್ನು ೧೯೨೪ರಲ್ಲಿ ಶರ್ಮರವರು ವಹಿಸಿಕೊಂಡು ಪತ್ರಿಕೆಗೆ 'ವಿಶ್ವಕರ್ನಾಟಕ' ಎಂದು ಹೆಸರಿಟ್ಟರು. ಶರ್ಮರವರಿಗೆ ಕರ್ನಾಟಕದ ಬಗ್ಗೆ ಇದ್ದ ಅಭಿಮಾನಕ್ಕೆ ಇದೊಂದು ಸಾಕ್ಷಿ. ಆಗ ಜೈ ಕರ್ನಾಟಕ, ಪ್ರಬುದ್ಧ ಕರ್ನಾಟಕ, ಸಂಯುಕ್ತ ಕರ್ನಾಟಕ ಮುಂತಾದ ಪತ್ರಿಕೆಗಳು ಪ್ರಕಟವಾಗುತ್ತಿದ್ದುವು. ತಮ್ಮ ಪತ್ರಿಕೆಗೆ ವಿಶ್ವ ಕರ್ನಾಟಕವೆಂದು ಹೆಸರಿಟ್ಟು, ಸೃಷ್ಟಿಯಲ್ಲಿ ವಿಶ್ವ ಹೇಗೆ ಏಕೈಕ ಸ್ವರೂಪವಾಗಿದೆಯೋ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಹಾಗೆ ಕರ್ನಾಟಕವು ಜಗತ್ತಿಗೆ ಆದರ್ಶವಾಗಿ ವಿಶ್ವರೂಪದರ್ಶನವಾಗಿರಬೇಕೆಂಬ ಉದಾತ್ತ ಭಾವನೆಯನ್ನು ತೋರಿಸಿದರು.

ಕರ್ನಾಟಕ ಸಂಸ್ಕೃತಿಯ ಕುರುಹಾಗಿ ಆಗಾಗ್ಗೆ ಶರ್ಮರವರಿಗೆ ಜ್ಞಾಪಕಕ್ಕೆ ಬರುತ್ತಿದ್ದುದು ಕವೀಂದ್ರಾಭರಣ ಮಧುರನ ಶಾಸನ. ಈ ಶಾಸನದ ವಿಷಯ ಇದು—"ತಾಯಿ ತನ್ನ ತೊಡೆಯ ಮೇಲೆ ಮಗು ಲಕ್ಷ್ಮೀಧರನನ್ನು ಮಲಗಿಸಿಕೊಂಡು ಮಗುವಿಗೆ ಬಾಯಲ್ಲಿ ಒಂದೊಂದು ತೊಟ್ಟು ಹಾಲೆರೆಯುವಾಗಲೂ ಕೆರೆಯನ್ನು ಕಟ್ಟಿಸು, ಬಾವಿಯನ್ನು ತೋಡಿಸು, ಕಷ್ಟಕ್ಕೆ ಸಿಕ್ಕಿದ ಅನಾಥರನ್ನು ಬಿಡಿಸು. ನಂಬಿದ ಮಿತ್ರರಿಗೆ ನೆರವಾಗು, ಶಿಷ್ಯರನ್ನು ಪೊರೆ" ಎಂದು ಹೇಳುತ್ತಿದ್ದಳಂತೆ. ಹಾಗೆ ತಾಯಿಯ ಮಡಿಲೇ ಗುರುಕುಲ. ತಾಯಿಯೇ ಗುರು. ಆಕೆ ಮಗುವಿಗೆ ಗುಟುಕು ಗುಟುಕಾಗಿ ಎರೆದದ್ದು 'ಪರಹಿತಾರ್ಥಾಗಮ' ಎಂಬ ಹಾಲು. ಆಹಾ! ಎಂತಹ ದಿವ್ಯಕಲ್ಪನೆ ಎಂದು ಭಾವಪರವಶರಾಗುತ್ತಿದ್ದರು ಎನ್ನುತ್ತಾರೆ ಹ.ವೆಂ.ನಾ.ರವರು. (ವಿಜಯನಗರ ಸಾಮ್ರಾಜ್ಯದ ದೊರೆ ದೇವರಾಯನಿಗೆ ಅಮಾತ್ಯನಾಗಿದ್ದವನು ಲಕ್ಷ್ಮೀಧರ.)

ಭಾರತ ಸಂಸ್ಕೃತಿಯನ್ನು ಒಳಹೊಕ್ಕು ಆನಂದವನ್ನನುಭವಿಸುವ ಶರ್ಮರವರಿಗೆ ತಕ್ಕಪತ್ನಿ ರಾಜಮ್ಮ. ಸಂಗೀತ, ಸಾಹಿತ್ಯ, ನಾಟಕಕಲೆ, ಹಿಂದೂಧರ್ಮ, ಸನಾತನ ಸಂಪ್ರದಾಯ, ದೇವರಲ್ಲಿ ಭಕ್ತಿ ಗಾಂಭೀರ್ಯ, ಗುರುಹಿರಿಯರಲ್ಲಿ ಗೌರವ, ದೇಶ ಪ್ರೇಮ, ತ್ಯಾಗ ಇವೆಲ್ಲಾ ರಾಜಮ್ಮನ ವ್ಯಕ್ತಿತ್ವದಲ್ಲಿ ಅಡಕವಾಗಿತ್ತು.

ತಿ. ತಾ. ಶರ್ಮರವರು ಪತ್ನಿಯನ್ನು ಬಹುವಾಗಿ ಮೆಚ್ಚಿಕೊಂಡಿದ್ದರು, ಇಂಗ್ಲಿಷ್ ಗಂಧವಿಲ್ಲ. ಶಾಲೆಯ ಪಾಠ ಲೋಯರ್ ಸೆಕೆಂಡರಿ ತರಗತಿಗೆ ಮೀರಲಿಲ್ಲ. ಆದರೆ ಪ್ರೌಢವಾದ ಚಿಂತನಾಶಕ್ತಿಯನ್ನು, ವಿಚಾರ ಕೌಶಲವನ್ನೂ ವಿಮರ್ಶಾವಿಚಕ್ಷಣೆ ಯನ್ನು ಪಡೆದಿದ್ದರು.

"ಭಾರತಿಯವರೊಡನೆ ಮಾತಾಡುತ್ತಿದ್ದರೆ ಗಂಟೆಗಳು ನಿಮಿಷಗಳಂತೆ ಕಳೆದು ಹೋಗುತ್ತವೆ. ನಿಜವಾಗಿ ಬಹು ಶ್ರುತರಿವರು" ಎನ್ನುತ್ತಾರೆ ಶ್ರೀ ಪು.ತಿ. ನರಸಿಂಹಾ ಚಾರ್‌ರವರು.

"ಭಾರತಿಯವರದು ಉನ್ನತವಾದ ಮನಸ್ಸು. ಹರಿತವಾದ ಬುದ್ಧಿ. ಅದು ಅವರ ಭಾವನಾಶೀಲತೆಗೆ ಸಂಪೂರ್ಣವಾಗಿ ವಶವಾಗಿದೆ. ಅವರದು ಕವಿಯ ಮನಸ್ಸು. ಕಲೆಗೂ ಚೆಲುವಿಗೂ ಉನ್ನತಾದರ್ಶಕ್ಕೂ ಒಲಿಯುವಂಥದು. ಗಾಢವೂ ಅನುಭವ ಪೂರ್ಣವೂ ಆದ ಆಲೋಚನೆಗಳು ಒಂದು ಹೊಳಪಿನ ಮಾತಿನಲ್ಲಿ ಮಿಂಚಿ ಬರು ತ್ತವೆ."

೧೯೨೧ರಿಂದ ರಾಜಮ್ಮನಿಗೆ ರಾಜಕೀಯ ಪ್ರಮುಖರು, ಸಂಗೀತ ವಿದ್ವಾಂಸರು, ಸಾಹಿತ್ಯ ಪ್ರಮುಖರು ಇಂತಹವರ ಪರಿಚಯ ಹೆಚ್ಚಾಯಿತು. ಆಗಿನ ಕರ್ನಾಟಕ ಕಮಿಟಿಯ ಕಾರ್ಯದರ್ಶಿಗಳಲ್ಲೊಬ್ಬರಾದ ರಾಜಮ್ಮನ ಅಣ್ಣ ಕಂದಾಡೆ ಶಾಮಣ್ಣ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ನವರ ಮನೆಗೆ ಅನೇಕ ಮಹನೀಯರು ಬರುತ್ತಿದ್ದರು. ಕಡಪ ರಾಘವೇಂದ್ರರಾವ್, ಕೌಜಲಗಿ ಕೃಷ್ಣರಾವ್ ಮುದವಿಡಕರ್, ಆಲೂರು ವೆಂಕಟರಾಯರು ಇವರು ಶಾಮಣ್ಣನವರ ಮನೆಯಲ್ಲೇ ಇಳಿದುಕೊಳ್ಳುತ್ತಿದ್ದರು. ಅಲ್ಲದೆ ಕಾರ್ಯನಿಮಿತ್ತಾಗಿ ಬೆಂಗಳೂರಿಗೆ ಬಂದ ಹರೀಂದ್ರನಾಥ ಚಟ್ಟೋಪಾಧ್ಯಾಯ ಅವರ ಪತ್ನಿ ಕಮಲಾದೇವಿ, ದಿಲೀಪ್‌ಕುಮಾರ್‌ರಾಯ್ ಇವರೆಲ್ಲಾ ರಾಜಮ್ಮನ ವೀಣಾವಾದನವನ್ನು ಆಸಕ್ತಿಯಿಂದ ಕೇಳುತ್ತಿದ್ದರು. ಡಿ. ಕೆ. ಭಾರದ್ವಾಜರಂತೂ ರಾಜಮ್ಮನ ಕುಟುಂಬದಲ್ಲಿ ಒಬ್ಬರಂತಾಗಿದ್ದರು.

೧೯೨೪ರಲ್ಲಿ ಬೆಳಗಾಂನಲ್ಲಿ ಮಹಾತ್ಮಾಗಾಂಧಿಯವರ ಅಧ್ಯಕ್ಷತೆಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ರಾಜಮ್ಮನ ವೀಣಾವಾದನ ನಡೆಯಿತು. ಈ ಸಂದರ್ಭದಲ್ಲಿ ದೇಶದ ಮುಖಂಡರ ಪರಿಚಯವಾಗಿ ಮುಂದೆ ಜೀವನದ ಗುರಿಯೇ ರಾಷ್ಟ್ರೋನ್ನತಿಯ ಕಡೆಗೆ ಭದ್ರವಾಗಿ ನಿಂತಿತು.

"ದೇಶಭಕ್ತಿಯೇ ನನ್ನ ತಂಗಿಯನ್ನು ಕವಿಯಿತ್ರಿಯನ್ನಾಗಿ ಮಾಡಿತು. ರಾಷ್ಟ್ರೀಯ ಚಳವಳಿಯು ಕಾವ್ಯಕ್ಕೆ ಹುರುಪನ್ನಿತ್ತಿತು. ಭಾರತದ ವೈಭವವೇ ಕಾವ್ಯದ ವಸ್ತುವಾಯಿತು" ಎನ್ನುತ್ತಾರೆ ಅಣ್ಣ ಶಾಮಣ್ಣ.

ಒಂದು ಸಂದರ್ಭದಲ್ಲಿ ಅನಿರೀಕ್ಷಿತವಾಗಿ ಗಂಗಾಧರರಾವ್ ದೇಶಪಾಂಡೆ, ರಾಜಾಜಿ, ಮಹಾದೇವ ದೇಸಾಯಿ, ಅನುಸೂಯಬೆನ್ ಶಾಮಣ್ಣನವರ ಮನೆಗೆ ಬಂದಾಗ ಶಾಮಣ್ಣ ಇರಲಿಲ್ಲ. ಇಷ್ಟು ಜನರನ್ನು ರಾಜಮ್ಮ ವೀಣಾನೈಖರಿಯಿಂದ ತೃಪ್ತಿಪಡಿಸಿದರು. ಹಾಡುಗಳ ಮಧ್ಯೆ ಗಂಗಾಧರರಾಯರು ಎದೆ ತಟ್ಟಿಕೊಂಡು, "ನೋಡಿದಿರಾ ನಮ್ಮ ಕನ್ನಡದ ಹೆಣ್ಣನ್ನು !" ಎಂದರಂತೆ. ಅದಕ್ಕೆ ರಾಜಾಜಿಯವರು ಕೂಡಲೇ "ಚೆನ್ನಾಗಿ ಹೇಳಿದಿರಿ ! ಅವರು ಪ್ರಥಮತಃ ತಮಿಳುನಾಡಿನವರು. ಅನಂತರ ಸ್ವಲ್ಪ ಕಾಲ ತೆಲುಗು ನಾಡಿನಲ್ಲಿದ್ದು ಆಮೇಲೆ ಕರ್ನಾಟಕಕ್ಕೆ ಬಂದು ನೆಲಸಿರುವವರು ತಿಳಿಯಿತೇ ?" ಎಂದು ಹೆಮ್ಮೆಪಟ್ಟು ಹೇಳಿದರಂತೆ.

ಇಂತಹ ದೇಶಭಕ್ತ ಮಹನೀಯರ ನಿಕಟ ಸಂಬಂಧ ಬೆಳೆದು, ಅವರ ಭಾಷಣಗಳನ್ನು ಕೇಳುತ್ತಾ, ಗಾಂಧೀ ಸಾಹಿತ್ಯ ಭಾಗಗಳನ್ನು ಓದುತ್ತಾ ರಾಜಮ್ಮನ ಜೀವನ ದೃಷ್ಟಿ, ಕವಿತಾ ರಚನೆ ರಾಷ್ಟ್ರಕ್ಕಾಗಿ ಮೀಸಲಾಯಿತು.

"ನಾನು ಸಾಮಾನ್ಯಳು ನಿಜ. ನನ್ನ ಬಗೆಯಲ್ಲಿನ ನೆನಪು ಅಸಾಮಾನ್ಯವಾಗಿದೆ." ಎಂದು ಭಾರತಿಯವರು "ಮರೆಯಲಾಗದ ಬಾಪೂ" ಲೇಖನದಲ್ಲಿ ಹೇಳಿದ್ದಾರೆ. "ನನ್ನ ಜೀವನದ ಆರಂಭ ನಿನ್ನ ೨೦ನೆಯ ವರ್ಷ ಎಂದು ನೆನಪು ಹೇಳುತ್ತಿದೆ" ಎನ್ನುತ್ತಾರೆ.

೧೯೨೦ನೆಯ ವರ್ಷ ಭಾರತದಲ್ಲಿ ಸ್ವಾತಂತ್ರ್ಯದ ಕೂಗು ನವಶಕ್ತಿಯನ್ನು ಮೂಡಿಸಿತು. ಅಂದಿನ ಪರಿಸ್ಥಿತಿಯ ಪ್ರಭಾವವು ನಾನಾ ರೂಪ ತಳೆದಿತ್ತು. ನನ್ನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಜೀವನದ ಮೇಲೆ ಬಹು ಸಮರ್ಪಕವಾಗಿ ಅದೆಂತು ಪರಿಣಾಮವಾಯಿತೆಂಬುದನ್ನು ನಾನೆಂದಿಗೂ ಮರೆಯಲಾರೆ—ಎನ್ನುತ್ತಾರೆ.

"ಕುಟುಂಬದಲ್ಲಿ ಗೃಹ ಶಿಕ್ಷಣವನ್ನೇ ಪಡೆದು ಪೂರ್ವ ಸಂಪ್ರದಾಯವನ್ನೇ ನಂಬಿದ್ದ ನನ್ನ ಮನಸ್ಸನ್ನು ವಿಚಾರ ಕ್ರಾಂತಿಯ ಕಡೆಗೆ ತಿರುಗಿಸಿದವರು ಮೊಟ್ಟ ಲೊದಲು ನನ್ನ ಪತಿ" ಎನ್ನುತ್ತಾರೆ ರಾಜಮ್ಮ.

ಮದರಾಸಿನಿಂದ ಪತ್ನಿಗೆ ಪತ್ರದಲ್ಲಿ ಗಾಂಧೀಜಿಯ ವಿಚಾರವನ್ನೇ ಬರೆಯುತ್ತಿದ್ದರು. "ಮಹಾತ್ಮರ ದರ್ಶನ ಮಾಡಿ ಅವರ ದಿವ್ಯವಾಣಿಯನ್ನು ಕೇಳಿ ನಾನೆಂತಹ ಸ್ಥಿತಿಗೆ ವಶವಾಗಿದ್ದೇನೆಂಬುದನ್ನು ವರ್ಣಿಸಲಾರೆ. ಜೀವನದಲ್ಲಿ ಒಂದು ಧ್ಯೇಯವನ್ನು, ಒಂದು ಸನ್ಮಾರ್ಗವನ್ನು ನಾವಿನ್ನು ನಿರ್ಧರಿಸಬೇಕಾಗಿದೆ. ಸೇವೆಗೆ ಅನುವಾಗೆಂದು ಅಂತರಾತ್ಮನ ಬೋಧೆಯಾಗುತ್ತಿದೆ. ನಾನೇನು ಮಾಡಲಿ ?...ಆತ ಪ್ರತ್ಯಕ್ಷ ದೈವ, ನೀನಾತನನ್ನು ನೋಡಿದರೆ ನೀನು ಮೊದಲಿನವಳಾಗಿರುದಿಲ್ಲ. ನಿನಗೆ ಹೊಸ ಜನ್ಮವೇ ಬಂದಂತಾಗುವುದು "

ಇದರ ಪ್ರತ್ಯಕ್ಷ ಅನುಭವವನ್ನು ರಾಜಮ್ಮನವರು ಮಹಾತ್ಮರನ್ನು ಮೊಟ್ಟ ಮೊದಲು ಕಂಡಾಗ ಅನುಭವಿಸಿದ್ದಾರೆ.

"ದರ್ಶನ ಮಾತ್ರದಿಂದ ಪ್ರಭಾವ ಮುದ್ರೆ ಒತ್ತುವುದೇ ಮಾಹಾತ್ಮ್ಯದ ಒಂದು ನಿದರ್ಶನ, ಕ್ಷೇತ್ರವೇಕೆ ? ತೀರ್ಥವೇಕೆ ? ದೇವತೆಗಳಿಂದಲೂ ಪೂಜಾರ್ಹನಾದ ಈತನ ದರ್ಶನಕ್ಕೆ ಸಮಾನವಿನ್ನಾವುದು ?" ಎಂದು ರಾಜಮ್ಮನ ಮನಸ್ಸು ನುಡಿಯಿತು.

ಈ ಪರಿಶುದ್ಧ ಮನದ ಭಾವನೆ ಮಹಾತ್ಮರ ಅಂತರಾತ್ಮವನ್ನು ಹೊಕ್ಕಿತೋ ಎನ್ನುವಂತೆ ಪ್ರತಿ ಸಭೆಯಲ್ಲೂ ರಾಜಮ್ಮನವರನ್ನು ಕಾಣದಿದ್ದರೆ ಗಾಂಧೀಜಿ ತವಕ ಪಡುತ್ತಿದ್ದರು.

ಅದೊಂದು ಮಹಾಸಭೆ. ನೆಹರೂ, ಅವರ ತಂದೆ ಮತ್ತು ಮಕ್ಕಳು, ಸರೋಜಿನಿ ನಾಯ್ಡು, ಆಕೆಯ ಮಕ್ಕಳು, ಚಿತ್ತರಂಜನ್‌ದಾಸ್, ಆಲೀ ಸಹೋದರರು, ಅನಿಬೆಸೆಂಟ್ ಮುಂತಾದ ಪ್ರಮುಖ ನಾಯಕರ ಸಭೆ. ಕಲಾವಿದರಿಗೂ ಆಹ್ವಾನವಿತ್ತು. ವೀಣೆ ಶೇಷಣ್ಣನವರಿಗೆ ಒಂದು ಗಂಟೆಯ ಹೊತ್ತು ಕೊಡಲಾಗಿ ಮಹಾತ್ಮರು ಬಹುಶ್ರದ್ಧೆಯಿಂದ ಉಲ್ಲಾಸದಿಂದ ಕೇಳಿ, ಕಡೆಯಲ್ಲಿ "ಇವರೆಲ್ಲಾ ಬಂದರು ಸರಿಯೇ. ಪ್ರಾರ್ಥನೆಗೆ ಬಂದು ಹಾಡುವ ತಂಗಿಯೇಕೆ ಬಂದಿಲ್ಲ. ಸಂಜೆಯ ಪ್ರಾರ್ಥನೆಗೆ ಆಕೆಯನ್ನು ಕರೆದು ತನ್ನಿ. ನಾನು ಆಕೆಯ ಸಂಗೀತವನ್ನು ಕೇಳುತ್ತೇನೆ" ಎಂದರಂತೆ. ರಾಜಮ್ಮ ಹಾಡೆಂದರೆ ಬಾಪೂಗೆ ಬಲುಪ್ರಿಯ.

ಆರೋಗ್ಯ ನಿಮಿತ್ತ ಬಾಪೂ ನಂದಿಬೆಟ್ಟದ ಮೇಲಿದ್ದು ಆಮೇಲೆ ಕುಮಾರಾ ಪಾರ್ಕ್‌ನಲ್ಲಿ ಒಂದು ತಿಂಗಳಿದ್ದಾಗ ಬೆಂಗಳೂರಿನ ಜನತೆಗೆ ಬಹು ಸಂಭ್ರಮ. ದೇಶೀಯ ವಿದ್ಯಾಶಾಲೆಯಲ್ಲಿ ಸ್ವದೇಶೀ ಪ್ರದರ್ಶನ ಮಹಾ ವೈಭವದಿಂದ ನಡೆಯಿತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ನೂಲುವ ಸ್ಪರ್ಧೆಯಲ್ಲಿ ಗೆದ್ದವರು ನಾನಾ ದೇಶಗಳಿಂದ ಬಂದಿದ್ದರು. ಅತ್ಯುತ್ತಮ ಖಾದಿಯನ್ನು ಆಕರ್ಷಕವಾಗುವಂತೆ ತೆಗೆದಿದ್ದರು.

ಗಾಂಧೀಜಿ ಬೆಂಗಳೂರಿನಲ್ಲಿದ್ದಾಗ ದೇಶನಾಯಕರನೇಕರು ಅವರ ಜೊತೆಯಲ್ಲಿದ್ದರು. ಮಹದೇವಭಾಯಿ ಕಾರ್ಯದರ್ಶಿಗಳು, ರಾಜಾಜಿ, ಗಂಗಾಧರರಾವ್ ದೇಶಪಾಂಡೆ ಸದಾ ಗಾಂಧೀಜಿಯವರ ಜೊತೆಯಲ್ಲೇ ಇರುತ್ತಿದ್ದರು. ಮಹದೇವಭಾಯಿಗೆ ಹೇಳಿ ಮಹಾತ್ಮಜಿ ತಮಗೆ ಇಷ್ಟವಾದ "ವೈಷ್ಣವ ಜನತೋ" ಹಾಡನ್ನು ಕನ್ನಡ ಭಾಷೆಯಲ್ಲಿ ದಾಸರ ಕೃತಿಗಳ ಧಾಟಿಯಲ್ಲಿ ರಚಿಸಿ ತನ್ನಿಂದ ಹಾಡಿಸಿ ಕೇಳುವ ಇಷ್ಟವಿದೆ ಎಂದು ತಿಳಿಸಿದ ಕೂಡಲೇ ರಾಜಮ್ಮ ಹಿಂದೀ ಭಾಷೆಯ ಪರಿಚಯವಿಲ್ಲದಿದ್ದರೂ, ಭಾಷಾಂತರ ಮಾಡಿ ಹಾಡಿದರು.

ಮತ್ತೊಮ್ಮೆ ಗಾಂಧೀಜಿಯವರನ್ನು ನೋಡಲು ರಾಜಮ್ಮ ಮತ್ತು ಶರ್ಮಾಜಿ ಇಬ್ಬರೂ ಹೋಗಿದ್ದಾಗ ಹರೀಂದ್ರನಾಥ ಚಟ್ಟೋಪಾಧ್ಯಾಯರೂ, ಕಮಲಾದೇವಿಯೂ ಬಂದಿದ್ದರು. ಹರೀಂದ್ರರ ಕೈಲಿ ತಂಬೂರಿ ಇತ್ತು. ಮಹಾತ್ಮರು ಕೊಟ್ಟ ಸದದಿಯ ಪ್ರಕಾರ ರಾಜಮ್ಮ ಮತ್ತು ಹರೀಂದ್ರರು ಹಾಡಿದರು. ನಗೆಮೊಗದಿಂದ ಕೇಳುತ್ತಾ ಕುಳಿತಿದ್ದ ಮಹಾತ್ಮರು ಕಾಗದದಲ್ಲಿ ಏನೋ ಬರೆದು ಕಮಲಾದೇವಿಯನ್ನು ಹತ್ತಿರ ಕರೆದು ಕೈಗೆ ಕೊಟ್ಟರು. ಅದರಲ್ಲಿ ಹೀಗಿತ್ತು, "ನನ್ನ ಮುಂದೆ ನಿಪುಣರಿಬ್ಬರು ಕಲಾಕೌಶಲವನ್ನು ತೋರಿದ್ದಾರೆ. ಪತಿಯ ಕೌಶಲಕ್ಕೆ ಸತಿಯೊಬ್ಬಳು ಹಿಗ್ಗುತ್ತಿದ್ದಾಳೆ. ಸತಿಯ ಕೌಶಲಕ್ಕೆ ಪತಿಯೊಬ್ಬನು ಹೆಮ್ಮೆಪಡುತ್ತಿದ್ದಾನೆ. ಈ ವಿಧಾನವು ಅದಲುಬದಲಾಗಿ ಪರಿಣಮಿಸಬಹುದೇ, ನನ್ನ ಸಹೋದರಿಗೆ ತಿಳಿಸು."

ಈ ಪತ್ರವು ಅಮೂಲ್ಯವಾಗಿ ಭದ್ರವಾಗಿಡುವ ವಸ್ತುವೆಂದು ಭಾರತಿಯವರು ಹೇಳಿದ್ದಾರೆ.

ಮತ್ತೊಮ್ಮೆ ಬಾಪೂಜಿಯನ್ನು ನೋಡಲು ಹೋದಾಗ, ಎಲ್ಲರ ಕೊಠಡಿಯ ಎಲ್ಲಾ ವಸ್ತುಗಳನ್ನೂ, ಬಾಪೂಜಿಯ ಕೊಠಡಿಯ ವಸ್ತುಗಳನ್ನು ರಾಜಮ್ಮ ಪರಿಶೀಲಿಸಿ ನೋಡಿದರು. ಅಲ್ಲಿದ್ದ ವಸ್ತುಗಳೇನು ! ಸಣ್ಣದೊಂದು ಹಾಸಿಗೆ, ಒಂದೆರಡು ಪಾತ್ರೆಗಳು, ಒಂದು ಬಟ್ಟೆಯ ಗಂಟು, ರಟ್ಟಿನಲ್ಲಿ ಮಾಡಿದ ಸೋಪಿನ ಪೆಟ್ಟಿಗೆ, ಸಣ್ಣದೊಂದು ಮುರುಕಲು ಕನ್ನಡಿ, ಮರದ ಬಾಚಣಿಗೆ, ಒಂದು ಸಣ್ಣ ಪೊಟ್ಟಣದಲ್ಲಿ ಕುಂಕುಮದ ಪುಡಿ. ಇವಿಷ್ಟೇ ಬಾಪೂಜಿಯ ವಸ್ತುಗಳು.

ಆಗತಾನೆ ಪಾಕಶಾಲೆಯಿಂದ ಬಂದ ಕಸ್ತೂರಿಬಾ ರಾಜಮ್ಮನನ್ನು ಕಂಡು ಕೈಯಲ್ಲಿದ್ದ ಬಿಸ್ಕತ್ತುಗಳನ್ನು ಅವರ ಕೈಯಲ್ಲಿಡುತ್ತಾ, 'ನಾನೇ ಮಾಡಿದ್ದೇನೆ' ಎಂದರಂತೆ. ಬಾಪೂಜಿಯನ್ನು ನೋಡಲು ತಾವೇ ಜೊತೆಯಲ್ಲಿ ರಾಜಮ್ಮನನ್ನು ಕರೆದುಕೊಂಡು ಹೋದರು. ಮನೆಗೆ ಹೊರಡುವವರೆಗೂ ಜೊತೆಯಲ್ಲೇ ಇದ್ದರು. ಅದೆಂತಹ ದಿವ್ಯ ಪ್ರೇಮ ! ಬಾಪೂಜಿ ಮಹಾತ್ಮರೆನಿಸಿದುದು ಇಂತಹ ಸತಿಯನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಕೈಹಿಡಿದುದರಿಂದಲೇ—ಎನ್ನುತ್ತಾರೆ ಭಾರತಿ. ಯಾರು ಹೆಚ್ಚು ? ಬಾಪೂಜಿಯೋ ? ಬಾರವರೋ ?—ಎನ್ನಿಸಿದೆ ಅವರಿಗೆ.

"ಮರೆಯಲಾಗದ ಬಾಪು"ವಿನಲ್ಲಿ ಭಾರತಿಯವರು ಬರೆದಿರುವ ಒಂದು ಸನ್ನಿವೇಶವನ್ನು ಇಲ್ಲಿ ತರುವುದು ಅತ್ಯವಶ್ಯಕ—"ಒಂದು ದಿನ, ಪ್ರಾರ್ಥನೆಯ ಬಯಲಿಗೆ ಬಂದ ಬಾಪೂ ವಾಪಸ್ಸಾಗುವುದೇ ದುಸ್ತರವಾದಷ್ಟು ಜನಸಂದಣಿ, ಗಲಭೆ ಇತ್ತು. ಅನೇಕರು ದರ್ಶನಕ್ಕೆಂದು, ಹಸ್ತಾಕ್ಷರಗಳಿಗೆಂದು ಮುತ್ತಿದರು. ಹರಿಜನ ನಿಧಿಗೆ ಅನೇಕರು ಒಡವೆ ವಸ್ತುಗಳನ್ನೂ, ಹಣವನ್ನೂ ಅರ್ಪಿಸಿದರು. ಆ ಸಮಯದಲ್ಲೂ ಮರೆಯದೆ ಅಲ್ಲಿದ್ದ ನಮ್ಮ ಕುಶಲವನ್ನೂ ವಿಚಾರಿಸಿದರು. ಸಹಸ್ರ ರೂಪಾಯಿಗಳನ್ನು ಸುರಿದು ಅವರ ಸಹಿಯನ್ನು ಪಡೆಯಲು ಕೆಲವರು ಸಿದ್ಧರಿದ್ದರು. ನಮ್ಮ ಕಡೆಗೆ ತಿರುಗಿ "ನಿಮಗೇನೂ ಬೇಡವೇ ?" ಎಂದರು. 'ನಮಗಿನ್ನೇನೂ ಬೇಕು'—ಎಂದಾಗ, "ಏಕೆ ಏನನ್ನಾದರೂ ಕೇಳಬಾರದೇ ?" ಎಂದು ಬಾಪುವೇ ನುಡಿದರು.

"ಏನನ್ನು ಕೊಡುವಿರಿ ?" ಎಂದನು. "ಹಾಗಾದರೆ ಬೇಕು ಅನ್ನಿ ಕೊಡುವೆನು" ಎನ್ನುತ್ತಾ ಸ್ವಹಸ್ತದಿಂದ ನಿಧಾನವಾಗಿ ಒಪ್ಪವಾಗಿ ಒಂದು ಶ್ಲೋಕವನ್ನು ಬರೆದುಕೊಟ್ಟರು—

"ವಿದ್ಯಾ ವಿನಯ ಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನೀ ।
ಶುನಿಶ್ಚೈವ ಶ್ವಪಾಕೇಚ ಪಂಡಿತಾಃ ಸಮದರ್ಶಿನಃ ॥"

ಇದರಿಂದ ಭಾರತಿಯವರಿಗಾದ ಸಂತೋಷವನ್ನು ಊಹಿಸಬಹುದು.

ಬಾಪೂಜಿ ಮಹಾ ಕಾಲನಿಯಮ ಪಾಲಕರು ಎಂಬುದನ್ನು ನಿದರ್ಶಿಸಲು ರಾಜಮ್ಮ ಬಾಪೂಜಿಯ ಕಟ್ಟಕಡೆಯ ದರ್ಶನದ ಸಮಯವನ್ನು ನೆನೆದು ಹೀಗೆ ಬರೆದಿದ್ದಾರೆ—ಎರಡು ದಿನ ಮಾತ್ರ ಬಾಪೂ ನಿಂತಾಗ ವೇಳೆ ಇಲ್ಲದಿದ್ದರೂ, "ನನ್ನ ತಂಗಿ ಎಲ್ಲಿ ? ಕಡೆಯದಾಗಿ ಸ್ವಲ್ಪ ಹೊತ್ತು ಸಂಗೀತವನ್ನು ಕೇಳಬಹುದು. ನಾನಿನ್ನು ಬರುವ ವಿಚಾರ ಹೇಗೋ ಏನೋ ?" ಎಂದು ತಾವಾಗಿ ಅಪೇಕ್ಷಿಸಿ ರಾಜಮ್ಮನನ್ನು ಐದು ಗಂಟೆಗೆ ಸರಿಯಾಗಿ ಬರಲು ಹೇಳಿದರು.

ರಾಜಮ್ಮನವರು ಹೋಗಿದ್ದು ಸ್ವಲ್ಪ ತಡವಾಯಿತು. ಬಾಪೂ ಹೇಳಿದರು. "ಹೊತ್ತು ಮಾಡಿಕೊಂಡು ಬಂದಿರಿ. ನಾನು ಸ್ನಾನಕ್ಕೆ ಹೋಗಬೇಕು" ಎಂದು ಎದ್ದರು.

ರಾಜಮ್ಮನಿಗೆ ಕಣ್ಣಲ್ಲಿ ನೀರು ಬರುವುದು ಬಾಕಿ. ನಿರಾಸೆಯಾಯಿತು.

ಕಸ್ತೂರಿಬಾ ಕನಿಕರದಿಂದ ರಾಜಮ್ಮನ ಹತ್ತಿರಕ್ಕೆ ಬಂದು ಬೆನ್ನ ಮೇಲೆ ಕೈ ಆಡಿಸುತ್ತಾ, "ತಂಗೀ, ಅವರು ಸ್ನಾನ ಮಾಡಿ ಬರಲಿ, ನಾನು ಒಪ್ಪಿಸುತ್ತೇನೆ. ನೀನ್ನು ಅಸಮಾಧಾನ ಪಡಬೇಡ" ಎಂದು ಹೇಳಿ, ಬಾಪು ಸ್ನಾನ ಮುಗಿಸಿ ಬಂದ ಮೇಲೆ ಅವರನ್ನು ಕುರಿತು, "ಈ ಹೆಂಗಸು ಮಗನಿಗೆ 'ಬಾಪು' ಎಂದು ಹೆಸರಿಟ್ಟಿದ್ದಾರೆ" ಎಂದು ಹೇಳಿ ಬಾಪುವಿಗೆ ನಮಿಸಿದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಅದೇ ಸಮಯವನ್ನು ಸಾಧಿಸಿ, "ನಿಮ್ಮ ಮಾತಿನಂತೆ ಬಂದು ಕುಳಿತಿದ್ದಾರೆ. ಒಂದು ಹಾಡನ್ನು ಕೇಳಬಹುದಲ್ಲವೇ ?" ಎಂದರು ಬಾ.

ಬಾಪು ಬಲು ಸಮಾಧಾನದಿಂದ ಕೇಳುತ್ತಿದ್ದರು. ಆ ವೇಳೆಗೆ ಲೋಕಸುಂದರಿ ರಾಮನ್ ಮತ್ತು ಇತರರು ಅವರನ್ನು ಕರೆದುಕೊಂಡು ಹೋಗಲು ಬಂದರು.

ಮಹಾತ್ಮರು ಎದ್ದು ರಾಜಮ್ಮನನ್ನು ನೋಡಿ "ಸಮಾಧಾನವಾಯಿತೇ ?" ಎಂದರಂತೆ.

ಹಿಂದಿನ ಈ ಘಟನೆಗಳನ್ನು ಜ್ಞಾಪಿಸಿಕೊಳ್ಳುತ್ತಾ ಭಾರತಿಯವರು, "ಬಾಪೂಜಿ ಇಂದು ಇಲ್ಲವೆಂದು ಹೇಳಲು ನನ್ನ ಮನಸ್ಸೊಪ್ಪದು. ಭಾರತ ಜೀವ ಜೀವದಲ್ಲಿ, ವಿಶ್ವ ಪ್ರೇಮದಲ್ಲಿ ಲೀನವಾಗಿದ್ದಾರೆ. ಕಸ್ತೂರಿ ಬಾ ಶಾಶ್ವತ ಸುಮಂಗಲಿ ಎಂತೋ. ಅಂತೆಯೇ ಬಾಪೂ ಚಿರಂಜೀವಿ, ಬಾಪೂ ಎಂಬ ಪದವೆಷ್ಟು ಹಿತವಾಗಿದೆ ! ದಿನವೂ ಜ್ಯೋತಿ ಇಟ್ಟು ದೈವ ಪ್ರಾರ್ಥನೆ ಮಾಡುತ್ತಾ ಸ್ಮರಿಸುವಾಗ ರಾಮ, ಕೃಷ್ಣ, ಸೂರ್ಯ ಭಗವಾನರೊಂದಿಗೆ ಈ ಪದ್ಯವನ್ನು ಹಾಡುವುದು ನನಗೆ ರೂಢಿಯಾಗಿದೆ" ಎನ್ನುತ್ತಾರೆ. ಅವರೇ ರಚಿಸಿದ ಪದ್ಯವಿದು "ಕರ್ಮವೀರನೇ ಜೀವನ್ಮುಕ್ತನೇ ಧರ್ಮ ರೂಪನೇ ನಮೋ ನಮೋ, ಅಹಿಂಸಾ ಸಹನಾ ತತ್ವಮಯ ಮಹಾ ಸತ್ವಮಯ ಪ್ರೇಮದಯಾ ಮಹಿಮಾ."

ಬಾಪೂ ಚಿರಂಜೀವಿ ಎಂತೋ, ಅಂತೆಯೇ ಭಾರತಿಯವರೂ ಇಂದು ನಮಗೆಲಾ ಚಿರಂಜೀವಿ. ರಾಷ್ಟ್ರಭಕ್ತೆಯಾಗಿ, ರಾಷ್ಟ್ರ ಶಕ್ತಿಯಾಗಿ, ಭಾರತ ಸಂಸ್ಕೃತಿಯ ತದ್ರೂಪ ವಾಗಿದ್ದ ಭಾರತಿಯವರು ನಮ್ಮನ್ನಗಲಿದರೂ ಅವರ ನಡೆ ನುಡಿಗಳು ನಮ್ಮ ನೆನಪಿನಲ್ಲಿ ಎಂದೆಂದೂ ಹಸುರಾಗಿರಬೇಕಾದುದು.

ಚಿಕ್ಕ ವಯಸ್ಸಿನಲ್ಲಿ ನಾವುಗಳು ಶಾಲೆಯಲ್ಲಿ, ಇಡೀ ಕರ್ನಾಟಕ ಎಲ್ಲಾ ಶಾಲೆಗಳಲ್ಲೂ ವಿದ್ಯಾರ್ಥಿಗಳು ಪ್ರಾರ್ಥನಾ ಸಮಯದಲ್ಲಿ ಹಾಡುತ್ತಿದ್ದ "ಜೈ ಭಾರತ ಭುವಿಗೇ ಮಾತೆಗೆ ಜೈ ಪಾವನ ಮೂರ್ತಿಗೆ" ಮರೆಯಲು ಸಾಧ್ಯವೇ ? ಇದನ್ನು ರಚಿಸಿದವರಾರೆಂದು ಅಂದು ನಮಗೆ ತಿಳಿದಿತ್ತೇ ?

ಹೀಗೇ ಅಂದುಕೊಂಡ ಶ್ರೀಮತಿ ಅನುಪಮಾ ನಿರಂಜನಾರವರು ರಾಜಮ್ಮನೇ ಈ ಹಾಡನ್ನು ರಚಿಸಿದ್ದು "ತಪಸ್ವಿನಿ"ಯ ಲೇಖಕಿ ರಾಜಮ್ಮನೆಂದು ತಿಳಿದು ಈ ಕವಯಿತ್ರಿಯನ್ನು ನೋಡುವ ಹಂಬಲ ಹೆಚ್ಚಾಯಿತು ಎನ್ನುತ್ತಾರೆ. "ತಪಸ್ವಿನಿ" ಕಾವ್ಯ ನಾಟಕದ ಸರಳತೆ, ಸುಭಗತೆ, ಲಾಲಿತ್ಯ, ರಮ್ಯತೆ, ಪಾತ್ರ ಪರಿಪುಷ್ಟಿ ಎಲ್ಲವನೂ ನೋಡಿದರೆ ಕವಿತಾ ಪ್ರಪಂಚಕ್ಕೆ ಇದು ಮಹಿಳೆಯ ಅದ್ವಿತೀಯ ಕಾಣಿಕೆ ಎಂದು ಹೇಳಿದ್ದಾರೆ ಡಾ॥ ಅನುಪಮಾ. ಒಂದು ಸಲ ಮೇಲುಕೋಟೆಯಲ್ಲಿ ಕನ್ನಡ ಸಂಘದ ಮಹೋತ್ಸವಕ್ಕೆ ಮುಖ್ಯ ಅತಿಥಿಗಳಾಗಿ ಹೋಗಿದ್ದರು ತಿರುಮಲೆ ದಂಪತಿಗಳು. ಈ ಉತ್ಸವಕ್ಕೆ ಆಗಮಿಸಿದ್ದ ರಾಜಮ್ಮನನ್ನು ಶಲ್ವಪಿಳ್ಳೈ ಶರ್ಮ ಹೀಗೆ ವರ್ಣಿಸುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



"ಶ್ರೀ ವೈಷ್ಣವ ಸಂಪ್ರದಾಯದ ರೇಷ್ಮೆ ಸೀರೆಯ ಕಚ್ಚೆಯ ಉಡುಪು, ಹಣೆಯ ಮಧ್ಯೆ ತಿದ್ದಿದ ಬೈತಲೆ, ಅದರಡಿ ಕುಂಕುಮ ಬೊಟ್ಟು, ಕೈಗಳಲ್ಲಿ ಬಂಗಾರದ ಬಳೆಗಳು ಅಂದವಾಗಿ ಹೆಣೆದ ವೇಣಿಲತೆ, ಹಾವುಗೆಯನ್ನು ಮೆಟ್ಟಿದ್ದರೂ ಮರೆಯದೆ ಧರಿಸಿದ್ದ ಕಾಲುಂಗುರ ಮಾತಿಗೆ ಮುಂಚೆ ಮೊಗದ ಮೇಲೆ ನಲಿದಾಡುವ ಸಹಜವಾದ ಕಿರುನಗೆ ಧೀರಗಂಭೀರ ಸ್ವಭಾವದೊಂದಿಗೆ ಬೆರತು ಹಿಂದಿನ ಸತೀಮಣಿಗಳ ನೆನಪು ಕೊಡುತ್ತಿತ್ತು. 'ತಪಸ್ವಿನಿ'ಗೆ ಸರಿಯಾದ ಮೂರ್ತಿ ಇವರೇ ಎಂಬ ಪವಿತ್ರ ಭಾವನೆ ಮೂಡಿತು." ಮಹೋತ್ಸವ ಮುಗಿಸಿ ಊರು ತಲುಪಿದ ನಂತರ ಭಾರತೀಯವರು ಪತ್ರ ಬರೆದರು. "ಪ್ರತಿ ದಿನ ಹಲವುಸಾರಿ ಮೇಲುಕೋಟೆಯ ರಮಣೀಯ ದೃಶ್ಯಗಳು ದೃಕ್ಪಥಕ್ಕೆ ಬರುತ್ತವೆ. ಪ್ರಿಯ ಬಂಧುಗಳೇ ! ನಿಮ್ಮೆಲ್ಲರ ಸ್ನೇಹವೂ ಪವಿತ್ರ ಕ್ಷೇತ್ರದಲ್ಲಿ ದೈವದತ್ತವಾಗಿ ದೊರಕಿತು. ನಿಮ್ಮ ಸರಳ ಜೀವನ ಸಾಧು ಸ್ವಭಾವ ಅಭಿಮಾನದಿಂದ ನಾವೆಷ್ಟು ಪಳಗಿದೆವು, ಎರಡು ದಿನದಲ್ಲೆ !...ಶ್ರಮಿಸಿ ಬಳಲಿ ಬೇಸತ್ತ ತನು ಮನಗಳ ಆನಂದ ಆರೋಗ್ಯಗಳಿಗೆ ಮೇಲುಕೋಟೆಗಿಂತ ಉತ್ತಮ ವಸತಿ ಇನ್ನೆಲ್ಲಿ ?"

ಜನಪ್ರಿಯತೆಗಾಗಲೀ, ಪ್ರಚಾರಕ್ಕಾಗಲೀ, ರಾಜಮ್ಮನವರು ಹಾತೊರೆದವರಲ್ಲ. ಎಲೆಮರೆಯ ಕಾಯಿಯಂತೆ ಸಾಹಿತ್ಯ, ಸಂಗೀತ, ದೇಶ ಸೇವೆ ಮಾಡುತ್ತಿದ್ದ ರಾಜಮ್ಮನನ್ನು ೧೯೭೭ರಲ್ಲಿ ರಾಜ್ಯ ಸರ್ಕಾರ ಗುರ್ತಿಸಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿತು.

ರಾಜಮ್ಮನವರ ಹಿರಿಯ ಸೊಸೆಯಾಗಿ ಅವರ ಮನೆ ಸೇರಿದ ಶ್ರೀಮತಿ ಟಿ. ವೈದೇಹಿ ಹೀಗೆನ್ನುತ್ತಾರೆ—"ತುಂಬಿದ ಮನೆಯವರು ರಾಜಮ್ಮನವರು. ಅವರ ತಾತಂದಿರು ವಿದ್ವಾನ್ ರಾಜಗೋಪಾಲಚಾರ್ಯರು ದೊಡ್ಡ ಸಂಸ್ಕೃತ ಪಂಡಿತರು. ಲೂಯಿ ರೈಸ್‌ರಿಗೆ ಸಂಸ್ಕೃತ ಹೇಳಿಕೊಡುತ್ತಿದ್ದರಂತೆ. ಈ ಸಂಸ್ಕಾರ ರಾಜಮ್ಮನ ಸಾಹಿತ್ಯ ಸೃಷ್ಟಿಗೆ ಪುಟಕೊಟ್ಟಿದೆ. ಮನೆಯ ವಾತಾವರಣ ವೈಶಿಷ್ಟ್ಯ ಪೂರ್ಣವಾಗಿದೆ. ಮನೆ ತುಂಬಾ ಜನ, ವಿದ್ಯಾರ್ಥಿಗಳು, ಮಕ್ಕಳು, ಸ್ನೇಹಿತರು, ಬಂಧುಗಳು ಮತ್ತು ಬಂದು ಹೋಗುವವರಿಗಂತೂ ಲೆಕ್ಕವೇ ಇಲ್ಲ. ಹೀಗಾಗಿ ಆ ಮನೆಯಲ್ಲಿ ನಿತ್ಯ ಸಮಾರಾಧನೆ, ನಿತ್ಯ ಉತ್ಸವ ರಾಜಮ್ಮನವರ ತಾಯಿ ಸೀತಮ್ಮ ಎಲ್ಲರ ಪಾಲಿಗೂ "ಅನ್ನಪೂರ್ಣೆ" ಎಲ್ಲರೂ ಎಲ್ಲಾ ಕೆಲಸಕ್ಕೂ ಸಿದ್ಧ. ಇದು ಆ ಮನೆಯವರ ವಿಶೇಷ.

ಆಡಂಬರ ಜೀವನ, ಸುಖಮಯ ಜೀವನವನ್ನು ಬಯಸಿದವರಲ್ಲ ಭಾರತಿಯವರು. ಸರಳ ತೃಪ್ತ ಜೀವನ ಅವರದು. "ಸುಮ ಕೋಮಲ, ವಜ್ರಕಠಿಣ ಎನ್ನುವಂತೆ ಮೃದು ಶರೀರ, ಮೃದು ಶಾರೀರ, ನಡೆನುಡಿ ಮೃದು. ಆದರೆ ಒಮ್ಮೆ ಮಾಡಿದ ಸಂಕಲ್ಪವನ್ನು ಎಂದೂ ಬದಲಿಸಿದವರಲ್ಲ."

ಪತಿಯ ಪತ್ರಿಕೋದ್ಯಮದಲ್ಲೂ ಭಾರತಿಯವರ ಆಸಕ್ತಿ ಎಷ್ಟಿತ್ತೆಂದು ಶರ್ಮಾರವರ ಮಾತಿನಲ್ಲೇ ಹೇಳುವುದಾದರೆ, "ಭಾರತಿಯವರ ಹಸ್ತಪೂರ್ವಕ ಸಹಕಾರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ವಿಲ್ಲದಿದ್ದರೆ "ವಿಶ್ವ ಕರ್ನಾಟಕ" ಪತ್ರಿಕೆಯು ನಿರಾತಂಕವಾಗಿ ನಡೆಯುತ್ತಿರಲಿಲ್ಲ. ಪತ್ರಿಕೆಯ ನಿರ್ವಹಣಾ ಕಾರ್ಯದಲ್ಲಿ ತನ್ನ ಶ್ರೀಮತಿಯವರ ಪಾತ್ರವೇನೆಂಬುದು ಸಂಪಾದಕ ಶಾಖೆಯಲ್ಲಿ ಕೆಲಸ ಮಾಡುತ್ತಿದ್ದವರಿಗೂ, ಯಂತ್ರ ಶಾಖೆಯಲ್ಲಿ ಕೆಲಸ ಮಾಡುತ್ತಿದ್ದವರಿಗೂ ಚೆನ್ನಾಗಿ ಗೊತ್ತು. ಸಮಯಕ್ಕೆ ಸರಿಯಾಗಿ ಕಾಗದ ದೊರಕದೆ ಪತ್ರಿಕೆ ತಡವಾಗುವ ತಾಪತ್ರಯವನ್ನು ತಿಳಿದು ಒಂದು ಸಲ ತಮ್ಮ ಕೈ ಚಿನ್ನದ ಬಳೆಗಳನ್ನು ತೆಗೆದು ವ್ಯವಸ್ಥಾಪಕರ ಕೈಯಲ್ಲಿಟ್ಟು. 'ಕೂಡಲೇ ಹೋಗಿ, ಇದನ್ನು ಮಾರಿಯೋ, ಒತ್ತೆ ಇಟ್ಟೋ ಹಣ ತಂದು, ಕಾಗದ ಕೊಂಡು ತಂದು ಪತ್ರಿಕೆಯನ್ನು ಹೊರಡಿಸಿ ಎಂದು ಹೇಳಿ ತ್ಯಾಗಕ್ಕೆ ಉದಾಹರಣೆಯಾಗಿದ್ದಾರೆ."

ಭಾರತಿಯವರ "ರಾಷ್ಟ್ರ ಶಕ್ತಿ" ಗೀತೆಗಳು ರಾಷ್ಟ್ರದಲ್ಲಿ ಸಮಯ ಸ್ಫೂರ್ತಿ ತಂದಿವೆ. ಅವುಗಳಲ್ಲಿ ಇಲ್ಲಿ ಕೆಲವು ಲವಣ ಸತ್ಯಾಗ್ರಹದ ಸಮಯ, ಮಹಾತ್ಮಾ ಗಾಂಧಿಯವರು ತನ್ನ ದೇಶೀಯರನ್ನುದ್ದೇಶಿಸಿ ವೀರ ಸಂದೇಶವಿತ್ತರು. ಪಾದಚಾರಿಯಾಗಿ ಯಾತ್ರೆ ಕೈಗೊಂಡಾಗ ಕಸ್ತೂರಿ ಬಾ ಕುಂಕುಮವಿಟ್ಟು ಬೀಳ್ಕೊಟ್ಟ ಸಂದರ್ಭ–

"ಸತ್ವ ಸಂಗ್ರಾಮ ರಂಗಕ್ಕೆ ಬನ್ನಿ ಬನ್ನಿ
ಚಿತ್ತ ಪರಿಶೋಧಿಸಿ ಪವಿತ್ರರಾಗಲು ಬನ್ನಿ
ಸತ್ಯಾ ಶ್ರಮದ ಮುಕ್ತಿ ಸದನವೈದಲು ಬನ್ನಿ..."

ಸತ್ಯಾಗ್ರಹ. ಅಸಹಕಾರ, ಆಂದೋಲನದಲ್ಲಿ ದೇಶಕ್ಕಾಗಿ ಜೀವನ ಸರ್ವಸ್ವವನ್ನೂ ಅರ್ಪಿಸಿ ಸೆರೆಮನೆಗಳಲ್ಲಿ ಬಂಧಿತರಾದರು ಭಾರತ ವೀರರು. ಪೂಜ್ಯ ಬಾಪೂ ಮಹದೇವ ಭಾಯಿ, ಕಸ್ತೂರಿ ಬಾ. ನೆಹರೂ ಮುಂತಾಗಿ ಎಲ್ಲರೂ ನಿರ್ಬಂಧವಾಸದಲ್ಲಿದ್ದ ಸಮಯ, ವೀರ ಸಾಹಸಿಗಳ ಅಧಿದೇವತೆ ಸೆರೆಮನೆಗಳನ್ನು ಹುಡುಕುತ್ತಾ ಅಲೆಯುತ್ತಿದ್ದಾಳೆ—

"ಆರನರಸುತೆ ಬಂದೆ ವೀರ ಜನನೀ
ಆರ ಆಗಮನಕೆ ದಾರಿ ಕಾಯುವೆಯಮ್ಮ
ಕಾರುಗತ್ತಲೆ ಕವಿದು ಬರುವ ಹೊತ್ತಿನಲಿ
ಘೋರಾಟವಿಯ ಬಳಿಗೆ ಸಾರಿ ಬಂದೆಯೇಕೆ..."

ಸಂಗ್ರಾಮ ನಡೆಯುತ್ತಿದ್ದಾಗ ವಿದೇಶೀ ಸೈನ್ಯ ಪಡೆಗಳಿಗೆ ಸುಖಭೋಜನಕ್ಕಾಗಿ ಹಳ್ಳಿಗಾಡಿನ ಕಡೆಯಿಂದ ದನಕರುಗಳನ್ನು ತರಿಸಿ ಒದಗಿಸಲಾಗುತ್ತಿತ್ತು. ಸಾಲು ಸಾಲಾಗಿ ನೂರಾರು ಮೂಕ ಜೀವಿಗಳು ಬರುತ್ತಿದ್ದ ದೃಶ್ಯ ಸಹಿಸಲಾಗದ ವೇದನೆ ತಂದಿತು—

"ನಂಧಿನೀ ! ಸುಹೃದಯಾನಂದ ಸಂವರ್ಧಿನೀ ಜಗದಾತ್ಮ
ಬಂಧು ಜೀವನ ಸೌಖ್ಯ ಭಾಗ್ಯ ಪ್ರದಾಯನೀ,
ಕುಂದಿತೇಕೆ ಮನ-ವಾಕ್ರಂದನವಿದೇನು, ಜನನೀ ನಯನ
ಬಿಂದುಗಳ ತಡೆಯದಿರೆ ಈ ಧರೆಯುಳಿವುದೇ..."

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಭಾರತಿಯವರ ಪುತ್ರ ಶ್ರೀರಂಗರವರು ಮಾತು ಮುಗಿಸುತ್ತಾ ಹೀಗೆನ್ನುತ್ತಾರೆ. "ನಮ್ಮ ತಾಯಿ ಸೆರೆಮನೆಗೆ ಹೋಗಲಿಲ್ಲ. ಬ್ರಿಟಿಷರಿಂದ ಛಡಿ ಏಟು ತಿನ್ನಲಿಲ್ಲ. ಆದರೆ ಭಾರತ ಭಾಗ್ಯವಿದಾತನ ಪ್ರೀತಿಯ ಪುತ್ರಿಯಾಗಿದ್ದರು, ತಿರುಮಲೆ ರಾಜಮ್ಮನ ಸಂಗೀತವೆಂದರೆ. ಸಾಹಿತ್ಯವೆಂದರೆ ರಾಷ್ಟ್ರದಲ್ಲೆಲ್ಲಾ ಜನಪ್ರಿಯವಾಗಿತ್ತು. ಆಂದೋಳನಕ್ಕೆ ಸಿದ್ಧಪಡಿಸುತ್ತಿತ್ತು. ಸ್ವಾತಂತ್ರ್ಯಕ್ಕಾಗಿ ಹೋರಾಡಲು ಸ್ಫೂರ್ತಿಕೊಡುತ್ತಿತ್ತು."

ಫ್ರಾನ್ಸಿನ ಕ್ರಾಂತಿಯಲ್ಲಿ, ರೂಸೋ ವಾಲ್ಟೇರ್, ಬರವಣಿಗೆಯಿಂದಲೇ ಮಹಾನಾಯಕರಾದಂತೆ—ಎಂದು ಉದಹರಿಸಿದರೆ, ಶ್ರೀರಂಗರವರಿಗೆ ಈ ಉದಾಹರಣೆ ಒಪ್ಪದು. "ಪರಕೀಯರ ಉದಾಹರಣೆಯಿಂದ ನಮ್ಮನ್ನು ನಾವು ಅರ್ಥಮಾಡಿಕೊಳ್ಳಬೇಕೇ ?" ಎನ್ನುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



# ಕಮಲಾ ನೆಹರೂ

"ಈ ಸ್ತ್ರೀ ಬಗೆಗೆ ಬರೆಯಲು ಒಬ್ಬ ಸ್ತ್ರೀಯೇ ಬೇಕು"—ಎಂದು ಹೇಳುತ್ತಾ ಕಾಶ್ಮೀರಿ ಕುಲದ ಶ್ರೀ ದ್ವಾರಕಾನಾಥ ಕಲ್ಹಣ, ತಾವೇ ಕಮಲಾ ನೆಹರೂರವರ ವಿಷಯವನ್ನು ಸಂಗ್ರಹಿಸಿದ್ದರೂ ಅವರ ಬಗೆಗೆ ಬರೆಯುವ ಕೆಲಸವನ್ನು ತಮ್ಮ ಪತ್ನಿಗೆ ವಹಿಸಿದರು.

ದ್ವಾರಕಾನಾಥ ಕಲ್ಹಣ ಹೇಳಿರುವ ಒಂದು ವಾಕ್ಯದಲ್ಲಿ ಶ್ರೀಮತಿ ಕಮಲಾ ನೆಹರೂರವರ ವ್ಯಕ್ತಿತ್ವದ ಸಂಪೂರ್ಣ ಪರಿಚಯವಾಗಬಲ್ಲದು.

ಭಾರತೀಯ ಹೆಣ್ಣಿನ ಪ್ರತೀಕವೇ ಕಮಲಾ ನೆಹರೂ. ಜವಾಹರಲಾಲ್ ಅವರೇ ಒಂದು ಕಡೆ, "ಕಮಲಾ ಸ್ತ್ರೀ ಕುಲವನ್ನೇ ಪ್ರತಿನಿಧಿಸುತ್ತಾಳೆ. ಭಾರತ ಸ್ತ್ರೀ ರತ್ನವೆಂದರೆ ಕಮಲಾ ಎನ್ನಬಹುದು"— ಎಂದು ಹೇಳಿದ್ದಾರೆ.

೧೯೧೬ರ ಫೆಬ್ರುವರಿ ಎಂಟನೆಯ ದಿನ ವಸಂತ ಋತು ಶುದ್ಧ ಪಂಚಮಿ ಶುಭ ಮುಹೂರ್ತದಲ್ಲಿ ಅತ್ಯಾಧುನಿಕ ಮನೋಭಾವನೆಯ, ಪ್ರತಿಭೆಯಿಂದ ಐಶ್ವರ್ಯ-ಸಂಪತ್ತಿನ ಮೆರಗಿನಿಂದ, ಸುಸಂಸ್ಕೃತ ನಡತೆಯಿಂದ ಆಕರ್ಷಿಸುವ ವ್ಯಕ್ತಿ ೨೬ ವರ್ಷದ ನವತರುಣ ಜವಾಹರ್, ದೆಹಲಿಯ ಚೆಲುವೆ ಎನಿಸಿದ್ದ, ಪ್ರಕೃತಿದತ್ತವಾದ ಸೌಂದರ್ಯ ವಿನಯ ಗಾಂಭೀರ್ಯಗಳ ಮೂರ್ತಿಯಾದ ಹದಿನೇಳರ ಪ್ರಾಯದ ಆಕರ್ಷಕ ಯುವತಿ ಕಮಲಾಳನ್ನು ಅತ್ಯಂತ ವೈಭವದಿಂದ ಸ್ವಗೃಹವಾದ ಆನಂದಭವನದಲ್ಲಿ ಪಾಣಿಗ್ರಹಣ ಮಾಡಿದ ದಿನ. ಮದುವೆಯ ಮಂಟಪದಲ್ಲಿ ಕಾಶ್ಮೀರಿ ಪೋಷಾಕು, ಟರ್ಬನ್ ಧರಿಸಿದ್ದ ವರನನ್ನೂ, ಮುತ್ತಿನಮಣಿ ಕಸೂತಿಯಿಂದ ಅಲಂಕೃತವಾದ ಸೀರೆ ಮತ್ತು ಕೇಶಾಭರಣಗಳನ್ನು ಧರಿಸಿದ್ದ ವಧುವನ್ನು ನೋಡಿದವರೆಲ್ಲಾ ಒಂದು ನಿಮಿಷ ಅವಾಕ್ಕಾಗಿ ರೆಪ್ಪೆ ಮಿಟುಕಿಸದೆ ದೃಷ್ಟಿಸಿದರು. ದೇವರ ಸೃಷ್ಟಿಯಲ್ಲಿ ಈ ಜೋಡಿ ರೂಪರಾಶಿ ಮಿಳಿತವಾದ ದಂಪತಿಗಳ ಅತ್ಯುತ್ತಮ ಆದರ್ಶ ಜೋಡಿ ಎಂದರು.

ಜವಾಹರರ ತಂದೆ ಮೋತಿಲಾಲ್ ನೆಹರು ತಮ್ಮ ಸಂಸಾರಕ್ಕೆ ಸರಿಹೊಂದುವ ಹೆಣ್ಣೆಂದು ಆರಿಸಿಕೊಂಡ ಸ್ತ್ರೀರತ್ನ ಕಮಲಾ. ಪತಿಪತ್ನಿಯರ ಸ್ವಭಾವದಲ್ಲಿ ವೈವಿಧ್ಯಯೂ ಇತ್ತು. ಪಾಶ್ಚಾತ್ಯ ನಾಗರಿಕತೆ ಮತ್ತು ಇಂಗ್ಲಿಷ್ ಭಾಷಾಭಿಲಾಷಿಯಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಸಿರಿಸಂಪತ್ತಿನ ಸುಖ ಜೀವನದಲ್ಲಿ ಬೆಳೆದ ಏಕಮಾತ್ರ ಪುತ್ರ ಜವಾಹರರೊಂದಿಗೆ ಅತಿ ಸರಳ ಸೌಜನ್ಯಮೂರ್ತಿ ಭಾರತ ಸಂಪ್ರದಾಯದ ಪುತ್ಥಳಿಯಂತಿದ್ದು, ಇಂಗ್ಲಿಷ್ ಭಾಷೆಯ ಗಂಧವೇ ಇಲ್ಲದ ಕಮಲಾ ಹೊಂದಿಕೊಂಡು ಹೋಗುವುದೆಂದರೆ ಸೊಸೆಯಾಗಿ ಪ್ರವೇಶಿಸಿದ ಹೆಣ್ಣಿಗೆ ಬಿಕ್ಕಟ್ಟಿನ ಪರಿಸ್ಥಿತಿಯೆಂದು ಊಹಿಸಬಹುದು.

ಆದರೆ ಅತಿಶೀಘ್ರವಾಗಿ ಅನುಸರಿಸಿ ನಡೆದುಕೊಳ್ಳುವ ವಿಶೇಷ ಹೆಣ್ಣು ಕಮಲಾ.

ಮೋತಿಲಾಲ್ ನೆಹರು ತಮ್ಮ ವಾಸಸ್ಥಳವಾದ ಆನಂದಭವನವನ್ನು ಪೂರ್ವ ಪಶ್ಚಿಮ ದೇಶಗಳ ಸಾಂಸ್ಕೃತಿಕ ಸಂಗಮ ಎಂಬಂತೆ ಕಟ್ಟಿಸಿದ್ದರು. ಅಲಹಾಬಾದಿನ ಈ ಆನಂದಭವನ ಭಾರತದಲ್ಲೇ ಸುಂದರ ಸೌಧವೆನಿಸಿತ್ತು. ಇಂತಹ ಆನಂದಭವನಕ್ಕೆ ಆನಂದವನ್ನು ತರುವ ಹೆಣ್ಣಾದಳು ಕಮಲಾ. ಸಂಪತ್ತಿನ ತೂಲಿಕಾತಲ್ಪದಲ್ಲಿರ ಬಹುದಾದರೂ ಕಮಲಾ ಇಚ್ಛಿಸಿದ ಜೀವನ ಅತಿಸರಳ ವಿದೇಶೀ ನಾಗರಿಕತೆಗೆ ಮರು ಳಾಗದೆ ಸ್ವದೇಶಕ್ಕೆ ಸೇವೆ ಮಾಡಲು ಅವಳ ಅಂತರಂಗ ಮಿಡಿಯುತ್ತಿತ್ತು. ಭಾರತ ದೇಶದ ಬಡತನದಲ್ಲಿ ತಾನೂ ಪಾಲ್ಗೊಂಡು ಅವರಲ್ಲೊಂದಾಗಬೇಕೆಂದು ಅವಳ ಹೃದಯ ಹಾತೊರೆಯುತ್ತಿತ್ತು.

ಐತಿಹಾಸಿಕ ಪ್ರಸಿದ್ಧ ರಾಜ್ಯಗಳಾದ ಜಯಪುರ, ಜೋಧ್‌ಪುರ, ರೇವಾ, ಬಿಕನೀರ್ ರಾಜ್ಯಗಳ ಮಹಾರಾಜರ ಆಸ್ಥಾನ ಪಂಡಿತರಾಗಿದ್ದ ಕಿಷನ್‌ಲಾಲ್‌ರವರ ವಂಶದಲ್ಲಿ ಜನಿಸಿ, ಹಿಂದೂ ಧರ್ಮದ ಶ್ರದ್ಧಾ ಭಕ್ತಿಯಲ್ಲಿ ನುರಿತವಳು ಕಮಲಾ. ಹಿರಿಯ ಅಂತಸ್ತಿನ ಮನೆಯ ಹೆಣ್ಣೆಂದರೆ ಪರದೆ ಮುಚ್ಚಿದ ಮೇನಾಗಳಲ್ಲೇ ಸಂಚರಿಸ ಬೇಕಾಗಿತ್ತು. ಕಮಲಳಿಗೆ ಸುಕೋಮಲ, ಸಂಕೋಚ ಸ್ವಭಾವವಿದ್ದರೂ ಈ ಸಂಕುಚಿತ ಭಾವನೆಯಲ್ಲಿ ನಂಬಿಕೆ ಇರಲಿಲ್ಲ. ಸ್ವತಂತ್ರವಾಗಿ ಓಡಾಡಲು ಬಯಸಿದ ಈ ಹುಡುಗಿ ಹೊರಗೆ ಹೋಗುವಾಗ ಹುಡುಗನ ಉಡುಪಿನಲ್ಲಿರುತ್ತಿದ್ದಳು. ದೆಹಲಿಗೆ ಬಂದು ನೆಲೆಸಿದ ಮೇಲೆ ಪರದೆಯನ್ನನುಸರಿಸ ಬೇಕಾಗಿರಲಿಲ್ಲ. ಆದ್ದರಿಂದ ದೆಹಲಿಯ ಒಂದು ಮದುವೆಯಲ್ಲಿ ಕಂಡ ಕಮಲಳನ್ನು ಮೋತಿಲಾಲರು ತಮ್ಮ ಸೊಸೆಯಾಗಿ ಆರಿಸಿ ಕೊಳ್ಳಲು ಆಸ್ಪದವಾಯಿತು. ಅತ್ಯಂತ ದೃಢಕಾಯಳೂ, ಆರೋಗ್ಯವಂತಳೂ, ಅಪೂರ್ವ ಸುಂದರಿಯೂ ಆಗಿದ್ದ ಕಮಲಾಳನ್ನು ತನ್ನ ಪ್ರೀತಿಯ ಪುತ್ರನ ಮೆಚ್ಚಿನ ಮಡದಿಯನ್ನಾಗಿ ಮಾಡಿ ಮೋತಿಲಾಲ್ ನೆಹರು ಆನಂದಿಸಿದರು.

ಡಾ॥ ಅನಿಬೆಸೆಂಟರ ಪ್ರಭಾವಕ್ಕೆ ಒಳಗಾದ ಜವಾಹರ್ ಕ್ರಮೇಣ ಗಾಂಧೀಜಿಯ ತತ್ವಕ್ಕೆ ತಲೆಬಾಗುತ್ತಿದ್ದುದು ಕಮಲಾಗೆ ಹರ್ಷ ತಂದಿತು. ಆದರೆ ಮಾವನವರಾದ ಮೋತಿಲಾಲರು ಬಡರೈತನಂತಿದ್ದ ಗಾಂಧಿಯನ್ನು ಲಕ್ಷ್ಯಕ್ಕೇ ತೆಗೆದುಕೊಳ್ಳಲಿಲ್ಲ. ಸ್ವರಾಜ್ಯಕ್ಕಾಗಿ ಹೋರಾಡಿ ಬ್ರಿಟಿಷರ ವಿರುದ್ಧ ಹೋಗಿ ತನ್ನ ಮಗ ಜೈಲಿಗೆ ಸೇರಲು ಅವರಿಗೆ ಇಷ್ಟವಾಗಲಿಲ್ಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಆದರೆ ಅವರ ಜೀವನದ ತಿರುವಿನಂತೆ ಜಲಿಯನ್ ವಾಲಾಬಾಗ್ ದುರಂತ ನಡೆಯಿತು. ಅದೇ ಘಟನೆಯ ಕಾರಣವಾಗಿ ಮೋತಿಲಾಲ್ ತಮ್ಮ ಪತ್ನಿ ಸಂಸಾರ ಸಮೇತರಾಗಿ ಸ್ವದೇಶಕ್ಕೆ ಸೇವೆ ಸಲ್ಲಿಸಲು ಪಣತೊಟ್ಟು ಗಾಂಧೀಜಿಯ ಅತ್ಯಂತ ಪ್ರಿಯ ಶಿಷ್ಯರಾದರು. ವೈಭವ ಜೀವನ ಸರಳವಾಯಿತು. ವಿದೇಶೀ ಉಡುಪಿನ ಬದಲು ಖಾದಿಧಾರಿಯಾದರು. ಆನಂದ ಭವನ ಕಾಂಗ್ರೆಸ್ ಸಂಸ್ಥೆಗೆ ಸೇರಿತು. ನೆಹರೂ ಅವಿಭಕ್ತ ಕುಟುಂಬ ಚಿಕ್ಕ ಮನೆಯೊಂದರಲ್ಲಿ ವಾಸಿಸತೊಡಗಿತು. ಮಹಾರಾಣಿ ಯಂತಿದ್ದ ಮೋತಿಲಾಲ್ ನೆಹರೂರವರ ಪತ್ನಿ ಸ್ವರೂಪರಾಣಿಯವರು ಜನಜಂಗು ಳಿಯ ಮಧ್ಯೆ ಹೊರಬಂದು, ಸ್ವಾತಂತ್ರ್ಯ ಚಳವಳಿಯಲ್ಲಿ ಮುಖಂಡತ್ವ ವಹಿಸಿ ಪೋಲೀಸರಿಂದ ಅನೇಕ ಸಲ ಲಾಠಿ ಏಟು ತಿಂದರು. ಒಂದು ಸಲವಂತೂ ಮೇಲಿಂದ ಮೇಲೆ ತಲೆಯ ಮೇಲೆ ಬಿದ್ದ ಪ್ರಹಾರದಿಂದ ಸ್ವರೂಪರಾಣಿ ಜ್ಞಾನತಪ್ಪಿ ನಡುಬೀದಿ ಯಲ್ಲಿ ಬಿದ್ದರು. ಜನರ ಗುಂಪು ಚದುರಿದನಂತರ ಮೋತಿಲಾಲರ ಪತ್ನಿಯೆಂದು ಗುರುತಿಸಲ್ಪಟ್ಟು ಚಿಕಿತ್ಸೆ ಪಡೆದರು.

ಗಾಂಧಿಯವರ ತತ್ವವನ್ನು ಸಂಪೂರ್ಣವಾಗಿ ಪರಿಪಾಲಿಸುತ್ತಿದ್ದ ನೆಹರು ಮನೆ ತನ ಸ್ವಾತಂತ್ರ್ಯ ಚಳವಳಿಯ ಕೇಂದ್ರವಾಯಿತು. ಆನಂದಭವನ ಕಾಂಗ್ರೆಸ್ ಕಾರ್ಯ ಕರ್ತರ ಆದರ ಅಭಿಮಾನದ ಆಗರವಾಯಿತು. ಏಕಕಾಲದಲ್ಲಿ ತಂದೆ ಮಗನನ್ನು ತಾಯಿ ಮಗಳನ್ನು, ಅಕ್ಕ ತಂಗಿಯರನ್ನು ಬ್ರಿಟಿಷ್ ಸರ್ಕಾರ ಬಂಧಿಸಿ ಸೆರೆಮನೆಗೆ ಸೇರಿಸುವಷ್ಟು ಪ್ರತಿಷ್ಠಿತ ಕಾರ್ಯಗಳನ್ನು ಕೈಗೊಂಡು ನೆಹರೂ ಸಂಸಾರವು ಸ್ವಾತಂತ್ರ್ಯ ಸಂಗ್ರಾಮದ ಸಾಧನೆಯಲ್ಲಿ ರಾಷ್ಟ್ರಕ್ಕೆ ಮಾದರಿಯಾಯಿತು.

ಇಂತಹ ವಾತಾವರಣದಲ್ಲಿ ಒಂದೇ ಮನೆಯವರಾದರೂ ಒಬ್ಬರನ್ನೊಬ್ಬರು ಭೇಟಿಯಾಗಿ ಮಾತಾಡುವುದೇ ಕಷ್ಟವಾಯಿತು. ಯಾವ ಗಳಿಗೆಯಲ್ಲಾದರೂ ಪೋಲೀಸಿನವರ ದಾಳಿಯ ಆತಂಕವಿದ್ದೇ ಇತ್ತು. ನಿಂತ ಕ್ಷಣದಲ್ಲಿ, ಇದ್ದಸ್ಥಿತಿಯಲ್ಲಿ, ಹಗಲು ಇರುಳೆನ್ನದೆ ವಾರೆಂಟ್ ಬಂದ ಕೂಡಲೇ ಜೈಲಿಗೆ ಹೊರಡಲು ಸಿದ್ಧರಾಗ ಬೇಕಾಯಿತು. ಬೇಸಿಗೆಯ ತಾಪದಲ್ಲಿ ತಪ್ಪಲಿನ ತಾಣಕ್ಕೆ ಹೋಗಿ, ಚಳಿಗಾಲದ ಕೊರೆತದಲ್ಲಿ ಬೆಚ್ಚನೆಯ ಮನೆಗಳಲ್ಲಿ ವಾಸಿಸುತ್ತಿದ್ದ ನೆಹರೂ ಸಂಸಾರದವರು ಬಂದೀ ಖಾನೆಯಲ್ಲಿ ಹಾಸಿಗೆ ಇಲ್ಲದ ನೆಲದ ಮೇಲೆ ಮಲಗಿ ಖೈದಿಗಳಂತೆ ಕಷ್ಟಪಡಬೇಕಾ ಯಿತು. ಶುಚಿ ಶುಭ್ರತೆಗೆ ಗಮನಕೊಡುತ್ತಿದ್ದ ಸುಕುಮಾರರು ಜೈಲಿನ ಕೊಳಕಿನಲ್ಲಿ, ದುರ್ವಾಸನೆಯಲ್ಲಿ ಕಾಲಕಳೆಯಬೇಕಾಯಿತು. ಕಮಲಾ ನೆಹರು ದಂಪತಿಗಳ ಪ್ರೇಮ ಪುತ್ರಿ ಏಕಮಾತ್ರ ಕುವರಿ ಇಂದಿರಾ ತಾನು ಶಿಶುವಾಗಿದ್ದಾಗಲೇ ಈ ಸಂಸಾರಕ್ಕೆ ಹೊಂದಿ ಕೊಂಡು ಬೆಳೆದಳು. ತಂದೆಯನ್ನು ಜೈಲಿಗೆ ಹಾಕಿದಾಗ ಇಂದಿರಾಗೆ ನಾಲ್ಕು ವರ್ಷ.

ಎಂತಹ ಪರಿಸ್ಥಿತಿಯಲ್ಲೂ ಕಮಲಾ ಸ್ಥಿತಪ್ರಜ್ಞತೆಯಿಂದಿರುತ್ತಿದ್ದುದನ್ನು ಗಾಂಧೀಜಿ ಗಮನಿಸಿದ್ದರು. ಮೃದು ಹೃದಯವಾದರೂ ದೃಢ ಮನಸ್ಸಿನ ಈ ಹೆಣ್ಣು ಸ್ವಾತಂತ್ರ್ಯ ಚಳವಳಿಯಲ್ಲಿ ಸಾಧನೆ ಮಾಡುವಳೆಂಬ ನಂಬಿಕೆಯಿತ್ತು. ಕಮಲಳ ನಿಕಟ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಪರಿಚಯವಾದ ಮೇಲೆ ಮಹಾತ್ಮರು ಅವಳನ್ನು ತನ್ನ ಮಾನಸಪುತ್ರಿಯಂತೆ ಭಾವಿಸಿದರು. ಬಡವರ ಉದ್ಧಾರ, ಮಹಿಳೆಯರ ಪ್ರಗತಿಯೇ ಕಮಲಾರವರ ಜೀವನ ಧ್ಯೇಯವಾಗಿತ್ತೆಂದು ಗಾಂಧೀಜಿ ಅರಿತಿದ್ದರು. ಆದ್ದರಿಂದಲೇ ಮಹಾತ್ಮರಿಂದ— "ಕಮಲಾ ನೆಹರೂ ಅಸಾಧಾರಣ ವ್ಯಕ್ತಿ. ಪತಿಭಕ್ತಿಯ ಜೊತೆಗೆ ದೇಶಪ್ರೇಮಿಯಾಗಿದ್ದಳು. ಶಿಸ್ತು ನಿಯಮಗಳ ಪಾಲನಾ ಗುಣಶೀಲೆ, ಆಕೆಯ ಹೃದಯ ಶ್ರೇಷ್ಠವಾದದ್ದು, ಸ್ವಚ್ಛವಾದದ್ದು, ಫಲಾಪೇಕ್ಷೆ ಇಲ್ಲದ ಸೇವೆ ಅವಳದ್ದು. ತೋರುವಿಕೆಗಾಗಲೀ ಸ್ವಾರ್ಥಕ್ಕಾಗಿ ಆಗಲೀ ಹೊಗಳಿಕೆಗಾಗಲೀ ಕೆಲಸ ಮಾಡಿದವಳಲ್ಲ" ಎಂಬ ಹೊಗಳಿಕೆಗೆ ಕಾರಣವಾದವರು.

"ಕಾಂಗ್ರೆಸ್ ಕಾರ್ಯಕರ್ತರು ಚಳವಳಿಗಾರರಷ್ಟೆ, ಕ್ರಿಯಾತ್ಮಕವಾಗಿ ಏನೂ ಮಾಡುವವರಲ್ಲ ಎಂಬ ಸಾಮಾನ್ಯ ಟೀಕೆಯನ್ನು ಈಗ ಹಿಂದಕ್ಕೆ ತೆಗೆದುಕೊಳ್ಳಬೇಕಾಗಿದೆ. ಇದಕ್ಕೆ ಕಮಲಳ ಆದರ್ಶವೇ ಸಾಕ್ಷಿ. ಅಸಹಕಾರ ಚಳವಳಿಯಲ್ಲಿ ಕಷ್ಟಕ್ಕೀಡಾದವರಿಗಾಗಿ ಆಕೆಯ ಹೃದಯ ಕರಗಿತು. ಕೂಡಲೇ ಸಮಯೋಚಿತ ಕಾರ್ಯ ಕೈಗೊಂಡು ಅಲಹಾಬಾದಿನ ತನ್ನ ಮನೆಯನ್ನೇ ಚಿಕಿತ್ಸಾಲಯವನ್ನಾಗಿ ಮಾಡಿ ನರಳುವವರ ಸೇವೆ ಮಾಡಿದಳು" ಎಂದ ಮಹಾತ್ಮರ ಹೇಳಿಕೆ ಕಮಲಾ ನೆಹರುರವರ ವ್ಯಕ್ತಿಚಿತ್ರವನ್ನು ಕೊಡುತ್ತದೆ.

ಮಹಾತ್ಮರ ಮಾನಸಪುತ್ರಿಯಾಗಿದ್ದರೂ ಅತ್ಯಲ್ಪ ಜೀವಿತ ಕಾಲದಲ್ಲಿ ಅಸಾಧಾರಣ ಸಾಧನೆ ಮಾಡಿದ್ದರೂ, ದೇಶಕ್ಕಾಗಿ ಶ್ರಮಿಸಿ ಖಾಯಿಲೆ ಉಲ್ಬಣವಾಗಿ ಸ್ವಾತಂತ್ರ್ಯ ಬರುವ ಹನ್ನೊಂದು ವರ್ಷಕ್ಕೆ ಮೊದಲೇ ಅಸುನೀಗಿದ್ದರಿಂದ ಈ ಪುನೀತಳನ್ನು ಹಾಡಿ ಹೊಗಳಿರುವವರು ವಿರಳವೇ.

ಜಯಪ್ರಕಾಶ್ ನಾರಾಯಣ್ ಹೀಗೆನ್ನುತ್ತಾರೆ, "ಅಖಿಲ ಭಾರತ ಕಾಂಗ್ರೆಸ್ ಸಮಿತಿಯಲ್ಲಿ ಅಲಹಾಬಾದಿನಲ್ಲಿ ನಾನು ಕೆಲಸ ಮಾಡುತ್ತಿದ್ದಾಗ ನೆಹರೂ ಮನೆತನದ ನಿಕಟ ಪರಿಚಯವಾಯ್ತು. ಕಮಲಾಜಿಯನ್ನು ಆ ಮನೆಯ ಶ್ರೇಷ್ಠ ವ್ಯಕ್ತಿಯೆಂದೇ ತಿಳಿದಿದ್ದೇನೆ. ಕಮಲಾಜಿ ಕಣ್ಮರೆಯಾದ ನಂತರ ಮನೆಯಲ್ಲಿದ್ದ ಆ ಸ್ಫೂರ್ತಿಯನ್ನು ಮತ್ತೆ ಕಾಣಲಾಗಲಿಲ್ಲ. ಮಗಳು ಇಂದಿರಾ ತಾಯಿಯ ಜೀವನದಿಂದ ಹೆಚ್ಚು ಪ್ರಭಾವಿತಳಾಗಿದ್ದಾಳೆ. ತಾಯಿ ಅನುಭವಿಸಿದ ಕಷ್ಟಗಳು ಅವಳಲ್ಲಿ ಬೇರೂರಿ, ಸವಾಲು ಹಾಕಿ ನಿಂತು ಜಯಿಸುವ ಶಕ್ತಿಯಂತೆ ಇಂದಿರಾ ಕಾಣುತ್ತಾಳೆ."

'ನಾನು ಮಾತ್ರವಲ್ಲ ನಮ್ಮ ತಂದೆಯೂ ಅವರಿಂದ ಪ್ರಭಾವಗೊಂಡಿದ್ದಾರೆ' ಎಂದಿದ್ದಾರೆ ಇಂದಿರಾಗಾಂಧಿ.

ದೃಢಕಾಯರೂ ಆರೋಗ್ಯವಂತರೂ ಆಗಿದ್ದ ಕಮಲಾ ರೋಗಿಯಾಗಿ ಅನೇಕ ವರ್ಷಗಳು ನರಳಲು ಕಾರಣವೇನೆಂದೆನಿಸುವುದು ಸಹಜ.

ಮೋತಿಲಾಲ್ ನೆಹರೂರವರ ಪ್ರೀತ್ಯಾದರದ ಸೊಸೆಯಾದರೂ ಆ ಮನೆಯ ವಾತಾವರಣ ಕಮಲಳ ಸ್ವಭಾವಕ್ಕೆ ವಿರುದ್ಧವಾಗಿತ್ತು. ಇದಕ್ಕೆ ಕಮಲಾರವರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಆಕ್ಷೇಪಣೆ ಇರಲಿಲ್ಲ. ಬದಲಾಗಿ ಅತ್ತೆ, ಮಾವ, ಪತಿ, ನಾದಿನಿಯರನ್ನು ಅನುಸರಿಸಿ ನಡೆದುಕೊಳ್ಳುವುದು ತನ್ನ ಕರ್ತವ್ಯವೆಂದಿದ್ದರು. ಆದರೂ ಪ್ರತಿಯೊಂದಕ್ಕೂ ಭಯ ದಿಂದ ಎಚ್ಚರಿಕೆಯಿಂದ ವರ್ತಿಸುತ್ತಿದ್ದುದು ಅವರ ದೇಹಾರೋಗ್ಯದ ಮೇಲೆ ಪರಿ ಣಾಮ ಬೀರಿತು. ಕುಟುಂಬದಲ್ಲಿ ವಿಶ್ರಾಂತಿ ಇಲ್ಲದೆ ದುಡಿಯುವುದರ ಜೊತೆಗೆ ದೇಶದ ವಿಶಾಲ ಬಾಂಧವ್ಯ ಅವರನ್ನು ತನ್ನ ಸೇವೆಗೆ ಸೆಳೆಯಿತು.

ನೆಹರೂ ಮನೆತನ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಂಪೂರ್ಣವಾಗಿ ಕ್ರಿಯಾತ್ಮಕ ವಾಗಿ ಧುಮುಕಿದ ಮೇಲೆ ಮೋತಿಲಾಲರ ಮನೆಗೆ ಬಾಪುವಿಂದ ಹಿಡಿದು ಸ್ವಯಂ ಸೇವಕರುದಿಯಾಗಿ ಲೆಕ್ಕವಿಲ್ಲದಷ್ಟು ಜನ ಬಂದು ಹೋಗುತ್ತಿದ್ದರು. ಮಹಾತ್ಮರ ಸಂದರ್ಶನಕ್ಕಾಗಿ ಬರುವವರು ಕೆಲವರು. ವೈಭವದ ಆನಂದಭವನವನ್ನು ನೋಡಲು ಬರುವವರು ಕೆಲವರು. ಮೋತಿಲಾಲರ ವಕೀಲಿ ಸಲಹೆಯನ್ನು ಕೇಳುವುದಕ್ಕಾಗಿ ಕೆಲವರು. ಗಾಂಧಿ ಭಕ್ತರಾಗಿ ಸರಳಜೀವಿಯಾಗಿ ದೇಶದ ಸೇವೆಗಾಗಿ ಹೊರಟ ನವ ಶಕ್ತಿಯ ತರುಣ ಜವಾಹರರನ್ನು ಭೇಟಿಯಾಗಲು ಕೆಲವರು. ಕಾಂಗ್ರೆಸ್ ಸಭೆ ಸೇರಿ ಕಾರ್ಯೋನ್ಮುಖರಾಗಲು ಕೆಲವರು—ಹೀಗೆ ಆನಂದಭವನಕ್ಕೆ ಬರಲು ಯಾರಿಗೂ ಅಡ್ಡಿ ಇರಲಿಲ್ಲ. ಅಷ್ಟೇ ಅಲ್ಲ, ಬಂದವರಿಗೆ ಔತಣ ಉಪಚಾರಗಳೂ ನಡೆಯು ತ್ತಿತ್ತು. ಮನೆಮಂದಿ, ನೆಂಟರಿಷ್ಟರು, ಬಂದು ಹೋಗುವವರಿಗೆಲ್ಲಾ ಗೃಹಿಣಿಯಾಗಿ ಕೆಲಸಮಾಡಬೇಕಾದುದು ಕಮಲಾರವರ ಕೆಲಸವಾಗಿತ್ತು. ದೇಹಶ್ರಮ ಮತ್ತು ಮಾನಸಿಕ ಅವಿಶ್ರಾಂತಿಯಿಂದ ಬಳಲುತ್ತಿದ್ದರೂ ಇದೆಲ್ಲಾ ಕಮಲಾನೆಹರೂಗೆ ಪ್ರಿಯ ವಾದ ವಿಷಯವಾಗಿತ್ತು

ಪ್ರಧಾನಿಯಾಗಿದ್ದಾಗ ಇಂದಿರಾಗಾಂಧಿಯವರು ತಮ್ಮ ತಾಯಿಯನ್ನು ನೆನೆದು ಹೀಗೆ ಹೇಳಿದ್ದಾರೆ, "ನಮ್ಮ ತಾಯಿ ಘನವಾದ ವ್ಯಕ್ತಿ. ಯಾವುದನ್ನಾದರೂ ಅವರು ಆಳವಾಗಿಯೇ ಯೋಚಿಸುತ್ತಿದ್ದರು. ಮೊದಮೊದಲು ನಮ್ಮ ತಂದೆ ದೇಶಸೇವೆಯಲ್ಲಿ ಭಾಗವಹಿಸಿ ಕಷ್ಟಪಡಲು ಮನೆಯಲ್ಲಿ ಬಹಳ ವಿರೋಧವಿತ್ತು. ಈ ಸಂದರ್ಭದಲ್ಲಿ ನಮ್ಮ ತಾಯಿಯ ವಿವೇಚನೆಯ ಪ್ರಭಾವ ಅತಿ ಮುಖ್ಯವಾಗಿತ್ತೆನಿಸುತ್ತದೆ." ಜವಾಹರರನ್ನು ಸಂಪೂರ್ಣವಾಗಿ ಪ್ರೋತ್ಸಾಹಿಸಿದ ಆ ಕುಟುಂಬದವರೆಂದರೆ ಪತ್ನಿ ಯಾದ ಕಮಲಾರವರೇ. ಆಕೆಯ ಮತ್ತೊಂದು ಸ್ವಭಾವ ಸ್ತ್ರೀ ಪಕ್ಷಪಾತವೆನ್ನು ತ್ತಾರೆ ಇಂದಿರಾ. ಅಂದಿನ ಕಾಲದಲ್ಲಿಹೆಣ್ಣಿಗಿದ್ದ ಕಟ್ಟುಪಾಡು, ಮನೆಯಲ್ಲೇ ಸೆರೆವಾಸ, ಹೊರಗೆ ಬಂದಾಗ ಮುಖಮುಚ್ಚಿಕೊಂಡು ಓಡಾಡುವ ಪದ್ಧತಿ. ಹೆಣ್ಣೆಂದರೆ ವಿದ್ಯೆ ಬೇಕಿಲ್ಲವೆಂಬ ಸಮಾಜದ ಧೋರಣೆ, ವಿಧವೆಯಾದರೆ ಅವಳ ಕಷ್ಟ ಜೀವನ—ಇದೆಲ್ಲ ವನ್ನೂ ನೋಡಿ ಹೆಣ್ಣೆಂದರೆ ಅವರ ಮನ ಕರಗುತ್ತಿತು.

ಕಮಲಾ ನೆಹರೂರವರ ಸರಳತೆಯನ್ನು ಇಂದಿರಾ ತಿಳಿಸುತ್ತಾರೆ. "ನನಗೆ ಬುದ್ಧಿ ತಿಳಿದಾಗಿನಿಂದಲೂ ನನ್ನ ತಾಯಿ ಸರಳ ಜೀವಿಯಾಗಿದ್ದುದನ್ನು ಕಂಡಿದ್ದೇನೆ. ಯಾವ ಆಭರಣವನ್ನೂ ತೊಡದೆ ಒರಟು ಖಾದಿ ಧರಿಸಲು ದೇಶದ ಅವಶ್ಯಕತೆಯೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಕಾರಣವಾಗಿತ್ತು. ಸುಮಂಗಲಿಯಾಗಿರುವ ಲಕ್ಷಣಕ್ಕಾದರೂ ಬಳೆ ಸರಗಳನ್ನು ತೊಡಬೇಕೆಂದು ನನ್ನ ಅಜ್ಜಿ ಹೇಳುತ್ತಿದ್ದುದನ್ನು ಕೇಳಿಸಿಕೊಂಡು, ದೇಶದ ಬಡತನವನ್ನು ನೆನೆದು ತನ್ನ ಮನಸ್ಸು ಒಪ್ಪುತ್ತಿಲ್ಲವೆಂದು ಧೈರ್ಯವಾಗಿ ಹೇಳುತ್ತಿದ್ದರು.

"ವಿನಯ, ನಮ್ರ ಸ್ವಭಾವವಿದ್ದರೂ ಸಂಕಲ್ಪದಲ್ಲಿ ದೃಢತೆ ಮತ್ತು ನನ್ನ ತಾಯಿಯಿಂದ ನಾನು ಕಲಿತಿರುವ ಗುಣವೆಂದರೆ ಆತ್ಮಾಭಿಮಾನ ಸೇವಾ ಮನೋಭಾವಕ್ಕಿಂತ ಹೆಚ್ಚಾಗಿ ದೃಢನಿರ್ಧಾರ. ಪಾಶ್ಚಾತ್ಯ ರೀತಿಯ ಮನೆಯ ಪರಿಸರಕ್ಕೆ ಹೊಂದಿಕೊಂಡರೂ ಭಾರತೀಯ ಸಂಪ್ರದಾಯವನ್ನೇ ಅನುಸರಿಸಿದರು.

"ನನ್ನ ತಾಯಿಯನ್ನು ನಾನು ಅತಿ ಪ್ರೀತಿಸುತ್ತಿದ್ದೆ. ನನ್ನ ವಿದ್ಯಾಭ್ಯಾಸದ ಬಗ್ಗೆ, ನನ್ನ ಸಂರಕ್ಷಣೆಯ ಬಗ್ಗೆ ಮನದಲ್ಲೇ ಯೋಚಿಸಿ ಕೊರಗುತ್ತಿದ್ದರು. ಅವರ ಖಾಯಿಲೆ ತೀಕ್ಷ್ಣವಾದಾಗ ನನ್ನ ಭವಿಷ್ಯದ ಚಿಂತೆ ಅವರನ್ನಾವರಿಸಿತ್ತು. 'ಇಂದುವನ್ನು ಚೆನ್ನಾಗಿ ನೋಡಿಕೊಳ್ಳಿ' ಎನ್ನುತ್ತಲೇ ಪ್ರಾಣಬಿಟ್ಟರು... ಮೈಸ್ವಾಸ್ಥ್ಯವಿಲ್ಲದಿದ್ದಾಗಲೂ ಅವರು ಮಲಗದೆ ದೇಶಕ್ಕಾಗಿ ಎಷ್ಟು ಕೆಲಸಮಾಡಿದ್ದಾರೆಂದು ನನಗೆ ಗೊತ್ತು. ಹಳ್ಳಿ ಹಳ್ಳಿಗೆ ಹೋಗಿ ಬಳಲಿ ಉಪವಾಸ ಮಾಡಿ ಖಾಯಿಲೆ ಹೆಚ್ಚಾಯಿತು. ಶ್ವಾಸಕೋಶದ ಅನಾರೋಗ್ಯದ ಜೊತೆಗೆ ಕ್ಷಯವೂ ಅಂಟಿತು" ಎಂಬ ವಿವರವನ್ನು ಇಂದಿರಾಗಾಂಧಿ ಕೊಟ್ಟಿದ್ದಾರೆ.

ಕ್ಷಯ ಪೀಡಿತರಾಗಿ ತಮ್ಮ ೩೬ನೆಯ ವಯಸ್ಸಿನಲ್ಲೇ ತೀರಿಕೊಂಡರೆಂಬುದು ಪ್ರಕಟಿತ ವಿಷಯವಾಯಿತು. ದೇಹ ಶಕ್ತಿಯನ್ನು ಮೀರಿ ಮನೋಬಲದಿಂದ ಈ ಜನ್ಮದಲ್ಲಿ ಮಾಡಬೇಕಾಗಿದ್ದ ದೇಶಸೇವಾ ಕಾರ್ಯವನ್ನು ತೃಪ್ತಿಕರವಾಗಿ ಮಾಡಿಮುಗಿಸಿದ್ದರೆಂಬುದು ಅನೇಕರಿಗೆ ತಿಳಿಯದ ವಿಷಯ,

ಪತಿ ಜವಾಹರ್‌ಲಾಲ್ ನೆಹರೂ ಹೀಗೆ ಹೇಳಿದ್ದಾರೆ, "ಕಮಲಳ ಮನಸ್ಸನ್ನು ನಾನು ಸರಿಯಾಗಿ ಅರಿತು ಕೊಳ್ಳಲಿಲ್ಲ. ನನ್ನೊಂದಿಗೆ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಲು ಇಷ್ಟಪಡುತ್ತಿದ್ದಳೆಂಬುದನ್ನು ಬಹಳ ತಡವಾಗಿ ತಿಳಿದುಕೊಂಡೆ. ದೇಶದ ಸೇವೆಯ ಅವಳ ಉತ್ಸಾಹಕ್ಕೆ, ಸ್ತ್ರೀಯರ ಪ್ರಗತಿಗಾಗಿ ಅವಳ ಪರಿಶ್ರಮಕ್ಕೆ ಸಾಕಷ್ಟು ಬೆಂಬಲ ಕೊಟ್ಟು ಪ್ರೋತ್ಸಾಹಿಸಬಹುದಾಗಿತ್ತು. ಮಾನಸಿಕ ಶಕ್ತಿ ಕಮಲಳಿಗೆ ಬೇಕಾಗಿದೆಯೆಂದು ನಮ್ಮ ತಂದೆ ಹೇಳುತ್ತಲೇ ಇದ್ದರು. ಜೈಲು ವಾಸದ ದಿನಗಳೇ ನನಗೆ ಹೆಚ್ಚಾಗಿದ್ದು ನನ್ನ ಪತ್ನಿಗೆ ನೆಮ್ಮದಿ ಕೊಡಲಾರದಾದೆ. ನಾನು ಆಕೆಯನ್ನು ಮರೆತೇ ಬಿಟ್ಟಿದ್ದೆ ಎನ್ನಬಹುದು, ಆದರೆ ಆಕೆ ಮಾತ್ರ ನನಗೆ ಸರ್ವ ಶಕ್ತಿಯನ್ನು ಕೊಟ್ಟಿದ್ದಳು. ಅರಳುವ ಈ ಮೃದು ಸುಮವು ನನ್ನ ಪ್ರೀತ್ಯಾದರ ಆರೈಕೆಯನ್ನು ಬೇಡುತ್ತಿದೆಯೆಂಬುದರ ಅರಿವಾಗಲಿಲ್ಲ, ಆಕೆ ಸೊರಗಿದಾಗಲೂ ನಾನು ಹತ್ತಿರವಿದ್ದು ಉಪಚರಿಸಲಿಲ್ಲ. ಅವಳೊಬ್ಬಳನ್ನೇ ಬಿಟ್ಟು ಕಾಂಗ್ರೆಸ್ ಕಾರ್ಯಕ್ಕೆ ಓಡುತ್ತಿದ್ದುದೇ ನನ್ನ ಜೀವನವಾಯ್ತು,"

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಮದುವೆಯಾದ ಹೊಸದರಲ್ಲಿ ಕಮಲಾ ತನ್ನ ಗಂಡನನ್ನು ನೋಡಬೇಕಾದರೆ ಜೈಲಿನಲ್ಲಿ ಅದೂ ಇಬ್ಬರ ನಡುವೆ ನಿರ್ದಿಷ್ಟ ಕಾಲದ ಭೇಟಿ ಮಾತ್ರ. ಕಾಗದ ಬರೆಯು ವುದಕ್ಕೂ ಸರ್ಕಾರದ ತಡೆಯಿತ್ತು. ಜವಾಹರ್ ಸಾಮಾನ್ಯವಾಗಿ ಮನೆಗೆ ಹಿರಿಯು ರಾದ ತಂದೆಯ ಹೆಸರಿನಲ್ಲೇ ಕಾಗದ ಬರೆಯುತ್ತಿದ್ದರು. ಕಮಲಾ ತನ್ನ ಗಂಡನಿಗೆ ಮನಬಿಚ್ಚಿ ಬರೆಯುತ್ತಿದ್ದುದು ಹೀಗೆ, "ನಿಮ್ಮೊಡನೆ ಮಾತಾಡುವುದು ಬೇಕಾದಷ್ಟಿದೆ. ಅವಕಾಶವಾಗುತ್ತಿಲ್ಲ. ನಾನು ನಿಮಗೆ ಹೇಳುವುದು ನನ್ನ ಮನಸ್ಸಿನಲ್ಲಿ ಹಾಗೆಯೇ ಉಳಿದಿದೆ."

ಮನೆ ಜಪ್ತಿಯಾಗಿ ಪೋಲೀಸಿನವರು ಆನಂದ ಭವನದ ಆಸ್ತಿಪಾಸ್ತಿಯನ್ನು ವಶಪಡಿಸಿಕೊಂಡಾಗ ಪ್ರತಿನಿತ್ಯದ ಜೀವನವೇ ಕಷ್ಟವಾಯಿತು. ಈ ದಿನಗಳಲ್ಲಿ ಜವಾಹರ್ ಮತ್ತು ಕಮಲಾ ಅತಿ ಕಟ್ಟುನಿಟ್ಟಾದ ಸರಳ ಜೀವನವನ್ನು ನಡೆಸಿದಾಗ ತಂದೆ ಮೋತಿಲಾಲರು ಮರುಗಿದರು. ಕಮಲಳ ಆರೋಗ್ಯಕ್ಕೆ ಒಳ್ಳೆಯ ಹಣ್ಣು ಗಳನ್ನೂ ಶಕ್ತಿಕೊಡುವ ಆಹಾರವನ್ನೂ ಕೊಡಬೇಕೆಂದು ಒತ್ತಾಯಿಸಿದರು. ಆದರೆ ನಿಯಮಬದ್ಧರಾಗಿದ್ದ ಪತಿ ಪತ್ನಿಯರು ಬಡ ಭಾರತೀಯರಲ್ಲಿ ಒಬ್ಬರಾಗಿರಲು ನಿರ್ಧರಿಸಿದ್ದರು.

ದೇಶ ವಿದೇಶಗಳನ್ನು ಸುತ್ತಿ ಸ್ಥಿತಿಗತಿಗಳನ್ನು ತಿಳಿಯಲು ಕಮಲಾ ಸ್ವಿಟ್ಸರ್ಲೆಂಡ್, ಇಂಗ್ಲೆಂಡ್, ಪ್ಯಾರಿಸ್, ಬರ್ಲಿನ್, ಸೋವಿಯತ್ ದೇಶ, ಪೋಲೆಂಡ್ ಮುಂತಾದ ದೇಶಗಳನ್ನು ಸಂಚರಿಸಿ ಆ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ ರುವರು, "ನಮ್ಮ ದೇಶದಲ್ಲಿ ನಾವು ಮಿತಿಮೀರಿದ ಅಧೋಗತಿಗೆ ಇಳಿದಿದ್ದೇವೆ. ಬೇರೆ ದೇಶಗಳಿಗೆ ಹೋಲಿಸಿದರೆ ಇಲ್ಲಿಯ ಮಹಿಳೆಯರ ಪಾಡು ಶೋಚನೀಯ. ಭಾರತೀಯ ಸೋದರಿಯರನ್ನು ಎಚ್ಚರಿಸಲು ನನ್ನ ಹೃದಯ ತವಕಿಸುತ್ತಿದೆ. ನಾವು ತಲೆತಗ್ಗಿಸು ವಂತಿರದೆ, ಇನ್ನಾದರೂ ಹೆಣ್ಣು ಮಕ್ಕಳು ವಿದ್ಯೆ ಕಲಿಯಬೇಕು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ ತಮ್ಮ ಸಾಮರ್ಥ್ಯವನ್ನು ತೋರಿಸಬೇಕು. ಮತ್ತೆ ಬೇರೆ ದೇಶಗಳ ಬಂದಿಖಾನೆಗಳಲ್ಲಿ ಖೈದಿಗಳು ಭಾರತದಂತೆ ದುಸ್ಥಿತಿಯಲ್ಲಿಲ್ಲ. ಬಾಗಿಲು ಗಳಿಗೆ ಬೀಗ ಹಾಕುವುದಿಲ್ಲ. ಓಡಾಡಲು ಅವಕಾಶವಿದೆ."

ಕೆಲವು ಖೈದಿಗಳು ಸಂಗೀತ ಮತ್ತು ವಾದ್ಯಗಳನ್ನು ಸಂತೋಷದಿಂದ ಕಲಿಯು ತ್ತಿದ್ದ ದೃಶ್ಯವನ್ನು ಕಂಡ ಕಮಲಾರವರಿಗೆ ನಮ್ಮ ದೇಶದ ರಾಜಕೀಯ ಖೈದಿಗಳು ಅನುಭವಿಸುತ್ತಿದ್ದ ಕಠಿಣತೆಯನ್ನು ನೆನೆದು ವ್ಯಸನವಾಯಿತು. ಹೆಣ್ಣಿನ ಬಗ್ಗೆ ಹೇಳುತ್ತಾ, "ಹೆಣ್ಣು ಮದುವೆಯಾದರೊಂದು ಕಷ್ಟ, ಮದುವೆಯಾಗದಿದ್ದರೊಂದು ಕಷ್ಟ ಈ ಭಾರತೀಯ ಸಮಾಜದಲ್ಲಿ." ಎನ್ನುತ್ತಾರೆ ಕಮಲಾ ತನ್ನ ಉದಾಹರಣೆ ಯನ್ನೇ ತೆಗೆದುಕೊಂಡು, "ವಿದ್ಯಾ ಪಾರಂಗತರಾದ, ಪಾಶ್ಚಾತ್ಯ ನಾಗರಿಕತೆಯ ಅಭಿಮಾನಿಯಾಗಿದ್ದ ಗಂಡನೊಡನೆ, ಅವಿದ್ಯಾವಂತಳಾದ ಪೂರ್ವ ಸಂಪ್ರದಾಯಸ್ಥ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಳಾದ ನಾನು ಹೊಂದಿಕೊಂಡು ಬಾಳ್ವೆ ನಡೆಸುವುದು ಬಹಳ ಕಷ್ಟವಾಗಿತ್ತು. ಒಂದೇ ಸ್ವಭಾವ, ಒಂದೇ ಅಂತಸ್ತು ಇಲ್ಲದಿರುವಾಗ ಪತಿಯ ಕೈಯೇ ಮೇಲಾಗುವುದು. ತನಗೆ ಸರಿಸಮಾನಳಲ್ಲದ ಹೆಂಡತಿಯನ್ನು ಗಮನಿಸುವ ತಾಳ್ಮೆಯೂ ಗಂಡನಿಗಿರದು" ಎನ್ನುತ್ತಾರೆ ಕಮಲಾ.

ಚಿಕ್ಕ ವಯಸ್ಸಿನಲ್ಲಿ ವ್ಯಾಸಂಗದ ಸೌಕರ್ಯವನ್ನು ಕಳೆದುಕೊಂಡು ಕಮಲಾಗೆ ಈ ಲೋಪವನ್ನು ಸರಿದೂಗುವಂತೆ ಸ್ವತಃ ಬುದ್ಧಿ ವಿವೇಚನಾ ಶಕ್ತಿಯಿತ್ತು. ಮಹಿಳೆಯರ ಹಕ್ಕು ಬಾಧ್ಯತೆಗಾಗಿ ಮಾತ್ರ ಹೋರಾಡುವುದೊಂದೇ ಅವರ ಧ್ಯೇಯವಾಗಿರಲಿಲ್ಲ. ಮಕ್ಕಳ ಹಿತಚಿಂತಕರೂ ಆಗಿದ್ದರು. ಸಮಾನತೆಯನ್ನು ಪಾಲಿಸುವುದರಲ್ಲಿ ಆಸಕ್ತಿಯುಳ್ಳವರಾಗಿದ್ದರು. ಆರೋಗ್ಯವಿಲ್ಲದಿದ್ದರೂ ಇಷ್ಟೊಂದು ಶ್ರಮಪಡುತ್ತೀರೆಂದು ಯಾರಾದರು ಹೇಳಿದರೆ ಕಮಲಾ ಅವರ ಉತ್ತರ, "ದೇಶವು ನಮ್ಮ ಸೇವೆಯನ್ನು ಅಪೇಕ್ಷಿಸಿದಾಗ ನಾವು ಕಾರ್ಯವಿಮುಖರಾಗಿದ್ದರೆ ಬದುಕಿದ್ದರೂ ಸತ್ತಂತೆಯೇ. ಬದುಕಿರುವ ತನಕ ದೇಶಕ್ಕಾಗಿ ಶ್ರಮಿಸಿ ಸತ್ತರೆ ಅದಕ್ಕಿಂತ ಹೆಚ್ಚಿನ ಆನಂದ ಮತ್ತೆಲ್ಲಿದೆ ?"

'ಡಾಕ್ಟರ್ ಸಲಹೆಯನ್ನೂ, ಕುಟುಂಬದವರ ಮತ್ತು ಆಪ್ತರ ಆತಂಕವನ್ನು ಮೀರಿ, ಬಿಳಿಚಿಕೊಂಡ ಮುಖ, ಶಕ್ತಿಗುಂದಿದ ಕೈಕಾಲು, ಗುಳಿಬಿದ್ದ ಕಣ್ಣುಗಳು ಹೀಗಿದ್ದರೂ ದೃಢಕಾಯರಂತೆ ಕಮಲಾ ಕಾಂಗ್ರೆಸ್ಸಿನ ಕೆಲಸವನ್ನು ನಿರ್ವಹಿಸಿದ್ದಾರೆ' ಎಂದಿದ್ದಾರೆ ಆಕೆಯೊಂದಿಗೆ ಕೆಲಸ ಮಾಡಿದವರು.

ಇಡೀ ರಾಷ್ಟ್ರವೇ ಸ್ವಾತಂತ್ರ್ಯ ಹೋರಾಟಕ್ಕೆ ಸಿದ್ಧವಾಗಬೇಕೆಂಬ ಮಹಾತ್ಮರ ಕರೆಗೆ ಓಗೊಟ್ಟು ಈ ದಿಶೆಯಲ್ಲಿ ಪ್ರಾರಂಭವಾದ ಸಂಘಗಳಲ್ಲಿ ಮುಂಬಯಿಯ ಮಹಿಳಾ ಸಂಘವಾದ ರಾಷ್ಟ್ರೀಯ ಸ್ತ್ರೀ ಸಭಾ ೧೯೨೧ ಏಪ್ರಿಲ್ ೧೩ ರಂದು ಜಲಿಯನ್ ವಾಲಾಬಾಗ್ ದುರಂತದ ತಾರೀಖಿನಲ್ಲೇ ಪ್ರಾರಂಭವಾದ ಪ್ರಮುಖ ಸಂಘ. ೧೯೨೧–೨೨ ಮಹಿಳಾ ಚಟುವಟಿಕೆಗಳ ಮಹತ್ವದ ವರ್ಷ. ಈ ಸಂಘವು ಒರಟು ಖದ್ದರ್ ಬದಲು ಆಕರ್ಷಕವಾದ ಖಾದಿ ಉಡುಪುಗಳನ್ನು ತಯಾರಿಸಿ ವಸ್ತು ಪ್ರದರ್ಶನಗಳನ್ನೇರ್ಪಡಿಸಿ ದೇಶೀಯ ಬಟ್ಟೆಗಳನ್ನೇ ಎಲ್ಲರೂ ಉಡುವಂತೆ ಮಾಡುವುದರಲ್ಲಿ ಸಾಧನೆ ಮಾಡಿತು. ಮಹಾತ್ಮರು ಪ್ರವಾಸ ಕೈಗೊಂಡ ಸ್ಥಳಗಳಿಗೆಲ್ಲಾ ಅವರ ಜೊತೆ ಹೋಗಿ ಖಾದಿ ಬಟ್ಟೆಗಳ ಮಾರಾಟ ಮಾಡಿದರು. ಕ್ರಮೇಣ ಈ ಸಂಘದವರು ಅಸಹಕಾರ ಚಳವಳಿಯಲ್ಲಿ ಭಾಗವಹಿಸಲು "ದೇಶ ಸೇವಿಕಾ ಸಂಘ"ವನ್ನು ರಚಿಸಿಕೊಂಡರು. ಸತ್ಯಾಗ್ರಹಿಗಳನ್ನು ಬ್ರಿಟಿಷ್ ಸರ್ಕಾರ ಬಲಿ ತೆಗೆದುಕೊಂಡಾಗ ಈ ಸೇವಿಕೆಯರು ಸತ್ಯಾಗ್ರಹಿಗಳ ಸೇವೆ ಮಾಡಿದರು. ಕಾವಿಬಟ್ಟೆ ಧರಿಸಿ ತಮ್ಮನ್ನು ತಾವೇ ಚಳವಳಿಗೆ ಸಮರ್ಪಿಸಿಕೊಂಡ ೪ ದೇಶ ಸೇವಿಕಾ ಸಂಘದ ಮುಖಂಡರು. ಮೂವರು ಕಸ್ತೂರಬಾ ಗಾಂಧಿ, ಕಮಲಾ ನೆಹರೂ ಮತ್ತು ಸರೋಜಿನಿ ನಾಯ್ಡು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಈ ಸೇವಿಕೆಯರ ಬಗ್ಗೆ ವರದಿ ಹೀಗಿದೆ, "ಕಾವಿ ಬಣ್ಣದ ಖಾದಿ ಸಮವಸ್ತ್ರ ಧಾರಿಗಳಾಗಿದ್ದ ಈ ಹೆಣ್ಣು ಮಕ್ಕಳ ಸೇವೆಯನ್ನು ಎಲ್ಲರೂ ಅಪೇಕ್ಷಿಸುವವರಾಗಿದ್ದರು. ಸರ್ಕಾರಿ ಪತ್ರಗಳನ್ನು ಮಾರುತ್ತಿದ್ದ ಬ್ಯಾಂಕಿನ ತಡೆಕಾವಲಿಗೆ ಇವರ ಸೇವೆ ಅವಶ್ಯಕ ವಾಯಿತು. ಇಟಲಿ ದೇಶದ ಆಲೂಗೆಡ್ಡೆಗಳ ವ್ಯಾಪಾರವನ್ನು ತಡೆಯಲು ದೇಶೀಯ ವ್ಯಾಪಾರಿಯೊಬ್ಬ ಇವರ ಸೇವೆಯನ್ನು ಕೇಳಿಕೊಂಡನು. ಮುಂಬಯಿಯ ಕಲಾಶಾಲೆ ಯಲ್ಲಿ ನಮ್ಮ ದೇಶದ ಕಲಾಪ್ರದರ್ಶನಕ್ಕೆ ಬೆಂಬಲಿಗರಾಗಿ ಇವರು ನಿಂತರು. ಮತ್ತೊಂದು ವಿಚಿತ್ರ ಬೇಡಿಕೆಯೆಂದರೆ, ಮುಂಬಯಿಯ ಒಂದು ದೊಡ್ಡ ಶಾಲೆಯ ಗಂಡು ಮಕ್ಕಳು ತಮ್ಮ ಶಾಲೆಯ ಪ್ರತಿ ಬಾಗಿಲಿನಲ್ಲೂ ಸೇವಿಕೆಯರು ನಿಂತು ಕಾಂಗ್ರೆಸ್ ಸೇವೆಗೆ ಸೇರದ ವಿದ್ಯಾರ್ಥಿಗಳನ್ನು ಅವಮಾನಪಡಿಸಬೇಕೆಂದು ಕೇಳಿ ಕೊಂಡರು. ಈ ಸೇವಿಕೆಯರು ಎಲ್ಲಿದ್ದರೆ ಅಲ್ಲಿ ಜಯ ಸಿದ್ಧ. ಒಂದು ವರ್ಷದಲ್ಲಿ ಈ ಸ್ತ್ರೀ ಸೇವಾ ಸಂಘವು ಸುಮಾರು ಇನ್ನೂರು ಸಭೆಗಳನ್ನು ಸೇರಿಸಿದೆ."

೧೯೨೮ರ ನಂತರ ಸಂಗ್ರಾಮದ ಸಿದ್ಧತೆಗಳು ಚುರುಕಾದಾಗ, ಜ್ವರದ ತಾಪ ವಿದ್ದರೂ ಕಮಲಾ ಸಭೆ, ಸಮ್ಮೇಳನ, ಮೆರವಣಿಗೆ, ನಿರ್ದೇಶನ ಕೆಲಸಗಳಲ್ಲಿ ಓಡಾಡುತ್ತಿರುತ್ತಿದ್ದರು.

ಲಾಹೋರ್ ಕಾಂಗ್ರೆಸ್ಸಿನ ಸಮ್ಮೇಳನದಲ್ಲಿ ಜವಾಹರರು ಅಧ್ಯಕ್ಷರಾಗಿ ಆಯ್ಕೆ ಯಾದುದು ಕಮಲಾಗೆ ಹೆಚ್ಚು ಹರ್ಷ ತಂದಿತು. ಅನಂತರ ನಡೆದ ಕಲ್ಕತ್ತಾ ಕಾಂಗ್ರೆಸ್ ಸಭೆಯಲ್ಲಿ ೧೯೩೦ ಜನವರಿ ೨೬ನೇ ದಿನಾಂಕವನ್ನು ಸಂಪೂರ್ಣ ಸ್ವರಾಜ್ಯ ದಿನವೆಂದು ಆಚರಿಸಲು ತೀರ್ಮಾನವಾಯಿತು.

ಹಿಂದೂ ಮುಸ್ಲಿಮರು ಒಂದಾದರು. ರಾಷ್ಟ್ರದಾದ್ಯಂತ ಸತ್ಯಾಗ್ರಹ ನಡೆಸಲು ಗಾಂಧೀಜಿ ಕರೆಕೊಟ್ಟರು. ಅದರಲ್ಲಿ ಉಪ್ಪಿನ ಸತ್ಯಾಗ್ರಹ ಮೊದಲನೆಯದಾಯಿತು ಇದಕ್ಕೆ ಮಹಾತ್ಮರು ಮಾರ್ಗದರ್ಶನ ನೀಡಿದರು. ಅದೇ ವರ್ಷ ಜವಾಹರ ನೆಹರು ಜೈಲಿನಲ್ಲಿ ಬಂದಿಯಾದರು. ಅಂದಿನಿಂದ ಕಮಲಾರವರ ದೇಶ ಕಾರ್ಯ ದ್ವಿಗುಣವಾಯಿತು.

ಯಾವಾಗ ಯಾರನ್ನು ಎಲ್ಲಿ ಬಂಧಿಸುತ್ತಾರೆಂಬುದನ್ನು ಸರಕಾರ ಗುಪ್ತವಾಗಿಡು ತ್ತಿತ್ತು. ಈ ಗುಪ್ತ ವಿಷಯವನ್ನು ತಿಳಿದುಕೊಂಡು ಸಿದ್ಧತೆ ಮಾಡಿಕೊಳ್ಳಲು ಮಕ್ಕಳ ತಂಡವೊಂದು ಸೃಷ್ಟಿಯಾಯಿತು. ಇದಕ್ಕೆ 'ವಾನರಸೇನೆ' ಎಂದು ಹೆಸರಾಯಿತು. ಈ ಸೇನೆಯ ನಾಯಕಿ ಪುಟ್ಟ ಹುಡುಗಿ ಇಂದಿರಾ. ತನ್ನ ಜೊತೆಯವರನ್ನು ಸೇರಿಸಿ ಅವರ ಕೆಲಸವೇನೆಂದು ಇಂದಿರಾ ಸಲಹೆ ಕೊಡುತ್ತಿದ್ದಳು. ತಂದೆ ತಾಯಿ ಇಬ್ಬರನ್ನೂ ಸೆರೆಮನೆಗೆ ಸೇರಿಸುತ್ತಾರೆಂಬ ಸುದ್ದಿ ತಿಳಿದಾಗ ಇಂದಿರಾ ಇನ್ನೂ ಮುದ್ದು ಬಾಲೆ. ಆದರೆ ಆ ವಾತಾವರಣದ ಚುರುಕಿನಿಂದ ಎಂತಹ ಪರಿಸ್ಥಿತಿಯನ್ನೂ ಎದುರಿಸಬಲ್ಲ ದಿಟ್ಟೆಯಾಗಿದ್ದಳು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಮಹಿಳಾ ಜಾಗೃತಿಯಲ್ಲಿ ೧೯೩೦ರ ಅಸಹಕಾರ ಚಳವಳಿ ಸಂದರ್ಭದಲ್ಲಿ ಮುಖಂಡತ್ವ ವಹಿಸಿದ್ದ ಕಮಲಾರವರ ವಿಷಯವನ್ನು ಜವಾಹರರು ಬರೆದಿರುವ ವಾಕ್ಯಗಳಿಂದಲೇ ಹೇಳಬಹುದು— "ಉಗ್ರ ಚಳವಳಿಯ ಸಂದರ್ಭದಲ್ಲಿ ಕಮಲಾಳ ಕಾರ್ಯಗಳು ನನ್ನನ್ನೇ ಚಕಿತಗೊಳಿಸಿವೆ. ಈ ಕಾರ್ಯದಲ್ಲಿ ಅನುಭವವೇ ಇಲ್ಲದ ಈ ಹೆಣ್ಣು ಅಲಹಾಬಾದಿನ ಹೆಮ್ಮೆಯ ಹೆಣ್ಣಾದಳು. ಚಳವಳಿಯ ಕಿಚ್ಚೆಬ್ಬಿಸಿದಳು. ಸರ್ವಶಕ್ತಳಾಗಿ ಓಡಾಡಿದಳು. ಅಸ್ಖಲಿತ ಧೈರ್ಯದ ಮತ್ತು ಪ್ರಮುಖ ಪಾತ್ರ ವಹಿಸಿ ತನ್ನ ಹೆಗಲಿನ ಮೇಲೆ ಚಳವಳಿಯ ಜವಾಬ್ದಾರಿಯನ್ನು ಹೊತ್ತಳು. ಅವಿಶ್ರಾಂತಳಾಗಿ ಕೆಲಸ ಮಾಡಿದರೂ ನವ ಚೈತನ್ಯದ ತರುಣಿಯಾಗಿ ಕಂಡಳು. ಕಮಲಳ ಮುಖಂಡತ್ವವನ್ನು ಅನುಸರಿಸಿ ಎಲ್ಲರೂ ಹೋರಾಟಕ್ಕೆ ಸಿದ್ಧರಾದರು."

ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯನ್ನು ನೀತಿ ಬಾಹಿರವೆಂದು ಸರ್ಕಾರ ರದ್ದುಪಡಿಸಿ ಮುಖಂಡರನ್ನು ಬಂಧಿಸಿದಾಗ, ಇವರ ಸ್ಥಾನಕ್ಕೆ ಕಮಲಾ ಆಯ್ಕೆಯಾದರು.

ಅಲಹಾಬಾದ್ ಜಿಲ್ಲೆಯ ಕಾಂಗ್ರೆಸ್ ಅಧ್ಯಕ್ಷರಾಗಿ ಕಮಲಾ ಜಿಲ್ಲೆಯ ಮೂಲೆ ಮೂಲೆಗೆ ತಿರುಗಿ ಅಸಹಕಾರ ಚಳವಳಿ ಸಾರ್ಥಕವಾಗಿ ನಡೆಯುವಂತೆ ಮಾಡಿದರು. ಇಂತಹದೊಂದು ಸಂದರ್ಭದಲ್ಲೇ ಅಲಹಾಬಾದಿನ ಸರ್ಕಾರಿ ಕಾಲೇಜಿನ ಮುಂದೆ ಪಿಕೆಟಿಂಗ್ ನಡೆಸುತ್ತಿದ್ದಾಗ ಬಿಸಿಲಿನ ತಾಪದಿಂದ ಕೆಳಗೆ ಮೂರ್ಛೆಬಿದ್ದ ಕಮಲಾರನ್ನು ಕಾಲೇಜಿನ ತರುಣ ವಿದ್ಯಾರ್ಥಿ ಫಿರೋಜ್‌ಗಾಂಧಿ ಉಪಚರಿಸಿದುದು.

ಒಂದು ಬೃಹತ್ ತಂಡದ ಮುಖಂಡರಾಗಿ ಕಮಲಾ ಬೀದಿ ಬೀದಿಯಲ್ಲಿ ನಡೆದು ಸ್ವಾತಂತ್ರ್ಯದ ಗೀತೆಗಳನ್ನೂ, ರಚನೆಗಳನ್ನೂ ಗಟ್ಟಿಯಾಗಿ ಕೂಗುತ್ತಾ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಕಾಂಗ್ರೆಸ್ ಸ್ವಯಂ ಸೇವಕರನ್ನಾಗಿ ಮಾಡಿದರು. ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ದುಡಿಯುತ್ತಿದ್ದ ಈ ಸಂಘಟನಾ ಚತುರೆ ಸಾಹಸಿ ಫಿರೋಜ್ ಗಾಂಧಿಯ ಮೇಲೆ ಪ್ರಭಾವ ಬೀರಿದರು. ಮುಂದೆ ಇಂದಿರಾಳನ್ನು ಮದುವೆಯಾದವರು ಇವರೇ.

ಜೈಲಿನಲ್ಲಿದ್ದ ಜವಾಹರಿಗೆ ತನ್ನ ಈ ಕಾರ್ಯಕ್ರಮವನ್ನು ಕುರಿತು ಕಮಲಾ ಕಾಗದವನ್ನು ಹೀಗೆ ಬರೆದಿದ್ದಾರೆ. "ಈ ದಿನ ಮಾಡರ್ನ್ ಸ್ಕೂಲಿನ ಮುಂಭಾಗದಲ್ಲಿ ಪಿಕೆಟಿಂಗ್ ನಡೆಸುತ್ತಿದ್ದಾಗ ಕುದುರೆಗಳ ಮೇಲೆ ೪೦ ಜನ ಬ್ರಿಟಿಷ್ ಪೋಲೀಸರು ಬಂದರು. ಕಲೆಕ್ಟರ್, ಮೇಜರ್ ಮತ್ತು ಮೂವರು ಅಧಿಕಾರಿಗಳು ಮಧ್ಯಾಹ್ನ ಒಂದು ಗಂಟೆಯವರೆಗೂ ಡ್ಯೂಟಿಯ ಮೇಲಿದ್ದರು. ಎರಡು ಲಾರಿ ತುಂಬಿದ್ದ ಪೋಲೀಸ್ ಕಾವಲಿತ್ತು. ನಮ್ಮ ಹುಡುಗರು ತಡೆ ಕಾವಲು ನಿಂತು ಆರು ಮಂದಿ ಬಂಧಿತರಾದರು. ಶಾಲೆಯ ಹಿಂದಿನ ಬಾಗಿಲಿನಲ್ಲಿ ಇಬ್ಬರು ವಿದ್ಯಾರ್ಥಿಗಳನ್ನು ಸೆರೆ ಹಿಡಿದರು. ದಾರಾಗಂಜಿನ ಶುಕ್ಲಾರವರನ್ನೂ ಮೂವರು ಮುಖಂಡರನ್ನೂ ಬಂಧಿಸಿ ಪೋಲೀಸರು ಕಸ್ಟಡಿಯಲ್ಲಿಟ್ಟಿದ್ದಾರೆ. ಇವರಲ್ಲದೆ ಹದಿನಾರು ಚಳವಳಿಗಾರರನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಬಂಧಿಸಿದ್ದಾರೆಂದು ತಿಳಿದು ಬಂದಿದೆ. ಇದೀಗ ಅಲಹಾಬಾದಿನಲ್ಲಿ ಹೀಗೆ ಶುಭ ಸೂಚನೆಗಳು ಪ್ರಾರಂಭವಾಗಿವೆ. ವಿದೇಶೀ ಬಟ್ಟೆಗಳ ವಿಷಯದಲ್ಲೂ ಸಾಕಷ್ಟು ಸಾಧನೆಯಾಗುತ್ತಿದೆ. ಸ್ಟ್ಯಾಂಪುಗಳನ್ನು ಪರೀಕ್ಷಿಸುತ್ತಿದ್ದೇನೆ. ಪ್ರತಿ ಮೊಹಲ್ಲಾದಲ್ಲೂ ಸಭೆ ಸೇರಿಸಿ ವಿದೇಶೀ ಬಟ್ಟೆಗಳನ್ನು ಕೊಳ್ಳದಂತೆ ಸ್ಥಳೀಯರನ್ನು ವಿನಂತಿಸಿಕೊಳ್ಳುತ್ತಿದ್ದೇನೆ. ಈ ಕೆಲಸ ಖಂಡಿತ ಸಫಲವಾಗುತ್ತದೆಂದು ನನ್ನ ನಂಬಿಕೆ, ಇನ್ನೂ ಬರೆಯುವುದಿದೆ. ರಾತ್ರಿ ಹನ್ನೊಂದು ಗಂಟೆ ಮೀರಿತು. ಬೆಳಿಗ್ಗೆ ಬೇಗ ಏಳಬೇಕು. ಕಾಗದವನ್ನು ಮುಗಿಸುತ್ತೇನೆ."

ಜವಾಹರರ ಬಂಧನದ ದಿನಗಳು ಮುಂದುವರಿದುವು. ಇದಕ್ಕೆ ವಿರುದ್ಧವಾಗಿ ಜನತೆ ಚಳವಳಿ ಹೂಡಿದಾಗ ಅಂತಹ ಗುಂಪೊಂದನ್ನು ಉದ್ದೇಶಿಸಿ ಕಮಲಾ ಭಾಷಣ ಮಾಡುತ್ತಿದ್ದಾಗ ಪೋಲೀಸಿನವರು ಬಂಧಿಸಿ ಸೆರೆಮನೆಗೆ ಹಾಕಿದರು. ಅಂದು ೧೯೩೧ ಜನವರಿ ಮೊದಲ ದಿನ, ಕಮಲಾರ ಪ್ರಥಮ ಬಂಧನ.

ಸೆರೆಮನೆಯ ವಾಸ ಕಮಲಳ ಆರೋಗ್ಯವನ್ನು ಸಂಪೂರ್ಣವಾಗಿ ಕೆಡಿಸುತ್ತದೆಯೆಂದು ಜವಾಹರರು ಚಿಂತಿಸಿದರು.

ಕಮಲಾರವರನ್ನು ಬಂಧಿಸಿದ ಸಂದರ್ಭದಲ್ಲಿ ಜವಾಹರರ ಸರಸವಾದ ಬರವಣಿಗೆಯ ಕೆಲವು ವಾಕ್ಯಗಳು—"ಪತ್ರಿಕಾ ಪ್ರತಿನಿಧಿಗಳು ಸೆರೆಮನೆಯಲ್ಲಿದ್ದ ಕಮಲಳನ್ನು ಅವಳ ಸಂದೇಶವೇನೆಂದು ಕೇಳಲು ತಕ್ಷಣ ಅವಳಿಂದ ಬಂದ ಮಾತುಗಳಿವು, "ಈಗ ನನಗೆ ಅತ್ಯಂತ ಹರ್ಷವಾಗಿದೆ. ನನ್ನ ಪತಿಯ ಮಾರ್ಗವನ್ನನುಸರಿಸಿ ನಾನೂ ಬಂಧಿಯಾಗಿರುವುದು ನನಗೆ ಹೆಮ್ಮೆಯಾಗಿದೆ. ಸ್ವಾತಂತ್ರ್ಯ ಧ್ವಜವನ್ನು ಭಾರತೀಯರು ಎತ್ತಿ ಹಿಡಿಯುತ್ತಾರೆಂಬ ನಂಬಿಕೆ ನನಗಿದೆ.

"ಈ ಮಾತುಗಳ ಎರಡನೆಯ ಪಂಕ್ತಿ ನನಗೆ ಸ್ವಲ್ಪ ಆಶ್ಚರ್ಯವನ್ನುಂಟುಮಾಡಿತು. ಏಕೆಂದರೆ, ಆಕೆ ಯಾವಾಗಲೂ ಪುರುಷರ ದೌರ್ಜನ್ಯವನ್ನು ಟೀಕಿಸಿಯೇ ಮಾತಾಡುವುದು. ಸ್ತ್ರೀ ಸ್ವಾತಂತ್ರ್ಯ ಮತ್ತು ಹಕ್ಕುಗಳಿಗೆ ಹೋರಾಡುವ ಈ ಹೆಣ್ಣಿಗೆ ಅವಳು ಮಾತಾಡಿದ ಆ ಸಂದರ್ಭದಲ್ಲಿ ಹಿಂದೂ ಧರ್ಮಪತ್ನಿಯ ಸ್ವಭಾವವೇ ಅವಳಲ್ಲಿ ಹೆಚ್ಚಾಗಿದ್ದು. ಪುರುಷರ ದೌರ್ಜನ್ಯ ಮರೆತು ಹೋಯಿತೆನ್ನಿಸುತ್ತದೆ."

ಜೈಲಿನಲ್ಲಿ ಅನೇಕ ಪ್ರಕಾರದ ಮನುಷ್ಯರನ್ನು ನೋಡಬಹುದೆಂದೂ ಪ್ರಪಂಚದಲ್ಲಿ ಎಂತೆಂತಹ ಸ್ವಭಾವದವರಿರಬಹುದೆಂದು ಇಲ್ಲಿ ತಿಳಿಯುವುದೆಂದು ಕಮಲಾ ನೆಹರೂ ಹೇಳಿದ್ದಾರೆ.

೧೯೩೧ ಫೆಬ್ರುವರಿ ೬ರಂದು ಮೋತೀಲಾಲ್ ನೆಹರುರವರ ನಿಧನ ಕಮಲಾ ಮತ್ತು ಜವಾಹರರನ್ನು ದುಃಖಸಾಗರದಲ್ಲಿ ಮುಳುಗಿಸಿತು. ಮೋತೀಲಾಲರ ಮಕ್ಕಳಾಗಿ ನಾವು ಅವರಂತೆ ಛಲದಿಂದ, ಉತ್ಸಾಹದಿಂದ ಮನೋದೃಢತೆಯಿಂದ ಕೆಲಸ ಮಾಡಬೇಕೆಂದು ಜವಾಹರ್ ಅಂದೇ ಪ್ರತಿಜ್ಞೆ ಮಾಡಿದರು. ಮಾವನವರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಪ್ರೀತಿಪಾತ್ರಳಾದ ಸೊಸೆ ಕಮಲಾ ತನ್ನ ಗಂಡನ ಪ್ರತಿಜ್ಞೆಯಲ್ಲಿ ತಾನೂ ಪಾಲ್ಗೊಂಡರು.

ಪ್ಲೂರಸಿ ಖಾಯಿಲೆಯಿಂದ, ಜ್ವರದಿಂದ ಉಸಿರು ಕಟ್ಟಿದಂತೆ ಕಷ್ಟಪಡುತ್ತಾ ದಿನೇ ದಿನೇ ಕೃಶಳಾಗುತ್ತಿದ್ದ ಕಮಲಳನ್ನು ನೋಡಿದ ಗಾಂಧೀಜಿ ಜವಾಹರರನ್ನು ಎಚ್ಚರಿಸುತ್ತಲೇ ಇದ್ದರು.

"ಕಮಲಾಗೆ ವಿಶ್ರಾಂತಿ ಬೇಕಾಗಿದೆ. ಪ್ರಕೃತಿ ಚಿಕಿತ್ಸೆಯಲ್ಲಿ ನನಗೆ ನಂಬಿಕೆ ಇದೆ. ರೋಗ ನಿವಾರಣೆಗಾಗಿ ಅವಳನ್ನು ಯೂರೋಪಿಗೆ ಕಳುಹಿಸುವ ಬದಲು ಅವಳ ಇಚ್ಛೆಯಂತೆ ಇಲ್ಲೇ ಪ್ರಕೃತಿ ಚಿಕಿತ್ಸೆ ಏಕೆ ಮಾಡಬಾರದು ?" ಎಂದಿದ್ದರು.

ಈ ಸಲಹೆ ಗಾಂಧಿ ಮತ್ತು ಕಮಲ ಇಬ್ಬರ ಕನಸಾಯಿತಷ್ಟೇ. ಖಾಯಿಲೆ ವಾಸಿಯಾಗಬೇಕಾದರೆ ಯೂರೋಪಿಗೆ ಹೋಗಲೇಬೇಕೆಂಬ ನಂಬಿಕೆ ಜವಹರ್‌ಲಾಲ್ ನೆಹರೂರವರಿಗಿದ್ದುದರಿಂದ ಗಂಡನ ಇಚ್ಛೆಯಂತೆಯೇ ಕಮಲಾ ವಿದೇಶಕ್ಕೆ ಹೊರಡ ಬೇಕಾಯಿತು. ಹೋಗುವಾಗಲೇ ನನ್ನ ದೇಶಕ್ಕೆ ನಾನು ಹಿಂತಿರುಗುವೆನೆಂಬ ಭರವಸೆ ನನಗಿಲ್ಲವೆಂದು ಮಹಾತ್ಮರಿಗೆ ಹೇಳೇ ಹೋಗಿದ್ದರು.

೧೯೩೬ ಮಾರ್ಚ್ ೩ ರಂದು ಇಹಲೋಕವನ್ನು ತ್ಯಜಿಸಿದ ಕಮಲಾರವರ ಚಿತಾಭಸ್ಮವನ್ನು ಕೈಯಲ್ಲಿ ಹಿಡಿದು ಗಾಂಧೀಜಿ ಜವಾಹರರಿಗೆ ಹೀಗೆಂದರು, "ಕೊನೆಗೂ ಯೂರೋಪಿನಲ್ಲೇ ಕಮಲಳನ್ನು ಶಾಶ್ವತವಾಗಿ ಬಿಟ್ಟು ಬಂದಿರಿ. ಆದರೆ ಅವಳ ದೇಹ ಮಾತ್ರ ಅಲ್ಲಿಗೆ ಹೊರಟಿತೇ ವಿನಃ ಅವಳ ಆತ್ಮ ಭಾರತದಲ್ಲೇ ಇತ್ತು. ಇಂದಿಗೂ ನನ್ನ ಮತ್ತು ನಿಮ್ಮೆಲ್ಲರ ಅಮೂಲ್ಯ ನಿಧಿಯಾಗಿ ಆಕೆಯು ಸ್ಫೂರ್ತಿ ಉಳಿದಿದೆ. ಯೂರೋಪಿಗೆ ಚಿಕಿತ್ಸೆಗಾಗಿ ಹೋಗುವ ಮುನ್ನ ಅವಳ ಕೊನೆಯ ಭೇಟಿಯಾದಾಗ ನನ್ನ ಮತ್ತು ಕಮಲಳ ಕಣ್ಣುಗಳು ದುಃಖದಿಂದ ತೇವವಾದ ಆ ನೆನಪನ್ನು ನಾನೆಂದೂ ಮರೆಯಲಾರೆ."

ಖಾಯಿಲೆ ಉಲ್ಬಣಗೊಂಡು ತಾನು ಇನ್ನು ಹೆಚ್ಚು ದಿನ ಬದುಕಲಾರೆನೆಂದು ತಿಳಿದಿದ್ದ ಕಮಲಾ ಕೊನೆ ಕೊನೆಗೆ ಆಧ್ಯಾತ್ಮಿಕತೆಯಲ್ಲಿ ಆಸಕ್ತರಾಗಿದ್ದರು. ಬಡವರ ಮತ್ತು ಕಷ್ಟದಲ್ಲಿರುವವರ ಸೇವೆಯನ್ನು ತೃಪ್ತಿಯಾಗಿ ಮಾಡಿದರು. ೧೯೩೪ರಲ್ಲಿ ಬಿಹಾರದ ಭೂಕಂಪದಿಂದ ದುಷ್ಪರಿಣಾಮಕ್ಕೊಳಗಾದ ಜನರನ್ನು ನೋಡಿ ಬರಲು ಹೋಗಿ ಮತ್ತಷ್ಟು ಖಾಯಿಲೆಯನ್ನು ಹೆಚ್ಚಿಸಿಕೊಂಡರು.

ವಾರಣಾಸಿಯ ರಾಮಕೃಷ್ಣಾಶ್ರಮಕ್ಕೆ ಹೋಗಬೇಕೆಂದು ಬಯಸಿ ನೆಹರೂ ಜೊತೆ ಸ್ವಾಮಿ ಶಿವಾನಂದರ ಬೇಲೂರು ಮಠವನ್ನು ಸಂದರ್ಶಿಸಿದರು. ಯಾರಿಗೂ ಗೊತ್ತಾಗದಂತೆ ಮಠದಲ್ಲಿ ಸ್ವಾಮಿಯಿಂದ ದೀಕ್ಷೆ ಪಡೆದರು. ಸ್ವಾಮಿ ಶಿವಾನಂದರ ಹೇಳಿಕೆಯಲ್ಲಿ "ಕಮಲಾರವರ ಆತ್ಮ ಪರಿಶುದ್ಧವಾಗಿದೆ. ಆಕೆ ವೇದಾಂತಿ. ಇಂತಹ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ದೊಂದು ಶ್ರೇಷ್ಠ ಆತ್ಮವನ್ನು ಭಗವಂತನ ಪಾದಾರವಿಂದಗಳಿಗೆ ಅರ್ಪಿಸಲು ನನಗೆ ಅತ್ಯಂತ ಆನಂದವಾಗುತ್ತಿದೆ."

ಭಾರತದ ಕರ್ಮಯೋಗಿಯಾಗಿದ್ದ ಕಮಲಾ ಯೂರೋಪಿನಲ್ಲಿ ಚಿಕಿತ್ಸಾ ಸಮಯದಲ್ಲಿ ಧ್ಯಾನ ಯೋಗಿಯಾದರು. ಯೂರೋಪಿನ ಭವಾಲಿಯಿಂದ ವಾರಣಾಸಿಯ ಬೇಲೂರು ಮಠಕ್ಕೆ ಕಮಲಾ ನೆಹರೂರವರ ಪತ್ರಗಳು ಬರುತ್ತಲೇ ಇದ್ದವು. ಸಾಯುವ ಮೊದಲ ದಿನ ಹತ್ತಿರದಲ್ಲೇ ಇದ್ದ ಪತಿಗೆ, "ಇದೋ ನೋಡಿ, ಶುಭ್ರ ವಸ್ತ್ರಧಾರಿಗಳಾದ ಅಸಾಧಾರಣ ವರ್ಚಸ್ಸಿನ ವ್ಯಕ್ತಿಗಳು ನನ್ನೆದುರು ನಿಂತಿದ್ದಾರೆ. ಇಹಲೋಕವನ್ನು ತ್ಯಜಿಸಿ ಬರಲು ಕರೆಯುತ್ತಿದ್ದಾರೆ" ಎಂದರಂತೆ.

ತನ್ನ ಕಣ್ಣಿಗೆ ಗೋಚರವಾಗದ ಈ ನಿಜ ಸಂಗತಿಯನ್ನು ಜವಹರ್‌ಲಾಲ್ ನೆಹರೂ ಸಹ ನಂಬಬೇಕಾಯಿತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

## ಡಾಕ್ಟರ್ ಸುಶೀಲಾ ನಯ್ಯಾರ್

ಆದೊಂದು ಸುದಿನ. ೩-೧೨-೮೮ರಂದು, ರಾಷ್ಟ್ರ ನಾಯಕಿಯರಾಗಿ ಇಂದಿಗೂ ಜನಸೇವೆ ಮಾಡುತ್ತಿರುವ ಶ್ರೀಮತಿ ಲಕ್ಷ್ಮಿಮೆನನ್ ಮತ್ತು ಡಾಕ್ಟರ್ ಸುಶೀಲಾ ನಯ್ಯರ್ ಇಬ್ಬರೂ ಸೇವಾ ಕಾರ್ಯ ನಿಮಿತ್ತ ಬೆಂಗಳೂರಿಗೆ ಬಂದಿದ್ದು, ಕುಮಾರ ಕೃಪಾ ಗೆಸ್ಟ್ ಹೌಸ್‌ನಲ್ಲಿಳಿದುಕೊಂಡಿದ್ದು, ವಿಶೇಷ ಸಂದರ್ಶನಕ್ಕೆ ಅವಕಾಶ ಕೊಟ್ಟು ಮಾತಾಡಿದ ಆ ದಿನವನ್ನು ಮರೆಯಲಾಗದು.

ಹಿಂದಿನ ದಿನವೇ ಸಂದರ್ಶನ ಕಾಲವನ್ನು ನಿಗದಿಪಡಿಸಲಾಗಿತ್ತು. ಕಬ್ಬನ್ ಪಾರ್ಕಿನಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಸೆಕ್ರೆಟೇರಿಯಟ್ ಕ್ಲಬ್‌ನಲ್ಲಿ ಕರ್ನಾಟಕ ಸೇವಾ ಸಂಸ್ಥೆಗಳ ಮಹಿಳಾ ಮುಖಂಡರೊಡನೆ ಸಭೆ ಸೇರಿಸಿ, ಸಮಾಜ ಸೇವಾಕಾಂಕ್ಷಿಗಳೊಡನೆಯೂ ಮಾತಾಡಿ, ತಾವು ಹಾಕಿಕೊಂಡಿರುವ ಸೇವಾ ಯೋಜನೆಯನ್ನು ವಿವರಿಸಿದ್ದರು. ಪ್ರತ್ಯೇಕವಾಗಿ ವೈಯಕ್ತಿಕ ವಿಷಯವಾಗಿ ಮಾತಾಡಬೇಕೆಂದಾಗ, "ಬೆಳಿಗ್ಗೆ ಏಳು ಗಂಟೆಗೆ ಕುಮಾರಕೃಪಾ ಗೆಸ್ಟ್ ಹೌಸ್‌ಗೆ ಬರಲು ಸಾಧ್ಯವೇ ?" ಎಂದಿದ್ದರು.

ಅದೇ ಪ್ರಕಾರ ಅವರಿದ್ದ ಸ್ಥಳಕ್ಕೆ ಹೋಗಿ ತಲುಪಿದಾಗ ೭-೧೫ ಆಗಿತ್ತು. "ನೀವು ಹದಿನೈದು ನಿಮಿಷ ಕಳೆದು ಬಂದಿದ್ದೀರಿ. ಆ ಹದಿನೈದು ನಿಮಿಷ ಮಾತಾಡುವ ವೇಳೆ ಕಡಿಮೆಯಾದಂತಾಯಿತು. ಏಕೆಂದರೆ, ಎಂಟು ಗಂಟೆಗೆ ಸರಿಯಾಗಿ ಕಸ್ತೂರಬಾ ಟ್ರಸ್ಟ್‌ನ ಸಂಸ್ಥೆಯವರೊಡನೆ ಸಭೆ ಸೇರ ಬೇಕಾಗಿದೆ" ಎಂದರು ಡಾ॥ ಸುಶೀಲಾ ನಯ್ಯಾರ್.

ಏಳು ಗಂಟೆಗಾಗಲೇ ಈ ಮಹಿಳಾ ನಾಯಕಿಯರಿಬ್ಬರೂ ಸ್ನಾನಮಾಡಿ ಶುಭ್ರ ವಸ್ತ್ರಧಾರಿಗಳಾಗಿ ಲಘು ಉಪಹಾರ ಟೀ ಮುಗಿಸಿ ಸಿದ್ಧರಾಗಿದ್ದರು. ಎಪ್ಪತ್ತು ವರ್ಷ ಮೀರಿದ ಈ ಮಹಿಳೆಯರ ಚುರುಕುತನ, ವೇಳೆಯ ಬಗ್ಗೆ ಗಮನ, ಅವಿಶ್ರಾಂತ ದುಡಿಮೆ, ನಿರಂತರ ಕಾರ್ಯ ಸಾಧನೆಯನ್ನು ಕಂಡು ಬೆರಗಾಯಿತು. ನವ ಯುವತಿಯರಂತೆ ಓಡಾಡುತ್ತಾ ಮುಂದಿನ ಕಾರ್ಯಕ್ರಮಗಳಿಗೆ ಸಿದ್ಧವಾಗುತ್ತಿದ್ದ ಈ ನಾಯಕಿಯರು ತಮ್ಮನ್ನು ನಾಚಿಸುವಂತಿದ್ದಾರೆ ಎನ್ನಿಸಿತು.

ಮೊದಲು ಮಾತು ಪ್ರಾರಂಭಿಸಿದವರು ಶ್ರೀಮತಿ ಲಕ್ಷ್ಮಿಮೆನನ್. "ನಾನು ಸ್ವಾತಂತ್ರ್ಯ ಹೋರಾಟಗಾರಳಲ್ಲ. ಸ್ವಾತಂತ್ರ್ಯ ಹೋರಾಟಗಾರರು ಎಂದರೆ ಅರ್ಥ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ವೇನ ? ಪ್ರತಿಯೊಬ್ಬರೂ ಹಿಂದೆಯೂ ಮತ್ತು ಈಗಲೂ ಸ್ವಾತಂತ್ರ್ಯ ಹೋರಾಟಗಾರರೇ ಹೌದು. ಇಂದಿಗೂ ಸ್ವಾತಂತ್ರ್ಯ ಹೋರಾಟಗಾರರೇ ಆಗಬೇಕಾಗಿದೆ. ಗಾಂಧೀ ತತ್ವವೆಂದರೆ ಖಾದಿ ಟೋಪಿ ಹಾಕಿಕೊಳ್ಳುವುದಲ್ಲ. ಕಾಲಕ್ಕೆ ತಕ್ಕಂತೆ ಸಮಸ್ಯೆಗಳನ್ನು ಪರಿಹರಿಸುತ್ತಿರಬೇಕು. ಗಾಂಧೀಜಿ ಹೇಳಿದ್ದೂ ಇದೇ. ಹೆಂಗಸರಲ್ಲಿ ನಿರಕ್ಷರತೆಯ ನಿರ್ಮೂಲ ಆಗಬೇಕೆಂದು ಆಗಲೇ ತಿಳಿಸಿದ್ದರು. ಇದಕ್ಕಾಗಿ ಈಗ ಮಹಿಳಾ ಸಂಘಟನೆಯಾಗಬೇಕಾಗಿದೆ. ಬ್ರಿಟಿಷರನ್ನು ಓಡಿಸುವ ಕಾಲಕ್ಕೆ ಬೇರೆ ವಿಧದ ಸಂಘಟನೆಯಾಗಿತ್ತು, ಅಷ್ಟೆ."

ರಾಜ್ಯ ಮಂತ್ರಿ ಮಂಡಲದಲ್ಲಿ ವಿದೇಶ ನೀತಿಯ ಪ್ರಪ್ರಥಮ ಮಹಿಳಾ ಮಂತ್ರಿಯಾಗಿ ಆರಿಸಲ್ಪಟ್ಟು ಐದು ವರ್ಷ ಡೆಪ್ಯುಟಿ ಮಿನಿಸ್ಟರ್ ಆಗಿದ್ದು ಮತ್ತೆ ಐದು ವರ್ಷ ಪಾರ್ಲಿಮೆಂಟ್ ಕಾರ್ಯದರ್ಶಿಯಾಗಿ ರಾಷ್ಟ್ರ ಸೇವೆ ಸಲ್ಲಿಸಿದ ಶ್ರೀಮತಿ ಮೆನನ್ ಇಷ್ಟು ಸರಳವಾಗಿ ಸಂಕ್ಷಿಪ್ತವಾಗಿ ತಮ್ಮ ಸೇವಾ ಯೋಜನೆಯ ವಿಷಯವನ್ನು ತಿಳಿಸಿ ಮುಗಿಸಿದರು.

ಪ್ರಶ್ನೆಯ ಅವಶ್ಯಕತೆ ಇಲ್ಲದೆ ತಾವೇ ಸರಸರನೆ ಮಾತನಾಡುತ್ತಿದ್ದ ರೀತಿಯನ್ನು ಗಮನಿಸಿದರೆ ವೇಳೆಯ ಅಭಾವ ಅರ್ಥವಾಗುತ್ತಿತ್ತು.

ಪ್ರತ್ಯೇಕವಾಗಿ ಮಾತಾಡುವುದಕ್ಕಿಂತ ತಮ್ಮ ಯೋಚನಾ ಪ್ರಯುಕ್ತ ಕರೆದಿದ್ದ ಸಭೆಯಲ್ಲಿ ಧಾರಾಳವಾಗಿ ಮಾತಾಡುತ್ತಿದ್ದನ್ನು ಗಮನಿಸಬಹುದಾಗಿತ್ತು. ಹಿಂದಿನ ದಿನ ತಮ್ಮ ಆಂದೋಲನ ವಿಷಯದ ವಿವರಣೆ ಕೊಟ್ಟನಂತರ, ಪ್ರತಿಯೊಬ್ಬರೂ ತಮ್ಮ ಅನುಭವವನ್ನೂ ಅಭಿಪ್ರಾಯವನ್ನೂ ಹೇಳಿಕೊಳ್ಳಲು ಅವಕಾಶ ಕೊಟ್ಟ ಸಲಹೆಯನ್ನೂ ನೀಡಿದ್ದರು.

ಹೆಂಗಸರೂ ಸಹ ವಿದ್ಯಾಭ್ಯಾಸ ಮಾಡಬೇಕು. ನಿರಕ್ಷರಿಗಳಾದ ಹಳ್ಳಿಗಳ ಹೆಂಗಸರು ಜೀವನದಲ್ಲಿ ಹೇಗೆ ವಂಚಿತರಾಗಿದ್ದಾರೆಂಬ ವಿಚಾರವನ್ನು ಲಕ್ಷ್ಮಿಮೆನನ್ ತಿಳಿಸಿದ ನಂತರ, ಡಾ|| ಸುಶೀಲ ನಯ್ಯಾರ್ ಸಭೆಯನ್ನುದ್ದೇಶಿಸಿ ಮಾತಾಡಿ, ಹೆಂಗಸರನ್ನು ಉದ್ಧಾರ ಮಾಡುವ ಈ ಕೆಲಸವನ್ನು ಹೆಂಗಸರೇ ಏಕೆ ಮಾಡಬಾರದು ಎನ್ನುತ್ತಾ ಈಗ ನಾವು ಹೊರಟಿದ್ದೇವೆ. ಸರ್ಕಾರದ ಯೋಜನೆಯಲ್ಲಿ ಈ ಅಂಶವೂ ಇರಬಹುದು. ಜೊತೆಗೆ ಸೇವಾ ಸಂಸ್ಥೆಗಳೂ ಸೇರಿ ಕೆಲಸ ಮಾಡಿದರೆ ಸಾಧನೆಯ ನಿರೀಕ್ಷೆ ಇದೆ. ಪ್ರಾಥಮಿಕ ವಿದ್ಯೆಯಿಂದ ಪ್ರಾರಂಭವಾಗಬೇಕು. ವಯೋ ಪರಿಮಿತಿಯ ಪ್ರಶ್ನೆ ಬರುವುದಿಲ್ಲ. ಹೆಂಗಸರಿಗೆ ತಮ್ಮ ಸಾಧನೆಯ ಅರಿವಾಗಬೇಕು. ಸಾಕ್ಷರತೆ ಇರುವ ಆಯಾ ಸ್ಥಳೀಯರೇ ಈ ಕೆಲಸವನ್ನು ವಹಿಸಿಕೊಂಡರೆ ಉತ್ತಮ ಯುವ ಜನರನ್ನು ಹೆಚ್ಚು ಹೆಚ್ಚಾಗಿ ಈ ಸೇವೆಗೆ ಸೆಗೆದುಕೊಳ್ಳಬೇಕು" ಎಂದರು.

ಡಾ|| ಸುಶೀಲಾ ನಯ್ಯಾರ್ ಬೆಂಗಳೂರನ್ನು ಯಶೋಧರಮ್ಮನ ಬೆಂಗಳೂರು ಎಂದೇ ಕರೆಯುವರು. ಸ್ವಾತಂತ್ರ್ಯ ಚಳವಳಿಯ ಸಮಯದ ಈ ಸಂಬಂಧ ಅವರಿಗೆ ಅತಿ ಪ್ರಿಯವಾಗಿ ಕಾಣುತ್ತಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಇಂದೋರ್‌ನಲ್ಲಿ ಮೊಟ್ಟಮೊದಲು ಪ್ರಾರಂಭವಾದ ಕಸ್ತೂರಬಾಗಾಂಧಿ ಸ್ಮಾರಕ ನಿಧಿ ಸಂಸ್ಥೆಯ ಸ್ಥಾಪಕರಾದ ಡಾ॥ ಸುಶೀಲಾ ಪಂಜಾಬಿನವರು. ಪಶ್ಚಿಮ ಪಂಜಾಬಿನಲ್ಲಿರುವ "ಸಯ್ಯಾರ್" ಎಂಬುದು ಇವರ ಸ್ವಂತ ಸ್ಥಳ. ಚಿಕ್ಕ ವಯಸ್ಸಿನಿಂದ ಗಾಂಧಿ ಮತ್ತು ಕಸ್ತೂರಬಾರವರೊಂದಿಗೆ ನಿಕಟಪರಿಚಯುವಿದ್ದು ತಮ್ಮ ಜೀವನವನ್ನು ವಿದ್ಯೆಯನ್ನು ಈ ರಾಷ್ಟ್ರಪಿತ ದಂಪತಿಗಳ ಅಡಿಗಳಿಗೆ ಸಮರ್ಪಿಸಿರುವರು.

ಮಹಾತ್ಮಾಜಿಯವರಿಗೆ ಆತ್ಮೀಯರಾಗಿ ಸೇವೆ ಸಲ್ಲಿಸುತ್ತಿದ್ದ ಪ್ಯಾರೆಲಾಲ್‌ರವರ ಸಹೋದರಿಯೇ ಸುಶೀಲಾ ನಯ್ಯಾರ್. ೧೯೨೦ರಲ್ಲೇ ಗಾಂಧೀಜಿಯಿಂದ ಪ್ರಭಾವಿತರಾದ ಪ್ಯಾರೆಲಾಲ್ ಗಾಂಧೀ ಆಶ್ರಮಕ್ಕೆ ಸೇರಿದರು. ಗಾಂಧೀಜಿ ಮಾರ್ಗ ದರ್ಶನದಲ್ಲಿ ಚಳವಳಿಯಲ್ಲಿ ಭಾಗವಹಿಸಿ ಜೈಲು ವಾಸವನ್ನು ಕಂಡರು. ಗಾಂಧೀ ಭಕ್ತರಾದ ಪ್ಯಾರೆಲಾಲರು ತಮ್ಮ ಸಹೋದರರಾದ ಮೋಹನ್‌ಲಾಲರನ್ನು ಸಹೋದರಿ ಸುಶೀಲಾರವರನ್ನು ಮಹಾತ್ಮರ ಮಾರ್ಗಕ್ಕೆ ಪ್ರಚೋದಿಸಿದರು.

ತಾಯಿ ತಾರಾಬಾಯಿ ದೇಶಪ್ರೇಮಿ. ರಾಷ್ಟ್ರ ಭಕ್ತೆ. ತಂದೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟಾಗಿ ಬ್ರಿಟಿಷ ಸರ್ಕಾರದ ಸೇವೆ ಮಾಡುತ್ತಿದ್ದರೂ ತಾಯಿಯ ಸ್ವಾತಂತ್ರ್ಯ ಪ್ರೇಮ ಮಕ್ಕಳ ಮೇಲೆ ಹೆಚ್ಚು ಪರಿಣಾಮವಾಯಿತು.

ಒಂದು ಸಲ ನಯ್ಯಾರ್‌ನ ಕುಂಬಾ ಚೌಕದಲ್ಲಿ ಬ್ರಿಟಿಷ್ ಅಧಿಕಾರಿಯ ಟೋಪಿಯನ್ನು ಎತ್ತರದ ಕಂಬದ ಮೇಲೆ ಇರಿಸಿ. ಗೌರವಾರ್ಥವಾಗಿ ಯಾರೂ ಆ ಚೌಕದಲ್ಲಿ ಓಡಾಡಕೂಡದೆಂದು ತಡೆಯಾಜ್ಞೆಯಾಯ್ತು. ಈ ಆಜ್ಞೆಯನ್ನು ಉಲ್ಲಂಘಿಸದಂತೆ ನೋಡಿಕೊಳ್ಳಲು ಪೋಲೀಸ್ ಕಾವಲಿತ್ತು. ಇಂತಹ ಸಂದರ್ಭದಲ್ಲೆಲ್ಲಾ ಬ್ರಿಟಿಷರ ಆಜ್ಞೆಯನ್ನು ಮೀರಿ ಪ್ರತಿಭಟಿಸುತ್ತಿದ್ದ ಧೀರ ಮಹಿಳೆ ತಾರಾದೇವಿ. ಇವರ ದೇಶ ಭಕ್ತಿಯ ಪ್ರತಿಫಲವಾಗಿ ಬ್ರಿಟಿಷ್ ಸರ್ಕಾರ ಈಕೆಯನ್ನು ನಾಸಿಕದಲ್ಲೂ, ಬರೋಡಾದಲ್ಲೂ ಸೆರೆಗೆ ಸೇರಿಸಿತು.

"ಪುನಃ ಲಾಹೋರ್ ಜೈಲಿನಲ್ಲೂ ನಮ್ಮ ತಾಯಿ ಇದ್ದಿದ್ದರೆ. ನಮ್ಮ ತಾಯಿಯ ಸ್ವಂತತ್ರ ಸ್ವಭಾವಕ್ಕೆ ನಮ್ಮ ತಂದೆಯ ಉದ್ಯೋಗ ಅಡ್ಡಿ ಬರುತ್ತಿತ್ತು. ನಮ್ಮ ತಂದೆಯವರ ಉದ್ಯೋಗದಿಂದಾಗಿ ತಾಯಿಯವರು ಬ್ರಿಟಿಷರಿಂದ ಹೆಚ್ಚು ಶಿಕ್ಷೆಯನ್ನು ಅನುಭವಿಸಬೇಕಾಯಿತು. ಅತಿ ಕಠಿಣವಾದ ಕಷ್ಟವಾದ ಜೈಲುವಾಸವನ್ನು ನಮ್ಮ ತಾಯಿ ಅನುಭವಿಸಿದ್ದಾರೆ. ನಾವಿನ್ನೂ ಚಿಕ್ಕವರಾಗಿದ್ದಾಗ, ನಮ್ಮ ತಾಯಿಯಿಂದ ನಾವು ಕಲಿತದ್ದು ಗಳಿಸಬೇಕು.' ಇದೇ ಧ್ಯೇಯವೇ ಆಡಳಿತವಲ್ಲಿರಬಾರದು. ದೇಶದ ಸ್ವಾತಂತ್ರ್ಯವನ್ನು ಏನೆಂದರೆ 'ಬ್ರಿಟಿಷರ ನಮ್ಮಲ್ಲಿ ಬೇರೂರಿ ಮುಂದೆ ಗಾಂಧಿ ಮಹಾತ್ಮರ ಮಾರ್ಗದರ್ಶನ ಸಿಕ್ಕಿ ನಾನೂ ನನ್ನ ಸಹೋದರರೂ ಮಹಾತ್ಮರ ಕುಟುಂಬದಲ್ಲಿ ಒಂದಾಗಿ ಸೇರಿದೆವು" ಎನ್ನುತ್ತಾರೆ ಡಾಕ್ಟರ್ ಸುಶೀಲಾ.

"ಸುಶೀಲಾ ಮೆಡಿಕಲ್ ಕಾಲೇಜಿನ ಪದವೀಧರೆ. ಬಾಪೂ ಮತ್ತು ಬಾರವರ ಆರೋಗ್ಯವನ್ನು ಕೊನೆಯ ತನಕ ನೋಡಿಕೊಳ್ಳುವ ಜವಾಬ್ದಾರಿಯನ್ನು ಈಕೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಹೊತ್ತರು. ಈ ಸೇವೆಗಾಗಿ ಸುಶೀಲಾ ಮದುವೆಯಾಗದೆ ಕನ್ಯೆಯಾಗಿಯೇ ಉಳಿದರು" ಎಂದು ಕಾಮಾಕ್ಷಮ್ಮನವರು ವಿವರಿಸುತ್ತಾರೆ.

ಸುಶೀಲಾ ಮೊದಲಬಾರಿ ಗಾಂಧೀ ಆಶ್ರಮಕ್ಕೆ ಬಂದ ಘಟನೆಯನ್ನು ಜ್ಞಾಪಿಸಿ ಕೊಳ್ಳುತ್ತಾ ಕಾಮಾಕ್ಷಮ್ಮನವರು.

"ಪ್ಯಾರೆಲಾಲರ ತಂಗಿ ಸುಶೀಲಾ ಅಣ್ಣನ ಜೊತೆಯಲ್ಲಿ ೧೯೩೦ರಲ್ಲಿ ಮೊದಲ ಭಾರಿ ಆಶ್ರಮಕ್ಕೆ ಬಂದಿದ್ದರು. ಆಗ ಬಾಪೂಜಿ ಜೈಲಿನಲ್ಲಿದ್ದರು. ಚಳವಳಿಗೆ ಜನ ರನ್ನು ಸೇರಿಸಿ ಬಂದಿದ್ದ, ರಣಭೂಮಿಯಿಂದ ಹಿಂತಿರುಗಿದ ವೀರಾಂಗನೆಯಂತೆ ಕಾಣುತ್ತಿದ್ದ ಬಾರವರಿಗೆ ಸುಶೀಲಾರವರ ಪರಿಚಯವಾಯ್ತು. ಅಲ್ಲಿಂದ ಮುಂದೆ ಆಗಾಗ ಅಶ್ರಮಕ್ಕೆ ಬಂದು ಹೋಗುವ ವಾಡಿಕೆಯಾಗಿ ಸುಶೀಲಾಗೆ ಬಾರವರು ಮಾತೃ ಸ್ವರೂಪಿಣಿಯಾದರು. ಸುಶೀಲಾ ಬಾರವರ ಪ್ರೀತಿ ಪುತ್ರಿಯಾದಳು. ಮುಂದೆ ದೆಹಲಿಯಲ್ಲಿ ವೈದ್ಯಕೀಯ ಪದವೀಧರಳಾದಳು. ಬಾರವರ ಬಳಿ ಬಂದು ಇರುತ್ತಿದ್ದ ಈ ಶ್ರೀಮಂತರ ಹುಡುಗಿಗೆ ಆಶ್ರಮದ ಸರಳ ಜೀವನ ಅಭ್ಯಾಸವಾಯಿತು."

ಮತ್ತೊಂದು ಸಂದರ್ಭವನ್ನು ನೆನೆದು ಕಾಮಾಕ್ಷಮ್ಮನವರು ಸುಶೀಲಾವರ ಬಗ್ಗೆ ಹೇಳುತ್ತಾರೆ. "ಗಾಂಧೀಜಿ ಮತ್ತು ಕಸ್ತೂರಬಾರವರು ಕಲ್ಕತ್ತೆಯಿಂದ ದೆಹಲಿ ಮಾರ್ಗವಾಗಿ ರಾಜಕೋಟೆಗೆ ಹೊರಟಿದ್ದರು. ಬಾರವರಿಗೆ ತೀವ್ರವಾದ ಜ್ವರ ಕಾಯುತ್ತಿತ್ತು. ಬಾ ಅದನ್ನು ಲಕ್ಷಿಸಲೇ ಇಲ್ಲ. ಅದು ನ್ಯೂಮೋನಿಯ ಕಾಯಿಲೆ. ಮುಂಬಯಿಗೆ ಹೋಗಿ ಅಲ್ಲಿ ವಿಶ್ರಮಿಸಿಕೊಳ್ಳಬೇಕಾಯಿತು. ಆ ಸಮಯದಲ್ಲಿ ಸುಶೀಲಾ ಮಾಡಿದ ಶುಶ್ರೂಷೆಯಿಂದ ಬಾರವರಿಗೆ ಸಂತೋಷವಾಯಿತು. ಬಾರವರ ವಿಶ್ವಾಸಕ್ಕೆ ಸುಶೀಲಾ ಪಾತ್ರರಾದರು."

ಚಳವಳಿಯಲ್ಲಿ ನೇರವಾಗಿ ಭಾಗವಹಿಸಿ ಮಹಿಳಾ ಸಂಘಟನೆ ಮಾಡುವುದಕ್ಕಿಂತ ಬಾರವರ ಯೋಗಕ್ಷೇಮವನ್ನು ಡಾಕ್ಟರ್ ಸುಶೀಲಾ ನೋಡಿಕೊಳ್ಳಬೇಕೆಂದು ಬಾಪೂರ ವರ ಆದೇಶವಾಗಿತ್ತು. ಮಹಾತ್ಮರು ಬಾರವರೊಡನೆ ಸರಹದ್ ಪ್ರಾಂತ್ಯಕ್ಕೆ ಹೋಗುವ ಕಾರ್ಯಕ್ರಮವಿದ್ದಾಗ ಪ್ಯಾರೆಲಾಲ್ ಮತ್ತು ಸುಶೀಲಾ ಇಬ್ಬರನ್ನೂ ತಮ್ಮ ಜೊತೆಯಲ್ಲಿ ಬರಬೇಕೆಂದು ಮಹಾತ್ಮರು ಕರೆಯಿಸಿಕೊಂಡರು. ಪ್ರಯಾಣ ಕಾಲದಲ್ಲಿ ಬಾರವರ ಆರೋಗ್ಯವನ್ನು ಸುಶೀಲಾ ಬಹಳ ಎಚ್ಚರಿಕೆಯಿಂದ ಕಾಪಾ ಡಿದರು.

ಸೀಮಾ ಪ್ರಾಂತ್ಯದಿಂದ ಸೇವಾಗ್ರಾಮಕ್ಕೆ ಹಿಂತಿರುಗಿದ ನಂತರ ಸುಶೀಲಾ ಎಂ. ಡಿ. ಪರೀಕ್ಷೆಗಾಗಿ ದೆಹಲಿಗೆ ತೆರಳಿದರು. ಬಾರವರ ಮೈಯಲ್ಲಿ ಅನಾರೋಗ್ಯ ವಿದ್ದೇ ಇತ್ತು. ಆಗಾಗ ಉಲ್ಬಣಗೊಂಡು ಕಾರ್ಯಕ್ರಮಗಳಿಗೆ ತಮ್ಮ ಪತ್ನಿಯ ಅನಾರೋಗ್ಯ ಅಡ್ಡಿಬರುತ್ತಿದೆಯೆಂದು ಸುಶೀಲಾರವರನ್ನು ಮಹಾತ್ಮರು ಕರೆಯಿಸಿ ಕೊಂಡರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಆ ದಿನಗಳನ್ನು ಕಾಮಾಕ್ಷಮ್ಮನವರು ವರ್ಣಿಸಿದ್ದಾರೆ.

"ಪ್ರತಿದಿನ ಮೂರುಬಾರಿ ಬಾರವರಿಗೆ ಸುಶೀಲಾ ಔಷಧಿ ಕೊಡುತ್ತಿದ್ದರು. ಬಾರವರೊಂದಿಗೆ ಪ್ರಾರ್ಥನೆಯಲ್ಲಿ ಕೂಡುತ್ತಿದ್ದರು. ಬೆಳಿಗ್ಗೆ ಸಂಜೆ ತಪ್ಪದೆ ಬಾರ ವರಿಗಾಗಿ ಕೀರ್ತನೆ ಹಾಡುತ್ತಿದ್ದರು. ಹೀಗೆ ಬಾರವರ ಸೇವೆ ಮಾಡುತ್ತಾ ಸುಶೀಲಾ ಆಶ್ರಮವಾಸಿಗಳಿಗೂ ಚಿಕಿತ್ಸೆ ಮಾಡಿದ್ದಾರೆ. ಆಶ್ರಮವಾಸಿಗಳ ಸೇವೆ ಅಗತ್ಯಬಿದ್ದಾಗ ಬಾಪೂ ಸುಶೀಲಾಗೆ ಹೇಳಿ ಕಳುಹಿಸುತ್ತಿದ್ದರು. ಬಾ ಮತ್ತು ಬಾಪೂರವರ ಸಾನ್ನಿಧ್ಯ ಸುಶೀಲಾಗೆ ಬಹಳ ಹಿತವಾಗಿ ಕಂಡಿತು."

ಅನೇಕ ಸ್ವಾತಂತ್ರ್ಯ ಪ್ರೇಮಿಗಳು ತಮ್ಮ ವಿದ್ಯೆ ಉದ್ಯೋಗಗಳನ್ನು ತ್ಯಜಿಸಿ ಮಹಾತ್ಮರ ಕರೆಗೆ ಧಾವಿಸಿ ಬಂದು ಚಳವಳಿಯಲ್ಲಿ ಭಾಗವಹಿಸಿದಂತೆ, ಡಾಕ್ಟರ್ ಸುಶೀಲಾ ನಯ್ಯಾರ್ ತಮ್ಮ ವ್ಯಾಸಂಗದ ಮಧ್ಯೆಯಾವಾಗ ಬಾ ಮತ್ತು ಬಾಪೂರವರ ಕರೆ ಬಂದರೂ ಸಿದ್ಧರಾಗಿ ಆಶ್ರಮಕ್ಕೆ ಬರುತ್ತಿದ್ದರು, ರಾಷ್ಟ್ರ ಮಾತೆಯ ಸ್ಥಾನದಲ್ಲಿದ್ದ ಬಾರವರ ಆರೋಗ್ಯ ಗಮನಿಸುವುದರಲ್ಲಿ ಸುಶೀಲಾ ಆನಂದವನ್ನು ಕಂಡಿದ್ದರು.

ಒಮ್ಮೆ ದೆಹಲಿಗೆ ಹೋದಾಗ ಬಾರವರು ತಮ್ಮ ಪುತ್ರರಾದ ದೇವದಾಸ್ ಮನೆಯಲ್ಲಿದ್ದರು, ಮೂತ್ರಕೋಶದ ವ್ಯಾಧಿಯಿಂದ ನರಳುತ್ತಿದ್ದ ಬಾರವರಿಗೆ ಆಯಾಸವಾಗುತ್ತಿತ್ತು. ಆದರೂ ವಿಶ್ರಾಂತಿ ಪಡೆಯದೆ ಶ್ರಮಪಡುತ್ತಿದ್ದ ಆ ರಾಷ್ಟ್ರ ಮಾತೆಯನ್ನು ತಡೆಯಲು ಯಾರಿಂದಲೂ ಆಗುತ್ತಿರಲಿಲ್ಲ. ಸ್ನಾನಗೃಹದಲ್ಲಿ ಒಂದು ದಿನ ಬಾರವರು ಪ್ರಜ್ಞೆತಪ್ಪಿ ಬಿದ್ದುಬಿಟ್ಟಿದ್ದರು. ಮನೆಯಲ್ಲಿದ್ದ ದೇವದಾಸ್ ಎಚ್ಚರವಹಿಸಿದ್ದರಿಂದ ಹೆಚ್ಚು ಅನಾಹುತವಾಗಲಿಲ್ಲ. ಆಗತಾನೆ ವೈದ್ಯ ವೃತ್ತಿಯಲ್ಲಿ ಪ್ರವೇಶಿಸಿದ್ದ ಸುಶೀಲಾ ಮನಮುಟ್ಟಿ ಆಕೆಯ ಸೇವೆ ಮಾಡಿದರು. ಬಾಪೂರವರು ಸೇವಾಗ್ರಾಮದಿಂದ ಸುಶೀಲಾರವರಿಗೆ ಪತ್ರ ಬರೆದು ಬಾರವರ ಕ್ಷೇಮವನ್ನು ವಿಚಾರಿಸಿದರು.

೧೯೪೨ರ ಜುಲೈ ತಿಂಗಳು "ಬ್ರಿಟಿಷರೇ, ಭಾರತವನ್ನು ಬಿಟ್ಟು ತೊಲಗಿ" ಎಂಬ ಬಾಪೂರವರ ಲೇಖನ ಹರಿಜನ ಪತ್ರಿಕೆಯಲ್ಲಿ ಪ್ರಕಟವಾಯಿತು, ಬಾಪೂರವರ ಈ ಕರೆಗೆ ದೇಶದ ಉದ್ದಗಲಕ್ಕೆ ಹರಡಿಕೊಂಡ ಜನರು ಸೂಕ್ತಪ್ರತಿಕ್ರಿಯೆ ತೋರಿದರು. ಬಾಪೂಜಿ ಆಮರಣ ಉಪವಾಸ ಮಾಡುವರೆಂಬ ಸುದ್ದಿ ಹರಡಿತು, ಕಸ್ತೂರ ಬಾರವರು ಚಿಂತಾಕ್ರಾಂತರಾದರು. ಅನಾರೋಗ್ಯದ ಜೊತೆಗೆ ಮನಸ್ಸಿನ ಕ್ಲೇಶವೂ ಸೇರಿತು. ಬಾಪೂಜಿಯವರ ಕೊಠಡಿಯಲ್ಲಿ ಚರ್ಚೆಗಳೂ ನಡೆಯುತ್ತಿದ್ದವು. ಮನದಲ್ಲಿ ದಾವಾಗ್ನಿ ಸುಡುತ್ತಿದ್ದರೂ, ಮಹಾತ್ಮನ ಧರ್ಮಪತ್ನಿಯಾದ ಕಸ್ತೂರಬಾ ಬಾಪೂರವ ರೊಡನೆ ಎಲ್ಲರಂತೆಯೇ ನಡೆದುಕೊಳ್ಳುತ್ತಿದ್ದರು, ಆಮರಣ ಉಪವಾಸ ಮಾಡುವ ರೆಂದು ಅವರ ಮನ ತಲ್ಲಣಿಸಿತು. ಇಷ್ಟಲ್ಲದೆ ಪ್ರತಿದಿನ ಸಾಯಂಕಾಲ ಏಳು ಗಂಟೆಗೆ ಬಾರವರ ಸಮ್ಮುಖದಲ್ಲಿ ಮಹಿಳೆಯರ ಸಭೆ ನಡೆಯುತ್ತಿತ್ತು. ಬಾಪೂಜಿ ಸಂಗ್ರಾಮ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಹೂಡಿದರೆ ಏನು ಮಾಡಬೇಕು, ಹೇಳಿ ಎಂದು ಬಾರವರನ್ನು ಎಲ್ಲರೂ ಕೇಳುತ್ತಿದ್ದರು. ಆಕೆ ಗಂಭೀರವಾಗಿ ಉತ್ತರ ಕೊಡುತ್ತಿದ್ದರು. ವಿಚಾರ ವಿಮರ್ಶೆ ಮಾಡುತ್ತಿದ್ದರು.

೧೯೪೨ರ ಆಗಸ್ಟ್ ಒಂದರಂದು ಕಾಂಗ್ರೆಸ್ ಮಹಾ ಸಭೆಯಲ್ಲಿ ಭಾಗವಹಿಸಲು ಮಹಾತ್ಮರು ಮುಂಬಯಿಗೆ ಹೊರಟರು. ಈ ಸಭೆಯ ತೀರ್ಮಾನದಿಂದ ಭಾರತದ ಇತಿಹಾಸದಲ್ಲಿ ಹೊಸ ಅಧ್ಯಾಯ ಆರಂಭವಾಗುವುದೆಂದು ಬಾರವರು ಎಣಿಸಿದ್ದರು. ಆರೋಗ್ಯ ಉತ್ತಮವಾಗಿಲ್ಲದಿದ್ದರೂ ಬಾಪೂ ಜೊತೆಯಲ್ಲಿ ಮುಂಬಯಿಗೆ ತಾವೂ ಹೊರಡಲು ನಿಶ್ಚಯ ಮಾಡಿದರು.

ಆಶ್ರಮವಾಸಿಗಳು ಇವರಿಬ್ಬರನ್ನೂ ಬೀಳ್ಕೊಟ್ಟ ಪರಿಸ್ಥಿತಿಯನ್ನು ಕಾಮಾಕ್ಷಮ್ಮ ಹೃದಯಂಗಮವಾಗಿ ವರ್ಣಿಸುತ್ತಾರೆ.

"ಆಶ್ರಮದ ತಂದೆ ತಾಯಿಯನ್ನು ಬೀಳ್ಕೊಡುವಾಗ ಜನರೆಲ್ಲಾ ಸೇರಿದರು. ಬಹಳ ಗಂಭೀರವಾದ ವಾತಾವರಣ, ಆಕಾಶದಲ್ಲೂ ಕಾರ್ಮೋಡ ಕವಿದಿತ್ತು, ಪ್ರಕೃತಿಯೂ ದುಃಖಿಸುವಂತೆ ಕಾಣುತ್ತಿತ್ತು. ಮುಂದೆ ಆಗುವ ಅನಿಷ್ಟಕಾರಕ ಭವಿಷ್ಯ ಸೂಚನೆಯೋ ಎಂಬಂತೆ ಎಲ್ಲೆಲ್ಲೂ ನಿಸ್ತೇಜನ ಕಾಣುತ್ತಿತ್ತು. ಅಂದಿನ ಬೀಳ್ಕೊಡುಗೆ ನಿಜವಾಗಿಯೂ ಕೊನೆಯದಾಯಿತು. ಆಶ್ರಮವನ್ನು ತಬ್ಬಲಿಯನ್ನಾಗಿ ಮಾಡಿ ಹೊರಟುಹೋದರು."

ಡಾಕ್ಟರ್ ಸುಶೀಲಾ ನಯ್ಯಾರ್ ತಮ್ಮ ಎಂ. ಡಿ. ವ್ಯಾಸಂಗವನ್ನು ಮುಗಿಸಿ ಕೆಲವು ದಿನ ರಜೆ ಪಡೆದು ಸೇವಾ ಗ್ರಾಮಕ್ಕೆ ಎಂದಿನಂತೆ ಹೊರಡಲು ಸಿದ್ಧತೆ ಮಾಡಿಕೊಂಡರು. ಆದರೆ ದಿನಪತ್ರಿಕೆಯಲ್ಲಿ ಕಾಂಗ್ರೆಸ್ ಸಭೆ ಮುಂಬಯಿಯಲ್ಲಿ ಜರುಗುವ ವಿಷಯ ತಿಳಿದು ನೇರವಾಗಿ ದೆಹಲಿಯಿಂದ ಮುಂಬಯಿ ತಲುಪಿ ಆಗಸ್ಟ್ ೮ರಂದು ಸಭೆಯ ಚಪ್ಪರಕ್ಕೆ ಹೋಗಿ ಇಳಿದರು. ಅನಿರೀಕ್ಷಿತವಾಗಿ ಬಂದ ಸುಶೀಲಾರವರನ್ನು ಕಂಡು ಪ್ಯಾರೆಲಾಲ್, ಮಹಾದೇವ್‌ಭಾಯಿ, ಬಾ ಮತ್ತು ಬಾಪೂ ಎಲ್ಲರಿಗೂ ಆಶ್ಚರ್ಯ.

ಸಭೆ ಮುಗಿದು ಚರ್ಚೆಗಳಾಗಿ ಎಲ್ಲರೂ ಮಲಗುವಾಗ ರಾತ್ರಿ ಹನ್ನೆರಡು ಗಂಟೆ. ಮುಂಜಾನೆ ಯಥಾ ಪ್ರಕಾರ ನಾಲ್ಕು ಗಂಟೆಗೆ ಪ್ರಾರ್ಥನೆಯಾಯಿತು. ೫-೩೦ರ ಸಮಯ ಮಹಾದೇವ್ ಓಡೋಡುತ್ತಾ ಪೂಜ್ಯರ ಬಳಿ ಬಂದು ದಸ್ತಗಿರಿ ಮಾಡುವರೆಂಬ ವಿಷಯ ತಿಳಿಸಿದರು. ಬೆಳಿಗ್ಗೆ ಆರು ಗಂಟೆಗೆ ಸರಿಯಾಗಿ ಮಹಾತ್ಮಾ ಗಾಂಧಿ, ಮಹಾದೇವ್ ದೇಸಾಯಿ, ಮೀರಾಬಹನ್‌ರನ್ನು ದಸ್ತಗಿರಿ ವಾರೆಂಟ್ ತೋರಿಸಿ ಹಿಡಿದುಕೊಂಡು ಹೋದರು. ಹೊರಡುವಾಗ ಕಸ್ತೂರಬಾಗೆ ಬಾಪೂ ಹೇಳಿದರು. "ಈಗ ನೀನು ನನ್ನ ಜೊತೆಯಲ್ಲಿ ಬರುವುದಕ್ಕಿಂತ ನಾನು ಉಳಿಸಿರುವ ಕೆಲಸವನ್ನು ಪೂರ್ಣ ಮಾಡುವುದು ಸೂಕ್ತವೆನಿಸುತ್ತದೆ." ಬಾರವರು ಮರುಮಾತಾಡದೆ ತಮ್ಮ ಕರ್ತವ್ಯವನ್ನು ಅರಿತರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಅದೇ ಸಾಯಂಕಾಲ ಶಿವಾಜಿ ಪಾರ್ಕಿನಲ್ಲಿ ಗಾಂಧೀಜಿಯವರ ಭಾಷಣ ಏರ್ಪಾಡಾಗಿತ್ತು. ಅವರಿಗೆ ಬದಲಾಗಿ ಕಸ್ತೂರಬಾ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತಾಡುವರೆಂದು ಘೋಷಿಸಲಾಗಿತ್ತು.

ಬಾಪೂಜಿಯ ದಸ್ತಗಿರಿಯ ಸಮಾಚಾರ ಎಲ್ಲೆಲ್ಲೂ ಹಬ್ಬಿ ಜನರು ತಂಡತಂಡವಾಗಿ ಬಂದು ಕಸ್ತೂರಬಾರವರನ್ನು ಸುತ್ತಿಕೊಂಡರು. ಶರೀರದಲ್ಲಿ ಬಲವಿಲ್ಲ ಮನಸ್ಸಿನ ಆಘಾತ, ಎಲ್ಲವನ್ನೂ ಸಹಿಸಿಕೊಂಡು ಬಂದವರೊಡನೆ ತಾಳ್ಮೆಯಿಂದ ಮಾತಾಡಿ ಸಾಯಂಕಾಲ ಬಹಿರಂಗ ಸಭೆಗೂ ಬಾ ಸಿದ್ಧರಾದರು. ಈ ಪರಿಸ್ಥಿತಿಯಲ್ಲಿ ಒಬ್ಬ ಹೆಣ್ಣು ಮಗಳು ಬಾರೊಂದಿಗೆ ಸದಾ ಇರುವುದು ಉತ್ತಮವೆಂದು ಎಲ್ಲರೂ ಗಮನಿಸಿ ಡಾ|| ಸುಶೀಲಾರವರನ್ನು ಜೊತೆ ಮಾಡಿದರು. ಸಭೆಗೆ ಹೋಗುವ ಮೊದಲು ಕಸ್ತೂರಬಾ ಸುಶೀಲಾರವರ ಕೈಯಲ್ಲಿ ಅನೇಕರಿಗೆ ಮುಖ್ಯವಾದ ಪತ್ರಗಳನ್ನು ಹೇಳಿ ಬರೆಯಿಸಿದರು.

ಸಾಯಂಕಾಲ ೫-೪೫ಕ್ಕೆ ಕಸ್ತೂರಬಾರವರು ಡಾ|| ಸುಶೀಲಾರವರೊಂದಿಗೆ ಶಿವಾಜಿ ಪಾರ್ಕ್ ಬಹಿರಂಗ ಸಭೆಗೆ ಹೊರಟರು. ಬಾಗಿಲಲ್ಲೇ ನಿಂತಿದ್ದ ಪೋಲೀಸ್ ಅಧಿಕಾರಿಗಳು ಬಾರವರನ್ನು ಮುಂದೆ ಹೋಗಲು ಬಿಡದೆ ದಸ್ತಗಿರಿ ಮಾಡಿದರು. ಬಾ ಮತ್ತು ಸುಶೀಲಾರವರನ್ನು ಕೂರಿಸಿಕೊಂಡು ಪೋಲೀಸ್ ವ್ಯಾನ್ ಹೊರಟೇಬಿಟ್ಟಿತು. ಇದನ್ನು ಕಂಡ ಜನರು ಆಕಾಶ ಬಿರಿದು ಹೋಗುವಂತೆ ಹುಯಿಲೆಬ್ಬಿಸಿದರು. ಕಿಕ್ಕಿರಿದ ಜನಸಂದಣಿಯನ್ನು ಕಂಡು ಬಾರವರ ಕಣ್ಣಂಚಿನಲ್ಲಿ ನೀರು ತುಂಬಿತು. ಪಕ್ಕದಲ್ಲೇ ಕುಳಿತಿದ್ದ ಸುಶೀಲಾ ಬಾರವರನ್ನು ಸಮಾಧಾನಪಡಿಸಿದರು.

ಬಾರವರ ಮೈಸೋಕಿದಾಗ ಸುಶೀಲಾರವರಿಗೆ ಅವರ ಮೈ ಸುಡುತ್ತಿದ್ದುದು ಗೊತ್ತಾಯಿತು. ಯಾವಾಗಿಂದ ಜ್ವರ ಕಾಯುತ್ತಿತ್ತೋ ! ಕೆಲಸದ ಗಡಿಬಿಡಿಯಲ್ಲಿ ಅದರ ಕಡೆ ಲಕ್ಷ್ಯವಿರಲಿಲ್ಲ. ಓಡುತ್ತಿದ್ದ ಪೋಲೀಸ್ ವ್ಯಾನ್ ನಿಂತ ನಂತರ ಸುಶೀಲಾರವರ ಸಹಾಯದಿಂದ ಕಸ್ತೂರಬಾ ವ್ಯಾನಿನಿಂದ ಇಳಿದು ಜೈಲಿಗೆ ಒಯ್ಯಲ್ಪಟ್ಟರು. ಕಸ್ತೂರಿಬಾರವರಿಗೆ ತಮ್ಮ ೩೦ನೆಯ ವಯಸ್ಸಿನಿಂದ ಸುಮಾರು ೪೪ ವರ್ಷಗಳೂ ಇದೇ ಅನುಭವ, ಅವರಿಗೆ ಇದರಲ್ಲೇ ಮುಪ್ಪಡರಿತ್ತು.

ಸುಶೀಲಾರವರಿಗೆ ಜೈಲುವಾಸ ಇದೇ ಮೊದಲು. ಸೆರೆಮನೆಯೊಳಗೆ ಅದೆಷ್ಟೋ ಬಾಗಿಲನ್ನು ದಾಟಿದ ಮೇಲೆ ಹೊರ ಪ್ರಪಂಚದಿಂದ ಅತಿ ದೂರ ಎಳೆದು ಬಿಟ್ಟಂ ತಾಯಿತು. ಮೂರು ದಿನದಿಂದ ರೈಲಿನ ಪ್ರಯಾಣದ ಆಯಾಸ ನಿದ್ರಾಹಾರಗಳಿಲ್ಲದೆ, ಸುಶೀಲಾ ಬಳಲಿ ಸೊರಗಿದ್ದರು. ಕಸ್ತೂರಬಾಗೆ ೧೦೨ ಡಿಗ್ರಿ ಜ್ವರ ಕಾಯುತ್ತಿತ್ತು ಒಂದು ಹಾಸಿಗೆ ಬಿಡಿಸಿ ಸುಶೀಲಾ ಬಾರವರನ್ನು ಮಲಗಿಸಿದರು. ರಾತ್ರಿ ಸುಮಾರು ಎರಡು ಗಂಟೆ, ಬಾರವರು ಶೌಚಗೃಹದಿಂದ ಮೆಲ್ಲನೆ ತೂರಾಡುತ್ತಾ ಬರುತ್ತಿದ್ದುದನ್ನು ಕಂಡು ಸುಶೀಲಾ ತಟ್ಟನೆ ಎದ್ದು ಆಕೆಯನ್ನು ಹಿಡಿದು ಹಾಸಿಗೆಯ ಹತ್ತಿರ ಕರೆದುಕೊಂಡು ಬಂದು ಮಲಗಿಸಿದರು. ಮುಂಜಾನೆ ಮುಖ ತೊಳೆದು ಇಬ್ಬರೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಪ್ರಾರ್ಥನೆ ಮುಗಿಸಿ ಕುಳಿತಾಗ, ವಾರ್ಡನ್ ಬಂದು ಇಬ್ಬರನ್ನೂ ಜೈಲಿನ ಆಫೀಸಿಗೆ ಕರೆದೊಯ್ದರು. ಆಫೀಸಿನಲ್ಲಿ ಇವರಿಬ್ಬರ ಹೆಸರು, ವಿಳಾಸ, ಉದ್ಯೋಗ ಇತ್ಯಾದಿ ನೋಂದಣಿ ಆಯಿತು.

ಜೈಲು ಆಫೀಸರನ್ನು ಕಂಡು ಸುಶೀಲಾ "ಬಾಪೂರವರಿಗೆ ಔಷಧಿ ಬೇಕಾಗಿದೆ. ತರಿಸಿ ಕೊಡುವಿರಾ ?" ಎಂದು ಕೇಳಿದರು.

"ಬೇಕಾದರೆ ನೀವೇ ತರಿಸಿಕೊಳ್ಳಿ" ಎಂದು ಉತ್ತರ ಬಂತು.

"ನಮ್ಮಲ್ಲಿ ಹಣವಿಲ್ಲ. ನಮ್ಮ ಸ್ನೇಹಿತರಿಂದ ತರಿಸುತ್ತೇವೆ" ಎಂದಾಗ "ಹೊರಗೆ ಯಾವ ವಿಧವಾದ ಸಂಬಂಧವೂ ಕೂಡದು" ಎಂದು ಆಜ್ಞೆಯಾಯಿತು.

"ಈಕೆಗೆ ನೆನ್ನೆಯಿಂದ ಆಹಾರವಿಲ್ಲ, ನಿಶ್ಶಕ್ತಿಯಾಗಿದೆ. ಹಣ್ಣುಗಳನ್ನಾದರೂ ತರಿಸಿಕೊಡಿ" ಎಂದು ಸುಶೀಲಾ ಜೈಲು ಡಾಕ್ಟರಿಗೆ ಹೇಳಿದರು.

"ಸರಿ, ಸೇಬಿನ ಹಣ್ಣುಗಳನ್ನು ಕಳುಹಿಸುತ್ತೇನೆ" ಎಂದು ಹೇಳಿ ಹೋದ ಜೈಲಿನ ಡಾಕ್ಟರ್ ಪುನಃ ಬರಲಿಲ್ಲ. ಸೇಬಿನ ಹಣ್ಣೂ ಬರಲಿಲ್ಲ.

ಕಾಯಿಲೆಯ ಜೊತೆಗೆ ಉಪವಾಸವೂ ಸೇರಿ ಬಾಪೂರವರು ಪ್ರಜ್ಞೆ ಇಲ್ಲದೆ ಹಾಸಿಗೆಯಲ್ಲಿ ಬಿದ್ದರು. ಮಾತಾಡಲು ಶಕ್ತಿ ಇಲ್ಲದೆ ಮೌನವಾಗಿ ಮಲಗಿದರು. ಪಕ್ಕದಲ್ಲೇ ಕುಳಿತಿದ್ದ ಸುಶೀಲಾ ತಾವಿದ್ದ ಕೊಠಡಿಯ ಸುತ್ತಲೂ ಕಣ್ಣು ಹಾಯಿಸಿದರು. ಜೈಲಿನ ನಿಜ ಸ್ವರೂಪವು ಸುಶೀಲಾಗೆ ಅರಿವಾಗುತ್ತಾ ಬಂತು. ತಾವಿದ್ದ ಕೊಠಡಿಗೆ ಎತ್ತರದಲ್ಲಿ ಒಂದೇ ಒಂದು ಸಣ್ಣ ಕಿಟಕಿ, ಅದರ ಮುಕ್ಕಾಲು ಭಾಗವನ್ನು ಇಟ್ಟಿಗೆಯಿಂದ ಮುಚ್ಚಿದ್ದರು. ಸೂರ್ಯನ ದರ್ಶನವಂತೂ ಇಲ್ಲವೇ ಇಲ್ಲ. ಗಾಳಿ, ಬೆಳಕಿಗೆ ಅಭಾವ. ನೆಲ ಜೌಗುಕಟ್ಟಿ ಮುಗ್ಗಲು ವಾಸನೆ ಬರುತ್ತಿತ್ತು. ಇಡೀ ಕೋಣೆಯಲ್ಲೆಲ್ಲಾ ದುರ್ವಾಸನೆ ವ್ಯಾಪಿಸಿತ್ತು. ಜೈಲಿನ ಚರಂಡಿ ನೀರು ಇದೇ ಮಾರ್ಗವಾಗಿ ಹರಿಯುತ್ತಿದ್ದುದರಿಂದ ಕೊಳಚೆ ವಾಸನೆಯಿಂದ ಸುಶೀಲಾಗೆ ತಲೆನೋವು ಆರಂಭವಾಯಿತು.

ಸ್ವಲ್ಪ ಹೊತ್ತಿನ ಮೇಲೆ ಗಂಜಿ ಊಟ ಬಂತು. ಹಸಿವೆಯನ್ನು ನೀಗಲು ಊಟಕ್ಕೆ ಕುಳಿತ ಸುಶೀಲಾಗೆ ಒಂದು ತುತ್ತು ಬಾಯಲ್ಲಿ ಹಾಕಲು ವಾಕರಿಕೆ ಬರುವಂತಾಯಿತು. ಊಟ ಬಿಟ್ಟು ಎದ್ದರು. ಬಾಪೂರವರು ಊಟದ ಕಡೆಗೂ ತಿರುಗಿ ನೋಡಲಿಲ್ಲ.

ಆ ರಾತ್ರಿ ಮೇಟ್ರನ್ ಬಂದು, 'ನಿಮ್ಮಿಬ್ಬರನ್ನು ಬೇರೆ ಕಡೆ ಕರೆದುಕೊಂಡು ಹೋಗುವವರು ಸಿದ್ಧರಾಗಿ' ಎಂದು ಬಾ ಮತ್ತು ಸುಶೀಲಾಗೆ ತಿಳಿಸಿದಳು. ಹೊಸದಾಗಿ ಬಂಧಿತರಾಗಿ ಅಲ್ಲಿಗೆ ಬಂದಿದ್ದ ಶೀತಲ್ ದಾಸ್ ಎಂಬುವವರು ಸುಶೀಲಾಗೆ ತಮ್ಮ ಬಳಿ ಇದ್ದ ಹಣವನ್ನು ಕೊಟ್ಟರು. ಕೈಯಲ್ಲಿ ಕಾಸಿಲ್ಲದೆ ಪರದಾಡುತ್ತಿದ್ದ ಸುಶೀಲಾಗೆ ಬಹಳ ಸಂತೋಷವಾಯಿತು.

ರಾತ್ರಿ ಒಂದು ಗಂಟೆಗೆ ಪೋಲೀಸ್ ವ್ಯಾನಿಗೆ ಬಾ ಮತ್ತು ಸುಶೀಲಾ ಹತ್ತಿ ಕುಳಿತರು. ಎಲ್ಲಿಗೆ ಕರೆದುಕೊಂಡು ಹೋಗುವರೆಂದು ತಿಳಿಯದು. ರೈಲು ನಿಲ್ದಾಣಕ್ಕೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಕರೆದೊಯ್ದರು. ಇಬ್ಬರನ್ನೂ ನಿಲುಮನೆಯಲ್ಲಿ ಆ ರಾತ್ರಿ ಕೂರಿಸಿದರು. ರಾತ್ರಿಯೆಲ್ಲಾ ಬಾರವರು ಕುಳಿತೇ ಇದ್ದರು. ಪೋಲೀಸ್ ಅಧಿಕಾರಿಯೊಬ್ಬ ಬಂದು ಎರಡು ಟಿಕೆಟ್ ಕೊಟ್ಟು ಇಬ್ಬರನ್ನೂ ಪುಣೆಯ ರೈಲಿಗೆ ಹತ್ತಿಸಿದ. ಜನರಿಗೆ ಇವರ ಸುಳಿವು ಸಿಕ್ಕಕೂಡದೆಂದು ಪುಣೆಗೆ ಮೊದಲೇ ಒಂದು ಸಣ್ಣ ನಿಲ್ದಾಣದಲ್ಲಿ ರೈಲು ನಿಂತಿತು. ಪೋಲೀಸ್ ಕಾವಲೊಂದಿಗೆ ಬಾ ಮತ್ತು ಸುಶೀಲಾರವರನ್ನು ವ್ಯಾನಿನಲ್ಲಿ ಕರೆದುಕೊಂಡು ಹೋದರು. ಆಗಾಖಾನ್ ಮಹಲ್ ಮುಂದೆ ವ್ಯಾನ್ ನಿಂತಿತು, ಅಲ್ಲಿ ಸಶಸ್ತ್ರ ಪಹರೆಗಾರರು ಕಾವಲಿದ್ದರು. ಮುಳ್ಳುತಂತಿಗಳ ಎತ್ತರವಾದ ಬೇಲಿ, ಮಹಲನ್ನು ಪ್ರವೇಶಿಸಿದ ನಂತರ ಸ್ವಲ್ಪ ದೂರದಲ್ಲಿ ಮಹಾದ್ವಾರದ ಬಳಿ ವ್ಯಾನನ್ನು ನಿಲ್ಲಿಸಲಾಯಿತು. ಬಾರವರಿಗೆ ಆಸರೆ ಕೊಟ್ಟು ಸುಶೀಲಾ ಆ ಮಹಲಿನ ಮೆಟ್ಟಲುಗಳನ್ನು ಹತ್ತಲು ಸಹಾಯ ಮಾಡಿದರು. ಪಡಸಾಲೆಯಲ್ಲಿ ಬಹುದೂರ ನಡೆದ ಮೇಲೆ ಬಾಪೂ ಇದ್ದ ಕೋಣೆಯ ಹತ್ತಿರ ಇಬ್ಬರನ್ನೂ ಬಿಟ್ಟರು.

ಈಗಾಗಲೇ ಆಗಾಖಾನ್ ಮಹಲಿನ ಸೆರೆಯಲ್ಲಿ ಬಂಧಿಸಲ್ಪಟ್ಟ ಬಾಪೂರವರು ಕೆಲವು ಕಾಗದ ಪತ್ರಗಳನ್ನು ನೋಡುತ್ತಾ ಮಹಾದೇವ್ ದೇಸಾಯಿಯವರೊಡನೆ ಮಾತಾಡುತ್ತಾ ಕುಳಿತಿದ್ದರು. ತಲೆಯೆತ್ತಿ ನೋಡಿದಾಗ ತಮ್ಮ ಮುಂದೆ ತಮ್ಮ ಪತ್ನಿ ನಿಂತಿರುವುದನ್ನು ಕಂಡು ಮುಖ ಗಂಭೀರವಾಯಿತು. ಹುಬ್ಬು ಗಂಟಿಕ್ಕಿತು, ಜ್ವಾಲಾಮುಖಿಯಂತಾಗಿ ಬಾರವರನ್ನು ಪ್ರಶ್ನಿಸಿದರು.

"ಇಲ್ಲಿಗೆ ಬರಬೇಕೆಂದು ನೀನೇ ಕೇಳಿಕೊಂಡೆಯೋ ಅಥವಾ ಅವರೇ ಕರೆತಂದರೋ ?"

ಇಲ್ಲಿ ಕಾಮಾಕ್ಷಮ್ಮನವರು ಮನಮುಟ್ಟುವಂತಹ ಮಾತುಗಳನ್ನು ಹೇಳಿರುವರು. "ಎಂತಹ ನಿರ್ದಯವಾದ ಪ್ರಶ್ನೆ ! ಆ ಬಡತಾಯಿ ಕಸ್ತೂರಬಾ ಮೌನದಿಂದಿದ್ದರು. ಉಪವಾಸದಿಂದ ಶಕ್ತಿಗುಂದಿತ್ತು. ಒಂದೇ ಸಮ ಭೇದಿಯಾಗಿ ಸುಸ್ತು, ಮೂರು ದಿನಗಳಿಂದ ಕಾಡಿಸಿದ ಜ್ವರ, ಪ್ರಯಾಣ ಮಾಡಿ ಬಂದ ಬಳಲಿಕೆ, ರಾತ್ರಿ ನಿದ್ದೆ ಇಲ್ಲ. ಇಷ್ಟನ್ನೂ ಸಹಿಸಿಕೊಂಡು ಆ ಉದ್ದನೆಯ ವೆರಾಂಡಾವನ್ನು ನಡೆಯಲಾರದೆ ನಡೆದು ಬಂದು ದಣಿದ ಆ ಶರೀರಕ್ಕೆ ನಿಲ್ಲಲೂ ತ್ರಾಣವಿರಲಿಲ್ಲ."

ತನ್ನ ಕರ್ತವ್ಯವನ್ನು ಮರೆತು ಪತಿಯ ಅಗಲುವಿಕೆಯನ್ನು ಸಹಿಸಲಾರದೆ ಬಂದಳೋ ಎಂಬುದು ಗಾಂಧಿಯವರ ಚಿಂತೆ. ಪುನಃ ತೀಕ್ಷ್ಣವಾದ ಸ್ವರದಲ್ಲಿ "ನೀನೇ ಬಂದೆಯಾ ?" ಎಂದಾಗ ತಡೆಯಲಾರದೆ ಸುಶೀಲಾ ಉತ್ತರವಿತ್ತರು.

"ಇವರೇನೂ ಬರಲಿಲ್ಲ ಬಾಪೂಜಿ. ಸರ್ಕಾರ ಇವರನ್ನು ಖೈದಿಯಾಗಿ ಹಿಡಿದು ಇಲ್ಲಿಗೆ ಕಳುಹಿಸಿದೆ."

ಗಾಂಧೀಜಿ ಏನು ಕೇಳಿದರೆಂದು ಬಾರವರಿಗೆ ಈಗ ಮನವರಿಕೆಯಾಯಿತು. "ಇಲ್ಲಿಗೆ ನನ್ನನ್ನು ಅವರೇ ಕರೆತಂದಿರುವರು. ನನಗೆ ಗೊತ್ತೇ ಇಲ್ಲ" ಎಂದರು. ಬಾಪೂಜಿಗೆ ಸುಶೀಲಾ ಬಾರವರ ದೇಹಸ್ಥಿತಿಯನ್ನು ಸಂಕ್ಷಿಪ್ತವಾಗಿ ವಿವರಿಸಿ ತಿಳಿಸಿದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಬಾಪೂಜಿಯ ಮುಖದ ಮೇಲಿನ ಕಠೋರತೆ ಮಾಯವಾಯಿತು. ಮಹಾದೇವ್ ರವರು ತಮ್ಮ ಕೆಲಸವನ್ನು ಅಲ್ಲಿಗೇ ಬಿಟ್ಟು ಬಾರವರಿಗಾಗಿ ಮಂಚ ಹಾಸಿಗೆ ವ್ಯವಸ್ಥೆ ಮಾಡಿದರು.

ಜೈಲು ಸೂಪರಿಂಟೆಂಡೆಂಟ್ ಮಿಸ್ಟರ್ ಕೆಟಲಿ ಬಾರವರಿಗಾಗಿ ಡಾ॥ ಸುಶೀಲಾ ಹೇಳಿದ ಔಷಧಿ ತರಿಸಿಕೊಟ್ಟರು. ಔಷಧಿ ಸೇವನೆಯಿಂದಲೋ, ಬಾಪೂರವರ ಸಾನ್ನಿಧ್ಯ ದಲ್ಲಿರುವೆನೆಂಬ ಸಮಾಧಾನದಿಂದಲೋ ಬಾರವರ ಬೇನೆ ಸ್ವಲ್ಪ ಗುಣವಾಗಿ ಎರಡೇ ದಿನಗಳಲ್ಲಿ ಓಡಾಡುವಂತಾದರು.

ಆಗಾಖಾನ್ ಮಹಲ್‌ನ ಸೆರೆಯಲ್ಲಿ ಬಾಪೂರವರೊಂದಿಗೆ ಇದ್ದವರಲ್ಲಿ ಸರೋಜಿನಿ ನಾಯ್ಡುರವರೂ ಒಬ್ಬರು. ಅಡಿಗೆ ವ್ಯವಸ್ಥೆ ನೋಡಿಕೊಳ್ಳುತ್ತಿದ್ದವರು ಅವರೇ. ಸುಶೀಲಾರವರನ್ನು ಕಂಡು ಶ್ರೀಮತಿ ನಾಯ್ಡು ಆತ್ಮೀಯವಾಗಿ ಮಾತಾಡಿ "ವಿಶೇಷ ರೀತಿಯ ಅಡಿಗೆ ಬೇಕಾದರೆ ನೀವೇ ಮಾಡಿ ಊಟ ಮಾಡಬಹುದು" ಎಂದು ತಮಾಷೆ ಮಾಡಿದರು.

ಸುಶೀಲಾರವರಿಗೆ ಅಡಿಗೆ ಮಾಡಿದ ಅಭ್ಯಾಸವೇ ಇಲ್ಲ. ತಾಯಿಗೆ ಮುದ್ದಿನ ಮಗಳಾಗಿ ಬೆಳೆದು, ವಿದ್ಯಾರ್ಥಿ ಜೀವನವನ್ನೇ ನಡೆಸುತ್ತಾ ಬಂದಿದ್ದ ಸುಶೀಲಾ ಅಡಿಗೆ ಎಂದೊಡನೆಯೇ ಗಾಬರಿಯಾದರು.

"ಇಲ್ಲದೆ ಹೋದರೆ ಸಮಯವನ್ನು ಹೇಗೆ ಕಳೆಯುವಿ ?" ಎಂದು ನಗುತ್ತಾ ಸರೋಜಿನಿ ನಾಯ್ಡು ಕೇಳಿದರು.

ಸಮಯ ಕಳೆಯಲು ಅಡಿಗೆ ಮಾಡಬೇಕಾದೀತು ಎಂಬ ಕಲ್ಪನೆ ಸುಶೀಲಾಗೆ ಇದುವರೆಗೆ ಬಂದೇ ಇರಲಿಲ್ಲ. ತನ್ನ ವೈದ್ಯಕೀಯ ಅಭ್ಯಾಸಕ್ಕೆ ಸಮಯ ಸಾಲ ದಾಗಿತ್ತು.

ಆಗಾಖಾನ್ ಮಹಲ್‌ನಲ್ಲಿ ಗಾಂಧೀಜಿ, ಬಾರವರು, ಮಹಾದೇವ್ ದೇಸಾಯಿ, ಸರೋಜಿನಿ ನಾಯ್ಡು, ಸುಶೀಲಾ ನಯ್ಯಾರ್, ಮೀರಾಬಹನ್–ಇಷ್ಟು ಮಂದಿ ರಾಜ ಬಂಧಿಗಳಿಗೆ ೨೪ ಗಂಟೆ ಕಾಲವೂ ಪೋಲೀಸ್ ಕಾವಲಿತ್ತು. ಈ ಕಾರಾಗೃಹದಲ್ಲಿ ವರ್ತಮಾನ ಪತ್ರಿಕೆಗಳನ್ನು ಓದುವಂತಿಲ್ಲ, ಮನಬಿಚ್ಚಿ ಮಾತಾಡುವಂತಿಲ್ಲ. ಬಾಯಿ ತಪ್ಪಿ ಸಹ ಹೊರಗಿನ ಪ್ರಪಂಚದ ಸುದ್ದಿ ವಿನಿಮಯ ಮಾಡುವಂತಿಲ್ಲ. ಪ್ರತಿ ಬಾಗಿಲಿ ನಲ್ಲಿ ಕೋವಿ ಹಿಡಿದ ಪಹರೆಯವರಿದ್ದರು.

ಇಂತಹ ಪರಿಸ್ಥಿತಿಯಲ್ಲಿ ಬಾಪೂ ಸ್ವಾತಂತ್ರ್ಯ ಪಡೆಯಲು ಏನು ಮಾಡಿಯಾರು ಎಂದು ಬಾರವರ ಮನಸ್ಸು ನೊಂದಿತು.

೧೯೪೨ರ ಕ್ರಾಂತಿಯಿಂದ ದೇಶವೆಲ್ಲಾ ಹತ್ತಿ ಉರಿಯುವಂತಾಗಿತ್ತು. ಲಾಠಿ ಪ್ರಹಾರಗಳನ್ನು ತಿಂದ ಜನರೆಷ್ಟೋ ಲೆಕ್ಕವಿಲ್ಲ. ಎಷ್ಟೋ ಮಂದಿಯ ಬಲಿದಾನ ವಾಯಿತು. ಈ ಸುದ್ದಿ ಸಹ ಮಹಾತ್ಮರ ಪರಿವಾರಕ್ಕೆ ತಿಳಿಯಕೂಡದೆಂದು ಸರ್ಕಾರದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಆಜ್ಞೆಯಿತ್ತು. ಒಮ್ಮೊಮ್ಮೆ ಬಹು ದೂರ ರಸ್ತೆಯಲ್ಲಿ ಲಾರಿಗಳಲ್ಲಿ ಜನರನ್ನು ಬಂಧಿಸಿಕೊಂಡು ಹೋಗುತ್ತಿದ್ದಾಗ, 'ಮಹಾತ್ಮಾ ಗಾಂಧೀಜಿಕಿ ಜೈ' ಎಂಬ ಶಬ್ದ ಗಾಳಿಯಲ್ಲಿ ತೇಲಿಬಂದು ಆಗಾಖಾನ್ ಮಹಲ್ ಮುಟ್ಟಿ ಬಾಪೂ ಮತ್ತು ಪರಿವಾರದವರ ಕಿವಿಗೆ ಬೀಳುತ್ತಿತ್ತು. ಕಸ್ತೂರಬಾರವರ ಮನಸ್ಸು ನೊಂದುಕೊಳ್ಳುತ್ತಿತ್ತು.

ಬಾರವರಿಗೆ ಔಷಧಿ ಬೇಕೆಂದು ಸುಶೀಲಾ ತವಕಿಸುತ್ತಿದ್ದರು. ಡಾಕ್ಟರ್ ಸುಶೀಲಾರವರ ಹಸ್ತಾಕ್ಷರವಿದ್ದರೆ ಔಷಧಿ ದೊರೆಯುತ್ತಿರಲಿಲ್ಲ. ಮಿಸ್ಟರ್ ಕೆಟಲಿಯವರು ತಮ್ಮ ಹಸ್ತಾಕ್ಷರ ಹಾಕಿ ತರಿಸಿಕೊಡುತ್ತಿದ್ದರು. ಬಾರವರ ಕಾಯಿಲೆಯಿಂದ ಉದ್ರಿಕ್ತರಾದ ಜನ ಕೆರಳುವರೆಂಬ ಭೀತಿ ಬ್ರಿಟಿಷ್ ಸರ್ಕಾರಕ್ಕಿತ್ತು. ಬಾ ಮತ್ತು ಬಾಪೂರವರನ್ನು ಕಂಡರೆ ಕೆಟಲಿಯವರಿಗೆ ಪರಮ ಭಕ್ತಿ. ಆದರೂ ಸರ್ಕಾರಕ್ಕೆ ನಿಷ್ಠೆಯಿಂದಿರಬೇಕಾಗಿತ್ತು. ಸರೋಜಿನಿ ನಾಯ್ಡುರವರು ತಾವು ಮಾಡಿದ ಬಿಸಿ ಅಡಿಗೆಯನ್ನು ಕೆಲವು ವೇಳೆ ಕೆಟಲಿಯವರಿಗೂ ಬಡಿಸುತ್ತಿದ್ದರು.

ಆಗಾಖಾನ್ ಜೈಲಿನಲ್ಲಿ ಹೀಗೆ ಕಾಲ ಕಳೆಯುತ್ತಿದ್ದಾಗ ಬಾಪೂರವರ ನೆಚ್ಚಿನ ಆರಾಧಕ, ದೇಶಭಕ್ತ, ಮಹಾತ್ಮರ ಬಲಗೈಯಂತಿದ್ದು ಅವರು ಹೇಳುವುದನ್ನು ಬರೆದು ಜನರಿಗೆ ತಿಳಿಸುತ್ತಿದ್ದ ಮಹಾದೇವ್ ಜೈಲಿನಲ್ಲೇ ಮೃತರಾದರು. ಈ ದುಃಖ ಒಂದು ಕಡೆಯಾದರೆ, ಮಹಾದೇವ್‌ರವರ ಸ್ಥಾನ ತುಂಬುವವರಾರು, ಮಹಾತ್ಮರ ಆಪ್ತ ಕಾರ್ಯದರ್ಶಿ ಮತ್ತು ಬರವಣಿಗೆಯಲ್ಲಿ ಆಪ್ತ ಸಹಾಯಕರು ಯಾರೆಂದು ಮತ್ತೊಂದೆಡೆ ಚಿಂತೆಯಾಯಿತು. ಮಹಾದೇವ್‌ರವರು ಬರೆಯುತ್ತಿದ್ದ ದಿನಚರಿಯನ್ನು ಗಾಂಧೀಜಿಯವರ ಅನುಜ್ಞೆಯಂತೆ ಸುಶೀಲಾ ಮುಂದುವರಿಸಿದರು. ಪ್ರತಿದಿನ ಭಗವದ್ಗೀತೆ ಓದುವುದು, ಬೈಬಲ್, ಖುರಾನ್ ಓದುವುದು, ತುಳಸೀ ರಾಮಾಯಣ ಅಥವಾ ವಾಲ್ಮೀಕಿ ರಾಮಾಯಣ ಈ ರೀತಿ ಕ್ರಮವಾದ ಅಧ್ಯಯನ ಸೆರೆಮನೆಯಲ್ಲಿ ಪ್ರಾರಂಭವಾಯಿತು.

ಒಂದು ದಿನ ರಾತ್ರಿ, ಬಾರವರಿಗೆ ಎದೆಯಲ್ಲಿ ಅತಿಯಾದ ನೋವು ಕಾಣಿಸಿತು. ಓಡಾಡುವುದನ್ನು ನಿಲ್ಲಿಸಿ ಕುಳಿತಲ್ಲೇ ಪುಸ್ತಕವನ್ನು ಓದುವುದು, ಚರಕದಲ್ಲಿ ನೂಲು ತೆಗೆಯುವುದು ಇದಿಷ್ಟೇ ಅವರ ಕೆಲಸವಾಯಿತು. ಸುಶೀಲಾರವರಿಗೆ ಈಗ ಕೆಲಸ ಹೆಚ್ಚಿತು. ಬಾಪೂರವರ ಪತ್ರ ವ್ಯವಹಾರ ಮತ್ತು ಬಾರವರ ಯೋಗಕ್ಷೇಮ ಸುಶೀಲಾರವರ ಜವಾಬ್ದಾರಿಯಾಯಿತು. ಮುಂಬಯಿ ಸರ್ಕಾರದೊಡನೆ ಪತ್ರ ವ್ಯವಹಾರ ನಡೆಸಿ ಮಹಾತ್ಮರು ಪ್ಯಾರೆಲಾಲರನ್ನು ಆರ್ಥರ್‌ರೋಡ್ ಜೈಲಿನಿಂದ ಆಗಾಖಾನ್ ಜೈಲಿಗೆ ಬರಮಾಡಿಕೊಂಡರು. ಪ್ಯಾರೆಲಾಲ್ ಮಹಾತ್ಮರ ಕಾರ್ಯದರ್ಶಿಯಾದರು.

ಬಾರವರಿಗೆ ಈ ಬಂಧನ ಬಹಳ ತಾಪದಾಯಕವಾಯಿತು. ಮನೋವ್ಯಾಕುಲತೆಯ ಜೊತೆಗೆ ಶರೀರದ ಕಾಯಿಲೆಯೂ ವೃದ್ಧಿಯಾಯಿತು. ಅವರಿಗೆ ಶ್ವಾಸನಾಳ ಊದಿರುವುದು, ಕಫಕಟ್ಟಿ ಉಸಿರಾಡಲು ತೊಂದರೆ, ಎದೆ ನೋವು ಇದೆಲ್ಲ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ವನ್ನೂ ಡಾಕ್ಟರ್ ಸುಶೀಲಾ ಚೆನ್ನಾಗಿ ಬಲ್ಲರು. ಜೈಲಿನ ಡಾಕ್ಟರ್ ಮತ್ತೇನೋ ಕಾಯಿಲೆಯೆಂದು ಬರೆದಿಟ್ಟು ಹೋದುದನ್ನು ಕಂಡು ಸುಶೀಲಾ ವ್ಯಥೆಪಟ್ಟರು. ಅವರಿಗೆ ಆಶ್ಚರ್ಯವೂ ಆಯಿತು. ಡಾಕ್ಟರ್ ಬಂದು ನೋಡಿ ಹೇಳಿದ ಮೇಲೆಯೇ ತಾನು ರೋಗಿ, ಮಲಗಬೇಕೆಂಬುದು ಬಾರವರಿಗೆ ತಿಳಿಯಿತು. ಬಾಪೂ ಜೈಲಿನಲ್ಲಿ ಎಂಟು ದಿನಗಳು ಉಪವಾಸ ಮಾಡಿದಾಗ ಬಾರವರು ಮತ್ತಷ್ಟು ಕೊರಗಿ ಕೃಶ ರಾದರು. ಸಂಜೆ ಕೂರಲೂ ಶಕ್ತಿ ಇಲ್ಲದಂತಾಗಿದ್ದ ಬಾಪೂರವರನ್ನು ಸುಶೀಲಾ ನಿಧಾನವಾಗಿ ಉಪಚಾರ ಮಾಡಿ ಹಣ್ಣಿನ ರಸವನ್ನು ಕುಡಿಸಿ ಜೀವಕಳೆ ಬರುವಂತೆ ಮಾಡಿದರು

ಈ ಕಡೆ ಬಾರವರನ್ನು ಸುಶೀಲಾ ಸಂತೋಷಪಡಿಸುತ್ತಿದ್ದರು. ಪ್ಯಾರೇ ಲಾಲರು ಮನು ಜೊತೆ (ಗಾಂಧೀಜಿ ಮೊಮ್ಮಗಳು) ಹಗ್ಗದಾಟ ಆಡಿ ಮನರಂಜನೆ ಮಾಡಿ ಬಾ ಮತ್ತು ಬಾಪೂರವರನ್ನು ನಗಿಸುತ್ತಿದ್ದರು.

ಬಾಪೂರವರ ೭೫ನೆಯ ಜನ್ಮದಿನೋತ್ಸವವೂ ಜೈಲಿನಲ್ಲೇ ನಡೆಯಿತು. ಬಾ ರವರು ಖೈದಿಗಳಿಗೆಲ್ಲಾ ತಮ್ಮ ಕೈಯಿಂದ ಹಣ್ಣು ಮಿಠಾಯಿ ಹಂಚಿದರು. ಈ ಸಂದರ್ಭದಲ್ಲಿ ಬಾಪೂರವರನ್ನು ನೋಡಿ ನಮಸ್ಕರಿಸಿ ಹೋಗಲು ಆಗಂತುಕರು ಬಂದಿದ್ದಾರೆಂದೂ ಅನುಮತಿ ಕೊಡಬೇಕೆಂದೂ ಬಾಪೂರವರನ್ನು ಕೇಳಲು ಬಾಪೂ ಒಪ್ಪಿದರು. ಕ್ರಿಶ್ಚಿಯನ್ ಪಾದರಿಯೊಬ್ಬರು, ಸಿಖ್ ಸರದಾರರೊಬ್ಬರು, ಪಠಾಣರು, ಪಾರ್ಸಿ ಹುಡುಗಿ ಇಷ್ಟು ಜನರೂ ಬಂದು ಮಹಾತ್ಮರಿಗೆ ನಮಿಸಿ ನಿಂತರು. ಇವರೆಲ್ಲಾ ಒಳಗೆ ಪ್ರವೇಶಿಸಲು ಬ್ರಿಟಿಷ್ ಸರ್ಕಾರ ಅನುಮತಿ ನೀಡಿದುದು ಬಾ ಮತ್ತು ಬಾಪೂಗೆ ಆಶ್ಚರ್ಯ.

ಬಾಪೂಜಿ ಎಲ್ಲರನ್ನೂ ಒಮ್ಮೆ ದೃಷ್ಟಿಸಿ ನೋಡಿದರು. ಸಿಖ್ ವೇಷದಲ್ಲಿದ್ದ ಮೀರಾಬಹನ್, ಕ್ರಿಶ್ಚಿಯನ್ ವೇಷ ಹಾಕಿದ್ದ ಸುಶೀಲಾ, ಪಠಾಣರ ವೇಷದ ಪ್ಯಾರೆ ಲಾಲ್, ಪಾರ್ಸಿ ಹುಡುಗಿಯ ಡ್ರೆಸ್‌ನಲ್ಲಿದ್ದ ಮನು–ಎಲ್ಲರನ್ನೂ ಗುರ್ತಿಸಿ ಬಾಪೂಜಿ ಎಲ್ಲರಿಗೂ ಬೆನ್ನ ಮೇಲೆ ಪ್ರೀತಿಯಿಂದ ಏಟನ್ನು ಕೊಟ್ಟು ಅವರ ತಮಾಷೆಯನ್ನು ಅಂಗೀಕರಿಸಿದರು. ಜೈಲಿನ ಕಾವಲುಗಾರನಿಗೆ ಇವರೆಲ್ಲಾ ಒಳಗೆ ಹೇಗೆ ಬಂದರೆಂದು ವಿಸ್ಮಯವೂ ಆಗಿದ್ದಿರಬಹುದು. ಕೆಟಲಿಯವರ ಸಹಾಯದಿಂದ ಈ ಫ್ಯಾನ್ಸಿ ಡ್ರೆಸ್ ಸಾಧ್ಯವಾಗಿತ್ತು.

ಜೈಲಿನಲ್ಲಿ ಎಷ್ಟೇ ಸಂತೋಷದ ವಾತಾವರಣವನ್ನು ಸೃಷ್ಟಿಸಿ ಸುಶೀಲಾ ನೋಡಿ ಕೊಳ್ಳುತ್ತಿದ್ದರೂ, ಬಾರವರ ಕಾಯಿಲೆ ಹೆಚ್ಚುತ್ತಾ ಬಂತು. ಆರಾಮವಾಗಿ ಮಲಗಲೂ ದುಸ್ತರವಾಯಿತು. ಉಸಿರಾಡಲು ಆಮ್ಲಜನಕ ತರಿಸಿಕೊಡಲಾಯಿತು. ಸುಶೀಲಾರವರ ಜೊತೆಗೆ ಬಾರವರ ಉಪಚಾರಕ್ಕೆ ಜಯಪ್ರಕಾಶ್ ನಾರಾಯಣ್‌ರವರ ಪತ್ನಿ ಪ್ರಭಾವತಿದೇವಿಯನ್ನು ಮಹಾತ್ಮರ ಇಚ್ಛೆಯಂತೆ ಕರೆಯಿಸಿಕೊಳ್ಳಲಾಯ್ತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ತಮ್ಮ ಅಂತ್ಯಕಾಲ ಸಮೀಪಿಸಿತೆಂದು ನಿರ್ಧಾರ ಮಾಡಿಕೊಂಡ ಕಸ್ತೂರಬಾ ತನಗೆ ಬೇಕಾದ ನೆಂಟರಿಷ್ಟರನ್ನೂ ದೇಶಭಕ್ತರನ್ನೂ ನೋಡಬೇಕೆಂದು ಹಂಬಲಿಸಿದರು. ಅವರ ಅಭೀಷ್ಟೆಯಂತೆಯೇ ಸರ್ಕಾರ ಬಾರವರನ್ನು ನೋಡಲು ಕೆಲವರಿಗೆ ಪರವಾನಗಿ ಕೊಟ್ಟಿತು.

ರಾತ್ರಿ ಡ್ಯೂಟಿಗೆ ನರ್ಸ್ ಬೇಕೆಂದು ಎಷ್ಟು ಕೇಳಿಕೊಂಡರೂ ಸರ್ಕಾರ ಮಣೆಯು ಲಿಲ್ಲ. ಡಾಕ್ಟರ್ ಸುಶೀಲಾ ಮತ್ತು ಪ್ರಭಾವತಿದೇವಿ ಇಬ್ಬರೇ ಪೂರ್ಣ ಶುಶ್ರೂಷೆ ಮಾಡಿದರು. ತಮಗೆ ಬೇಕಾದ ಡಾಕ್ಟರನ್ನು ಕರೆಯಿಸಿಕೊಳ್ಳುವಂತಿಲ್ಲ, ಬೇಕಾದ ಔಷಧಿ ಸಿಗುವುದಿಲ್ಲವೆಂದು ಸುಶೀಲಾ ಕೊರಗಿದರು. ರೋಗಿಯ ಜೀವದ ಸಂಗಡ ಸರ್ಕಾರ ಸರಸವಾಡುತ್ತಿದೆಯೆಂದು ಗಾಂಧೀಜಿ ಟೀಕಿಸಿದರು, ದುಃಖಿಸಿದರು. ಸುಶೀಲಾ ರವರೇ ಬಾರವರನ್ನು ನೋಡಿಕೊಳ್ಳಲೆಂದು ಬಾಪೂ ತೀರ್ಮಾನಿಸಿದರು.

ಔಷಧಿಯನ್ನು ನಿಲ್ಲಿಸಬೇಕೆಂದೂ ರಾಮನಾಮವೇ ಔಷಧಿಯೆಂದೂ ಬಾರವರು ಕೇಳಿಕೊಂಡಾಗ ಅದರಂತೆಯೇ ಸುಶೀಲಾ, ಪ್ರಭಾವತಿದೇವಿ, ಬಾಪೂ, ಮನು ಮತ್ತು ಪ್ಯಾರೆಲಾಲ್ ಸರದಿಯಂತೆ ಬಾರವರ ಬಳಿ ಕುಳಿತು ರಾಮಸಂಕೀರ್ತನೆ ಹೇಳು ತ್ತಿದ್ದರು. ದಿನೇದಿನೇ ಶಕ್ತಿಹೀನವಾದಾಗ ಸುಶೀಲಾ ರಾತ್ರಿ ವೇಳೆಯೂ ಬಾರವರನ್ನು ಬಿಟ್ಟು ಕದಲಲಿಲ್ಲ.

"ಸುಶೀಲಾ ನಿನಗೆ ತುಂಬಾ ಕಷ್ಟ ಕೊಡುತ್ತಿದ್ದೇನೆ" ಎಂದು ಬಾರವರು ಆಗಾಗ ಹೇಳುತ್ತಿದ್ದರು. ಜ್ಞಾನಾಜ್ಞಾನವಾಗಿ ಮಾತಾಡಲು ಪ್ರಾರಂಭಿಸಿದರು. ಅಂದು ಮಹಾಶಿವರಾತ್ರಿ ನನ್ನನ್ನು ಮನೆಗೆ ಕರೆದುಕೊಂಡು ಹೋಗೆಂದು ಸುಶೀಲಾರವರನ್ನು ಕೇಳಿಕೊಂಡರು. "ಇದೇ ಮನೆ, ರಾಮದೇವರ ಚಿತ್ರ ನೋಡಿ" ಎಂದು ಸುಶೀಲಾ ಸಮಾಧಾನಪಡಿಸಿ ಬಾರವರನ್ನು ಸುಧಾರಿಸುತ್ತಾ ಎಲ್ಲರೂ ರಾಮಭಜನೆ ಮಾಡು ತ್ತಿರುವಾಗ ಅದನ್ನು ಆಲಿಸುತ್ತಾ ಬಾರವರ ಉಸಿರು ನಿಂತುಹೋಯಿತು. ಭಗವಂತನ ಸಾನ್ನಿಧ್ಯಕ್ಕೆ ಸೇರಿತು. ತಾಯಿಯನ್ನು ಕಳೆದುಕೊಂಡಂತೆ ಸುಶೀಲಾ ದುಃಖಿಸಿದರು.

ರಾಷ್ಟ್ರಮಾತೆ ಬಾರವರೊಂದಿಗೆ ಕೊನೆಯವರೆಗೂ ಇದ್ದು ಸೇವೆ ಮಾಡಿದ ಸುಶೀಲಾ ನಯ್ಯಾರ್ ಧನ್ಯರು !

ಬಾರವರ ಆತ್ಮಶಾಂತಿಗಾಗಿ ಸುಶೀಲಾ ಇಂದಿಗೂ ಅವರ ಹೆಸರಿನಲ್ಲಿ ಸ್ಮಾರಕ ಸಂಸ್ಥೆಯನ್ನು ನಡೆಸುತ್ತಿದ್ದಾರೆ. ಸೇವಾ ಗ್ರಾಮದ ಬಳಿ ವಾರ್ಧಾದಲ್ಲಿ ಕಸ್ತೂರಬಾ ಆಸ್ಪತ್ರೆ ಸ್ಥಾಪಿತವಾಯಿತು. ಈ ಆಸ್ಪತ್ರೆಯ ಮೇಲ್ವಿಚಾರಕರಾಗಿ ಸುಶೀಲಾ ನಯ್ಯಾರ್ ಸೇವೆ ಸಲ್ಲಿಸುತ್ತಿದ್ದಾರೆ.

ಕಸ್ತೂರಬಾ ಸ್ಮರಣೆಯೇ ಸುಶೀಲಾರವರ ಜೀವನಾಡಿಯಾಗಿದೆ. ಬಾರವರ ಸಂದೇಶದಂತೆ ದೇಶಸೇವೆ ಮಾಡುತ್ತಿದ್ದಾರೆ, ಬಾರವರ ಧ್ಯೇಯದಂತೆ ಭಾರತೀಯ ಹೆಣ್ಣನ್ನು ಉದ್ಧರಿಸುವ ಪಣತೊಟ್ಟಿದ್ದಾರೆ. ಇದಕ್ಕಾಗಿ ಸ್ತ್ರೀ ಸಂಘಟನೆ ನಡೆಸು ತ್ತಿದ್ದಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಬೆಂಗಳೂರಿಗೆ ಅವರನ್ನು ಕರೆಯಿಸಿಕೊಂಡ ಶ್ರೀಮತಿ ಬಿ. ಕೆ. ಸರಸ್ವತಮ್ಮ ನವರಿಗೆ ಧನ್ಯವಾದಗಳನ್ನು ಹೇಳಿದರೆ ಅವರ ಬಗ್ಗೆ ಈ ಸಮಾಜ ಸೇವಕಿ ಹೀಗೆನ್ನುತ್ತಾರೆ, "ಸುಶೀಲಾ ನಯ್ಯಾರ್ ಬಹಳ ಸರಳ ವ್ಯಕ್ತಿ, ಸೇವೆ ಮಾಡುವುದೇ ಅವರ ಜೀವನ ಧ್ಯೇಯವಾಗಿರುವುದರಿಂದ ಎಲ್ಲಿ ಕರೆದರೂ ಬರುತ್ತಾರೆ." "ಬೆಂಗಳೂರಿನಲ್ಲಿ ಬೇಕಾದಷ್ಟು ಸಮಾಜ ಸೇವಿಕೆಯರಿರುವುದು ನನಗೆ ಬಹಳ ಹರ್ಷವಾಗಿದೆ. ಇವರೆಲ್ಲಾ ಇನ್ನೂ ಚಿಕ್ಕವರು. ಸುಟಿಯಾಗಿ ಕೆಲಸ ಮಾಡುವವರು. ಮತ್ತೇನು ! ಕರ್ನಾಟಕ ರಾಜ್ಯದ ಸ್ತ್ರೀಯರು ಖಂಡಿತ ಪ್ರಗತಿಗೆ ಬರುತ್ತಾರೆ ಎಂಬ ಭರವಸೆ ನನಗಿದೆ." ಎಂದಿದ್ದಾರೆ ಸುಶೀಲಾ ನಯ್ಯಾರ್. ಅವರೊಡನೆ ಒಂದು ಹತ್ತು ನಿಮಿಷವಾದರೂ ಕುಳಿತು ಅವರ ಹಿಂದಿನ ಜೀವನದ ಬಗ್ಗೆ ಮಾತಾಡಲು ಬಿಡುವಿಲ್ಲದಂತೆ ಅವರು ತೊಡಗಿರುವ ಸೇವಾ ಕಾರ್ಯದಲ್ಲಿ ಮಗ್ನರಾಗಿದ್ದಾರೆ. ನಾನು ಬರೆದಿರುವ 'ಬಾಪೂಕೀ ಕಾರಾವಾಸ್ ಕಹಾನಿ' ಓದಿ ಎನ್ನುತ್ತಾರೆ" ಎಂದು ಹೇಳಿ ಸರಸ್ವತಮ್ಮನವರು ಅವರು ಕೊಟ್ಟ ಈ ಪುಸ್ತಕವನ್ನು ಪುಣೆಯಿಂದ ತಂದುಕೊಟ್ಟು ಸುಶೀಲಾರವರ ಬಗ್ಗೆ ಹೆಚ್ಚು ತಿಳಿಯಲು ಸಹಾಯ ಮಾಡಿದ್ದಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

# ಹರಿಜನಪ್ರಿಯೆ ನಾಗಮ್ಮ

## ಸರದಾರ ವೀರನಗೌಡ ಪಾಟೀಲ

ವಿವಿಧ ವಿದ್ಯಾ ಸಂಸ್ಥೆಗಳಿಂದ ಶೋಭಿಸುತ್ತಿರುವ ಹುಬ್ಬಳ್ಳಿಯ ವಿದ್ಯಾನಗರವು ಹೆಸರಿಗೆ ತಕ್ಕಂತೆ ವಿದ್ಯಾಕೇಂದ್ರವೇ ಆಗಿದೆ. ಇಲ್ಲಿ ಸರ್ಕಾರೀ ವಿದ್ಯಾಲಯಗಳು ಕೆಲವು. ಖಾಸಗೀ ಸಂಸ್ಥೆಗಳು ಕೆಲವು, ಸಮಾಜ ಸೇವಾಕರ್ತರ ವಿದ್ಯಾಪೀಠಗಳು ಕೆಲವು. ಇವುಗಳಲ್ಲಿ ಅತ್ಯಂತ ವಿಸ್ತಾರವಾಗಿದ್ದು ಎಷ್ಟೋ ಎಕರೆಗಳಷ್ಟು ಹಬ್ಬಿರುವ ವಿದ್ಯಾಪೀಠವೊಂದು ನಮ್ಮನ್ನು ಆಕರ್ಷಿಸುತ್ತದೆ.

ತೋಟಗಳ ಮತ್ತು ಹುಲ್ಲು ಮೆದೆಗಳ ಮಧ್ಯೆ ಈ ವಿದ್ಯಾಪೀಠದ ಕಾರ್ಯಾಲಯಗಳೆಂದು ಸ್ಪಷ್ಟವಾಗುವ ಹಳೆಯಕಾಲದ ಬೃಹತ್ ಕಟ್ಟಡಗಳಿವೆ. ಈ ಕಟ್ಟಡಗಳಲ್ಲಿ ಮಹಾ ವಿದ್ಯಾಪೀಠದ ಜವಾಬ್ದಾರಿಯನ್ನು ಹೊತ್ತಿರುವವರಿಗಾಗಿ ನೆಲೆಯೊಂದು, ಶಾಲಾಕೊಠಡಿಗಳ ಗುಚ್ಛವೊಂದು, ಓದುವ ಮಕ್ಕಳಿಗಾಗಿ ಸಾಲುಸಾಲಾಗಿ ಕೊಠಡಿಗಳೂ ಉಪ್ಪರಿಗೆಗಳೂ ಇರುವ ವಸತಿ ಗೃಹವೊಂದು, ಶಿಕ್ಷಕ ತರಬೇತಿ ಕೇಂದ್ರವೊಂದು, ಶಿಶುವಿಹಾರವೊಂದು, ಸಂಸ್ಕೃತಿಯ ಸದನವೊಂದು, ಕುರುಡರ ಶಾಲೆಯೊಂದು, ಪುರಾತನ ದೇಗುಲದಂತಿರುವ ಪ್ರಾರ್ಥನಾ ಮಂದಿರವೊಂದು—ಇಷ್ಟೆಲ್ಲಾ ಕಟ್ಟಡಗಳು ಒಳ ಆವರಣದಲ್ಲಿ ಅತ್ಯಂತ ವಿಶಾಲವಾಗಿ ವಿರಳವಾಗಿ ಕಾಣುತ್ತವೆ. ಒಳ ಆವರಣದಲ್ಲಿಯೇ ಸ್ವತಂತ್ರವಾಗಿಬಿಟ್ಟಿರುವ ಬಯಲು ಪ್ರದೇಶವು ಬಹು ವಿಸ್ತೀರ್ಣವುಳ್ಳದಾಗಿದ್ದು ಕಣ್ಣು ಹಾಯಿಸುವಷ್ಟು ದೂರದವರೆಗೂ ಕಾಣಿಸುತ್ತದೆ.

ಈ ವಿದ್ಯಾಪೀಠದ ಪವಿತ್ರತೆ ಎಷ್ಟಿದೆಯೆಂದು ಅಳೆಯಬಹುದೆನ್ನುವಂತೆ ಇಲ್ಲಿಯ ಪ್ರತಿಯೊಂದು ವಿಭಾಗದ ಪ್ರಾರಂಭೋತ್ಸವವೂ ರಾಷ್ಟ್ರದ ಅಸಾಧಾರಣ ನಾಯಕರಿಂದಲೇ ನಡೆದಿದೆ. ಪ್ರಾರ್ಥನಾಮಂದಿರದ ಅಡಿಗಲ್ಲಿಡುವ ಸಮಾರಂಭವನ್ನು ರಾಷ್ಟ್ರಾಧ್ಯಕ್ಷರಾಗಿದ್ದ ಡಾ॥ ಬಾಬು ರಾಜೇಂದ್ರಪ್ರಸಾದರು ನೆರವೇರಿಸಿರುವರು. ಇಲ್ಲಿಯ ಜನರಲ್ ಹಾಸ್ಪಟಲ್‌ನ ಅಸ್ತಿಭಾರವನ್ನು ಪ್ರಧಾನಿಯಾಗಿದ್ದ ಶ್ರೀಮತಿ ಇಂದಿರಾ ಗಾಂಧಿಯವರು ಹಾಕಿದ್ದಾರೆ. ಈ ವಸತಿಗೃಹವನ್ನು ಪಂಡಿತ ಜವಹರಲಾಲರು "ಕಸ್ತೂರಿಬಾ ಬಾಲಿಕಾಶ್ರಮ"ವೆಂದು ಕರೆದರು. ಶ್ರೀ ಮೊರಾರ್ಜಿ ದೇಸಾಯಿ ದಂಪತಿಗಳ ಸಲಹೆ ಮತ್ತು ಸೇವೆಯನ್ನು ಸಂಸ್ಕೃತಿ ಮತ್ತು ಕುಶಲಕಲೆಯ ಸದನವು ಪಡೆದಿದೆ. ವಿನೋಬಾ ಭಾವೆಯವರು ಕರ್ನಾಟಕ ಪ್ರವಾಸ ಕೈಗೊಂಡಾಗ ಇಲ್ಲಿಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ತರಬೇತಿ ಕೇಂದ್ರದಲ್ಲಿ ಎರಡು ದಿನಗಳಿದ್ದು ಈ ಕೇಂದ್ರಕ್ಕೆ ಅಕ್ಕಮಹಾದೇವಿ ಟ್ರೈನಿಂಗ್ ಕಾಲೇಜೆಂದು ನಾಮಕರಣ ಮಾಡಿರುವರು. ಶಿಶುವಿಹಾರದ ಪ್ರಾರಂಭೋತ್ಸವವನ್ನು ಅಂದಿನ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಶ್ರೀ ಸಂಜೀವಯ್ಯನವರು ಮಾಡಿರುವರು.

"ಈ ಸಂಸ್ಥೆಗಳು ಊರ್ಜಿತಾವಸ್ಥೆಯಲ್ಲಿವೆ. ಈ ಸಂಸ್ಥೆಗಳಿಗೆ ಅನೇಕ ಮಹನೀಯರ ಆಶೀರ್ವಾದವಿದೆ" ಎನ್ನುತ್ತಾರೆ ಕರಮರಕರ ದಂಪತಿಗಳು.

೧೯೫೫ರಲ್ಲೇ ಜವಹರಲಾಲ ನೆಹರೂರವರಿಂದ "ಮಹಿಳಾ ವಿದ್ಯಾಪೀಠ"ವೆಂದು ಕರೆಯಲ್ಪಟ್ಟು ಅನೇಕ ಪರಮ ಪೂಜ್ಯರಿಂದ ಪ್ರಾರಂಭಿಸಿ ಪ್ರಕಾಶಿಸುತ್ತಾ ಪುರೋಭಿವೃದ್ಧಿ ಪದವಿಗೇರಿರುವ ಈ ವಿದ್ಯಾಪೀಠವು ಈಗ ಅರ್ಧ ಶತಮಾನದ ಹಿಂದೆ ಪ್ರಾರಂಭವಾದಾಗ ಕಟ್ಟಡದ ಸ್ವರೂಪ ಹೇಗಿತ್ತೋ ಈಗಲೂ ಅದೇ ರೀತಿ ಇದೆ. ಆಧುನಿಕ ಅಂದಚೆಂದವಾಗಲೀ, ಸುಣ್ಣ ಬಣ್ಣವಾಗಲೀ ಕಾಣಿಸುವುದಿಲ್ಲ.

"ನಮ್ಮಲ್ಲಿಗೆ ಬರುವ ಮಕ್ಕಳಿಗೆಲ್ಲಾ ಅನ್ನ ಬಟ್ಟೆ ಕೊಟ್ಟು ಸಾಕುವುದೇ ನಮಗೆ ಸಾಕು. ಇದ್ದದ್ದೆಲ್ಲಾ ಇದಕ್ಕೆ ಸಾಲದು, ಭಾರೀ ಕಟ್ಟಡವನ್ನು ಹೊಸತು ಮಾಡಲು ಮತ್ತು ಅರ್ಧಕಟ್ಟಿರುವ ಪ್ರಾರ್ಥನಾ ಮಂದಿರವನ್ನು ಪೂರ್ಣ ಮಾಡಲು ರೊಕ್ಕ ಕೊಡುವವರಾರು ?" ಎನ್ನುತ್ತಾರೆ ಇಲ್ಲಿಯ ಒಡತಿ ಶ್ರೀಮತಿ ನಾಗಮ್ಮ.

ಬೃಹದಾಕಾರದ ಸಂಸ್ಥೆಗಳನ್ನೊಳಗೊಂಡ ಈ ಶಿಕ್ಷಣ ಕೇಂದ್ರದ ಪ್ರತಿಯೊಂದು ಭಾಗವನ್ನೂ ತೋರಿಸಿ. ಯಾವಾಗ ಏತಕ್ಕಾಗಿ ನಿರ್ಮಾಣವಾಯಿತೆಂದು ಹೇಳುತ್ತಾ ನಾಗಮ್ಮ ಪರಿಚಯ ಮಾಡಿಕೊಡುತ್ತಾರೆ. ಈ ಎಲ್ಲಾ ಕಾರ್ಯಕಾರೀ ವಿಭಾಗಗಳನ್ನೂ ನೋಡಿ ಸುತ್ತಿ ಬರುವ ವೇಳೆಗೆ ನಮ್ಮ ಕಾಲುಗಳು ಸೋತಿರುತ್ತವೆ. ಹಿಂದಿನವರ ಮನಸ್ಸು ಎಷ್ಟು ವಿಶಾಲವಾಗಿತ್ತೋ ಹಾಗೆಯೇ ಕಟ್ಟಡಗಳೂ ವಿಶಾಲವಾಗಿ ಕಟ್ಟಲಾಗಿದೆ. ಇಲ್ಲಿಗೆ ಬರುವ ವಿದ್ಯಾರ್ಥಿಗಳು ಧನ್ಯರೆನ್ನಿಸುತ್ತದೆ. ತಾಯಿಯ ಮಮತೆಯನ್ನು ಕೊಡುವ ನಾಗಮ್ಮನವರು. ವಿದ್ಯಾಪೀಠದ ಪ್ರಗತಿಗಾಗಿ ಸದಾ ಶ್ರಮಿಸುತ್ತಾ ಸಹಕರಿಸುತ್ತಿರುವ ಅವರ ಪುತ್ರಿ ಲೀಲಾವತಿ ಮಾಗಡಿಯವರು, ಮಕ್ಕಳ ವಸತಿ ಸೌಕರ್ಯ ಊಟ ಉಪಚಾರವನ್ನು ಗಮನಿಸಿ ನಿಸ್ವಾರ್ಥಿಯಾಗಿ ದುಡಿಯುತ್ತಿರುವ ಶ್ರೀಮತಿ ಲೀಲಾಪೀಟರ್ಸ್—ಈ ಮೂವರು ಮಹಾ ಮಹಿಳೆಯರ ಬಳಿ ಬೆಳೆಯುವ ಈ ಮಕ್ಕಳು ಭಾಗ್ಯಶಾಲಿಗಳೆನ್ನಿಸುತ್ತದೆ.

ಇಬ್ಬರು ಹರಿಜನ ಹುಡುಗಿಯರನ್ನು ತಂದು ಸಾಕುವುದರಿಂದ ಪ್ರಾರಂಭವಾದ ಶಾಲೆ ಇದು.

ದೇಶಭಕ್ತರಾದ ವೀರಣಗೌಡರು ಸ್ವಾತಂತ್ರ್ಯ ಚಳವಳಿಯಲ್ಲಿ ತಮಗೆ ಕೆಲಸವನ್ನು ವಹಿಸಬೇಕೆಂದು ಮಹಾತ್ಮಾಜಿಯವರನ್ನು ಕೇಳಲು—

"ಇದೂ ಸ್ವಾತಂತ್ರ್ಯ ಚಳವಳಿಯೇ. ಅಸ್ಪೃಶ್ಯತೆಯು ದೇಶದ ಸ್ವಾತಂತ್ರ್ಯಕ್ಕೆ ಅಡ್ಡಿ ತಂದಿದೆ. ನಮ್ಮ ಸಮಾಜದಲ್ಲಿ ಈ ಕೆಟ್ಟ ಭಾವನೆ ತೊಲಗುವವರೆಗೂ ನಾವು ಸ್ವತಂತ್ರರಾಗಲು ಸಾಧ್ಯವಿಲ್ಲ, ಅಸ್ಪೃಶ್ಯತಾ ನಿವಾರಣೆಯು ಸ್ವಾತಂತ್ರ್ಯ ಚಳವಳಿಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಮುಖ್ಯ ಕೆಲಸವೇ ಅಲ್ಲವೇ ?"—ಎಂದು ಹೇಳಿದ ಮಹಾತ್ಮರ ಆದೇಶ ವೀರನಗೌಡರಿಗೆ ಆತ್ಮತೃಪ್ತಿ ಕೊಟ್ಟಿತು. ಈ ಕೆಲಸದ ಪೂರ್ಣ ಜವಾಬ್ದಾರಿಯನ್ನು ಪತ್ನಿ ನಾಗಮ್ಮನವರಿಗೆ ವಹಿಸಿಕೊಟ್ಟರು.

"ನಾನು ಕಲಿತವಳಲ್ಲ. ನಾನೇನು ಮಾಡಬಲ್ಲೆ ?" ಎಂದು ನಾಗಮ್ಮನವರು ಯೋಚಿಸಿದಾಗ ಮಹಾತ್ಮಾಜಿಯವರು ಅತಿ ಸರಳ ಸುಲಭ ಯೋಜನೆಯನ್ನು ಹಾಕಿಕೊಟ್ಟರು ಎನ್ನುತ್ತಾರೆ ನಾಗಮ್ಮನವರು.

"ಒಂದೆರಡು ಹರಿಜನ ಮಕ್ಕಳನ್ನು ಮನೆಯಲ್ಲಿ ತಂದಿಟ್ಟುಕೊ. ಅವರನ್ನು ಮಕ್ಕಳಂತೆ ನೋಡು. ಅವರಿಗೆ ತಲೆಬಾಚಿ ಸ್ನಾನ ಮಾಡಿಸು, ಇದು ಬರುವುದಿಲ್ಲವೇ ?" ಎಂದರಂತೆ. ಮಹಾತ್ಮರ ಈ ಯೋಜನೆಯ ಪ್ರತಿಫಲವೇ ಕೇವಲ ಇಬ್ಬರು ಹರಿಜನ ಮಕ್ಕಳಿಂದ ಬಾಲಿಕಾಶ್ರಮವು ಹುಬ್ಬಳ್ಳಿಯಲ್ಲಿ ೧೯೩೪ರಲ್ಲಿ ನಾಗಮ್ಮನವರ ಮನೆಯಲ್ಲಿ ಪ್ರಾರಂಭವಾಯಿತು. ಮುಂದೆ ಇದೇ ಈಗಿರುವ ಮಹಿಳಾ ವಿದ್ಯಾಪೀಠವಾಗಿರುವುದು.

"ಮಹಾತ್ಮಾ ಗಾಂಧೀ ಅವರು ಹರಿಜನೋದ್ಧಾರ ಹಾಗೂ ಸ್ತ್ರೀ ಕುಲದ ಏಳ್ಗೆಗಾಗಿ ದುಡಿದು ಭಾರತೀಯರಿಗೆ ಮಾರ್ಗದರ್ಶಿಗಳಾದರು...ಈ ಎರಡು ಕ್ಷೇತ್ರಗಳಲ್ಲೂ ಸತತ ಸೇವೆ ಮಾಡಿರುವವರಲ್ಲಿ ಶ್ರೀ ಪಾಟೀಲ ವೀರನಗೌಡರು ಮತ್ತು ಅವರ ಧರ್ಮಪತ್ನಿ ಶ್ರೀಮತಿ ನಾಗಮ್ಮ ತೋರಿಸಿದ ನಿಷ್ಠೆ, ಮಾಡಿದ ತ್ಯಾಗ ಪ್ರಶಂಸನೀಯ. ಅನುಕರಣೀಯ...ಈ ಸೇವೆಗೆ ಖಾಯಂ ಸ್ವರೂಪಕೊಡುವುದಕ್ಕಾಗಿ ಸಂಸ್ಥೆಗಳನ್ನು ಕಟ್ಟಿದರು. ಜೀವಮಾನದಲ್ಲೆಲ್ಲಾ ಆ ಸಂಸ್ಥೆಗಳ ಸ್ಥಿರೀಕರಣಕ್ಕಾಗಿ ಹಗಲಿರುಳು ಪ್ರಯತ್ನಪಟ್ಟು ಅವುಗಳನ್ನು ಭದ್ರ ಮಾಡಿದರು. ಈ ಎಲ್ಲ ವಿಷಯಗಳನ್ನೂ ಆಧುನಿಕ ತರುಣ ತರುಣಿಯರು ಕೇಳಿ, ನೋಡಿ, ಹೊಸ ಸ್ಫೂರ್ತಿಯನ್ನು ಪಡೆದು ಶ್ರೀ ಪಾಟೀಲ ವೀರನಗೌಡ ಹಾಗೂ ಅವರಿಗೆ ಜೊತೆಗಾರ್ತಿಯಾಗಿ ದುಡಿದ ಶ್ರೀಮತಿ ನಾಗಮ್ಮನವರ ಕಾರ್ಯವನ್ನು ಮುಂದುವರಿಸಲು ಸಿದ್ಧರಾಗಬೇಕು " ಎನ್ನುತ್ತಾರೆ ಡಾ॥ ರಂಗನಾಥ ದಿವಾಕರರು.

ವಿದ್ಯಾರ್ಥಿಯಾಗಿದ್ದಾಗ ವೀರನಗೌಡರು ಒಂದು ಸಲ ಶೈಕ್ಷಣಿಕ ಪ್ರವಾಸ ಹೊರಟಾಗ ಸಬರಮತಿ ಆಶ್ರಮದ ಸಂದರ್ಶನವಾಯಿತು. ಆಂಗ್ಲ ಭೂಷಣವನು ಹಾಕಿಕೊಂಡಿದ್ದ ಈ ವಿದ್ಯಾರ್ಥಿಗಳು ಗಾಂಧೀಜಿಯವರ ಸರಳ ಉಡುಪು, ಸರಳ ಜೀವನ, ನಡೆ ನುಡಿ ನೋಡೋಣವೆಂದು ನಿರ್ಧರಿಸಿ, ದೃಢವಾಗಿ ಈ ಕಾರ್ಯಕ್ಕೆ ಕೈ ಹಾಕಿದರು. ಅವರಲ್ಲಿ ಮೂಡಿದ ವಿಶ್ವಾಸ ನನಗೂ ಸ್ಫೂರ್ತಿ ತಂದಿತು. ಸಪತ್ನೀಕನಾಗಿ ಈ ಕಾರ್ಯ ಮಾಡುವ ಭಾಗ್ಯ ನನ್ನದಾಗಿ ನಾವು ಆಶ್ರಮ ಸ್ಥಾಪಿಸಲು ಉದ್ಯುಕ್ತರಾದೆವು. ಹುಕ್ಕೇರಿ ತಾಲ್ಲೂಕಿನ ಹರಿಜನ ಹುಡುಗಿ ಮಥುರಾ ಮತ್ತು ಅವಳ ಜೊತೆ ಬಂದ ತಾರಾ ಈ ಇಬ್ಬರು ಬಾಲಿಕೆಯರಿಂದ ಹುಬ್ಬಳ್ಳಿಯ ನಮ್ಮ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಬಾಲಿಕಾಶ್ರಮ ೧೯೩೩ರಲ್ಲಿ ಪ್ರಾರಂಭವಾಯಿತು. ಇಂಥ ಆಶ್ರಮ ಸ್ಥಾಪನೆ ಯಾದುದು ವಾರ್ಧಾದಲ್ಲಿ ಮೊದಲು ಅನಂತರ ಕರ್ನಾಟಕದಲ್ಲಿ. ಇಡೀ ಭಾರತದಲ್ಲಿ ಎರಡನೆಯದಾದುದು ಹುಬ್ಬಳ್ಳಿಯದೇ."

ಸರದಾರ ವೀರನಗೌಡರ ಈ ಮಾತುಗಳನ್ನು ನೆನೆಸಿಕೊಂಡು ಹೇಳಿದ ನಾಗಮ್ಮ ನವರ ಅನುಭವವನ್ನು ಕೇಳಿ—

"ನಮಗೆ ಮಾನಸಿಕ ಹಿಂಸೆ ಇದ್ದೇ ಇತ್ತು. ಸಮಾಜದ ಸಂಪರ್ಕವನ್ನು ಕಳೆದುಕೊಂಡೆವು. ನನ್ನ ಅತ್ತೆಯವರು ಹಿಂದಿನ ಸಂಪ್ರದಾಯಸ್ಥರು. ಬಹಳ ಜೋರಿದ್ದ ಇರುತ್ತಿದ್ದವರು. ಮಹಾ ಶೀಲವಂತರು. ಬಂದು ಹೋಗುವವರಿಗೆಲ್ಲಾ ನಮ್ಮ ಮನೆ ಛತ್ರದಂತಿತ್ತು. ಸ್ವಾತಂತ್ರ್ಯ ಹೋರಾಟಗಾರರು ನನ್ನ ಗಂಡನೊಡನೆ ಮಾತಾಡಲು ಅದೆಷ್ಟುಮಂದಿ ಬರುತ್ತಿದ್ದರೆಂದು ಹೇಳಲಾಗುವುದಿಲ್ಲ. ಅವರಿಗೆಲ್ಲಾ ಅಡಿಗೆಯವಳು ನಾನೇ. ಬೀಸುವುದಕ್ಕೆ, ಕುಟ್ಟುವುದಕ್ಕೆ ಹರಿಜನ ಹುಡುಗಿಯರ ಸಹಾಯ ತೆಗೆದುಕೊಳ್ಳುವುದಕ್ಕೂ ಆಶ್ರಮದವರ ಆಕ್ಷೇಪಣೆ ಇತ್ತು. ನಾನೆಷ್ಟು ಅನುಸರಿಸಿಕೊಂಡು ಹೋದರೂ ನನ್ನ ಅತ್ತೆಯವರಿಗೆ ನಮ್ಮ ಜೀವನ ಸರಿಬೀಳಲಿಲ್ಲ... ಮನೆಯ ಸಮಸ್ಯೆ ಇಷ್ಟಾದರೆ, ಹೊರಗಿನ ನಮ್ಮ ನೆಲೆಯ ಪರಿಸ್ಥಿತಿ ಹೇಗಿತ್ತು ಗೊತ್ತೆ?.... ನಮ್ಮ ನೆಂಟರಿಷ್ಟರು ನಮ್ಮನ್ನು ಮದುವೆಗೆ ಕರೆಯುತ್ತಿರಲಿಲ್ಲ. ನಮ್ಮಿಂದ ಅಕ್ಕಿ ಕಾಳು ಹಾಕಿಸಿಕೊಳ್ಳುತ್ತಿರಲಿಲ್ಲ. ಕೆಲವೊಮ್ಮೆ ನಮಗೆ ಚಿಂತೆಯೂ ಬರದೆ ಇರಲಿಲ್ಲ. ಅದೇನೆಂದರೆ, ಈ ಹರಿಜನ ಮಕ್ಕಳೊಂದಿಗೆ ಬೆಳೆದ ನಮ್ಮ ಮಕ್ಕಳ ಮುಂದಿನ ಪಾಡೇನು? ನಮ್ಮಿಬ್ಬರ ಸಾಮಾಜಿಕ ಗೌರವದ ವಿಷಯ ಹೇಗೆ? ಈ ಕಾರ್ಯದಿಂದ ವಿಮುಖರಾಗೋಣವೇ ಎಂಬ ಮನೋದೌರ್ಬಲ್ಯ ನಮ್ಮಿಬ್ಬರನ್ನೂ ಕಾಡಿಸಿತ್ತು. ಆದರೆ ಸಂಘದಿಂದ ನಮಗೆ ಬಹಳ ಉತ್ತೇಜನವಿತ್ತು. ಕಾರ್ಯದರ್ಶಿ ಗಳಾದ ಕೆ. ಎಫ್. ಪಾಟೀಲ, ಸೋಮಣ್ಣ, ತೆರಗಾಂವಕರ ಇವರೆಲ್ಲಾ ನಮ್ಮನ್ನು ಸಮಾಧಾನಗೊಳಿಸಿ ಸಹಾಯಕ್ಕೆ ನಿಂತರು. ಕ್ರಿಶ್ಚಿಯನ್ ಮಹಿಳೆ ಲೀಲಾಪೀಟರ್ಸ್ ಸೇವೆ ಮಾಡಲು ನಮ್ಮೊಡನೆ ನಿಂತರು. ಕ್ರಮೇಣ ಹರಿಜನ ಹುಡುಗಿಯರ ಸಂಖ್ಯೆ ಹೆಚ್ಚಿತು. ನೈತಿಕಪಾಠ, ಇತಿಹಾಸ. ಸಾಮಾನ್ಯ ಜ್ಞಾನದ ಪಾಠದಿಂದ ಶಾಲೆಯು ಪ್ರಾರಂಭವಾಯಿತು.

ಮಕ್ಕಳಿಗೆ ಶುಚಿತ್ವ ಕಲಿಸುವುದು ಕಷ್ಟದ ಕೆಲಸವೇ ಆಗಿತ್ತು. ಬಟ್ಟೆಯಲ್ಲಿ ಕೂರಿ, ತಲೆಯಲ್ಲಿ ಹೇನು, ಮೈ-ಕೈ ದುರ್ಗಂಧದಿಂದ ತುಂಬಿರುತ್ತಿತ್ತು. ಮಕ್ಕಳು ಬಂದಾಕ್ಷಣ ಅವರ ತಲೆಗೂದಲನ್ನು ಕತ್ತರಿಸುವ ಕೆಲಸವನ್ನು ಸರಗೂರರು ಮಾಡು ತ್ತಿದ್ದರು. ಏಕೆಂದರೆ ಕ್ಷೌರಿಕರೂ ಕೂಡ ಹರಿಜನ ಮಕ್ಕಳಿಗೆ ಈ ಕೆಲಸ ಮಾಡುತ್ತಿ ದ್ದಿಲ್ಲ. ಮಕ್ಕಳ ಬಟ್ಟೆಯನ್ನು ಕುದಿಸಬೇಕಾಗಿತ್ತು. ಬೇವಿನ ಸೊಪ್ಪನ್ನು ನುಣ್ಣಗೆ ಅರೆದು ಮೈ ಮತ್ತು ತಲೆಗೆ ಲೇಪನ ಮಾಡುತ್ತಿದ್ದೆವು"—ಎನ್ನುತ್ತಿದ್ದಾಗ ಶ್ರೀಮತಿ ಲೀಲಾಪೀಟರ್ಸ್ ಹೀಗೆನ್ನುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



"ಆ ಮಕ್ಕಳನ್ನು ತೊಡೆಯ ಮೇಲೆ ಕೂರಿಸಿಕೊಂಡು ಪ್ರೀತಿಯಿಂದ ಅಮ್ಮ ನೋಡಿಕೊಂಡಿದ್ದಾರೆ. ತಮ್ಮ ಮಗಳಿಗಿಂತ ಹೆಚ್ಚಾಗಿ ಆದರ ಲಾಲನೆ ಪಾಲನೆ ಮಾಡಿದ್ದಾರೆ. ಎಲ್ಲಿ ಹೋದರೂ ತಮ್ಮ ಜೊತೆ ಅವರನ್ನು ಕರೆದುಕೊಂಡು ಹೋಗು ತ್ತಿದ್ದರು."

ಎಲ್ಲೆಲ್ಲಿಗೆ ಕರೆದುಕೊಂಡು ಹೋಗುತ್ತಿದ್ದರು ಎಂಬುದಕ್ಕೆ ನಾಗಮ್ಮನವರೇ ಉತ್ತ ರಿಸುತ್ತಾರೆ—"ನಂತರ ಮನೆಗೆ ನನ್ನನ್ನು ಸೇರಿಸುತ್ತಿರಲಿಲ್ಲ. 'ಕಾಶಿಗೆ ಹೋಗಬೇಕೆಂದಿ ದ್ದೀಯಲ್ಲಾ. ಇದೇ ನಿನಗೆ ಕಾಶಿ' ಎಂದು ಹಾಸ್ಯ ಮಾಡುತ್ತಿದ್ದರು...ಎಡಿಯೂರಲ್ಲಿ ವರ್ಷಕ್ಕೆ ಒಂದು ಸಲ ನಮ್ಮ ಮನೆಯ ಪೂಜೆ ಮಾಡಿಸಬೇಕಾಗಿತ್ತು. ಕಾಮೇಶ್ವರ ರಾವ್ ಕಾರು ಕೊಟ್ಟು ನಮ್ಮನ್ನು ಕಳುಹಿಸಿಕೊಟ್ಟರು. ನಾನು ಹರಿಜನ ಹುಡುಗಿ ಯರನ್ನು ಕರೆದುಕೊಂಡು ಹೋಗಿದ್ದೆ. ಸಾರ್ವಜನಿಕರಿಗಾಗಿ ಇದ್ದ ಸ್ಥಳದಲ್ಲಿ ಮುಳುಗಿ ಸ್ನಾನ ಮಾಡಿಕೊಂಡು ದೇವಸ್ಥಾನಕ್ಕೆ ಹೊರಟೆವು. ಇದನ್ನು ತಿಳಿದ ದೇವಸ್ಥಾನದ ಬಾಗಿಲಲ್ಲಿ ಮಧ್ಯಾಹ್ನದವರೆಗೂ ಕೂತೆವು. ಬೆಳಿಗ್ಗೆಯಿಂದ ಒಂದು ತೊಟ್ಟು ನೀರು ಕುಡಿದಿರಲಿಲ್ಲ. ಶುದ್ಧವಾಗಿ ಸ್ನಾನ ಮಾಡಿ ಶುಭ್ರವಾದ ಬಟ್ಟೆ ಹಾಕಿಕೊಂಡು, ಹಣೆ ಯಲ್ಲಿ ವಿಭೂತಿ ಧರಿಸಿ ಭಕ್ತಿಯಿಂದ ಕೈಜೋಡಿಸಿ ಕದಲದೆ ಕುಳಿತ್ತಿದ್ದ ಈ ಕಂದಮ್ಮ ಗಳನ್ನು ಕಂಡು ಅವರಿಗೇನನ್ನಿಸಿತೋ, ಮಧ್ಯಾಹ್ನದ ಮೇಲೆ ಬಾಗಿಲು ತೆಗೆದರು. ಮಕ್ಕಳಿಂದಲೇ ಪೂಜೆಯನ್ನು ಮಾಡಿಸಿದೆನು. ಹೀಗೆಯೇ ಬಾದಾಮಿ, ಬನವಾಸಿ, ಉಳುವಿಯ ದೇವಸ್ಥಾನಗಳಿಗೂ ನನ್ನ ಜೊತೆ ಆಶ್ರಮದ ಮಕ್ಕಳನ್ನು ಕರೆದುಕೊಂಡು ಹೋಗಿದ್ದೇನೆ. ಸಾರ್ವಜನಿಕರೆಲ್ಲರಿಗೂ ದೇವರ ದರ್ಶನ ಉಂಟು ಎಂಬ ನೋಟೀಸು ಹಾಕಿದ್ದರೂ ನಮ್ಮನ್ನು ತಡೆದರು. ನಾನು ಅವರನ್ನು ಅಷ್ಟಕ್ಕೇ ಬಿಡಲಿಲ್ಲ. ಒಳಕ್ಕೆ ಪ್ರವೇಶ ಕೊಡಿಸಿ ಹುಡುಗರ ಕಡೆಯಿಂದ ದೇವರಿಗೆ ಅಭಿಷೇಕ ಮಾಡಿಸಿದೆ....

ನನಗೆ ಇಷ್ಟು ಧೈರ್ಯ ಮೊದಲು ಇರಲಿಲ್ಲ. ನಮ್ಮ ಯಜಮಾನರಿಗಿದ್ದ ಎಲ್ಲರೂ ಒಂದೇ ಎಂಬ ಭಾವನೆ ನನ್ನ ಈ ಕೆಲಸಕ್ಕೆ ಪ್ರೋತ್ಸಾಹಕೊಟ್ಟಿತು. ಮನೆ ಬಿಟ್ಟು ಬೇರೆ ಸ್ಥಳಗಳಿಗೆ ಹೋಗಿ ನನಗೆ ಅಭ್ಯಾಸವಿರಲಿಲ್ಲ. ಮದುವೆಯಾದ ಮೇಲೆ ಯಜಮಾನರು ಚಳವಳಿಗೆ ತನ್ನನ್ನೂ ಸೇರಿಸಿಕೊಂಡು ಬಿಟ್ಟರು. ಕೆಲಸದ ವೇಳೆ ಅವರು ಹೋದ ಕಡೆಗೇ ನಾನು ಹೋಗಲಾಗುತ್ತಿರಲಿಲ್ಲ. ಶರಬೇತಿ ಕೇಂದ್ರಗಳಿಗೆ ಮಹಿಳೆಯರನ್ನು ಪ್ರತ್ಯೇಕವಾಗಿ ಕಳುಹಿಸುತ್ತಿದ್ದರು. ಇದರಿಂದ ಹಲವು ಬಾರಿ ಪರದಾಟ ಆಗಿದ್ದೂ ಉಂಟು.

ತಾಯಿಯ ಪಕ್ಕದಲ್ಲಿ ಕುಳಿತು ನಮ್ಮೊಡನೆ ಮಾತಾಡುತ್ತಿದ್ದ ಅವರ ಮಗಳು ಲೀಲಾವತಿ ಮಾಗಡಿಯವರು, "ನಮ್ಮ ತಾಯಿಯವರೇ ಮುಂಬಯಿ ಅಸೆಂಬ್ಲಿಯಲ್ಲಿ ಕನ್ನಡ ಭಾಷೆಯಲ್ಲಿ ಮಾತಾಡುತ್ತಿದ್ದ ಪ್ರಥಮ ಮಹಿಳೆ." ಎಂದು ಮುಂದುವರಿಸು ತ್ತಾರೆ.—"ನಮ್ಮ ತಾಯಿಗೆ ನನ್ನ ಜವಾಬ್ದಾರಿ ಹೆಚ್ಚು ಬೀಳಬಾರದೆಂದೂ ಮತ್ತು ಸ್ವಾತಂತ್ರ್ಯ ಸಂಗ್ರಾಮಕ್ಕೆ ನನ್ನನ್ನು ಸಿದ್ಧಪಡಿಸಲು ನಮ್ಮ ತಂದೆಯವರು ನನ್ನನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಅವರ ಜೊತೆಯಲ್ಲೇ ಕರೆದುಕೊಂಡು ಹೋಗುತ್ತಿದ್ದರು. ಚಿಕ್ಕ ವಯಸ್ಸಿನಲ್ಲಿ ನಾನು ಎಷ್ಟೋ ಸಲ ನೆಹರೂರವರ ಜೊತೆ ಬರುತ್ತಿದ್ದ ಇಂದಿರಾಗಾಂಧಿಯನ್ನು ಕಂಡು ಅವರಂತೆಯೇ ನಾನೂ ದೇಶಭಕ್ತಳಾಗಬೇಕೆಂದುಕೊಂಡಿದ್ದೆ.

೧೯೨೮ರಲ್ಲಿ ಕಲ್ಕತ್ತಾ ಕಾಂಗ್ರೆಸ್ಸಿಗೆ ನಮ್ಮ ತಂದೆಯ ಜೊತೆ ನಾನೂ ಹೋಗಿದ್ದೆ. ಏಳು ವರ್ಷದವಳಾಗಿದ್ದ ನನ್ನನ್ನು ಅಲ್ಲೇ ಶಾಂತಿನಿಕೇತನಕ್ಕೆ ಸೇರಿಸಿದರು. ನಮ್ಮ ನೆಂಟರೆಲ್ಲರ ವಿರೋಧವಾಗಿ ನನ್ನ ವ್ಯಾಸಂಗ ಅಲ್ಲೇ ನಡೆಯಿತು. ಕಲ್ಕತ್ತಾದಲ್ಲಿದ್ದಾಗ ಒಂದು ಸಲ ಭಯಂಕರ ಟೈಫಾಯ್ಡ್ ಕಾಯಿಲೆಯಲ್ಲಿ ಮಲಗಿಬಿಟ್ಟೆ. ಆಗ ನನ್ನ ತಾಯಿ ಬೆಂಗಳೂರಿನ ಜೈಲಿನಲ್ಲಿದ್ದರು. ಕಲ್ಕತ್ತಾ ಆಸ್ಪತ್ರೆಯಲ್ಲಿ ನನ್ನನ್ನು ಸೇರಿಸಿದರು. ಗುರುದೇವ್ ನನ್ನನ್ನು ವಿಚಾರಿಸಿಕೊಳ್ಳುತ್ತಿದ್ದರು. ಕೃಷ್ಣಾಬಾಯಿ ಪಾಟೀಲ ನನ್ನ ಶುಶ್ರೂಷೆ ಮಾಡುತ್ತಿದ್ದರು. ಜ್ವರ ಉಲ್ಬಣಿಸಿ ನಾನು ಬದುಕುವುವೇ ಕಷ್ಟವೆಂದು ತಿಳಿದಾಗ ನಮ್ಮ ತಂದೆ ನನ್ನನ್ನು ಕಾಣಲು ಕಲ್ಕತ್ತಾಕ್ಕೆ ಬಂದರು. ಮೂರು ತಿಂಗಳ ಸಜಾ ಅನುಭವಿಸಿ ಬಿಡುಗಡೆಯಾಗಿ ನಮ್ಮ ತಾಯಿಯೂ ಬಂದರು.

ನಾಗಮ್ಮನವರಿಗೆ ಆ ದಿನಗಳ ನೆನಪು ಬಂದು ದುಃಖಪಟ್ಟರು. "ಕಲ್ಕತ್ತಾ ಹತ್ತಿರದಲ್ಲಿದೆಯೇ ? ಮಗಳಿಗೆ ಜೀವವೇ ಹೋಗುವಂಥ ಜ್ವರವಾಗಿದೆ ಎಂದು ತಿಳಿದ ಮೇಲೆ ಹೋಗದೆ ಇರಲು ಮನಸ್ಸು ಬಾರದು. ಜೈಲಿನಲ್ಲಿ ಗಂಟೆಗಳನ್ನು ಎಣಿಸುತ್ತಾ ತವಕಿಸಿಕೊಂಡು ಬಿಡಿಸಿಕೊಂಡು ಬಂದರೆ ಅಷ್ಟರಲ್ಲಿ ನಮ್ಮ ಯಜಮಾನರು ಪ್ರಯಾಣ ಹೊರಟೇ ಬಿಟ್ಟಿದ್ದರು. ಆತಂಕ ಒಂದು ಕಡೆ, ಒಂಟಿ ಪ್ರಯಾಣ ಒಂದು ಕಡೆ... ನಮ್ಮ ಲೀಲಾವತಿ ಉಳಿದದ್ದು ಅವಳಿಗೆ ಪುನರ್ಜನ್ಮವೆನ್ನಬೇಕು. ಆಕೆ ದೇಶಸೇವೆ ಮಾಡಬೇಕೆಂದು ದೇವರ ಇಚ್ಛೆ ಇತ್ತು. ಬದುಕಿಕೊಂಡಳು" ಎನ್ನುತ್ತಾ ನಾಗಮ್ಮನವರು ಕಣ್ಣೊರೆಸಿಕೊಳ್ಳುತ್ತಾರೆ.

ಶಾಂತಿನಿಕೇತನದಿಂದ ಮುಂದಿನ ವಿದ್ಯಾಭ್ಯಾಸ ನಡೆದದ್ದು ಜಲಂಧರದಲ್ಲಿ. ಜಲಂಧರ್ ವಿಶ್ವವಿದ್ಯಾನಿಲಯದ ಪದವೀಧರೆಯಾಗಿ, ರಾಷ್ಟ್ರಭಾಷೆ ಹಿಂದಿಯಲ್ಲಿ ಪರಿಣತರಾಗಿ, ಆಗಾಗ್ಗೆ ತಂದೆಯಿಂದ ಬರುತ್ತಿದ್ದ ಪತ್ರಗಳ ಪ್ರಭಾವದಿಂದ ಸ್ವಾತಂತ್ರ್ಯ ಯೋಧರಾಗಿ ಕರ್ನಾಟಕಕ್ಕೆ ಬಂದು ಒಬ್ಬ ಸ್ವಾತಂತ್ರ್ಯ ಯೋಧನನ್ನೇ ವಿವಾಹವಾಗುವೆನೆಂದು ತೀರ್ಮಾನಿಸಿ, ನೆಂಟರ ವಿರೋಧವಾಗಿ ನಿಂತು ಯುವಕ ಸ್ವಾತಂತ್ರ್ಯಯೋಧ ವೆಂಕಟೇಶ ಮಾಗಡಿಯವರನ್ನು ಮದುವೆಯಾದರು.

"ನಾವು ಜಾತಿಯ ಬಲೆಯಲ್ಲಿ ಸಿಕ್ಕಿ ಹಾಕಿಕೊಳ್ಳಲೇ ಇಲ್ಲ. ಜನಾಂಗವೆಲ್ಲಾ ಒಂದು ಎಂದು ತಿಳಿದವರು ನಾವು. ಮಗಳ ಇಚ್ಛೆಗೆ ಪೂರ್ಣ ಒಪ್ಪಿಗೆ ಕೊಟ್ಟು ಸೂತ್ರ ಯಜ್ಞದೊಂದಿಗೆ, ಧ್ವಜದ ಕೆಳಗೆ ವಿವಾಹ ನೆರವೇರಿಸಿ ಆಶೀರ್ವದಿಸಿದೆವು"— ಎನ್ನುತ್ತಾರೆ ನಾಗಮ್ಮ ಪಾಟೀಲರು.

ನಾಗಮ್ಮ ಪಾಟೀಲರು ತಾವು ಸ್ಥಾಪಿಸಿದ ಹುಬ್ಬಳ್ಳಿಯ ಬಾಲಿಕಾಶ್ರಮದ ವಿಷಯವನ್ನು ಮತ್ತಷ್ಟು ವಿವರಿಸಲು ಬಯಸುತ್ತಾರೆ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



“ಆಶ್ರಮದ ಮುಖಾಂತರ ಹರಿಜನರಲ್ಲಿ ಜಾಗೃತಿ ತರುವುದೇ ನಮ್ಮ ಉದ್ದೇಶವಾಗಿತ್ತು. ಈ ದೃಷ್ಟಿಯಿಂದ ಪ್ರಭಾತ ಫೇರಿ, ದೇಶಭಕ್ತಿ ಗೀತೆಗಳ ಕೀರ್ತನೆ, ಲಾಠಿ ಲೇಜೀಮ್, ವ್ಯಾಯಾಮ ಶಿಕ್ಷಣ, ಹಂಜಿ ಮಾಡುವುದು, ನೂಲು ತೆಗೆಯುವುದು ಮುಂತಾದ ಚಟುವಟಿಕೆಗಳಿಂದ ವಾತಾವರಣ ತಿಳಿಯಾಗುತ್ತಾ ಬಂತು. ಲಗ್ನ ಮುಂತಾದ ಸಮಾರಂಭಗಳಿಗೆ ಆಮಂತ್ರಣ ಬರಹತ್ತಿದವು. ಹುಬ್ಬಳ್ಳಿಯ ಮೂರು ಸಾವಿರ ಮಠದ ಸ್ವಾಮಿಗಳು ಮಕ್ಕಳಿಗೆ ಆಮಂತ್ರಣವಿತ್ತು ಎಲ್ಲರಿಗೂ ಸಹ ಪಂಕ್ತಿ ಭೋಜನ ಮಾಡಿಸಿದರು. ಕಲ್ಲನಗೌಡ ಪಾಟೀಲರ ಲಗ್ನವು ರಾಣೆಬೆನ್ನೂರಿನಲ್ಲಿ ಆದಾಗ ಹುಬ್ಬಳ್ಳಿಯಿಂದ ಅರವತ್ತು ಮೈಲು ದೂರದ ಆ ಊರಿಗೆ ಆಶ್ರಮವಾಸಿಗಳನ್ನೆಲ್ಲಾ ಕರೆದುಕೊಂಡು ಹೋಗಿದ್ದೆವು. ರಾಷ್ಟ್ರೀಯ ಲಗ್ನವೆಂದು ಈ ವಿವಾಹವನ್ನು ನೆರವೇರಿಸಲಾಯಿತು. ಮೂರು ಸಾವಿರ ಮಠದ ಸ್ವಾಮಿಗಳು ವರ್ಷಕ್ಕೊಮ್ಮೆ ಪ್ರಸಾದಕ್ಕೆ ಎಲ್ಲರನ್ನೂ ಕರೆಯುವ ಪರಿಪಾಠವಾಯಿತು. ೧೯೩೫ರಲ್ಲಿ ಹುಬ್ಬಳ್ಳಿ ತಾಲ್ಲೂಕಿನ ಮೂವತ್ತು ಹಳ್ಳಿಗಳಲ್ಲಿ ಕಾಲ್ನಡಿಗೆ ಪ್ರವಾಸ ಕೈಗೊಂಡೆವು.

ಹಳ್ಳಿಯಿಂದ ಹಳ್ಳಿಗೆ ಹೋಗುತ್ತಾ ಆಶ್ಚರ್ಯಕರವಾದ ಪರಿವರ್ತನೆ ನಮಗೆ ಅನುಭವವಾಯಿತು. ಹಳ್ಳಿಗರೆಲ್ಲಾ ಭೇದಭಾವವಿಲ್ಲದೆ ನಮಗೆ ಊಟ ವಸತಿ ಸೌಕರ್ಯ ಮಾಡಿಕೊಟ್ಟರು. ಪ್ರಭಾತ ಫೇರಿ, ಮೆರವಣಿಗೆ, ಸಭೆ ಸೇರುವುದು ನಮ್ಮ ನಿತ್ಯ ಕಾರ್ಯಕ್ರಮಗಳಾದುವು. ಕೆಲವು ಹಳ್ಳಿಗಳಲ್ಲಿ ಡೋಲು ಮುಂತಾದ ವಾದ್ಯಗಳೊಂದಿಗೆ ನಮ್ಮನ್ನು ಸ್ವಾಗತಿಸಿ ಸಾರ್ವಜನಿಕ ಕೆರೆ, ಬಾವಿಗಳಲ್ಲಿ ನೀರು ತುಂಬಿಸುತ್ತಿದ್ದರು. ಊರಲ್ಲಿ ಪ್ರಥಮ ಸಭೆಯನ್ನು ಹರಿಜನ ಕೇರಿಯಲ್ಲಿ ಪ್ರಾರಂಭಿಸುತ್ತಿದ್ದೆವು. ಈ ಎಲ್ಲ ಕಾರ್ಯಗಳಲ್ಲಿ ನಮ್ಮ ಯಜಮಾನರ ಉತ್ಸಾಹವು ಪ್ರತಿಫಲ ದೊರಕಿಸಿತು.

ಮುಂದೆ ೧೯೩೭ರ ಚುನಾವಣೆಯಲ್ಲಿ ನಾಗಮ್ಮನವರನ್ನು ರಾಣೆಬೆನ್ನೂರಿಗೆ ಕಾಂಗ್ರೆಸ್ ಹುರಿಯಾಳಾಗಿ ನಿಲ್ಲಿಸಬೇಕೆಂದು ಜನರು ನಿರ್ಧರಿಸಿದರು. ನಾಗಮ್ಮನವರ ವಿರುದ್ಧ ಬೆಳಗಾವಿಯ ರಾವ್ ಬಹದ್ದೂರ್ ಅಂಗಡಿಯವರ ಪತ್ನಿ ಪದ್ಮಾವತಿಬಾಯಿಯವರು ಸ್ಪರ್ಧಿಸಿದರು. ಜಯಿಸಿದವರು ನಾಗಮ್ಮನವರೇ ಎಂದಾಗ ಜನತೆಯು ಅವರ ಮೇಲಿಟ್ಟಿದ್ದ ವಿಶ್ವಾಸ ಪ್ರೀತಿಗೆ ಇದೇ ಸಾಕ್ಷಿಯಲ್ಲವೇ!

ಅಷ್ಟರಲ್ಲಿ ವೈಯಕ್ತಿಕ ಸತ್ಯಾಗ್ರಹ ಬಂದು, ನಾಗಮ್ಮನವರು ತಮ್ಮ ಹುದ್ದೆಗೆ ರಾಜೀನಾಮೆ ಕೊಟ್ಟು ಸತ್ಯಾಗ್ರಹದಲ್ಲಿ ಭಾಗವಹಿಸಿ ಸೆರೆ ಸೇರಿದರು. ವೀರನಗೌಡರು ಬಂಧಿತರಾಗಬಾರದೆಂದು ೧೯೪೨ರ ಮುಂಬೈ ಕಾಂಗ್ರೆಸ್ಸಿಗೆ ಕಾಲು ನಡಿಗೆಯಲ್ಲೇ ಪ್ರವಾಸ ಮಾಡಿ ಸರ್ಕಾರದ ಕಣ್ಣು ತಪ್ಪಿಸಿ ಓಡಾಡುತ್ತಿದ್ದರು. ಯಾವುದೇ ಸಂದರ್ಭದಲ್ಲಿ ಜನತೆಯು ಹಿಂಸಾಚಾರಕ್ಕಿಳಿಯದಂತೆ ನೋಡಿಕೊಳ್ಳುವುದು ಜವಾಬ್ದಾರಿಯ ಕೆಲಸವಾಗಿತ್ತು. ಪೋಲೀಸರು ವೀರನಗೌಡರ ಮನೆಯ ಸುತ್ತಲೂ ಮತ್ತು ಆಶ್ರಮದ ಸುತ್ತಲೂ ಬಲವಾದ ಕಾವಲಿಟ್ಟರು. ಹುಬ್ಬಳ್ಳಿಯಲ್ಲಿ ಒಂದು ಗುಪ್ತ ಸಭೆಯನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಮುಗಿಸಿ ಬರುತ್ತಿರುವಾಗ ವೀರನಗೌಡರೂ, ಅವರ ಅಳಿಯಂದಿರಾದ ಮಾಗಡಿ ಯವರೂ ಬಂಧಿತರಾದರು. ಈ ಕಡೆ ಲೀಲಾವತಿಯೂ ಸೆರೆ ಸಿಕ್ಕಿದರು. ಕುಟುಂಬದ ನಾಲ್ವರೂ ಒಂದೇ ಕಾಲಕ್ಕೆ ಜೈಲು ಸೇರಿದರು. ನಾಗಮ್ಮನವರನ್ನು ಯರವಾಡಕ್ಕೂ, ವೀರನಗೌಡರನ್ನು ನಾಸಿಕಕ್ಕೂ, ಮಾಗಡಿಯವರನ್ನು ಠಾಣಾಕ್ಕೂ, ಲೀಲಾವತಿ ಯವರನ್ನು ಹಿಂಡಲಗಿಗೂ ಸರ್ಕಾರದವರು ಒಯ್ದರು. ಸ್ವಾತಂತ್ರ್ಯ ಬರುವವರೆಗೂ ವೀರನಗೌಡರು ನಾಸಿಕದ ಜೈಲಿನಲ್ಲೇ ಇರಬೇಕಾಯಿತು.

ಕರ್ನಾಟಕದ ಏಕೀಕರಣದ ನಂತರ ವೀರನಗೌಡರು ಶಾಸಕರಾಗಿದ್ದರು. ಸರದಾರ ಬಿರುದಿನ ಜೊತೆಗೆ ಕೇಂದ್ರ ಸರ್ಕಾರವು ವೀರನಗೌಡರಿಗೆ ಪದ್ಮಶ್ರೀ ಪ್ರಶಸ್ತಿ ಯನ್ನು ನೀಡಿ ಗೌರವಿಸಿತು,

ತೊಂಭತ್ತು ವರ್ಷ ತುಂಬು ಜೀವನ ನಡೆಸಿ ಕೊನೆಯ ಉಸಿರಿನವರೆಗೆ ದೇಶ ಕ್ಕಾಗಿ ದುಡಿದ ಪತಿಯ ವಿಯೋಗದಿಂದ ನಾಗಮ್ಮನವರು ಬಳಲಿದಂತೆ ಕಂಡರೂ, ಮಗಳ ಮತ್ತು ಅಳಿಯಂದಿರ ಬೆಂಬಲದಿಂದಲೂ, ಪತಿಯ ಧ್ಯೇಯ ಪೂರೈಕೆಗಾಗಿಯೂ ಸರಳ ಜೀವನ ನಡೆಸುತ್ತಾ ಹುಬ್ಬಳ್ಳಿಯ ಮಹಿಳಾ ಪೀಠದಲ್ಲಿ ಸತತವಾಗಿ ಕೆಲಸ ನಿರತ ರಾಗಿರುವುದನ್ನು ಕಾಣಬಹುದು.

ನಾಗಮ್ಮನವರ ಆಶ್ರಯಕ್ಕೆ ಸೇರಿ ಬೆಳೆದ ಶ್ರೀಮತಿ ವೀರಮ್ಮ ಎರೇಶೀಮೆ ಯವರು ನಾಗಮ್ಮನವರ ಬಗ್ಗೆ ಹೀಗೆ ಹೇಳುತ್ತಾರೆ. "ಆಶ್ರಮಕ್ಕೆ ಸೇರಿದಾಗ ನನಗೆ ಎಂಟು ವರ್ಷ. ನಾನು ತಾಯಿ ತಂದೆಯನ್ನು ಕಳೆದುಕೊಂಡ ತಬ್ಬಲಿ. ಬಡ ಹರಿಜನ ಹುಡುಗಿ. ನಾನು ಆಶ್ರಮದಲ್ಲಿ ಕಾಲಿಡುತ್ತಲೇ ತಾಯಿ ನಾಗಮ್ಮನವರು ತನ್ನ ಹೊಟ್ಟೆಯ ಮಗಳಂತೆ ಕಂಡು ತಮ್ಮ ಹತ್ತಿರ ಕೂಡ್ರಿಸಿಕೊಂಡು, ಎಷ್ಟು ಸುಲಕ್ಷಣ ಹುಡುಗಿ ಇವಳು ಎಂದು ಮಮತೆಯಿಂದ ಮೈಮೇಲೆ ಕೈಯಾಡಿಸಿದರು. ನನ್ನ ಕೊಳಕು ಬಟ್ಟೆಯನ್ನು ಬಿಚ್ಚಿ, ಮೈತೊಳೆಸಿ, ಹೊಸ ಬಟ್ಟೆ ಹಾಕಿ, ಹಾಲು ತಂದುಕೊಟ್ಟರು. ನನ್ನ ಸತ್ತ ತಾಯಿಯೇ ಬಂದು ಉಣಿಸಿದಂತಾಯಿತು.... ಹರಿಜನ ಸೇವೆಯಿಂದ ಈ ದಂಪತಿಗಳಿಗೆ ಬಂದ ಕಷ್ಟ ಅಷ್ಟಿಷ್ಟಲ್ಲ. ವಿರೋಧದ ಬಿರುಗಾಳಿಯೇ ಆಗಿತ್ತು. ಒಂದುಸಲ ತಾಯಿ ನಾಗಮ್ಮನವರು ತಮ್ಮ ನಿಕಟ ಬಂಧುಗಳ ಮನೆಗೆ ಬೆಳಗಾವಿಗೆ ಹೋಗುವಾಗ ನನ್ನನ್ನೂ ಜೊತೆಯಲ್ಲಿ ಕರೆದುಕೊಂಡು ಹೋದರು. ಈ ಹುಡುಗಿ ಯಾರೆಂದು ಕೇಳಿದಾಗ ನನ್ನ ಮಗಳು ಎಂದೇ ಹೇಳಿದರು." ಅಷ್ಟರಲ್ಲಿ ಹುಬ್ಬಳ್ಳಿಯಿಂದ ಅವರ ಆಪ್ತರೊಬ್ಬರು ಬಂದು "ಈ ಹರಿಜನ ಹುಡುಗಿಯನ್ನು ಒಳಗೆ ಕೂಡ್ರಿಸಿಬಿಟ್ಟಿರುವಿರಲ್ಲಾ" ಎಂದು ಗದರಿಸಿದರು. ಹೀಗೇಕೆ ಸುಳ್ಳು ಹೇಳಿದಿ ರೆಂದು ನಾಗಮ್ಮನವರನ್ನು ನೆಂಟರು ತರಾಟೆಗೆ ತೆಗೆದುಕೊಂಡರು. ಆಗ ನಾಗಮ್ಮ ನವರು ಅತ್ಯಂತ ಸರಳ ಭಾವದಿಂದ, "ಈ ಹುಡುಗಿ ನನ್ನ ಮಗಳೇ ಅಲ್ಲವೆಂದು ಹೇಳುವವರಾರು ? ಗಾಂಧೀಜಿಯವರ ಉದಾತ್ತ ವಿಚಾರಗಳಿಂದ ನಾವಿಬ್ಬರೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ದಂಪತಿಗಳು ಅಸ್ಪೃಶ್ಯತೆಯನ್ನು ಸಂಪೂರ್ಣ ಕಿತ್ತು ಹಾಕಿದ್ದೇವೆ. ನಮಗಿಂತಲೂ ಆಚಾರ ಶೀಲಗಳಲ್ಲಿ ಬೆಳೆದು ಬಂದವರು ಬಸವಣ್ಣನವರು. ಅವರ ನುಡಿಯಂತೆ ಕೀಳು ಮೇಲು ಜಾತಿ ಎಂಬ ಹುಚ್ಚು ಭಾವನೆಯನ್ನು ಕಿತ್ತು ಹಾಕಿದ್ದೇವೆ. ನಾವು ಪತಿತರಾದ ಈ ಜೀವಂತ ದೇವರ ಸೇವೆಯೇ ನಿಜವಾದ ಪೂಜೆ ಎಂದು ತಿಳಿದಿದ್ದೇವೆ. ನಿಮಗೆ ನಮ್ಮ ಈ ಪವಿತ್ರ ಸೇವೆ ಮೆಚ್ಚಿಗೆ ಬರದಿದ್ದರೆ ನಿಮ್ಮಲ್ಲಿಗೆ ನಾನು ಇನ್ನು ಮೇಲೆ ಎಂದಿಗೂ ಬರುವುದಿಲ್ಲ"—ಎಂದು ನಿರ್ಧಾರವಾಗಿ ತಿಳಿಸಿದರು. ಜಗದ್ವಂದ್ಯ ಮಹಾತ್ಮಾ ಗಾಂಧಿಯವರು ಕೈಗೊಂಡ ಈ ಉದ್ಧಾರ ಕಾರ್ಯದಲ್ಲಿ ಅಚಲವಾದ ಭಕ್ತಿ ನಿಷ್ಠೆ ವೀರನಗೌಡ ಪಾಟೀಲ ದಂಪತಿಗಳಿಗಿತ್ತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

## ಲೀಲಾವತಿ ವೆಂಕಟೇಶ ಮಾಗಡಿ

“ಸರದಾರ” ಬಿರುದು ಪಡೆದವರಲ್ಲಿ ಒಬ್ಬರಾದ, ಸ್ವಾತಂತ್ರ್ಯ ಸಂಗ್ರಾಮದ ವಿಶೇಷ ಸೇವಾಕರ್ತ ವೀರಣ್ಣಗೌಡರ ಪ್ರಥಮ ಪುತ್ರಿಯೇ ಲೀಲಾವತಿ. ಜನನ ೧೯೨೦ರಲ್ಲಿ. ಸುಮಾರು ಏಳು ವರ್ಷದ ಬಾಲಕಿ ಲೀಲಾವತಿ ಕಂಡ ಒಂದು ದೃಶ್ಯ ಅವರ ಜೀವನಕ್ಕೆ ಹೊಸ ತಿರುವನ್ನು ನೀಡಿತು.

ಹುಬ್ಬಳ್ಳಿಯ ಕ್ರೈಸ್ತ ಕುಟುಂಬದವರಾದ ಜಾರ್ಜ್ ಸಹೋದರರು ಮಹಾತ್ಮರ ಕರೆಗೆ ಓಗೊಟ್ಟು ತಮ್ಮ ವಿದೇಶೀ ವಸ್ತ್ರಗಳನ್ನು ಅಗ್ನಿಗೆ ಆಹುತಿ ಕೊಟ್ಟ ಘಟನೆ ಲೀಲಾವತಿಯ ಮೇಲೆ ಅತ್ಯಂತ ಹೆಚ್ಚಿನ ಪ್ರಭಾವ ಬೀರಿತು. “ಕ್ರಿಶ್ಚಿಯನ್ನರಾದ ಜಾರ್ಜ್ ಸಹೋದರರು ವಿದೇಶೀ ವಸ್ತ್ರ ಬೇಡವೆಂದ ಮೇಲೆ ಹಿಂದೂಗಳಾದ ನಾವು ಇನ್ನೂ ಹೆಚ್ಚಿನ ಪ್ರೀತಿಯನ್ನು ಸ್ವದೇಶಕ್ಕಾಗಿ ಮೀಸಲಿಡಬೇಕು”— ಎಂದು ಲೀಲಾವತಿಯ ಎಳೆಯ ಮನಸ್ಸು ನಿರ್ಧರಿಸಿತು. ತಕಲಿ ಕೈಗೆ ಬಂತು. ಚರಖಾದಲ್ಲಿ ನೂಲು ತೆಗೆಯುವುದೆಂದರೆ ಪ್ರಿಯವಾದ ಕೆಲಸವಾಯ್ತು.

ವೀರಣ್ಣಗೌಡ ಪಾಟೀಲರು ಮಗಳಲ್ಲಿ ವಿಶೇಷ ಲಕ್ಷ್ಯವಿಟ್ಟು ತಾವು ಪಾಲ್ಗೊಳ್ಳುತ್ತಿದ್ದ ಚಳವಳಿಯ ಕಾರ್ಯಕ್ರಮಕ್ಕೆ ಮಗಳನ್ನೂ ಕರೆದುಕೊಂಡು ಹೋಗುತ್ತಿದ್ದರು. ೧೯೨೪ರಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನಕ್ಕೆ ತಂದೆಯ ಜೊತೆ ಹೋಗಿದ್ದ ಲೀಲಾವತಿಗೆ ಮತ್ತೊಂದು ಸ್ಫೂರ್ತಿದಾಯಕ ಸನ್ನಿವೇಶ ಕಾದಿತ್ತು. ಜವಾಹರಲಾಲರ ಜೊತೆ ಬಂದಿದ್ದ ಅವರ ಪುತ್ರಿ ಇಂದಿರಾವನ್ನು ಕಂಡು ತಾನೂ ತಂದೆಯ ಜೊತೆ ಇಂದಿರಾ ಹಾಗೆಯೇ ಇರಬೇಕೆಂಬ ಭಾವನೆ ಲೀಲಾವತಿಯಲ್ಲಿ ಮನೆ ಮಾಡಿತು. ರಾಷ್ಟ್ರೀಯ ಆಂದೋಲನದಲ್ಲಿ ಭಾಗವಹಿಸುತ್ತಿದ್ದ ತಾಯಿ ನಾಗಮ್ಮ ಪಾಟೀಲರ ವೈಯಕ್ತಿಕ ಉದಾಹರಣೆ ಲೀಲಾವತಿಯ ವ್ಯಕ್ತಿತ್ವದಲ್ಲಿ ಈಗಾಗಲೇ ಆಳವಾಗಿ ಬೇರುಬಿಟ್ಟಿತ್ತು.

ಬೆಳಗಾವಿಯಲ್ಲಿ ಆಗಾಗ ನಡೆಯುತ್ತಿದ್ದ ಸಾರ್ವಜನಿಕ ಸಭೆಗಳಿಗೆ ತಪ್ಪದೆ ಲೀಲಾವತಿ ಹೋಗುತ್ತಿದ್ದರು. ಗಂಗಾಧರರಾವ ದೇಶಪಾಂಡೆ ಮತ್ತು ಕೃಷ್ಣಾಬಾಯಿ ಪಂಜೇಕರರ ಸಿಂಹ ಗರ್ಜನೆಯ ಮಾತುಗಳು ಇನ್ನೂ ಸ್ಫೂರ್ತಿ ನೀಡುವಂತೆ ನನ್ನಲ್ಲಿ ನಿಂತಿವೆ ಎನ್ನುತ್ತಾರೆ ಲೀಲಾವತಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಧಾರವಾಡದ ಸರಸ್ವತಿಪುರದಲ್ಲಿ ಒಂದು ಪ್ರಾಥಮಿಕ ಶಾಲೆಯನ್ನು ತೆರೆದು ಸ್ತ್ರೀಯರ ಪುರೋಭಿವೃದ್ಧಿಗಾಗಿ ಒಂದು ಮಹಿಳಾ ಸಮಾಜವನ್ನು ಪ್ರಾರಂಭಿಸಿದ ಶ್ರೀಮತಿ ಕೃಷ್ಣಾಬಾಯಿ ಪಂಜೀಕರ ವಿದೇಶೀ ವಸ್ತ್ರಗಳ ಮಾರಾಟದ ವಿರುದ್ಧ ಪಿಕೆಟಿಂಗ್ ನಡೆಸಲು ಸ್ತ್ರೀ ಸಮೂಹವನ್ನು ಸಂಘಟಿಸುತ್ತಿದ್ದರು, ೧೯೩೦ ರವರೆಗೆ ಇವರ ಚಟುವಟಿಕೆಗಳನ್ನು ಕಡೆಗಣಿಸಿದ್ದ ಸರ್ಕಾರ ಆ ವರ್ಷ ಗ್ರಾಮಾಂತರಗಳಲ್ಲಿಯೂ ನಡೆದ ಅವರ ಉಗ್ರ ಭಾಷಣ ಮತ್ತು ಬಿರುಸಾದ ಕಾರ್ಯಕ್ರಮಗಳಿಂದ ಎಚ್ಚೆತ್ತು ಕೃಷ್ಣಾಬಾಯಿಯವರನ್ನು ಬಂಧಿಸಲು ಹೊಂಚು ಹಾಕಿತು. ಕಸ್ತೂರಬಾ ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿಗೆ ಪ್ರಾಂತೀಯ ಕಾರ್ಯದರ್ಶಿಯಾಗಿ ನಿಂತ ಕೃಷ್ಣಾಬಾಯಿ ಯವರ ವಿದೇಶೀ ಸರ್ಕಾರ ವಿರುದ್ಧ ಗರ್ಜನೆ ಹೆಣ್ಣು ಮಕ್ಕಳನ್ನು ಸಂಘಟಿಸುವುದರಲ್ಲಿ ಸಫಲವಾಗುತ್ತಿತ್ತು,

ಇವರ ಧೈರ್ಯದಿಂದ ಹುರುಪುಗೊಂಡ ಲೀಲಾವತಿ ವಿದ್ಯಾರ್ಥಿನಿಯಾಗಿ ದ್ದಾಗಲೇ ವಿದೇಶೀ ಆಂದೋಲನದಲ್ಲಿ ಧುಮುಕಿ ಸೆರೆಮನೆ ವಾಸ ಅಭ್ಯಾಸ ಮಾಡಿ ಕೊಂಡರು. ಒಂದು ಸಲ ಚಿಕ್ಕಮಕ್ಕಳ ಮೆರವಣಿಗೆಯೊಂದು "ತಕಲೀ ಚಲಾ ಚಲಾಕೆ ಲೇಂಗೆ ಸ್ವರಾಜ್ಯ ಲೇಂಗೆ" ಎಂದು ಹಾಡುತ್ತಾ ಹೋಗುತ್ತಿದ್ದಾಗ, ಆ ಮಕ್ಕಳ ಗುಂಪಿನಲ್ಲಿದ್ದ ಪುಟ್ಟ ಲೀಲಾವತಿಯನ್ನು ಒಯ್ದು ಲಾಕಪ್ಪಿಗೆ ಹಾಕಿದ್ದರು.

೧೯೩೧ರಲ್ಲಿ ವೀರಣ್ಣಗೌಡ ಪಾಟೀಲರು ಮಗಳನ್ನು ಶಾಂತಿನಿಕೇತನಕ್ಕೆ ಶಿಕ್ಷಣ ಕ್ಕಾಗಿ ಕಳುಹಿಸಿದರು. ಅಲ್ಲಿ ದೇಶಭಕ್ತರಾದ ಖಾದಿ ಧಾರಿಗಳಾದ ಆರ್ಯ ನಾಯಕಂ ರವರು ಲೀಲಾವತಿಯನ್ನು ತಂದೆಯಂತೆ ನೋಡಿಕೊಂಡರು. ಶಾಂತಿನಿಕೇತನದ ಪ್ರಶಾಂತ ವಾತಾವರಣ ಮತ್ತು ಶಿಕ್ಷಣದ ರೀತಿ ಲೀಲಾವತಿಯನ್ನು ಅತ್ಯಂತ ಆಕರ್ಷಿಸಿ ಅವರ ಮನಸ್ಸಿನ ಮೇಲೆ ವಿಶೇಷ ಪ್ರಭಾವ ಬೀರಿತು.

೧೯೩೭ರ ಚುನಾವಣೆಯಲ್ಲಿ ಮುಂಬೈ ಪ್ರಾಂತ್ಯದ ಸ್ತ್ರೀಯರ ಮೀಸಲು ಸ್ಥಾನಕ್ಕೆ ಹುರಿಯಾಳಾಗಿ ನಿಂತು ಕಾಂಗ್ರೆಸ್ ವತಿಯಿಂದ ಆಯ್ಕೆಯಾದ ಪ್ರಥಮ ಪ್ರತಿನಿಧಿ ನಾಗಮ್ಮ ಪಾಟೀಲರು.

ಹಿಂದೀ ಭಾಷೆಯು ರಾಷ್ಟ್ರಭಾಷೆಯಾಗುವುದೆಂಬ ದೃಷ್ಟಿಯಿಂದ ೧೯೩೬ರಲ್ಲಿ ಜಲಂಧರದಲ್ಲಿರುವ ರಾಷ್ಟ್ರೀಯ ಕನ್ಯಾ ಮಹಾ ವಿದ್ಯಾಲಯಕ್ಕೆ ಸೇರಿ ಲೀಲಾವತಿ ಹಿಂದಿಯನ್ನು ಕಲಿತರು. ಆ ಮಹಾವಿದ್ಯಾಲಯದ ವಾತಾವರಣ ಲೀಲಾವತಿಯವ ರನ್ನು ಮತ್ತಷ್ಟು ರಾಷ್ಟ್ರ ಪ್ರೇಮಿಯನ್ನಾಗಿ ಮಾಡಿತು. ಅಲ್ಲಿ ಪ್ರತಿ ಸೋಮವಾರ ಧ್ವಜವಂದನೆ ನಡೆಯುತ್ತಿತ್ತು. ಧ್ವಜವಂದನೆಯ ದಿನ ವಿದ್ಯಾರ್ಥಿನಿಯರಿಗೆ ಸಂಭ್ರಮದ ದಿನ. ದೇಶಭಕ್ತಿ ಹಾಡುಗಳು, ನೂಲುವ ಸ್ಪರ್ಧೆ, ಬಹುಮಾನ ವಿತರಣೆಯ ಕಾರ್ಯಕ್ರಮಗಳಿಂದ ವಿಶೇಷ ಸಮಾರಂಭದಂತೆ ನಡೆಯುತ್ತಿತ್ತು. ನೂಲುವ ಸ್ಪರ್ಧೆಯಲ್ಲಿ ಲೀಲಾವತಿಗೇ ಗೆಲುವು. ಲೀಲಾವತಿಗೆ ಸಿಕ್ಕಿದ ಬಹುಮಾನ ಚರಖಾ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



"ಆ ಬಹುಮಾನವನ್ನು ಆಸಕ್ತಿಯಿಂದ ಸ್ವೀಕರಿಸಿದೆ. ಅದು ನನ್ನ ಮುಂದಿನ ಜೀವನಕ್ಕೆ ಮಾರ್ಗದರ್ಶನ ನೀಡುವ ಸಂಕೇತವಾಗಿತ್ತು"—ಎಂದು ಐವತ್ತು ವರ್ಷಗಳ ಹಿಂದೆ ನಡೆದ ಜಲಂಧರದ ಧ್ವಜವಂದನಾ ಸಮಾರಂಭವನ್ನು ಜ್ಞಾಪಿಸಿಕೊಳ್ಳುತ್ತಾರೆ'.

ಒಂದು ಸಲ ಬಂಗಾಳದಲ್ಲಿ ಪ್ರವಾಸ ಮಾಡುತ್ತಿದ್ದಾಗ, ಲೀಲಾವತಿ ಇದ್ದ ರೈಲು ಗಾಡಿಯಲ್ಲಿ ಒಬ್ಬ ಆಂಗ್ಲ ಮಹಿಳೆ ಮತ್ತು ಅವಳ ಐದು ವರ್ಷದ ಮಗ ಕುಳಿತಿದ್ದರು. ಆ ಮಗು ಚಾಕ್ಲೇಟ್ ಬೇಕೆಂದು ಕೇಳಿದಾಗ ತಾಯಿಗೂ ಮಗನಿಗೂ ಮಧ್ಯೆ ನಡೆದ ಚರ್ಚೆ ಸ್ವಾರಸ್ಯವಾಗಿದ್ದುದಲ್ಲದೆ ಲೀಲಾವತಿಯವರ ದೇಶಪ್ರೇಮವನ್ನು ಹೇಗೆ ಹೆಚ್ಚಿಸಿತೆನ್ನುವುದು ಇಲ್ಲಿ ಅತಿಶಯದ ವಿಷಯ.

ಸ್ವದೇಶೀ ಚಳವಳಿ ಬಹಳ ಉಗ್ರವಾಗಿ ನಡೆಯುತ್ತಿದ್ದ ಕಾಲ ಅದು, ಬಂಗಾಳದಲ್ಲಿ ಸ್ವದೇಶೀ ಚಾಕ್ಲೇಟ್ ಮಾತ್ರ ಸಿಗುತ್ತಿತ್ತು. ಚಾಕ್ಲೇಟ್ ಮೇಲೆ "ಇಂಗ್ಲೆಂಡ್ ತಯಾರಿಕೆ" ಎಂದು ಇಲ್ಲದಿದ್ದುದನ್ನು ಕಂಡು ಮಗು ಚಾಕ್ಲೇಟ್ ಬೇಡವೆಂದು ನಿರಾಕರಿಸಿದ. ಇಂಗ್ಲೆಂಡ್ ಚಾಕ್ಲೇಟನ್ನೇ ತಿನ್ನುವೆನೆಂದು ಹಟ ಹಿಡಿದ.

ಇಂತಹ ದೇಶಪ್ರೇಮ ಇದ್ದರೇನೇ ಒಂದು ಜನಾಂಗ ಮುಂದುವರಿಯುವುದೆಂದು ಲೀಲಾವತಿಯ ಮನಸ್ಸು ನುಡಿಯಿತು. ಐದು ವರ್ಷದ ಆ ಎಳೆಯ ಮಗು ಬೇರೆ ದೇಶಕ್ಕೆ ಹೋದಾಗಲೂ ತನ್ನ ದೇಶದ ವಸ್ತುಗಳೇ ಬೇಕೆಂದು ಇಷ್ಟಪಡುತ್ತಾನೆ! ಚಿಕ್ಕ ವಯಸ್ಸಿನಿಂದಲೇ ಹೀಗೆ ಸ್ವದೇಶ ಪ್ರೇಮ ಬೆಳೆಯುವುದು ಅತ್ಯವಶ್ಯಕವೆಂದು ಲೀಲಾವತಿ ನಿರ್ಧರಿಸಿಕೊಂಡರು.

ರಾಷ್ಟ್ರೈಕ್ಯತಾ ಭಾವನೆಯನ್ನು ಬೋಧಿಸಿ ಹೇಳುತ್ತಿದ್ದ ಗಾಂಧೀಜಿಯವರ ವಿಚಾರಗಳಿಂದ ಪ್ರಭಾವಿತರಾದ ಲೀಲಾವತಿಯವರು ವೀರಶೈವರಲ್ಲದ ತರುಣ ದೇಶಭಕ್ತ ವೆಂಕಟೇಶ ಮಾಗಡಿಯವರನ್ನು ೧೯೪೨ರಲ್ಲಿ ವಿವಾಹವಾದರು. "ಹೆಣ್ಣಿಗೆ ಜೀವನ ಸಂಗಾತಿಯೊಬ್ಬ ಬೇಕು. ಆಗಲೇ ನಮ್ಮ ಧ್ಯೇಯ ಸಾಧನೆ ಸುಲಭ. ನಮ್ಮ ಧ್ಯೇಯವಿರುವವನೇ ಗಂಡನಾದರೆ ಮತ್ತೂ ಅನುಕೂಲ. ಆದ್ದರಿಂದಲೇ ಜಾತಿ ಮತಕ್ಕೆ ಹೆಚ್ಚು ಗಮನ ಕೊಡದೆ, ನನ್ನಂತೆಯೇ ಸ್ವಾತಂತ್ರ್ಯ ಹೋರಾಟದಲ್ಲಿ ಆಸಕ್ತಿಯಿದ್ದ ರೆಡ್ಡಿಯ ಮತದವರಾದ ವೆಂಕಟೇಶ ಮಾಗಡಿಯವರನ್ನು ನಾನು ಮದುವೆಯಾದುದು" ಎನ್ನುತ್ತಾರೆ ಲೀಲಾವತಿ.

ಗಾಂಧೀಜಿಯವರ ಸೇವಾ ಗ್ರಾಮದಲ್ಲಿ ಧ್ವಜವಂದನೆಯೊಂದಿಗೆ ಈ ವಧೂವರರ ವಿವಾಹವು ಸರಳ ರೀತಿಯಲ್ಲಿ ನಡೆಯಿತು. ಲೀಲಾವತಿಯ ತಂದೆತಾಯಿ ಇಬ್ಬರಿಗೂ ಈ ಮದುವೆ ಅತ್ಯಂತ ಮೆಚ್ಚಿಗೆಯಾಯಿತು. ಅಂತರ್ಜಾತಿಯ ವಿವಾಹವು ಆಕ್ಷೇಪಣೆಯಾಗಿದ್ದ ಆ ಕಾಲದಲ್ಲಿ ಲೀಲಾವತಿಯವರು "ರಾಷ್ಟ್ರೀಯ ವಿವಾಹ" ಮಾಡಿಕೊಂಡು ರಾಷ್ಟ್ರ ಸೇವೆಯ ದೀಕ್ಷೆಯನ್ನು ದೃಢಪಡಿಸಿಕೊಂಡರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ವಿವಾಹದ ನಂತರ ಬಾಪೂಜಿಯ ಸಾನ್ನಿಧ್ಯದಲ್ಲಿ ಕೆಲವು ತಿಂಗಳು ಕಳೆದು, ಆಂದೋಲನದ ಮುಖಂಡತ್ವಕ್ಕೆ ಸಾಕಷ್ಟು ಸ್ಥೈರ್ಯ, ಅರ್ಹತೆ ಪಡೆದು ಲೀಲಾವತಿ ಮಾಗಡಿಯವರು ಹುಬ್ಬಳ್ಳಿಗೆ ಬಂದರು.

ರಾಷ್ಟ್ರೀಯ ಆಂದೋಲನವೇ ದಾಂಪತ್ಯದ ಧ್ಯೇಯವಾಗಿಸಿಕೊಂಡ ಪಾಟೀಲ ದಂಪತಿಗಳ ಮಗಳಾದ ಲೀಲಾವತಿ ತನ್ನನ್ನು ಆಂದೋಲನದ ಬಿರುಸಿಗೆ ತಕ್ಕಂತೆ ಚುರುಕುಮಾಡಿಕೊಂಡು ಸಿದ್ಧರಾದರು. ಯುಗಳ ನದಿಗಳ ಸಂಗಮದಂತೆ ಒಂದು ಕಡೆ ತಂದೆಯೊಡನೆ ಹೋಗಿ ಅನುಭವ ಪಡೆಯುತ್ತಾ ಮತ್ತೊಂದು ಕಡೆ ತಾಯಿಯೊಡ ಗೂಡಿ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾ ಲೀಲಾವತಿ ತನ್ನಲ್ಲಿ ಇಬ್ಬರ ಗುಣ ಗಳನ್ನೂ ಅಳವಡಿಸಿಕೊಂಡು ದ್ವಿಮುಖ ಶಕ್ತಿಯಿಂದ ಬ್ರಿಟಿಷ್ ಸರ್ಕಾರದ ವಿರುದ್ಧ ಸೆಟೆದು ನಿಂತರು.

ಪಾಟೀಲ ದಂಪತಿಗಳಂತೆ, ಅವರ ಜೊತೆಗೆ ಈ ನೂತನ ದಂಪತಿಗಳೂ ಚಳವಳಿ ಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಪರಿಣಾಮ ವೀರಣ್ಣಗೌಡರನ್ನು, ವೆಂಕಟೇಶ ಮಾಗಡಿಯವರನ್ನು ಬಂಧಿಸಿ ಹುಬ್ಬಳ್ಳಿಯ ಜೈಲಿನಲ್ಲಿಡಲಾಯಿತು.

ರಾಷ್ಟ್ರೀಯ ಮಟ್ಟದ ಚಳವಳಿಯ ನಾಯಕಿಯಾದಗಮ್ಮ ನಾನ ಜೊತೆ ಮಗಳೂ ಸೇರಿಕೊಂಡು ಮಹಿಳಾ ವಿದ್ಯಾಪೀಠದ ನೆಪದಲ್ಲಿ ಕನ್ಯೆಯರನ್ನು ಸ್ವಾತಂತ್ರ್ಯ ಸಂಗ್ರಾಮಕ್ಕೆ ಪ್ರಚೋದಿಸುತ್ತಿರುವರೆಂಬ ಆರೋಪದ ಮೇಲೆ ತಾಯಿ ಮಗಳಿಬ್ಬ ರನ್ನೂ ಬಂಧಿಸಿ ಲೀಲಾವತಿಯನ್ನು ಹಿಂಡಲಗಿ ಜೈಲಿಗೂ, ನಾಗಮ್ಮನವರನ್ನು ಯರವಾಡಾ ಜೈಲಿಗೂ ಕಳುಹಿಸಿದರು. ಆ ಜೈಲಿನಲ್ಲಿ ಸ್ವಾತಂತ್ರ್ಯ ಆಂದೋಲನದ ವೀರವನಿತೆಯರಾದ ಕರ್ನಾಟಕದ ಕೃಷ್ಣಾಬಾಯಿ ಪಂಜೇಕರ, ರಮಾಬಾಯಿ ಯಾಳಗಿ, ಶಕುಂತಲಾ ಕುರ್ತಕೋಟಿ, ಇಂದುಬಾಯಿ ಗುಸಾಜಿ, ಪ್ರಮಿಳಾ ದೇಶಪಾಂಡೆ, ಶಕುಂತಲಾ ದಾಬಡೆ ಮತ್ತು ಗುಜರಾತಿನ ಮಣಿಬೆನ್, ಮೃಣಾಲಿನಿ ಸಾರಾಭಾಯಿ ಇವರೆಲ್ಲಾ ಇದ್ದುದರಿಂದ ಜೈಲಿನ ಜೀವನವೂ ರಾಷ್ಟ್ರೀಯ ವಿಚಾರಗಳ ಮಂಥನಕ್ಕೆ ಅವಕಾಶ ಮಾಡಿಕೊಟ್ಟಿತು ಎನ್ನುತ್ತಾರೆ ಲೀಲಾವತಿಯವರು.

"ಜೈಲುವಾಸದ ಕಷ್ಟದ ಜೊತೆಗೆ ಕಾಲರಾ ರೋಗ ಅಂಟಿಕೊಂಡಿತು. ಒಬ್ಬರಿಂದೊಬ್ಬರಿಗೆ ಈ ಅಂಟು ಜಾಡ್ಯ ಹರಡಿ ಜೈಲಿನಲ್ಲಿದ್ದವರು ಈ ಬೇನೆಯಿಂದ ನರಳಬೇಕಾಯಿತು. ಕಾಲರಾದಿಂದ ಇಬ್ಬರು ಹೆಂಗಸರು ಸತ್ತ ಮೇಲೆ ಎಚ್ಚೆತ್ತ ಸರ್ಕಾರ ಮಿಕ್ಕವರನ್ನು ಜೈಲಿನಿಂದ ಬಿಡುಗಡೆ ಮಾಡಿತು....ಜೈಲು ವಾಸದಲ್ಲಿ ಖಾಯಿಲೆಯಿಂದ ಬಳಲಿದೆನಾದರೂ ಜೀವಂತ ಉಳಿದು ಸ್ವರಾಜ್ಯವನ್ನು ಕಂಡೆ" ಎಂದು ಕಷ್ಟ ಪರಂಪರೆಯನ್ನು ದಾಟಿ ಸುಖವನ್ನು ಕಂಡಷ್ಟು ಸಂತೋಷದಿಂದ ಶ್ರೀಮತಿ ಮಾಗಡಿಯವರು ನುಡಿಯುತ್ತಾರೆ.

ಜೈಲಿನಲ್ಲಿದ್ದಾಗ ನಡೆದ ಒಂದು ಸಂದರ್ಭ ಲೀಲಾವತಿಯವರಿಗೆ ಮರೆಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಲಾಗದ ಘಟನೆಯಾಗಿದೆ. ಸೆರೆಮನೆಯಲ್ಲಿ ಒಂದು ದಿನ ಎಲ್ಲರೂ ಊಟಕ್ಕೆ ಕುಳಿತಿದ್ದಾಗ, ಜೈಲಿನ ಅಧಿಕಾರಿ ಬೂಟ್ಸ್ ಕಾಲಿನಲ್ಲೇ ಒಳಗೆ ಪ್ರವೇಶಿಸಿದ. ಬೂಟ್ಸ್ ತೆಗೆದು ಬರಲು ಹೇಳಿದಾಗ, ಕಾಲನ್ನು ಮೇಲೆತ್ತಿ ನೀವೇ ಬೂಟ್ಸ್ ಬಿಚ್ಚಿ' ಎಂದು ಆಜ್ಞೆ ಮಾಡಿದ. ಈ ಅಸಭ್ಯ ವರ್ತನೆಯಿಂದ, ಅಧಿಕಾರಿಯ ಗರ್ವದ ಧೋರಣೆಯಿಂದ ಮನ ನೊಂದ ಲೀಲಾವತಿ ಮಾಗಡಿ ಮತ್ತು ಸಂಗಡಿಗರು ಆತನು ಕ್ಷಮೆ ಕೇಳುವವರೆಗೂ ಜೈಲಿನಲ್ಲಿ ಉಪವಾಸ ಸತ್ಯಾಗ್ರಹ ಮಾಡಿದರು.

ಶಾಂತಿ, ಸಹನೆ. ತಾಳ್ಮೆಯ ಈ ಪಾಠ ನಿಜವಾದ ಅನುಭವವಾಯ್ತು. ಜೈಲಿನ ಅಧಿಕಾರಿಗೆ ಬುದ್ಧಿ ಕಲಿಸಿದಂತಾಯ್ತು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬಳಲುತ್ತಿರುವ ತಮ್ಮ ಪವಿತ್ರ ಧ್ಯೇಯವನ್ನು ನಿರೂಪಿಸಿ, ತಮಗೆ ಕೊಡಬೇಕಾದ ಗೌರವವನ್ನು ಪಡೆದುಕೊಂಡರು.

೧೯೫೭ರಲ್ಲಿ ಮತ್ತು ೧೯೬೭ರಲ್ಲಿ ಕರ್ನಾಟಕ ಶಾಸನ ಸಭಾ ಸದಸ್ಯರಾಗಿ ಆಯ್ಕೆಗೊಂಡಿದ್ದಲ್ಲದೆ, ೧೯೬೮ರಲ್ಲಿ ವೀರೇಂದ್ರ ಪಾಟೀಲರ ಸಂಪುಟದಲ್ಲಿ ರಾಜ್ಯಮಟ್ಟದ ಸಚಿವೆಯಾಗಿದ್ದ ಲೀಲಾವತಿ ವೆಂಕಟೇಶ ಮಾಗಡಿಯವರು ಈಗ ಹುಬ್ಬಳ್ಳಿಯಲ್ಲಿ ಅಖಿಲ ಕರ್ನಾಟಕ ಖಾದಿ ಗ್ರಾಮೋದ್ಯೋಗ ಕೇಂದ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಸುಮಾರು ಒಂದು ಸಾವಿರದ ಐನೂರು ಹೆಣ್ಣುಮಕ್ಕಳಿರುವ ಒಂದು ಶಾಲೆಯ ನಿರ್ವಾಹಕಿಯೂ ಆಗಿದ್ದಾರೆ.

"ಶಿಶು ವಿಹಾರದಿಂದ ಪ್ರಾರಂಭವಾಗಿ ತರಬೇತಿ ಕೇಂದ್ರದವರೆಗೂ ವಿಸ್ತರಿಸಿರುವ ಈ ಶಾಲೆಯ ಸ್ಥಾಪಕರು ನಮ್ಮ ತಾಯಿ ಮತ್ತು ಮಾಗದರ್ಶಿ ಡಾ॥ ಕರ್ವೆಯವರು" ಎನ್ನುತ್ತಾರೆ ಲೀಲಾವತಿ.

ಸಾಬರಮತಿಯಲ್ಲಿ ಹೆಣ್ಣು ಮಕ್ಕಳ ಶಿಕ್ಷಣ ಕ್ರಮವನ್ನು ಗಾಂಧೀಜಿಯವರ ತತ್ವದ ಆಧಾರದ ಮೇಲೆ ಪ್ರಾರಂಭಿಸಿದವರು ಕರ್ವೆಯವರೇ. ಅನಂತರ ಇದೇ ಮಾದರಿಯನ್ನನುಸರಿಸಿ ಪುಣೆಯಲ್ಲಿ ತಾರಾಬಾಯಿಯವರು ಹೆಣ್ಣು ಮಕ್ಕಳ ಶಾಲೆಯನ್ನು ಸ್ಥಾಪಿಸಿದರು. ಈ ಮುಖಂಡರ ನಿರ್ದೇಶನದಲ್ಲಿ ಹುಬ್ಬಳ್ಳಿಯ ಶಾಲೆಯನ್ನು ಸ್ಥಾಪಿಸಿದರು. ಶಾಲೆಯನ್ನು ಪ್ರಾರಂಭಿಸಿದವರು ಲೀಲಾವತಿಯವರ ತಾಯಿ ನಾಗಮ್ಮ ಪಾಟೀಲರು.

ಸ್ವಾತಂತ್ರ್ಯದ ನಂತರ ಹುಬ್ಬಳ್ಳಿಯಲ್ಲಿ ರೂಪುಗೊಂಡ ಹೆಣ್ಣು ಮಕ್ಕಳ ಶಾಲೆ ಹರಿಜನ ಬಾಲಿಕಾಶ್ರಮ. ೧೯೩೨ ೩೩ರಲ್ಲಿ ಭಾರತಾದ್ಯಂತ ಬಾಪೂರವರು ಪ್ರವಾಸ ಕೈಗೊಂಡಾಗ, ಅವರ ಜೊತೆ ಹೋಗಿದ್ದ ನಾಗಮ್ಮ ಪಾಟೀಲರಿಗೆ ಹುಬ್ಬಳ್ಳಿಯಲ್ಲಿ ಹರಿಜನ ಬಾಲಿಕಾಶ್ರಮವನ್ನು ಸ್ಥಾಪಿಸಬೇಕೆಂಬ ಆಲೋಚನೆ ಆಗಲೇ ಮೂಡಿತ್ತು. ಭಾರತ ಸ್ವಾತಂತ್ರ್ಯ ಗಳಿಸಿದ ಕೂಡಲೇ ಈ ಆಲೋಚನೆಯನ್ನು ತಾಯಿ ಮಗಳು ಕೂಡಿ ಕಾರ್ಯಗತ ಮಾಡಿದರು. ೧೯೫೪ರಲ್ಲಿ ಜವಾಹರಲಾಲ ನೆಹರೂ ಈ ಶಾಲೆಗೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಭೇಟಿಯಿತ್ತಾಗ ಈ ಅಭಿಪ್ರಾಯವನ್ನು ಇನ್ನೂ ವಿಸ್ತರಿಸಿ "ಮಹಿಳಾ ವಿದ್ಯಾ ಪೀಠ" ವೆಂದು ಹೆಸರಿಟ್ಟರು.

ಈ ವಿದ್ಯಾಪೀಠದೊಡನೆ ಇಟ್ಟಿರುವ ನಿಕಟ ಸಂಬಂಧ ಲೀಲಾವತಿಯವರನ್ನು ಹೆಚ್ಚಾಗಿ ಮಹಿಳೆಯರ ಕಡೆಗೆ, ಹೆಣ್ಣು ಮಕ್ಕಳ ಕಡೆಗೆ ಅವರ ಕ್ರಿಯಾಶೀಲತೆಯನ್ನು ಆಕರ್ಷಿಸುತ್ತಿರಲು ಒಂದು ಕಾರಣ. ಆದ್ದರಿಂದಲೇ ಅಖಿಲ ಕರ್ನಾಟಕ ಸ್ತ್ರೀ ಶಕ್ತಿ ಜಾಗೃತಿ ಸಮ್ಮೇಳನ ಬೆಂಗಳೂರಿನಲ್ಲಿ ಜರುಗಿದಾಗ ಅವರ ಭಾಷಣ ಅವರ ಆಶಯವನ್ನು ಹೊರಗೆಡಹಿತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

# ಮನ್ನಂಗಿ ದೇವಕ್ಕ ರಮಾನಂದ

ಹಾವೇರಿಯಿಂದ ಜಂಗಮಕೊಪ್ಪಕ್ಕೆ ಸುಮಾರು ಐದು ಕಿಲೋಮೀಟರ್ ದೂರವಿರಬಹುದು. ಉದ್ದಕ್ಕೂ ಹೆಂಚಿನ ಮನೆಗಳ ದೃಶ್ಯ. ಹೆಂಚಿನ ಮೇಲೆ, ಮನೆಯ ಮೇಲ್ಛಾವಣಿ ಮುಚ್ಚುವಂತೆ ಬಿಸಿಲಿಗೆ ಒಣಗಿಸಿರುವ ಕೆಂಪು ಮೆಣಸಿನಕಾಯಿ ಹರಡಲ್ಪಟ್ಟು ನೋಡಲು ಸುಂದರವಾಗಿ ಕಾಣುತ್ತದೆ. ಮನೆಯ ಮುಂದೆ ದೊಡ್ಡ ಅಂಗಳದಲ್ಲಿ ಸಗಣಿಯಿಂದ ಸಾರಿಸಿದ ನೆಲದ ಮೇಲೂ ಕೆಂಪು ಮೆಣಸಿನಕಾಯಿ ರಾಶಿ.

ಇಂತಹ ಮನೆಗಳ ನಡುವೆ ಆಶ್ರಮ ಸದೃಶ ಮನೆಯೊಂದರಲ್ಲಿ ದೇವಕ್ಕ ರಮಾನಂದ ದಂಪತಿಗಳ ವಾಸ. ಮನೆಯೊಳಗೆ ಹೋದರೆ ಗಾಂಧೀಜಿಯ ಕುಟೀರವನ್ನು ಜ್ಞಾಪಕಕ್ಕೆ ತರುವ ವಸ್ತುಗಳು ಮತ್ತು ವ್ಯಕ್ತಿಗಳು.

ಅಜ್ಜ ಅಜ್ಜಿಯರಾದ ರಮಾನಂದ ದೇವಕ್ಕ ಇಬ್ಬರೂ ಕೈ ಮುಗಿದು ಸ್ವಾಗತಿಸಿ ನಗುತ್ತಾ ಒಳಗೆ ಕರೆದು, ಜಮಖಾನೆ ಹಾಸಿ, ಬಂದವರನ್ನೂ ಕುಳಿತುಕೊಳ್ಳಲು ಹೇಳುವರು.

ರಮಾನಂದರನ್ನು ಕಾಣಲು ಧಾರವಾಡದಿಂದ, ಹಾವೇರಿಯಿಂದ, ರಾಣೆಬೆನ್ನೂರಿಂದ ಬಂದಿದ್ದ ಗಣ್ಯ ವ್ಯಕ್ತಿಗಳೂ ಜಮಖಾನದ ಮೇಲೆಯೇ ಆಸೀನರಾದರು. ಕುರ್ಚಿ, ಮೇಜುಗಳು, ಸೋಫಾ ಸೆಟ್ಟುಗಳು ಈ ದಂಪತಿಗಳಿಗೆ ಅವಶ್ಯಕವಿಲ್ಲ.

"ಚಾಪಿ ಹಾಸಿದೆ ಕೂಡ್ರಿ" ಎಂದು ಉಪಚಾರದ ನುಡಿಯಿಂದ ಎಲ್ಲರನ್ನೂ ಚಾಪೆಯ ಮೇಲೆ ಜಮಖಾನ ಹಾಸಿದ ನೆಲದ ಮೇಲೆಯೇ ಕೂರಿಸುವರು.

ನಮ್ಮೊಡನೆ ರಮಾನಂದರು ಕುಳಿತರೂ, ದೇವಕ್ಕನವರು ಕೈ ಕಟ್ಟಿ ನಿಂತೇ ಇದ್ದರು.

"ನಿಮ್ಮೊಂದಿಗೇ ಮಾತಾಡುವುದಿದೆ ಕುಳಿತುಕೊಳ್ಳಿ" ಎಂದರೆ—

"ಇಲ್ರಿ, ನನ್ನದೇನೂ ವಿಶೇಷವಿಲ್ಲ. ಯಜಮಾನರು ಮುಂದು. ಅವರ ಹಾದಿಯಲ್ಲಿ ನಾವು ಹಿಂದೆ ಅಷ್ಟೆ" ಎನ್ನುತ್ತಾರೆ.

ಪಕ್ಕದಲ್ಲಿ ಕೂರಿಸಿಕೊಂಡರೆ ಗಂಡಸರ ಸರಿಸಮಾನವಾಗಿ ಕುಳಿತುಕೊಳ್ಳಲು ಸಂಕೋಚಪಟ್ಟುಕೊಳ್ಳುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



"ಹಿಂದೊಮ್ಮೆ ನೀವು ಪತ್ರ ಬರೆದಾಗ ನಾವು ಇದ್ದಿಲ್ಲ. ಗಡಿನಾಡ ಗಾಂಧಿಯನ್ನು ನೋಡಿ ಬರಲು ಹೋಗಿದ್ದೆವು. ಈಗ ಬಂದ್ರಿ ಸಂತೋಷಾತ್ರೀ ನಿಮ್ಮನ್ನು ನಾವು ನೋಡಿದ ಹಾಂಗಾಯ್ತು. ಚಹಾ ತರ್ಲೇನ್ರೀ" ಎಂದು ಸಂಭ್ರಮಪಟ್ಟು ಮಾತಾಡಿಸಿದರು ದೇವಕ್ಕನವರು.

ಈ ದಂಪತಿಗಳ ಜೋಡಿ, ವರಸಾಮ್ಯ ನೋಡಿಜೋಡಿಸಿದಂತೆ ಕಾಣುತ್ತದೆ. ಇಬ್ಬರೂ ಕೃಶವಾಗಿದ್ದರೂ ದೃಢಕಾಯದವರೆಂದು ಸ್ಪಷ್ಟವಾಗುತ್ತಿತ್ತು. ಇಬ್ಬರೂ ಧರಿಸಿದ್ದ ಬಟ್ಟೆಗಳು ಕೈಯಿಂದ ನೂಲು ತೆಗೆದು ನೇಯ್ದ ಅಪ್ಪಟ ಹತ್ತಿಯ ಬಟ್ಟೆಗಳು. ರಮಾನಂದರ ಅಂಗಿ ವಿಶೇಷವಾಗಿ ಕತ್ತರಿಸಿ ಹೊಲಿದ ಹೊಸ ಮಾದರಿಯದಾಗಿತ್ತು. ಅಂಗಿಗೆ ಕಾಲರ್ ಇಲ್ಲ, ಸಾಲು ಬಟನ್‌ಗಳ ಪಟ್ಟಿ ಇಲ್ಲ. ಕುತ್ತಿಗೆಯ ಪಕ್ಕಕ್ಕೆ ಭುಜದ ಹತ್ತಿರ ಒಂದೇ ಗುಂಡಿ, ಅದೂ ನೂಲಿಂದ ಮಾಡಿದ್ದು. ಎಡಭಾಗದಿಂದ ಕತ್ತಿನ ಪಟ್ಟಿಯನ್ನು ಎಳೆದು ಸೊಂಟದವರೆಗೂ ಕಟ್ಟಿದಂತೆ ಎದೆ ಮುಚ್ಚಿದ ನಿಲುವಂಗಿ.

ಅವರ ಅಂಗಿಯನ್ನೇ ಗಮನಿಸುತ್ತಿದ್ದುದನ್ನು ಕಂಡು ರಮಾನಂದರ ಆಪ್ತರೊಬ್ಬರು "ಇವರೇ ತಮ್ಮ ಅಂಗಿಯನ್ನು ಕತ್ತರಿಸಿ ಹೊಲಿದುಕೊಳ್ಳುವರು. ತಾವೇ ತೆಗೆದ ನೂಲಿನಿಂದ ಬಟ್ಟೆ ಆಗಬೇಕು" ಎಂದು ವಿವರಿಸಿದರು.

ಹಳ್ಳಿಯ ಹೆಂಗಸನ್ನು ಪ್ರತಿನಿಧಿಸುವಂತೆ ಇರುವ ದೇವಕ್ಕನವರಿಗೆ ಒಡವೆ ವಸ್ತ್ರ ಶೃಂಗಾರಗಳ ಬಗೆಗೆ ಎಳ್ಳಷ್ಟೂ ಆಸೆ ಇಲ್ಲವೆನ್ನುವುದು ಅವರ ಅತಿ ಸರಳ ಉಡುಪಿನಿಂದ ಗೊತ್ತಾಗುತ್ತದೆ.

ಆಗತಾನೇ ಬಂದ ಟಪಾಲನ್ನು ತೆಗೆದು ರಮಾನಂದರು ಓದುತ್ತಿದ್ದ ಕಾರಣ ಅವರನ್ನೂ ಅವರ ಕುಟೀರವನ್ನೂ ಗಮನಿಸಲು ಅವಕಾಶ ಸಿಕ್ಕಿತು. ಒಂದು ಕವರನ್ನು ಒಡೆದು ಅದರಲ್ಲಿದ್ದ ನಾಲ್ಕೈದು ಫೋಟೋಗಳನ್ನು ನಮ್ಮ ಮುಂದೆ ಇಟ್ಟು "ಇದೋ ನೋಡಿ, ನೀವು ಬಂದ ಸಮಯಕ್ಕೆ ಸರಿಯಾಗಿ ದೆಹಲಿಯಲ್ಲಿ ನಮ್ಮನ್ನು ತೆಗೆದ ಫೋಟೋಗಳು ಈಗ ಬಂದಿವೆ" ಎಂದು ಟಪಾಲಿನಲ್ಲಿ ಬಂದ ಫೋಟೋಗಳನ್ನು ರಮಾನಂದರು ತೋರಿಸಿದರು.

"ನೀವು ನಮ್ಮೊಂದಿಗೆ ಒಂದು ದಿನವಿರಬೇಕು. ಒಂದೆರಡು ಗಂಟೆಗಳಲ್ಲಿ ನಮ್ಮ ವಿಷಯವನ್ನು ಮಾತಾಡಿ ಮುಗಿಸುವುದಲ್ಲ"—ಎಂದು ಆತ್ಮೀಯತೆಯಿಂದ ಮನ್ನಂಗಿ ದಂಪತಿಗಳು ನುಡಿಯುತ್ತಾರೆ.

ರಮಾನಂದರಿಗೆ ತಾಯಿ ತಂದೆ ಇಟ್ಟ ಹೆಸರು "ರೇವಣ್ಣ". ವಾರ್ಧಾ ಆಶ್ರಮದಲ್ಲಿ ಗಾಂಧೀಜಿಯವರೊಡನೆ ಇದ್ದಾಗ, ಮಹಾತ್ಮರ ಆದರ್ಶದಿಂದ ಬೆಳೆದು, ಮಹಾತ್ಮರಿಗೆ ಸತತವಾಗಿ ಸೇವೆ ಸಲ್ಲಿಸುತ್ತಾ ಪ್ರತಿ ದಿನ ಅವರ ದರ್ಶನದಿಂದ ಪುನೀತನಾದೆನೆಂದು ಅನುಗ್ರಹೀತರಾದ ರೇವಣ್ಣನವರನ್ನು "ರಮಾನಂದ" ಎಂದೇ ಗಾಂಧೀಜಿ ಕರೆಯುತ್ತಿದ್ದರು. ಬಾಪೂ ಕರೆಯುತ್ತಿದ್ದ ಹೆಸರೇ ಈಗಲೂ ಉಳಿದಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಗಾಂಧೀಜಿಯ ಪ್ರಭಾವ ಈ ದಂಪತಿಗಳ ಮೇಲೆ ಪ್ರಬಲವಾಗಿ ಪರಿಣಾಮ ಬೀರಿದೆ ಎನ್ನುವುದಕ್ಕೆ ಇವರಿಬ್ಬರೂ ಈಗ ಜೀವನ ನಡೆಸುತ್ತಿರುವ ರೀತಿ ಮತ್ತು ಅವರ ಆಶ್ರಮವೇ ಸಾಕ್ಷಿ.

ಹಳ್ಳಿಗಳ ಉದ್ಧಾರಕ್ಕಾಗಿ ಬಾಪೂ ಆಶ್ರಮವಾಸಿಯಾಗಿದ್ದು ಗುಡಿಸಲಿನಂತಹ ಮನೆಯಲ್ಲಿದ್ದರು. ಕೈ ಮಗ್ಗವನ್ನು ಉತ್ತೇಜಿಸಲು ಕೈ ರಾಟೆಯಿಂದ ನೂಲು ತೆಗೆದು ಅದರಲ್ಲೇ ಬಟ್ಟೆ ಮಾಡಿ ಧರಿಸಿದರು. ಜಾತಿ ಜಾತಿಯ ನಡುವೆ ವೈಷಮ್ಯವಿರಕೂಡ ದೆಂದು ಎಲ್ಲಾ ಜಾತಿ ವರ್ಗಗಳ ನಡುವೆ ಸಂಪರ್ಕ ಬೆಳೆಸಿದರು.

ಇಂತಹದೇ ಒಂದು ಜೀವನವನ್ನು ರಮಾನಂದ ದಂಪತಿಗಳಲ್ಲಿ ನಾವು ಇಂದಿಗೂ ಕಾಣಬಹುದು.

ಅವರನ್ನು ಸುತ್ತುವರಿದು ಕುಳಿತಿದ್ದ ಗಣ್ಯ ವ್ಯಕ್ತಿಗಳು "ರಮಾನಂದ ದೇವಕ ನವರು ಹಾವೇರಿಯ ಗಾಂಧೀಜಿ ಮತ್ತು ಕಸ್ತೂರಬಾ. ನಮಗೆ ಇವರೇ ಬಾ ಮತ್ತು ಬಾಪೂ" ಎನ್ನುತ್ತಾರೆ.

ಈ ದಂಪತಿಗಳಿಗೆ ಪಟ್ಟಣವಾಸದ ಸೌಲಭ್ಯಗಳ ಇಚ್ಛೆ ಇಲ್ಲದಿದ್ದರೂ, ಇವ ರೊಡನೆ ಸಂಪರ್ಕಿಸಲು ಇಚ್ಛಿಪಡುವ ಮಹಾಜನರು ಇವರಿಗೆ ದೂರವಾಣಿಯೊಂದನ್ನು ಒದಗಿಸಿರುವರು.

ಈ ಮಧ್ಯೆ ದೇವಕ್ಕನವರ ಮಾತನ್ನು ಕೇಳಬಹುದು. "ನಮ್ಮದು ಆಶ್ರಮ ಜೀವನಾರೀ, ಲಗ್ನ ಆದ ಕೂಡಲೇ—ಆಶ್ರಮದ ಗಂಡ—ಶಿಸ್ತಿನ ಮನುಷ್ಯ. ನನ್ನ ಗಂಡ ಕೂಡು ಅಂದ್ರು ಕೂರಬೇಕು. ಕೇಳಿದ್ದೆಲ್ಲಾ ತಕ್ಷಣ ಆಗಬೇಕ್ರಿ ಇವರಿಗೆ. ಇಷ್ಟು ದಿನ ಇವರ ಜೊತೆ ಬಾಳಿದರೂ ಅವರಿಗೆ ಸರಿಯಾದ ಪ್ರವೀಣೆ ಆಗಲಿಲ್ಲ ನಾನು. ಈ ಜೀವ ಹೋಗುವ ಮೊದಲು ನನ್ನ ಗಂಡ ನನ್ನನ್ನು ಹೊಗಳಿದರೆ ಸಾಕ್ರಿ ನಮಗೆ ಗ್ರಾಮ ಜೀವನವೇ ಚೆಂದ. ನನ್ನ ಸಂಸಾರ, ಇದರಲ್ಲಿರುವ ಸುಖ, ನೀವೇನೇ ಅನ್ರಿ, ಮೂರು ಲಕ್ಷ ಕೊಟ್ರೂ ಸಿಗದು"—ಎನ್ನುತ್ತಾರೆ ದೇವಕ್ಕ.

೧೯೩೦ ರಿಂದ ಏಳು ವರ್ಷ ಜೈಲು ವಾಸ ಅನುಭವಿಸಿದ ಗಂಡನೊಡನೆ ತೃಪ್ತಿಯಿಂದ ಬಾಳ್ವೆ ನಡೆಸಿದ ಹೆಣ್ಣು ದೇವಕ್ಕ. ೧೯೩೭ರಲ್ಲಿ ಜೈಲಿನಿಂದ ಬಿಡುಗಡೆಯಾದ ಮೇಲೆ ಗಾಂಧೀಜಿಯವರೊಡನೆ ಇಬ್ಬರಿಗೂ ೧೯೪೦ರ ವರೆಗೆ ಆಶ್ರಮದಲ್ಲಿ ವಾಸ. ೧೯೩೮ ರೀದ ೧೯೪೧ರ ತನಕ ಸೇವಾ ಆಶ್ರಮದಲ್ಲಿ ವಿಧಾಯಕ ಕಾರ್ಯ.

"ಬಾಪೂ ನೆಲೆಸಿದ್ದು ಸೇವಾ ಗ್ರಾಮವಲ್ಲ. "ಸೇಗಾಂವ" ಎಂಬುದು ಆ ಊರಿನ ಹೆಸರು. ಬಾಪೂ ಅಲ್ಲಿ ನೆಲೆಸಿದ ಮೇಲೆ ಹಲವಾರು ವಿಧಾಯಕ ಚಟುವಟಿಕೆಗಳು ನಡೆಯಲಾರಂಭಿಸಿದುವು. ದೇಶದ ನಾನಾ ಭಾಗಗಳಿಂದ ವಿಧಾಯಕ ಕಾರ್ಯ ಕರ್ತರೂ, ರಾಜಕೀಯ ಮುಂದಾಳುಗಳೂ, ದೇಶ ವಿದೇಶಗಳ ಪತ್ರಕರ್ತರೂ, ನಾನಾ ಭಾಷೆಯ ಸಾಹಿತಿಗಳೂ, ಸರಕಾರಿ ಉನ್ನತ ಅಧಿಕಾರಿಗಳೂ ಆದಿಯಾಗಿ ನಾನಾ ತರಹದ ಜನರು ಬರತೊಡಗಿದರು. ಇದೊಂದು ಯಾತ್ರಾಸ್ಥಳ, ಪುಣ್ಯಕ್ಷೇತ್ರವಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಪರಿಣಮಿಸಿತು. ಬಾಪೂ ಸೇವಾ ತತ್ಪರರಾದುದರಿಂದ ಬರ ಹೋಗುವ ಪ್ರತಿಯೊಬ್ಬರೂ ಸೇವಾ ಭಾವನೆಯುಳ್ಳವರಿದ್ದರು. ಈ ಸೇಗಾಂವಿಗೆ ಸೇವಾ ಗ್ರಾಮವೆಂದು ನಾಮಕರಣ ಮಾಡಿದರು. ಅಂದಿನಿಂದ ಅದು ಸೇವಾಗ್ರಾಮ. ವಾರ್ಧಾಕ್ಕೆ ನಾಲ್ಕು ಮೈಲು ದೂರದಲ್ಲಿದೆ"-ಎಂದು ಹೇಳುತ್ತಾ ರಮಾನಂದ ಸೇವಾಗ್ರಾಮದ ವಿಷಯವನ್ನು ವಿವರಿಸುವರು.

೧೯೪೨ರ ಉಗ್ರ ಚಳವಳಿಯನ್ನು ರಮಾನಂದ ದಂಪತಿಗಳು ಹೇಳುತ್ತಾರೆ, "ಆ ದಿನಗಳಲ್ಲಿ ನಮ್ಮ ಗ್ರೂಪ್ ಏನು ಮಾಡಿತು ಎನ್ನುವುದು ವಿಶೇಷ. ಕುಡಿಯುವುದಕ್ಕೆ ನೀರಿಲ್ಲ. ತಿಂಗಳುಗಟ್ಲೆ ಪಶುಪಕ್ಷಿಗಳ ಹಾಗೆ ಇರುತ್ತಿದ್ದೆವು. ಒಂದು ಚೊಂಬು ನೀರಿನಲ್ಲೇ ಎಲ್ಲಾ ಆಗಬೇಕು. ಇದರ ಕಡೆ ನಮಗೆ ಗಮನವೇ ಇದ್ದಿಲ್ಲ. ಗಾಂಧಿ ಮಹಾತ್ಮರ ತತ್ವ ಅನುಷ್ಠಾನಕ್ಕೆ ಬರಬೇಕು. ನಮ್ಮಿಂದ ದೋಷ ಆಗಬಾರದು ಎಂದು ಎಚ್ಚರಿಕೆ ವಹಿಸಿದ್ದೆವು. ಚಳವಳಿಯ ಕಾರ್ಯಗಳನ್ನು ಹಾಕಿಕೊಂಡು ಎಲ್ಲರೂ ಬೇರೆ ಬೇರೆ ಕಡೆ ಹೋಗಿ, ಕಡೆಗೆ ಸಾಯಂಕಾಲ ಒಟ್ಟಿಗೆ ಸೇರುತ್ತಿದ್ದೆವು. ನಾವು ಏನು ಮಾಡಿದೆವು, ಏನು ತಂದೆವು ಎಂಬುದನ್ನು ಪ್ರತಿಜ್ಞೆ ಮಾಡಿ ಹೇಳಬೇಕಾಗಿತ್ತು."

"ಒಂದು ಸಲ ಇಲ್ಲಿಂದ ಸುಮಾರು ಇಪ್ಪತ್ತು ಮೈಲು ದೂರದಲ್ಲಿರುವ ಬಾಳೆಹೊಸೂರಿಗೆ ಹೋಗಿದ್ದೆವು. ಅಲ್ಲಿ ಹೆಣ್ಣು ಮಕ್ಕಳು ಚಳವಳಿಯ ಕೆಲಸಕ್ಕಾಗಿ ಮನೆಯ ಎಲ್ಲಾ ವಸ್ತುಗಳನ್ನೂ ಕೊಡುತ್ತಿದ್ದರು. ಚಿನ್ನದ ಸಾಮಾನುಗಳನ್ನು ಕೊಟ್ಟರು. ಎಲ್ಲವನ್ನೂ ತಂದು ಒಪ್ಪಿಸುತ್ತಿದ್ದೆವು. ನಾವು ಸತ್ಯದಿಂದ ನಡೆದುಕೊಳ್ಳುತ್ತಿದ್ದ ರೀತಿ ಪೋಲೀಸರನ್ನೇ ದಂಗು ಮಾಡುತ್ತಿತ್ತು"—ಎನ್ನುತ್ತಾರೆ ರಮಾನಂದ.

ಒಂದು ಸಲ ಹಾನಗಲ್‌ನ ಸೆರೆಯಲ್ಲಿದ್ದಾಗ ಕ್ರಿಮಿನಲ್ ಖೈದಿಗಳನ್ನು ಚಳವಳಿಗಾರರೊಂದಿಗೇ ಹಾಕಬೇಕಾದ ಪ್ರಸಂಗ ಬಂತು. ಇಂತಹ ಖೈದಿಗಳ ವರ್ತನೆ ನಮ್ಮೊಂದಿಗೆ ಸರಿಬೀಳುವುದಿಲ್ಲ. ನಮ್ಮೊಂದಿಗೆ ಅವರು ಬೇಡವೆಂದು ಹಠ ಹಿಡಿದು ಶಿರಸ್ತೇದಾರರಿಗೆ ದೂರು ಕೊಟ್ಟಾಗ, "ನೀವು ಗಾಂಧೀ ಮಂದಿ, ಎಲ್ಲರೊಂದಿಗೂ ಕೂಡಿ ಇರ್ರಿ. ನೀವು ನಮಗೆ ಪಾಠ ಹೇಳಬೇಡಿ"—ಎಂದು ಶಿರಸ್ತೇದಾರರು ಗದರು ಹಾಕಿದರು. ಇವನಿಗಿಂತ ಸೊಕ್ಕು ಫೌಜುದಾರನಿಗೆ. ರಾತ್ರಿ ಎಂಟು ಗಂಟೆಗೆ ಹಾಜರಿ ಕೂಗಿ ಕ್ರಿಮಿನಲ್ ಖೈದಿಯನ್ನು ಒಳಗೆ ನುಗ್ಗಿಸಿಯೇ ಬಿಟ್ಟ. ನಾವು ಬಿಡಬೇಕಲ್ಲ. ಒಳಗಡೆಯಿಂದ ಅವನನ್ನು ದೂಡಿದೆವು, ಹೊರಗಿನಿಂದ ಫೌಜುದಾರ ದೂಡುತ್ತಿದ್ದ. ಕಡೆಗೆ ನಮ್ಮ ಮಾತೇ ನಡೆಯಿತು. ಫೌಜುದಾರನಿಗೆ ಅಲ್ಲಿಂದ ವರ್ಗವಾಯಿತು"—ಎಂದು ಹೇಳುತ್ತಾ ರಮಾನಂದರು ಸ್ವಾತಂತ್ರ್ಯ ಚಳವಳಿಗಾರರಿಗೆ ಸ್ಥಳೀಯರಿಂದ ಮಾನ್ಯತೆ ಇತ್ತು ಎಂಬುದನ್ನು ನಿರೂಪಿಸುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಇದೇ ಸಂದರ್ಭವನ್ನು ಜ್ಞಾಪಿಸಿಕೊಳ್ಳುತ್ತಾ ದೇವಕ್ಕ ಹೀಗೆನ್ನುತ್ತಾರೆ—"ಆಗ ಚೊಚ್ಚಲ ಮಗು. ಹಸೀ ಬಾಣಂತಿ ನಾನು, ಗಂಡನಿಗೆ ಜೈಲುವಾಸ, ನಿತ್ಯವೂ ಇವರನ್ನು ನೋಡಲು ರೊಟ್ಟಿಯನ್ನು ತೆಗೆದುಕೊಂಡು ಸುರಂಗದ ಜೈಲಿಗೆ ಹೋದರೆ ತಿನ್ನಲು ಒಲ್ಲೆನೆನ್ನುತ್ತಿದ್ದರು. ನೀನು ರೊಟ್ಟಿ ತಂದರೆ ಐನೂರು ಮಂದಿಗೂ ಮಾಡಿತಾ. ಇಲ್ಲವೆಂದರೆ ನನಗೂ ಬೇಡವೆನ್ನುತ್ತಿದ್ದರು. ಗಂಡನ ಆಜ್ಞೆಯಂತೆ ನಾನು ಹಾಗೆಯೇ ನಡೆದುಕೊಂಡೆ. ಹಬ್ಬ ಬಂದಾಗ ಎರಡು ಸಲ ಹೋಳಿಗೆ ಮಾಡಿ ಸೆರೆಮನೆಗೆ ಹೊತ್ತಿದ್ದೀನ್ರಿ.... ನಮ್ಮ ಯಜಮಾನರು ಪ್ರೇಮಕ್ಕೆ ಪ್ರಾಣ ಕೊಡುತ್ತಾರೆ. ಹಾಗೆಯೇ ದ್ವೇಷಕ್ಕೂ ಪ್ರಾಣ ತೆರುತ್ತಾರೆ. ನಮ್ಮ ಯಜಮಾನರ ಹತ್ತಿರ ಬರುವವರೆಲ್ಲಾ ಅಭಿಮಾನಿಗಳು... ನಾನೇನೂ ಅಷ್ಟು ಕಲಿತವಳಲ್ಲ. ಆದರೆ ಸಂಸಾರದಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ತಿಳಿದವಳು. ನನ್ನ ಮತ್ತು ನನ್ನ ಗಂಡನ ಪ್ರೀತಿ ಮದುವೆಯಾದ ಮೇಲೆಯೇ" ಎನ್ನುತ್ತಾ ನಗೆಯಾಡುತ್ತಾರೆ ದೇವಕ್ಕ.

ದೇವಕ್ಕನವರು ೧೯೨೩ರಲ್ಲಿ ಪತ್ತಿಮುತ್ತು ಎಂಬಲ್ಲಿ ಜನಿಸಿದರು. ತಾಯಿ ಅಪರಂಜಿಯಂತಹ ಗುಣದವರು. "ಇವರಿಂದ ಬೇಕಾದೆಷ್ಟು ಕಲಿತಿದ್ದೀನ್ರಿ ಆಕಳನ್ನು ಸಾಕುವುದು. ನಿಸರ್ಗ ಚಿಕಿತ್ಸೆ ಮಾಡುವುದು. ಚೇಳು ಕಡಿದರೆ ಗಾಯವಾದರೆ ನನ್ನ ಔಷಧಿಸೊಪ್ಪಿನ ರಸ ಅಷ್ಟೆ ನಾವು ತಲೆಶೂಲಿ ಕಂಡವರೇ ಅಲ್ಲ. ಮಾತ್ರೆಗಳನ್ನು ತಿಂದವರೇ ಅಲ್ಲ. ಚಿಕ್ಕ ವಯಸ್ಸಿನಲ್ಲಿ ಶಾಲೆಯ ದಿನಗಳಲ್ಲಿ ಲೆಜೀಮು ಲಾಠಿ ಕಲಿತಿದ್ದೇನೆ. ಇಪ್ಪತ್ತೈದು ಹುಡುಗಿಯರೊಂದಿಗೆ ವಂದೇಮಾತರಂ ಹೇಳುತ್ತಾ ನಾನೇ ಲೀಡರ್ ಆಗಿ ಮೆರವಣಿಗೆ ಹೋಗಿದ್ದೇನ್ರಿ. ಪೋಲೀಸರು ನಮ್ಮನ್ನು ತಡೆದು ಹಿಡಿದರೆ ನೀವೇನು ಬೇರೆ ದೇಶವರೋ? ನಮ್ಮೊಟ್ಟಿಗೆ ಹುಟ್ಟಿದವರಲ್ಲವೊ' ಎಂದು ಧೈರ್ಯಮಾಡಿ ಗಟ್ಟಿಯಾಗಿ ಹೇಳುತ್ತಿದ್ದೆ. ಚಿಕ್ಕವಯಸ್ಸಿನಿಂದ ನನಗೆ ಗುಂಡಿಗೆ ಧೈರ್ಯ ಜಾಸ್ತಿ, ನಮ್ಮ ಯಜಮಾನರು ನನ್ನನ್ನು ಅವರು ಹೋದ ಕಡೆಗೆಲ್ಲಾ ಕರೆದುಕೊಂಡು ಹೋಗಿ ಇನ್ನಷ್ಟು ಧೈರ್ಯ ತುಂಬಿದ್ದಾರೆ. ಕಲ್ಕತ್ತಾ, ಬೊಂಬಾಯಿ, ಡಿಲ್ಲಿ ಎಲ್ಲಾ ಕಡೆಗೂ ಗಂಡನೊಡನೆ ಆಫೀಸುಗಳಿಗೆ ಸುತ್ತಿದ್ದೀನಿ. ಶ್ರೀ ರಾಮನಿವಾಸ ಮಿರ್ಧಾರವರು ನಮ್ಮಿಬ್ಬರನ್ನೂ ಕಂಡು 'ನೀವು ಸ್ವಾತಂತ್ರ್ಯ ಯೋಧರು. ದೇಶಕ್ಕಾಗಿ ಹೋರಾಡಿ ಬಾಳ್ವೆ ನಡೆಸಿ ಎಂದು ಹರಸಿದರು.

"ಅಷ್ಟೇಕೆ? ನಾವು ಮೊನ್ನೆ ದೆಹಲಿಗೆ ಹೋದಾಗ, ಮುಖ್ಯಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆಯವರನ್ನು ಕಂಡಾಗ ಹೇಳಿದ್ದೀನ್ರಿ ನಿಮಗೆ ರಕ್ತಗತವಾಗಿ ಬಂದಿರುವ ಬುದ್ಧಿ ಉಪಯೋಗಿಸಿ ನಿಮ್ಮ ಸೇವೆಯನ್ನು ದೇಶಕ್ಕಾಗಿ ಮನಸ್ಸಿಟ್ಟು ಮಾಡಿ. ನಾನು ತಾಯಿ ಸಮಾನದಲ್ಲಿದ್ದು ಹೇಳುತ್ತೇನೆ. ಒಂದೊಮ್ಮೆ ರೊಚ್ಚಿಗೇಳುವಂತಾಗುತ್ತದೆ. ಬಾಧೆ ಆಗುತ್ತದೆ ಈಗ ಸರ್ಕಾರದಲ್ಲಿ ಸರಿಯಾದ ಚಾಲಕರೇ ಇಲ್ಲದಂತಾಗಿದೆ. ನಾವು ಬಸವಳಿದು ಬೆಂಡಾಗಿ ದುಡಿದು ಗಳಿಸಿದ ಸ್ವಾತಂತ್ರ್ಯ ಇದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ನಾವು ಇರಿಸಿದ ಆಳುಗಳು ನೀವು ಎಚ್ಚರದಿಂದ ಆಡಳಿತ ನಡೆಸಿ ಎಂದಿದೀನಿ" ಎನ್ನುತ್ತಾ ದೇವಕ್ಕ ಮಾತು ಮುಂದುವರಿಸುತ್ತಾರೆ "ನಮಗೆ ಬಾಪೂಜಿ ಹೇಗೆ ಕಲಿಸಿಕೊಟ್ಟರು ಗೊತ್ತೇನು ? ಸಫಾಯಿ ಮಾಡುವುದರಿಂದ ನಮ್ಮ ಟ್ರೈನಿಂಗ್ ಪ್ರಾರಂಭ. ಏನಪ್ಪಾ ಮೂಗು ಮುಚ್ಚಿಕೊಂಡೇ ಓಡಾಡುತ್ತಿ. ಆಶ್ರಮಕ್ಕೆ ನಾಲಾಯಕ್ ಆಗುತ್ತಿ. ನನ್ನ ಜೊತೆ ಬಾ ಪಾಯಿಖಾನೆ ತೆಗೆಯಬೇಕು. ಹರಿಜನ ಕೇರಿಯಲ್ಲಿ ಕೆಲಸ ಮಾಡ ಬೇಕು. ಸ್ವಾತಂತ್ರ್ಯ ಬೇಕು ಅಂತೀರಿ" ಎನ್ನುತ್ತಾ ತಾವೂ ನಮ್ಮ ಜೊತೆ ಬಂದು ಬಾಪೂ ಕೆಲಸ ಮಾಡುತ್ತಿದ್ದರು. ಹಳ್ಳಿ ಹಳ್ಳಿಗೆ ಹೋಗುತ್ತಿದ್ದೆವು. ಗಾಂಧೀವಾದದ ವಿಧಾಯಕದಲ್ಲಿ ಸಂಪರ್ಕ ಬೆಳೆಸಿದೆವು ಚಳವಳಿ ಮಾಡುವ ತನಕ ಜನರನ್ನು ಸೇರಿಸಿ ಸುತ್ತಾಡಿದ್ದೇನೆ.

ಆಶ್ರಮದಲ್ಲಿ ಎಲ್ಲರೂ ತಿನ್ನುವ ಊಟವೆಂದರೆ, ರೊಟ್ಟಿ ಮತ್ತು ಪಲ್ಲೆ. ಉಪ್ಪು ಹಾಕಿ ಒಗ್ಗರಣೆ ಕೊಟ್ಟ ಪಲ್ಲೆ ಅಲ್ಲದು. ಎಲ್ಲಾ ಕಾಯಿ ತರಕಾರಿಗಳನ್ನೂ ಒಟ್ಟಾಗಿ ಸೇರಿಸಿ ಬೇಯಿಸುತ್ತಿದ್ದರು. ಬರೀ ಸಪ್ಪೆ. ಉಪ್ಪು ಇಲ್ಲ. ಖಾರವೂ ಇಲ್ಲ ನಾವು ಯಾರಿಗೂ ತಿಳಿಯದೆ ಸೊಂಟದಲ್ಲಿ ಎರಡು ಮೆಣಸಿನಕಾಯಿ ಇಟ್ಟುಕೊಂಡು ಪಲ್ಲೆ ಜೊತೆ ಅಗಿದು ರೊಟ್ಟಿ ತಿನುತ್ತಿದ್ದೆವು. ಇದು ಗಾಂಧೀಜಿ ಕಣ್ಣಿಗೆ ಬಿದ್ದೇ ಬಿತ್ತು. "ಇದೇನು ನಿಮ್ಮ ಅವಸ್ಥೆ ಇದು ? ಖಾರ ಕಚ್ಚದಿದ್ದರೆ ಹೊಟ್ಟೆ ತುಂಬುವುದಿಲ್ಲವೆನ್ನುತ್ತದೆಯೇ ? ಯಾರಿಗೂ ಖಾರ ಬೇಕಿಲ್ಲವೆಂದೇ ಹಾಗೆ ಬೇಯಿಸಿರುವುದು" ಎಂದರು. ನಮಗೆ ತಲೆ ತಗ್ಗಿಸುವಂತಾಯಿತು. ಮಹಾತ್ಮರು ಹಾಗೆ ಹೇಳುವುದರಲ್ಲಿ ಅರ್ಥವಿದೆ. ಉಪ್ಪು. ಹುಳಿ, ಖಾರ ಇಲ್ಲದೆ ಸಪ್ಪೆ ಊಟ ಮಾಡಿ ನಾವು ಸನ್ಯಾಸಿಗಳಾಗಿಯೇ ಇದ್ದೆವು. ಗಂಡು ಹೆಣ್ಣು, ಯುವಕ ಯುವತಿಯರು ಒಂದಾಗಿ ಕೆಲಸ ಮಾಡುತ್ತಿದ್ದೆವು. ಕಾರ್ಯ ತತ್ಪರತೆ ಅಷ್ಟೇ ನಮ್ಮ ಭಾವನೆ. ಬೇರಾವ ಮನೋಭಾವನೆಯೂ ಇರುತ್ತಿದ್ದಿಲ್ಲ" ಎನ್ನುತ್ತಾರೆ ದೇವಕ್ಕ.

ವಾರದಲ್ಲಿ ಮೂರು ದಿನ ಹರಿಜನರ ಕೇರಿಗೆ ಹೋಗುತ್ತಿದ್ದೆವು. ವಿದ್ಯಾಪೀಠ ದಲ್ಲಿರುತ್ತಿದ್ದೆವು. ಸಾಯಂಕಾಲವಾದರೆ ಬಾಪೂಜಿಯನ್ನು ನೋಡಲು ಬರುತ್ತಿದ್ದೆವು. ಅಂದಿನ ಕಾಲದಲ್ಲಿ ಆಗ ಎಷ್ಟು ಸಂತೋಷವಿತ್ತು ಗೊತ್ತೆ ? ಜವಹರ್, ವಲ್ಲಭಾಯಿ. ಜಮುನ್‌ಲಾಲ್ ಬಜಾಜ್ ಎಲ್ಲರೊಂದಿಗೆ ನಾವು ಇರುತ್ತಿದ್ದೆವು. ಅವರ ಸೇವೆ, ತ್ಯಾಗ ಸರಳ ಜೀವನದ ಮುಂದೆ ನಮ್ಮದೇನೂ ಇಲ್ಲ. ಬಜಾಜರ ಮಕ್ಕಳೊಂದಿಗೆ ಮಕ್ಕಳಾಗಿ ರುತ್ತಿದ್ದರು. ದಾನ ಮಾಡುವುದರಲ್ಲಿ ಅವರಿಗಿದ್ದ ಆನಂದ ಮತ್ತಾರಿಗಿತ್ತು ? ನಾಕೊಟ್ಟೆ ಎನ್ನುವ ಭಾವನೆ ಅವರಿಗಿರಲಿಲ್ಲ."

"ಈ ದೊಡ್ಡ ವ್ಯಕ್ತಿಗಳ ಸಹವಾಸದಲ್ಲಿದ್ದು ನಾವು ಅಖಿಲ ಭಾರತ ಕೃಷಿಕ ಸಂಘ, ಮಕ್ಕಳ ಕಲ್ಯಾಣ ಸಂಸ್ಥೆ ಹೀಗೆ ದೇಶದ ಅನೇಕ ಸಂಸ್ಥೆಗಳಲ್ಲಿದ್ದು ಇದೇ ಮಾತಾಡಿದ್ದೇವೆ. ನೊಂದ ಮನದಲ್ಲಿ ಹೇಳುತ್ತಿದ್ದೇನೆ ಆಗಿನ ದೇಶ ಸೇವೆಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಭಾವನೆ ಈಗಿಲ್ಲ" ಎಂದು ತಮ್ಮ ಮನದಲ್ಲಿದ್ದುದನ್ನು ಉದ್ದವಾಗಿ ಹೇಳಿ ಮುಗಿಸಿದರು ದೇವಕ್ಕ.

ಅದಕ್ಕೆ ರಮಾನಂದರೇ ಸಮಾಧಾನಕರ ಉತ್ತರ ನೀಡುತ್ತಾ ಹೇಳುತ್ತಾರೆ "ಕೆಲವರು ಈಗಲೂ ಇದ್ದಾರೆ. ೧೯೮೫ರಲ್ಲಿ ಅಲಹಾಬಾದಿನಲ್ಲಿ ನನಗೆ ಸನ್ಮಾನ ನಡೆಸಿದರು. ಅದೇ ಸಂದರ್ಭ ಹಾಗೇ ದಾರಿಯಲ್ಲಿ ಬರುತ್ತಾ ಎಲೆಕ್ಟ್ರಿಕ್ ಕರೆಂಟನಿಂದ ಒಬ್ಬ ಪೈಪ್ ಸೇರಿಸುತ್ತಾ ಇದ್ದುದನ್ನು ಕಂಡ ನಾನು ನನ್ನ ಬೆತ್ತ ಸವೆದು ಹೋಗಿದೆ, ಸವೆದ ಜಾಗಕ್ಕೆ ಈ ಪೈಪ್ ಕೂಡಿಸಬಾರದೇಕೆ ಎಂದು ಯೋಚಿಸಿ ಅವನನ್ನು ಕೇಳಿದೆ. ನನ್ನ ಬೆತ್ತ ಬಂದೋಬಸ್ತಾಗುವಂತೆ ಪೈಪನ್ನು ಹಾಕಿಕೊಟ್ಟ. ಆದರೆ ಅವನು ಕೇಳಿದಷ್ಟು ಹಣ ನನ್ನಲ್ಲಿರಲಿಲ್ಲ. ಐದು ರೂಪಾಯಿ ಇತ್ತು. ಅದನ್ನೇ ಕೊಟ್ಟೆ. ನನ್ನ ಅರಿವೆ ನೋಡಿದ. ಶಾಲು ಹೊದ್ದಿದ್ದೆ. ಅಂಗಿಯ ಮೇಲೆ ಬಿಲ್ಲೆ ಇತ್ತು. 'ನೀವು ಕೊಟ್ಟದ್ದು ಬಾಳ ಇದೆ' ಅಂದ. ಕಾಸು ತಗೊ ಎಂದರೆ ಬೇಡವೆಂದು ಕೈ ಮುಗಿದ. ಕಾಲಿಗೆ ಬಿದ್ದ. 'ನೀವು ದೇಶಕ್ಕಾಗಿ ಎಷ್ಟು ಮಾಡಿದ್ದೀರಿ. ನಾವು ಗುಲಾಮರಲ್ಲ ಎಂದು ಮಾಡಿದವರು ನೀವೇ, ನಿಮ್ಮಿಂದ ನನಗೆ ಕಾಸು ಬೇಡ' ಎಂದು ಕೈಮುಗಿದ. ನನಗಿಂತ ಅವ ದೊಡ್ಡವ ಎಂದುಕೊಂಡೆ" ಎಂದು ಹೇಳುತ್ತಾ ಆ ಕೂಲಿಯವನು ತೋರಿಸಿದ ಭಕ್ತಿಯನ್ನು ನೆನೆದು ರಮಾನಂದರು ಅವನಿಗೆ ಗೌರವ ಸಲ್ಲಿಸುತ್ತಾರೆ.

ಗಾಂಧೀಜಿಯವರ ಸೇವಾ ಗ್ರಾಮಕ್ಕೆ ಹೋಗುವ ಅವಕಾಶ ಕಲ್ಪಿಸಿಕೊಟ್ಟವರು ಯಾರು ಎನ್ನುವುದಕ್ಕೆ ರಮಾನಂದರ ಉತ್ತರ—

"ಕಿಶೋರಲಾಲ ಮಶ್ರುವಾಲಾ ಎಂಬ ಹೆಸರನ್ನು ಕೇಳಿದ್ದೀರಾ? ಇವರು ಸ್ವಾತಂತ್ರ್ಯ ಸಂಗ್ರಾಮಕ್ಕೆ ವೀರ ಸತ್ಯಾಗ್ರಹಿಗಳನ್ನು ಸಿದ್ಧಮಾಡಲು ಹೊರಟವರು. ಗಾಂಧೀಜಿ ಪ್ರಾರಂಭಿಸಿದ್ದ ಸಬರಮತಿ ಆಶ್ರಮದ ಆತ್ಮೀಯ ಬಳಗಕ್ಕೆ ಸೇರಿದವರಲ್ಲಿ ಕಿಶೋರ್‌ಲಾಲ್ ಅಗ್ರಗಣ್ಯರು. ಇವರೇ ನಮ್ಮನ್ನು ದೇಶ ಸೇವೆಯ ಕರೆಗೆ ಸೇರಿಸಿದವರು" ಎನ್ನುತ್ತಾರೆ ರಮಾನಂದರು.

"ನಾನೊಂದು ದಿನ ಪೂಜ್ಯ ಕಿಶೋರಲಾಲರ ಮನೆಗೆ ಹೋದೆ. ಅವರು ಹಳೇ ಧೋತರಗಳನ್ನು ಜೋಡಿಸಿ ಕೌದಿ ಹೊಲಿಯುತ್ತಾ ಕೂತಿದ್ದರು. ಇನ್ನೊಂದು ದಿನ ಸಂಜೆ ಕಂದೀಲು ಸ್ವಚ್ಛ ಮಾಡುತ್ತಾ ಇದ್ದರು. 'ಇದನ್ನು ಬಿಟ್ಟು ಹೆಚ್ಚು ಓದುವುದು ಬರೆಯುವುದು ಮಾಡಬಾರದೇಕೆ. ಇದರಿಂದ ಇನ್ನೂ ಹೆಚ್ಚು ಜನರಿಗೆ ಉಪಯೋಗವಾಗುತ್ತದೆ' ಎಂದೆ. ಅದಕ್ಕೆ ಕಿಶೋರಲಾಲರು, "ಎಷ್ಟೊಂದು ಬರೆಯುವಿ! ಎಷ್ಟೊಂದು ಓದುವಿ! ಈ ಕೆಲಸಗಳಿಗಾಗಿ ಆಳು ಇಡಬೇಕೆ? ಮನುಷ್ಯನು ಶರೀರ ಶ್ರಮ ಮಾಡದಿದ್ದರೆ ದರಿದ್ರನಾಗುತ್ತಾನೆ. ಆಲಸಿಯಾಗುತ್ತಾನೆ. ಮೈಗಳ್ಳನಾಗುತ್ತಾನೆ" ಎಂದರು. ಇದನ್ನು ಕೇಳಿ ನಾಚಿಕೆಯಾದಂತೆ ನಿಂತೆನು" ಎನ್ನುತ್ತಾರೆ ರಮಾನಂದ.

ರಮಾನಂದರ ವಿವರಣೆ ಭಾವಪೂರ್ಣವಾದುದು, ಒಂದೊಂದು ಘಟನೆಯನೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಕಣ್ಣ ಮುಂದೆ ಚಿತ್ರ ಬರುವಂತೆ ವರ್ಣಿಸಿ ನಮ್ಮನ್ನು ಅದರಲ್ಲೇ ತಲ್ಲೀನರನ್ನಾಗಿ ಮಾಡುವ ವಿಶೇಷ ಶಕ್ತಿ ರಮಾನಂದರಿಗಿದೆ. ನಮ್ಮನ್ನು ಆ ಕಾಲಕ್ಕೆ ಕರೆದುಕೊಂಡು ಹೋಗಿ ಆ ಜಾಗದಲ್ಲೇ ನಿಲ್ಲಿಸಿದಂತೆ ಮಾತನಾಡುತ್ತಿರುವಾಗ, ವಾಸ್ತವವಾಗಿ ನಾವು ಮನ್ನಂಗಿಯವರ ಮನೆಯಲ್ಲೇ ಕುಳಿತಿರುವ ವಿಷಯವನ್ನು ಜ್ಞಾಪಿಸುವಂತೆ ನಮ್ಮ ಮುಂದೆ ಆಗಾಗ ತಟ್ಟೆಯ ತುಂಬಾ ಖಾರದ ಅವಲಕ್ಕಿ, ಖಾರಾ ಬೂಂದಿ, ಎಳ್ಳು ಬೆಲ್ಲ, ಹೂರಣದ ರೊಟ್ಟಿ, ಟೀ–ಇವುಗಳನ್ನು ಅವರ ಸೊಸೆ ತಂದಿಡುತ್ತಿದ್ದರು.

"ನಮ್ಮ ಮನ ಮೆಚ್ಚುವಂಥಾ ಸೊಸೆ ಸಿಕ್ಕಿದಾಳ್ರೀ" ಎಂದು ದೇವಕ್ಕನವರ ಮಾತೂ ಸೇರಿಕೊಳ್ಳುತ್ತಿತ್ತು.

ರಾಣಿಬೆನ್ನೂರಿಂದ ರಮಾನಂದರನ್ನು ಕಾಣಲು ಅದೇ ಸಮಯಕ್ಕೆ ಬಂದಿದ್ದ ಸಮಾಜ ಸೇವಾಕರ್ತರಾದ ಶ್ರೀ ಜಿ. ಎಂ. ಹಾಲಪ್ಪನವರು ಇಷ್ಟೂ ಕೇಳುತ್ತಾ ಕುಳಿತಿದ್ದವರು, "ರಮಾನಂದರ ವಿಷಯವನ್ನು ಅವರ ಮಾತಿನಲ್ಲೇ ತಿಳಿದುಕೊಳ್ಳುವುದಕ್ಕಿಂತ, ನಾವುಗಳು ಅವರ ಬಗ್ಗೆ ಏನು ಹೇಳುತ್ತೇವೆಂದು ನೀವು ತಿಳಿದುಕೊಳ್ಳಬೇಕು" ಎನ್ನುತ್ತಾ, "ರಮಾನಂದ ಮತ್ತು ದೇವಕ್ಕನವರೇ ನಮಗೆ ಬಾಪೂ ಮತ್ತು ಬಾ. ನಾವು ಗಾಂಧೀಜಿ ಬಗ್ಗೆ ಏನು ತಿಳಿದಿದ್ದೇವೋ, ಬಾ ರವರ ಬಗ್ಗೆ ಕೇಳಿದೇವೋ ಅದನ್ನು ಇವರಿಬ್ಬರಲ್ಲಿ ಕಾಣುತ್ತಿದ್ದೇವೆ..." ಅಂದಿನ ಸ್ವಾತಂತ್ರ್ಯ ದಿನ ಮಾನಗಳಲ್ಲಿ ತರುಣ ಸೇವಾ ಕಾರ್ಯಕರ್ತರಾಗಿ ಮುನ್ನುಗ್ಗಿದವರು ದಕ್ಷಿಣ ಭಾರತದಲ್ಲಿ ಧಾರವಾಡ ಜಿಲ್ಲೆಯ ರೇವಣ್ಣನವರೊಬ್ಬರೇ.

"ಸ್ವಾತಂತ್ರ್ಯ ಸಂಗ್ರಾಮದ ಕಾಲ ಅದು. ಕನ್ನಡನಾಡಿನ ವೀರ ಪುತ್ರರಾದ ರೇವಣ್ಣನವರು (ರಮಾನಂದ) ಕ್ರಾಂತಿಕಾರಿಯಾಗದೆ ಶಾಂತ ರೀತಿಯಿಂದ ಚಳವಳಿಯಲ್ಲಿ ಮುಳುಗಿ ಮಹಾತ್ಮರ ಮನವನ್ನು ಮೆಚ್ಚಿಸಿದ್ದರು. ಆ ದಿನಗಳಲ್ಲಿ ನಾವು ಚಿಕ್ಕವರಿದ್ದಾಗ, ರಮಾನಂದರ ಹೆಸರು ಸ್ವಾತಂತ್ರ್ಯ ಸಂಗ್ರಾಮದ ಮುಂಚೂಣಿಯಲ್ಲಿ ಹೆಚ್ಚಾಗಿ ಕೇಳುತ್ತಿತ್ತು. ನಾವೆಲ್ಲಾ ಸೇವಾದಳದ ಕಾರ್ಯಕರ್ತರಾಗಿದ್ದೆವು. ಭಾಷಣಗಳ ಸ್ಫೂರ್ತಿಯಿಂದ ಮುಖಂಡರ ಮುಂದಾಳತ್ವದಿಂದ ಅನೇಕ ವಿಧಾಯಕ ಕಾರ್ಯ ಮಾಡುತ್ತಿದ್ದೆವು. ಗ್ರಾಮಗಳಲ್ಲಿ ಪ್ರಭಾತ್ ಫೇರಿ, ಧ್ವಜ ವಂದನೆ ನಡೆಸುವುದು—ಹೀಗೆ ತರುಣರಲ್ಲಿ ಜಾಗೃತಿ ಮೂಡಿಸುವ ಅಪಾರ ಶಕ್ತಿಯು ನೆಚ್ಚಿನ ನೇಕಾರ ತರುಣ ರಮಾನಂದರಲ್ಲಿತ್ತು. ಗಾಂಧೀಜಿ ಹೇಳಿದಂತೆ ಮಾಡುವ ನಿಷ್ಠಾವಂತ. ಇವರ ಜೊತೆಯಲ್ಲಿ ಹರಿಜನರ ಕೇರಿಗೆ ಹೋಗಿದ್ದಾಗ ಏನು ನಡೆಯಿತೆಂದು ಹೇಳುವೆನು, ನಾವು ಸ್ವಚ್ಛತೆಯ ಕೆಲಸ ಮಾಡಲು ಹೋದರೆ ಅಲ್ಲಿದ್ದವರು 'ಕಸ ಬಳಿಯುವವರು ಬಂದರು, ಏಳ್ರೀ ಏಳ್ರೀ' ಎಂದು ಎಲ್ಲರೂ ಒಳಕ್ಕೆ ಹೋಗುತ್ತಿದ್ದರು. ಅದಲ್ಲದೆ, 'ಇಲ್ಲಿ ಹೇಸಿಗೆ ಇದೆ ನೋಡು, ಬಳಿದು ಆ ತೋಟ್ಟಿಗೆ ಹಾಕು' ಎಂದು ನಮಗೆ ಕಸದ ಗುಂಡಿಯನ್ನು ತೋರಿಸುತ್ತಿದ್ದರು. ಎಷ್ಟೋ ಸಲ ಗಾಂಧೀಜಿಯವರಿಗೂ ಕೇರಿಯವರು ಇದೇ ಮಾತೇ ಹೇಳಿದ್ದಾರೆ. 'ಏ ಮುದುಕ, ಕಸ ಇಲ್ಲಿದೆ ನೋಡು' ಎಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಕಷ ಬಳಿಸುತ್ತಿದ್ದರು. ಈ ಮಹಾನುಭಾವ ಗಾಂಧಿ ಮಹಾತ್ಮನೆಂದು ಅವರಿಗೆ ಅರಿವಿಲ್ಲ. ಇದೆಲ್ಲವನ್ನೂ ನಾವು ಸಹಿಸಿದ್ದೇವೆ. ರಮಾನಂದ ದೇವಕ್ಕನವರೂ ಜೊತೆಯಾಗಿ ಶ್ರಮಿಸಿದ್ದಾರೆ.

ಹೆಣ್ಣನ್ನು ದಾಸ್ಯದಿಂದ ಮನೆಯೊಳಗೆ ಇಡತಕ್ಕ ಆ ಕಾಲದಲ್ಲಿ ಧಾರವಾಡದಲ್ಲಿ ಮಹಿಳಾ ಜಾಗೃತಿಗೊಳಿಸಿದವರಲ್ಲಿ ಅಕ್ಕಮ್ಮನವರು, ಕುಸ್ಕೂರು ಬಸಮ್ಮ, ಮೈಲಾರ ಸಿದ್ದಮ್ಮ ಮೊದಲಿಗರು. ಸಮಾಜದಲ್ಲಿ ಕಟ್ಟುಪಾಡಿದ್ದ ಕಾಲ. ಹೆಣ್ಣು ಮಕ್ಕಳು ರಸ್ತೆಯಲ್ಲಿ ಬಂದು ಸರ್ಕಾರದ ವಿರುದ್ಧ ಹೋರಾಟದಲ್ಲಿ ಭಾಗವಹಿಸಲು ಧೈರ್ಯ ಬೇಕು. ಅಂತಹ ಧೈರ್ಯ ಮಾಡಿದವರಲ್ಲಿ ದೇವಕ್ಕನವರೂ ಒಬ್ಬರು. ಇವರಿಬ್ಬರೂ ಅನೇಕ ಚಳವಳಿ ಕಾರ್ಯಗಳಲ್ಲಿ ಜನಪ್ರಿಯರಾಗಿದ್ದರು. ಇವರ ಮಾರ್ಗ ಅನುಸರಿಸುವುದೊಂದೇ ನಮಗೆ ಆಗ ಗೊತ್ತಿತ್ತು. ರಮಾನಂದ ದಂಪತಿಗಳನ್ನು ನಾವು ಜಂಗಮಕೊಪ್ಪದ ಗಾಂಧೀ ದಂಪತಿಗಳಂತೆ ಕಾಣುತ್ತಿದ್ದೇವೆ ಎನ್ನುತ್ತಾರೆ ಹಾಲಪ್ಪನವರು.

"ಆಗ ಎರಡು ಗುಂಪುಗಳಿತ್ತು. ಮೆಣಸಿನ ಹಾಳ ತಿಮ್ಮಣ್ಣಗೌಡರ ಗುಂಪೊಂದು. ಮೈಲಾರ ಮಹದೇವಪ್ಪನವರ ಗುಂಪು ಮತ್ತೊಂದು. ಮೊದಲ ಗುಂಪಿಗೆ 'ತುಮ್ಮಿನ ಕಟ್ಟಿ' ಎಂಬ ಸ್ಥಳ ಕಾರ್ಯದ ಕೇಂದ್ರವಾಗಿತ್ತು. ಮಹದೇವಪ್ಪನವರ ಕಾರ್ಯದ ಕೇಂದ್ರ "ಹೊಸರಿತ್ತಿ" ಎಂಬುದು. ಮೈಲಾರ ದಂಪತಿಗಳೊಡನೆ ಮನ್ನಂಗಿ ದಂಪತಿಗಳೂ ಸೇರಿ ಹೊಸರಿತ್ತಿ ಆಶ್ರಮಕ್ಕೆ ತೆರಳಿದರು. ನಾವು ಕೇಳಿದ ಪ್ರಕಾರ ವಾರ್ಧಾಕ್ಕೆ ಹೋದವರಲ್ಲಿ ರಮಾನಂದ ದಂಪತಿಗಳೇ ಮೊದಲು. ಅಲ್ಲಿ ಕಲಿತು ಬಂದ ಮೇಲೆ ಇವರ ಮೂಲ ನೇತೃತ್ವದಲ್ಲಿ ನಾವು ಸೇವಾ ಕಾರ್ಯಗಳನ್ನು ಕಲಿತೆವು. ಆಗ ಹಳ್ಳಿಕೇರಿ ಗುದ್ಲೆಪ್ಪ ಹೊಸರಿತ್ತಿ ಆಶ್ರಮದಲ್ಲಿದ್ದರು. ಅವರ ಮಾರ್ಗದರ್ಶನದಲ್ಲಿ ಮನ್ನಂಗಿ ದಂಪತಿಗಳು ನಡೆದು ಸೇವಾ ಕಾರ್ಯಕರ್ತರಾದರು. ಇವರ ಕಾರ್ಯಕ್ರಮದ ಕ್ಷೇತ್ರಗಳು ಬ್ಯಾಡಗಿ, ರಾಣೆಬೆನ್ನೂರು, ಹಿರೇಕೆರೂರು. ಅಂತಹ ಒಂದು ಪ್ರಸಂಗದಲ್ಲಿ ಈ ದಂಪತಿಗಳ ಸೇವಾ ಭಾವದ ಪ್ರಭಾವಕ್ಕೆ ಒಳಗಾಗಿ ನಾವು ಸಮಾಜ ಸೇವಕರಾಗಿದ್ದೇವೆ. ಈಗಲೂ ಇವರ ಮಾರ್ಗದರ್ಶನವೇ ನಮಗೆ ಬೇಕು" ಎಂದು ಮನ್ನಂಗಿ ದಂಪತಿಗಳ ವಿಚಾರವನ್ನು ಅಲ್ಲಿ ಬಂದಿದ್ದ ಗಣ್ಯ ವ್ಯಕ್ತಿಗಳು ಹೇಳುತ್ತಾರೆ.

"ರಮಾನಂದರು ಬಾಪೂ ಜನ್ಮ ಶತಾಬ್ದಿಯ ಸಂದರ್ಭದಲ್ಲಿ ನಾನು ಮತ್ತು ನನ್ನ ಪ್ರಿಯ ಪತ್ನಿ ಕು. ಸೌ. ದೇವಕಿಯೂ (ದೇವಕ್ಕನನ್ನು ಅವರು ದೇವಕಿ ಎನ್ನುತ್ತಾರೆ) "ನಾವು ಕಂಡ ಬಾಪೂ" ಎಂಬ ವಿಷಯವನ್ನು ಬರೆದೆವು" ಎಂದು ಹೇಳಿ ಅಚ್ಚಾಗದ ಆ ಲೇಖನವನ್ನು ತೋರಿಸಿದರು. ಅದರಲ್ಲಿಯ ಕೆಲವು ವಾಕ್ಯಗಳು ಹೀಗಿವೆ—

"ಬಾಪೂ ಮತ್ತು ಬಾ ದಂಪತಿಗಳ ಆದರ್ಶ ಜೀವನವನ್ನು ನಾವಿಬ್ಬರೂ ಕಂಡು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಪುನೀತರಾಗಿದ್ದೇವೆ. ಇವರ ಅಪೂರ್ವ ಮಾರ್ಗ ಇಡೀ ಜಗತ್ತಿನ ಮಾನವ ಕುಲಕ್ಕೆ ದಾರಿದೀಪವಾಗಿದೆ. ಬಾಪೂನ ಹಸ್ತಾಕ್ಷರಗಳನ್ನು ಮೊಟ್ಟಮೊದಲು ಪ್ರತ್ಯಕ್ಷ ಕಂಡದ್ದು ೧೯೩೧ರಲ್ಲಿ. ಹೊಸರಿತ್ತಿಯಲ್ಲಿ, ಮಹದೇವ ಮೈಲಾರರಿಗೆ ಬಂದ ಪತ್ರ ದಲ್ಲಿ. ಅವರ ಪ್ರತ್ಯಕ್ಷ ದರ್ಶನಕ್ಕಾಗಿ ಹಂಬಲಿಸಿ ದರ್ಶನಭಾಗ್ಯ ಪಡೆದದ್ದು ೧೯೩೭ ರಲ್ಲಿ. ಬಾಪೂನ ಜೊತೆಗೆ ಮಹದೇವಭಾಯಿ, ಪ್ಯಾರೆಲಾಲ್, ಮೀರಾಬಹನ್, ಬನ ಸಾಲಿಭಾಯಿ, ಸೋನುಬಾಪಾ, ಜಾಜೂಜಿ, ಧೋತ್ರೆಜಿ ಮೊದಲಾದವರ ದರ್ಶನವೂ ಆಯಿತು. ಮಾರನೇ ದಿನ ವಿನೋಬಾಜಿಯವರ ಸಂದರ್ಶನ ಭಾಗ್ಯವೂ ಲಭಿಸಿತು. ಸೇವಾ ಗ್ರಾಮದಲ್ಲಿ ಅವರು ಕಂಡದ್ದು "ಗಾಂಧಿ ಸೇವಾ ಸಂಘದ ಅಧ್ಯಕ್ಷ ಕಿಶೋರ ಲಾಲರು. ಧೋತ್ರೆಯರು ಕಾರ್ಯದರ್ಶಿಗಳು. ಚರಕಾ ಸಂಘದ ಅಧ್ಯಕ್ಷ ಬಾಪೂಜಿ ಯವರು, ಗ್ರಾಮೋದ್ಯೋಗದ ಕಾರ್ಯದರ್ಶಿಗಳು ಕುಮಾರಪ್ಪ ಬಂಧುಗಳು. ಅಖಂಡ ಮೌನಧಾರಿ ಬನಸಾಲಿಭಾಯಿ, ಅಖಂಡ ಸ್ವಚ್ಛತಾ ಸೇವಾ ನಿರತ ಪೂಜ್ಯ ಸೋನುಬಾಪಾ ಮಗನವಾಡಿಯಲ್ಲಿ ವಾಸವಾಗಿದ್ದರು. ಪೂಜ್ಯ ವಿನೋಬಾ ನಾಲವಾಡಿ ಯಲ್ಲಿ ವಾಸ. ಮೀರಾಬಹನ್ ರಾಮನಗರದಲ್ಲಿದ್ದರು. ಮಹದೇವಭಾಯಿ, ಪ್ಯಾರೆ ಲಾಲ್, ಅಮೃತಕೌರರು ಬಾಪೂನ ಹಿಂಬಾಲಕರಾಗಿ ಸುತ್ತುತ್ತಿದ್ದರು"—ಎಂದು ಸೇವಾ ಗ್ರಾಮವನ್ನು ವಿವರಿಸುತ್ತಾ ದೇವಕ್ಕನವರು, 'ಮಹಿಳಾಶ್ರಮವೂ ಇತ್ತು, ಸ್ತ್ರೀಯರಿಗೆ ಶಿಕ್ಷಣ, ವಿಧಾಯಕ ಚಟುವಟಿಕೆಗಳ ಬೋಧೆ ಸತ್ಯಾಗ್ರಹ ಆಶ್ರಮದಲ್ಲಿ ನಡೆಯುತ್ತಿತ್ತು' ಎನ್ನುತ್ತಾರೆ.

ನಾಲವಾಡಿಯಲ್ಲಿ ಖಾದಿ ಸರಂಜಾಮು ಕಾರ್ಯಾಲಯ, ರಾಮನಗರದಲ್ಲಿ ಸ್ವಚ್ಛತೆಯ ಕಾಯಕ, ಕಾಲೇಲಕರದಲ್ಲಿ ರಾಷ್ಟ್ರಭಾಷಾ ಅಧ್ಯಯನ ಹೀಗೆ ನಡೆಯು ತ್ತಿತ್ತು. ಪೂಜ್ಯ ತುಕಡೋಜಿ ಮಹಾರಾಜರು ಸದಾ ಕಾಲವೂ ಭಜನ ಮೇಳ ಸಂಘಟಕರಾಗಿ ಸುತ್ತುತ್ತಿದ್ದರು. ವಿಶೇಷ ಸಂದರ್ಭದಲ್ಲಿ ಅದೊಂದು ಜಾತ್ರೆಯಾಗಿ ಪರಿಣಮಿಸುತ್ತಿತ್ತು—ಎಂದು ಸೇವಾ ಗ್ರಾಮದ ವಿಭಾಗಗಳನ್ನು ವಿವರಿಸುತ್ತಾರೆ.

'ಈ ಮಹಾನುಭಾವರಲ್ಲದೆ ಗಾಂಧೀ ಸಂದರ್ಶನಮೀಯುತ್ತಿದ್ದ ಡಾ|| ರಾಜೇಂದ್ರಪ್ರಸಾದರು, ಸರದಾರ ಪಟೇಲರು, ಖಾನ್ ಅಬ್ದುಲ್ ಗಫಾರ್‌ಖಾನ್ (ಗಡಿನಾಡ ಗಾಂಧಿ), ಸರೋಜಿನಿ ನಾಯ್ಡು, ಪಂಡಿತ ಜವಹರರು, ರಾಜಾಜಿಯವರು, ಕೃಪಲಾನಿ, ನರೇಂದ್ರದೇವರ, ಸ್ವಾಮಿ ಪೂರ್ಣಾನಂದರು, ಜಯಪ್ರಕಾಶ ನಾರಾಯಣರು, ಮೌಲಾನಾ ಆಜಾದರು, ಟಕ್ಕರ ಬಾಪಾ, ಸತೀಶ ಚಂದ್ರಹಾಸ ಗುಪ್ತರು, ದೀನಬಂಧು ಎಂಡ್ರೋಜರು, ಗಂಗಾಧರರಾಯರು—ಇಂತಹ ದೇಶದ ಮುಂದಾಳುಗಳ ದರ್ಶನ, ಪ್ರವಚನ ಲಾಭ ಬೇರೆ ಸಿಗುತ್ತಿತ್ತು'—ಎನ್ನುತ್ತಾರೆ ಆಶ್ರಮದ ಅನುಭವವನ್ನು ನೆನೆದು.

ಬಾಪೂನ ವಿಶ್ವಾಸ "ಹಸಿ ಗೋಡೆಯಲ್ಲಿ ಹಳ್ಳು ಕೂತಂತೆ" ಎನ್ನುತ್ತಾರೆ ದೇವಕ್ಕ ನವರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಬಾಪೂ ಸ್ಮರಣೆ ಮಾಡಿ, "ಬಾಪುಗೆ ದೇವಸ್ಮರಣೆ, ಸೂಕ್ತ ಹಾಗೂ ಪ್ರಮಾಣಿತ ಆಹಾರ ಸೇವನೆ, ನೈಸರ್ಗಿಕ ಚಿಕಿತ್ಸೆ, ಆಯುರ್ವೇದ ಔಷಧೋಪಚಾರ, ಅದರಲ್ಲೂ ರೋಗಪೀಡಿತರಾಗದಂತೆ ಮುನ್ನೆಚ್ಚರಿಕೆಯಲ್ಲಿ ವಿಶ್ವಾಸ—ಇದೆಲ್ಲಾ ಇಷ್ಟವಾದ ವಿಷಯ. ಔಷಧ ಸೇವನೆಯು ಮನಸ್ಸಿನ ದೌರ್ಬಲ್ಯ ಅನ್ನುತ್ತಿದ್ದರು. ಎಲ್ಲಾ ರೋಗಿಗಳಿಗೂ ದೇವಸ್ಮರಣೆಯೇ ದಿವ್ಯ ಔಷಧ ಎಂಬ ತಮ್ಮ ವಿಶ್ವಾಸವನ್ನು ತಮ್ಮ ಜೀವಮಾನದಲ್ಲಿ ನಿರೂಪಿಸಿದ್ದಾರೆ. ಬಾಪೂ ಶ್ರೇಷ್ಠ ವೈದ್ಯನೂ ಹೌದು, ಶ್ರೇಷ್ಠ ದಾಯಿ, ಸೇವಕರೂ ಹೌದು, ವಾತ್ಸಲ್ಯದ ಮಾತೆಯಂತೆ ಇದ್ದರು. ಇನ್ನೂ ಹೇಳುತ್ತಿದ್ದರೆ ಅವರಿಂದ ನಾವು ಎಷ್ಟು ಕಲಿಯಬೇಕಾದ ಸಂಗತಿ ಇದೆ. ಕೊನೆಯೇ ಇಲ್ಲ ಅನ್ನಿಸುತ್ತದೆ"—ಎಂದು ದೇವಕ್ಕನವರು ಹೇಳುತ್ತಿರುವಾಗ ರಮಾನಂದರು, "ನಾವು ಕಾಲೇಜಿಗೆ ಕೀಲಿ ಕೊಟ್ಟು ಶರಣು ಹೊಡೆದು ಗಾಂಧೀ ಭಕ್ತರಾದವರು. ಗಾಂಧಿಯವರಿಂದ ಕಲಿತ ಜೀವನವನ್ನು ನಡೆಸುವುದೇ ನಮ್ಮ ಧ್ಯೇಯ ಎನ್ನುತ್ತಾರೆ. ಜಂಗಮಕೊಪ್ಪಕ್ಕೆ ಬಂದಿದ್ದ ಹಾಲಪ್ಪನವರೂ ಮತ್ತಿತರರೂ ರಮಾನಂದರ ಬಗ್ಗೆ, "ಇವರು ನಮಗೆ ಚಲಿಸುವ ವಿಶ್ವವಿದ್ಯಾಲಯ ಇದ್ದಂತೆ. ಇವರೇ ಒಂದು ಶಿಕ್ಷಣ ಸಂಸ್ಥೆ. ನಮಗೇನು ಬೇಕಿದ್ದರೂ ಇವರಲ್ಲಿ ಬರುತ್ತೇವೆ" ಎನ್ನುತ್ತಾರೆ.

ಕಡೆಯಲ್ಲಿ ಉಕ್ಕಿ ಬಂದ ಭಾವದಿಂದ ಮನ್ನಂಗಿ ದಂಪತಿಗಳು ಹೇಳುವುದೇನೆಂದರೆ "ರಾಷ್ಟ್ರಗೀತೆ ಜನಗಣಮನಕ್ಕಿಂತ 'ವಂದೇಮಾತರಂ' ಎಂದರೆ ನಮಗೆ ಭಕ್ತಿ ಹೆಚ್ಚು ಏಕೆ ? ಎಂದರೆ ವಂದೇಮಾತರಂ ಮಹತ್ವವನ್ನು ಕಂಡವರು ನಾವು. ಕಠಿಣ ಸಮಯದಲ್ಲೂ ಬಿಡದೆ ದೇವರನಾಮ ಜಪಿಸುವಂತೆ ವಂದೇಮಾತರಂ ದೇಶ ಭಕ್ತಿ ಗೀತೆಯನ್ನು ಸದಾ ಜಪಿಸಿದ್ದೇವೆ ಎನ್ನುತ್ತಾ "ಭಗತ್‌ಸಿಂಗ್‌ನ ಒಂದು ದೃಷಾಂತ ಹೇಳುತ್ತೇನೆ ಕೇಳಿ" ಎಂದು ರಮಾನಂದ ಮುಂದುವರಿಸುತ್ತಾರೆ.

"ನಾಳೆ ಗಲ್ಲಿಗೆ ಹೋಗಬೇಕು. ರಾತ್ರಿ ವಂದೇಮಾತರಂ ಹಾಡಿದ. ನಾನೇ ಗಲ್ಲಿಗೆ ಏರಿಸಿಕೊಳ್ಳುತ್ತೇನೆ. ಯಾರಿಂದ ಬಲಾತ್ಕಾರವೂ ಬೇಡವೆಂದ. ಉದಯವಾಯಿತು. ನೆಲಮುಟ್ಟಿ ಭೂಮಾತೆಗೆ 'ವಂದೇಮಾತರಂ' ಎಂದ. ನೇಣಿನಗಟ್ಟಣೆಯ ಮೆಟ್ಟಲಿಗೆ 'ವಂದೇಮಾತರಂ', ಹಗ್ಗಕ್ಕೆ 'ವಂದೇಮಾತರಂ' ಕೊನೆಯ ಉಸುರಿನ ವರೆಗೂ ವಂದೇಮಾತರಂ..."

ಎನ್ನುತ್ತಿರುವಾಗ ಭಗತ್‌ಸಿಂಗನನ್ನು ಆ ದೃಶ್ಯದಲ್ಲಿ ನೇರಾಗಿ ಕಂಡ ರಮಾನಂದರ ಕಣ್ಣು ಹನಿಗೂಡಿತು. ಕಂಠ ಬಿಗಿಯಿತು. ಮುಂದೆ ಮಾತನಾಡಲಾರದೆ ಅತ್ತುಬಿಟ್ಟರು.

ಸ್ವಲ್ಪ ಸಮಾಧಾನ ತಂದುಕೊಂಡು "ನೀವೇ ಹೇಳಿ. ವಂದೇಮಾತರಂನ್ನು ಸ್ವಾತಂತ್ರ್ಯ ಬಂದ ಮೇಲೆ ಯಾಕೆ ಹಾಡಬೇಕೆಂದು...ಆಗ ಆ ಗೀತೆಯನ್ನು ಅಂದರೆ ತಪ್ಪು. ಈಗ ಎಷ್ಟು ಬೇಕಾದರೂ ಮನಸೋ ಇಚ್ಛೆ ಹಾಡಬಹುದು. ಅರವಿಂದ ಘೋಷರು, ಶೌಕತ್ ಅಲಿ, ಗಾಂಧೀಜಿ ಎಲ್ಲರೂ ಕೂಡ ಎತ್ತಿ ಕೂಗಿ 'ವಂದೇಮಾತರಂ'

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಬೋಲೋ ಎನ್ನುತ್ತಿದ್ದರು. ಆ ಭಕ್ತಿಯ ಹೃದಯಂಗಮ ಭಾವದ ಕೂಗನ್ನು ಕೇಳಿದವರು ನಾವು .. ನಾಗಾಪುರದ ಸತ್ಯಾಗ್ರಹ ಸಮಯದಲ್ಲಿ ನಮ್ಮಲ್ಲಿ ಪ್ರತಿಯೊಬ್ಬರ ಕೈಯಲ್ಲೂ ಝಂಡಾ, ಬಗಲಲ್ಲಿ ಕೋಲು. ಕೂಗು ವಂದೇಮಾತರಂ ಅಂತಹ ಗೀತೆ ರಾಷ್ಟ್ರಗೀತೆಯಾಗಬೇಕಲ್ಲವೇ !" ಎಂದು ರಮಾನಂದ ವ್ಯಸನಪಡುವರು.

"ಮಹಾತ್ಮರು ಜಗದ್ವಂದ್ಯ, ಮಹಾ ಮಹರ್ಷಿ, ಪ್ರತಿ ಸಭೆ ಸಮ್ಮೇಳನದಲ್ಲಿ ಭಾರತಭಾಗ್ಯವಿದಾತಾ ಹಾಡನ್ನು ಹಾಡಲೇಬೇಕು. ಅಖಂಡ ಹಿಂದೂಸ್ಥಾನವೆನ್ನುತ್ತೇವೆ. ಈಗ ಇದರ ಅರ್ಥವೇನು ? ಹಿಂದೂಸ್ಥಾನ ಮುಕ್ಕಾಗಿ ಒಡೆದು ಹಂಪೆ ಹೋಯಿತು. ಅಂದ ಮೇಲೂ ಅಖಂಡ ಹಿಂದೂಸ್ಥಾನವೇ ? ಇನ್ನೂ ಮತ್ತಷ್ಟೂ ಬಡಿದಾಟವಾಗಿ ಚೂರಾದರೂ ಅಖಂಡ ಹಿಂದೂಸ್ಥಾನವೆಂದೇ ಹೇಳುತ್ತೇವೆ. ಅಖಂಡವನ್ನು ಉಳಿಸಿಕೊಳ್ಳುವ ಸಾಮರ್ಥ್ಯ ಈಗ ಯಾರಿಗೂ ಇಲ್ಲವೆನ್ನಿಸುತ್ತದೆ."

ರಮಾನಂದರು ಹೀಗೆ ಹೇಳಿ ಮಾತನ್ನು ನಿಲ್ಲಿಸಿದಾಗ ದೇವಕ್ಕನವರು ನಿಟ್ಟುಸಿರು ಬಿಟ್ಟು ತಮ್ಮದೂ ಅದೇ ಅಭಿಪ್ರಾಯ. ತಾವೂ ಅದನ್ನೇ ಮನದಲ್ಲಿ ಅನುಭವಿಸಿದ್ದಾರೆಂದು ತೋರ್ಪಡಿಸುತ್ತಾರೆ.

"ಈ ಎಲ್ಲಾ ಕಷ್ಟ ಸುಖದಲ್ಲೂ ಅವರ ಮನದಂತೆಯೇ ಇದ್ದು ಗಂಡನ ನೆರಳಾಗಿ ಬಾಳಿದ್ದೇನೆ. ಜೀವನ ಸಾರ್ಥಕವೆನಿಸಿದೆ. ದೇಶದ ಸ್ಥಿತಿಗೆ ಅನುಗುಣವಾಗಿ ನಡೆಯುವಾಗ ಎಲ್ಲ ತಪ್ಪುತ್ತೇವೆಯೋ ಎಂದು ಎಚ್ಚರದಿಂದಿದ್ದೆವು. ನನ್ನ ಗಂಡನಿಗೆ ಸದಾ ದೇಶದ ಚಿಂತೆ. ಒಂದೊಮ್ಮೆ ಕಾಲದಲ್ಲಿ ಭಾರಿ ಗಾಯ ಇಂಜೆಕ್ಷನ್ ಬೇಡ ನನಗೇಕೆ ಉಪಚಾರವೆಂದರು. ನನ್ನ ಮನಸ್ಸು ಭಾರವಾತ್ರಿ, ನಿಮ್ಮ ಜೀವಕ್ಕೆ ಬೆಲೆ ಇದೆ. ಕೋಟಿ ಜನ ಕಣ್ಣೀರು ಹಾಕುತ್ತಾರೆ ಅಂದೆ" ಎನ್ನುತ್ತಾ ದೇವಕ್ಕನವರ ಕಣ್ಣುಗಳು ತೇವವಾದುವು.

ಸ್ವಲ್ಪ ತಡಮಾಡಿ ಹೇಳುತ್ತಾರೆ. "ಇದು ಬಡವರ ಮನಿ, ಆದರೆ ನಮ್ಮಲ್ಲಿ ಯಾಗಲ್ಲೂ ಇರದ ಹೃದಯ ಸಂಪತ್ತು ಇದೆ. ಇಷ್ಟೊಂದು ಜನ ನಮ್ಮನ್ನು ಹುಡುಕಿಕೊಂಡು ಮಾರ್ಗದರ್ಶನ ನೀಡಿ ಎಂದು ಬರುತ್ತಾರೆ. ಒಂದು ದಿನವೂ ಹೆಮ್ಮೆಪಡಲಿಲ್ಲ. ದೇವರು ನಮ್ಮನ್ನು ಪರೀಕ್ಷಿಸುವ ಸಲುವಾಗಿ ಕಳುಹಿಸಿದ್ದಾರೆ ಎಂದುಕೊಳ್ಳುತ್ತೇವೆ" ಎನ್ನುತ್ತಾರೆ ದೇವಕ್ಕ.

ಇಂತಹ ಭಾಗ್ಯಶಾಲಿಗಳಾದ ಮಾನ್ನಂಗಿ ದಂಪತಿಗಳಿಗಿರುವ ಹಾವೇರಿ ನಿಜವಾಗಿಯೂ ಪುಣ್ಯಭೂಮಿ ಎನ್ನಿಸುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

## ಜಿ. ಸಿ. ಭಾಗೀರತಮ್ಮ

"ಸ್ವಾತಂತ್ರ್ಯಪೂರ್ವದ ದಿನಗಳಲ್ಲಿ ತುಮಕೂರು ಮೈಸೂರು ಸಂಸ್ಥಾನದ 'ಹೃದಯ'ವಾಗಿತ್ತು. ರಾಷ್ಟ್ರ ನಾಯಕರ ಕರೆಗೆ ಎದ್ದು ಸೆಟೆದು, ಸಜ್ಜಾಗಿ ನಿಂತು ಬ್ರಿಟಿಷರ ದಬ್ಬಾಳಿಕೆಯ ವಿರುದ್ಧ ನರನಾಡಿಗಳನ್ನೆಲ್ಲಾ ಹುರಿಗೊಳಿಸಿ ಹೊಸೆದು ಸ್ವಾತಂತ್ರ್ಯ ಸಂಗ್ರಾಮದ ಮುಂಚೂಣಿಯಲ್ಲಿ ನಿಂತವರು ತುಮಕೂರು ಜಿಲ್ಲೆಯವರು-" ಎಂದು ಬರೆಯುತ್ತಾರೆ ಶ್ರೀಮತಿ ರಮಾ ಏಕೇಶ್. ಅವರ ಪುಟ್ಟದೊಂದು ಲೇಖನ "ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು" ಎಂಬುದರಲ್ಲಿ.

"೧೯೨೩ರಲ್ಲೇ ಭಾರತ ರಾಷ್ಟ್ರೀಯ ಕಾಂಗ್ರೆಸ್ ಶಾಖೆಯೊಂದು ತುಮಕೂರಿನಲ್ಲಿ ಆರಂಭವಾಯಿತು. ಮೈಸೂರು ಪ್ರದೇಶದ ಕಾಂಗ್ರೆಸ್ ಸಂಸ್ಥೆ ಉದಯವಾಯಿತು. ಈ ಒಂದು ಉದಾಹರಣೆಯೇ ಸಾಕು ತುಮಕೂರಿನವರ ಮುಂಜಾಗ್ರತಾ ಗುಣಕ್ಕೆ. ದೇಶಪ್ರೇಮಕ್ಕೆ"—ಎನ್ನುತ್ತಾರೆ ರಮಾ ಏಕೇಶ್.

ತಾಳಿಕೆರೆ ಸುಬ್ರಹ್ಮಣ್ಯಂರವರ ಸ್ಫೂರ್ತಿ ಚಿಲುಮೆಯ ಮಾರ್ಗದರ್ಶನದಲ್ಲಿ ಪುಟಿದ ನೀಲಕಂಠರಾವ್. ಆರ್. ಎಸ್. ಆರಾಧ್ಯ, ಎಂ. ವಿ. ರಾಮಾರಾವ್, ಕಡಬ ರಂಗೈಯ್ಯಂಗಾರ್ ಇಂತಹ ದೇಶಭಕ್ತರ ಚಟುವಟಿಕೆಯ ಪ್ರಭಾವ ತುಮಕೂರಿನ ವಾತಾವರಣವನ್ನು ತುಂಬಿ ಅನೇಕ ಹೆಣ್ಣುಮಕ್ಕಳನ್ನು ಸ್ವಾತಂತ್ರ್ಯ ಚಳವಳಿಯ ಮುಖಂಡತ್ವಕ್ಕೆ ಸೆಳೆಯಿತು. ಈ ಪರಿಸರದ ಭಾಗ್ಯತಾರೆಯಾದ ಹೆಣ್ಣು ಮಗಳೊಬ್ಬಳು ಜಿ. ಸಿ. ಭಾಗೀರತಮ್ಮ.

ತ್ಯಾಗ ಶೌರ್ಯ ಸಮರ್ಪಣಾಭಾವದ ಪರಿಸರದಿಂದ ಹೊಮ್ಮಿದ ಭಾಗೀರತಮ್ಮನವರ ಪತಿ, ಇವರಿಗಿಂತ ಮಿಗಿಲಾದ ದೇಶಸೇವಾ ನಿರತ ಬೆಂಗಳೂರಿನ ಚಂಗಲಾರಾಧ್ಯರು. ೧೯೨೮ರಲ್ಲಿ ಬೆಂಗಳೂರಿನ ಬಿನ್ನಿ ಮಿಲಿನಲ್ಲಿ ಕೆಲಸಕ್ಕೆ ಸೇರಿದ್ದ ಚಂಗಲಾರಾಧ್ಯರು ೧೯೩೦ರಲ್ಲಿ ಸರ್ದಾರ್ ವೆಂಕಟರಾಮಯ್ಯನವರಿಂದ ಸ್ವಾತಂತ್ರ್ಯ ಹೋರಾಟಕ್ಕೆ ಪ್ರೇರಿತರಾಗಿ ಕೆಲಸಕ್ಕೆ ರಾಜೀನಾಮೆ ಕೊಟ್ಟು ಹುಬ್ಬಳ್ಳಿ ಸೇವಾದಳದ ಕ್ಯಾಂಪ್ ಸೇರಿ ಚಳವಳಿಗೆ ತರಬೇತಿ ಪಡೆದು ದೇಶಸೇವೆಗೆ ಸಿದ್ಧರಾದರು. ಧರಾಸನಾ ಸತ್ಯಾಗ್ರಹಕ್ಕೆ ನುಗ್ಗಲು ಬೊಂಬಾಯಿಯ ವಿಲೇಪಾರ್ಲೆ ಕ್ಯಾಂಪ್‌ಗೆ ಸೇರಿದರು. ಸೊಲ್ಲಾಪುರದ ಮಾರ್ಷಲ್ ಲಾ ಮುರಿಯಲು ಮುಖಂಡತ್ವ ವಹಿಸಿದರು. ಹೀಗೆ ಸುಮಾರು ಹತ್ತು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ವರ್ಷಗಳಲ್ಲಿ ಉಪ್ಪಿನ ಸತ್ಯಾಗ್ರಹ, ಅರಣ್ಯ ಸತ್ಯಾಗ್ರಹ, ಕರನಿರಾಕರಣ ಸತ್ಯಾಗ್ರಹಗಳಲ್ಲಿ ಪಾಲ್ಗೊಂಡು ಬ್ರಿಟಿಷರ ಗಮನವನ್ನು ಸೆಳೆಯುವಷ್ಟು ಮುಖ್ಯ ಪಾತ್ರ ವಹಿಸಿದ ಚಂಗಲಾರಾಧ್ಯರು ವಿವಾಹಕ್ಕೆ ಮುಂಚೆ ಎರಡು ಸಲ ಸೆರೆವಾಸವನ್ನು ಕಂಡಿದ್ದರು.

ನನ್ನ ನಿಬಂಧನೆಯೊಂದನ್ನು ಒಪ್ಪಿದರೆ ಮಾತ್ರ ಮದುವೆಯಾಗುತ್ತೇನೆಂದು ಚಂಗಲಾರಾಧ್ಯರು ಮದುಮಗಳ ಮುಂದಿಟ್ಟ ನಿಬಂಧನೆ ಹೀಗೆ—"ನಾನು ಪಾತ್ರ ವಹಿಸುವ ದೇಶ ಸ್ವಾತಂತ್ರ್ಯ ಚಳವಳಿಯಲ್ಲೆಲ್ಲಾ ನನ್ನ ಪತ್ನಿಯೂ ಭಾಗವಹಿಸ ಬೇಕು."

ವರದಕ್ಷಿಣೆ ಕೇಳಲಿಲ್ಲ. ವರೋಪಚಾರವಿಲ್ಲ. ಉಡುಗೊರೆ ಬಳುವಳಿಗಳು ಬೇಕಾಗಿರಲಿಲ್ಲ. ನನ್ನಂತೆಯೇ ನನ್ನ ಪತ್ನಿಯಾಗುವವಳೂ ದೇಶಸೇವೆಗೆ ಸಿದ್ಧವಾಗ ಬೇಕೆಂದರು. ವಿಪುಲ ಐಶ್ವರ್ಯವಂತರಾದ ಭಾಗೀರತಮ್ಮನ ತಂದೆ ತಾಯಿ ಎಷ್ಟು ಹಣ ವೆಚ್ಚವಾದರೂ ಹಿಂಜರಿಯುತ್ತಿರಲಿಲ್ಲ. ಆದರೆ ಮದುಮಗನ ಅಪೇಕ್ಷೆಯೇ ಬೇರೆ. ಉತ್ತರಿಸಬೇಕಾದವಳು ಮದುಮಗಳೇ.

ಭಾಗೀರತಮ್ಮ ತನ್ನ ಪತಿಯೊಡನೆ ಸಹಕರಿಸುವೆನೆಂದು ಮದುವೆಯ ಮಂಟಪದಲ್ಲಿ ವಾಗ್ದಾನ ಮಾಡಿದ ಮೇಲೆಯೇ ಮದುವೆ ಶಾಸ್ತ್ರ ನೆರವೇರಿದುದು.

ಭಾಗೀರತಮ್ಮನೂ ಬಾಲ್ಯದಿಂದ ದೇಶಸೇವಾಕಾಂಕ್ಷಿಯಾಗಿ ಬೆಳೆದವರೇ. ಕಾಲೇಜಿನ ವರೆಗೂ ವಿದ್ಯಾಭ್ಯಾಸ ಮಾಡಿ ಉಪಾಧ್ಯಾಯಿನಿಯಾಗಿ ಸೇವೆ ಸಲ್ಲಿಸಿದವರು. ದೇಶದ ವಿದ್ಯಮಾನವನ್ನು ಚೆನ್ನಾಗಿ ಅರಿತವರು. ಸ್ವಾತಂತ್ರ್ಯ ಚಳವಳಿಯ ಬಿಸಿ ವಾತಾವರಣದ ಚುರುಕನ್ನು ಅನುಭವಿಸಿದವರು. ಇಂತಹ ಹೆಣ್ಣು ಎಷ್ಟೇ ಶ್ರೀಮಂತಳಾಗಿದ್ದರೂ "ಭೋಗ ಜೀವನಕ್ಕಿಂತ ತ್ಯಾಗ ದೇಶಸೇವೆ"ಯನ್ನು ಆರಿಸಿಕೊಂಡುದು ಸಹಜವೇ.

"ಮದುವೆಗೆ ಮುಂಚೆಯೇ ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಜೊತೆಯಲ್ಲಿ ತ್ಯಾಗಮಾಡಲು ಸಿದ್ಧಳಾಗಬೇಕೆಂದು ವಚನ ತೆಗೆದುಕೊಂಡ ಚಂಗಲಾರಾಧ್ಯರ ಕೈ ಹಿಡಿದ ದಿನದಿಂದಲೇ ನಾನು ಸ್ವಾತಂತ್ರ್ಯ ಹೋರಾಟಗಾರಳೂ, ಸ್ವಾತಂತ್ರ್ಯ ಪ್ರೇಮಿಯೂ ಆದೆ" ಎನ್ನುತ್ತಾರೆ ಭಾಗೀರತಮ್ಮ.

ಬೆಂಗಳೂರಿಗೆ ಬಂದು ಪತಿಯಿಂದ ಭಾಗೀರತಮ್ಮ ಕಲಿತ ಹೊಸ ಜೀವನ ಪ್ರಾರಂಭದ ಪಾಠವೆಂದರೆ, ಗಾಂಧೀಜಿಯವರ ಧ್ಯೇಯ, ದೇಶದ ಪರಿಸ್ಥಿತಿ, ಸ್ವದೇಶೀ ವಸ್ತುಗಳು, ಖಾದಿ —ಈ ವಿಚಾರಗಳೇ.

"ಜೀವನದಲ್ಲಿ ಹೊಸ ಪುಟವನ್ನು ಪ್ರಾರಂಭಿಸಿ ಎಂಟು ತಿಂಗಳಾಗಿರಬಹುದು. ಕ್ವಿಟ್ ಇಂಡಿಯಾ ಚಳವಳಿ ನಡೆಸಲು ಕರೆ ಬಂತು. ಈ ಸಂದರ್ಭದಲ್ಲಿ ನಾನು ಕೊಟ್ಟ ವಚನವನ್ನು ಯಜಮಾನರು ಎಚ್ಚರಿಸಿದರು. ಚಳವಳಿಯಲ್ಲಿ ಭಾಗವಹಿಸಲು ಧೈರ್ಯ ತುಂಬಿದರು" ಎಂದು ತಮ್ಮ ಪಾತ್ರದ ಪ್ರಾರಂಭವನ್ನು ಭಾಗೀರತಮ್ಮ ವಿವರಿಸುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಚಂಗಲಾರಾಧ್ಯರು ಬಿನ್ನಿ ಮಿಲ್ ಕೂಲಿಗಾರರ ಮುಖಂಡರಾಗಿದ್ದರು. ಕೂಲಿಗಾರರಿಂದ ಪ್ರಜಾಪ್ರತಿನಿಧಿ ಸಭೆಗೆ ಸದಸ್ಯರಾಗಿ ಆರಿಸಿ ಬಂದಿದ್ದರು. ೫-೯-೧೯೪೨ರಲ್ಲಿ ಬಿನ್ನಿ ಮಿಲ್ ಆವರಣದಲ್ಲಿ ಕಾರ್ಮಿಕರ ಸಭೆಯನ್ನು ಕರೆದು ಕಾನೂನು ಭಂಗ ಚಳವಳಿ ಹೂಡಲು ಚಂಗಲಾರಾಧ್ಯರು ಸಿದ್ಧತೆ ಮಾಡಿದರು. ಅಂದಿನ ಸಭೆಯಲ್ಲಿ ಭಾಗೀರತಮ್ಮನ ಭಾಷಣವನ್ನು ಏರ್ಪಡಿಸಿದರು. ಸಂಜೆ ನಾಲ್ಕು ಗಂಟೆಗೆ ಸರಿಯಾಗಿ ಸಭೆ ಸೇರಬೇಕಾಗಿತ್ತು. ಈ ವಿಷಯವನ್ನು ತಿಳಿದ ಪೋಲೀಸಿನವರು ನಾಲ್ಕು ಗಂಟೆಗೆ ಮುಂಚೆಯೇ ಸಭೆ ಸೇರಬೇಕಾಗಿದ್ದ ಸ್ಥಳವನ್ನು ಸುತ್ತುವರಿದು ನಿಂತು ಸಭೆ ನಡೆಯದಿರುವಂತೆ ತಡೆಯಲು ಎಚ್ಚರಿಕೆ ವಹಿಸಿದ್ದರು.

ಭಾಷಣ ಮಾಡಲು ಅಲ್ಲಿಗೆ ಹೋದ ಭಾಗೀರತಮ್ಮನಿಗೆ ಕಂಡುದು ಸಶಸ್ತ್ರ ಪೋಲೀಸಿನವರ ತಂಡ. ಅವರನ್ನು ಎದುರಿಸಿ ಒಳಗೆ ನುಗ್ಗಲಾರದೆ ಆವರಣದ ಹೊರಗೆ ನಿಂತಿದ್ದರ ಹತ್ತು ಸಾವಿರು ಕೂಲಿಯವರು. ಈ ದೃಶ್ಯವನ್ನು ಕಂಡು ಭಾಗೀರತಮ್ಮನ ಎದೆ ನಡುಗಿತು ಸ್ವಲ್ಪಹೊತ್ತು ಮಾತ್ರ.

"ನನಗೂ ನಮ್ಮ ಯಜಮಾನರಿಗೂ ಆ ನಿಮಿಷದಲ್ಲಿ ಎಲ್ಲಿಂದಲೋ ಶಕ್ತಿ, ಸ್ಫೂರ್ತಿ, ಧೈರ್ಯ ಬಂದಂತಾಯಿತು. ಜೈ ಭಾರತಮಾತೆ ಎಂದು ಜಯಕಾರ ಮಾಡುತ್ತಾ ನಾವಿಬ್ಬರೂ ಪೋಲೀಸಿನವರನ್ನು ಭೇದಿಸಿ ಒಳಗೆ ನುಗ್ಗಿದೆವು. ನಮ್ಮ ಹಿಂದೆ ಇದ್ದ ಹತ್ತು ಸಾವಿರ ಕೂಲಿಯವರೂ ನಮ್ಮನ್ನು ಹಿಂಬಾಲಿಸಿ ಒಳಗೆ ಬಂದರು. ಇಷ್ಟು ಜನರ ಶಕ್ತಿಯು ಮುಂದೆ ಪೋಲೀಸಿನವರ ಸಾಹಸ ಸೊಪ್ಪಿನಂತೆ ಬಾಡಿತು. ಸಭೆ ಸೇರಿದ ಕೂಲಿಗಾರ ಸಹೋದರರಿಗೆ ಭಾಷಣ ಮಾಡಿ ಉತ್ತೇಜನ ಕೊಟ್ಟೇ ಕೊಟ್ಟೆನು, ಬಿಡಲಿಲ್ಲ" ಎನ್ನುತ್ತಾರೆ ಮೊಟ್ಟ ಮೊದಲ ಸ್ವಾತಂತ್ರ್ಯ ಹೋರಾಟದ ಕಹಿಯನ್ನು ಕಂಡ ಭಾಗೀರತಮ್ಮ.

ಮತ್ತೊಮ್ಮೆ ಚಿಕ್ಕ ಲಾಲ್‌ಬಾಗ್‌ನಲ್ಲಿ ಏರ್ಪಡಿಸಿದ್ದ ಬಹಿರಂಗ ಸಭೆಯಲ್ಲಿ ಭಾಗೀರತಮ್ಮನೇ ಮಾತಾಡಬೇಕಾಯಿತು—

"ಈ ಬೃಹತ್ ಸಭೆಯನ್ನುದ್ದೇಶಿಸಿ ಮಾತಾಡುವಾಗ ನನಗೆ ಸ್ವಲ್ಪ ಹೆದರಿಕೆಯಾಯಿತು. ಇಷ್ಟೊಂದು ಜನರೆದುರು ಹೇಗೆ ಮಾತಾಡುವುದೆಂದು ಯೋಚಿಸಿ, "ಜೈ ಭಾರತ ಭುವಿಗೆ, ಮಾತೆಗೆ ಜೈ" ಎಂಬ ಹಾಡನ್ನು ಹಾಡಿ ಮಾತಾಡಲು ಪ್ರಾರಂಭಿಸಿದಾಗ ಭಾರತಮಾತೆ ನನಗೆ ಧೈರ್ಯವನ್ನು ಕೊಟ್ಟಳು. ಹೀಗೆ ಇನ್ನೂ ಕೆಲವು ಕಡೆ ಕೂಲಿಯವರನ್ನು ಹುರಿದುಂಬಿಸುವ ಭಾಷಣ ಮಾಡಿ ಸರ್ಕಾರದ ಕಾನೂನು ಭಂಗ ಮಾಡಲು ಅವರನ್ನೆಲ್ಲಾ ಸಿದ್ಧಪಡಿಸಿದೆನು" ಎಂದು ಹೇಳುತ್ತಾ ಯಜಮಾನರು ವಹಿಸಿದ ಕೆಲಸವನ್ನು ಸಮರ್ಪಕವಾಗಿ ಮಾಡಿದ ನೆಮ್ಮದಿಯನ್ನು ತೋರಿಸುತ್ತಾರೆ.

೧೯೪೨ರ ಆಗಸ್ಟ್ ಕೊನೆ ಬಂತು, ಕಾನೂನು ಭಂಗ ಚಳವಳಿ ಹೂಡಬೇಕು. ಮಹಾತ್ಮಾಜಿಯ ಅಪ್ಪಣೆ ಇದು: ಅಹಿಂಸಾತ್ಮಕವಾಗಿ ನಡೆಯಬೇಕು. ಇಷ್ಟೆಲ್ಲಾ ಮನದಲ್ಲೇ ತೀರ್ಮಾನಿಸಿ ದಂಪತಿಗಳಿಬ್ಬರೂ ಬೃಹತ್ ಮೆರವಣಿಗೆಯ ಮುಖಂಡತ್ವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ವನ್ನು ವಹಿಸಿ ಮೆರವಣಿಗೆ ಹೊರಟರು. ಅಂದು ಸೆಪ್ಟೆಂಬರ್ ತಿಂಗಳ ಆರನೇ ದಿನ. ಮೆಜೆಸ್ಟಿಕ್‌ವರೆಗೂ ಬಂದ ಈ ಮೆರವಣಿಗೆಯನ್ನು ನೋಡಿ ಬಂದೂಕುಧಾರಿಗಳಾದ ಪೋಲೀಸಿನವರು ಮೆರವಣಿಗೆ ಮುಂದೆ ಹೋಗಲು ಬಿಡದೆ ತಡೆದು ಹೀಗೆ ಕೂಗಿ ಹೇಳಿದರು.

"ಮೆರವಣಿಗೆಯನ್ನು ನಿಲ್ಲಿಸಿ ಚದುರಿಸಿ ಎಲ್ಲರೂ ಮನೆ ಸೇರಿಕೊಳ್ಳಿ. ಇಲ್ಲದಿದ್ದರೆ, ಇಲ್ಲಿಂದ ಒಂದು ಹೆಜ್ಜೆ ಮುಂದಿಟ್ಟರೂ ಗೋಲೀಬಾರ್ ಮಾಡಬೇಕಾಗುತ್ತದೆ" —ಎಂದು ಬೆದರಿಸಿದರು.

"ಈ ಮೆರವಣಿಗೆಯಲ್ಲಿ ನಾವು ಮಾಡಿದ್ದೇನೆಂದರೆ, ಬ್ರಿಟಿಷ್ ಬೊಂಬೆಯೊಂದನ್ನು ಮಾಡಿ, ಚಟ್ಟ ಕಟ್ಟಿ, ಅದರಲ್ಲಿ ಆ ಬೊಂಬೆಯನ್ನಿಟ್ಟು, ಮೆರವಣಿಗೆಯಲ್ಲಿ ಅದನ್ನು ಕೊಂಡೊಯ್ದು ಸುಡಬೇಕೆಂದು ಏರ್ಪಾಡು ಮಾಡಿಕೊಂಡಿದ್ದೆವು. ಇದೇ ಪ್ರಕಾರ ನಾನೂ ನಮ್ಮ ಯಜಮಾನರೂ ಬೆಳಿಗ್ಗೆ ಎಂಟು ಗಂಟೆಗೆ ಹೊರಟು, ಸುಮಾರು ಹತ್ತು ಸಾವಿರ ಜನರಿರಬಹುದು. ಅಷ್ಟು ಅಧಿಕ ಸಂಖ್ಯೆಯಲ್ಲಿ ಮೆರವಣಿಗೆ ಹೊರಡಿಸಿ ಅಂದಿನ ಕಾಂಗ್ರೆಸ್ ಆಫೀಸಿದ್ದ ಅರಳೇ ಪೇಟೆಯಿಂದ ಹೊರಟು ಮೆಜೆಸ್ಟಿಕ್ ಹತ್ತಿರ ಹನ್ನೊಂದು ಗಂಟೆ ವೇಳೆಗೆ ಬಂದೆವು. ಅಲ್ಲೇ ನಮ್ಮನ್ನು ನೂರಾರು ಮಂದಿ ಪೋಲೀಸ್‌ದಳದವರು ತಡೆದದ್ದು" ಎಂದು ಆ ದಿನದ ಮೆರವಣಿಗೆಯ ಚಿತ್ರ ನಮ್ಮ ಕಣ್ಣಮುಂದೆ ಬರುವಂತೆ ವಿವರಿಸುತ್ತಾರೆ.

ಮೆರವಣಿಗೆ ಹೊರಟರೆ ಬ್ರಿಟಿಷ್ ಸರ್ಕಾರ ನಿರ್ಬಂಧಪಡಿಸುತ್ತದೆಂದು ಗೊತ್ತು. ಬ್ರಿಟಿಷ್ ಅಧಿಕಾರಿಯೊಬ್ಬನ ಗೊಂಬೆ ಮಾಡಿ ಸುಡುವ ಕಾರ್ಯಕ್ರಮಕ್ಕೆ ಸರ್ಕಾರ ಶಿಕ್ಷೆ ಕೊಡುತ್ತದೆಂದೂ ಗೊತ್ತು. ಈ ಅಪಾಯದ ಅರಿವಿದ್ದರೂ, ಗಂಡಸರೇ ಹೆಚ್ಚು ಸಂಖ್ಯೆಯಲ್ಲಿದ್ದ ಮೆರವಣಿಗೆಯ ಮುಂದಾಳತ್ವವನ್ನು ವಹಿಸಿ ಭಾಗೀರತಮ್ಮ ಮುನ್ನುಗ್ಗಿದರು. ಚಟ್ಟ ಹೊತ್ತು ನಿಂತವರು ಭಾಗೀರತಮ್ಮ ಮತ್ತು ಚಂಗಲಾರಾಧ್ಯರೇ, ಮೆರವಣಿಗೆಯ ಮುಂಭಾಗದಲ್ಲಿದ್ದವರು ಇವರಿಬ್ಬರೇ, ಪೋಲೀಸಿನವರ ಆಜ್ಞೆಯನ್ನು ಉಲ್ಲಂಘಿಸಿ ಒಂದು ಹೆಜ್ಜೆ ಮುಂದಿಟ್ಟರೆ ಗೋಲೀಬಾರ್‌ಗೆ ಆಹುತಿಯಾಗುತ್ತಿದ್ದರು ಈ ದಂಪತಿಗಳೇ.

ಅಪಾಯದ ಈ ಪರಿಸ್ಥಿತಿಯನ್ನು ಇಬ್ಬರೂ ಹೇಗೆ ಎದುರಿಸಿದರೆಂದು ಕುತೂಹಲವಾಗುತ್ತದೆ.

"೬-೯-೪೨ರ ಆ ದಿನವನ್ನು ಮರೆಯುವಂತೆಯೇ ಇಲ್ಲ. ಬೆಂಗಳೂರಿನ ಕಾರ್ಮಿಕ ವರ್ಗದವರೆಲ್ಲಾ ನಮ್ಮ ಮುಂದಾಳತ್ವದಲ್ಲಿ ಮೆರವಣಿಗೆ ಹೊರಟ ದಿನ. ಪೋಲೀಸಿನವರು ಇಷ್ಟು ಜನರನ್ನು ಮೆಜೆಸ್ಟಿಕ್ ಬಳಿ ತಡೆದಾಗ ನಿಶ್ಶಬ್ದ ವಾತಾವರಣ. ಮುಂದೇನು ಮಾಡಬೇಕೆಂಬುದನ್ನು ನಾವಿಬ್ಬರೇ ತೀರ್ಮಾನಿಸಬೇಕಾಯಿತು. ನಾವು ನಿರ್ಧರಿಸಿದ್ದು ಹೀಗೆ, ಎಷ್ಟು ಹೊತ್ತಾದರೂ ಸರಿ, ಪೋಲೀಸಿನವರು ತಾವಾಗಿಯೇ ದಾರಿ ಬಿಡುವವರೆಗೂ ಮೆರವಣಿಗೆಯಲ್ಲಿದ್ದ ಅಷ್ಟು ಜನರೂ ಹಾಗೆಯೇ ಅಲ್ಲಲ್ಲೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ನಿಂತು ಬಿಡುವುದು. ಹೀಗೆ ನಾವು ಆದೇಶವನ್ನು ಕೊಟ್ಟ ಕೂಡಲೇ ಕಾರ್ಮಿಕರೆಲ್ಲರೂ ನಾವು ಹೇಳಿದಂತೆಯೇ ಕೇಳಿದರು. ಗಾಂಧಿಯವರ ಅಹಿಂಸಾ ಚಳವಳಿಯನ್ನು ಯಶಸ್ವಿಯಾಗಿ ಪಾಲಿಸಲು ತೀರ್ಮಾನ ಮಾಡಿ ಅಲ್ಲೇ ನಿಂತೆವು" ಎನ್ನುತ್ತಾರೆ ಭಾಗೀರತಮ್ಮ.

ಆವತ್ತಿನ ದಿನದ ಸ್ಫೂರ್ತಿಯನ್ನು ಮತ್ತೊಮ್ಮೆ ತುಂಬಿಕೊಂಡು ಮುಂದು ವರಿಸುತ್ತಾರೆ. "ಪೋಲೀಸರ ಬೆದರಿಕೆಗೆ ನಾವು ಜಗ್ಗಲಿಲ್ಲ. ಗುಂಡಿಗೆ ಎದುರಾಗಿ ನಿಂತಿದ್ದ ನಮಗೆ ಜೀವದ ಆಸೆ ಇರಲಿಲ್ಲ. ಇಡೀ ಬೆಂಗಳೂರಿನ ಕಾರ್ಮಿಕರೆಲ್ಲರೂ ನಮ್ಮ ಬೆನ್ನ ಹಿಂದೆ ನಿಂತಿದ್ದರು. "ಮಾಡು ಇಲ್ಲವೇ ಮಡಿ" ಎಂಬ ಗಾಂಧಿ ಮಹಾತ್ಮರ ಮಂತ್ರ ಮನದಲ್ಲಿ ಮೊಳಗುತ್ತಿತ್ತು. ನಾವು ಬೆಳಿಗ್ಗೆ ಎಂಟು ಗಂಟೆಗೆ ಹೊರಟವರು ಸಾಯಂಕಾಲ ಐದು ಗಂಟೆವರೆಗೂ ಕದಲದೆ ಮೆಜೆಸ್ಟಿಕ್ ಸರ್ಕಲ್‌ನಲ್ಲಿ ನಿಂತೇ ಇದ್ದೆವು. ವೀರ ಗೀತೆಗಳನ್ನೂ, ರಾಷ್ಟ್ರ ಪ್ರೇಮ ಗೀತೆಗಳನ್ನು ಹಾಡುತ್ತಲೇ ಇದ್ದೆವು. ವೀಕ್ಷಕರ ಮನ ಕರಗುತ್ತಿತ್ತು. ಬಿಸಿಲಿನಲ್ಲಿ ಒಂದೇ ಸಮನೆ ಆರು ಗಂಟೆಗಳ ಕಾಲ ನಿಂತಿದ್ದ ಕಾರ್ಮಿಕ ಸಹೋದರರಿಗೆ ಜನರು ತಂಪಾದ ಪಾನೀಯ ಕೊಟ್ಟು ಉಪಚರಿಸಿದರು. ಸಾಯಂಕಾಲ ಐದು ಗಂಟೆಗೆ ನಾವು ನಿಂತಿದ್ದ ಸ್ಥಳದಲ್ಲೇ ಬಹಿರಂಗ ಸಭೆ ಸೇರಿ, ಬ್ರಿಟಿಷ್ ಗೊಂಬೆಯನ್ನು ಚಟ್ಟ ಸಮೇತ ಬೆಂಕಿಗೆ ಹಾಕಿ ನಮ್ಮ ಉದ್ದೇಶವನ್ನು ಪೂರೈಸಿದೆವು. ಎಲ್ಲವೂ ಶಾಂತರೀತಿಯಿಂದ ನಡೆಯಿತು" ಎಂದಷ್ಟು ವಿವರಿಸಿದ ಭಾಗೀರತಮ್ಮ ಅಂದಿನ ಪರಿಸ್ಥಿತಿಯನ್ನು ಪುನಃ ನೆನೆದು, ಸ್ವಲ್ಪ ನಿಧಾನಿಸಿ ಮಾತಾಡು ತ್ತಾರೆ.

"ಕಾರ್ಮಿಕರು ನನ್ನ ಸಹೋದರರಾದರು. ಅವರಿಗಾಗಿ ನಾನೂ ನನ್ನ ಯಜಮಾನರಂತೆ ತ್ಯಾಗಿಯಾಗಲು ಸಿದ್ಧಳಾದೆ. ಕೂಲಿಗಾರ ಬಂಧುಗಳ ಜೊತೆಯಲ್ಲಿ ಕಳೆದ ಆ ದಿನಗಳನ್ನು ನನ್ನ ಜನ್ಮದಲ್ಲಿ ಎಂದೂ ಮರೆಯಲಾರೆ" ಎನ್ನುತ್ತಾರೆ.

ಭಾಗೀರತಮ್ಮನವರ ಸ್ವಾತಂತ್ರ್ಯ ಚಳವಳಿಯ ಮರೆಯಲಾಗದ ಮತ್ತೊಂದು ಘಟನೆ ನಡೆದದ್ದು ಗೌರಿಹಬ್ಬದ ದಿನ.

"ಅಂದು ತಾರೀಖು ೯-೯-೪೨. ನನ್ನನ್ನು ನನ್ನ ಪತಿಯನ್ನು ಬಂಧಿಸಲು ವಾರೆಂಟ್ ಬಂತು. ನನ್ನ ತವರೂರಿಂದ ಗೌರಿ ಹಬ್ಬಕ್ಕೆ ನನ್ನನ್ನು ಕರೆದುಕೊಂಡು ಹೋಗಲು ನನ್ನ ಅಣ್ಣ ಬಂದಿದ್ದರು. ಮದುವೆಯಾದ ಮೊದಲ ವರ್ಷ ನನ್ನ ಕೈಯಿಂದ ಬಾಗಿನ ಕೊಡಿಸಲು ತುಮಕೂರಿನಲ್ಲಿ ನನ್ನ ತಂದೆ ತಾಯಿ ಹಬ್ಬದ ಸಂಭ್ರಮ ಪಡುತ್ತಿದ್ದರು.

ಇತ್ತ ಸಂಬಂಧದ ತವರು ಮನೆ, ಅತ್ತ ಬಂಧನದ ಸೆರೆಮನೆ! ಎಷ್ಟು ಸಂತೋಷದ ಹಬ್ಬದ ದಿನ ಅದು! ತವರು ಮನೆಗೆ ಓಡಿ ಬಿಡಲೇ ಎಂದು ಒಂದು ನಿಮಿಷ ಮನಸ್ಸು ಚಂಚಲವಾಯಿತು. ನನಗಾಗಿ ಕಾದಿದ್ದ ತಂದೆ ತಾಯಿ ನೆನಪು ಬಂತು. ಆದರೆ ಕೂಡಲೇ ದೇಶದ ಚಳವಳಿಯ ಜವಾಬ್ದಾರಿ ನನ್ನನ್ನು ಎಚ್ಚರಿಸಿತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಮನಸ್ಸನ್ನು ಸ್ವಾತಂತ್ರ ಚಳವಳಿಯ ಕಡಿವಾಣದಿಂದ ಎಳೆದು ಸ್ಥಿಮಿತಕ್ಕೆ ತಂದುಕೊಂಡೆನು. ತವರು ಮನೆಯ ಸಂತೋಷಕ್ಕಿಂತ ದೇಶದ ಸ್ವಾತಂತ್ರ್ಯ ಪಡೆಯುವ ಸೆರೆಮನೆಯೇ ಹಿತವೆಂದು ತೋರಿತು. ಈ ತೀರ್ಮಾನಕ್ಕೆ ಬಂದು ನನ್ನ ಪತಿಯ ಜೊತೆಯಲ್ಲೇ ಸೆರೆಮನೆಗೆ ಹೊರಡಲು ಸಿದ್ಧಳಾಗಿ, ಬಂಧಿಸಲು ಬಂದಿದ್ದ ಪೋಲೀಸರನ್ನು ಹಿಂಬಾಲಿಸಿ ಹೋದೆ. ಸಾಯಂಕಾಲದವರೆಗೂ ನಮ್ಮನ್ನು ಪೋಲೀಸ್ ಠಾಣೆಯಲ್ಲಿ ಕೊಳೆ ಹಾಕಿದಂತೆ ಕೂರಿಸಿದ್ದರು.

"ಸ್ವಾತಂತ್ರ್ಯ ಚಳವಳಿಯಲ್ಲಿ ಬೆರೆತು ಹೋಗಬೇಕೆಂದು ಮನಸ್ಸನ್ನು ಗಟ್ಟಿ ಮಾಡಿಕೊಂಡಿದ್ದರೂ, ಆಗ ಇನ್ನೂ ಚಿಕ್ಕ ವಯಸ್ಸು. ಮದುವೆಯಾದ ಹೊಸತು, ತವರೂರಿನ ಗೀಳು ಕಾಡಿಸುತ್ತಿತ್ತು. ಈ ಆಸೆಯನ್ನೆಲ್ಲಾ ಅದುಮಿ, ಪತಿಯೊಡನೆ ದೇಶ ಸೇವೆಯೇ ಧ್ಯೇಯವೆಂದು ಆಗಾಗ ಮನವರಿಕೆ ಮಾಡಿಕೊಳ್ಳುತ್ತಿದ್ದೆನು" ಎನ್ನುತ್ತಾರೆ ಭಾಗೀರತಮ್ಮ.

ದಸ್ತಗಿರಿಯಾದ ಸತಿಪತಿಗಳಿಬ್ಬರಿಗೂ ಸೆರೆಮನೆಯನ್ನು ಕಾಣಿಸಿದುದು ಸಾಯಂಕಾಲವೇ. ಜೈಲಿನಲ್ಲಿ ಇಬ್ಬರನ್ನೂ ಒಂದೇ ಕಡೆ ಹಾಕುವರೆಂದು ಭಾವಿಸಿದ್ದ ಭಾಗೀರತಮ್ಮನಿಗೆ ಮತ್ತೊಂದು ದುಃಖ ಕಾದಿತ್ತು. ಚಂಗಲಾರಾಧ್ಯರನ್ನು ಬೇರೆ ಕಡೆ ಜೈಲಿನ ಕೋಣೆಗೆ ಕರೆದುಕೊಂಡು ಹೋದರು. ಭಾಗೀರತಮ್ಮನನ್ನು ಇತರ ಖೈದಿಗಳ ಜೊತೆ ಹಾಕಿದರು.

ಭಾಗೀರತಮ್ಮನಿಗೆ ಇದು ಸೆರೆವಾಸದ ಪ್ರಥಮ ಅನುಭವ. ಕಂಬಿಗಳ ಮಧ್ಯೆ ನಿಂತ ಈ ಯುವತಿಯನ್ನು ಖೈದಿಗಳೆಲ್ಲರೂ ನೋಡುತ್ತಿದ್ದರು. ಜೈಲಿನ ಅಧಿಕಾರಿಣಿಯೊಬ್ಬಳು ಭಾಗೀರತಮ್ಮನಿಗೆ ಒಂದು ಮಣ್ಣಿನ ಮಗೆಯನ್ನು, ಒಂದು ಮುಚ್ಚಳವನ್ನು, ಎರಡು ಕರಿಕಂಬಳಿಗಳನ್ನೂ ಕೊಟ್ಟು ಹೋದಳು. ಜೈಲಿನ ಸಮವಸ್ತ್ರ ಧರಿಸಬೇಕೆಂದು ತಿಳಿಸಿದ್ದಳು.

ಈ ಸಮಯದಲ್ಲಿ ಎಷ್ಟು ತಡೆದುಕೊಂಡರೂ ತವರು ಮನೆಯ ಜ್ಞಾಪಕ ಬಂತು—ಎನ್ನುತ್ತಾರೆ ಭಾಗೀರತಮ್ಮ. ಕಣ್ಣಲ್ಲಿ ನೀರು ಧಾರಾಕಾರವಾಗಿ ಹರಿದು ದುಃಖ ಉಮ್ಮಳಿಸಿತು. ಈಕೆಯ ಸ್ಥಿತಿಯನ್ನು ಕಂಡ, ಅದೇ ಸೆರೆಮನೆಯಲ್ಲಿದ್ದ ಕಮಲಾದೇವಿ ಚಟ್ಟೋಪಾಧ್ಯಾಯ ಭಾಗೀರತಮ್ಮನನ್ನು ಸಮಾಧಾನಪಡಿಸಿ, ಆದರದಿಂದ ಮಾತಾಡಿಸಿ, ತಮ್ಮ ಕೋಣೆಗೆ ಕರೆದುಕೊಂಡು ಹೋಗಿ ಧೈರ್ಯ ಹೇಳಿದ ಮೇಲೆ ಸ್ವಲ್ಪ ವ್ಯಥೆ ಕಡಿಮೆಯಾಯಿತು. ಜೈಲು ವಾಸವನ್ನು ಒಂದು ವಾರ ಕಳೆದ ನಂತರವೂ ಭಾಗೀರತಮ್ಮನಿಗ ಜಿಗುಪ್ಸೆ ಹೋಗಲಿಲ್ಲ.

ಇವರನ್ನು ಕೋರ್ಟಿಗೆ ಹಾಜರ್ ಪಡಿಸುವುದು ಮುಂದಿನ ಕ್ರಮ. ಕಾನೂನು ಮುರಿದುದಕ್ಕಾಗಿ ಆರು ಕೇಸನ್ನು ದಾಖಲೆ ಮಾಡಿಕೊಂಡಿದ್ದರು. ಈ ಕೇಸಿನಲ್ಲಿ ಭಾಗೀರತಮ್ಮನ ಜೊತೆಗಿದ್ದವರು ಕೂಲಿಗಾರರೇ ಆದ ಆದಿಮೂಲಂ, ರಾಜಗೋಪಾಲ ಅಯ್ಯಂಗಾರ್ ಮತ್ತು ಪತಿ ಚಂಗಲಾರಾಧ್ಯರು. ಕೋರ್ಟಿನ ವಿಚಾರಣೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಮಾಡುವಾಗ ನ್ಯಾಯಾಧೀಶರು ಇವರುಗಳನ್ನುದ್ದೇಶಿಸಿ "ನೀವು ಕಾನೂನು ಮುರಿದಿದ್ದೀರಿ. ಸರ್ಕಾರದ ಮುಂದಿರುವಿರಿ ಗೊತ್ತೇ ?" ಎಂದು ಪ್ರಶ್ನಿಸಿದಾಗ ಇವರೆಲ್ಲರೂ ಒಕ್ಕೊರಲಿನಿಂದ,

"ನಿಮ್ಮ ಕಾನೂನು ಮುರಿದು ಚೂರು ಚೂರು ಮಾಡಿದ್ದೇವೆ. ಬೇಸುಗೆ ಹಾಕಿಕೊಳ್ಳಿ" ಎಂದು ಕೆಚ್ಚೆದೆಯಿಂದ ನ್ಯಾಯಾಧೀಶರ ಮುಂದೆ ಹೇಳಿದ ಮಾತನ್ನು ಮರೆಯಲಾಗದು ಎನ್ನುತ್ತಾರೆ ಭಾಗೀರತಮ್ಮ .

ಭಾಗೀರತಮ್ಮನನ್ನು ಜೈಲಿನಿಂದ ಕೋರ್ಟಿಗೆ ಕರೆದುಕೊಂಡು ಹೋದಾಗ, ಕೋರ್ಟಿನ ಆವರಣದಲ್ಲಿ ತಂದೆ ತಾಯಿ, ಬಂಧು ಬಳಗದವರು, ಕಾರ್ಮಿಕರು ತುಂಬಿರುವುದನ್ನು ನೋಡಿ ಭಾಗೀರತಮ್ಮನಿಗೆ ತಡೆಹಿಡಿದಿದ್ದ ಕಣ್ಣೀರು ಕೋಡಿಯಾಗಿ ಹರಿಯಿತು. ಈ ಸನ್ನಿವೇಶವನ್ನು ಸ್ಮರಿಸಿಕೊಂಡರೆ ಈಗಲೂ ಕಣ್ಣಲ್ಲಿ ನೀರು ಬರುತ್ತದೆ ಎನ್ನುತ್ತಾರೆ ಭಾಗೀರತಮ್ಮ...

"ತಂದೆ ತಾಯಿ ಬಂಧುಗಳೂ ಕಂಬನಿ ಸುರಿಸುತ್ತಿದ್ದರು. ಆಗ ನನ್ನ ಪರಿಸ್ಥಿತಿ ಹೇಗಿತ್ತೆಂದು ನೀವೇ ಊಹಿಸಿ. ನನಗಂತೂ ವರ್ಣಿಸಲು ಸಾಧ್ಯವಿಲ್ಲ" ಎನ್ನುತ್ತಾರೆ. ಮಗಳಿಗೆ ಧೈರ್ಯ ಹೇಳುವುದೊಂದೇ ಮಾರ್ಗವೆಂದುಕೊಂಡರು ತಂದೆ–ತಾಯಿ.

"ಆ ಸಮಯದಲ್ಲಿ ನನ್ನ ಮಾತಾಪಿತರು ಹೇಳಿದ ಮಾತನ್ನು ಎಂದೂ ಮರೆಯಲಾರೆ. ದೇಶಕ್ಕಾಗಿ ತ್ಯಾಗಮಾಡಿ ಸುಖವಾಗಿ ಬಾಳು ಮಗಳೇ ಎಂದರು ತಾಯಿ. ನೀನೇ ಭಾಗ್ಯಶಾಲಿ. ಇದು ನಿನ್ನ ಸುಕೃತದ ಫಲ ಎಂದರು ತಂದೆ. ಕಂಬನಿಯ ಕಣ್ಣುಗಳಿಂದ ಹರಸಿದರೂ ಆ ಮಾತುಗಳು ನನಗೆ ಶಕ್ತಿಯನ್ನು, ಧೈರ್ಯವನ್ನು ಕೊಡುವಂತಹ ಆಶೀರ್ವಚನವಾಯಿತು. ಕೂಲಿಗಾರ ಸೋದರರು ಜಯಕಾರ ಹಾಕುತ್ತಾ ಉತ್ಸಾಹ ತುಂಬಿದರು. ಇವರೆಲ್ಲರ ಪ್ರೀತ್ಯಾದರದ ನುಡಿಗಳನ್ನು ಹೃದಯದಲ್ಲಿ ತುಂಬಿಕೊಂಡು ಮತ್ತೆ ಸೆರೆಮನೆಗೆ ಹೋದೆನು"—ಎಂದು ಕಣ್ಣಾಲೆಗಳನ್ನು ಒರೆಸಿಕೊಳ್ಳುತ್ತಾ ಹೇಳುತ್ತಾರೆ ಭಾಗೀರತಮ್ಮ.

ಒಂದು ವರ್ಷ ಏಳೂವರೆ ತಿಂಗಳ ಕಠಿಣ ಸಜ ಭಾಗೀರತಮ್ಮನ ಪ್ರಥಮ ಜೈಲುವಾಸದ ಅನುಭವ. ಜೈಲಿಗೆ ಹೋದ ಮೊದಲ ದಿನವನ್ನು ಮತ್ತೊಮ್ಮೆ ನೆನೆದು ಹೀಗೆನ್ನುತ್ತಾರೆ.

"ಪತಿಯಿಂದ ನನ್ನನ್ನು ಪ್ರತ್ಯೇಕಿಸಿ ಹೆಂಗಸರ ಬ್ಯಾರಕ್‌ಗೆ ಕರೆದುಕೊಂಡು ಹೋದ ಜೈಲಿನ ಮೇಟ್ರನ್ ಒಳಗೆ ಹೋಗುವ ಮೊದಲು ಬಾಗಿಲಿಗೆ ಕಟ್ಟಿದ್ದ ದಾರವನ್ನು ಎಳೆದಾಗ ಗಂಟೆಯ ಶಬ್ದ ಕೇಳಿಬಂತು. ಯಾವುದೋ ದೇವಮಂದಿರಕ್ಕೆ ಹೋಗುತ್ತಿರುವೆನೆಂದು ತಿಳಿದು ಪ್ರವೇಶಿಸಿದೆನು. 'ಬಾಗಿಲೊಳು ಕೈ ಮುಗಿದು ಒಳಗೆ ಬಾ ಯಾತ್ರಿಕನೆ' ಎಂಬ ಕವನ ನೆನಪಿಗೆ ಬಂದು, "ಬಾಗಿಲೊಳು ಕೈ ಮುಗಿದು ಒಳಗೆ ಬಾ ಸ್ವಾತಂತ್ರ್ಯ ಪ್ರೇಮಿಯೇ ! ಸೆರೆಮನೆಯಲ್ಲ ಇದು ಜ್ಞಾನಮಂದಿರ"

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಎಂಬ ಅರಿವು ತಾನಾಗಿ ಮೂಡಿತು ಎಂದು ಹೇಳಿ ತಮ್ಮ ಕಾರಾಗೃಹ ಪ್ರವೇಶವನ್ನು ವಿವರಿಸುತ್ತಾರೆ.

ಜೈಲಿನಲ್ಲಿದ್ದ ಒಂದೂವರೆ ವರ್ಷಗಳಲ್ಲಿ ಒಂದೊಂದು ದಿನದ ದಿನಚರಿಯನ್ನು ಒಂದೊಂದು ಕಥೆಯಾಗಿ ಬರೆಯಬಹುದು. ಅವುಗಳಲ್ಲಿ ಕೆಲವು ಮರೆಯಲಾಗದ ಘಟನೆಗಳು ಎಂದು ಒಂದೊಂದಾಗಿ ಜ್ಞಾಪಿಸಿಕೊಳ್ಳುತ್ತಾರೆ.

ಈಸೂರು ಸೋದರರನ್ನು ಗಲ್ಲಿಗೇರಿಸಿದುದು, ಜೈಲಿನ ಅಧಿಕಾರಿಗಳನ್ನು ಕೂರಿಸಿಕೊಂಡು ಜೈಲಿನಲ್ಲಿ ನಡೆಯುತ್ತಿದ್ದ ಅನ್ಯಾಯಗಳನ್ನು ನಾಟಕ ರೂಪದಲ್ಲಿ ಆಡಿ ತೋರಿಸಿ ಅವರ ಕಣ್ತೆರೆಸಿದ್ದು, ಎಂಟು ದಿನ ಉಪವಾಸ ಮಾಡಿ, ಕ್ರಿಮಿನಲ್ ಖೈದಿಗಳಿಗೆ ಕೊಡುತ್ತಿದ್ದ ಅತಿ ನಿಕೃಷ್ಟದ ಆಹಾರದಿಂದ ಬಿಡುಗಡೆ ಮಾಡಿದುದು, ಖೈದಿಗಳ ಜೀವನದಲ್ಲಿ ಹೊಸ ಮಾರ್ಪಾಟನ್ನು ಮಾಡಿದುದು—ಈ ಘಟನೆಗಳು ಜ್ಞಾಪಕಕ್ಕೆ ಬಂದವು.

ಜೈಲನ್ನು ಹೊಕ್ಕಮೇಲೆ ಜೈಲಿನ ಜೀವನವೇ ಭಾಗೀರಥಮ್ಮನ ಸರ್ವಸ್ವವಾಯಿತು. ಅಲ್ಲಿದ್ದ ಖೈದಿಗಳ ಪರಿಚಯ ಮಾಡಿಕೊಂಡು ಅಕ್ಕ ತಂಗಿ, ಅಣ್ಣ ತಮ್ಮಂದಿರಂತೆ ಅವರೊಡನೆ ಹೊಂದಿಕೊಂಡರು. ಒಂದು ತಿಂಗಳ ನಂತರ ಶಿವಮೊಗ್ಗದಲ್ಲಿ ಬಂಧಿತರಾದ ರತ್ನಮ್ಮ ಮಾಧವರಾವ್, ಭದ್ರಾವತಿ ಕಾರ್ಖಾನೆಯ ಕೂಲಿಗಾರರಾದ ಕೃಷ್ಣಪ್ಪನವರ ಪತ್ನಿ ಕಮಲ, ಹಾಲಪ್ಪನವರ ಪತ್ನಿ ಗೌರಮ್ಮ, ತಂಜಾವೂರು ಹೋಟಲ್ ಮಾಲೀಕರಾದ ರಾಘವೇಂದ್ರರಾವ್‌ರವರ ಪತ್ನಿ ಲಕ್ಷ್ಮೀದೇವಿ—ಇವರುಗಳನ್ನು ಸ್ಥಾನಬದ್ಧತೆಯ ಕಾನೂನಿನ ಪ್ರಕಾರ ಭಾಗೀರಥಮ್ಮನಿದ್ದ ಜೈಲಿಗೇ ಹಾಕಿದರು.

ಅಹಿಂಸಾ ಚಳವಳಿಯಲ್ಲಿ ಹೆಂಗಸರ ಪಾತ್ರ ಹೆಚ್ಚಾಗಿ ಇಡೀ ಭಾರತದಲ್ಲೇ ಚಳವಳಿ ಅತಿ ಬಿರುಸಾಗಿ ನಡೆದು, ಪ್ರತಿ ದಿನ ಸಾಯಂಕಾಲ ಒಂದು ವ್ಯಾನ್ ಹೆಣ್ಣು ಮಕ್ಕಳನ್ನು ತುಂಬಿಸಿ ಬರುತ್ತಿತ್ತು, ಬೆಳಗಾದ ಮೇಲೆ ಅವರ ಮನೆಯವರು ಬಿಡಿಸಿಕೊಂಡು ಹೋಗುತ್ತಿದ್ದರು–ಎನ್ನುತ್ತಾರೆ ಭಾಗೀರಥಮ್ಮ.

ಹೀಗೆಯೇ ಎರಡು ತಿಂಗಳು ಕಳೆದ ನಂತರ ಬೆಂಗಳೂರು ಕಂಟೋನ್‌ಮೆಂಟಿನ ರಾಮಕೃಷ್ಣಪ್ಪನವರ ಪತ್ನಿ ಪಾಪಮ್ಮ, ಮುನಿಸ್ವಾಮಿ ಗೌಂಡರ್‌ರವರ ಪತ್ನಿ ದೈವಯಾನಮ್ಮ, ಮೊದಲಿಯಾರರ ಪತ್ನಿ ನಾಗಭೂಷಣಮ್ಮ, ನರಸಪ್ಪರವರ ಪತ್ನಿ ಲಕ್ಷ್ಮೀದೇವಮ್ಮ–ಇವರನ್ನು ಆರು ತಿಂಗಳು ಬಂಧನದಲ್ಲಿಟ್ಟರು. ಇವರೆಲ್ಲರೊಂದಿಗೂ ಭಾಗೀರಥಮ್ಮ ಸ್ನೇಹ ಗಳಿಸಿಕೊಂಡರು, ಕಲಿತವರು ಕಲಿಯದವರಿಗೆ ಓದು ಬರಹ ಹೇಳಿಕೊಡುತ್ತಿದ್ದರು. ನೂಲುವುದು, ನಾಟಕವಾಡುವುದು ಜೈಲಿನಲ್ಲಿ ಇವರ ಕಾರ್ಯಕ್ರಮವಾಯಿತು. ಜೈಲಿನ ವಾತಾವರಣವನ್ನು ಆದಷ್ಟು ಸಂತಸದಿಂದ ತುಂಬಿರುವಂತೆ ಮಾಡಲು ಭಾಗೀರಥಮ್ಮ ಪ್ರಯತ್ನಿಸುತ್ತಿದ್ದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಕಠಿಣ ಸಜೆ ವಿಧಿಸಿದಾಗ ಜೈಲು ನಿಯಮದಂತೆ ಜೈಲು ವಸ್ತ್ರ ಧರಿಸಬೇಕಾಗಿತ್ತು. ಅಳತೆ ಮಾಡಿ ಊಟ ಕೊಡುತ್ತಿದ್ದರು. ತರಕಾರಿ ಹಣ್ಣುಗಳನ್ನು ಬೆಳೆಯಬೇಕಾಗಿತ್ತು. ಆದರೆ ತಿನ್ನಲು ಕೊಡುತ್ತಿರಲಿಲ್ಲ. ಕ್ರಿಮಿನಲ್ ಖೈದಿಗಳಂತೆ ಮೆಣಸಿನ ಪುಡಿ ಕುಟ್ಟುವುದು, ರಾಗಿ ಬೀಸುವುದು, ತೋಟದ ಕೆಲಸ ಇವುಗಳನ್ನು ಹೆಂಗಸರೂ ಮಾಡಬೇಕಾಗಿತ್ತು. ಇದರ ವಿರುದ್ಧ ಭಾಗೀರತಮ್ಮ ಚಳವಳಿ ಹೂಡಿದರು. ಸೆರೆಮನೆಯೊಳಗೆ ಸುಧಾರಣೆ ತಂದರು. ಬೆಳಿಗ್ಗೆ ಪ್ರಾರ್ಥನೆ, ಅನಂತರ ಚರಕಾದಲ್ಲಿ ನೂಲು ತೆಗೆಯುವುದು, ವಿದ್ಯಾಭ್ಯಾಸ, ಟೈಲರಿಂಗ್, ಬರವಣಿಗೆ, ಕವನ ಸಂಕಲನ, ಕುಶಲ ಕೈಗೆಲಸ—ಮುಂತಾದ ಉಪಯುಕ್ತ ಕಾರ್ಯಕ್ರಮ ಹಾಕಿಕೊಂಡು ಎಲ್ಲಾ ಖೈದಿಗಳಿಗೂ ಹೇಳಿಕೊಡುತ್ತಿದ್ದರು.

ಒಂದು ವಿಚಿತ್ರ ಸಂಗತಿ ಭಾಗೀರತಮ್ಮನಿಗೆ ಆಶ್ಚರ್ಯವಾಯಿತು. ಎರಡು ಮೂರು ಹೆಣ್ಣು ಮಕ್ಕಳನ್ನು ತಪ್ಪು ಮಾಡಿದ್ದಕ್ಕಾಗಿ ಮತ್ತೆ ಮತ್ತೆ ಜೈಲಿಗೆ ಹಾಕಿದ್ದರು. ಆಗ ಭಾಗೀರತಮ್ಮ ಸೂಪರಿಂಟೆಂಡೆಂಟರನ್ನು ಪ್ರಶ್ನಿಸಿದರು, "ಶಿಕ್ಷೆ ಕೊಟ್ಟು ಜೈಲಿನಿಂದ ಕಳುಹಿಸುವಾಗ ನೀವೇನು ಪಾಠ ಹೇಳಿಕೊಡುವಿರಿ? ಅವರ ಜೀವನ ಮುಂದಕ್ಕೆ ಹೇಗೆ? ಮತ್ತೆ ಇದೇ ತಪ್ಪು ಮಾಡುವರು. ಅವರ ಜೀವನೋಪಾಯಕ್ಕೆ ನೀವೇ ಒಂದು ದಾರಿ ತೋರಿಸಿಕೊಡಬೇಕು. ಜೈಲಿನಲ್ಲಿದ್ದಾಗ ವಿದ್ಯಾಭ್ಯಾಸಕ್ಕೆ, ಬುದ್ಧಿ ಜ್ಞಾನ ವಿಕಾಸಕ್ಕೆ ಅವಕಾಶ ಮಾಡಿಕೊಡಬೇಕು. ಸಮಾಜಕ್ಕೆ ಉಪಯೋಗವಾಗುವ ಕೈ ಕೆಲಸ (ಕುಶಲ) ಮಾಡಿಸಬೇಕು. ಇದರಿಂದ ಮುಂದೆ ಖೈದಿಗಳಿಗೂ ಉಪಯೋಗ" ಎಂದು ವಾದಿಸಿದರು.

ನಾನು ಹೀಗೆ ವಾದ ಮಾಡಿದ ಒಂದು ತಿಂಗಳಲ್ಲೇ ಜೈಲಿನಲ್ಲಿ ಈ ಸುಧಾರಣೆ ಜಾರಿಗೆ ಬಂತು—ಎನ್ನುತ್ತಾರೆ ಭಾಗೀರತಮ್ಮ.

ಈಗ ಜೈಲುಗಳಲ್ಲಿ ಕುಶಲ ಕೈಗೆಲಸ ನಡೆಯುತ್ತಿದ್ದರೆ, ಬಹುಶಃ ಇದಕ್ಕೆ ಅಡಿಗಲ್ಲು ಹಾಕಿದವರು ಭಾಗೀರತಮ್ಮನೇ ಇರಬಹುದು.

'ಸೆರೆಮನೆಯಲ್ಲಿದ್ದಾಗ ಒಂದು ದುರ್ಘಟನೆ ಹಾಗೂ ಕಣ್ಣಿಗೆ ಕಟ್ಟುವಂತಹ ಒಂದು ದೃಶ್ಯ ಮರೆಯಲಾರದು' ಎಂದು ಭಾಗೀರತಮ್ಮ ಈಸೂರು ಪ್ರಕರಣದ ವಿಷಯವನ್ನು ತಿಳಿಸುತ್ತಾರೆ.

ಈಸೂರು ಪ್ರಕರಣ ಇತಿಹಾಸ ಪ್ರಸಿದ್ಧವಾದುದು. ಈ ವಿಷಯದಲ್ಲಿ ೧೯೫೦ ರಲ್ಲಿ ಶಿಕಾರಿಪುರದಲ್ಲಿ ಡಾಕ್ಟರ್ ಆಗಿದ್ದ ಡಾ॥ ಮುನಿಕೆಂಪಯ್ಯನವರು ಹೀಗೆ ಹೇಳುತ್ತಾರೆ, "ಈಸೂರು ಶಿಕಾರಿಪುರದಿಂದ ಆರು ಮೈಲಿ ದೂರದಲ್ಲಿದೆ. ನಾನು ಅಲ್ಲಿಗೆ ಕೆಲಸದ ಮೇಲೆ ಆಗಾಗ್ಗೆ ಹೋಗುತ್ತಿದ್ದೆ. ಈಸೂರಿನ ಪ್ರಕರಣ ನಡೆದದ್ದು ೧೯೪೨ ರಲ್ಲಿ. ಸುಮಾರು ಹತ್ತು ವರ್ಷವಾದ ಮೇಲೂ ಎಂದರೆ ೧೯೫೦ರಲ್ಲೂ ಹೊರಗಿನವರು ಅಲ್ಲಿಗೆ ಹೋಗಲು ಹೆದರುತ್ತಿದ್ದರು. ಏಕೆಂದರೆ, ಈಸೂರಿನವರು ಚಳವಳಿಯವರೆಂದು ಹೆಸರುವಾಸಿಯಾಗಿದ್ದರು. ಒಗ್ಗಟ್ಟಿಗೆ ಪ್ರಸಿದ್ಧರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಕರ ನಿರಾಕರಣ ಚಳವಳಿ ಬಹಳ ಬಿರುಸಾಗಿ ನಡೆಯುತ್ತಿದ್ದಾಗ, ಇವರು ಭಾಗ ವಹಿಸಿದ ಪ್ರಸಿದ್ಧ ಇತಿಹಾಸಕ ಘಟನೆ ಏನೆಂದರೆ, ಪೋಲೀಸ್ ಇನ್‌ಸ್ಪೆಕ್ಟರ್ ಮತ್ತು ತಹಸೀಲ್‌ದಾರರು ಕಂದಾಯ ವಸೂಲು ಮಾಡಲು ಈಸೂರಿಗೆ ಹೋದಾಗ, ಈಸೂರಿನ ಜನರೆಲ್ಲರೂ ಒಗ್ಗಟ್ಟಾಗಿ ಚಳವಳಿ ಹೂಡಿ ಅವರಿಬ್ಬರನ್ನು ಈಸೂರಿನ ಎಲ್ಲೆಯಲ್ಲೇ ತಡೆದರು. ಪೋಲೀಸ್ ಇನ್‌ಸ್ಪೆಕ್ಟರ್ ಆದೇಶದ ಮೇಲೆ ತಹಸೀಲ್ ದಾರ್ ಒಳಕ್ಕೆ ನುಗ್ಗಿದಾಗ, ಜನರೆಲ್ಲಾ ಸೇರಿ ಇಬ್ಬರನ್ನೂ ಹಿಡಿದು ಕಟ್ಟಿ ಹಾಕಿ ಕೊಲೆ ಮಾಡಿದರು. ಅಂದಿನಿಂದ ಈಸೂರಿನ ಜನರೆಂದರೆ ಸ್ವಲ್ಪ ಕಾಲ ಎಲ್ಲರಿಗೂ ಭಯ ವಿತ್ತು—ಎನ್ನುತ್ತಾರೆ.

ಈ ಪ್ರಕರಣದ ಸಂಬಂಧದಲ್ಲಿ ಬಂಧಿತರಾದ ಈಸೂರು ಸಾಹುಕಾರರ ಪತ್ನಿ ಹಾಲಮ್ಮ, ಪಾರ್ವತಮ್ಮ ಮತ್ತು ಸಿದ್ದಮ್ಮ ಇವರಿಗೆ ಇಪ್ಪತ್ತು ವರ್ಷ ಕಠಿಣ ಶಿಕ್ಷೆ ವಿಧಿಸಿ ಭಾಗೀರತಮ್ಮ ಇದ್ದ ಸೆಂಟ್ರಲ್ ಜೈಲಿಗೆ ಹಾಕಿದರು. ಇದೇ ಈಸೂರು ಪ್ರಕರಣದಲ್ಲಿ ಐದು ಜನರನ್ನು ಗಲ್ಲಿಗೇರಿಸಲಾಯಿತು.

"ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಿದ ಈಸೂರು ವೀರರನ್ನು, ಅವರ ಧರ್ಮ ಪತ್ನಿ, ಮಾತೆಯವರನ್ನು ನಾನೆಂದಿಗೂ ಮರೆಯಲಾರೆ. ನಾನು ಜೈಲಿನಲ್ಲಿದ್ದಾಗಲೇ ಇದೊಂದು ದುರ್ಘಟನೆಯನ್ನು ನೋಡಬೇಕಾಯಿತು. ಈ ವೀರರನ್ನು ಗಲ್ಲಿಗೇರಿಸುವ ಹಿಂದಿನ ದಿನ ಅವರ ಪತ್ನಿ ಮತ್ತು ಮಾತೆಯರು ಸೆರೆಮನೆಗೇ ಬಂದು, ಸೆರೆಮನೆ ಯಲ್ಲೇ ಅವರನ್ನು ಕರಿಕಂಬಳಿಯ ಮೇಲೆ ಕೂರಿಸಿ, ದೀಪ ಹಚ್ಚಿಟ್ಟು ಹಣೆಗೆ ಅಕ್ಷತೆ ಇಟ್ಟು ಆರತಿ ಬೆಳಗಿ, "ದೇಶಕ್ಕಾಗಿ ಪ್ರಾಣ ನೀಡಿದ ವೀರ, ವೀರ ಭಾರತೀಯನಾಗಿ ಸ್ವರ್ಗವನ್ನು ಸೇರು" ಎಂದು ತುಂಬು ಹೃದಯದಿಂದ ಕಣ್ಣೀರಿನಿಂದ ಆಶೀರ್ವದಿಸಿದ ದೃಶ್ಯವನ್ನು ಜೀವನದಲ್ಲಿ ಮರೆಯುವ ಹಾಗೇ ಇಲ್ಲ" ಎನ್ನುತ್ತಾರೆ ಭಾಗೀರತಮ್ಮ.

ಬೆಳಗಿನ ಜಾವ ಈ ಐವರನ್ನು ಗಲ್ಲಿಗೇರಿಸುತ್ತಿದ್ದಾಗ ಹೊರಗಡೆ ಅವರ ಪತ್ನಿ ಯರೂ, ಮಾತೆಯರೂ ಜೈಕಾರ ಹೇಳುತ್ತಾ, ಅವರ ಪಾರ್ಥಿವ ಶರೀರಕ್ಕಾಗಿ ಕಾಯುತ್ತಿದ್ದರು.

ಇಂತಹದೊಂದು ಘಟನೆಯನ್ನು ಕಣ್ಣಾರೆ ನೋಡಿದ ಭಾಗೀರತಮ್ಮ ಆ ವೀರ ವನಿತೆಯರ ತ್ಯಾಗಬುದ್ಧಿಯನ್ನು, ವೀರ ಪುತ್ರರ ಪ್ರಾಣಾರ್ಪಣೆಯನ್ನು ಹೃದ ಯಂಗಮವಾಗಿ ವಿವರಿಸುತ್ತಾರೆ. ೧೪–೨–೪೪ರಲ್ಲಿ ಭಾಗೀರತಮ್ಮ ಸೆರೆಯಿಂದ ಬಿಡುಗಡೆ ಹೊಂದಿದರು. ಸೆರೆಗೆ ಸೇರುವಾಗ ಒಂದು ವಿಧದ ದುಃಖವಾದರೆ, ಈಗ ಅಕ್ಕ ತಂಗಿಯರಂತಿದ್ದ ಅಲ್ಲಿಯವರನ್ನು ಬಿಟ್ಟು ಬರಲು ದುಃಖವಾಯಿತು.

ಕೆಲಸವನ್ನು ಕಳೆದುಕೊಂಡು ಜೈಲಿನಿಂದ ಹೊರಬಂದ ಪತಿಯೊಂದಿಗೆ ಜೀವನ ಮಾರ್ಗವನ್ನು ಹುಡುಕಬೇಕಾಯಿತು. ಭಾಗೀರತಮ್ಮನ ತಂದೆಯವರು ಧೈರ್ಯ ಹೇಳಿ ಆಶ್ರಯ ನೀಡಿದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



"ಹೊಸ ಜೀವನವನ್ನು ಪ್ರಾರಂಭಿಸಿ ಇನ್ನು ಮೂರು ವರ್ಷಗಳಾಗಿರಲಿಲ್ಲ ಮತ್ತೆ ಬಿರುಗಾಳಿ! ೧೯೪೨ರ ಚಳವಳಿ ಪ್ರಾರಂಭ. ಮತ್ತೆ ಪತಿಯ ಬಂಧನ. ನಾನು ಮತ್ತು ಟಿ. ಸುಬ್ರಹ್ಮಣ್ಯಂರವರ ಪತ್ನಿ ಸುಶೀಲಮ್ಮ ಇನ್ನೂ ಕೆಲವರೊಂದಿಗೆ ತುಮಕೂರಿನಲ್ಲಿ ಕೋರ್ಟ್ ಪಿಕೆಟಿಂಗ್‌ನಲ್ಲಿ ಭಾಗವಹಿಸಿದೆವು. ನನ್ನ ಐದು ತಿಂಗಳ ಕೂಸನ್ನು ಬಿಟ್ಟು ಚಳವಳಿಯಲ್ಲಿ ಮುಂದಾಳಾಗಿ ನಿಲ್ಲುತ್ತಿದ್ದೆ. ಅಂತೂ ೧೯೪೭ರಲ್ಲೇ ಭಾರತ ಸ್ವತಂತ್ರವಾಗಿ ನಾವು ಸಹಿಸಿದ ಮತ್ತು ಅನುಭವಿಸಿದ ಕಷ್ಟಗಳ ಪರಿಹಾರ ವಾಯಿತೆಂದು ಹಿಗ್ಗಿದೆವು" ಎನ್ನುತ್ತಾರೆ ಭಾಗೀರತಮ್ಮ. ಇತ್ತೀಚೆಗೆ ಪತಿಯನ್ನು ಕಳೆದುಕೊಂಡ ಭಾಗೀರತಮ್ಮನವರ ವಾಸ ತುಮಕೂರಿನಲ್ಲಿ.

೨-೨-೨೨ ಭಾಗೀರತಮ್ಮನವರ ಜನನ. ೬೬ ವರ್ಷ ಸಮೀಪಿಸುತ್ತಿರುವ ಭಾಗೀರತಮ್ಮ ಇಂದಿಗೂ ಸಾಧಾರಣಾ ಕಾರ್ಯಗಳಲ್ಲಿ ಅತಿ ಉತ್ಸಾಹಿ. ೧೯೬೦ರಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಸದಸ್ಯೆಯಾಗಿ ಚುನಾಯಿತರಾದರು. ೧೯೬೨ ರಲ್ಲಿ ವಿಧಾನಸಭೆಗೆ ಚುನಾಯಿತರಾದರು. ೧೯೬೭ರಿಂದ ೮೨ರ ವರೆಗೆ ನಿರಂತರವಾಗಿ ಕರ್ನಾಟಕ ಸಮಾಜ ಕಲ್ಯಾಣ ಸಲಹಾ ಮಂಡಲಿಯ ಸದಸ್ಯರಾಗಿ ತುಮಕೂರು ಜಿಲ್ಲೆಯಲ್ಲಿ ಅನೇಕ ಮಹಿಳಾ ಸಂಘ ಸಂಸ್ಥೆಗಳನ್ನು ಅಭಿವೃದ್ಧಿ ತಂದರು.

ತುಮಕೂರಿನ ಸೋಮೇಶ್ವರ ಬಡಾವಣೆಯಲ್ಲಿರುವ "ಭಾರತೀಯ ಸಮಾಜ", "ಮಕ್ಕಳ ಪುರೋಭಿವೃದ್ಧಿ ಸಂಸ್ಥೆ" ಮತ್ತು ಬಾಪೂಜಿ ವಿದ್ಯಾ ಸಂಸ್ಥೆಗಳ ಸ್ಥಾಪಕರಾಗಿ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

೧೯೫೨ರಿಂದ ಜಿಲ್ಲಾ ಖಾದಿ ಗ್ರಾಮೋದ್ಯೋಗ ಸಹಕಾರ ಸಂಘದ ಕಾರ್ಯಕಾರಿ ಸದಸ್ಯರಾಗಿಯೂ, ೧೯೬೩ ರಿಂದ ೧೯೮೨ರ ವರೆಗೆ ಶಾರದಾ ಮಹಿಳಾ ಸಹಕಾರ ಸಂಘದ ಕಾರ್ಯಕಾರೀ ಸಮಿತಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಬಾಪೂಜಿ ವಿಕಾಸಮಂದಿರ (ಅನಾಥಾಶ್ರಮ) ಕಟ್ಟಡಕ್ಕೆ ಹಾಗೂ ಜಿಲ್ಲಾ ಭಾರತ ಸೇವಾದಳದ ಕಟ್ಟಡಕ್ಕೆ ಉಚಿತವಾಗಿ ನಿವೇಶನವನ್ನು ದಾನ ಮಾಡಿದ್ದಾರೆ. ೧೯೪೮ ರಲ್ಲಿ ಕಸ್ತೂರಿಬಾ ನಿಧಿಗಾಗಿ ಮತ್ತು ೧೯೬೨ರ ಚೀನಾ ದಾಳಿ ಸಮಯದಲ್ಲಿ ಐದು ತೊಲ ಬಂಗಾರವನ್ನು ನೀಡಿದ್ದಾರೆ.

ಸದಾ ದಾನಿಯಾಗಿಯೂ, ಸಮಾಜ ಸೇವಾ ಪ್ರವೃತ್ತಿಯೂ ಇರುವ ಭಾಗೀರತಮ್ಮನನ್ನು, ಇಂದಿನ ಪರಿಸ್ಥಿತಿಗೂ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದ ಆ ದಿನಗಳಿಗೂ ವ್ಯತ್ಯಾಸವಿದೆಯೇ ಎಂದು ಕೇಳಿದರೆ ಅವರ ಉತ್ತರ, "ಆಗಿನ ಕಾಲದ ಪರಿಸ್ಥಿತಿ ದಾಸ್ಯಭಾವನೆ ಇತ್ತು. ಮೇಲ್ಮಟ್ಟದ ಜನಕ್ಕೆ ಇಂಗ್ಲಿಷ್ ಆಕರ್ಷಣೆ, ಕೆಳ ಮಟ್ಟದವರ ಜೀವನ ದಿನದಿನಕ್ಕೆ ಕುಸಿಯುತ್ತಿತ್ತು. ಮಿಲ್ ಕೂಲಿಯವರು, ರೈತರು, ಕೈಗೆಲಸದವರಿಗೆ ಸಮಾಜದಲ್ಲಿ ಸ್ಥಾನವೇ ಇರಲಿಲ್ಲ. ಸ್ವಾತಂತ್ರ್ಯ ಬಂದ ಮೇಲೆ ಎಲ್ಲರಿಗೂ ಅನುಕೂಲವಾಗಿದೆ. ಈಗ ಸರ್ಕಾರ ಚೆನ್ನಾಗಿದೆ. ಬಹಳಷ್ಟು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಕೆಲಸವಾಗಿದೆ, ಆದರೆ ನಾವು ರಾಮರಾಜ್ಯವಾಗಬೇಕೆಂದು ಏನು ಬಯಸಿದ್ದೆವೋ ಅದಾಗದೆ ಭ್ರಷ್ಟಾಚಾರ ತಲೆಹಾಕಿದೆ. ನಾವು ತನುಮನಧನವನ್ನು ದೇಶೋದ್ಧಾರಕ್ಕಾಗಿ ಸಮರ್ಪಣೆ ಮಾಡಿದೆವು" ಎನ್ನುತ್ತಾರೆ.

ನಿಮ್ಮಂತಹ ಸಮಾಜ ಸುಧಾರಕರು ತಿದ್ದಲು ಸಾಧ್ಯವಿಲ್ಲವೇ ? ಎಂದರೆ, "ವಿದ್ಯಾವಂತರು ತಟಸ್ಥರಾಗಿದ್ದಾರೆ. ಅಜ್ಞಾನಿಗಳು ತಮ್ಮ ಆರ್ಥಿಕ ಪರಿಸ್ಥಿತಿಯಿಂದ ಯಾರನ್ನು ಬೇಕಾದರೂ ಆರಿಸುತ್ತಾರೆ. ದುಡ್ಡಿನ ಮೇಲೆ ಚುನಾವಣೆ ನಿಂತಿದೆ. ಜನಸೇವೆಯನ್ನು ಮರೆಯುತ್ತಿದ್ದಾರೆ. ಇದು ಹೋಗಬೇಕು. ಆಗಲೇ ಸಮಾಜ ಉದ್ಧಾರವಾಗುವುದು" ಎನ್ನುತ್ತಾರೆ ಭಾಗೀರತಮ್ಮ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

## ಸ್ತ್ರೀ ಶಕ್ತಿ ಜಾಗೃತಿಯ ಸಂಘಟನಾ ಚತುರೆ

## ಶಕುಂತಲಾ ಕುರ್ತಕೋಟಿ

ಧಾರವಾಡದ ಗಾಂಧಿ ಶಾಂತಿ ಪ್ರತಿಷ್ಠಾನದ ವಿಧಾಯಕ ಕಾರ್ಯಗಳಲ್ಲಿ ತಮ್ಮನ್ನು ಈಗ ಸಂಪೂರ್ಣವಾಗಿ ತೊಡಗಿಸಿಕೊಂಡ ಶಕುಂತಲಾರವರು "ಸ್ವಾತಂತ್ರ್ಯಕ್ಕಾಗಿ ಹೋರಾಡಿದ ದಿನಗಳಿಗಿಂತಲೂ, ಸ್ವಾತಂತ್ರ್ಯ ಬಂದ ನಂತರ ಹೆಚ್ಚು ಕೆಲಸವಿದೆ ಎನಿಸುತ್ತದೆ" ಎನ್ನುತ್ತಾರೆ.

"ನಮ್ಮ ಧ್ಯೇಯ ಮುಗಿಯಿತೆಂದು ಕೈಕಟ್ಟಿ ಕುಳಿತವರು ಕೆಲವರು, ಅಧಿಕಾರಕ್ಕೆ ಹೋರಾಡಿದವರು ಕೆಲವರು. ಇದೇ ದೇಶದ ಅಧೋಗತಿಗೆ ಕಾರಣವಾಗಿರುವುದು. ಸ್ವಾತಂತ್ರ್ಯ ಸಂಗ್ರಾಮದ ಪ್ರಮುಖ ಮುಖಂಡರು ಕೂಡ ಅಧಿಕಾರ ಲಾಲಸೆಗೆ ಬಲಿ ಬಿದ್ದರು" ಎಂದು ಮರುಗುತ್ತಾರೆ.

"ಅಧಿಕಾರ ವಹಿಸಬೇಕು ನಿಜ. ಆದರೆ ಎಲ್ಲರೂ ಹೋಗಬಾರದು. ಒಳ್ಳೆಯ ಜನಕ್ಕೆ ಜವಾಬ್ದಾರಿ ಕೊಟ್ಟು ಮಿಕ್ಕವರು ಲೋಕಸೇವೆಯ ಕೆಲಸ ಮಾಡಬೇಕು. ಗಾಂಧಿ ಮತ್ತು ಜಯಪ್ರಕಾಶ್ ಅಧಿಕಾರ ಸ್ಥಾನಕ್ಕೆ ಹೋಗಲಿಲ್ಲ. ಅವರ ಧ್ಯೇಯ ಜನರೊಡನೆ ಹೆಚ್ಚು ಸಂಪರ್ಕ ಬೆಳೆಸುವುದು ಮತ್ತು ರಚನಾತ್ಮಕ ಕಾರ್ಯ ಕೈಗೊಳ್ಳುವುದು .. ಕಾಂಗ್ರೆಸ್ ಎಂಬ ಹೆಸರು ಇನ್ನು ಮುಂದೆ ಬೇಡ, ಲೋಕಸೇವಾ ಸಂಘ ಮಾಡಿಕೊಳ್ಳಿ ಎಂದರು ಗಾಂಧಿ. ಇದಕ್ಕೆ ತದ್ವಿರುದ್ಧವಾಗಿ ಜನತೆಯ ಪ್ರಗತಿಯನ್ನೇ ಮುಖಂಡರು ಮರೆತುಬಿಟ್ಟರು. ಅಧಿಕಾರ ಸ್ಥಾನಕ್ಕಾಗಿ ಹೊಡೆದಾಟ ಆರಂಭವಾಯಿತು. ತ್ಯಾಗಕ್ಕೆ ಬದಲಾಗಿ ಸ್ವಾರ್ಥ ತಲೆಯೆತ್ತಿತು. ಜಾತೀಯತೆ ಮೆರೆದಾಡಿತು. ಅದರ ಫಲ ಸಮಾಜದಲ್ಲಿ ಕೋಮುವಾರು ಭಾವನೆಯ ಬೆಳವಣಿಗೆ. ಇವೆಲ್ಲ ಒಂದಾಗಿ ಅಧಿಕಾರಶಾಹಿ ಆಡಳಿತ ಬಂತು. ಈ ವ್ಯವಸ್ಥೆಯಲ್ಲಿ ಗಾಂಧಿ ನಾಮಕಾವಸ್ಥೆಯಾದರು." ಸ್ವಾತಂತ್ರ್ಯ ಕಾಲದಿಂದ ಇಂದಿನವರೆಗೂ ದೇಶದ ಏಳಿಗೆಗಾಗಿ ಅಹರ್ನಿಶಿ ಕಾರ್ಯನಿರತರಾಗಿರುವ ಶಕುಂತಲಾ ಕುರ್ತಕೋಟಿ ಹೀಗೆ ಹಳಹಳಿಸುವಾಗ ಅವರ ಭಾವನೆ ಹೇಗಿರಬೇಡ !

ಪ್ರಸ್ತುತ ಪರಿಸ್ಥಿತಿಯಿಂದ ನೊಂದ ಈ ಮಹಿಳೆ ಸ್ವಾತಂತ್ರ್ಯ ಸಂಗ್ರಾಮಕಾಲದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ನೆನಪುಗಳನ್ನು ತಮ್ಮ ನೆನಪಿನ ಉಗ್ರಾಣದಿಂದ ಒಂದೊಂದಾಗಿ ಹೊರ ತೆಗೆದು ಮಾತ ನಾಡುವಾಗ ಭಾವುಕರಾಗುತ್ತಾರೆ.

... ... ... ... ...

"ಆಗ ನಾವು ಬಹಳ ಖುಷಿಪಡುತ್ತಿದ್ದ ಕಾಲ. ಧ್ಯೇಯ ಸಾಧನೆಯಾಗುತ್ತದೆ ಎಂಬ ಭರವಸೆ ಇದ್ದ ಕಾಲ. ರಂಗನಾಥ ದಿವಾಕರ, ಅಚ್ಯುತ ಪಟವರ್ಧನ್, ಎಸ್. ಎಮ್. ಜೋಶಿ, ನಾಥ ಪೈ, ರಾಮಚಂದ್ರ ವಡವಿ, ಶಂಕರ ಕುರ್ತಕೋಟಿ ಮುಂತಾದ ದೇಶಭಕ್ತರ ಜೊತೆ ಸಾಹಸ ಕೆಲಸದಲ್ಲಿ ತೊಡಗಿ ದೇಶಕ್ಕಾಗಿ ದುಡಿದೆವೆಂಬ ಹೆಮ್ಮೆ ಪಡೆದಿದ್ದೆವು. ದೇಶದ ಉದ್ದಕ್ಕೂ ಹಬ್ಬಿದ್ದ ಸ್ವಾತಂತ್ರ್ಯದ ಕರೆ ಯಾರೊಬ್ಬರನ್ನೂ ಬಿಡದೆ ಆಕರ್ಷಿಸುತ್ತಿತ್ತು. ಏಕಮೇವ ಧ್ಯೇಯವಿದ್ದ ಆಗ ನಾವೆಲ್ಲಾ ಭೇದಭಾವ ವಿಲ್ಲದೆ ಒಗ್ಗಟ್ಟಾಗಿ ಶ್ರಮಿಸಿದೆವು. ಸಾಧನೆ ಮಾಡಿದೆವು...ಯಾವುದೇ ಸಾಧನೆ ಒಬ್ಬ ರಿಂದ ಆಗದ ಮಾತು. ಆದ್ದರಿಂದ ಆಗಲೂ ಅಷ್ಟೆ ನನ್ನದು ಸಂಘಟನೆಯ ಕೆಲಸ. ಶಾಲಾ, ಕಾಲೇಜು, ಅಂಗಡಿಗಳನ್ನು ಬಂದ್ ಮಾಡುವ ಕಾರ್ಯಕ್ರಮಕ್ಕಾಗಿ ಪುರುಷರ ಪರವಾಗಿ ನಾಥ ಪೈಯವರೂ, ಮಹಿಳೆಯರ ಪರವಾಗಿ ನಾನೂ ಮುಖಂಡತ್ವ ವಹಿಸಿ ದೆವು. ಸ್ವಾತಂತ್ರ್ಯ ಸಂಗ್ರಾಮಕ್ಕೆ ಇದೇ ನನ್ನ ಪ್ರಥಮ ಪ್ರವೇಶ.

ಆಗ ನಾನಿನ್ನೂ ವಿದ್ಯಾರ್ಥಿನಿ. ಹಿಂದೆಂದೂ ಆಗಿರದಂತಹ ಬೃಹತ್ ಮೆರ ವಣಿಗೆಯನ್ನು ನಡೆಸಿದೆವು. ಮೆರವಣಿಗೆಯ ಸುತ್ತಲೂ ಸಶಸ್ತ್ರ ಪೋಲೀಸ್ ಪಡೆಯ ವ್ಯಾನ್ ಸುತ್ತುಗಟ್ಟಿದ್ದುವು. ನನ್ನನ್ನು ಕೈಸೆರೆ ಹಿಡಿದರು. ಇದೇ ನನ್ನ ಪ್ರಥಮ ಕಾರಾಗೃಹ ವಾಸ.

ಜೈಲಿನಿಂದ ಹೊರಗೆ ಬಿಟ್ಟಕೂಡಲೇ ನಾವೆಲ್ಲಾ ಸಂಕಲ್ಪ ಮಾಡಿದ್ದು ಹೀಗೆ, "ಪೋಲೀಸರ ಕೈಗೆ ಸಿಗಬಾರದು. ಜೈಲಿಗೆ ಹೋಗದೆ ಭೂಗತರಾಗಿಯೇ ಕೆಲಸ ಮಾಡತಕ್ಕದ್ದು." ಇಲ್ಲಿಂದ ಮುಂದೆ ನಮ್ಮ ನಿರ್ದಿಷ್ಟ ಕಾರ್ಯಕ್ರಮ ಪ್ರಾರಂಭ ವಾಯಿತು. ಬುಲೆಟಿನ್ ಹಂಚುವುದು, ಭೂಗತ ಕಾರ್ಯಕರ್ತರಿಗೆ ಸಹಾಯ ಸಲ್ಲಿಸು ವುದು. ಈ ಗುಪ್ತ ಕೆಲಸ ಯಶಸ್ವಿಯಾಯಿತು.

ಸೇವಾದಳಕ್ಕೆ ಒಂದು ಸಾವಿರ ಹೆಣ್ಣು ಮಕ್ಕಳನ್ನು ಸೇರಿಸಿ ನಾನು ಮುಖ್ಯ ಸಂಘಟಕಳಾದೆ. ನಮ್ಮಲ್ಲಿ ನಿರಂತರ ಸಂಪರ್ಕವಿರಬೇಕೆಂದು ಖಾದಿ ಪ್ರಚಾರ, ಹಿಂದಿ ಮತ್ತು ಚರಕಾವರ್ಗಗಳನ್ನು ನಡೆಸುವುದು, ಅಭ್ಯಾಸ ಮಂಡಲಗಳನ್ನು ಏರ್ಪಡಿಸು ವುದು—ಹೀಗೆ ಉತ್ಸಾಹ ಕುಗ್ಗದಂತೆ ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದೆವು.

ಎರಡನೇ ಸಲ ನನ್ನನ್ನು ಬಂಧಿಸಿದುದು ಒಂದು ದೊಡ್ಡ ವ್ಯಾಪಕವಾದ ಅಕ್ರಮ ವೆನಿಸಿದ್ದ ಕೆಲಸ ಮಾಡಿದ್ದಕ್ಕಾಗಿ. ಲಾಠಿ ಕವಾಯತು ನಡೆಸಿದುದಲ್ಲದೆ, ಎಲ್ಲಾ ಕಡೆ ಯಿಂದಲೂ ಮೆರವಣಿಗೆ ಹೊರಡಿಸಿ ಟಿಳಕವಾಡಿಯಲ್ಲಿ ಸೇರಿ ಚರ್ಚಿಲ್ಲರ ಪ್ರತಿಮೆ ಯನ್ನು ಸುಟ್ಟು ಹಾಕಿದ್ದಕ್ಕಾಗಿ ನನ್ನನ್ನು ಸೆರೆಮನೆಗೆ ಸೇರಿಸಿದರು. ನನ್ನ ಜೊತೆ ಒಂದು ಸಾವಿರ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನೂ ಬಂಧಿಸಿದರು. ಜೈಲು ತುಂಬಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಹೋದದ್ದರಿಂದ ನನ್ನನ್ನು ಅಂಡರ್ ಟ್ರಯಲ್ ಕೈದಿಯೆಂದೇ ಐದೂವರೆ ತಿಂಗಳ ಕಾಲ ಕಾವಲು ಕಾಯ್ದರು. ಅತಿ ಧೈರ್ಯಶಾಲಿ ಕ್ರಾಂತಿಕಾರಿಯೆಂದು ನನ್ನನ್ನು ಕರೆದರು."

ಕುರ್ತಕೋಟಿಯವರ ಜೀವನ ಸಂಗಾತಿಯಾದುದರ ಕುರಿತು ಶಕುಂತಲಾರವರ ಹೇಳಿಕೆ ಬಲು ಸ್ವಾರಸ್ಯ. ೧೯೪೪ರಲ್ಲಿ ರಾಮಚಂದ್ರ ವಡವಿಯವರಿಂದ ಶಂಕರ ಕುರ್ತಕೋಟಿಯವರ ಪರಿಚಯವಾಯ್ತು. ಕುರ್ತಕೋಟಿಯವರು ಉಗ್ರ ಚಳವಳಿಯ ಮುಖಂಡರಾಗಿ ಭಾಗವಹಿಸುತ್ತಿದ್ದುದರಿಂದ ಅವರನ್ನು ಹಿಡಿದುಕೊಟ್ಟವರಿಗೆ ಎರಡು ಸಾವಿರ ರೂಪಾಯಿ ಬಹುಮಾನದ ಆಮಿಷವನ್ನು ಸರ್ಕಾರ ಪ್ರಕಟಿಸಿತು. ಇಂತಹ ಚಳವಳಿಗಾರ ನನ್ನ ಗಂಡನಾಗಬೇಕೆಂದು ಆಶಿಸಿ ಅವರನ್ನೇ ಮದುವೆಯಾಗಲು ಆಶಿಸಿದಾಗ, 'ನಾನು ರಕ್ಷಣೆ ಇಲ್ಲದವನು. ಒಂದು ವೇಳೆ ಸರ್ಕಾರದ ಕೈಗೆ ಸಿಕ್ಕಿಹಾಕಿಕೊಂಡರೆ ಇಪ್ಪತ್ತು ವರ್ಷ ಸೆರೆವಾಸದ ಶಿಕ್ಷೆಯಾಗಬಹುದು ಅಥವಾ ಜೀವಕ್ಕೇ ಫಾಸಿಯಾಗಬಹು'ದೆಂದು ನನಗೆ ಎಚ್ಚರಿಕೆ ಕೊಟ್ಟರು. ಇದಕ್ಕಾಗಿ ಹೆದರಿದ ಹೇಡಿಯಾಗಲಿಲ್ಲ ನಾನು. ಅವರೊಡನಿದ್ದೇ ನಾನೂ ಚಳವಳಿಯಲ್ಲಿ ಭಾಗವಹಿಸುವ ಪಣ ತೊಟ್ಟೆ. ನಮ್ಮ ವಿವಾಹದ ಸುದ್ದಿ ಪೋಲೀಸರಿಗೆ ಮತ್ತೊಂದು ರೀತಿಯಲ್ಲಿ ಆಹ್ವಾನ ಕೊಟ್ಟಿತು. ಕುರ್ತಕೋಟಿಯವರನ್ನು ಹುಡುಕುವ ವಿಶ್ವಪ್ರಯತ್ನ ನಡೆಯಿತು. ಕೊನೆಗೆ ಅವರನ್ನು ಬೆಳಗಾವಿಯಲ್ಲಿ ಹಿಡಿದು ಬಂಧಿಸಿಟ್ಟರು.

ನಾನಿದ್ದ ಪರಿಸರ, ನಮ್ಮ ತಂದೆ ತಾಯಿಯ ದೇಶಭಕ್ತಿ, ಸ್ವಾತಂತ್ರ್ಯ ಗಳಿಕೆಯ ಸಾಧನೆಯಲ್ಲಿ ನನ್ನ ಉತ್ಸಾಹ ಇದೆಲ್ಲಾ ಅವರಿಗೆ ತಿಳಿದಿತ್ತು. ಮಿಲಿಟರಿಯಲ್ಲಿದ್ದ ನನ್ನ ತಂದೆಗೆ ಸ್ವಾತಂತ್ರ್ಯ ಚಳವಳಿಯಲ್ಲಿ ಅಭಿಮಾನವಿತ್ತು. ನನ್ನ ತಾಯಿ ಕಾಂಗ್ರೆಸ್ ಸದಸ್ಯರು, ಕಟ್ಟಾ ದೇಶಾಭಿಮಾನಿ, ನಮ್ಮ ಮನೆಗೆ ಬರುತ್ತಿದ್ದ ಕೇಸರಿ, ಹರಿಜನ ಪತ್ರಿಕೆಗಳನ್ನು ಓದಿ ನನ್ನ ತಾಯಿಯವರು ಪ್ರತಿ ಸಂಜೆ ಈ ವಿಷಯಗಳ ಬಗೆಗೆ ಚರ್ಚೆ ನಡೆಸುತ್ತಿದ್ದರು. ಈ ಚರ್ಚೆಯಲ್ಲಿ ನನಗೆ ಆಸಕ್ತಿ ಬೆಳೆಯಿತು. ನನ್ನ ತಾಯಿ ಲೋಕಮಾನ್ಯ ತಿಲಕರ ಅಭಿಮಾನಿ. ಟಿಳಕವಾಡಿಯಲ್ಲಿ ನಡೆಯುತ್ತಿದ್ದ ಬಾಲಿಕಾ ಆದರ್ಶ ವಿದ್ಯಾಲಯಕ್ಕೆ ನನ್ನನ್ನು ಕಳುಹಿಸಿ ಸ್ವಾತಂತ್ರ್ಯ ಚಳವಳಿಯ ವಿಷಯ ತಿಳಿಯಲು ಉತ್ತೇಜಿಸಿದರು. ಈ ವಾತಾವರಣದಲ್ಲಿ ಬೆಳೆದ ನನಗೆ ನಮ್ಮ ದೇಶದ ಸ್ವಾತಂತ್ರ್ಯ ಆಂದೋಲನದಲ್ಲಿ ಅತ್ಯಂತ ಉತ್ಸಾಹ ಹುಟ್ಟಿತು.

ರಮಾಬಾಯಿ ಯಾಳಗಿಯೂ ೧೯೪೦ರಲ್ಲಿ ಸತ್ಯಾಗ್ರಹ ಮಾಡುವವರಿದ್ದರು. ವಿದ್ಯಾರ್ಥಿನಿಯಾಗಿದ್ದ ನಾನು ಅದರ ಒಕ್ಕೂಟದಲ್ಲಿ ಭಾಗಿಯಾದೆ. ರಮಾಬಾಯಿಯ ಧೈರ್ಯ, ದೇಶಾಭಿಮಾನ ನನಗೆ ಎಲ್ಲಿಲ್ಲದ ಸ್ಫೂರ್ತಿ ಕೊಟ್ಟಿತು. ಅವರ ಮುಖಂಡತ್ವ ಕಂಡ ಆ ದಿನದಿಂದಲೇ ದೇಶಕ್ಕಾಗಿ ನನ್ನನ್ನೇ ಅರ್ಪಿಸಿಕೊಂಡೆ.

೧೯೪೨ರಲ್ಲಿ ಬೆಳಗಾವಿಯ ವಾತಾವರಣ ಬಹು ತಪ್ತವಾಗಿತ್ತು. ಇಲ್ಲಿ ನಡೆಯಬೇಕಾದ ಕ್ರಾಂತಿಯ ಮೊದಲ ಆದಿತ್ಯವಾರ ಅರವಿಂದ ಯಾಳಗಿಯವರು ನಡೆಸಿದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಸತ್ಯಾಗ್ರಹದಲ್ಲಿ ನಾನೂ ಭಾಗಿಯಾದೆ. ನಾನು ಪೂರ್ಣವಾಗಿ ಆಂದೋಲನಕ್ಕೆ ಧುಮುಕತಕ್ಕದ್ದೆಂದು ಅಂದಿನ ದಿನವೇ ಸಂಕಲ್ಪ ಮಾಡಿಬಿಟ್ಟೆ. ಮರುದಿನ ಸೋಮವಾರದಿಂದ ನನ್ನ ಗೆಳತಿಯರೊಂದಿಗೆ ಪಿಕೆಟಿಂಗ್ ಕಾರ್ಯಕ್ರಮ ಪ್ರಾರಂಭವಾಯಿತು. ಹೆಣ್ಣು ಮಕ್ಕಳ ಸೇವಾದಳದ ಸಂಘಟನಾ ನಾಯಕಿಯಾದೆ. ಶಾಲಾ, ಕಾಲೇಜು ಅಂಗಡಿಗಳ ಬಂದ್‌ಗಾಗಿ ನಾನು ಮತ್ತು ನಾಥ ಪೈ ನಡೆಸಿದ ಮೆರವಣಿಗೆ ನನ್ನನ್ನು ಪ್ರಸಿದ್ಧಿಗೆ ತಂದಿತು. ಸ್ವಾತಂತ್ರ್ಯ ಚಳವಳಿಯ ಕಾರ್ಯಕ್ರಮದ ಬಗ್ಗೆ ಅಂಜಿಕೆ, ಅಳುಕು ಇಲ್ಲದಂತಾಗಿ ಧೈರ್ಯ ಹುಟ್ಟಿತು. ಇಂತಹ ಹೋರಾಟಗಾರ್ತಿಯನ್ನು ಮೆಚ್ಚಿ ಮದುವೆಯಾಗಲು ಶಂಕರ ಕುರ್ತಕೋಟಿ ಮನಸಾರೆ ಒಪ್ಪಿದರು. ಹೀಗೆ ದೇಶ ಕಾರ್ಯದಿಂದ ಪ್ರೇರಿತರಾದ ನಮ್ಮ ಸಂಬಂಧ ವಿವಾಹದಿಂದ ಗಟ್ಟಿಯಾಗಿ ಸಾರ್ವಜನಿಕ ಕ್ಷೇತ್ರದಲ್ಲಿ ದುಡಿಯಲು ನೆರವಾಯಿತು.

ನಾವು ವಾಸವಾಗಿದ್ದ ಮನೆಯ ಬೀದಿಯಲ್ಲೇ ದೇಶಭಕ್ತಿಗೆ ಹೆಸರಾದ ಯಾಳಗಿ ಮನೆತನವಿತ್ತು. ಅಲ್ಲಿಗೆ ಜವಾಹರಲಾಲ ನೆಹರು, ಗಂಗಾಧರರಾವ್ ದೇಶಪಾಂಡೆ ಮುಂತಾದವರು ಬರುತ್ತಿದ್ದರು.

... ... ... ... ... ...

ಶಕುಂತಲಾ ಬ್ರಾಹ್ಮಣ ಮನೆತನದ ಹುಡುಗಿ. ಬಾಲ್ಯದಿಂದಲೇ ಸಮರ್ಥ ಹೆಣ್ಣು. ಈಗ ಮಾತ್ರವಲ್ಲ, ಹಿಂದಿನಿಂದ ಆಕೆ ಸಮಾಜಸೇವಾ ಕಾರ್ಯವನ್ನು ಮಾಡುತ್ತಿದ್ದಾಳೆ. ಸ್ತ್ರೀಯರಿಗೆ ಆರ್ಥಿಕ ಸ್ವಾವಲಂಬನೆ ಬೇಕು. ಅನಂತರ ಸೇವಾ ಕಾರ್ಯ ಮಾಡಬಹುದು. ಹೊಟ್ಟೆ ತುಂಬಿದರೆ ತಾನೇ ಸೇವಾಕೆಲಸ, ಶಕುಂತಲಾ ಈ ದಿಶೆಯಲ್ಲಿ ಜಾಣೆ. ಗಾಂಧೀ ತತ್ವವನ್ನು ಪಾಲಿಸುತ್ತಾ, ಸರಳತೆಯಿಂದ ಜೀವನ ನಡೆಸುತ್ತಾ, ಸೇವಾ ಕಾರ್ಯವನ್ನು ಮಾಡುತ್ತಾ ಬಂದಿದ್ದಾರೆ. ಅವಳ ಪತಿ ಶಂಕರ ಕುರ್ತಕೋಟಿಯೂ ಇಂದಿಗೂ ಗಾಂಧೀ ಭಕ್ತ.

"ಗಾಂಧೀಜಿ, ವಿನೋಬಾರವರ ಸಲಹೆಯನ್ನು ಅನುಸರಿಸಿ ನಾನೂ ಮತ್ತು ನನ್ನ ಯಜಮಾನರೂ ಸೋಷಿಯಲಿಸ್ಟ್ ಪಕ್ಷಕ್ಕೆ ಸೇರಿದೆವು. ಸ್ವಾತಂತ್ರ್ಯ ಬಂದ ನಂತರ ಈ ಪಕ್ಷ ಕಾಂಗ್ರೆಸ್ಸಿಗೆ ಸವಾಲಾಗಿ ನಿಂತಿತು. ಆಡಳಿತದ ವಿರೋಧ ಪಕ್ಷಕ್ಕೆ ಈಗ ಮರ್ಯಾದೆ ಇದೆ. ಆದರೆ ಆಗ ನಮ್ಮನ್ನು ಬಹಿಷ್ಕೃತರಂತೆ ನೋಡುತ್ತಿದ್ದರು. ಕಾಂಗ್ರೆಸ್‌ನಲ್ಲಿದ್ದವರಿಗೆ ಸ್ಥಾನ. ರೊಕ್ಕ ಖರ್ಚು ಮಾಡಿದವರಿಗೆ ಸ್ಥಾನ. ಸ್ವಾತಂತ್ರ್ಯಕ್ಕೆ ಮೊದಲು ನಾವು ಹೋರಾಡಿದ ಕಾಲ ಎಷ್ಟು ಚೆನ್ನಾಗಿತ್ತು ಎಂಬ ಯೋಚನೆ ಮನಸ್ಸನ್ನು ಬಾಧಿಸಿತು. ಜೀವನದ ಗುರಿಸಾಧನೆಯಾಗಬೇಕು. ಸ್ವಾತಂತ್ರ್ಯಕ್ಕೆ ಮೊದಲು ನಮ್ಮಲ್ಲಿದ್ದ ಧ್ಯೇಯ ಮುಂದುವರಿಯಬೇಕು. ಇದಕ್ಕೆ ಏನು ಮಾಡಬಹುದೆಂದು ಯೋಚಿಸಿ ಕೊನೆಗೆ ಒಂದು ನಿರ್ಣಯಕ್ಕೆ ಬಂದು ಗಾಂಧೀಜಿಗೆ ಶರಣು ಹೋದೆವು. ಆಡಳಿತ ವರ್ಗಕ್ಕೆ ತಿಲಾಂಜಲಿ ಕೊಟ್ಟು ಸರ್ವೋದಯಕ್ಕೆ ಬಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಬಿಟ್ಟೆವು. ಇದರಿಂದ ಕೆಟ್ಟದಾಗಲಿಲ್ಲ. ನಾವು ಮಾಡಿದ್ದು ಸರಿ ಎನ್ನಿಸಿತು. ಸರ್ವೋದಯದಲ್ಲಿ ನಮ್ಮ ಮಾರ್ಗದರ್ಶಿ ರಂಗನಾಥ ರಾಮಚಂದ್ರ ದಿವಾಕರರು."

ಶಕುಂತಲಾರವರ ಈ ಸುದೀರ್ಘ ಹಾಗೂ ಮನಬಿಚ್ಚಿ ಮಾತಾಡಿದ ವಿಷಯವನ್ನು ಕೇಳಿದರೆ, ದೇಶಸೇವೆಗಾಗಿ ಅವರ ಚಿಂತನೆ ಎಷ್ಟರ ಮಟ್ಟಿಗಿದೆ ಎನ್ನುವುದು ಅರ್ಥವಾಗುತ್ತದೆ. "ಸೇವೆ" ಎನ್ನುವುದು ಎಲ್ಲಿದೆ ಎಂಬ ಸತ್ಯಾನ್ವೇಷಣೆ ನಡೆಸಿದ್ದಾರೆ.

"ಗಾಂಧೀ ತತ್ವಕ್ಕೆ ಇಲ್ಲಿ ಅವಕಾಶವಿದೆ. ಖಾದಿ ಧರಿಸಿದ ಮಾತ್ರಕ್ಕೆ ನಾವು ಗಾಂಧಿ ತತ್ವವನ್ನು ಅನುಸರಿಸುತ್ತೇವೆ ಎನ್ನುವುದು ತಪ್ಪು ಭಾವನೆ. ವೈಚಾರಿಕ ದೃಷ್ಟಿಬೇಕು. ನನ್ನ ಯಜಮಾನರದೂ ಅದೇ ವಿಚಾರ ಸರಣಿ. ಅವರೂ ಸಹ ಗಾಂಧಿ ತತ್ವದ ಜೀವಕಳೆಯನ್ನು ಸರ್ವೋದಯದಲ್ಲಿ ಕಂಡುಕೊಂಡರು. ನನ್ನ ಯಜಮಾನರು ಖಾದಿ ಸಂಸ್ಥೆಯನ್ನು ನಡೆಸುತ್ತಿದ್ದಾರೆ. ನಾನು ಗಾಂಧಿ ಶಾಂತಿ ಪ್ರತಿಷ್ಠಾನದಲ್ಲಿದ್ದು ಜನಮನಕ್ಕೆ ಗಾಂಧಿಯನ್ನು ತಲುಪಿಸುವ ಕೆಲಸ ಮಾಡುತ್ತಿದ್ದೇನೆ. ಜನರಲ್ಲಿ ಆತ್ಮವಿಶ್ವಾಸ ಹುಟ್ಟಿಸಬೇಕು. ವ್ಯಕ್ತಿ ತನ್ನ ಜೀವನಕ್ಕಾಗಿ ತೆಗೆದುಕೊಳ್ಳುವ ಕೆಲಸಕ್ಕೆ ಗೌರವ ಕೊಡಬೇಕು……ನಾವು ಹಳ್ಳಿಗೆ ಹೋಗಿ ಸಮಿತಿಯನ್ನು ರಚಿಸುತ್ತೇವೆ. ಆಹಾರ, ಆರೋಗ್ಯ, ಸ್ವಚ್ಛತಾ ಬಗ್ಗೆ ಒಂದು ದಿನ ಹೋಗಿ ಸುಮ್ಮನೆ ಮಾತಾಡಿ ಬಂದರೆ ಸಾಲದು, ನಾವು ತೆಗೆದುಕೊಂಡ ಕೆಲಸವನ್ನು ಹಳ್ಳಿಯ ಸಮಿತಿಯೇ ನೆರವೇರಿಸುವಂತೆ ಜವಾಬ್ದಾರಿ ವಹಿಸುವುದು ಮುಖ್ಯ. ಈ ಕೆಲಸವನ್ನು ಹೆಣ್ಣುಮಕ್ಕಳೇ ತೆಗೆದುಕೊಳ್ಳಬೇಕು. ಇದಕ್ಕೆ ಡಿಗ್ರಿ ಓದಬೇಕಾಗಿಲ್ಲ" ಎನ್ನುತ್ತಾರೆ.

ಧಾರವಾಡದಲ್ಲಿ ಸ್ತ್ರೀ ಶಕ್ತಿ ಸಂಘಟನೆಯನ್ನೂ, ಜಾಗೃತಿಯ ಕಾರ್ಯಕ್ರಮಗಳನ್ನೂ ನಡೆಸುತ್ತಿರುವ ಶಕುಂತಲಾರವರು ಆ ಕುರಿತು "ಜಯಪ್ರಭಾ" ಎಂಬ ಮಕ್ಕಳಕೂಟವನ್ನು ನಡೆಸುತ್ತಿದ್ದೇನೆ. ಚಿಕ್ಕ ಮಕ್ಕಳದ ಸಂಸಾರ ಬೆಳೆಯಬೇಕು. ಆದ್ದರಿಂದ ಮಕ್ಕಳಕೂಟ ಮಾಡುವ ಅವಶ್ಯಕತೆ ಇದೆ. ಯೂತ್ ವಿಂಗ್ ಬಂದಿದೆ. ಯುವಕ ಯುವತಿಯರು ಈ ಸಂಘಕ್ಕೆ ಸೇರಿದ್ದಾರೆ. ಇವರು ಹಳ್ಳಿ ಗ್ರಾಮಗಳ ಯೋಜನೆ ತೆಗೆದುಕೊಂಡು ಗ್ರಾಮಗಳಿಗೆ ಹೋಗಿ ಅಲ್ಲಿ ಬೇಕಾಗಿರುವ ಸೇವಾ ಕಾರ್ಯವನ್ನು ಮಾಡುವರು. ಒಂದು ಮಹಿಳಾ ಸಂಘವಿದೆ. ಈ ಸಂಘದಲ್ಲಿ ಪುರುಷರೂ ಇದ್ದಾರೆ. ಉದ್ಯೋಗಕ್ಕೆ ಹೋಗುವ ಸ್ತ್ರೀ ಪುರುಷರೂ ಸೇರಿರುವುದರಿಂದ ಇವರು ನಿಯಮಿತ ವೇಳೆಯಲ್ಲಿ ಬಂದು ಸೇವೆಯನ್ನೂ ಸಲಹೆಯನ್ನೂ ಕೊಟ್ಟು ಸಹಕರಿಸುವರು. ಜಯಪ್ರಭಾದ ಕೆಲಸ ಕಾರ್ಯಗಳನ್ನು ಮಹಿಳಾ ಮಂಡಲಕ್ಕೂ ಮುಟ್ಟಿಸಿದ್ದೇವೆ. ಇದಿಷ್ಟು ವ್ಯವಸ್ಥೆಯನ್ನು ನಡೆಸಲು ಸೇವಾಬುದ್ಧಿಯ ಜನರು ತಾವಾಗಿ ಬಂದು ಫಂಡ್ ಕೊಡುತ್ತಾರೆ. ನಮ್ಮ ಎಲ್ಲಾ ಕಾರ್ಯಕ್ರಮಗಳಿಗೆ ಶಾಲಾ ಶಿಕ್ಷಕರನ್ನು ಸೇರಿಸಿಕೊಂಡು ನಡೆಸುತ್ತೇವೆ. ನಮ್ಮ ಪ್ರತಿನಿಧಿಗಳು ಕಾಲೇಜಿನಲ್ಲಿರುವವರೂ ಇದ್ದಾರೆ. ಆದ್ದರಿಂದ ಜ್ಞಾನ, ಶಿಸ್ತಿನ ಮಟ್ಟದಲ್ಲೂ ಉತ್ತಮ ಸ್ಥಿತಿ ಇರುವಂತೆ ನೋಡಿಕೊಳ್ಳಲು ಸಾಧ್ಯವಾಗಿದೆ. ಶಿಬಿರಗಳನ್ನು ಏರ್ಪಡಿಸಿ ಮಕ್ಕಳೂ ಮತ್ತು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಯುವ ಜನರೂ ಜೀವನ-ಅನುಭವ ಪಡೆಯಲು ಅವಕಾಶ ಕೊಡ್ತೇವೆ. ವೀರ ಘೋಷಣೆಯ ಧ್ಯೇಯ ವಚನಗಳನ್ನು ರಚಿಸಿ ಹೇಳಿಸುತ್ತೇವೆ. ಶಿಬಿರಗಳು ಸ್ಫೂರ್ತಿ ಕೊಡುವಂತೆಯೂ, ಉಪಯೋಗವಾಗಿಯೂ ಇರುತ್ತವೆ. ವಿಚಾರ ಸಂಕಿರಣ ವಿಭಾಗ ದಲ್ಲಿ ಚರ್ಚಾ ಕೂಟಗಳನ್ನು ಏರ್ಪಡಿಸುತ್ತೇವೆ"—ಎಂದು ತಾವು ನಡೆಸುತ್ತಿರುವ ಮಕ್ಕಳಕೂಟ, ಯೂತ್‌ವಿಂಗ್, ಮಹಿಳಾ ಸಂಘದ ವಿಷಯಗಳನ್ನು ನಿರೂಪಿಸಿದರು.

ಇಷ್ಟೆಲ್ಲಾ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾದರೆ ಮತ್ತು ಏರ್ಪಾಡು ಮಾಡಬೇಕಾದರೆ ಸಮಿತಿಗಳನ್ನು ಮಾಡಬೇಕು, ಸಭೆ ಸೇರಿಸಬೇಕು ಅಲ್ಲವೇ ? ಇಂತಹ ಸಭೆ ಸಮಿತಿಗಳು ನಡೆಯುತ್ತವೆಯೇ ? ಎನ್ನಲು "ಹೌದು. ನಾವು ಆಗಾಗ್ಗೆ ಒಟ್ಟಾಗಿ ಭೇಟಿಯಾಗುತ್ತಿರುತ್ತೇವೆ. ಪ್ರತಿ ಭಾನುವಾರ ಸಾಯಂಕಾಲ ಐದರಿಂದ ಆರರವರೆಗೆ ಸಭೆ ಸೇರುತ್ತೇವೆ. ಈ ಸಭೆಯಲ್ಲಿ ಕಾರ್ಯಗಳ ತೀರ್ಮಾನ ಮಾಡು ವುದರ ಜೊತೆಗೆ ಮಕ್ಕಳಿಂದ ಚರ್ಚಾ ಕೂಟಗಳೂ, ಸಾಂಸ್ಕೃತಿಕ ಕಾರ್ಯಕ್ರಮಗಳೂ ನಡೆಯುತ್ತವೆ. ಕೆಲವು ಭಾನುವಾರಗಳು ಹಳ್ಳಿಗೆ ಹೋಗುವ ಕೆಲಸ ಮಾಡುತ್ತೇವೆ. ನಮ್ಮ ಈ ಸೇವಾ ಕೆಲಸಗಳು ಯಶಸ್ವಿಯಾಗಲು ಕಾರಣವೇನೆಂದರೆ, ನಮ್ಮಲ್ಲಿ ರಾಜಕೀಯದಲ್ಲಿ ಆಸಕ್ತಿ ಇರುವವರು ಯಾರೂ ಇಲ್ಲ. ಸ್ವಾರ್ಥಕ್ಕೆ ಸ್ಥಳವಿಲ್ಲ" ಎನ್ನುತ್ತಾರೆ.

"ಸರ್ವೋದಯ ತನ್ನ ತತ್ವದಿಂದ ಆಡಳಿತ ವರ್ಗವನ್ನು ಪ್ರಭಾವಗೊಳಿಸ ಲಾಗುವುದಿಲ್ಲವೇ ?" ಪ್ರಶ್ನೆಗೆ ಥಟ್ಟನೆ ಬಂದ ಉತ್ತರ :

"ಕಾಂಗ್ರೆಸ್ ಎನ್ನುವ ಪದ ಹೊರಟು ಹೋಗಬೇಕು. ಏಕೆಂದರೆ ಕಾಂಗ್ರೆಸ್ ಹಿಂದಿನಿಂದ ಬಂದ ಗಂಟು ಎಂದು ಎಲ್ಲರೂ ತಿಳಿದಿದ್ದಾರೆ. ಕಾಂಗ್ರೆಸ್ ಇಷ್ಟು ಬೆಳೆದು ಬೃಹತ್ತಾದುದೂ ಎಷ್ಟು ಸರಿ ? ಆಚಾರ್ಯ ಕುಲವೆಂದಾಗಬೇಕಾಗಿತ್ತು. ವಿನೋಬಾ ಒಬ್ಬ ಸಂತರು, ಜ್ಞಾನಿಗಳು, ಕ್ರಿಯಾತ್ಮಕ ಶಕ್ತಿಯುಳ್ಳವರು. ಜೀವ ತುಂಬುವ ಸಂಸ್ಥೆಯಾಗಬೇಕು ಆಡಳಿತ ವರ್ಗ ಎಂದು ಹಂಬಲಿಸಿದ ವಿನೋಬಾರವರ ಹೆಸರನ್ನಿಡದೆ ಜನತೆಯ ಸೇವೆ ಮಾಡುವ ಸಂಸ್ಥೆಗೆ ಮತ್ತಾವ ಹೆಸರು ಒಪ್ಪುತ್ತದೆ ? ಆದ್ದರಿಂದಲೇ ಆಚಾರ್ಯಕುಲವಾಗಬೇಕಾಗಿತ್ತು. ಆಗ ಆಡಳಿತ ವರ್ಗದ ಧೋರಣೆಯೇ ಬೇರೆಯಾಗುತ್ತಿತ್ತು."

ತಾಯಿ ಮಹಾದೇವಿಯವರ ಆಶ್ರಮ ವಲ್ಲಭ ನಿಕೇತನದಲ್ಲಿ ೧೯೮೭ರ ಫೆಬ್ರವರಿ ೨೧, ೨೨, ೨೩ರಂದು ನಡೆದ "ಅಖಿಲ ಕರ್ನಾಟಕ ಸ್ತ್ರೀ ಶಕ್ತಿ ಜಾಗೃತಿ" ಸಮ್ಮೇಳನ ದಲ್ಲಿ ಪಾಲ್ಗೊಂಡ ಶಕುಂತಲಾ ಹಲವು ವಿಚಾರಗಳನ್ನು ಸ್ಪಷ್ಟಪಡಿಸಿದರು. "ಸ್ತ್ರೀಯರು ಜಾಗೃತರಾಗಿ ಸಮಸ್ಯೆಗಳನ್ನು ಕೈಗೆ ತೆಗೆದುಕೊಳ್ಳದಿದ್ದರೆ ಪ್ರಗತಿ ಸಾಧ್ಯ ವಿಲ್ಲ. ಸ್ತ್ರೀಯು ಪ್ರೇಮ, ವಾತ್ಸಲ್ಯದ ಪ್ರತೀಕ. ತ್ಯಾಗ ಮತ್ತು ತಾಳ್ಮೆಯ ಪ್ರತಿ ರೂಪ. ಆದರೆ ಆಧುನಿಕತೆಯ ಹೆಸರಿನಲ್ಲಿ ಸ್ತ್ರೀಯು ಕೆಳವಟ್ಟಕ್ಕಿಳಿಯುತ್ತಿದ್ದಾಳೆ. ತನ್ನ ಆತ್ಮಶಕ್ತಿಯ ಅರಿವನ್ನು ಕಳೆದುಕೊಳ್ಳುತ್ತಿದ್ದಾಳೆ. ಮಹಾತ್ಮಾ ಗಾಂಧಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಯುವರು ಮಹಿಳೆಯರಿಗೆ ನೀಡಿದ ಸಂದೇಶಗಳನ್ನು ಆಚಾರ್ಯ ವಿನೋಬಾಜಿಯವರು ಮತ್ತಷ್ಟು ವಿಶ್ಲೇಷಿಸಿ ಸ್ತ್ರೀಶಕ್ತಿ ವಿಕಾಸಕ್ಕೆ ಅಮೂಲ್ಯ ಸಲಹೆ ನೀಡಿದ್ದಾರೆ. ಇವುಗಳನ್ನು ಕಾರ್ಯರೂಪಕ್ಕೆ ತರುವುದೇ ನಮ್ಮ ಕರ್ತವ್ಯ. ಮಹಿಳೆಯರು ತಮ್ಮ ಹಕ್ಕುಗಳನ್ನು ಪಡೆಯಲಿಕ್ಕೆ ಜಾಗೃತರಾಗಬೇಕು" ಎಂಬುದು ಅವರ ಸ್ಪಷ್ಟ ನಿಲುವು.

ನಮ್ಮ ಸಮಾಜ ಪುರುಷ ಪ್ರಧಾನವಾದದ್ದು. ಹೆಣ್ಣು ಭೋಗದ ವಸ್ತುವೆಂಬ ಭಾವನೆ ಇದೆ. ಸಮ್ಮೇಳನದ ನೆಪದಲ್ಲಿ ಹೆಂಗಸರು ಮನೆ ಬಿಟ್ಟು ಹೋಗುವುದನ್ನು ಕಲಿತಿದ್ದಾರೆ ಎನ್ನುತ್ತಾರೆ. "ಹೆಣ್ಣು ತನ್ನ ಬಗ್ಗೆ ತಾನೇ ಹೀಗೆ ತಿಳಿದಿದ್ದಾಳೆ. ಹೆಣ್ಣೆಂದರೆ ಷೋಕೇಸ್‌ನಲ್ಲಿಡುವ ವಸ್ತು ಎಂಬ ಧೋರಣೆ ಇದೆ ಸತ್ಯಾಗ್ರಹ ಕಾಲದಲ್ಲಿ ಮುಂದೆ ಬಂದವಳು ಹೆಣ್ಣೇ ಅಲ್ಲವೇ ? ಅಹಿಂಸಾ ಸತ್ಯಾಗ್ರಹದ ಪಾಠವನ್ನು ಕಸ್ತೂರಬಾ ಕಲಿಸಿಕೊಟ್ಟು ಮಹಿಳಾ ವರ್ಗಕ್ಕೆ ಮಾದರಿಯಾಗಿದ್ದಾರೆ. ಹೆಣ್ಣಿಗೆ ಶುದ್ಧ ಚಾರಿತ್ರ್ಯವಿರಬೇಕು. ಗೃಹಿಣಿಯಾಗಿರಬೇಕು. ಸಮಾಜಕ್ಕೆ, ದೇಶಕ್ಕೆ, ವಿಶ್ವಕ್ಕೆ ತಾಯಿಯಂತಿರಬೇಕು. ಕರುಣಾಮೂರ್ತಿಯಾಗಿರಬೇಕು. ಶಾಂತಿ ಸೌಹಾರ್ದತೆ ಹೆಣ್ಣಿಂದಲೇ ಸಾಧ್ಯ. ಪ್ರತಿ ಹೆಣ್ಣು ಇದಿಷ್ಟು ತಿಳಿದರೆ ಸಾಕು. ಇದಕ್ಕಾಗಿ ಬೇರೇನೂ ಮಾಡಬೇಕಾಗಿಲ್ಲ. ಅವರವರ ಮನೆಯಲ್ಲೇ ಸುಧಾರಣೆಗಳು ಬೇಕಾಗಬಹುದು. ಈಗ ನಾವು ಒಟ್ಟಿಗೆ ಸೇರಿರುವಾಗ ರಚನಾತ್ಮಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳೋಣ. ಕೂಡಿ ಚರ್ಚಿಸೋಣ. ಕೂಡಿ ಊಟ ಮಾಡೋಣ, ಅದರಲ್ಲಿ ಶಕ್ತಿ ಇದೆ" ಎಂದು ನುಡಿದರು.

ನಿಜವಾದ ಸೇವಾಕರ್ತರನ್ನು ಗುರ್ತಿಸದಿರುವ ಕಾಲ ಇದು. ಇಂತಹ ಕಾಲದಲ್ಲೂ ಸೇವಾನಿಷ್ಠೆಯಿಂದ ಆತ್ಮತೃಪ್ತಿಗಾಗಿ ಧ್ಯೇಯ ಸಾಧನೆಗಾಗಿ ದುಡಿಯುವ ಶಕುಂತಲಾ ಕುರ್ತಕೋಟಿಯವರು, ಸ್ವಾತಂತ್ರ್ಯ ಸಂಗ್ರಾಮ ಕಾಲದಲ್ಲಿ, ಇಂತಹ ದೇಶಸೇವಾನಿರತರನ್ನು ಆರಿಸಿಕೊಂಡು ಉತ್ತೇಜಿಸುತ್ತಿದ್ದ ಆಂದೋಲನ ಪರ್ವ ಕಾಲದಲ್ಲಿ ಯುವಶಕ್ತಿಯಿಂದ ಸ್ಫೂರ್ತಿಯಿಂದ ಇನ್ನೆಷ್ಟು ಸೇವಾ ಕಾರ್ಯ ಮಾಡಿರಬಹುದಲ್ಲವೇ !

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

## ಕನ್ನಡ ಕುಲನಾರಿ

## ಸುಬ್ಬಮ್ಮ ಜೋಯಿಸ್

"ನಮ್ಮ ಯಜಮಾನರಿಗೆ ಸಂಪಾದನೆಯಿಲ್ಲ. ಮನೆಯಲ್ಲಿ ದಿನದಿನದ ಅಕ್ಕಿ, ಬೇಳೆ, ಸಕ್ಕರೆಗೆ ಏನು ಮಾಡಬೇಕೆಂಬ ಚಿಂತೆಯಿಂದ ಪ್ರತಿದಿನ ನಾನು ಹಣ್ಣಾಗುತ್ತಿದ್ದೇನೆ. ಸಂಸಾರಕ್ಕೆ ನೆರವಾಗದೇ ದೇಶಸೇವೆ ಮಾಡುತ್ತೇನೆನ್ನುತ್ತಾರೆ. ಗಂಡಸರೆಲ್ಲಾ ಜೈಲಿಗೆ ಹೋದರೆ ಹೆಂಡತಿ ಮಕ್ಕಳ ಪಾಡೇನು ? ಈ ಕುರಿತು ನಮ್ಮವರಾಗಲೀ, ನೀವಾಗಲಿ ಚಿಂತೆ ಮಾಡಿದಂತೆ ತೋರಲಿಲ್ಲ."

ದಿನನಿತ್ಯದ ಈ ಗೋಳನ್ನು ವೇದನೆಯಿಂದ ಹೇಳಿಕೊಂಡಾಗ 'ಕರ್ನಾಟಕದ ಗಾಂಧಿ' ಎನಿಸಿಕೊಂಡ ತಗಡೂರು ಶ್ರೀ ರಾಮಚಂದ್ರರಾಯರು ಕ್ಷಣಕಾಲ ಸ್ತಬ್ಧರಾರಾದರು. ಕಾರಣ ಆ ಗೃಹಿಣಿಯ ಮಾತಿನಲ್ಲಿ ಎಳ್ಳಷ್ಟೂ ಉತ್ಪ್ರೇಕ್ಷೆ ಇರಲಿಲ್ಲ. ಆದರೆ ಅವರು ವಿಚಲಿತರಾಗಲಿಲ್ಲ. ಇದೇ ಅಂಶವನ್ನು ಮೂಲವಾಗಿಟ್ಟುಕೊಂಡು ವ್ಯಕ್ತಿ ಮತ್ತು ಸಮಾಜದ ಮಧ್ಯೆ ಇರುವ ನಂಟನ್ನು ಅರ್ಥವಾಗುವಂತೆ ಆ ಗೃಹಿಣಿಗೆ ಹೇಳುತ್ತಾರೆ.

"ನೀನು ಸಮಾಜದ ಒಂದು ಭಾಗ. ಈ ಸಮಾಜದಿಂದ ನೀನು ಹೊರಗಿರಲು ಸಾಧ್ಯವಿಲ್ಲ, ಅಂತೆಯೇ ನಿನ್ನ ಬಡತನಕ್ಕೆ ಕಾರಣ ಈ ಸಮಾಜ. ಸಮಾಜದ ಬಡತನ ಹೋದರೆ ನಿನ್ನ ಬಡತನ ನೀಗಿದಂತೆಯೇ. ನಿನ್ನ ಹಾಗೇ ಇರುವ ದೇಶದ ಜನತೆಗಾಗಿ ನೀನು ಶ್ರಮಿಸಿದರೆ ನೀನೂ ಅದರಲ್ಲಿ ಒಂದು ಅಂಶವಲ್ಲವೆ? ಈ ಸಮಸ್ಯೆಯನ್ನು ಬೇರೆಬೇರೆಯಾಗಿ ಪರಿಹರಿಸಲು ಸಾಧ್ಯವಿಲ್ಲ. ಇದು ಸಮಗ್ರ ದೇಶದ ಸಮಸ್ಯೆ."

ರಾಮಚಂದ್ರರಾಯರ ಮಾತುಗಳು ಆ ಗೃಹಿಣಿಯ ಮನಸ್ಸಿನ ಮೇಲೆ ತೀವ್ರ ಪರಿಣಾಮ ಬೀರಿದವು. ದೇಶಕಾರ್ಯದಲ್ಲಿ ತೊಡಗಿಸಿಕೊಂಡ ಪತಿಯನ್ನೂ, ಅವರ ಮಿತ್ರರನ್ನೂ ವೃಥಾ ದೂಷಿಸಿದೆನಲ್ಲಾ ಎಂದು ನೊಂದರು. ಆದರೆ ಅಷ್ಟಕ್ಕೆ ನಿಲ್ಲದೇ ತಾನೂ ಪತಿಯೊಂದಿಗೆ ಅಂದು ನಡೆಯುತ್ತಿರುವ ಸ್ವಾತಂತ್ರ್ಯಾಂದೋಲನದಲ್ಲಿ ಧುಮುಕುವ ತೀರ್ಮಾನ ಕೈಗೊಂಡಳು. ಹಾಗೂ ಕೊನೆಯ ತನಕ ದೇಶಕಾರ್ಯದಲ್ಲಿ ವಿಶ್ರಮಿಸಲಿಲ್ಲ. ಆಕೆಯೇ ಮೈಸೂರಿನ ಜ್ಯೋತಿಷ್ಕ ಕುಟುಂಬದ ಗೃಹಿಣಿ ಎಂ. ಎನ್. ಜೋಯಿಸ್‌ರವರ ಪತ್ನಿ ಶ್ರೀಮತಿ ಸುಬ್ಬಮ್ಮ ಜೋಯಿಸ್.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಸ್ವಾತಂತ್ರ್ಯ ಆಂದೋಲನದ ಶಿಸ್ತಿನ ಸಿಪಾಯಿ ಶ್ರೀ ಎಂ. ಎನ್. ಜೋಯಿಸ್‌ರವರ ಮನೆಯಲ್ಲಿ ತಿಂಗಳ ಕೊನೆಯ ಭಾನುವಾರ ರಾಷ್ಟ್ರೀಯ ಚಿಂತನಗೆ ಸ್ಫೂರ್ತಿ ನೀಡುವ ರಾಷ್ಟ್ರೀಯ ಧ್ವಜವಂದನೆ ಕಾರ್ಯಕ್ರಮ ಒಂದು ಪರಿಪಾಠ. ಗಾಂಧಿ ಅನುಯಾಯಿಗಳಿಗೆ ಅಂದು ಜೈಲಿನ ಆತಿಥ್ಯ ತಪ್ಪಿದ್ದಲ್ಲ. ಹೀಗೆ ಜೋಯಿಸ್‌ರವರ ಜೈಲುವಾಸದ ಸಂದರ್ಭದಲ್ಲಿ ಸುಬ್ಬಮ್ಮ ಈ ಕಾರ್ಯಕ್ರಮದ ಜವಾಬ್ದಾರಿಯನ್ನು ತಾವು ಹೊತ್ತು ಅದನ್ನು ಯಶಸ್ವಿಯಾಗಿ ನೆರವೇರಿಸಹತ್ತಿದರು. ಇದು ಮಾತ್ರವಲ್ಲದೆ ಹರಿಜನೋದ್ಧಾರ ಹಾಗೂ ಸಹಾಯ ಸಂಘದ ಚಟುವಟಿಕೆಗಳಲ್ಲೂ ಸುಬ್ಬಮ್ಮ ಪತಿಗೆ ಸರಿದೊರೆಯಾಗಿ ಕೆಲಸ ಮಾಡಿ ರಾಷ್ಟ್ರ ನಾಯಕರಾದ ಗಾಂಧಿ, ನೆಹರೂ ಮೊದಲಾದವರಿಂದ ಪ್ರಶಂಸಿಸಲ್ಪಟ್ಟರು.

ಮೈಸೂರಿನಲ್ಲಿ ಸುಬ್ಬರಾಯನ ಕೆರೆ ಜನ ಸೇರುವ ಕೇಂದ್ರವಾಗಿತ್ತು. ನೀರಿಲ್ಲದ ಹಳ್ಳದ ಆ ಜಾಗಕ್ಕೆ ಈಗಲೂ ಅದೇ ಹೆಸರು. ಇಲ್ಲಿ ಸುಬ್ಬಮ್ಮ ಪ್ರಪ್ರಥಮವಾಗಿ ಭಾಷಣ ಮಾಡುವ ವಿಷಯ ತಿಳಿದಾಗ ಒಂದು ಹೆಣ್ಣು ಹೆಂಗಸು ಭಾಷಣ ಮಾಡುತ್ತಾಳಂತೆ ಎಂದು ಲೇವಡಿ ಮಾಡಿ ತಮಾಷೆ ನೋಡಲು ಬಂದ ಜನರೆಲ್ಲ ಈಕೆಯ ಅಸ್ಖಲಿತ ಅಷ್ಟೇ ತೀಕ್ಷ್ಣ ವಿಚಾರಧಾರೆಯ ಮಾತುಗಳಿಂದ ನಿಬ್ಬೆರಗಾದರು. ಟೀಕೆ ಮಾಡಲು ಬಂದವರೆಲ್ಲ ಈಕೆಯೇ ತಮ್ಮ ನಾಯಕಿ ಎಂದು ನಿರ್ಧರಿಸಿದರು.

ಸಿರ್ಸಿ, ಸಿದ್ದಾಪುರ, ಅಂಕೋಲ ಮೊದಲಾದ ಉತ್ತರ ಕರ್ನಾಟಕದ ಪ್ರಮುಖ ಕೇಂದ್ರಗಳಲ್ಲಿ ಕರ ನಿರಾಕರಣ ಚಳವಳಿ ಪರಾಕಾಷ್ಠೆಯನ್ನು ಮುಟ್ಟಿದ ಸಮಯ. ಈ ಸತ್ಯಾಗ್ರಹದಲ್ಲಿ ಸಾವಿರಕ್ಕೂ ಹೆಚ್ಚು ಕುಟುಂಬಗಳು ಪಾಲ್ಗೊಂಡಿದ್ದು, ಪ್ರತಿಯೊಂದು ಮನೆಯಿಂದಲೂ ಗಂಡಸರು ಹೆಂಗಸರು ಎಂಬ ಭೇದವಿಲ್ಲದೆ ಸತ್ಯಾಗ್ರಹಿಗಳಾಗಿದ್ದರು. ಸರಕಾರಕ್ಕೆ ತಲೆನೋವಾದ ಈ ಪರಿಸ್ಥಿತಿಯಲ್ಲಿ ಪೋಲೀಸರು ಒಂದೊಂದು ಮನೆಯಿಂದ ತಲಾ ಒಬ್ಬೊಬ್ಬ ಸತ್ಯಾಗ್ರಹಿಯನ್ನು ಜೈಲಿಗೆ ತಳ್ಳುತ್ತಿದ್ದರು. ಈ ಪರಿಸ್ಥಿತಿಯಲ್ಲಿ ಸಂಸಾರ ಜೀವನ ದುಸ್ತರವಾಗಿತ್ತು. ಇಂತಹ ಸಂದರ್ಭದಲ್ಲಿ ಶ್ರೀಮತಿ ಜೋಯಿಸ್ ಸತ್ಯಾಗ್ರಹಿಗಳ ಕುಟುಂಬಕ್ಕೆ ಅಕ್ಕಿ ಹಂಚುವ ಕಾಯಕವನ್ನು ಕೈಗೊಂಡರು. ಅಷ್ಟು ಮಾತ್ರವಲ್ಲದೆ ಸೆರೆಮನೆ ಸೇರಿದವರ ಮುಟ್ಟುಗೋಲು ಹಾಕಿದ ಆಸ್ತಿಯನ್ನು ಸರಕಾರ ಹರಾಜು ಹಾಕುತ್ತಿತ್ತು. ಹೀಗೆ ಮುಟ್ಟುಗೋಲು ಹಾಕಿದ ಆಸ್ತಿಯನ್ನು ಯಾರೂ ಹರಾಜಿನಲ್ಲಿ ಕೊಂಡುಕೊಳ್ಳದಂತೆ ತಡೆಯುವ ಉದ್ದೇಶ ಹೊಂದಿದ ಸುಬ್ಬಮ್ಮ ಹಲವಾರು ಮಹಿಳೆಯರನ್ನು ಸಂಘಟಿಸಿ ಹರಾಜಿನಲ್ಲಿ ಆಸ್ತಿ ಕೊಂಡವರ ಮನೆಯ ಮುಂದೆ ಸತ್ಯಾಗ್ರಹ ಹೂಡಿ ಅದರಲ್ಲಿ ಯಶಸ್ವಿಯೂ ಆಗಿದ್ದಾರೆ.

ತಿಗಣೆ ಸತ್ಯಾಗ್ರಹ ಸುಬ್ಬಮ್ಮನವರ ಧೀಶಕ್ತಿಗೆ ಉಜ್ವಲ ಉದಾಹರಣೆ. ಬನವಾಸಿ ಹೊಳೆಯನ್ನು ದಾಟಿದರೆ ಮೈಸೂರಿನ ಆಚೆಗೆ ತಿಗಣೆಯೆಂಬ ಗ್ರಾಮವಿದೆ. ತಿಗಣೆಯ ಪಟೇಲ ಗದಿಗೆಪ್ಪಗೌಡ ಸರ್ಕಾರ ಹರಾಜು ಹಾಕಿದ್ದ ಎಮ್ಮೆಯನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಕೊಂಡಿದ್ದ. ಸತ್ಯಾಗ್ರಹಿಗಳಿಗೆ ಆಸ್ಪದ ಕೊಡದೆ ಮುನ್ನೆಚ್ಚರಿಕೆ ವಹಿಸಿ ಗೌಡ ತನ್ನ ಮನೆಯ ಮುಂದೆ ಮುಳ್ಳು, ಗಾಜು, ಕೊಚ್ಚೆ ಹಾಕಿ ರೊಚ್ಚೆ ಮಾಡಿದ. ಇಡೀ ದಿನ ಮಳೆ ಸೋನೆ ಸುರಿಯುತ್ತಿತ್ತು. ಮೈಯೆಲ್ಲಾ ತೊಪ್ಪೆಯಾದರೂ ಅಚಲರಾಗಿಯೇ ಸುಬ್ಬಮ್ಮ ಮತ್ತು ಸಂಗಡಿಗರು ಕುಳಿತಿದ್ದರು. ನಾಲ್ಕನೇ ದಿನ ರಾತ್ರಿ ಅಧಮನಾದ ಗೌಡ ಹೆಂಡ ಕುಡಕರನ್ನು ಈ ಹೆಂಗಸರ ಮೇಲೆ ಬಿಟ್ಟ. ಮಾನರಕ್ಷಣೆಯ ಈ ಹೋರಾಟದಲ್ಲಿ ಸುಬ್ಬಮ್ಮನ ಕೈಗೆ ಚಾಕು ತಿವಿದು ಕೈಸೀಳಿತು. ರಕ್ತದ ಕೋಡಿ ಹರಿಯಿತು. ವೈದ್ಯರಿಂದ ಚಿಕಿತ್ಸೆ ನಡೆಯಬೇಕಾಯಿತು. ಇಷ್ಟೆಲ್ಲಾ ಅವಾಂತರ ಪೋಲೀಸ್‌ಗೆ ವರದಿಯಾಗಿ ಸುಬ್ಬಮ್ಮನನ್ನು ದಸ್ತಗಿರಿ ಮಾಡಿದರು.

ಅವಮಾನಕರವಾದ ಮತ್ತು ಹಿಂಸಾಕೃತ್ಯ ಸಹಿಸಬೇಕಾದ ಈ ಚಳವಳಿಯನ್ನು ಮುಂದುವರಿಸಲು ಹಿಂಜರಿದ ಹೆಂಗಸರಲ್ಲಿ ಉತ್ಸಾಹ ತುಂಬಿ ಪುನಃ ಎರಡನೆಯ ಬಾರಿ ಸುಬ್ಬಮ್ಮನೇ ಉಗ್ರ ಪ್ರತಿಭಟನೆ ಹೂಡಿದರು. ಸುಬ್ಬಮ್ಮನ ಜೊತೆಯಲ್ಲಿದ್ದ ಹೆಂಗಸೊಬ್ಬಳ ಮಗುವಿಗಾಗಿ ಗದಿಗೆಪ್ಪನ ಹೆಂಡತಿ ಮರುಗಿದಳು. ಹೆಂಗರುಳು ತುಡಿತಗೊಂಡು ಒಂದು ಬಟ್ಟಲು ಹಾಲು ಮಗುವಿಗೆ ಕೊಡುತ್ತಿದ್ದುದನ್ನು ಕಂಡು ತನ್ನ ಗಂಡ ತಡೆದಾಗ, ಆಕ್ರೋಶಗೊಂಡ ಗದಿಗೆಪ್ಪನ ಹೆಂಡತಿ ಆರ್ಭಟಿಸಿದಳು, "ಎಮ್ಮೆಯನ್ನು ಹಿಂತಿರುಗಿಸುವಿರೋ ಅಥವಾ ನಾನೂ ಈ ಹೆಂಗಸರ ಜೊತೆ ಕುಳಿತು ಸತ್ಯಾಗ್ರಹ ನಡೆಸಲೋ" ಎಂದಾಗ ಗದಿಗೆಪ್ಪ ಎಮ್ಮೆಯನ್ನೇ ಬಿಟ್ಟುಕೊಟ್ಟ. ಸುಬ್ಬಮ್ಮನನ್ನು ಶಿರ್ಸಿ ಲಾಕಪ್ಪಿನಲ್ಲಿಟ್ಟು ಅಲ್ಲಿಂದ ಹಿಂಡಲಿಗೆ ಜೈಲಿಗೆ ವರ್ಗಾಯಿಸಿದಾಗ, ಕಡಿಮೆ ದರ್ಜೆಯ ಖೈದಿಗೆ ಕನ್ನಡಕವನ್ನೂ, ಚಿನ್ನದ ಮಾಂಗಲ್ಯವನ್ನು ಹೊಂದುವ ಹಕ್ಕಿಲ್ಲವೆಂದು ಸುಬ್ಬಮ್ಮನ ಮಾಂಗಲ್ಯವನ್ನು, ಕನ್ನಡಕವನ್ನೂ ಕಿತ್ತುಕೊಂಡರು. ಅದೇ ಜೈಲಿನಲ್ಲಿದ್ದ ಕಮಲಾದೇವಿ ಚಟ್ಟೋಪಾಧ್ಯಾಯ, ಲೀಲಾವತಿ ಮುನ್ಷಿ ಇವರುಗಳು ಹಿಂದೂ ನಾರಿಯ ಪವಿತ್ರ ಮಾಂಗಲ್ಯದ ಮಹತ್ವವನ್ನು ತಿಳಿಸಿ, ಮಂಗಳಸೂತ್ರವನ್ನು ತೆಗೆಸಿಕೊಟ್ಟರು. ಜೈಲರು ಕನ್ನಡಕವನ್ನು ಕೊಡಲಿಲ್ಲ. ಕಣ್ಣಿನ ದೃಷ್ಟಿದೋಷ ಹೆಚ್ಚಿ ಸುಬ್ಬಮ್ಮ ತಮ್ಮ ಜೀವನಪರ್ಯಂತ ಕಷ್ಟಪಡಬೇಕಾಯಿತು. ಚಳವಳಿಯ ಬಿಸಿಯಲ್ಲಿ ಗಂಡ ಹೆಂಡತಿ ಸಾಕಷ್ಟು ಬೆಂದರು.

ಸಂಪ್ರದಾಯಸ್ಥರಾದ ಜೋಯಿಸರ ತಂದೆ ತಾಯಿಗಳು ಜೈಲಿನಿಂದ ಬಂದ ಮಗನನ್ನು, ಸೊಸೆಯನ್ನೂ ಮನೆಗೆ ಸೇರಿಸದೆ ಬಹಿಷ್ಕರಿಸಿದರು. ಆದರೆ, ತಾಯಿ ಕರುಳು, ಹಬ್ಬ ಹರಿದಿನಗಳಲ್ಲಿ ಇಬ್ಬರನ್ನೂ ಮನೆಗೆ ಕರೆಯಿಸಿಕೊಂಡು ಹೊರಬಾಗಿಲಲ್ಲಿ ಕೂರಿಸಿ, ಎಲೆಹಾಕಿ, ಒಬ್ಬಟ್ಟು ಪಾಯಸ ಬಡಿಸಿ ಕಣ್ಣೀರಿಡುತ್ತಿದ್ದರು.

ಮನೆಯಿಂದ, ನೆಂಟರಿಂದ ದೂರಾದ ಶ್ರೀಮತಿ ಜೋಯಿಸರಿಗೆ ಒಂದು ಆಶ್ರಮದ ಆಶ್ರಯ ಸಿಕ್ಕಿತು. ಶಿರ್ಸಿ, ಸಿದ್ಧಾಪುರ, ಅಂಕೋಲಗಳ ಉಗ್ರ ಚಳವಳಿಯಲ್ಲಿ ಭಾಗವಹಿಸಿದ ಪುರುಷ ಸ್ತ್ರೀಯರನ್ನು ಲೆಕ್ಕಿಸದೆ ಬಂಧಿಸಿ ಸಾವಿರ ಸಂಖ್ಯೆಯಲ್ಲಿ ಬಂದೀಖಾನೆಗೆ ಕಳುಹಿಸುತ್ತಿದ್ದರು. ಅನಾಥರಾದ ಅಂತಹವರ ಮಕ್ಕಳಿಗೆ ಆಶ್ರಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಕೊಡಲು ಕೆಲವು ಕರುಣಾಳುಗಳ ಕೃಪೆಯಿಂದ ಶಿವಮೊಗ್ಗಾದಲ್ಲಿ ಬಾಲಿಕಾಶ್ರಮ ಸ್ಥಾಪನೆಯಾಗಿ, ಶ್ರೀಮತಿ ಗೌರಮ್ಮ ವೆಂಕಟರಾಮಯ್ಯ ಅನಾಥ ಮಕ್ಕಳನ್ನು ಈ ಆಶ್ರಮಕ್ಕೆ ಸೇರಿಸಿಕೊಂಡು, ಮಕ್ಕಳಿಗೆ ಮಾತೆಯಾಗಿ ಸೇವೆ ಸಲ್ಲಿಸುತ್ತಿದ್ದರು. ಈ ಆಶ್ರಮಕ್ಕೆ ಬಂದ ಶ್ರೀಮತಿ ಜೋಯಿಸರಿಗೆ ಅಲ್ಲಿಯ ಮಕ್ಕಳಲ್ಲಿ ಒಲವು ತುಂಬಿ ಬಂದು, ಸುಮಾರು ಒಂದೂವರೆ ವರ್ಷಕಾಲ ಆಶ್ರಮದಲ್ಲಿದ್ದರು.

ಮಗನ ಮತ್ತು ಸೊಸೆಯ ದುಃಸ್ಥಿತಿಯನ್ನು ಕಂಡು ಗೋಳಿಡುತ್ತಿದ್ದ ತಾಯಿಗೆ ಜ್ಞಾನೋದಯವಾದಂತಾಗಿ ತಾನು ಮಾಡುತ್ತಿರುವುದು ತಪ್ಪು, ಮಗ ಸೊಸೆ ಸರಿಯಾದ ಮಾರ್ಗದಲ್ಲೇ ಹೋಗುತ್ತಿದ್ದಾರೆ ಎಂದೆನಿಸಿ, ಒಂದು ದಿನ ಇದ್ದಕ್ಕಿದ್ದಂತೆ ಸುಬ್ಬಾರಾಯನ ಕೆರೆಯಲ್ಲಿ ಸೇರಿದ ಜನಸಂದಣಿಯನ್ನುದ್ದೇಶಿಸಿ "ಪ್ರತಿ ಮನೆಯಿಂದಲೂ ಒಬ್ಬೊಬ್ಬ ಮಗನನ್ನಾದರೂ ದೇಶಸೇವೆಗಾಗಿ ಕಳುಹಿಸಿಕೊಟ್ಟು ತಾಯಂದಿರು ತ್ಯಾಗಮಯಿಗಳಾಗಬೇಕು. ಅಗತ್ಯದ ಹೋರಾಟದ ಸಹಕಾರವೇ ಹೆಣ್ಣಿನ ಇಂದಿನ ಕರ್ತವ್ಯವಾಗಿದೆ" ಎಂದು ಕೂಗಿ ಹೇಳಿದರು.

ಎಂದೂ ಮಾತಾಡಲು ಬಾರದ ಈ ಮಹಿಳೆಯ ಮಹತ್ತರ ಭಾಷಣ ಒಂದು ಪವಾಡವನ್ನೇ ಉಂಟು ಮಾಡಿತು. ಆಕೆಯ ಮಾತಿನ ಅರ್ಥ ಮನೆ ಮನೆಯ ಹೆಂಗಸರ ಮನ ಹೊಕ್ಕು ಮೈಸೂರಿನ ಪ್ರತಿ ಮನೆಯೂ ಸ್ವಾತಂತ್ರ್ಯ ಸಂಗ್ರಾಮಕ್ಕೆ ಬೆಂಬಲ ನೀಡುವಂತಾಯಿತು. ಜೋಯಿಸರನ್ನು ನಿಷ್ಠೂರ ಮಾಡುತ್ತಿದ್ದ ನೆಂಟರಿಷ್ಟರೇ ಸತ್ಯಾಗ್ರಹಿಗಳ ಪಾತ್ರ ವಹಿಸಿದರು.

೧೯೩೮ರ ಪ್ರಸಿದ್ಧ ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಭಾಗವಹಿಸಲು ಸುಬ್ಬಮ್ಮನೂ ಹೋಗಿದ್ದರು. ನಿರ್ಬಂಧಾಜ್ಞೆಗಳನ್ನು ಮೀರಿ ಹಟತೊಟ್ಟ ಮಹಿಳೆಯರು ಛಲದಿಂದ ಸಾಧಿಸಿದ ಶಿವಪುರದ ಧ್ವಜಾರೋಹಣದ ಉತ್ಸಾಹದ ಪರಿಣಾಮದಿಂದ ಹಿಂತಿರುಗಿದ ಸುಬ್ಬಮ್ಮನವರು ಅದೇ ತಿಂಗಳು ಜನವರಿ ೨೬ರಂದು ಮೈಸೂರಿನ ಸುಬ್ಬಾರಾಯನ ಕೆರೆಯಲ್ಲಿ ಧ್ವಜಾರೋಹಣ ಮಾಡಿ ಪ್ರತಿಬಂಧವನ್ನು ಉಲ್ಲಂಘಿಸಿ ಮತ್ತೆ ಜೈಲು ಬಂಧಿಯಾದರು. ಜೈಲಿನಿಂದ ಹೊರಬಂದ ಕೂಡಲೇ ಶಿವಪುರ ಮಹಾ ಅಧಿವೇಶನದ ಪ್ರಚಾರಕ್ಕಾಗಿ ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಸಂಚರಿಸಿ ಜನರನ್ನು ಗುಂಪುಗೂಡಿಸಿ ಹುರಿದುಂಬಿಸಿದರು. ಮಿರ್ಲೆ, ಸಾಲಿಗ್ರಾಮ, ಕೆ. ಆರ್. ನಗರ, ಹುಣಸೂರು, ಹೊಸ ಅಗ್ರಹಾರ, ಗುಂಡ್ಲುಪೇಟೆ, ನಂಜನಗೂಡು ಮುಂತಾದ ಸ್ಥಳಗಳಲ್ಲಿ ಸಂಚರಿಸಿ ಸುಪ್ತಶಕ್ತಿಯೆಲ್ಲಾ ದೇಶಭಕ್ತಿಗಾಗಿ ಉದ್ರೇಕಗೊಳ್ಳುವಂತೆ ಭಾಷಣ ಮಾಡಿ ಜನರಲ್ಲಿ ಹೊಸ ಚೈತನ್ಯ ತಂದರು. ಶಿವಪುರದ ಕಾಂಗ್ರೆಸ್ ಅಧಿವೇಶನಕ್ಕೆ ಸಾಕಷ್ಟು ಜನಶಕ್ತಿ ಗಳಿಸಿದರು. ಅಧಿವೇಶನದಲ್ಲಿ ಸ್ವಯಂಸೇವಿಕೆಯಾಗಿ ಸೇವೆ ಸಲ್ಲಿಸಿದರು.

ಬ್ರಿಟಿಷ್ ಸರ್ಕಾರ ಮೈಸೂರಿನ ಟೌನ್‌ಹಾಲಿನಲ್ಲಿ ಸತ್ಯಾಗ್ರಹ ದಮನಕ್ಕೆ ಆಜ್ಞೆ ಹೊರಡಿಸಿತ್ತು. ಸತ್ಯಾಗ್ರಹಿಗಳನ್ನು ಹಿಡಿದು ಶಿಕ್ಷಿಸುತ್ತಿದ್ದರು. ಶ್ರೀಮತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಜೋಯಿಸ್ ಈ ಪ್ರತಿಬಂಧಕವನ್ನು ಮೀರಿ ಕಾರ್ಯಕ್ರಮ ಕೈಗೊಂಡದ್ದಕ್ಕಾಗಿ ಪುನಃ ಜೈಲುವಾಸ ಅನುಭವಿಸಿದರು.

೧೯೪೦ರಲ್ಲಿ ಕಾಂಗ್ರೆಸ್ ಚುನಾವಣಾ ಸನ್ನಾಹವಾದಾಗ ಮುಹಮ್ಮದೀಯರ ಜನ ಸಂಖ್ಯೆಯನ್ನು ಗಮನಿಸಿದ ಶ್ರೀಮತಿ ಸುಬ್ಬಮ್ಮನವರು ಅವರೊಡನೆ ಮಾತಾಡಿ ವಿಚಾರ ವಿನಿಮಯ ನಡೆಸಿ ಮುಹಮ್ಮದೀಯರ ಮನವೊಲಿಸಿ ಕಾಂಗ್ರೆಸ್ಸಿಗೆ ಹೆಚ್ಚು ಮತ ಬರುವಂತೆ ಮಾಡಿದರು.

ಬಿರುಸಾಗಿ ನಡೆದ ೧೯೪೨ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಮತ್ತು ೧೯೪೭ರ ಮೈಸೂರು ಚಲೋ ಸತ್ಯಾಗ್ರಹದಲ್ಲಿ ಪಾತ್ರವಹಿಸಿ ಭೂಗತ ಚಳವಳಿಯನ್ನು ನಡೆಸಿ ಸತ್ಯಾಗ್ರಹಕ್ಕೆ ಪೂರ್ಣ ಚೇತನ ನೀಡಿದರು. ಭೂಗತವಾಗೇ ಇದ್ದು ಸರ್ಕಾರದ ಕಣ್ಣಿಗೆ ಬೀಳದಂತೆ ಎಚ್ಚರಿಕೆ ವಹಿಸಿದ್ದರೂ ಸುಬ್ಬಮ್ಮನವರ ಬಿರುಸಾದ ಚಟುವಟಿಕೆಗಳು ಇವರನ್ನು ಪತ್ತೆ ಮಾಡುವಂತೆ ಪೋಲೀಸರನ್ನು ಪ್ರೇರೇಪಿಸಿದ್ದರಿಂದ ಪುನಃ ಬಂಧನಕ್ಕೊಳಗಾದರು.

ಹಸುಗೂಸನ್ನು ಕಟ್ಟಿಕೊಂಡೇ ಕೆಲವು ವೇಳೆ ಜೈಲಿನಲ್ಲಿರಬೇಕಾಯಿತು. ಮಗುವನ್ನು ಮನೆಯಲ್ಲಿ ಬಿಟ್ಟು ಹೋಗಲು ಅತ್ತೆ ಮತ್ತು ಅತ್ತಿಗೆಯರು ಒಪ್ಪದೆ ತಾಯಿಯ ಬಳಿಯೇ ಕೂಸು ಬೆಳೆಯಬೇಕೆಂದು ಒತ್ತಾಯಿಸಿದ್ದರು. ಪತಿ ಸುತರನ್ನು ಲೆಕ್ಕಿಸದೆ ಸ್ವಾತಂತ್ರ್ಯ ಸಂಗ್ರಾಮಕ್ಕೆ ತಮ್ಮ ಸೇವೆಯನ್ನು ಮೀಸಲಾಗಿಟ್ಟ ಸುಬ್ಬಮ್ಮನವರ ಜೀವನ ದೇಶಭಕ್ತಿಯ ಒಂದು ನಿದರ್ಶನ.

ದೇಶಕ್ಕೆ ಸ್ವಾತಂತ್ರ್ಯ ಬಂತು ಮಹಾತ್ಮ ಹುತಾತ್ಮರಾದರು. ದೇಶಸೇವೆ ಈಗ ಧರ್ಮ ಕಾರ್ಯಕ್ಕೆ ದಾರಿಯಾಯಿತು. ಭಾರತ, ಭಾಗವತ, ರಾಮಾಯಣ ಇತ್ಯಾದಿ ಪವಿತ್ರ ಗ್ರಂಥಗಳ ಪಠಣ, ವಾರದ ಹುಡುಗರಿಗೆ ಅನ್ನ ಹಾಕುವುದು ಹೀಗೆ ಅನ್ನ ದಾನ ಧರ್ಮಕಾರ್ಯಗಳೇ ನಿತ್ಯಗಟ್ಟಳೆಯಾಯಿತು. ಸ್ವಾತಂತ್ರ್ಯ ಸಂಗ್ರಾಮದ ಕೆಚ್ಚೆದೆಯ ಗಂಡು ಧೈರ್ಯ ಮೃದು ಮಧುರವಾಯಿತು, ಕಾನೂನು ಭಂಗ ಪ್ರತಿಭಟನಾ ಚಳವಳಿ ಮತ್ತು ಉಗ್ರ ಸತ್ಯಾಗ್ರಹ ಚಟುವಟಿಕೆಗಳು ಈಗ ಸಾತ್ವಿಕ ಕಾರ್ಯಗಳ ಕಡೆಗೆ ಹರಿದವು. ಜೈಲು ವಾಸ ಕಷ್ಟ ಪರಂಪರೆ ಕೊನೆಯಾಗಿ ಶಾಂತಿಸಮೃದ್ಧಿಯ ಬಾಳ್ವೆ ಆರಂಭವಾಯಿತು. ಸಂಗ್ರಾಮದಲ್ಲಿ ಸಿಂಹಿಣಿಯಂತೆ ಘರ್ಜಿಸಿದ ಸದ್ಗೃಹಿಣಿ ಸ್ವಾತಂತ್ರ್ಯಾನಂತರ ನಡೆಯಬೇಕಾದ ರಚನಾತ್ಮಕ ಕಾರ್ಯಗಳಲ್ಲಿ ತಮ್ಮನ್ನೂ ತೊಡಗಿಸಿಕೊಂಡರು.

ಅಂದು ಫೆಬ್ರವರಿ ೧೨, ಪಶ್ಚಿಮ ವಾಹಿನಿಯಲ್ಲಿ ಸರ್ವೋದಯ ಸಮ್ಮೇಳನ. ಗಾಂಧಿ ಚಿತಾಭಸ್ಮವನ್ನು ಕಾವೇರಿ ಜಲದಲ್ಲಿ ಸೇರಿಸಿದ ನೆನಪಿಗಾಗಿ ಮೆರವಣಿಗೆ ಹೊರಡುವ ವಾರ್ಷಿಕ ವಿಧಿ. ಮೇಳದ ಆಚಾರ್ಯ ಪೀಠಕ್ಕೆ ಸರ್ದಾರರನ್ನು ಆಯ್ಕೆ ಮಾಡಿದ್ದರು. ಸ್ವಾತಂತ್ರ್ಯ ಹೋರಾಟಗಾರ ಶ್ರೀ ಎಂ. ಎನ್. ಜೋಯಿಸರ ಪತ್ನಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಸುಬ್ಬಮ್ಮನಿಗೆ ತುಂಬಾ ಖಾಯಿಲೆಯೆಂದು ಸುದ್ದಿ ತಿಳಿದ ಕೂಡಲೇ ಸರ್ದಾರರು ಅವರ ಮನೆಗೆ ಬಂದರು.

"ಸಾವಿನ ಅಂಚಿನಲ್ಲಿದ್ದ ಆ ಮಹಿಳೆ ತನ್ನ ಒಂದು ಕಾಲದ ಸೆರೆಮನೆಯ ಸಂಗಡಿಗನನ್ನು ಬರಮಾಡಿಕೊಳ್ಳಲು ವ್ಯಕ್ತಪಡಿಸಿದ ಉತ್ಸಾಹ ಹೃದಯಸ್ಪರ್ಶಿಯಾಗಿತ್ತು. ತಾಯ್ತನದ ನಿರೀಕ್ಷೆಯಲ್ಲಿರುವಾಗಲೂ ಸೆರೆಮನೆ ತೆರಳಿದ ಸುಬ್ಬಮ್ಮನ ಮೊದಲ ಮಗ ಹುಟ್ಟಿದ್ದೇ ಸೆರೆಮನೆಯಲ್ಲಿ. ಅದೇ ಸೆರೆಮನೆಯಲ್ಲಿ ಸರ್ದಾರರೂ ಇದ್ದರು. ನೆನಪಿನಿಂದ ಸರ್ದಾರರ ಅಗ್ಗಾಲಿಗಳು ತುಂಬಿ ನಿಂತವು. ಆಕೆ ತನ್ನ ಸಮೀಪದಲ್ಲಿ ಸರ್ದಾರರನ್ನು ಕೂರಿಸಿಕೊಂಡರು. ಹೋರಾಟದ ಕಲಿ ಸರ್ದಾರ್ ವೆಂಕಟರಾಮಯ್ಯನವರ ಕಾವ್ಯ ವಾಚನ ಪ್ರೌಢಿಮೆ ಸೆರೆಮನೆಯಲ್ಲಿದ್ದಾಗ ಅವರ ಜನಪ್ರಿಯತೆಯನ್ನು ಹೆಚ್ಚಿಸಿದ ಸಂಗತಿಯಾಗಿತ್ತು. ಅಂದಿನ ದಿನಗರನ್ನು ನೆನೆದು ಸುಬ್ಬಮ್ಮನವರ ಕಣ್ಣುಗಳಲ್ಲಿ ಹರ್ಷ ಪುಟಿಯಿತು. ಅವರು ಸರ್ದಾರರನ್ನು ಹಿಂದೆ ಹೇಳುತ್ತಿದ್ದ ಹಾಗೆ "ಮಹಾಭಾರತದಿಂದ ಒಂದೆರಡು ಪದ್ಯಗಳನ್ನು ಹೇಳಲು ಸಾಧ್ಯವೇ. ಉಸಿರು ತೊರೆಯುವ ಮೊದಲು ಅದನ್ನು ಒಮ್ಮೆ ಕೇಳಬೇಕೆಂದು ಆಸೆಯಾಗುತ್ತದೆ" ಎಂದು ಅಂಗಲಾಚುವಂತೆ ಕೇಳಿಕೊಂಡರು. ಸರ್ದಾರರು ತಕ್ಷಣವೇ ಕುಮಾರವ್ಯಾಸ ಭಾರತದ ಉದ್ಯೋಗ ಪರ್ವದಿಂದ ಪದ್ಯಗಳನ್ನು ಹೇಳತೊಡಗಿದರು. ರುಗ್ಣಶಯ್ಯೆಯಲ್ಲಿದ್ದ ಸುಬ್ಬಮ್ಮ ಪಟ್ಟ ಹರ್ಷ ಅಷ್ಟಿಷ್ಟಲ್ಲ. ಜೋಯಿಸರ ಕುಟುಂಬವೆಲ್ಲಾ ಸುತ್ತ ನೆರೆದಿದ್ದರು. ಅಲ್ಲೊಂದು ಅಲೌಕಿಕ ವಾತಾವರಣವೇ ಸೃಷ್ಟಿಯಾದಂತೆ ಇತ್ತು. ಸ್ವಲ್ಪ ಸಮಯದ ನಂತರ ಅಲ್ಲಿಂದ ಬೀಳ್ಕೊಂಡು ಹೊರಟ ಸರ್ದಾರರು ಬೆಂಗಳೂರು ತಲುಪುವುದರೊಳಗೆ ಸುಬ್ಬಮ್ಮನವರು ವಿಧಿವಶರಾದರೆಂಬ ವಾರ್ತೆ ತಲುಪಿತು."

ಚಿತ್ರಶಾಂತಿ ಪಡೆದ ಸುಬ್ಬಮ್ಮ ೧೯೮೧ ಫೆಬ್ರುವರಿ ೨೪ರಂದು ಚಿರಶಾಂತಿ ಹೊಂದಿದರು. ಜೀವನ ಸಾರ್ಥಕತೆಯಿಂದ ತಣಿದು ಪಯಣಿಸಿದರು.

"ಪ್ರತ್ಯಕ್ಷದರ್ಶಿ" ಎಂದು ಬರೆಯುತ್ತ ನಾಡಿಗೇರ ಕೃಷ್ಣಮೂರ್ತಿಯವರು ಸುಬ್ಬಮ್ಮನ ಸಾವಿನ ನಂತರ "ಛತ್ರದ ಬಾಗಿಲು ಮುಚ್ಚಿತು" ಎನ್ನುತ್ತಾರೆ. ನಾಡ ಚರಿತ್ರೆಯಲ್ಲಿ ಎಂದೆಂದೂ ಪ್ರಕಾಶಿಸುವ ಧ್ರುವ ನಕ್ಷತ್ರವೆಂದು ಶ್ರೀ ನಾಗಲಿಂಗಸ್ವಾಮಿ ಹೇಳಿದ್ದಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

## ನಿತ್ಯನೂತನ ಶಿಕ್ಷಣದ ಕನಸು ಕಂಡ

## ಸರಸ್ವತಿ ನಟರಾಜನ್

"ನನಗೆ ಹನ್ನೆರಡು ವರ್ಷವಿರಬಹುದು. ಶಾಲೆಗೆ ಹೋಗುತ್ತಿದ್ದ ವಯಸ್ಸು. ಉಪ್ಪಿನ ಸತ್ಯಾಗ್ರಹದಲ್ಲಿ ನನ್ನ ಗೆಳೆಯ ಗೆಳತಿಯರೊಂದಿಗೆ ಭಾಗವಹಿಸಿದ್ದೆ. ಆ ಚಳವಳಿಯ ಪ್ರಭಾವ ನನ್ನ ಜೀವನದ ಮುಖ್ಯ ತಿರುವು. ಅಬ್ಬ! ಆ ದೃಶ್ಯ ಆ ಅನುಭವನ್ನು ನಾನೆಂದಿಗೂ ಮರೆಯಲಾರೆ.

"ಉಪ್ಪು ತಯಾರಿಸಲು ಮದರಾಸು ಸಮುದ್ರ ತೀರಕ್ಕೆ ನಾವು ಹೋದೆವು. ಭಯಂಕರ ಶಬ್ದ ಕೇಳಿಸಿತು. ಕುದುರೆಗಳು ಓಡಿಬರುತ್ತಿದ್ದ ಶಬ್ದ! ಬ್ರಿಟಿಷ್ ಸಿಪಾಯಿಗಳು ನಮ್ಮನ್ನು ಶಿಕ್ಷಿಸಲು ಬರುತ್ತಿದ್ದ ಶಬ್ದ! ಕುದುರೆಯ ಮೇಲೆ ಕುಳಿತು ಕೆಂಪು ಸಿಪಾಯಿಗಳು ನಮ್ಮನ್ನು ಅಟ್ಟಿಸಿಕೊಂಡು ಬಂದರು. ಸುರಳಿ ಸುತ್ತಿದ್ದ ಚಾಟಿಯನ್ನು ಬಿಚ್ಚಿ ಅಪ್ಪಳಿಸಿ ಹೊಡೆದರು. ಗುಂಪು ಚದುರುವವರೆಗೂ ನಮ್ಮ ಮೇಲೆ ಚಾಟಿಪ್ರಹಾರ ಛಟೀರೆಂದು ಬೀಳುತ್ತಲೇ ಇತ್ತು. ಆ ಏಟಿನ ಚುರುಕನ್ನು ನೆನೆಸಿಕೊಂಡರೆ ಈಗಲೂ ಚರ್ಮ ಸುಲಿದಷ್ಟು ನೋವು ಅನುಭವವಾಗುತ್ತದೆ. ಅದು ಸಾಮಾನ್ಯ ಚಾಟಿ ಅಲ್ಲ. ಚರ್ಮದಿಂದ ಮಾಡಿದ್ದು. ಒಂದೇ ಏಟಿಗೆ ಅನೇಕರು ಕಣ್ಣು ಕಳೆದುಕೊಂಡರು. ಚರ್ಮ ಸುಲಿದು ಗಾಯಗೊಂಡರು. ಮೈಯಿಂದ ರಕ್ತ ಕಿತ್ತು ಬರುವಂತಹ ಏಟು ಅದು. ನನ್ನ ಗೆಳತಿಯರಿಗೆ ಕಣ್ಣಲ್ಲಿ ರಕ್ತ ಸುರಿಯುವುದನ್ನು ಕಂಡೆ. ಆ ಸಿಪಾಯಿಗಳು ನಮ್ಮನ್ನು ಅಷ್ಟಕ್ಕೆ ಬಿಡಲಿಲ್ಲ. ಒಟ್ಟಿಗೇ ಎಳೆದುಕೊಂಡು ಹೋಗಿ ಜೈಲಿನಲ್ಲಿ ಹಾಕಿದರು...ಚಿಕ್ಕಮಕ್ಕಳೆನ್ನುವ ಕರುಣೆ ಅವರಿಗಿರಲಿಲ್ಲ ಎನ್ನುವುದಕ್ಕಿಂತ ನನಗೆ ಏನನ್ನಿಸುತ್ತದೆ ಎಂದರೆ, ನಾವು ಚಿಕ್ಕವರಾಗಿದ್ದರೂ ಅವರ ಗಮನಕ್ಕೆ ಬರುವ ಮಹತ್ತರವಾದ ಒಂದು ಕೆಲಸವನ್ನು ಮಾಡಿಬಿಟ್ಟೆವೆಂಬ ಹೆಮ್ಮೆಯಾಯಿತು ನಮಗೆ. ಇದು ಸಾಲದೆ, ಇನ್ನೇನು ಬೇಕು ನನ್ನನ್ನು ನಾನು ಸ್ವಾತಂತ್ರ್ಯದ ಚಳವಳಿಗೆ ಒಡ್ಡಲು?" ಎನ್ನುತ್ತಾರೆ ಶ್ರೀಮತಿ ಸರಸ್ವತಿ ನಟರಾಜನ್ ತಮ್ಮ ಮಾತಿನ ಪ್ರಾರಂಭದಲ್ಲಿ.

ಮದರಾಸು ಬ್ರಿಟಿಷರ ಆಳ್ವಿಕೆಯ ಒಂದು ಪ್ರಮುಖ ಕೇಂದ್ರವಾಗಿತ್ತು. ಆದ್ದರಿಂದ ಬ್ರಿಟಿಷರ ಕಣ್ಣೆದುರೇ ಇದ್ದ ಮದರಾಸಿನವರಿಗೆ ಶಿಕ್ಷೆಯ ಚುರುಕು ಬೇಗ ತಾಗುತ್ತಿತ್ತು. ಮುಂಬಯಿ ಬಂಗಾಳದವರಂತೆಯೇ ಮದರಾಸಿನಲ್ಲಿದ್ದ ನಾವು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಬ್ರಿಟಿಷ್ ಸರ್ಕಾರದ ತೀಕ್ಷ್ಣತೆಯನ್ನು ಅನುಭವಿಸಿದ್ದೇವೆ ಎಂದು ಸರಸ್ವತಿಯವರು ವಿವರಿಸುತ್ತಾರೆ.

ಬಾಲಕ ಬಾಲಿಕೆಯರನ್ನೂ ಜೈಲಿಗೆ ಹಾಕುತ್ತಿದ್ದರೇ ಎನ್ನಲು, "ಹೌದು ಆದೇನಾಯಿತೆಂದರೆ, ಉಪ್ಪಿನ ಸತ್ಯಾಗ್ರಹಕ್ಕಾಗಿ ಸಮುದ್ರದ ತೀರಕ್ಕೆ ಹೋಗಿದ್ದ ನಮ್ಮನ್ನು ಹೊಡೆದು ಸೆರೆಗೆ ತಳ್ಳಿದ ಮೇಲೆ ಹೆಚ್ಚು ದಿನ ಚಿಕ್ಕವರಾದ ನಮ್ಮನ್ನು ಜೈಲಿನಲ್ಲಿ ಇಟ್ಟುಕೊಳ್ಳಲಿಲ್ಲ. ಒಂದು ಮುಖ್ಯ ಕಾರಣವೆಂದರೆ ಜೈಲಿನಲ್ಲಿ ನಮಗೆ ಆಹಾರವಾಗಿ ಕೊಡುತ್ತಿದ್ದ ಬ್ರೆಡ್ ಮತ್ತು ಕೋಳಿಮೊಟ್ಟೆಯನ್ನು ಸಂಪ್ರದಾಯಸ್ಥ ರಾದ ನಾವು ನಿರಾಕರಿಸಿ ಆಹಾರವನ್ನೇ ಬಿಟ್ಟುಬಿಟ್ಟೆವು. ಇದನ್ನು ಕಂಡ ಬ್ರಿಟಿಷ್ ಗವರ್ನರ್ ಮಕ್ಕಳ ಮೇಲೆ ಕರುಣೆ ತೋರಿ ಬಿಡುಗಡೆ ಮಾಡಲು ಅಪ್ಪಣೆ ಕೊಟ್ಟರು. ಹಾಗಾಗಿ ನಾವು ಜೈಲಿನಲ್ಲಿದ್ದದ್ದು ಕೆಲವು ದಿನಗಳು ಮಾತ್ರ" ಎಂದರು.

"ಲಂಗ ಅಂಗಿ ಹಾಕುವ ದಿನದಿಂದ ಸರಸ್ವತಿಯನ್ನು ಖಾದಿ ಬಟ್ಟೆಯಲ್ಲೇ ನಾನು ನೋಡಿದ್ದೇನೆ. ಇಂದಿಗೂ ಸರಳವಾದ ನೂಲಿನ ವಸ್ತ್ರ ಬಿಟ್ಟು ಬೇರೆ ಉಡುವುದಿಲ್ಲ" ಎಂಬುದು ಸಮಾಜ ಸೇವಾಕರ್ತರಾದ ಶ್ರೀಮತಿ ಕಮಲಾನಾಯ್ಡುರವರ ಅಭಿಪ್ರಾಯ.

ಸರಸ್ವತಿ ನಟರಾಜನ್ ವಾಸವಾಗಿರುವುದು ವಲ್ಲಭ ನಿಕೇತನದಲ್ಲಿ. ಸರಸ್ವತಿಯವರ ಏಕಮಾತ್ರ ಪುತ್ರರು ತಾತಾರವರ ಇನ್‌ಸ್ಟಿಟ್ಯೂಟ್‌ನಲ್ಲಿ ಪ್ರಸಿದ್ಧ ಪ್ರೊಫೆಸರ್. ವಿಶಾಲವಾದ, ಸೌಕರ್ಯ ಸೌಲಭ್ಯಗಳಿರುವ ಶ್ರೀಮಂತ ವಸತಿ. ಕುಳಿತ ಕಡೆ ಉಪಚಾರ ನಡೆದು ಪ್ರೀತಿಯಿಂದ ನೋಡಿಕೊಳ್ಳುವ ಮಗ ಸೊಸೆ ಮೊಮ್ಮಕ್ಕಳು. ಈ ಸುಖವನ್ನಪೇಕ್ಷಿಸದೆ ಅರವತ್ತೈದು ವರ್ಷದ ಸರಸ್ವತಿಯವರು ವಾಸಿಸಲು ಇಚ್ಛಿಸುವುದು ಆಶ್ರಮದಲ್ಲಿ ಒಂದು ಚಿಕ್ಕ ಮನೆಯಲ್ಲಿ. ಸೇವಾ ಕೆಲಸದಲ್ಲಿ ಕರ್ತವ್ಯ ಮಗ್ನರಾಗಿ ಸನ್ಯಾಸಿಯ ಜೀವನ ನಡೆಸುತ್ತಾ ಆಶ್ರಮದಲ್ಲಿ ಆತ್ಮತೃಪ್ತಿ ಪಡೆಯುವರು.

"ಗಾಂಧೀಜಿಯ ತತ್ತ್ವವನ್ನು ಪಾಲಿಸುವುದಷ್ಟೇ ನಮ್ಮ ಜೀವನದಲ್ಲಿ ಮಾಡಬೇಕಾದುದು"—ಎಂದು ಮೊಟಕಾಗಿ ತಮ್ಮ ಜೀವನ ಧ್ಯೇಯವನ್ನು ಹೇಳಿದರು.

ಸರ್ವೋದಯ ಸೇವಾಕರ್ತರಾಗಿರುವುದರ ಜೊತೆಗೆ ಸರಸ್ವತಿಯವರ ಮತ್ತೊಂದು ಜವಾಬ್ದಾರಿಯ ಕೆಲಸ ಥಕ್ಕರ್ ಬಾಪಾ ಶಾಲೆಯ ನಿರ್ವಹಣೆ. ಬೆಂಗಳೂರಿನ ಈ ಶಾಲೆಯ ಸಂಸ್ಥಾಪಕರು ಇವರೇ. ಈ ಶಾಲೆಯ ಸ್ಥಾಪನೆಯ ಹಿನ್ನೆಲೆಯನ್ನು ಕೇಳಿದಾಗ ಸರಸ್ವತಿಯವರು ತಾವು ತೆಗೆದುಕೊಂಡ ಪ್ರತಿಜ್ಞೆಯ ಕುರುಹಾಗಿ ಶಾಲೆಗಾಗಿ ಭೂದಾನ ಮಾಡಿ ಶಾಲಾ ವ್ಯವಸ್ಥೆಯನ್ನೂ ಅದರ ಕಾರ್ಯ ನಿರ್ವಹಣೆಯನ್ನೂ ವಹಿಸಿಕೊಂಡಿರುವುದಾಗಿ ಹೇಳುತ್ತಾರೆ.

"ನಾನು ಜನಿಸಿದುದು ತಿರುಪ್ಪೂರಿನಲ್ಲಿ. ನನ್ನ ತಾತ ಮುತ್ತಾತಂದಿರು ಮೈಸೂರು ದೇಶದವರೇ. ಮುಸಲ್ಮಾನರ ದಾಳಿಯಲ್ಲಿ ದೇವರ ವಿಗ್ರಹಗಳು ಲೂಟಿಯಾದಾಗ ನನ್ನ ತಾತ ಕಂಚಿನ ಈಶ್ವರೀ ವಿಗ್ರಹವನ್ನು ಸಂರಕ್ಷಿಸಲು ತಮಿಳು ದೇಶಕ್ಕೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಬಂದು ಸೇರಿದರು. ನಾನು ಹುಟ್ಟಿ ಬೆಳೆದು ಮದುವೆಯಾದದ್ದು ಮದರಾಸಿನಲ್ಲೇ ಆದರೂ ನನ್ನ ಪತಿಯೊಂದಿಗೆ ಕರ್ನಾಟಕ ರಾಜ್ಯವನ್ನು ಸೇರಿ ಈಗ ಇಲ್ಲಿನವಳೇ ಆಗಿದ್ದೇನೆ.

'ವಿನೋಬಾಭಾವೆಯವರು ಬೆಂಗಳೂರನ್ನು ಸರ್ವೋದಯ ನಗರವೆಂದೇ ಕರೆದು ಭಾರತದಲ್ಲಿ ಸರ್ವೋದಯ ಸೇವಾಕಾರ್ಯದ ಕೇಂದ್ರ ಬೆಂಗಳೂರೇ ಆಗಬೇಕೆಂದು ಇಚ್ಛೆಪಟ್ಟಿದ್ದರು. ನಾನು ಬೆಂಗಳೂರಿನಲ್ಲೇ ನೆಲೆಸಲು ಇದೂ ಒಂದು ಕಾರಣ' ಎನ್ನುತ್ತಾರೆ ಸರಸ್ವತಿ ನಟರಾಜನ್.

೧೯೬೪ರಲ್ಲಿ ಪತಿಯನ್ನು ಕಳೆದುಕೊಂಡ ಸರಸ್ವತಿಯವರಿಗೆ ಸರ್ವೋದಯ ಸೇವಾ ಕಾರ್ಯವಲ್ಲದೆ ಮತ್ತೇನೂ ಬೇಕಿಲ್ಲ.

ಸರಸ್ವತಿಯವರು ಸ್ವಾತಂತ್ರ್ಯ ಸಮರದಲ್ಲಿ ಮನಃಪೂರ್ವಕ ಭಾಗವಹಿಸಲು ತಂದೆಯ ಕಡೆಯೂ ಪ್ರೋತ್ಸಾಹವಿತ್ತು. ಮದುವೆಯಾದ ಮೇಲೆ ಮಾವನ ಕಡೆಯ ವರ ಪ್ರೋತ್ಸಾಹವೂ ಸಿಕ್ಕಿತ್ತು.

"ಗಾಂಧೀಜಿಯ ತತ್ವವನ್ನು ಸ್ವೀಕರಿಸಿ ಭಾರತದ ನಗರಗಳಲ್ಲೂ ಚರಕಾದಲ್ಲಿ ನೂಲುವುದು ಪ್ರಾರಂಭವಾಯಿತು. ಇದೊಂದು ಪವಿತ್ರ ಕೆಲಸ, ಇದೊಂದು ಸಿದ್ಧಿಯ ತಪಸ್ಸು. ಮೊಟ್ಟಮೊದಲು ಚರಕಾ ಬಂದದ್ದು ತಿರುಪ್ಪೂರಿನಲ್ಲಿ ನಮ್ಮ ತಂದೆಯ ಮನೆಯಲ್ಲಿ. ಆದ್ದರಿಂದಲೇ ನನ್ನ ಚಿಕ್ಕ ವಯಸ್ಸಿನಿಂದ ಕೈರಾಟೆಯ ನೂಲಿನ ವಸ್ತ್ರವೆಂದರೆ ನನಗೆ ಪ್ರೀತಿ" ಎನ್ನುತ್ತಾರೆ ಸರಸ್ವತಿ.

ಗಾಂಧೀ ಭಕ್ತರಾಗಿ ಸರಸ್ವತಿಯ ತಂದೆಯವರು ಮನೆಯಲ್ಲಿದ್ದ ವಿದೇಶೀ ವಸ್ತ್ರಗಳನ್ನು ಸುಟ್ಟು ಭಸ್ಮ ಮಾಡಿದರು. ಮನೆಯವರೆಲ್ಲರೂ ಖಾದಿಯನ್ನೇ ಧರಿಸಬೇಕೆಂದು ಆ ಭಸ್ಮ ಸಾಕ್ಷಿಯಾಗಿ ಪ್ರತಿಜ್ಞೆ ತೆಗೆದುಕೊಂಡರು. ಅಂದಿನಿಂದ ಮನೆಯಲ್ಲಿ ಎಲ್ಲರೂ ನೂಲುವುದನ್ನು ಕಲಿತರು.

ವಿಶ್ವವಿಖ್ಯಾತರಾದ ಡಾಕ್ಟರ್ ನಟರಾಜನ್‌ರವರೊಡನೆ ವಿವಾಹವಾದ ನಂತರವೂ ಸರಸ್ವತಿಯವರಿಗೆ ಲೋಕಸೇವೆಗೆ ಅಡ್ಡಿಯಾಗಲಿಲ್ಲ. ತಮಿಳುನಾಡಿನಲ್ಲೂ ಕನ್ನಡ ರಾಜ್ಯದಲ್ಲೂ ಸೇವೆ ಸಲ್ಲಿಸಿದ ಡಾಕ್ಟರ್ ನಟರಾಜನ್ ಮೈಸೂರು ದೇಶದ ಆರೋಗ್ಯ ಇಲಾಖೆಯ ಡೆಪ್ಯುಟಿ ಡೈರೆಕ್ಟರ್ ಆಗಿದ್ದರು.

"ಡಾಕ್ಟರ್ ನಟರಾಜನ್ ಜನೋಪಕಾರಿ. ಡಾಕ್ಟರ್ ವೃತ್ತಿಯಲ್ಲಿ ಅವರಿಗೆ ಹೆಚ್ಚು ಲಕ್ಷ್ಯವಿದ್ದುದು ಜನರ ಆರೋಗ್ಯದಲ್ಲಿ. ತಮ್ಮ ಸಂಪಾದನೆಯಲ್ಲಲ್ಲ." ಇದಕ್ಕೆ ಅವರು ಕೋಕೋಜಿಂ ಬಳಕೆಯ ವಿರುದ್ಧವಾಗಿ ತೆಗೆದುಕೊಂಡ ನಿರ್ಧಾರ ಒಂದನ್ನೂ ಉದಾಹರಣೆ ನೀಡಬಹುದು.

ಈ ಪ್ರಸಂಗವನ್ನು ವಿವರಿಸುತ್ತಾ ಸರಸ್ವತಿಯವರು, "ನಮ್ಮ ಯಜಮಾನರು ಹಣಕ್ಕಾಗಿ ಕೆಲಸ ಮಾಡಿದವರಲ್ಲ. ಕೋಕೋಜಿಂ ಎಂಬ ಡಾಲ್ಡಾ ಮಾದರಿಯ ಎಣ್ಣೆ ಬಳಕೆಗೆ ಬಂದಾಗ, ಆರೋಗ್ಯದ ದೃಷ್ಟಿಯಿಂದ ಈ ಎಣ್ಣೆ ಕೆಟ್ಟ ಪರಿಣಾಮ ಬೀರುವು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ದೆಂದು ಕಂಡುಹಿಡಿದು, ಕಣ್ಣಿಗೆ ಅಪಾಯವಾಗುವ ಈ ಎಣ್ಣೆ ಜನರ ಉಪಯೋಗಕ್ಕೆ ಬರಕೂಡದೆಂದು ಪಾರ್ಲಿಮೆಂಟ್‌ನಲ್ಲಿ ಶಾಸನ ಹೊರಡಿಸಲು ಪ್ರಯತ್ನಿಸಿ ಗೆದ್ದರು. ಇದಕ್ಕಾಗಿ ಮಶ್ರೂವಾಲಾರವರ ಸಹಾಯ ತೆಗೆದುಕೊಂಡರು. ಎಣ್ಣೆ ತಯಾರಿಕೆಯ ಕಂಪೆನಿಯವರು ತಮಗೆ ವಿರೋಧವಾಗಿ ಬರಕೂಡದೆಂದು, ಐವತ್ತು ಸಾವಿರ ರೂಪಾಯಿ ಲಂಚ ಕೊಡುತ್ತೇವೆಂದೂ ಆಸೆ ತೋರಿಸಿದರು. ಆಗಿನ ಕಾಲದಲ್ಲಿ ಈ ಹಣದ ಬೆಲೆ ಎಷ್ಟು ಯೋಚಿಸಿ. ಆದರೆ ನಮ್ಮ ಯಜಮಾನರು ಈ ಹಣಕ್ಕೆ ಆಸೆ ಪಡದೆ ಬಳಕೆಯ ವಿರುದ್ಧ ಶಾಸನ ಹೊರಡಿಸಿದರು" ಎನ್ನುತ್ತಾರೆ.

ಕಾಂಗ್ರೆಸ್ಸಿನ ಮುಖಂಡರಾಗಿದ್ದ ಶ್ರೀ ಟಿ. ಸಿದ್ಧಲಿಂಗಯ್ಯನವರ ಪ್ರಭಾವಕ್ಕೆ ಒಳಗಾದ ನಟರಾಜನ್‌ರವರು ಮೆಡಿಕಲ್ ಕಾಲೇಜನ್ನು ತ್ಯಜಿಸಿ ರಾಜಕೀಯಕ್ಕೆ ಧುಮುಕಿ ದೇಶಸೇವಾ ನಿರತರಾದರು. ಅನೇಕ ವೈದ್ಯರೂ ವಕೀಲರೂ ಹೀಗೆ ವೃತ್ತಿ ಬಿಟ್ಟು ಕಾಂಗ್ರೆಸ್ಸಿಗೆ ಸೇರಿದಾಗ ಗಾಂಧೀಜಿ ಅವರನ್ನೆಲ್ಲಾ ಅವರವರ ಕೆಲಸಕ್ಕೆ ಹೋಗು ವಂತೆ ವಿವೇಕ ಹೇಳಿ ಕಳುಹಿಸಿದರು. ವೃತ್ತಿಯಲ್ಲಿದ್ದುಕೊಂಡೇ ಸೇವೆ ಮಾಡ ಬೇಕೆಂದು ಹೇಳಿದರು. ಮಹಾತ್ಮರಿಗೆ ವಿಧೇಯರಾಗಿ ನಟರಾಜನ್ ಪುನಃ ವೈದ್ಯಕೀಯ ಕಾಲೇಜು ಸೇರಿ ಜನಸೇವೆ ಮಾಡಲು ನಿರ್ಧರಿಸಿದರು.

ಈ ಸಂದರ್ಭವನ್ನು ನೆನೆದು ಸರಸ್ವತಿಯವರು ಕೆಲವು ಘಟನೆಗಳನ್ನು ಮನ ಮುಟ್ಟುವಂತೆ ಹೇಳುತ್ತಾರೆ.

"ಡಾಕ್ಟರ್ ನಟರಾಜನ್ ಕುಷ್ಠರೋಗಿಗಳ ಸೇವೆ ಮಾಡಿ ಅವರೊಡನಿದ್ದು ವೈದ್ಯಕೀಯ ಚಿಕಿತ್ಸೆ ಕೊಟ್ಟಿದ್ದಾರೆ. ಕಾಲರಾ ರೋಗ ಹರಡಿದಾಗ ಜನರು ಊರು ಬಿಟ್ಟು ಕೇರಿ ಕೇರಿಗಳಿಗೆ ಚದುರಿಹೋದರು. ಆಗ ರೋಗಿಗಳ ಜೊತೆಯೇ ಇದ್ದು ಸೇವೆ ಮಾಡಿದ್ದಾರೆ. ಈ ಅಂಟು ಜಾಡ್ಯವನ್ನು ತಡೆಯುವ ರೀತಿಯನ್ನು ಹಳ್ಳಿಯ ವರಿಗೆ ಬೋಧಿಸಿದ್ದಾರೆ. ಹರಿಜನ ಕೇರಿಗಳಿಗೆ ಹೋಗಿ ಅಲ್ಲಿ ನೆಲೆಸಿ ಅವರಿಗೆ ಬೇಕಾದ ವೈದ್ಯಕೀಯ ಸೌಲಭ್ಯವನ್ನೂ ಆರೋಗ್ಯದ ಸಲಹೆಯನ್ನೂ ನೀಡಿದ್ದಾರೆ" ಎಂದ ಹೇಳುತ್ತಾ 'ಇಲ್ಲಿ ಒಂದಂಶವನ್ನು ಒತ್ತಿ ಹೇಳಲು ಇಚ್ಛಿಸುತ್ತೇನೆ' ಎನ್ನುತ್ತಾರೆ. ಅದೇನೆಂದರೆ, "ಕುಟುಂಬ ಯೋಜನೆಗೆ ಮುಸಲ್ಮಾನರು ವಿರುದ್ಧ ಎಂಬುದು ತಪ್ಪು" ಎಂದು ಪ್ರಾರಂಭಿಸಿ ಸರಸ್ವತಿ ಹೀಗೆ ಮುಂದುವರಿಸುತ್ತಾರೆ, "ಫ್ಯಾಮಿಲಿ ಪ್ಲಾನಿಂಗ್ ಟ್ರೈನಿಂಗಿಗೆ ನಮ್ಮ ಯಜಮಾನರನ್ನು ವಿದೇಶಕ್ಕೆ ಕಳುಹಿಸಿದವರು ಮಿರ್ಜಾ ಇಸ್ಮಾಯಿಲ್‌ರವರೇ. ಇವರ ಉತ್ತೇಜನದಿಂದ ಆರು ತಿಂಗಳು ವಿದೇಶದಲ್ಲಿ ತರಬೇತಿ ಪಡೆದು ಬಂದು ರಾಮನಗರದಲ್ಲಿ ಕ್ಲಿನಿಕ್ ಪ್ರಾರಂಭಿಸಿದರು. ಮೈಸೂರು ರಾಜ್ಯದಲ್ಲಿ ಇದೇ ಪ್ರಪ್ರಥಮ ಕುಟುಂಬ ಯೋಜನಾ ಕೇಂದ್ರ. ಕುಟುಂಬ ಯೋಜನಾ ಕೆಲಸ ವನ್ನು ಕೈಗೊಳ್ಳುವುದಕ್ಕೆ ಮೊದಲು ನಮ್ಮ ಯಜಮಾನರು ಗಾಂಧೀಜಿಯ ಅಭಿ ಪ್ರಾಯವನ್ನು ಕೇಳಿದರು. ಇದು ತಪ್ಪು ಕೆಲಸವೇ ? ಪಾಪ ಕೃತ್ಯವೇ ? ಎಂಬು ದಕ್ಕೆ ಗಾಂಧೀಜಿಯ ಸ್ಪಷ್ಟ ವಿವರಣೆ ಹೀಗೆ, "ಬ್ರಹ್ಮಚರ್ಯಕ್ಕೆ ಮತ್ತೊಂದು ಅರ್ಥ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಕುಟುಂಬ ಯೋಜನೆ ಎಂದು ತಿಳಿದುಕೊಂಡರೆ ಎಲ್ಲವೂ ಸರಿ. ಪವಿತ್ರವಾದ ಅರ್ಥದಲ್ಲಿ ಈ ಯೋಜನೆಯನ್ನು ಕಾರ್ಯ ರೂಪಕ್ಕೆ ತರಬೇಕು. ಅತ್ಯಾಚಾರ ಮಾಡಿ ಅದನ್ನು ಸರಿಪಡಿಸಲು ಉಪಯೋಗಿಸುವ ವಿಧಾನವಾದರೆ ಪಾಪಕೃತ್ಯವಾಗುವುದು."

"ಗಾಂಧೀಜಿ ಯಾವ ಪವಿತ್ರವಾದ ಭಾವನೆಯಿಂದ ಹೇಳಿದರೋ ಅದನ್ನು ನಾವು ಈಗ ಅನುಸರಿಸುತ್ತಿಲ್ಲವೆಂಬುದೇ ನನಗೆ ಮನಸ್ಸಿಗೆ ನೋವಾಗುತ್ತದೆ" ಎನ್ನುತ್ತಾರೆ ಸರಸ್ವತಿ.

ಖಾದಿ ಪ್ರಿಯೆಯಾಗಿದ್ದ ಸರಸ್ವತಿಯನ್ನು ಅನೇಕರು ಪರಿಹಾಸ್ಯ ಮಾಡುತ್ತಿದ್ದರಂತೆ. 'ಮದುವೆ ಸಮಯದಲ್ಲಿ ಹಸೆಮಣೆಯ ಮೇಲೂ ಖಾದಿ ಸೀರೆ ಉಟ್ಟು ಕುಳಿತುಕೊಳ್ಳುವೆಯಾ ನೋಡೋಣ' ಎನ್ನುತ್ತಿದ್ದರಂತೆ. "ನಾನು ಹೀಗೆಯೇ ನಡೆಯಬೇಕೆಂದು ಮನಸ್ಸು ಮಾಡಿದ್ದಕ್ಕೆ ಸರಿಯಾಗಿ ಖಾದಿಪ್ರಿಯರೇ ಆದ ನಟರಾಜನ್‌ರವರು ನನ್ನ ಪತಿಯಾದುದು ನನಗೆ ಆತ್ಮಾನಂದವಾಯಿತು. ಮದುವೆಯಲ್ಲೂ ನಾನು ಉಟ್ಟಿದ್ದು ಖಾದಿ ಸೀರೆಯೇ. ಸೀರೆಗೆ ಒಂದಂಗುಲದಷ್ಟು ಅಂಚನ್ನು ಹೇಳಿ ಹಾಕಿಸಿಕೊಂಡಿದ್ದೆ ಅಷ್ಟೆ. ಆಗ ಖಾದಿ ಬಟ್ಟೆ ಬಹಳ ಒರಟಾಗಿರುತ್ತಿತ್ತು. ಅದರಲ್ಲಿ ನಾಲ್ಕೈದು ಬಳಸು ಸುತ್ತಿ ಸೀರೆ ಉಡುವುದೆಂದರೆ ಹೇಗಿರಬೇಕೆಂದು ಊಹಿಸಿಕೊಳ್ಳಿ. ಆದರೆ ಆ ಉಡುಪಿನಲ್ಲಿ ನಮಗೊಂದು ನಂಬಿಕೆ ಇತ್ತು. ಖಾದಿ ಉಡುವುದರಿಂದ ದೇಶವನ್ನು ಉದ್ಧಾರ ಮಾಡುವೆವೆಂಬ ಭರವಸೆ ಇತ್ತು. ನೆಮ್ಮದಿ ಇತ್ತು. ಖಾದಿ ಬಟ್ಟೆಗೆ ಆಗಿದ್ದ ಮೌಲ್ಯ ಏನು ಗೊತ್ತೆ? ಭಾರತೀಯರು ಪರಸ್ಪರ ಗೌರವದಿಂದ ಗುರ್ತಿಸುವ ಒಂದು ಸಂಕೇತವಾಗಿತ್ತು. ನನ್ನ ಅತ್ತೆಯ ಮನೆಯವರು ಈ ವಿಷಯದಲ್ಲಿ ನನಗೆ ಪೂರ್ಣ ಸ್ವಾತಂತ್ರ್ಯ ಕೊಟ್ಟಿದ್ದರು. ದೇಶಭಕ್ತಿಯನ್ನು ಪ್ರೋತ್ಸಾಹಿಸುತ್ತಿದ್ದರು.

ನಾನು ಒಂದು ತಿಂಗಳಲ್ಲಿ ಹತ್ತು ದಿನಗಳು ಮೌನವನ್ನು ಆಚರಿಸುತ್ತಿದ್ದೆ. ಅಂತಹ ದಿನಗಳಲ್ಲೂ ನನ್ನ ಅತ್ತೆಯವರು ಅನುಸರಿಸಿಕೊಂಡಿದ್ದಾರೆ. ಬಹಳ ವಿಶಾಲ ಮನೋಭಾವನೆ ಅವರದು. ಮದುವೆಯಾದ ಮೇಲೆ ನನ್ನನ್ನು ಬಿ. ಎ. ಡಿಗ್ರಿವರೆಗೆ ಓದಬೇಕೆಂದು ಕಾಲೇಜಿಗೆ ಕಳುಹಿಸಿದವರು ನನ್ನ ಮಾವನವರೇ" ಎಂದು ಹೇಳಿ, ಸರಸ್ವತಿಯವರ ಮನೆ ಗಾಂಧೀ ಉದ್ದೇಶಪೂರ್ವಕವಾದ ಎಂಟು ವಿಧಾಯಕ ಕೆಲಸಗಳಿಗೆ ಕೇಂದ್ರವಾಯಿತೆಂಬುದನ್ನು ವಿವರಿಸುತ್ತಾರೆ.

"ಹರಿಜನ ಸೇವೆಯನ್ನು ಮೊದಲನೆಯದಾಗಿ ಕೈಗೊಂಡೆವು. ಹರಿಜನ ಕೇರಿಗಳಿಗೆ ಹೋಗಿ ಕೆಲಸ ಮಾಡಲು ನಮ್ಮ ತಾಯಿಯವರೂ ಹಣ ಕೊಡುತ್ತಿದ್ದರು."

ಹರಿಜನರೆಂದಾಗ ಸರಸ್ವತಿಯವರು ಇಲ್ಲೊಂದು ವಿಶೇಷತೆಯನ್ನು ಸೇರಿಸಲು ಅಪೇಕ್ಷಿಪಡುವರು. "ಹರಿಜನರಲ್ಲಿ ಒಳ್ಳೆಯ ಸಂಸ್ಕೃತಿ ಇದೆ. ಇದನ್ನು ನಾನು ಕಂಡಿದ್ದೇನೆ. ನಾವು ಅವರಿಂದ ಕಲಿಯಬೇಕಾದ ಆಶ್ಚರ್ಯಕರವಾದ ಸಂಸ್ಕೃತಿ ಅವರಲ್ಲಿದೆ, ಇದಕ್ಕೆ ಒಂದು ನಿದರ್ಶನ ಹೇಳುತ್ತೇನೆ...ನಾನು ನೋಡಿಕೊಳ್ಳುತ್ತಿದ್ದ ಹರಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಜನ ಶಾಲೆಯ ವಾರ್ಡನ್‌ಗೂ ಅವಳ ಗಂಡನಿಗೂ ಯಾವಾಗಲೂ ಜಗಳವಾಗುತ್ತಿತ್ತು. ಆ ಹೆಂಗಸು ಗಂಡನನ್ನು ಹೀಯಾಳಿಸಿ ಮಾತಾಡುತ್ತಿದ್ದಳು. ವಿದ್ಯಾರ್ಥಿನಿಯರ ಎದುರಿನಲ್ಲೇ ಬಾಯಿಗೆ ಬಂದಂತೆ ಆತನನ್ನು ಬೈಯ್ಯುತ್ತಿದ್ದಳು. ಇದನ್ನು ಕೇಳಿಸಿ ಕೊಳ್ಳುತ್ತಿದ್ದ ಹರಿಜನ ಮಕ್ಕಳು ನನ್ನೊಡನೆ ಹೀಗೆ ಹೇಳಿದ್ದಾರೆ, "ನಮ್ಮ ತಂದೆ ಯನ್ನು ಹೀಗೆ ನಮ್ಮ ತಾಯಿ ಬೈದದ್ದನ್ನು ನಾವು ಕಂಡೇ ಇಲ್ಲ. ಈ ವಾರ್ಡನ್‌ಗೆ ಗಂಡನೆಂದರೆ ಮರ್ಯಾದೆಯೇ ಇಲ್ಲ. ನಮ್ಮ ತಂದೆಯನ್ನು ಕಂಡರೆ ನಮ್ಮ ತಾಯಿಗೆ ಭಯ, ಮರ್ಯಾದೆ ಇದೆ."

ಇದನ್ನು ಕೇಳಿಸಿಕೊಂಡು ನನಗೆ ತಲೆ ತಗ್ಗಿಸುವಂತಾಯಿತು. ವಿದ್ಯಾವಂತ ರಿಗೂ, ಹಣವಂತರಿಗೂ, ಸಮಾಜದಲ್ಲಿ ಪ್ರತಿಷ್ಠಿತ ಸ್ಥಾನ ಇರುವ ದೊಡ್ಡಸ್ತಿಕೆಯವ ರಿಗೂ ಈ ಸಂಸ್ಕೃತಿ ಇದೆಯೇ ಎಂದು ನನಗೆ ಸಂಶಯವಾಯಿತು. ನಾವು ಅದೆಷ್ಟು ಬೇಗ ಕೋಪಗೊಂಡು ಒಬ್ಬರಿಗೊಬ್ಬರು ಮರ್ಯಾದೆ ಕಳೆದು ಮಾತಾಡುತ್ತೇವೆ. ಹಳ್ಳಿಯವರು, ಕೇರಿಯವರು ನಮಗಿಂತ ವಾಸಿ. ಬಾಯಿ ಮುಚ್ಚಿಕೊಂಡು ಒಳಗೊಳಗೇ ಕಷ್ಟದ ನೋವು ಸಹಿಸಿಕೊಂಡು ಮರ್ಯಾದೆಯಿಂದಿರುತ್ತಾರೆ ಎನಿಸು ತ್ತದೆ—ಎಂದು ಹೇಳಿ ಹರಿಜನರಲ್ಲಿದ್ದ ಸುಸಂಸ್ಕೃಯನ್ನು ಮೆಚ್ಚಿಕೊಳ್ಳುತ್ತಾರೆ ಸರಸ್ವತಿ ಯವರು.

ವಿಧಾಯಕ ಕಾರ್ಯಗಳಲ್ಲಿ ಎರಡನೆಯದಾಗಿ ಸಾರ್ವಜನಿಕ ಆರೋಗ್ಯವನ್ನು ಸರಸ್ವತಿಯ ಮನೆಯವರು ಕೈಗೊಂಡರು. ಡಾ॥ ನಟರಾಜನ್‌ರವರೇ ಈ ವಿಷಯ ದಲ್ಲಿ ಮಾರ್ಗದರ್ಶಕರು. ನಟರಾಜನ್‌ರವರ ಸೇವೆ ಹೆಚ್ಚಾಗಿ ಹಳ್ಳಿಗಳಲ್ಲಿ ಮತ್ತು ಕೇರಿಗಳಲ್ಲಿಯೋ, ಕುಷ್ಠರೋಗಿಗಳ ಉಪಚಾರವನ್ನಂತೂ ಮನದಣಿಯೆ ಮಾಡಿದ್ದಾರೆ.

ಮತ್ತೊಂದು ವಿಧಾಯಕ ಕೆಲಸ ಹಿಂದೀ ಭಾಷೆಯ ಪ್ರಚಾರ. ನಾನಾವತಿ, ಎಂ. ಸತ್ಯನಾರಾಯಣ, ಹಿರಣ್ಮಯಿ ಇವರೊಡನೆ ಪ್ರಚಾರಕ ಸಭೆಗಳಲ್ಲಿ ಭಾಗವಹಿಸಿ ಊರೂರಿಗೆ ಹೋಗಿ ಸರಸ್ವತಿಯವರು ಹಿಂದಿ ಭಾಷೆಯನ್ನು ಹೇಳಿಕೊಟ್ಟಿದ್ದಾರೆ.

ನಿರಾಶ್ರಿತರಿಗೆ ಸಹಾಯ ಮಾಡುತ್ತಿದ್ದುದು ಸರಸ್ವತಿಯವರಿಗೆ ಅತ್ಯಂತ ತೃಪ್ತಿ ಕೊಟ್ಟ ಮತ್ತೊಂದು ಕೆಲಸ. "ಈ ಕೆಲಸಕ್ಕೆ ಅಮೃತಕೌರ್ ನನ್ನನ್ನೇ ನೇಮಿಸಿದ್ದರು. ಕರ್ನಾಟಕ ರಾಜ್ಯದಲ್ಲಿ ಈ ಉದ್ದೇಶಕ್ಕಾಗಿ ಸಂಗ್ರಹವಾಗುತ್ತಿದ್ದ ಆಹಾರ ಮತ್ತು ಬಟ್ಟೆ ಗಳನ್ನು ನಿರಾಶ್ರಿತರಿಗೆ ತಲುಪುವಂತೆ ಏರ್ಪಾಡು ಮಾಡುತ್ತಿದ್ದೆ. ವೆಂಕಟ ರಂಗೈಯ್ಯಂಗಾರ್ ತಮ್ಮ ಮನೆಯ ಅಂಗಳವನ್ನು ಈ ವಸ್ತುಗಳ ಸಂಗ್ರಹಕ್ಕಾಗಿ ಬಿಟ್ಟುಕೊಟ್ಟಿದ್ದರು...ನಿರಾಶ್ರಿತರ ಸಮಸ್ಯೆ ಅನೇಕ ವರ್ಷಗಳವರೆಗೆ ನಮ್ಮ ದೇಶ ವನ್ನು ಕಾಡಿಸುತ್ತಿದ್ದ ಸಮಸ್ಯೆಯಾಗಿತ್ತು" ಎಂದು ಹೇಳುತ್ತಾ ಸರಸ್ವತಿಯವರು ಏನನ್ನೋ ನೆನೆಸಿಕೊಂಡವರಂತೆ ನಿಧಾನವಾಗಿ ಮುಂದುವರಿಸುತ್ತಾರೆ.

"ನಿರಾಶ್ರಿತರ ಪಾಡನ್ನು ನಾನು ನೇರಾಗಿ ಕಂಡಿದ್ದೇನೆ ನೀವೂ ದೂರದರ್ಶನ ದಲ್ಲಿ ನೋಡಿರಬಹುದು. ಇತ್ತೀಚೆಗೆ ಬಂದ ಧಾರಾವಾಹಿ ಹಿಂದೀ ಕಥೆಯಲ್ಲಿ ನಿರಾಶ್ರಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ತರ ಚಿತ್ರವನ್ನು ಬಹಳ ಚೆನ್ನಾಗಿ ತೋರಿಸಿದರು. ಇದನ್ನು ನೋಡಿದಾಗ ಹಿಂದಿನ ಅವರ ಸತ್ಯ ಚಿತ್ರಣ ನನಗೆ ಜ್ಞಾಪಕಕ್ಕೆ ಬಂತು. ಇವರ ಉದ್ಧಾರ ಮಾಡುವುದು ದೇಶಸೇವೆಯಲ್ಲವೇ ಎನಿಸಿ ಆತ್ಮತೃಪ್ತಿಯಾಗುವವರೆಗೆ ನಿರಾಶ್ರಿತರೊಡನಿದ್ದು ಅವರಿಗೆ ಸಮಾಧಾನ ಹೇಳಿದ್ದೇನೆ. ಸ್ಥಳಾಂತರದ ಸ್ಥಿತಿಯಲ್ಲಿದ್ದು ಕಷ್ಟಪಟ್ಟು ಓದಿ ಮುಂದೆ ಬಂದ ಹೆಣ್ಣನ್ನೇ ನನ್ನ ಸೊಸೆಯನ್ನಾಗಿ ಮಾಡಿಕೊಂಡಿರುವುದು." ಎನ್ನುತ್ತಾರೆ.

ನೌಖಾಲಿಯ ಸೇವಾದಳ ಶಿಬಿರದಲ್ಲಿ ಸಾರ್ವಜನಿಕ ಸೇವಾ ಕೆಲಸದ ತರಬೇತಿ ಪಡೆದ ಸರಸ್ವತಿಯವರು ಮೃದುಲಾ ಸಾರಾಭಾಯಿಯೊಡನಿದ್ದು ಸೇವಾ ಕಾರ್ಯ ವನ್ನು ಬೇಕಾದಷ್ಟು ಕಲಿತರು.

ನನಗೆ ನೆಮ್ಮದಿ ಕೊಡುತ್ತಿದ್ದ ಒಂದೇ ಒಂದು ಕೆಲಸವೆಂದರೆ ಸೇವಾ ಕಾರ್ಯ, ಯಾವುದಾದರೊಂದು ಜನಸೇವೆಯನ್ನೂ ಮಾಡುತ್ತಿರುತ್ತಿದ್ದೆ ಎನ್ನುತ್ತಾರೆ. ಸೇವಾ ಕಾರ್ಯವನ್ನು ಪತಿಪತ್ನಿಯರು ಕಲೆತು ಮಾಡುತ್ತಿದ್ದರೇ ಎಂಬ ಪ್ರಶ್ನೆಗೆ, ಸರಸ್ವತಿ ಯವರು ಹೀಗೆನ್ನುತ್ತಾರೆ. "ಈ ನಿಯಮವೇ ನಮ್ಮಲ್ಲಿರಲಿಲ್ಲ. ಅವರ ನೌಕರಿಯ ಮೂಲಕ ಮಾಡುತ್ತಿದ್ದ ಅವರ ಸೇವಾ ಕ್ಷೇತ್ರವೇ ಬೇರೆಯಾಗಿತ್ತು. ನನ್ನ ಪಾಡಿಗೆ ನಾನು ಅವಕಾಶ ಬಂದಂತೆ ಸೇವಾಕಾರ್ಯವನ್ನು ತೆಗೆದುಕೊಳ್ಳುತ್ತಿದ್ದೆ. ಸಾಯಂಕಾಲ ವಾದರೆ ಇಬ್ಬರೂ ಮನೆ ಸೇರಿದಾಗ ನಮ್ಮ ನಮ್ಮಲ್ಲಿ ನಡೆದ ಕಾರ್ಯ ಸಫಲತೆ ಯನ್ನು ಹೇಳಿಕೊಳ್ಳುತ್ತಿದ್ದೆವು"—ಎನ್ನುತ್ತಾರೆ.

ವಿಧಾಯಕ ಕಾರ್ಯಗಳ ಪಟ್ಟಿಯನ್ನು ಮುಂದುವರಿಸುತ್ತಾ ಸರಸ್ವತಿ ಹೀಗೆನ್ನು ತ್ತಾರೆ. "ಗಾಂಧೀಜಿಯವರಿಗೆ ಬಹಳ ಇಷ್ಟವಾದ ಕೆಲಸ ತಕಲಿಯಲ್ಲಿ ನೂಲು ತೆಗೆ ಯುವುದು. ಮನೆಮನೆಗೆ ಹೋಗಿ ತಕಲಿಯನ್ನು ಕೊಡುವುದಲ್ಲದೆ ನೂಲು ತೆಗೆಯು ವುದನ್ನೂ ಹೇಳಿಕೊಡುತ್ತಿದ್ದೆವು. ತಕಲಿಯಿಂದ ತೆಗೆದ ದಾರ ಅವರಿಗೆ ಹೇಗೆ ಪ್ರಯೋಜನವಾಗುತ್ತದೆಯೆಂದು ಬೋಧಿಸುತ್ತಿದ್ದೆವು...... ಗಾಂಧೀಜಿಯವರ ಮತ್ತೊಂದು ಮುಖ್ಯ ಧ್ಯೇಯ ವೃತ್ತಿ ಶಿಕ್ಷಣ. ಬ್ರಿಟಿಷರ ನಂತರ ಈ ಶಿಕ್ಷಣವೇ ಭಾರತದ ಶಿಕ್ಷಣ ಪದ್ಧತಿಯಾಗಬೇಕೆಂದು ಗಾಂಧಿ ಕನಸು ಕಂಡಿದ್ದರು. ಇದಕ್ಕೆ ತಕ್ಕ ಸಿದ್ಧತೆಯನ್ನೂ ಮಾಡಿದ್ದರು. ವಾರ್ಧಾ ಆಶ್ರಮಕ್ಕೆ ಹೋಗಿದ್ದಾಗ ನಾವು ಕಲಿತದ್ದು ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸುವುದು ಮಾತ್ರವಲ್ಲ. ನಮ್ಮ ಜೀವನ ಶಿಕ್ಷಣ ವನ್ನೂ ಕಲಿತೆವು. ಇಲ್ಲಿಯ ಶಿಕ್ಷಣ ಪದ್ಧತಿಯಲ್ಲಿ ಎಷ್ಟು ಅರ್ಥವಿದೆ, ಎಂತಹ ಅನುಭವ ತುಂಬಿದೆ ಎನಿಸಿ ಥಕ್ಕರ್ ಬಾಪಾ ಶಾಲೆಯನ್ನು ಸ್ಥಾಪಿಸಲು ಹೊರಟದ್ದು ಈ ಉದ್ದೇಶಕ್ಕಾಗಿಯೇ. ಗಾಂಧೀಜಿಯವರ ಕನಸನ್ನು ನನಸು ಮಾಡಲು ಈ ಪ್ರಯತ್ನ" ಎಂದು ವಿಧಾಯಕ ಕಾರ್ಯದ ಪ್ರತಿಜ್ಞಾ ಸ್ಫೂರ್ತಿಯನ್ನು ಸರಸ್ವತಿ ಹೇಳುತ್ತಾರೆ.

ಈಗಲೂ ಈ ಶಾಲೆಯಲ್ಲಿ ವೃತ್ತಿ ಶಿಕ್ಷಣ ಪದ್ಧತಿಯೇ ಮುಂದುವರಿಯು ತ್ತಿದೆಯೋ ಎಂದು ಕೇಳಲು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



"ಅದೊಂದು ಕನಸಾಗಿಯೇ ಉಳಿಯಿತು" ಎಂದು ವಿವರಿಸುತ್ತಾರೆ.

"ಸ್ವಾತಂತ್ರ್ಯ ಬಂದ ಮೇಲೂ ನಮ್ಮ ಜನಕ್ಕೆ ವಿದೇಶೀ ಶಿಕ್ಷಣ ಪದ್ಧತಿಯ ಮೋಹ ಬಿಟ್ಟಿಲ್ಲ. ಪರೀಕ್ಷೆಗಳಿಗೆ ಹೆಚ್ಚು ಪ್ರಾಧಾನ್ಯತೆ, ಪರೀಕ್ಷೆಗಳಿಗೆ ಅನುಸಾರವಾಗಿ ಪಾಠಕ್ರಮ. ಸರ್ಕಾರವೂ ಇಂತಹ ಶಾಲೆಗಳನ್ನೇ ಗುರ್ತಿಸುವುದು. ಸಾರ್ವಜನಿಕರಿಗೂ ಇಂತಹ ಶಾಲೆಗಳೇ ಬೇಕಾಗಿವೆ. ಈ ಒತ್ತಡದಿಂದ ವೃತ್ತಿ ಶಿಕ್ಷಣಕ್ಕೆ ಮೌಲ್ಯ ಕಡಿಮೆ. ಹೀಗಾಗಿ ಈ ನನ್ನ ಶಾಲೆಯಲ್ಲೂ ವೃತ್ತಿ ಶಿಕ್ಷಣವನ್ನು ವರ್ಕ್ ಎಕ್ಸ್‌ಪಿರಿಯನ್ಸ್ (ಕೆಲಸದ ಅನುಭವ) ಎಂದು ಮಾತ್ರ ತೆಗೆದುಕೊಳ್ಳಬೇಕಾಯಿತು" ಎಂದು ಬೇಸರಪಟ್ಟು ಹೇಳುತ್ತಾರೆ.

"ಈಗಿನ ಹೆಣ್ಣುಮಕ್ಕಳಿಗೆ ಮನೆ ಕೆಲಸ ಬರುತ್ತದೆಯೆ ? ಅಡಿಗೆ ಮಾಡುವುದು ಗೊತ್ತಿಲ್ಲ. ಶುಚಿ, ಒಪ್ಪ ಓರಣವಾಗಿ ಮನೆಯಿಡುವುದೂ ಗೊತ್ತಿಲ್ಲ. ಅವರಿಗೆ ಇದೆಲ್ಲಾ ಬೇಕಿಲ್ಲ ಎಂದಲ್ಲ, ಈ ಕೆಲಸಗಳ ಅಭ್ಯಾಸವೇ ತಪ್ಪಿ ಹೋಗಿದೆ. ಪುಸ್ತಕ ಹಿಡಿದು ಓದುವುದೊಂದನ್ನೇ ನಾವು ಕಲಿಸುತ್ತಿದ್ದೇವೆ. ಇದೆಂತಹ ಅನರ್ಥವಾಯಿತು. ನಮ್ಮ ಕೆಲಸಕ್ಕೆ ಬೇರೆಯವರನ್ನು ಕಾಯುವ ಹೀನ ಜೀವನವಲ್ಲವೇ ಇದು ? ಗಾಂಧಿಯವರ ಆಶ್ರಮದಲ್ಲಿ ನಾವು ಕಲಿತಿದ್ದೇನು ? ನಮಗೆ ಜೀವನದಲ್ಲಿ ಬೇಕಾದ ಪ್ರತಿಯೊಂದು ಕೆಲಸ ಕಾರ್ಯಗಳನ್ನೂ ನಾವೇ ಮಾಡಬೇಕೆಂಬುದು. ಆದರೆ ಅದನ್ನು ಈಗ ಚಿಕ್ಕವರಿಗೆ ಹೇಳಲೂ ನಮಗೆ ಅವಕಾಶವಿಲ್ಲದಂತೆ ನಮ್ಮ ದೇಶ ಸ್ವತಂತ್ರವಾದ ಮೇಲೆ ಬದಲಾಯಿಸಿಹೋಯಿತು. ಇದು ಮನಸ್ಸಿಗೆ ನೋವನ್ನು ತರುತ್ತದೆ" ಎನ್ನುತ್ತಾರೆ.

ಥಕ್ಕರ್ ಬಾಪಾ ಶಾಲೆಯನ್ನು ಸರಸ್ವತಿಯವರು ಪ್ರಾರಂಭಿಸಿದುದು ಹೀಗೆ : ಇಪ್ಪತ್ತು ಎಕರೆ ಜಮೀನನ್ನು ಕೊಂಡುಕೊಂಡರು. ಜಮೀನು ಮತ್ತು ಶಾಲೆಯ ವ್ಯವಸ್ಥೆಗಾಗಿ ತಮ್ಮಲ್ಲಿದ್ದ ಚಿನ್ನದ ಬಳೆ, ಸರ ಸ್ವತ್ತೆಲ್ಲವನ್ನೂ ಸಂತೋಷವಾಗಿಯೇ ಕೊಟ್ಟರು. ಇಲ್ಲಿಯ ಮುಖ್ಯ ಕಲಿಕೆ ವ್ಯವಸಾಯ, ಮರಗೆಲಸ, ನೂಲುವುದು, ಜಮೀನಿನಲ್ಲಿ ಹತ್ತಿ ಬೆಳೆದು ಅದೇ ಹತ್ತಿಯಿಂದ ದಾರ ತೆಗೆಯುವುದರಿಂದ ಪ್ರಾರಂಭವಾಯಿತು. ಈ ಶಾಲೆಯಲ್ಲಿ ಹರಿಜನ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೇ ಅವಕಾಶ ಕೊಟ್ಟರು. ವಸತಿ ಸೌಕರ್ಯವನ್ನೂ ಒದಗಿಸಿ ಸಮುದಾಯ ಜೀವನ ನಡೆಸುವ ಅನುಭವ ಬರುವಂತೆ ಏರ್ಪಾಡಾಯಿತು. ಪ್ರತಿಯೊಬ್ಬರೂ ಪ್ರತಿಯೊಂದು ಕೆಲಸವನ್ನೂ ಕಲಿತು ಪರಸ್ಪರ ಸಹಕಾರ ಸೌಹಾರ್ದತೆಗೆ ಅವಕಾಶವಾಯಿತು. ಗಾಂಧೀಜಿಯವರ ನಯಿತಾಲೀಂ (ನೂತನ ತರಬೇತಿ) ಎಂಬುದರ ತಾತ್ಪರ್ಯ ಇದೇ.

"ನಿತ್ಯನೂತನ ಶಿಕ್ಷಣ"ವೆಂಬ ಪುಸ್ತಕದಲ್ಲಿ ವಿನೋಬಬಾವೆಯವರು ಸೂಚಿಸಿರುವ ಗಾಂಧೀಜಿ ರೂಪಿಸಿದ ಶಿಕ್ಷಣ ಪದ್ಧತಿಯ ಕಡೆಗೆ ನಮ್ಮ ಗಮನವನ್ನು ಸೆಳೆಯುತ್ತಾರೆ ಸರಸ್ವತಿಯವರು.

"ಗಾಂಧೀಜಿ ಶಿಕ್ಷಣ ಪಂಡಿತರಲ್ಲ. ಶಿಕ್ಷಣ ಶಾಸ್ತ್ರ ಅಧ್ಯಯನ ಮಾಡಿ ಬಂದವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ರಲ್ಲ. ಅವರು ಮಾನವ ಜೀವನದ ವಿಚಾರವಾಗಿ, ಅದರ ಪರಿಶುದ್ಧತೆಗಾಗಿ ತಾವು ಪ್ರಯೋಗ ಮಾಡಿದ ಸತ್ಯಶೋಧನೆಯ ಅನುಭವಗಳನ್ನು ಮಾತ್ರ ನಮ್ಮ ಮುಂದೆ ಇಟ್ಟಿದ್ದಾರೆ" ಎಂದಿದ್ದಾರೆ ಈ ಪುಸ್ತಕದಲ್ಲಿ ಶ್ರೀನಿವಾಸಚಾರ್ಲುರವರು.

"ಶಿಕ್ಷಣವು ಜೀವನಕ್ಕಾಗಿ, ಶಿಕ್ಷಣವೆಂದರೆ ಸಮಗ್ರ ವಿಕಾಸ. ಕೇವಲ ಅ ಆ ಇ ಈ ಕಲಿಯುವುದು ಶಿಕ್ಷಣವಲ್ಲ. ಶಿಕ್ಷಣವೆಂದರೆ ಸತ್ಯಶೋಧನೆಯ ವಿವೇಕ, ಶೋಷಣಾರಹಿತ ನವಸಮಾಜದ ರಚನೆಯೇ ಶಿಕ್ಷಣದ ಗುರಿ. ಶಿಕ್ಷಣವು ಬುದ್ಧಿಯನ್ನು ಮಾತ್ರವಲ್ಲ ಹೃದಯವನ್ನೂ ವಿಕಾಸಗೊಳಿಸಬೇಕು. ಶಿಕ್ಷಣದಲ್ಲಿ ಶ್ರಮನಿಷ್ಠೆಗೆ ಪ್ರಧಾನ ಸ್ಥಾನ ಕರ್ಮ ಜ್ಞಾನಗಳ ಸಮನ್ವಯವೇ ಶಿಕ್ಷಣ."

ಇದನ್ನು ನಯೀತಾಲೀಂ ಶಿಕ್ಷಣವೆಂದು ಗಾಂಧಿ ಕರೆದರು. ಈ ಶಿಕ್ಷಣ ದೇಶದಾದ್ಯಂತ ವ್ಯಾಪಿಸಿದರೆ ಯುವಕ ಯುವತಿಯರು ಉತ್ತಮವಾದ ಗ್ರಾಮೀಣ ಸಂಸ್ಕೃತಿಯ ಹಿನ್ನೆಲೆಯಲ್ಲಿ ಉತ್ಪಾದಕ ಶ್ರಮಜೀವನದ ಮೂಲಕ ವಿವೇಕವನ್ನು ಪಡೆದು ಸ್ವಾವಲಂಬನ ಸೇವಾ ಮನೋಧರ್ಮವುಳ್ಳವರಾಗಿ ಜೀವನ ರಂಗದಲ್ಲಿ ಅಹಿಂಸೆಯನ್ನು ಪಾಲಿಸುತ್ತಾ ನೂತನ ಯುಗದ ಆರಂಭಕರಾಗುವರು ಎಂದರು ಗಾಂಧಿ.

ಇದೇ ಶಿಕ್ಷಣವನ್ನು ಜಾರಿಗೆ ತರಬೇಕೆಂಬ ಉದ್ದೇಶದಿಂದ ಸ್ಥಾಪಿತವಾದದ್ದು ಥಕ್ಕರ್ ಬಾಪಾ ಶಾಲೆ. ಆದರೆ ಕ್ರಮೇಣ ಇಲ್ಲಿ ಅನೇಕ ತೊಡಕುಗಳು ಬಂದುವು. ಜಾತಿಭೇದ ತಲೆದೋರಿತು. ಪ್ರಚಲಿತ ಶಿಕ್ಷಣ ಪದ್ಧತಿ ಪ್ರಭಾವ ಬೀರಿತು. ನೂತನ ಶಿಕ್ಷಣ ಮಾಯವಾಗಿ ಮನಸ್ಸಿನಲ್ಲೇ ಉಳಿಯಿತು ಎನ್ನುತ್ತಾರೆ ಸರಸ್ವತಿ.

ಗಾಂಧೀಜಿಯವರ ಸಿದ್ಧಾಂತದ ಕಡೆಗೆ ಅತಿಯಾಗಿ ನನ್ನ ಮನಸ್ಸು ಸೆಳೆದುದು ಏಕೆಂದರೆ ಜೀವನ ಹೇಗೆ ನಡೆಸಬೇಕೆಂಬ ತತ್ವ ಅದರಲ್ಲಿದೆ" ಎನ್ನುತಾ ಸರಸ್ವತಿಯವರು "ಇಲ್ಲಿ ಒಂದು ವಿಚಾರವನ್ನು ಹೇಳಲು ಬಯಸುತ್ತೇನೆ" ಎನ್ನುತ್ತಾರೆ. "ಮಹಿಳೆಯರ ಶ್ರೇಯಸ್ಸಿಗಾಗಿ ಗಾಂಧೀಜಿ ಬಹಳ ಮಾಡಿದ್ದಾರೆ. ಇದೊಂದು ಅವರ ಶ್ರೇಷ್ಠ ಕೊಡುಗೆ. ಈ ವಿಷಯದಲ್ಲಿ ಕೆಲವರು ಭಾವಿಸುವಂತೆ ಅವರು ತಪ್ಪು ಮಾಡಲಿಲ್ಲ. ಮಹಿಳೆಯರನ್ನು ದೇಶಸೇವಾ ಕಾರ್ಯದಲ್ಲಿ ತೊಡಗಿಸಿದರು. ಆದರೆ ಎಚ್ಚರಿಕೆ ವಹಿಸಿದರು. ಯಾರು ತ್ಯಾಗಕ್ಕೆ ಸಿದ್ಧರಿದ್ದರೋ ಅವರನ್ನು ಮಾತ್ರ ಸೇವಾ ಕಾರ್ಯಕ್ಕೆ ತೆಗೆದುಕೊಳ್ಳುತ್ತಿದ್ದರು. ಬಲಾತ್ಕಾರವಾಗಿ ಸೇವಾಕಾರ್ಯ ದೀಕ್ಷೆ ಕೊಡಿಸುತ್ತಿದ್ದರೆಂಬುದು ತಪ್ಪು. ವಿನೋಬಾಜಿಯವರೂ ಅಷ್ಟೆ. ಎಲ್ಲವನ್ನೂ ಕೊಡು ಎನ್ನಲಿಲ್ಲ. ನಿನ್ನ ಮನಸ್ಸಿಗೆ ವಿರೋಧವಾಗಿ ಹೋಗಬೇಡವೆನ್ನುತ್ತಿದ್ದರು."

ಎಂದು ಹೇಳಿ ಭೂದಾನದ ವಿಷಯಕ್ಕೆ ತಮ್ಮ ನಿಕಟ ಸಂಬಂಧವನ್ನು ಹೇಳುವರು. "ವಾರ್ಧಾ ಪೌನಾರ್ ಆಶ್ರಮ ಜೀವನ ಪರಿಚಯವಾದ ಮೇಲೆ ವಿನೋಬಾರವರ ಜೊತೆ ಭೂದಾನದಲ್ಲಿ ಕಾಲು ನಡಿಗೆಯಲ್ಲಿ ಹೋಗಿದ್ದೇನೆ. ಅನಂತರಂಗಾಚಾರ್, ನಾರಣಪ್ಪ ಇವರ ಮುಖಂಡತ್ವದಲ್ಲಿ ಭೂದಾನ ಯಜ್ಞದಲ್ಲಿದ್ದೆ. ಅಂದಿನ ಕಾಲದಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಈ ಒಂದು ಪವಿತ್ರ ಕಾರ್ಯಕ್ಕೇ ಉತ್ತೇಜನವಿರಲಿಲ್ಲ. ಆಂಧ್ರದ ರಾಮಚಂದ್ರ ರೆಡ್ಡಿಯವರು ಮೊಟ್ಟಮೊದಲ ಭೂದಾನಿ. ಅನಂತರ ಕನ್ನಡ ರಾಜ್ಯದಲ್ಲಿ ಹೆಬ್ಬಾಳದ ಭೂಮಿಯನ್ನು ದಾನ ಮಾಡಿದುದು ನನ್ನ ಕುಟುಂಬ. ನಮ್ಮ ಯಜಮಾನರಿಗೆ ಯಾವ ಆಸ್ತಿಯನ್ನೂ ಇಡುವುದರಲ್ಲಿ ಆಸಕ್ತಿ ಇಲ್ಲ. ನನ್ನ ಮಗನ ಹುಟ್ಟಿದ ಹಬ್ಬದಲ್ಲಿ ಸ್ನೇಹಿತರೊಬ್ಬರು ಜ್ಞಾಪಕಾರ್ಥವಾಗಿ ಕೊಟ್ಟ ಭೂಮಿ ಹೆಬ್ಬಾಳದ ವ್ಯವಸಾಯ ಯೋಗ್ಯವಾದ ಭೂಮಿ. ಆದನ್ನು ವಿನೋಬಾರವರ ಭೂದಾನಯಜ್ಞ ಉದ್ದೇಶಕ್ಕಾಗಿ ನಾವು ಕೊಟ್ಟೆವು" ಎನ್ನುತ್ತಾರೆ ಸರಸ್ವತಿ.

೧೯೬೪ರಲ್ಲಿ ಡಾಕ್ಟರ್ ನಟರಾಜನ್ ದೈವಾಧೀನರಾದ ಮೇಲೆ ಸರಸ್ವತಿಯವರ ಆಸ್ತಿ ಮಗನೊಬ್ಬ, ಮಗಳೊಬ್ಬಳು ಅಷ್ಟೆ. ಒಂದು ಸಲ ತಮ್ಮ ಮಗಳು ಮಾಡಿದ ಸಾಧನೆಯನ್ನು ಸರಸ್ವತಿಯವರು ಮೆಚ್ಚಿಗೆಯಿಂದ ಹೇಳಿಕೊಳ್ಳುತ್ತಾರೆ. ಅಳಿಯಂದಿರಿಗೆ W. H. O. ಸಂಸ್ಥೆಯಲ್ಲಿ ಕೆಲಸ. ವಿಯಟ್ನಾಂನಲ್ಲಿ ಒಂದು ಸಲ ವಿಶ್ವಶಾಂತಿ ಸಭೆ ಸೇರಿದಾಗ ಸಭೆಯ ಕಾರ್ಯದರ್ಶಿಯೊಡನೆ ಮಾತಾಡುತ್ತಾ, ನನ್ನ ಮಗಳು ಭಾರತದ ಸಂದೇಶವಾದ ಅಹಿಂಸಾ ಮಾರ್ಗವನ್ನು ಮನಮುಟ್ಟುವಂತೆ ಹೇಳಿದಳಂತೆ. ಸತ್ಯ ಅಹಿಂಸೆಯ ಮಾರ್ಗದಿಂದ ಸ್ವಾತಂತ್ರ್ಯ ಗಳಿಸಿದ ಸಾಧನೆಯನ್ನು ವಿವರಿಸಲು ಆ ಕಾರ್ಯದರ್ಶಿಗೆ ಈ ವಿಷಯ ಹೊಸದಲ್ಲದಿದ್ದರೂ ಆ ವೇಳೆಯಲ್ಲಿ ಅದೆಂತಹ ಪ್ರಭಾವ ಬೀರಿತೋ ಗೊತ್ತಿಲ್ಲ. ವಿಷಪೂರಿತ ಬಾಂಬ್ ಒಂದನ್ನು ಉಪಯೋಗಿಸಲು ಸಜ್ಜಾಗುತ್ತಿದ್ದುದನ್ನು ತಡೆಹಿಡಿಯಲು ಆಜ್ಞಾಪಿಸಿ ಸಭೆಯಲ್ಲಿ ಭಾರತದ ಮಾದರಿಯನ್ನು ಎತ್ತಿ ಹೇಳಿದರಂತೆ... ನಾವು ಭಾರತೀಯರಾಗಿದ್ದು ಇಷ್ಟು ಮಾಡಿದರೆ ಸಾಕು. ಮಹಾತ್ಮರ ತತ್ವವನ್ನು ಪಾಲಿಸಿದಂತೆಯೇ ಆಗುತ್ತದೆ. ಆ ಅಹಿಂಸಾ ನೀತಿಗೇ ಆ ಶಕ್ತಿಯಿದೆ. ಎಲ್ಲರನ್ನೂ ಆಕರ್ಷಿಸುತ್ತದೆ. ಸರ್ವತ್ರ ಶಕ್ತಿ ಸಾಧನ ಅದು" ಎನ್ನುತ್ತಾರೆ.

"ಈ ಸರ್ವೋದಯ ಪಾತ್ರ ಮುಖ್ಯವಾದುದು. ಈಗ ನಮಗೇನಿದೆ ಕಷ್ಟ ? ಹೊರಗಿನವರ ತೊಂದರೆಯೇ ? ನಿರಾತಂಕವಾಗಿ ಸ್ವತಂತ್ರರಾಗಿದ್ದೇವೆ. ಆಫ್ರಿಕಾಕ್ಕೆ ಹೋಗಿ ನೋಡಿದರೆ ನಮ್ಮ ಜನಕ್ಕೆ ಗೊತ್ತಾಗುತ್ತದೆ ಕಷ್ಟವೇನೆಂಬುದು. ಈಗಲೂ ಪರಕೀಯರ ದಬ್ಬಾಳಿಕೆಯನ್ನು ಅವರು ಅನುಭವಿಸುತ್ತಿದ್ದಾರೆ. ನಮ್ಮ ನಮ್ಮಲ್ಲೇ ಏಕೆ ನಾವು ಜಗಳವಾಡುವುದು ?" ಎಂದು ಮಾತು ಮುಗಿಸುತ್ತಾರೆ ಸರಸ್ವತಿ ನಟರಾಜನ್.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

## ವಿದ್ಯಾಧರೆ

## ಎಮ್. ಆರ್. ಲಕ್ಷ್ಮಮ್ಮ

ಮೊಗ್ಗು ಬಿರಿದಂತೆ ಅರಳಿದ ನಗು ಕಾಣುವ ಸದಾ ಮಂದಹಾಸ ವದನ. ವಿದ್ಯೆಯಿಂದ ಪ್ರಜ್ವಲಿಸುವ ಸುಜ್ಞಾನ ಕಾಂತಿಯ ವರ್ಚಸ್ಸು. ಉನ್ನತ ಉದ್ಯೋಗ ಗಳಿಸಿಕೊಂಡ ಪ್ರತಿಷ್ಠಿತ ಕುಟುಂಬಕ್ಕೆ ಸೇರಿ, ವಿದ್ಯಾನಿಧಿ ಎನಿಸಿದ ಹೆಮ್ಮೆಯ ಸ್ಥಾನ. ಹಾಗಿದ್ದರೂ ಸರಳತೆಯೇ ವ್ಯಕ್ತಿತ್ವಕ್ಕೆ ಮತ್ತಷ್ಟು ಮೆರಗುಕೊಟ್ಟಿದೆ ಎನಿಸುವಂತೆ ನಿಸರ್ಗ ಸ್ವಭಾವ. ಸೋಮಾರಿತನವಾಗಲೀ, ವೃಥಾ ಕಾಲ ಕಳೆಯುವ ಹವ್ಯಾಸ ವಾಗಲೀ ಹತ್ತಿರ ಸುಳಿಯದೇ ಚಟಪಟ ಕೆಲಸಮಾಡುವ ಚುರುಕು ಬುದ್ಧಿ. ಎಪ್ಪತ್ತ ನೆಯ ವಯಸ್ಸಿನಲ್ಲೂ ಯುವತಿಯಂತೆ ಸೆಟೆದ ನಡೆ ನಡಿಗೆ ಹಾಕಿ ಕೆಲಸ ಸಾಧಿಸುವ ಬಳ್ಳಿಯಂತ ಮೈಕಟ್ಟಿನ ಆಕರ್ಷಣೀಯ ವ್ಯಕ್ತಿ. ಹೆಸರು ಲಕ್ಷ್ಮಿ. ಹೆಸರಿಗೆ ತಕ್ಕಂತೆ ಲಕ್ಷ್ಮಿಯ ಕಳೆ. ಸರಸ್ವತಿಯೂ ಒಲಿದ ವಿದ್ಯಾಧರೆ.

ಇಂತಹ ಮಹಿಳೆ ನಮ್ಮ ಸುತ್ತಮುತ್ತ ಓಡಾಡುತ್ತಿದ್ದಾಗ ವ್ಯಕ್ತಿ ಮಹತ್ವ ವನ್ನು ತಿಳಿಯದೆ, ಈಗ ನಮ್ಮನ್ನು ಬಿಟ್ಟು ಅಗಲಿದಾಗ ನೋವುಂಟಾಗಿ 'ಅವರನ್ನು ಮತ್ತೊಮ್ಮೆ ಭೇಟಿಯಾಗಬೇಕಾಯಿತ್ತು. ಅವರೊಡನೆ ಮತ್ತಷ್ಟು ಮಾತಾಡ ಬೇಕಾಗಿತ್ತು' ಎಂದು ಕೊರಗುತ್ತೇವೆ. ೭-೬-೧೯೮೮ರಂದು ನಮ್ಮನ್ನಗಲಿ ದೈವಾ ಧೀನರಾದ ಈ ಅಪೂರ್ವ ಮಹಿಳೆ ಶ್ರೀಮತಿ ಎಂ. ಆರ್. ಲಕ್ಷಮ್ಮ.

ಎಲ್ಲರಿಗೂ ಅವರು ಎಮ್ಮಾರ್ ಲಕ್ಷಮ್ಮ ಎಂದೇ ಪರಿಚಿತ ವ್ಯಕ್ತಿ. ಜನನ ೧೯೧೨. ಬಾಲ್ಯದಿಂದಲೂ ವಿದ್ಯಾಭಿಮಾನಿ. ಸುಮ್ಮನೆ ಓದಿದರೆ ಸಾಲದು, ರ್‍ಯಾಂಕ್ ಗಳಿಸಬೇಕೆಂಬ ಆಕಾಂಕ್ಷೆ. ಅದಕ್ಕೆ ತಕ್ಕ ಪ್ರಯತ್ನ. ಪ್ರತಿಫಲವಾಗಿ ಲಕ್ಷಮ್ಮ ಇಂಟರ್ ಮಿಡಿಯೆಟ್‌ನಲ್ಲಿ ಪ್ರಥಮ ರ್‍ಯಾಂಕ್ ವಿಜೇತೆ. ಸ್ನಾತಕೋತ್ತರ ಪರೀಕ್ಷೆ ಯಲ್ಲಿ ಚಿನ್ನದ ಪದಕ ಗಳಿಸಿದ ವಿದ್ಯಾರ್ಥಿನಿ. ಸ್ವಾತಂತ್ರ್ಯ ಸಂಗ್ರಾಮದ ಕಾರ್ಯ ದಲ್ಲಿ ಇಂತಹ ಜ್ಞಾನಶೀಲ ವಿದ್ಯಾರ್ಥಿನಿ ದೊರೆತಿದ್ದುದ ಕಾರ್ಯಕ್ರಮಕ್ಕೆ ಕಳೆ ಕೊಟ್ಟಂತಾಯಿತು.

ವಿದ್ಯಾವಂತ ಮಹಿಳೆಯರು ಬೇಕಾಗಿತ್ತು. ವಿದ್ಯಾವಂತರಾದವರು, ಅಪ್ಪಟ ಭಾರತೀಯ ಸಂಸ್ಕೃತಿಯಲ್ಲಿ ದೃಢನಂಬಿಕೆಯನ್ನು ಹೊಂದಿದ ಸುಸಂಸ್ಕೃತ ಮನೆತನ ದವರು ಹೋರಾಟದಲ್ಲಿ ಭಾಗವಹಿಸಿದರೆ ಎಷ್ಟರ ಮಟ್ಟಿಗೆ ಉತ್ಕೃಷ್ಟ ಸಾಧನೆ ಸಾಧ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ವಾದೀತೆಂದು ನಾವು ಊಹಿಸಬಹುದು. ಇಂತಹ ಕುಟುಂಬದ ಮಹಿಳೆಯರು ಬರ ಬೇಕೆಂದು ಆಶಿಸುತ್ತಿದ್ದ ದೇಶಭಕ್ತ ಮತ್ತು ಪತ್ರಿಕೋದ್ಯಮಿ ಶ್ರೀ ವಿ. ಎಸ್. ನಾರಾಯಣರಾವ್‌ರವರ ಗಮನಕ್ಕೆ ಬಂದುದು ಎಮ್ಮಾರ್ ಲಕ್ಷಮ್ಮನವರ ವ್ಯಕ್ತಿತ್ವ. ಈಕೆಯನ್ನು ಸಂಗ್ರಾಮದ ಕಾರ್ಯಕಲಾಪಗಳಿಗೆ ಸೇರಿಸಿಕೊಳ್ಳಬೇಕೆಂಬ ನಿರ್ಧಾರ ತೆಗೆದುಕೊಂಡದ್ದು ಲಕ್ಷಮ್ಮನವರ ಪತಿ ಮತ್ತು ಪಿತೃರ ಪ್ರೋತ್ಸಾಹದಿಂದಲೇ.

ವಿದ್ಯಾವತಿಯಾದ ಲಕ್ಷ್ಮಿ, "ಇಷ್ಟು ಓದಿದ್ದೇನೆ. ಕೆಲಸಕ್ಕೆ ಸೇರುತ್ತೇನೆ" ಎಂದು ತಂದೆಯವರ ಒಪ್ಪಿಗೆ ಕೇಳಿದಾಗ, "ಕೆಲಸಕ್ಕೆ ಸೇರಿ ಸಂಪಾದಿಸುವುದಕ್ಕಿಂತ ನೀನೊಬ್ಬ ಸಮಾಜ ಸೇವಕಿಯಾಗಬೇಕೆಂದು ನನ್ನಾಸೆ ಮಗಳೇ." ಎಂದರಂತೆ ಲಕ್ಷಮ್ಮನವರ ತಂದೆ. ಪತಿಯ ಅಪೇಕ್ಷೆಯೂ ಅದೇ ಆಗಿತ್ತು. ಪತಿ ಪಿತರ ಇಚ್ಛೆಯೇ ಬುನಾದಿ ಯಾಯಿತು, ಲಕ್ಷಮ್ಮನವರ ಸಾಧನೆಗೆ—ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಮತ್ತು ಸಮಾಜ ಉದ್ಧಾರ ಕರ್ತವ್ಯದಲ್ಲಿ.

೧೯೪೫ರಿಂದ ೧೯೪೭ ರವರೆಗಿನ ಅತ್ಯುಗ್ರವಾದ ಆಂದೋಲನದಲ್ಲಿ ತನ್ನನ್ನು ತೊಡಗಿಸಿಕೊಂಡು ಅತ್ಯಂತ ಉಪಯುಕ್ತವಾಗಿ ದೇಶಸೇವೆ ಮಾಡಿದ ಹೆಣ್ಣು ಎಮ್ಮಾರ್ ಲಕ್ಷಮ್ಮ. ತನ್ನ ವಿದ್ಯೆ, ಬುದ್ಧಿ, ಚುರುಕುತನ, ಚಟುವಟಿಕೆಯನ್ನೆಲ್ಲಾ ಭಾರತ ಮಾತೆಯ ಸೇವೆಗಾಗಿ ಮುಡುಪಾಗಿಟ್ಟು ತೃಪ್ತಿಪಟ್ಟ ಮಹಿಳೆ ಎಮ್ಮಾರ್ ಲಕ್ಷಮ್ಮ.

ಸಂಗ್ರಾಮಕ್ಕಾಗಿ ಕಾಲಿಟ್ಟ ಕೂಡಲೇ ಉನ್ನತಸ್ಥಾನ ಕಾದಿಟ್ಟಿತ್ತೋ ಎನ್ನುವಂತೆ ೧೯೪೫ರಲ್ಲಿಯೇ ಲಕ್ಷಮ್ಮ ಮೈಸೂರು ರಾಜ್ಯದ ವಿಧಾನ ಪರಿಷತ್ತಿಗೆ ಅವಿರೋಧವಾಗಿ ಆಯ್ಕೆಯಾದರು. ರಾಜಕೀಯವಾಗಿ ಅವಶ್ಯಕವಾಗಿದ್ದ ಕಾರ್ಯಗಳ ಜೊತೆಗೆ ಲಕ್ಷಮ್ಮನವರು ಸಾಹಿತ್ಯವನ್ನೂ ಬೆಳೆಸಿಕೊಂಡರು. ಬರವಣಿಗೆ ಮತ್ತು ಪ್ರಸಾರದ ಕಲಾಪಗಳನ್ನು ಚುರುಕುಗೊಳಿಸಿದರು. ವಿದ್ಯಾರ್ಥಿ ದೆಸೆಯಿಂದ ಬರೆದಿದ್ದೆಲ್ಲಾ ಬಹು ಮಾನ ಗಳಿಸುವಂತಹ ಬರವಣಿಗೆ ಲಕ್ಷಮ್ಮನವರದ್ದು. ಕಾಲೇಜಿನ ವಿದ್ಯಾರ್ಥಿನಿ ಯಾಗಿದ್ದಾಗ ಓರಿಯಂಟಲ್ ಸಮ್ಮೇಳನಗಳಿಗೆ ಲೇಖನಗಳನ್ನು ಸಿದ್ಧಪಡಿಸುತ್ತಿದ್ದರು. ಏಕಾಂತ ನಾಟಕ ಸ್ಪರ್ಧೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಬಹುಮಾನ ಪಡೆದಿತ್ತು ಇವರ ನಾಟಕ. ಹೊಸ ಸಾಹಿತ್ಯ ಶೀರ್ಷಿಕೆಯಲ್ಲಿ ಲಕ್ಷಮ್ಮನವರಿಗೆ ವೆಂಕಾಜಿರಾವ್ ರವರ ಬಹುಮಾನ ವಿಾಸಲು. ಆಕಾಶವಾಣಿಗೆ ಸಾಕಷ್ಟು ನಾಟಕ, ರೂಪಕಗಳನ್ನು ಬರೆದಿದ್ದ ಲಕ್ಷಮ್ಮನವರ ಲೇಖನಗಳೆಂದರೆ ಎಲ್ಲರಿಗೂ ಪ್ರಿಯ. ಸ್ವಾತಂತ್ರ್ಯ ಸಂಗ್ರಾಮ ಸಮಯದ ಇವರ ಲೇಖನಗಳನ್ನು ಜನರು ಹಾತೊರೆದು ಕಾದು ಓದುತ್ತಿದ್ದರು.

ಮೂರು ವರ್ಷಕಾಲ "ಬೆಳಕು" ಎಂಬ ಪತ್ರಿಕೆಗೆ ಸಂಪಾದಕಿಯಾಗಿದ್ದರು. ಅವರ ಅಚ್ಚುಮೆಚ್ಚಿನ ಪತ್ರಿಕೆ "ಸೋದರಿ", ಕನ್ನಡ ಭಾಷೆಯಲ್ಲಿ ಮಹಿಳೆಯರಿಗಾಗಿ. ಮಹಿಳೆಯರಿಂದಲೇ ನಡೆಸುತ್ತಿದ್ದ ಪ್ರಥಮ ಮಹಿಳಾ ವಾರಪತ್ರಿಕೆ "ಸೋದರಿ".

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಸೋದರಿಯ ಸದುದ್ದೇಶ ಸಾಧನೆ ಸುಮಾರು ಹತ್ತು ವರ್ಷಗಳ ಕಾಲ ಸಾರ್ಥಕವಾಗಿ ನಡೆಯಿತು. ಲಕ್ಷಮ್ಮನವರೇ ಈ ಪತ್ರಿಕೆಯ ಸಂಪಾದಕರು, ಮುದ್ರಕರು ಮತ್ತು ಪ್ರಕಾಶಕರು. ಲಕ್ಷಮ್ಮನವರ ಸೋದರೀ ಪತ್ರಿಕೆ ಎಲ್ಲೆಲ್ಲೂ ಜನ ಮೆಚ್ಚುಗೆ ಪಡೆಯಿತು. ಇದರ ಜೊತೆಗೆ ಇತರ ಸಮಾಚಾರ ಪತ್ರಿಕೆಗಳಲ್ಲೂ ಲಕ್ಷಮ್ಮನವರ ಲೇಖನಗಳು ಪ್ರಕಟವಾಗುತ್ತಿದ್ದವು. 'ಸಾಧ್ವಿ' ಮತ್ತು 'ಪ್ರಬುದ್ಧ ಕರ್ನಾಟಕ' ಲಕ್ಷಮ್ಮನವರ ಲೇಖನಗಳನ್ನು ಬಿಡುತ್ತಿರಲಿಲ್ಲ.

ಸರ್ಕಾರೀ ಕೆಲಸಕ್ಕೆ ಸೇರಿದ ಲಕ್ಷಮ್ಮನವರ ಪತಿಯು ಸರ್ವೇ ಮಾಡುವ ಸಲುವಾಗಿ ಬಾಬಾಬುಡನ್ ಬೆಟ್ಟಕ್ಕೆ ಸರ್ಕಾರದಿಂದ ನಿಯಮಿಸಲ್ಪಟ್ಟಾಗ, ಉತ್ಸಾಹದಿಂದ ಲಕ್ಷಮ್ಮ ತಾನೂ ಪತಿಯೊಂದಿಗೆ ಆ ಸ್ಥಳಗಳ ಅಭ್ಯಾಸ ಮಾಡಲು ಹೋಗಿದ್ದರು. ತಮ್ಮ ಸ್ನಾತಕೋತ್ತರ ಪದವಿಗೆ ಲಕ್ಷಮ್ಮ ಆರಿಸಿಕೊಂಡಿದ್ದ ವಿಷಯ ಇತಿಹಾಸ. ಆದ್ದರಿಂದ ಶಾಸನಗಳ ಮೇಲೆ ಬಹಳ ವ್ಯಾಮೋಹ. ಹೋದ ಕಡೆ ಶಾಸನಗಳನ್ನು ಆರಿಸಿ, ಶೋಧಿಸಿ, ಅವುಗಳ ಬಗ್ಗೆ ದಾಖಲೆ ಮಾಡುವುದು ಲಕ್ಷಮ್ಮನವರಿಗೆ ಪ್ರಿಯವಾದ ಕೆಲಸ. ಸುಮಾರು ಮೂವತ್ತು ಶಾಸನಗಳನ್ನು ಸಂಶೋಧನೆ ಮಾಡಿ ಸರ್ಕಾರಕ್ಕೆ ತಮ್ಮ ಕೊಡುಗೆಯಾಗಿ ಕೊಟ್ಟಿದ್ದಾರೆ. ಇವರ ಈ ಅಮೂಲ್ಯವಾದ ಅಧ್ಯಯನ, ಇತಿಹಾಸ ಜ್ಞಾನ ಭಂಡಾರಕ್ಕೆ ಒಂದು ನಿಧಿಯಾಗಿದೆ. ಹಾಗೆಯೇ, ಜಾನಪದ ಗೀತೆಗಳನ್ನು ಸಂಗ್ರಹಿಸುವುದು ಲಕ್ಷಮ್ಮನವರಿಗೆ ಬಲು ಇಷ್ಟವಾದ ಕೆಲಸ. 'ಕೊಂಕಮ್ಮನ ಪದಗಳು' ಎಂಬ ಜಾನಪದ ಹಾಡುಗಳ ವಿಮರ್ಶೆಯನ್ನು ಬರೆದಿದ್ದಾರೆ ಇದರಿಂದ ಸಾಮಾನ್ಯ ಜನರ ಸ್ಥಿತಿಯನ್ನು ಅರಿತು ಇತಿಹಾಸ ರೂಪಿಸುವ ಇವರ ಚತುರತೆ ತಿಳಿಯುತ್ತದೆ.

ಮೈಸೂರು ಮಹಾರಾಜಾ ಕಾಲೇಜಿನ ವಿದ್ಯಾರ್ಥಿನಿಯಾಗಿದ್ದಾಗಲೇ ಲಕ್ಷಮ್ಮನವರಿಗೆ ಸಾಮಾನ್ಯ ಜನರಲ್ಲಿ ಸಾಕ್ಷರತೆಯನ್ನು ಉತ್ತೇಜಿಸುವ ಹಂಬಲವಿತ್ತು. ನಾ. ಕಸ್ತೂರಿಯವರ ಮುಖಂಡತ್ವದಲ್ಲಿ ಹೊರಟ ವಿದ್ಯಾವಂತ ತಂಡದಲ್ಲಿ ಹಳ್ಳಿಹಳ್ಳಿಗೆ ಹೋಗಿ ಸಾಕ್ಷರತೆ ಆಂದೋಲನದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಓದು ಬರಹ ಕಲಿತ ಮಹಿಳೆಯರನ್ನು ಕಂಡರೆ ಲಕ್ಷಮ್ಮನವರಿಗೆ ಬಹಳ ಸಂತೋಷ.

ಮಹಿಳೆಯರನ್ನು ದೇಶಸೇವೆಗೆ ಬರುವಂತೆ ಮಾಡಲು ಮಹಿಳಾ ಮಂಡಳಗಳ ಸ್ಥಾಪನೆ ಮುಖ್ಯವೆಂದು ತಿಳಿದ ಲಕ್ಷಮ್ಮನವರು ೧೯೪೬ರಲ್ಲಿ ಮೈಸೂರು ಮತ್ತು ಬೆಂಗಳೂರಿನಲ್ಲಿ ಮಹಿಳಾ ಮಂಡಳಿಗಳನ್ನು ಸ್ಥಾಪಿಸಿದರು. ಪ್ರತಿಯೊಂದು ಮಹಿಳಾ ಸಂಘ ಸಂಸ್ಥೆಯಲ್ಲೂ ಲಕ್ಷಮ್ಮನವರ ಪಾತ್ರ ಅಗತ್ಯವಾಯಿತು. ಎಮ್ಮಾರ್ ಲಕ್ಷಮ್ಮ ಕೈಹಾಕಿದ ಕೆಲಸ ಊರ್ಜಿತ, ಕಾಲಿಟ್ಟ ಜಾಗ ಊರ್ಜಿತ—ಎಂಬ ಮಾತು ಎಲ್ಲೆಲ್ಲೂ ಧ್ವನಿಗೈದಿತು.

ಸಂಘ, ಸಮಾಜ ಕಟ್ಟುವುದರಲ್ಲಿ ಲಕ್ಷಮ್ಮ ಚತುರೆ. ಶ್ರೀಮಂತ ವರ್ಗದವರನ್ನು ಸೇರಿಸುವುದಕ್ಕಿಂತ ಹೆಚ್ಚಾಗಿ, ಲಕ್ಷಮ್ಮ ಕೆಲಸ ಮಾಡುತ್ತಿದ್ದುದು ಸಾಮಾನ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಜನರ ಮಧ್ಯೆ. ಒಂದು ಕೊಳಚೆ ಪ್ರದೇಶವನ್ನು ಆರಿಸಿಕೊಂಡು ಅಲ್ಲಿ ಮಹಿಳೆಯರಿಗೆ ನೈರ್ಮಲ್ಯ. ಸಾಕ್ಷರತೆಯನ್ನು ಕಲಿಸಿಕೊಟ್ಟು, ಮೊದಲು ಭಜನೆಯ ಗುಂಪಾಗಿ ಸೇರಿಸಿ ಕ್ರಮೇಣ ನೋಂದಣಿಯಾದ ಸಂಸ್ಥೆಯಾಗುವಂತೆ ಹುಟ್ಟು ಹಾಕುತ್ತಿದ್ದರು. ಬೆಂಗಳೂರಿನ ನರಸಿಂಹರಾಜಾ ಕಾಲೋನಿಯ ಮಹಿಳಾ ಮಂಡಲ ಸ್ಥಾಪನೆಯಾಗಿದ್ದು ಈ ರೀತಿಯಲ್ಲೇ,

ಚಳುವಳಿಗೆ ಪೂರಕವಾಗಿ ರಾಜ್ಯದಾದ್ಯಂತ ಅನೇಕ ಮಹಿಳಾ ಸಂಸ್ಥೆಗಳಾಗುತ್ತಿದ್ದ ಪರ್ವಕಾಲ ಅದು. ಕುಮಟಾ ಮಹಿಳಾ ಮಂಡಳ, ಮಂಗಳೂರು ಮಹಿಳಾ ಸಭಾ, ಗದಗ ಮಹಿಳಾ ಮಂಡಳ, ಹುಬ್ಬಳ್ಳಿಯ ಭಗಿನೀ ಮಂಡಳ, ಹಾನಗಲ್‌ನ ರಾಷ್ಟ್ರೀಯ ಕನ್ಯಾ ಶಾಲೆ, ಧಾರವಾಡದ ಮಹಿಳಾ ಸಮಾಜ, ಹಾವೇರಿಯ ಭಗಿನೀ ಮಂಡಳ–ಇವು ಮಾರ್ಗದರ್ಶನ ಸಂಘಗಳಾಗಿ ಕೆಲಸ ಮಾಡಿದವು.

೧೯೨೪ರಲ್ಲೇ ಬೆಳಗಾವಿ ಕಾಂಗ್ರೆಸ್ಸಿಗೆ ಪ್ರಪ್ರಥಮವಾಗಿ ಸುಮಾರು ಒಂದುನೂರ ಐವತ್ತು ಜನ ಸೇವಾದಳದ ಸೇವಿಕೆಯರು ಬಂದುದರಿಂದ ಕರ್ನಾಟಕದ ಸ್ತ್ರೀಯರಿಗೆ ಸಾರ್ವಜನಿಕ ರಂಗವನ್ನು ಪ್ರವೇಶಿಸಲು ಅವಕಾಶವಾಯಿತು. ಅಪಾಯಕರವಾದ ಚಟುವಟಿಕೆಗಳಲ್ಲಿ ಅಸಂಖ್ಯಾಕ ಮಹಿಳೆಯರು ಪಾಲುಗೊಂಡರು.

ಸಾರಾಯಿ ಅಂಗಡಿ ಪಿಕೆಟಿಂಗ್ ಮಾಡುವುದು, ಕಂದಾಯ ನಿರಾಕರಣೆ ಚಳವಳಿಯಲ್ಲಿ ಜಪ್ತಿಯಾದ ಸತ್ಯಾಗ್ರಹಿಗಳ ವಸ್ತುಗಳನ್ನೂ, ದನಕರುಗಳನ್ನೂ ಕೊಂಡೊಯ್ದವರ ಮನೆಗಳ ಮುಂದೆ ಸತ್ಯಾಗ್ರಹ ಹೂಡುವುದು, ಕೈಗೂಸುಗಳನ್ನೂ ಕಟ್ಟಿಕೊಂಡು ಸೆರೆ ಮನೆಗೆ ಹೋಗುವುದು–ಇಂತಹ ಸಮಯದಲ್ಲಿ ಮಹಿಳೆಯರ ಸಾಹಸ ಮತ್ತು ಅವರು ಧೈರ್ಯದಿಂದ ಸಂಕಟ ಪರಂಪರೆಗಳನ್ನು ಎದುರಿಸಿದ ಪ್ರಸಂಗಗಳು ಚಿರಸ್ಮರಣೀಯ. ಧ್ವಜಾರೋಹಣ ಕಾರ್ಯಕ್ರಮದಲ್ಲಿ ಮಹಿಳಾ ಕಾರ್ಯಕರ್ತೆಯರ ಉತ್ಸಾಹವೇ ಪ್ರಭಾವ ಬೀರಿತ್ತೆಂದು ಶ್ರೀ ಟಿ. ಸಿದ್ದಲಿಂಗಯ್ಯ ಹೇಳುತ್ತಾರೆ. ರಾಷ್ಟ್ರೀಯ ಶಿಕ್ಷಣಾ ರಂಭವಾದ ಮೇಲೆ ಭಾರತೀಯ ಮಹಿಳೆಯರು ಎಚ್ಚೆತ್ತುಕೊಂಡು ಹೆಚ್ಚುಹೆಚ್ಚಾಗಿ ಮುಂದೆ ನಡೆದ ಎಲ್ಲಾ ಚಳವಳಿಯಲ್ಲೂ ಭಾಗವಹಿಸಿದರು. ಶಾಲಾ ಕಾಲೇಜುಗಳ ತ್ಯಾಗ, ನೌಕರಿತ್ಯಾಗ, ಕಾನೂನು ಭಂಗ. ಕ್ವಿಟ್ ಇಂಡಿಯಾ ಚಳವಳಿ, ಮೈಸೂರು ಚಲೋ–ಈ ಎಲ್ಲಾ ಆಂದೋಳನದಲ್ಲೂ ಸ್ತ್ರೀ ಹೋರಾಟಗಾರರು ತಮ್ಮ ತ್ಯಾಗ, ತಪಸ್ಸು, ಪರಿಶ್ರಮ, ಧ್ಯೇಯ ನಿಷ್ಠೆಯನ್ನು ತೋರಿಸಿದ್ದಾರೆ.

ಇಂತಹ ಸಿದ್ಧತೆಗಾಗಿಯೇ ಮಹಿಳಾ ಮಂಡಲಗಳ ಸ್ಥಾಪನೆಯಾದುದು. ಎಮ್ಮಾರ್ ಲಕ್ಷಮ್ಮನವರ ಸಂಘಟನಾ ಶಕ್ತಿಯನ್ನು ಕಂಡು ಬ್ರಿಟಿಷ್ ಸರ್ಕಾರ ಇವರ ಮೇಲೆ ಕಣ್ಣಿಟ್ಟಿತು. ಪರಕೀಯ ಆಳ್ವಿಕೆಯನ್ನು ಧಿಕ್ಕರಿಸಿದ ಇವರ ಬಿರುಸಾದ ಲೇಖನ ಗಳು ಬ್ರಿಟಿಷ್ ಸರ್ಕಾರಕ್ಕೆ ಬರೆ ಎಳೆದಂತಾಯಿತು. ಇದರ ಪರಿಣಾಮವಾಗಿ ಲಕ್ಷಮ್ಮ ನವರಿಗೂ, ಕಾರಾಗೃಹವಾಸ ತಪ್ಪಲಿಲ್ಲ.

ಹನ್ನೊಂದು ವರ್ಷ ವಯಸ್ಸಿನಲ್ಲೇ ಮದುವೆಯಾದ ಲಕ್ಷಮ್ಮನವರು ದೊಡ್ಡ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಸಂಸಾರಿಯಾಗಿದ್ದರು. ಜೈಲಿಗೆ ಹೋಗುವಾಗ ಹತ್ತು ತಿಂಗಳ ಮಗುವಿನ ತಾಯಿ. ಎಳೆಗೂಸನ್ನು ಮನೆಯಲ್ಲೇ ಬಿಟ್ಟು ಮೂರು ತಿಂಗಳ ಕಾರಾಗೃಹವಾಸವನ್ನನುಭವಿಸಿದರು. ಮಗುವನ್ನು ತೊರೆದ ನೋವಿನಲ್ಲೂ ಸೆರೆಮನೆಯುವಾಸ ಅವರಿಗೆ ಒಂದು ವಿಧವಾದ ಆತ್ಮತೃಪ್ತಿಕೊಟ್ಟಿತು. ದೇಶ ಸೇವೆಗಾಗಿ ಸ್ವಾರ್ಥ ತ್ಯಾಗದ ಹಿರಿಮೆಯನ್ನು ಕಂಡುಕೊಂಡರು.

ಜನಸಂದಣಿಯನ್ನು ಉದ್ದೇಶಿಸಿ ಮಾತಾಡಲು ಮುಖಂಡತ್ವ ವಹಿಸಬೇಕಾಯಿತು. ಸ್ಫೂರ್ತಿ ತುಂಬುವ ಭಾಷಣಗಳ ವ್ಯವಸ್ಥೆ ಮಾಡುತ್ತಿದ್ದುದು ರಾತ್ರಿ ಹನ್ನೊಂದು ಗಂಟೆಯ ವೇಳೆಯಲ್ಲಿ. ರಾತ್ರಿ ವೇಳೆಯ ಮತ್ತೊಂದು ಮುಖ್ಯ ಕೆಲಸವೆಂದರೆ, ಮುಖಂಡರ ಮನೆಗಳಿಗೆ ಪತ್ರಗಳನ್ನೂ, ಸತ್ಯಾಗ್ರಹದ ಕಾರ್ಯಕ್ರಮಗಳಿದ್ದ ಕಾಗದಗಳನ್ನೂ ಗುಪ್ತವಾಗಿ ತಲಪಿಸುವುದು.

ಮಧ್ಯರಾತ್ರಿಯಲ್ಲಿ ಈ ಕೆಲಸವನ್ನು ಧೈರ್ಯದಿಂದ ಮಹಿಳೆಯರೇ ಮಾಡುತ್ತಿದ್ದರು. ಗುಪ್ತ ಕಾಗದ ಪತ್ರಗಳು ಪೋಲೀಸರ ಕೈಗೆ ಸೇರದಂತೆ ಕಾಪಾಡಿಕೊಂಡು ಬಂದು ಕಾರ್ಯಕರ್ತರ ಕೈಗೆ ತಲುಪಿಸುತ್ತಿದ್ದರು. ಆ ಸರಿರಾತ್ರಿಯಲ್ಲಿ ಬೀದಿಯಲ್ಲಿ ತಿರುಗಾಡುವುದು ತಮ್ಮ ರಕ್ಷಣೆಗೇ ಬಾಧಕವೆಂದು ಗೊತ್ತು. ಜೊತೆಗೆ ಗುಪ್ತ ಕಾಗದ ಪತ್ರಗಳ ವ್ಯವಹಾರ ಬೇರೆ. ಪೋಲೀಸಿನವರ ಕೈಗೆ ಸಿಕ್ಕಿ ಬೀಳುತ್ತೇವೆಂಬ ಶಂಕೆಯಾಗಲೀ. ಭಯವಾಗಲೀ, ಈ ಕರ್ತವ್ಯನಿರತ ಮಹಿಳೆಯರ ಮನಸ್ಸನ್ನು ಚಂಚಲಗೊಳಿಸಲಿಲ್ಲ. ಗುರಿಸಾಧನೆಯೇ ಇವರ ಮುಖ್ಯ ಧ್ಯೇಯವಾಗಿತ್ತು. ಕೆಲಸದ ಸಂಯೋಜನೆ. ಕರಪತ್ರಗಳ ಪ್ರಕಟಣೆ—ಇಂತಹ ಚಟುವಟಿಕೆಗಳು ರಾತ್ರಿ ವೇಳೆಯಲ್ಲೇ ಸಂದಿಗೊಂದಿ ಮನೆಗಳಲ್ಲಿ ಯಾರ ಕಣ್ಣಿಗೂ ಕಾಣದಂತೆ ನಡೆಯುತ್ತಿದ್ದವು. ಅಂತಹ ಕೇಂದ್ರದ ಮನೆಗಳಿಗೆ ಸಮಾಚಾರ ತಲುಪಿಸುವ ಜವಾಬ್ದಾರಿಯನ್ನು ಮಹಿಳೆಯರು ವಹಿಸುತ್ತಿದ್ದರು.

ಏಳು ಮಕ್ಕಳ ತಾಯಿಯಾಗಿದ್ದ ಲಕ್ಷಮ್ಮ ಕೆಲವು ವೇಳೆ ಪತ್ರಗಳನ್ನು ಗುಪ್ತವಾಗಿ ತಲುಪಿಸುವ ಕೆಲಸಕ್ಕೆ ತಮ್ಮ ಹೆಣ್ಣುಮಕ್ಕಳನ್ನೇ ಕಳುಹಿಸುತ್ತಿದ್ದರು.

"ನಮ್ಮ ತಾಯಿಯನ್ನು ನಾವು ಅನುಕರಿಸುತ್ತಿದ್ದೆವು. ಅವರು ಮಾಡುತ್ತಿದ್ದ ಕೆಲಸಗಳಲ್ಲಿ ನಮಗೂ ಆಸಕ್ತಿ ಇತ್ತು. ಅವರು ನಮ್ಮನ್ನೂ ದೇಶಸೇವೆಯ ಕಾರ್ಯಗಳಲ್ಲಿ ತೊಡಗಿಸುತ್ತಿದ್ದರು. ಆದರೆ ಅವರು ಜೈಲಿಗೆ ಹೋದಾಗ ಮಾತ್ರ ನಮ್ಮಿಂದ ತಾಯಿಯ ಅಗಲಿಕೆಯನ್ನು ಸಹಿಸಲಾಗುತ್ತಿರಲಿಲ್ಲ" ಎನ್ನುತ್ತಾರೆ ಲಕ್ಷಮ್ಮನವರ ಹಿರಿಯ ಮಗಳು ಶ್ರೀಮತಿ ಶಾಂತಿ ದೇಶಪಾಂಡೆ. ಅಳಿಯಂದಿರಾದ ದೇಶಪಾಂಡೆಯವರು ಹೇಳುವಂತೆ, ಲಕ್ಷಮ್ಮನಂತಹ ವ್ಯಕ್ತಿ ಹುಡುಕಿದರೂ ಸಿಕ್ಕಲಾರರು.

"ನಮ್ಮ ತಾಯಿಯವರ ಮತ್ತೊಂದು ಸ್ವಭಾವ ನಮಗೆ ಬಹಳ ಹಿಂಸೆಯಾಗುತ್ತಿತ್ತು. ರೈಲಿನಲ್ಲಿ ಪ್ರಯಾಣ ಮಾಡುವಾಗ ಅವರು ಮೂರನೇ ದರ್ಜೆಯ ಡಬ್ಬಿಯಲ್ಲೇ ಕುಳಿತು ಕಿಕ್ಕಿರಿದ ಜನರ ಮಧ್ಯದಲ್ಲೇ ಇದ್ದು ಪ್ರಯಾಣ ಮಾಡುತ್ತಿದ್ದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



'ನಿನಗೇನಮ್ಮ ಕಮ್ಮಿ, ಫಸ್ಟ್‌ಕ್ಲಾಸ್‌ನಲ್ಲಿ ಪ್ರಯಾಣ ಮಾಡಬಾರದೇ' ಎಂದು ನಾವು ಕೇಳಿದರೆ, 'ಫಸ್ಟ್‌ಕ್ಲಾಸ್ ಪ್ರಯಾಣ ನನಗೆ ಹಿಂಸೆಯಾಗುತ್ತದೆ' ಎನ್ನುತ್ತಿದ್ದರು. ಬೆಂಗಳೂರಿನಂತಹ ಮಹಾನಗರದಲ್ಲಿ ಎಲ್ಲೆಲ್ಲೂ ಆಟೋರಿಕ್ಷಾ, ಟ್ಯಾಕ್ಸಿ ವಾಹನಗಳ ಸೌಲಭ್ಯವಿದ್ದರೂ ಆದಷ್ಟೂ ನಡೆದೇ ಹೋಗುವ ಪದ್ಧತಿ ಅವರದ್ದು. 'ನೀನು ದೊಡ್ಡ ಮನುಷ್ಯನ ಮಗಳು, ಶ್ರೀಮಂತನ ಪತ್ನಿ' ಎಂದು ನಾವು ಹೇಳಿದರೆ, ಅಂತಹ ಮಾತಿಗೆ ಅವರು ಕಿವಿಗೊಡುತ್ತಿರಲಿಲ್ಲ" ಎಂದು ಶಾಂತಿ ತಮ್ಮ ತಾಯಿಯ ಸ್ವಭಾವ ವನ್ನು ನೆನೆದು, 'ಯಾವಾಗಲೂ ಕಷ್ಟಪಡುವುದೇ ಆಯಿತು ಅವರ ಜಾಯಮಾನ' ಎನ್ನುತ್ತಿದ್ದರು.

ಇಲ್ಲಿ ನಾವು ಗ್ರಹಿಸಬೇಕಾದುದು ಅವರ ಸರಳ ಜೀವನ. ಜನರ ಮಧ್ಯೆ ಬೆರೆತು ಸಂತೋಷಪಡುವ ಮನೋಪ್ರವೃತ್ತಿ, ಸಾಲ್ಯತೆ. (ಎಲ್ಲರಂತೆ ತಾನೂ ಇದ್ದು ಶ್ರಮಿ ಸುವ ತ್ಯಾಗಶೀಲತೆ.) 'ಇಡೀ ಭಾರತವೇ ಒಂದು ಕುಟುಂಬ. ಆ ಕುಟುಂಬಕ್ಕೆ ಸೇರಿದ ಹೆಣ್ಣು ನಾನು' ಎನ್ನುವ ದೇಶಭಕ್ತೆ. ಶ್ರೀಮಂತ ಕುಟುಂಬದ ಹೆಣ್ಣು ಇಂತಹ ಸರಳತೆಯನ್ನು ಒಡಂಬಡಿಸಿಕೊಂಡದ್ದು ಚಿಕ್ಕ ವಯಸ್ಸಿನಿಂದಲೇ. ಮದುವೆ ಯಾಗಿ ಪ್ರಸಿದ್ಧ ಇಂಜಿನಿಯರ್‌ರ ಪತ್ನಿಯಾದ ನಂತರವೂ ಲಕ್ಷಮ್ಮ ತಮ್ಮ ಸರಳತೆ ಯನ್ನು ಹೆಚ್ಚಿಸಿಕೊಂಡರೇ ಹೊರತು ಸುಖದ ಸುಪ್ಪತ್ತಿಗೆಯಲ್ಲಿ ಮೈಚಾಚಿದವರಲ್ಲ.

ಭಾರತ ಸ್ವತಂತ್ರ ಗಳಿಸಿದ ನಂತರ, ಲಕ್ಷಮ್ಮನವರು ೧೯೫೨ರಲ್ಲಿ ಶಾಸನಸಭೆಗೆ ಚುನಾಯಿತರಾದರು. ೧೯೫೮ರ ಮತ್ತು ೧೯೬೪ರ ಚುನಾವಣೆಯಲ್ಲಿ ಪದವೀಧರರ ಕ್ಷೇತ್ರದಿಂದ ಅತ್ಯಂತ ಹೆಚ್ಚಿನ ಮತಗಳಿಂದ ಸ್ಥಾನ ಗಳಿಸಿದರು. ಮೈಸೂರು ಪ್ರದೇಶ ಕಾಂಗ್ರೆಸ್ ಅಧಿಕಾರ ಪ್ರಯುಕ್ತ ಸದಸ್ಯೆಯಾಗಿ ನಾಲ್ಕು ವರ್ಷ ಕೆಲಸ ಮಾಡಿದರು. ಭಾರತೀಯ ಸರ್ಕಾರದ ಅತಿಥಿಯಾಗಿ ಅಮೆರಿಕದಲ್ಲಿ ಸಾಮಾಜಿಕ ಸ್ಥಿತಿಯನ್ನು ಅಭ್ಯಸಿ ಸಲು ಅಮೆರಿಕಾದ ಆಹ್ವಾನವನ್ನು ಒಪ್ಪಿಕೊಂಡು ೧೯೫೪ರಲ್ಲಿ ವಿದೇಶೀ ಪ್ರಯಾಣ ಕೈಗೊಂಡರು. ಅಮೆರಿಕಾದಲ್ಲಿ ಸಾಮಾನ್ಯ ಜನರ ಜೊತೆ ಇದ್ದು, ಅವರ ಮನೆಗಳಲ್ಲೇ ವಾಸಮಾಡಿ, ಅವರ ಸ್ಥಿತಿಯನ್ನು ಅಭ್ಯಾಸ ಮಾಡಿ, ಜನಸಾಮಾನ್ಯರ ಜೀವನವನ್ನು ಅನುಭವದಿಂದ ತಿಳಿದುಕೊಂಡು ಬಂದರು. ೧೯೬೨ ರಿಂದ ೬೪ರ ವರೆಗೆ ರಾಜ್ಯದ ಶಾಸನಸಭೆಗೆ ಡೆಪ್ಯುಟಿ ಛೇರ್‌ಮನ್ ಆಗಿದ್ದರು. ಲೇಡಿ ಲೋಕಸುಂದರಿ ರಾಮನ್ ರವರ ಮುಖಂಡತ್ವದಲ್ಲಿ ಸ್ಥಾಪನೆಯಾದ "ಮಕ್ಕಳ ಕ್ಷೇಮಾಭಿವೃದ್ಧಿ" ಸಮಿತಿಯ ಮೂಲ ಸ್ಥಾಪಕರಲ್ಲಿ ಲಕ್ಷಮ್ಮನವರೂ ಒಬ್ಬರು. ಗರ್ಲ್‌ಗೈಡ್ ಶಿಬಿರಗಳ ವ್ಯವಸ್ಥೆ ಮಾಡುವುದೆಂದರೆ ಲಕ್ಷಮ್ಮನವರಿಗೆ ಬಹಳ ಉತ್ಸಾಹ ಮತ್ತು ಆಸಕ್ತಿ. ಇಪ್ಪತ್ತು ವರ್ಷಗಳ ಕಾಲ ಅನವರತವಾಗಿ ಗರ್ಲ್‌ಗೈಡ್ ಕಮಿಷನರ್ ಆಗಿ ಹೆಣ್ಣುಮಕ್ಕಳಿಗೆ ಸಮಾಜಸೇವಾ ಜ್ಞಾನವನ್ನು ಮೂಡಿಸಿದರು.

೧೯೭೦ರಲ್ಲಿ ರಾಜಕೀಯ ರಂಗದಿಂದ ನಿವೃತ್ತರಾಗಿ ಸಮಾಜಸೇವೆಯಲ್ಲಿ ತಮ್ಮ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಉಳಿದ ಜೀವನವನ್ನು ನಡೆಸಲು ನಿರ್ಧರಿಸಿದರು. ಇವರ ಸಮಾಜ ಸೇವಾ ರಂಗವೂ ಬಹಳ ವಿಶಾಲವಾದುದು. ರಾಜ್ಯದ ಯುವ ಸೇವಾ ಸಂಸ್ಥೆಯ ಸದಸ್ಯೆಯಾಗಿದ್ದರು. ರಾಜ್ಯದ ಸಮಾಜ ಕಲ್ಯಾಣ ಸಲಹಾ ಮಂಡಲಿಯ ಛೇರ್‌ಮನ್ ಆಗಿದ್ದರು. ಎರಡು ವರ್ಷ ಮಿಥಿಕ್ ಸೊಸೈಟಿಯ ಉಪಾಧ್ಯಕ್ಷೆಯಾಗಿದ್ದರು. ಭಾರತೀಯ ವಿದ್ಯಾಭವನ ರಾಜ್ಯ ವಿಭಾಗದ ಸಮಿತಿಗೆ ಸದಸ್ಯೆಯಾಗಿದ್ದರು. ಮಹಿಳಾ ಖಾದೀ ಸಹಕಾರೀ ಸಂಘಗಳನ್ನು ಸ್ಥಾಪಿಸಿ, ಸಂಘದ ಅಧ್ಯಕ್ಷೆಯಾಗಿ ಕೆಲಸ ಮಾಡಿದರು. ಕೇಂದ್ರ ರಕ್ಷಣಾ ಸಮಿತಿಯ ಸದಸ್ಯತ್ವ ವಹಿಸಿ, ರಾಜ್ಯದ ಪರವಾಗಿ ಬಂಗಾರವನ್ನು ದಾನ ಮಾಡಿದ ಪ್ರಥಮ ಕರ್ನಾಟಕ ಮಹಿಳೆ ಎವ್ಮಾರ್ ಲಕ್ಷಮ್ಮ. ಕೊನೆಯುಸಿರಿನ ವರೆಗೂ ಅವಿಶ್ರಾಂತವಾದ ಇವರ ದುಡಿಮೆ ದೇಶಕ್ಕೆ ದಕ್ಕಿತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

## ಅಂತರ್ದೃಷ್ಟಿ ಮಾತ್ರ ಉಳಿದಿರುವ

## ಸುಶೀಲಾ ಭೀಮಕುಮಾರ್

ಎರಡು ಕಣ್ಣಿನ ದೃಷ್ಟಿಯನ್ನು ಈಗ ಕಳೆದುಕೊಂಡಿರುವ ಶ್ರೀಮತಿ ಸುಶೀಲಾ ರವರನ್ನು ನೋಡಿದರೆ ಅಂಧಕಾರದಲ್ಲಿ ಜೀವನ ಕಳೆಯಬೇಕಾಗಿರುವ ಅವರಿಗೆ ಈ ಪ್ರಪಂಚವೇ ಬೇಸರವಾಗಿದೆಯೇನೋ ಎನ್ನಿಸಬಹುದು. ಆದರೆ, ನಮಗೆ ಆಶ್ಚರ್ಯವಾಗುವ ರೀತಿಯಲ್ಲಿದ್ದಾರೆ ಶ್ರೀಮತಿ ಸುಶೀಲಾ ಭೀಮಕುಮಾರ್. ನಗುನಗುತ್ತಾ, ಆತ್ಮೀಯತೆಯಿಂದ ಮಾತನಾಡುತ್ತಾರೆ. ಸಹನೆಯೇ ರೂಪವೆತ್ತಂತಿದ್ದಾರೆ, ಬಾಹ್ಯ ದೃಷ್ಟಿ ಹೋಗಿದ್ದರೂ ಅವರ ಅಂತರ್ದೃಷ್ಟಿಯ ಆಳದಲ್ಲಿ ಅಚ್ಚಳಿಯದ ಆ ಚಳವಳಿಯ ದಿನಗಳು ಚಿತ್ರಣವಾಗಿ ಹಾದು ಹೋಗುತ್ತಾ ಇರುತ್ತವೆ.

ಸುಶೀಲಾರವರ ವಯಸ್ಸು ಸುಮಾರು ಅರವತ್ತಿರಬಹುದು. ಜನ್ಮ ದಿನಾಂಕ ಗೊತ್ತಿಲ್ಲವೆನ್ನುತ್ತಾರೆ. ಜೀವನದ ಇನ್ನೂ ಅನೇಕ ವರ್ಷಗಳನ್ನು ಕಣ್ಣಿಲ್ಲದೆ ಕಳೆಯಬೇಕಾಗಿ ಬಂದಿರುವ ಅವರ ಸ್ಥಿತಿಗೆ ಕಾರಣ ಹೇಳುತ್ತಾರೆ,

"ಆಪರೇಷನ್ ಆದ ಮೇಲೆ ಡಾಕ್ಟರ್‌ರವರ ಅಚಾತುರ್ಯದಿಂದ, ಅಜಾಗರೂಕತೆಯಿಂದ ಹೀಗಾಗಿದೆ. ಈಗಾಗಲೇ ಮೂರು ವರ್ಷವಾಯಿತು, ಸುಪ್ರಸಿದ್ಧ ಡಾಕ್ಟರ್ ಬಳಿಗೆ ಹೋಗಿ ಆಪರೇಷನ್ ಮಾಡಿಸಿಕೊಂಡೆ, ದುಡ್ಡೂ ಹೋಯಿತು" ಎಂದು ವ್ಯಸನ ಪಡುತ್ತಾರೆ.

ಸುಶೀಲಾರವರಿಗಿಂತ ಹೆಚ್ಚಾಗಿ ಅವರ ಪತಿ ಭೀಮಕುಮಾರ್‌ರವರಿಗೆ ಪತ್ನಿಯ ಅಂಧತೆಯಿಂದ ಬುದ್ಧಿಯೇ ಕೆಟ್ಟಂತಾಗಿದೆ. ಕಣ್ಣು ಹೋಗಲು ಕಾರಣವನ್ನು ನೆನೆದರೆ ಅವರಿಗೆ ಮೈಯುರಿಯುವಂತಾಗುತ್ತದೆ. ಪತ್ನಿಯ ತಾಳ್ಮೆಯನ್ನು ನೋಡಿ ಶಾಂತರಾಗುತ್ತಾರೆ.

"ಏನೇನೋ ಪ್ರಯತ್ನಪಟ್ಟೆ. ಎಷ್ಟೋ ಖರ್ಚುಮಾಡಿದೆ. ಅವಳ ಹಣೆಯ ಬರಹವಿಷ್ಟೇ" ಎಂದು ಹೇಳಿ ನಿರಾಶರಾಗುತ್ತಾರೆ. ಅನಾಥಳಾಗಿದ್ದ ಹುಡುಗಿ ಸುಶೀಲಾಳನ್ನು ಜೀವನದ ಸವಾಲೆಂದು ಸ್ವೀಕರಿಸಿ ಮದುವೆಯಾದ ಭೀಮಕುಮಾರರ ಜೀವನದುದ್ದಕ್ಕೂ ಸವಾಲನ್ನು ಎದುರಿಸಿ ಸಾಧಿಸಿದ ಸಾಮರ್ಥ್ಯದ ಘಟನೆಗಳೇ ತುಂಬಿವೆ. ಭೀಮಕುಮಾರ್ ಮಹಾಧೈರ್ಯಶಾಲಿ. ಅನ್ಯಾಯವನ್ನು ಅಲ್ಲಲ್ಲೇ ಅಡಗಿಸುವ ಕಾರ್ಯೋತ್ಸಾಹಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ರಾತ್ರಿ ಹನ್ನೆರಡು ಗಂಟೆಯ ಸಮಯ. ಮೊನ್ನೆ ಮೊನ್ನೆ ತಾನೇ ನಡೆದ ಇತ್ತೀಚಿನ ಒಂದು ಘಟನೆ. ಯುವತಿಯೋರ್ವಳ ಮಾನಭಂಗ ಮಾಡಲು ಸುತ್ತುಗಟ್ಟಿದ್ದ ದುಷ್ಟರ ಮಧ್ಯೆ ನುಗ್ಗಿ ಭೀಮಕುಮಾರ್ ಆ ಯುವತಿಯನ್ನು ಕಾಪಾಡಲು ಪ್ರಯತ್ನಿಸಿದ್ದಾರೆ. ಬೀದಿಯಲ್ಲಿ ಮಾರುವ ಬಡವರ ಗಾಡಿಗಳನ್ನು ಪೋಲೀಸಿನವರು ಬಂಧಿಸಿದಾಗ ಗಾಡಿಗಳನ್ನು ಬಿಡುಗಡೆ ಮಾಡುವವರೆಗೂ ಪೋಲೀಸ್ ಠಾಣೆಯಲ್ಲಿ ಸತ್ಯಾಗ್ರಹ ಹೂಡಿದ್ದಾರೆ.

"ನಮ್ಮ ತಂದೆಯವರು ಕಣ್ಣಿಗೆ ಕಂಡ ಇಂಥಾದ್ದೆಲ್ಲವನ್ನೂ ಸರಿಪಡಿಸಲು ಹೋಗುತ್ತಾರೆ. ವಯಸ್ಸಾಯಿತು. ಬೇಡವೆಂದರೆ ಕೇಳುವುದಿಲ್ಲ. ಎಷ್ಟೋ ಹಣ ಖರ್ಚು ಮಾಡಿದ್ದಾರೆ. ಮನೆಯನ್ನೂ ಮಾರಿದ್ದಾಯಿತು. ಈಗ ನಾವಿರುವುದು ಬಾಡಿಗೆ ಮನೆ" ಎನ್ನುತ್ತಾಳೆ ಮಗಳು ಚೇತನಾ.

ಹಿಂದಿನಿಂದಲೂ ಸತ್ಯಧರ್ಮಕ್ಕಾಗಿ ಹೋರಾಡಿ ದೇಶಕ್ಕಾಗಿ ಜೀವನದ ಸುಖ ಸಂಪತ್ತನ್ನು ತ್ಯಾಗ ಮಾಡಿದ ಭೀಮಕುಮಾರರ ಮಾತುಗಳು ಈಗಲೂ ಪೆಟ್ಟೊಂದು ತುಂಡೆರಡು ಎನ್ನುವಂತೆಯೇ. ನಿಷ್ಠುರವೆಂದುಕೊಂಡರೂ ಪರವಾಗಿಲ್ಲ ಧರ್ಮವೇ ನನ್ನ ಮಾರ್ಗವೆನ್ನುತ್ತಾರೆ. ದೇಶದ ಸ್ವಾತಂತ್ರ್ಯಕ್ಕಾಗಿ ಮಾಡಿದ ಇವರ ಸೇವೆಯನ್ನು ಗುರ್ತಿಸಿದ್ದರೆ ಸರ್ಕಾರದಲ್ಲಿ ಅತ್ಯುತ್ತಮ ಪದವಿಯೇ ಸಿಕ್ಕಬೇಕಾಗಿತ್ತು.

"ನನ್ನ ಅದೃಷ್ಟವಿಷ್ಟೇ. ಬಾಡಿಗೆಮನೆ, ಅತಿ ಸರಳ ಬಾಳ್ವೆ, ಕಣ್ಣಿಲ್ಲದ ಹೆಂಡತಿಯನ್ನು ನೋಡುತ್ತಾ ಕಾಲಹರಣ" ಅದು ಇವರ ಮಾತು.

ಇಷ್ಟಾದರೂ ಮುತ್ತಿನಂತಹ ಇವರ ಮಕ್ಕಳನ್ನು ನೋಡಿದರೆ "ಮಾತಾಪಿತರು ಸುಕೃತಶಾಲಿಗಳು" ಎನಿಸುತ್ತದೆ,

ಪುತ್ತೂರಿನ ಬಳಿ ಪಂಜ ಎಂಬ ಊರು ಸುಶೀಲಾರವರ ಹುಟ್ಟೂರು. ಹತ್ತು ವರ್ಷದವರೆಗೆ ಮಾತ್ರ ಶಾಲೆಯ ವಿದ್ಯಾಭ್ಯಾಸ. ಅನಂತರ ಹೊಲ ಗದ್ದೆಗಳ ಕೆಲಸ ಹದಿನಾಲ್ಕನೇ ವಯಸ್ಸಿನಲ್ಲಿ ಭೀಮಕುಮಾರರೊಡನೆ ವಿವಾಹ.

"ಏನೂ ಗೊತ್ತಿಲ್ಲದ ನನ್ನನ್ನು ಸ್ವಾತಂತ್ರ್ಯ ಸಂಗ್ರಾಮಕ್ಕೆ ತಯಾರು ಮಾಡಿದವರು ನಮ್ಮ ಯಜಮಾನರೇ" ಎನ್ನುತ್ತಾರೆ ಸುಶೀಲಾ "ನಮ್ಮಿಬ್ಬರಲ್ಲೂ ಹದಿನಾಲ್ಕನೇ ವಯಸ್ಸಿನ ಮಹತ್ವವನ್ನು ನೋಡಿ. ನನ್ನ ಹದಿನಾಲ್ಕನೇ ವಯಸ್ಸಿನಲ್ಲಿ ಇವರೊಡನೆ ಆದ ವಿವಾಹ ನನ್ನ ಹೊಸ ಜೀವನದ ಹೊಸ ಹಂತವೇ ಆಯಿತು. ನಮ್ಮ ಯಜಮಾನರೂ ಅವರ ಹದಿನಾಲ್ಕನೇ ವಯಸ್ಸಿನಲ್ಲೆ ಮನೆಬಿಟ್ಟು ಹೋಗಿ ಅವರ ಜೀವನ ಧ್ಯೇಯವನ್ನು ನಿಶ್ಚಯ ಮಾಡಿಕೊಂಡರಂತೆ."

ಮನಬಿಟ್ಟು ಹೋಗಿದ್ದೆಲ್ಲಿಗೆ ?

ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿಗೆ ಸೇರಿ, ಸ್ವಾತಂತ್ರ್ಯ ಚಳವಳಿಯಲ್ಲಿ ಧುಮುಕಿದರು (೧೯೨೬).

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



೧೯೩೨ರಲ್ಲಿ ಪ್ರಪ್ರಥಮವಾಗಿ ಅಖಿಲಭಾರತ ಕಾಂಗ್ರೆಸ್ ಮತ್ತು ಸ್ವದೇಶೀ ವಸ್ತು ಪ್ರದರ್ಶನ ನಡೆಯಲಿರುವ ಮದರಾಸಿನ ಟ್ರಿಪ್ಲಿಕೇನ್‌ಗೆ ಪ್ರಯಾಣಮಾಡಿದರು. ಬ್ರಿಟಿಷ್ ಸರ್ಕಾರ ಈ ಪ್ರದರ್ಶನವನ್ನು ತಡೆಹಿಡಿದು ಸ್ಥಳವನ್ನು ವಶಪಡಿಸಿಕೊಳ್ಳಲು ಹವಣಿಸಿತು. ಆದರೂ ಧೈರ್ಯಗೆಡದೆ ಪ್ರದರ್ಶನಕ್ಕೆ ಸಿದ್ಧತೆ ಮಾಡಿ ಧ್ವಜವನ್ನು ಹಾರಿಸಿದ ಭೀಮಕುಮಾರ್ ಮತ್ತು ಚಕ್ರಪಾಣಿಯನ್ನು ಸರ್ಕಾರದವರು ಬಂಧಿಸಿ ಪೋಲೀಸ್ ಠಾಣೆಯಲ್ಲಿಟ್ಟರು. ಚಿತ್ರಹಿಂಸೆ ಕೊಟ್ಟು ಅಲ್ಲೇ ೨೩ ದಿನಗಳು ಇಟ್ಟಿದ್ದ ನಂತರ ಮೂರು ತಿಂಗಳ ಶಿಕ್ಷೆಯಾಯಿತು.

ಬ್ರಿಟಿಷರ ಕಣ್ಣು ತಪ್ಪಿಸಿ, ಮತ್ತೆ ಕೆಲವು ವೇಳೆ ಸಿಕ್ಕಿ ಬಿದ್ದರೂ ಎಡೆಬಿಡದೆ ಹೋರಾಟ ನಡೆಸಿದ್ದಾರೆ. ಶತ್ರುಗಳ ದವಡೆಯಲ್ಲಿ ಸಿಕ್ಕಿಕೊಂಡಷ್ಟೂ ಇವರ ಚಾಣಾಕ್ಷ ತನದ ಸಾಹಸಗಳೂ ಮಿಂಚಿವೆ.

ಮದರಾಸಿನಲ್ಲಿ ಸೆರೆ ಸಿಕ್ಕಿದಾರಭ್ಯ ಭೂಗತ ಚಟುವಟಿಕೆಗಳಲ್ಲಿ ತೊಡಗಿದ ಭೀಮ ಕುಮಾರ್ ಮುಂಬಯಿ, ಕರ್ನಾಟಕ, ಕೇರಳ ಪ್ರಾಂತ್ಯಗಳಲ್ಲಿ ಜೈಲುವಾಸವನ್ನನು ಭವಿಸಿದರು.

ಲಾಹೋರಿನಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನಕ್ಕೆ ಮೈಸೂರು ದೇಶದಿಂದ ಸ್ವಯಂಸೇವಕರಾಗಿ ಹೋದವರು ಭೀಮಕುಮಾರರೊಬ್ಬರೇ. ಹುಬ್ಬಳ್ಳಿ ಯಲ್ಲಿ ಸ್ಥಾಪಿಸಲಾದ ಕರ್ನಾಟಕ ಹರಿಜನ ಸೇವಾ ಸಂಘಕ್ಕೆ ಪ್ರಪ್ರಥಮ ಕಾರ್ಯದರ್ಶಿ ಯಾಗಿ ಭೀಮಕುಮಾರರನ್ನು ಗಾಂಧೀಜಿ ನೇಮಿಸಿದರು. ಭೀಮಕುಮಾರ್ ಪಾತ್ರಧಾರಿ ಯಾದ ಮತ್ತೊಂದು ಪ್ರಸಿದ್ಧ ಐತಿಹಾಸಿಕ ಘಟನೆ, ಪಾರ್ಸಿ ಕುಟುಂಬದ ದೇಶಭಕ್ತ ನಾರೀಮನ್ ಬೆಂಗಳೂರಿಗೆ ಬಂದ ಸಂದರ್ಭ. ಬಸಪ್ಪ ಪಾರ್ಕಿನಲ್ಲಿ ಐವತ್ತು ಸಾವಿರ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತಾಡಲು ಬಂದ ನಾರೀಮನ್‌ರನ್ನು ಪೋಲೀಸ್ ಅಧಿಕಾರಿಯಾಗಿದ್ದ ಬೆಂಕಿಬಸಪ್ಪ ತಡೆದರು. ನೆರೆದಿದ್ದ ಅಷ್ಟು ವಿದ್ಯಾರ್ಥಿಗಳೂ ರೊಚ್ಚಿ ಗೆದ್ದು ಬೆಂಕಿಬಸಪ್ಪನ ಮೇಲೆ ಸಾವಿರಾರು ಚಪ್ಪಲಿಗಳನ್ನು ತೂರಿದರು. ಭೀಮ ಕುಮಾರರು ಈ ಸಮಯದಲ್ಲಿ ವಿದ್ಯಾರ್ಥಿಗಳನ್ನು ವ್ಯವಸ್ಥೆಗೊಳಿಸಿ ದೊಡ್ಡ ಮೆರವಣಿಗೆ ಹೊರಡಿಸಿದರು. ಎಡಗಡೆ ಹೋಗುತ್ತಿದ್ದ ವಾಹನಗಳನ್ನೆಲ್ಲಾ ಬಲಗಡೆಗೆ ತಿರುಗಿಸಿದರು. ಇದೇ ಸಂದರ್ಭದಲ್ಲೇ ಭೀಮಕುಮಾರರಿಗೆ "ಅನಭಿಷಿಕ್ತರಾಜ"ನೆಂಬ ಹೆಸರು ಬಂದುದು. ಸರ್ಕಾರ ಭೀಮಕುಮಾರರನ್ನು ಬಂಧಿಸಿತು. ಬೆಂಗಳೂರು ಸೆಂಟ್ರಲ್ ಜೈಲಿಗೆ ಸೇರಿದ ಸತ್ಯಾಗ್ರಹಿಗಳಲ್ಲಿ ಭೀಮಕುಮಾರ್ ಮತ್ತು ಸಂಗಡಿಗರೇ ಮೊದಲಿಗರು. ಬಿಡುಗಡೆ ಯಾದ ಕೂಡಲೇ. ದಾವಣಗೆರೆಯಲ್ಲಿ ಧ್ವಜ ಸತ್ಯಾಗ್ರಹ ನಡೆಸಿ ಸೆರೆ ಸೇರಿದರು. ತಿರುವಾಂಕೂರಿಗೆ ಕಳುಹಿಸಲ್ಪಟ್ಟು ಅಲ್ಲಿಯ ವಿದ್ಯಮಾನವನ್ನು ಅಭ್ಯಸಿಸಿ ಸುರಂಗ ಮಾರ್ಗದಲ್ಲೇ ಇದ್ದು ಚಳವಳಿಯನ್ನು ಪ್ರಾರಂಭಿಸಿದಾಗ ೧೯೩೮ರಲ್ಲಿ ಪುನಃ ಬ್ರಿಟಿಷರ ಕೈಗೆ ಸಿಕ್ಕಿ ಬಿದ್ದರು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ತಿರುವಾಂಕೂರಿನ ಸತ್ಯಾಗ್ರಹದಲ್ಲಿ ಭೀಮಕುಮಾರರನ್ನು ಬ್ರಿಟಿಷರು ವಿಪರೀತ ಥಳಿಸಿದಾಗ ಭೀಮಕುಮಾರ್ ಪ್ರಜ್ಞೆತಪ್ಪಿ ಬಿದ್ದರು.

"ಪ್ರಾಣ ಹೋಗಿದೆಯೆಂದು ತಿಳಿದು ನನ್ನನ್ನು ಸಮುದ್ರ ತೀರದಲ್ಲಿ ಬಿಸಾಕಿ ಸಿಪಾಯಿಗಳು ಹೊರಟರು. ಸ್ವಲ್ಪ ಹೊತ್ತಿನ ನಂತರ ಅದೇ ಮಾರ್ಗವಾಗಿ ಹೋಗುತ್ತಿದ್ದ ಮುಖ್ಯ ನ್ಯಾಯಾಧೀಶರು ನನ್ನ ಸ್ಥಿತಿಯನ್ನು ಕಂಡು ನನ್ನನ್ನು ರಕ್ಷಿಸಿದರು" ಎನ್ನುತ್ತಾರೆ ಭೀಮಕುಮಾರ್.

ಈ ಪ್ರಚಂಡ ಸತ್ಯಾಗ್ರಹಿಯನ್ನು ಹಿಡಿದುಕೊಟ್ಟವರಿಗೆ ಐದು ಸಾವಿರ ರೂಪಾಯಿ ಬಹುಮಾನವೆಂದು ಸರ್ಕಾರ ಪ್ರಕಟಿಸಿದಾಗ ಭೀಮಕುಮಾರ್ ಅತಿ ಕಠಿಣ ದಿನಗಳನ್ನು ಕಾಣಬೇಕಾಯಿತು,

"ಕೆಲವು ದ್ರೋಹಿಗಳು ನನ್ನ ಇರುವಿಕೆಯ ಸ್ಥಳವನ್ನು ಸರ್ಕಾರಕ್ಕೆ ತೋರಿಸಿಕೊಟ್ಟು ಬಿಟ್ಟರು. ಪೋಲೀಸರು ನನ್ನನ್ನು ಅಟ್ಟಿಸಿಕೊಂಡು ಬಂದಾಗ, ಅವರ ಕಣ್ಣು ತಪ್ಪಿಸಿ ಬೆಲ್ಲದ ಕುಕ್ಕೆಯನ್ನು ತಲೆಯ ಮೇಲೆ ಹೊತ್ತು ನನ್ನ ಸಾಮಾನು ಸರಂಜಾಮುಗಳನ್ನು ಆ ಕುಕ್ಕೆಯಲ್ಲಿ ಅಡಗಿಸಿ ಬೆಲ್ಲ ಮಾರುವವನಂತೆ ನುಸುಳಿಕೊಂಡೆ. ಮುಸಲ್ಮಾನನಂತೆ 'ವೇಷ ಬದಲಾಯಿಸಿಕೊಂಡಾಗ ನನ್ನ ಗಡ್ಡ-ಟೋಪಿಯಿಂದ ಯಾರಿಗೂ ಪತ್ತೆ ಹಚ್ಚಲಾಗಲಿಲ್ಲ, ಅಲ್ಲಿಂದ ಸ್ಮಶಾನಕ್ಕೆ ರಾತ್ರಿ ಹೊರಟೆ, ಮರದ ಮೇಲೆ ಕುಳಿತು ಕಾಲ ಹಾಕಿ ಕಡಲೆಪುರಿ ತಿಂದುಕೊಂಡು ಅನೇಕ ದಿನಗಳನ್ನು ಸ್ಮಶಾನದಲ್ಲೇ ಕಳೆದಿದ್ದೇನೆ. ಹುಡುಕಿ ಹುಡುಕಿ ನಿರಾಶರಾದ ಪೋಲೀಸರು ಕೊನೆಗೆ ನನ್ನನ್ನು ಹುಡುಕುವ ಕೆಲಸವನ್ನು ಕೈ ಬಿಟ್ಟರು".

ಈ ಘಟನೆಯನ್ನು ಹೇಳುತ್ತಾ ಭೀಮಕುಮಾರ್ ತಮ್ಮ ಜೀವನದ ಸಾಹಸವನ್ನು ನೆನೆದು ಉತ್ಸಾಹ ಪಡುತ್ತಾರೆ.

ಇಂತಹ ಸಾಹಸಿ, ಉತ್ಸಾಹಿ, ದೇಶಭಕ್ತ ಮತ್ತು ತ್ಯಾಗಿಯಾಗಿದ್ದ ಭೀಮಕುಮಾರರ ಕೈ ಹಿಡಿದ ಸುಶೀಲಾ ತಮ್ಮ ಜೀವನವನ್ನು ದೇಶಕ್ಕಾಗಿ ಮುಡುಪಾಗಿಡಲು ನಿರ್ಧರಿಸಿದುದರಲ್ಲಿ ಆಶ್ಚರ್ಯವಿಲ್ಲ.

ಆದರೂ ಭೀಮಕುಮಾರರ ಹೇಳಿಕೆಯನ್ನು ಕೇಳಿ–

"ನನ್ನ ಹೆಂಡತಿ ನನ್ನನ್ನು ತಡೆದಿದ್ದರೆ ಇಷ್ಟೆಲ್ಲಾ ಮಾಡಲು ಸಾಧ್ಯವಾಗುತ್ತಿತ್ತೇ? ನಾನೇನೋ ಮದುವೆಗೆ ಮುಂಚೆಯೇ ಚಳವಳಿಗೆ ಧುಮುಕಿದ್ದೆ, ಇರಬಹುದು.... ಅವಳ ಪೂರ್ಣ ಸಹಕಾರ ಇದ್ದುದರಿಂದಲೇ ನನ್ನ ಧ್ಯೇಯ ಫಲಿಸಿತು."

ಮದುವೆಯಾದಾಗ ಸುಶೀಲಾರವರಿಗೆ ಆತಂಕವಿದ್ದರೂ ಅವರ ಅಂತರ್ಯ ಸಂಕಲ್ಪ ಹೀಗೆ–'ನಾನು ಇವರನ್ನು ಮದುವೆಯಾದಾಗ ಇವರ ಬಗ್ಗೆ ಸಾಹಸದ ಕಥೆಗಳನ್ನು ಕೇಳಿದ್ದೆ. ಇಂತಹವರೊಡನೆ ಇರಲು ನಾನೂ ಸಿದ್ಧವಾಗಿಯೇ ಇದ್ದೆ, ಸುಶೀಲಾ ಭೀಮಕುಮಾರ್ ತಮ್ಮನ್ನು ಸಂಗ್ರಾಮಕ್ಕಾಗಿ ಯಜಮಾನರು ಕೆಲವೇ ದಿನಗಳಲ್ಲಿ ತಯಾರು ಮಾಡಿಬಿಟ್ಟರು, ಎನ್ನುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



"ಮದುವೆಯಾದ ಮೇಲೆ ನಮ್ಮ ವಾಸ ಹಳ್ಳಿಯಲ್ಲೇ... ಸುಮಾರು ೩೦ ಹಳ್ಳಿಗಳಲ್ಲಿ ನಡೆದ ಯಜಮಾನರ ಭಾಷಣವನ್ನು ಕೇಳಿದ್ದೇನೆ. ಈಗಲೂ ನೆನೆಸಿಕೊಂಡರೆ ಆಶ್ಚರ್ಯವಾಗುತ್ತದೆ. ಭೀಮಕುಮಾರರ ಭಾಷಣವೆಂದರೆ ಗಾಡಿ ಕಟ್ಟಿಕೊಂಡು ಬಂದ ಹಳ್ಳಿಯವರಿಂದ ಮೈದಾನ ತುಂಬಿಹೋಗುತ್ತಿತ್ತು. ಇವರ ಭಾಷಣ ಮೂರು ನಾಲ್ಕು ಘಂಟೆ ಕಾಲ ಒಂದೇ ಸಮನೆ ನಡೆಯುತ್ತಿತ್ತು. ಮಧ್ಯರಾತ್ರಿಯಾದರೂ ಗ್ಯಾಸ್ ಲೈಟಿನಲ್ಲಿ ಈ ಕಾರ್ಯಕ್ರಮ ಅಡ್ಡಿಯಿಲ್ಲದೆ ಜರುಗುತ್ತಿತ್ತು, ಮಳೆ ಸುರಿದರೂ ಜಾಗ ಸರಿಯದೆ ಕೂತು ಭಾಷಣವನ್ನು ಜನ ಕೇಳುತ್ತಿದ್ದರು. ಎಂತಹವರಿಗೂ ವಿದ್ಯೆ ಬುದ್ಧಿಯಿಲ್ಲದವರಿಗೂ ಇವರ ಮಾತುಗಳು ಎದೆನಾಟಿ ಸ್ಫೂರ್ತಿ ತರುತ್ತಿತ್ತು ಇದರ ಪರಿಣಾಮವನ್ನು ನಾವು ಕಂಡಿದ್ದೇವೆ. ಚಳವಳಿಯಲ್ಲಿ ಇವರೆಲ್ಲಾ ಸಹಕರಿಸಿದ್ದಾರೆ" ಎನ್ನುತ್ತಾರೆ ಸುಶೀಲಾ.

ಹೀಗೆ ಭಾಷಣಗಳು ನಡೆಯುತ್ತಿದ್ದಾಗ ಒಂದು ಸಂದರ್ಭವನ್ನು ವಿವರಿಸುತ್ತಾರೆ.

"ಭಾಷಣಕಾರರು ಎಲ್ಲರಿಗೂ ಕಾಣಿಸುವಂತೆ ಎತ್ತರವಾಗಿ ಅಟ್ಟಣೆ ಕಟ್ಟುತ್ತಿದ್ದರು. ಒಂದು ಸಲ ನಮ್ಮ ಯಜಮಾನರು ಅಟ್ಟಣೆಯ ಮೇಲೆ ನಿಂತು ಮಾತಾಡುತ್ತಿದ್ದಾಗ, ಇದ್ದಕ್ಕಿದ್ದಂತೆ ಅಟ್ಟಣೆ ಕುಸಿಯಿತು. ಯಾರೋ ಅಟ್ಟಣೆಯ ಕಂಬಗಳನ್ನು ಕಿತ್ತಿದ್ದಾರೆ. ಏನೋ ಒಳಸಂಚು ಇದೆಯೆಂದು ತಿಳಿದ ಸಭಿಕರು ಕಣ್ಣುರೆಪ್ಪೆ ಹೊಡೆಯುವುದರೊಳಗೆ ಓಡಿಬಂದು ಕೈಗಳನ್ನು ಚಾಚಿ ಇವರನ್ನು ಆತುಕೊಂಡುಬಿಟ್ಟರು. ಹಗಲ ಮೇಲೆ ಕೂರಿಸಿಕೊಂಡು ಜಯಕಾರ ಮಾಡಿದರು. ಹೆಜ್ಜೆಹೆಜ್ಜೆಗೂ ನಮ್ಮಿಬ್ಬರಿಗೂ ಹೂವಿನ ಹಾರ, ದೊಡ್ಡ ಮೆರವಣಿಗೆಯನ್ನೇ ನಡೆಸಿಬಿಟ್ಟರು. ಇವರನ್ನು ಕಂಡರೆ ಜನಕ್ಕೆ ಅಷ್ಟರಮಟ್ಟಿನ ಪ್ರೀತಿ ಮತ್ತೆ ನಾನು ತ್ಯಾಗಕ್ಕೆ ಸಿದ್ಧವಾಗದಿದ್ದರೆ ಹೇಗೆ ನೀವೇ ಹೇಳಿ" ಎನ್ನುತ್ತಾರೆ ಸುಶೀಲಾ.

ಎಲ್ಲಿ ಹೋದರೂ ಯಜಮಾನರು ಜೊತೆಯಲ್ಲೇ ನನ್ನನ್ನು ಕರೆದುಕೊಂಡು ಹೋಗುತ್ತಿದ್ದರು. ಮದುವೆಯಾದ ಮೇಲೆ ಮನೆಯಲ್ಲಿದ್ದವರು ನಾವಿಬ್ಬರೇ, ದೊಡ್ಡ ಸಂಸಾರದ ತೊಡಕಾಗಲೀ ಮಕ್ಕಳ ಜಂಜಾಟವಾಗಲೀ ಇರಲಿಲ್ಲ. ಒಂಬತ್ತು ವರ್ಷ ನಮಗೆ ಮಕ್ಕಳಾಗಲಿಲ್ಲವಾದ್ದರಿಂದ ಸ್ವಾತಂತ್ರ್ಯ ಬರುವವರೆಗೂ ದೇಶಕ್ಕಾಗಿ ದುಡಿಯಲು ಪೂರ್ಣ ಅವಕಾಶ ಸಿಕ್ಕಿತು ಎಂಬುದೇ ಸುಶೀಲಾರವರ ಸಂತೋಷ ಮತ್ತು ತೃಪ್ತಿ.

೧೯೪೨ರಲ್ಲಿ ತಂಗಿಯ ಮದುವೆ ಸಮಾರಂಭದಲ್ಲಿ ಭಾರತಮಾತೆಯ ಧ್ವಜವನ್ನು ಹಾರಿಸಬೇಕೆಂದು ಭೀಮಕುಮಾರ್ ಸಂಕಲ್ಪಿಸಿದ್ದರಂತೆ. "ಲಗ್ನಪತ್ರಿಕೆ ಅಚ್ಚಾಯಿತು. ಮದುವೆ ಚಪ್ಪರ ಸಿದ್ಧವಾಯಿತು. ಮಹಾತ್ಮ ಗಾಂಧಿ, ರವೀಂದ್ರನಾಥ ಟಾಗೂರ್ ಎಲ್ಲರಿಂದಲೂ ಶುಭ ಸಂದೇಶವೂ ಬಂದಾಯಿತು. ಮದುವೆ ಮಂಟಪದಲ್ಲೇ ಭಾರತದ ಧ್ವಜವನ್ನು ಹಾರಿಸಬೇಕೆಂದು ನಮ್ಮ ಯಜಮಾನರ ನಿರ್ಣಯ. ಆದರೆ ಗಂಡಿನ ಮನೆಯವರು ಒಪ್ಪಲಿಲ್ಲ. ಪೋಲೀಸಿನವರು ನುಗ್ಗಿ ಮದುವೆ ಮನೆಯಲ್ಲಿ ಗಲಾಟೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಯಾಗಬಹುದೆಂಬ ಶಂಕೆ, ನಮ್ಮ ಯಜಮಾನರು ಹಟ ಬಿಡಲಿಲ್ಲ. 'ಭಾರತಾಂಬೆಯ ಧ್ವಜದಡಿಯಲ್ಲಿ ನನ್ನ ತಂಗಿಯ ಮದುವೆ ನಡೆಯಬೇಕು, ಇಲ್ಲದಿದ್ದರೆ ಮದುವೆಯೇ ಬೇಡ' ಎಂದರು. ಎಲ್ಲವೂ ತಟಸ್ಥವಾಯಿತು. ಮದುವೆ ಸಂಭ್ರಮ ನಿಂತು ಹೋಯಿತು. ಗಂಡಿನ ಮನೆಯವರು ಗಂಟುಮೂಟೆ ಕಟ್ಟಿ ಹೊರಟೇಬಿಟ್ಟರು. ನೀವು ಕಥೆಗಳಲ್ಲಿ ಹೀಗೆ ಮದುವೆ ನಿಂತುಹೋಗಿರುವುದನ್ನು ಕೇಳಿರಬಹುದು. ಆದರೆ ಇದು ನಿಜವಾಗಿಯೂ ನಡೆಯಿತು" ಎಂದು ಸುಶೀಲಾ ಹೇಳುತ್ತಾರೆ.

ಆಂತರಿಕ ಆಂದೋಲನದ ಜೊತೆಗೆ ಭಾರತವು ಅಂತರರಾಷ್ಟ್ರೀಯ ಗಲಭೆಗಳಿಗೂ ತಲೆ ಕೊಡಬೇಕಾಯಿತು. ಎರಡನೆಯ ಮಹಾಯುದ್ಧದ ಸಮಯದಲ್ಲಿ ಬ್ರಿಟಿಷರ ಸಂಪರ್ಕದಿಂದ ಕದನದ ಕಾವು ಭಾರತಕ್ಕೂ ತಗುಲಿತು. ಜಪಾನೀಯರು ಬರ್ಮಾ ವನ್ನು ಆಕ್ರಮಿಸಿ ಹೌರಾದ ಮೇಲೆ ಬಾಂಬುಗಳನ್ನು ಎಸೆಯಲು ಪ್ರಾರಂಭಿಸಿದರು. ಜನರು ಬರ್ಮಾ ಬಿಟ್ಟು ಭಾರತಕ್ಕೆ ಬರತೊಡಗಿದರು. ಭಾರತದಲ್ಲಿ ಬ್ರಿಟಿಷ್ ಸರ್ಕಾರವು ರೈಲುಗಳನ್ನು ಸೈನಿಕರ ಸಾಗಾಣಿಕೆಗೆ ಉಪಯೋಗಿಸುತ್ತಿದ್ದುದರಿಂದ ವಾಹನಗಳ ಸೌಕರ್ಯವಿಲ್ಲದೆ ಜನರು ನಡೆದುಕೊಂಡೇ ಬರಬೇಕಾಯಿತು.

ಈ ಸಂದರ್ಭದಲ್ಲಿ ಭಾರತ ಮತ್ತು ಬರ್ಮಾದಲ್ಲಿ ಭೀಮಕುಮಾರರ ಸೇವೆ ಅತ್ಯಂತ ಶ್ಲಾಘನೀಯ.

"ಸುಮಾರು ಆರು ನೂರು ಮೈಲಿಗಳಷ್ಟು ದೂರ ಜನರು ಸಂಸಾರ ಸಮೇತ ರಾಗಿ ನಡೆದು ಬರುತ್ತಿದ್ದರು. ಕಲ್ಲುಮುಳ್ಳಿನ ಕಾಡಿನ ಪ್ರದೇಶದಲ್ಲಿ ರಾತ್ರಿ ಹಗಲು ಎನ್ನದೆ, ಅನ್ನ ನೀರಿಲ್ಲದೆ ಮಧ್ಯೆ ದಾರಿಯಲ್ಲೇ ತಮ್ಮ ಮಕ್ಕಳು ಸಾಯುವುದನ್ನು ಕಣ್ಣಾರೆ ಕಾಣುತ್ತಾ, ಸಹಿಸುತ್ತಾ ನಿರಾಶ್ರಿತರಾಗಿ ಭಾರತವನ್ನು ಬಂದು ಸೇರಿದರು. ಆಗ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ನಿರಾಶ್ರಿತರ ಮತ್ತು ಯುದ್ಧದಲ್ಲಿ ಗಾಯ ಗೊಂಡವರ ಶುಶ್ರೂಷೆಯ ಕೆಲಸವನ್ನು ದೇಶಭಕ್ತರಿಗೆ ವಹಿಸಿತು.

"ಬರ್ಮಾಕ್ಕೆ ಹೋಗಲು ಜನರು ಆಗ ಹಿಂಜರಿಯುತ್ತಿದ್ದರು. ಕಪ್ಪು ಮಲೇರಿಯಾ ಎಂಬ ಭಯಂಕರ ರೋಗ ಬರ್ಮಾದಲ್ಲಿ ಹರಡಿತ್ತು. ಕಾಂಗ್ರೆಸ್ಸಿನ ಆದೇಶವನ್ನು ಶಿರಸಾವಹಿಸಿ ಸೇವೆಗಾಗಿ ಬರ್ಮಾಕ್ಕೆ ದಕ್ಷಿಣ ಭಾರತದಿಂದ ಹೋದವನು ನಾನೊಬ್ಬನೇ, ಅಲ್ಲಿ ಜನರ ಸ್ಥಿತಿ ಚಿಂತಾಜನಕವಾಗಿತ್ತು. ಯುದ್ಧ ನಡೆಯುತ್ತಲೇ ಇತ್ತು. ಯುದ್ಧದಲ್ಲಿ ಗಾಯಗೊಂಡವರನ್ನೂ ರೋಗದಲ್ಲಿ ನರಳುತ್ತಿದ್ದವರನ್ನೂ ಉಪಚರಿಸುವುದು ನನ್ನ ಕೆಲಸವಾಯಿತು. ಕೊನೆಗೆ ನನಗೇ ಮಲೇರಿಯಾ ಅಂಟಿತು. ಜ್ವರ ಬಿಟ್ಟು ನನ್ನ ಜೀವ ಉಳಿದದ್ದೇ ಎಲ್ಲರಿಗೂ ಆಶ್ಚರ್ಯ"–ಎನ್ನುತ್ತಾರೆ ಭೀಮ ಕುಮಾರ್.

ಬರ್ಮಾದ ಈ ಘಟನೆ, ಕಾಂಗ್ರೆಸ್ ಯುವಕರ ಸಮಯೋಚಿತ ಸೇವೆ, ಕಷ್ಟಗಳ ಅನುಭವ–ಕೇಳಿದವರಿಗೆ ಹೃದಯ ಕಲಕುವಂತಿದೆ. ದೇಶಸೇವೆಗೆ ಎದೆಕೊಟ್ಟು ನಿಂತ ಈ ಕೆಚ್ಚೆದೆಯ ದೇಶಭಕ್ತ ವೀರರ ಸ್ಮರಣೆ ಸಾರ್ಥಕವೆನಿಸುತ್ತದೆ. ಇವರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಹಣಕ್ಕೆ ಕೈಯೊಡ್ಡಿ ಸಂಪಾದನೆಯ ಕೆಲಸಕ್ಕೆ ಹೋದವರಲ್ಲ, ತಮ್ಮಲ್ಲಿದ್ದುದನ್ನು ಕಳೆದುಕೊಂಡು ಅರೆಹೊಟ್ಟೆ ತುಂಬಿಸಿಕೊಂಡು ಸೇವೆಯೇ ಜೀವನೋಪಾಯ ವೆಂದಿದ್ದವರು.

ಗಾಂಧೀಜಿ ದೇಶದ ನಾಯಕ, ಆತನ ಆಜ್ಞೆಯನ್ನು ಪಾಲಿಸಬೇಕು. ಕಾಂಗ್ರೆಸ್ ಸಂಸ್ಥೆಯು ದೇಶದ ಹಿತಕ್ಕಾಗಿ ಕಂಕಣಕಟ್ಟಿ ನಿಂತಿರುವ ಸಂಸ್ಥೆ. ಅದರ ಉದ್ದೇಶ ವನ್ನು ಊರ್ಜಿತಗೊಳಿಸಬೇಕು. ಇದಿಷ್ಟೇ ಅಂದಿನ ಯುವ ಜನಾಂಗದ ಮನಸ್ಸು ಹೊಕ್ಕಿದ್ದು. ಅದಕ್ಕೆ ತಕ್ಕಂತೆ ಕೆಲಸ ಕಾರ್ಯಗಳ ನಿರೂಪಣೆ ನಡೆಯುತ್ತಿತ್ತು. ಸ್ವಾತಂತ್ರ್ಯಕ್ಕಾಗಿ ಚಳವಳಿ ಹೂಡುವುದು ಪ್ರತಿಯೊಬ್ಬರ ಕರ್ತವ್ಯವೆಂದು ತಿಳಿದಿದ್ದರು. ವ್ಯರ್ಥ ಕಾಲ ವ್ಯಯಮಾಡದೆ ಮುಖಂಡರನ್ನು ಅನುಸರಿಸಿ ದೇಶದ ಕಾರ್ಯವನ್ನು ಕಲಿಯುತ್ತಿದ್ದರು. ಅಗತ್ಯವಿದ್ದಾಗ ತಮ್ಮಲ್ಲಿದ್ದ ಹಣವನ್ನೂ ಕೊಟ್ಟು ದೇಶೋ ದ್ಧಾರದಲ್ಲಿ ಅಳಿಲು ಸೇವೆಯೆಂದು ಭಾರತಾಂಬೆಗೆ ಕೈಮುಗಿಯುತ್ತಿದ್ದರು. ಹೀಗೆ ಕಾಯಾ ವಾಚಾ ಮನಸಾ ದೃಢತೆಯ ಸೇವೆಯಿಂದಲ್ಲವೆ ನಮಗೆ ಸ್ವಾತಂತ್ರ್ಯ ಲಭಿ ಸಿರುವುದು !

ಭೀಮಕುಮಾರರ ದೇಶಭಕ್ತಿಯ ಮೆಚ್ಚಿಗೆಯನ್ನು ಸುಶೀಲಾರವರು ಹೀಗೆ ಹೇಳುತ್ತಾರೆ. "ನಮ್ಮ ಯಜಮಾನರು ಬ್ರಿಟಿಷರ ಪಾಲಿಗೆ ಘರ್ಜಿಸುವ ಹುಲಿ ಯಂತಿದ್ದರು. ಅಷ್ಟೇ ಅಲ್ಲ. ನಿಷ್ಠಾವಂತ ಸತ್ಯಾಗ್ರಹಿ. ದೇಶದ್ರೋಹಿಗಳನ್ನು ಮುಖ ಮೂತಿ ನೋಡದೆ ಖಂಡಿಸುತ್ತಿದ್ದರು, ಇವರ ಸತ್ಯವರ್ತನೆಗೆ ಎದುರಾಗಿ ನಿಲ್ಲಲು ಯಾರಿಗೂ ಧೈರ್ಯವಿರಲಿಲ್ಲ. ಹುಬ್ಬಳ್ಳಿಯಲ್ಲಿದ್ದಾಗ ಜಾನ್‌ಸನ್‌ರವರ ರಿವಾಲ್ವರ್ ಕದ್ದು ಸೂಪರಿಂಟೆಂಡೆಂಟನ್ನು ಕೊಂದಿದ್ದಾರೆ ಎಂದು ಹೆಮ್ಮೆಪಡುತ್ತಾರೆ.

ಬ್ರಿಟಿಷ್ ಸರ್ಕಾರದ ಬೆದರಿಕೆಗೆ ಜಗ್ಗದೆ ಚಳವಳಿಯ ಪ್ರಚೋದನೆ ಮಾಡುತ್ತಿದ್ದ ಇಂತಹ ಪ್ರಚಂಡರನ್ನು ಪತ್ತೆ ಮಾಡಿಕೊಡಲು ಅವರ ಪತ್ನಿಯರನ್ನು ಹಿಂಸೆ ಮಾಡು ವುದು ಬ್ರಿಟಿಷ್ ಸರ್ಕಾರದ ಒಂದು ನೀತಿಯಾಗಿತ್ತು. ಈ ಅವಕಾಶವನ್ನು ಉಪ ಯೋಗಿಸಿಕೊಂಡ, ಪೋಲೀಸ್ ತಂಡವು ಹೆಂಗಸರನ್ನು ಹಿಡಿದು ಹೊಡೆಯುವುದು ಮಾನಭಂಗ ಮಾಡುವುದು, ಅಪಹಾಸ್ಯ ಮಾಡಿ ಮಾತನಾಡುವುದು ಮುಂತಾಗಿ ಚಿತ್ರ ಹಿಂಸೆ ಮಾಡುತ್ತಿದ್ದರು. ನಮ್ಮ ಮಹಿಳೆಯರು ದೇಶಕ್ಕಾಗಿ ಈ ಕಷ್ಟಗಳನ್ನೆಲ್ಲಾ ಸಹಿಸಿಕೊಂಡಿದ್ದಾರೆ. ಭೀಮಕುಮಾರರ ಪತ್ನಿ ಸುಶೀಲಾ ಈ ಹಿಂಸೆಗೆ ಹೊರತಾಗಿರ ಲಿಲ್ಲ. ಈ ಪೋಲೀಸ್ ತಂಡದವರು ಮತ್ತಾರೂ ಅಲ್ಲ ಭಾರತೀಯರೆ ಎಂಬ ಸಂಗತಿ ಎಷ್ಟು ಶೋಚನೀಯ ! ದ್ರೋಹಿಗಳು, ದುಷ್ಟರು, ಭ್ರಷ್ಟಾಚಾರದವರು, ಅಸಭ್ಯರು ನಮ್ಮಲ್ಲೇ ಇದ್ದುದರಿಂದ ಸೇವಾಕರ್ತರ ಮಾರ್ಗ ದುಸ್ತರವಾಯಿತು. ದೇಶಭಕ್ತ ರನ್ನು ಹಿಡಿದು ಶತ್ರುಗಳಿಗೆ ಒಪ್ಪಿಸುತ್ತಿದ್ದವರು ನಮ್ಮವರೇ. ಈ ಕಾರಣದಿಂದ ಕಠಿಣ ಶಿಕ್ಷೆಗೊಳಪಟ್ಟವರೆಷ್ಟೋ, ಪ್ರಾಣತತ್ತವರೆಷ್ಟೋ ಮಂದಿ ದೇಶಬಾಂಧವರು !

ಸುಶೀಲಾ ಭೀಮಕುಮಾರ್ ದಂಪತಿಗಳ ನಿಷ್ಠೆ ನೋಡಿ ಹೆಮ್ಮೆಯಾಗುತ್ತದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಸುಶೀಲಾರವರ ಮಾತುಕೇಳಿ, "ನಮ್ಮ ಯಜಮಾನರಲ್ಲಿ ನಾನು ಕಂಡದ್ದು ಸನ್ಯಾಸಿಯ ಜೀವನ. ದೇಶವನ್ನು ಬ್ರಿಟಿಷರಿಂದ ಬಿಡುಗಡೆ ಮಾಡುವವರೆಗೂ ಸಪ್ಪೆ ಊಟದ ಪ್ರತಿಜ್ಞೆ ಮಾಡಿದ್ದರು. ಮಹಾತ್ಮಾಜಿಯವರ ಉಪವಾಸದ ಸುದ್ದಿ ಬಂದಾಗಲೆಲ್ಲಾ ಇವರೂ ವ್ರತಪರಿಪಾಲನೆಯಲ್ಲಿ ಭಾಗಿಯಾಗಿರುತ್ತಿದ್ದರು. ನಾನೂ ಇವರೊಂದಿಗೆ ಸಹಕರಿಸುತ್ತಿದ್ದೆನೇ ವಿನಾ, ಹೀಗೇಕೆ ಮಾಡುವಿರಿ ಎಂದಾಗಲೀ, ನಮ್ಮ ಪಾಡಿಗೆ ನಾವು ಸುಖವಾಗಿರೋಣವೆಂದಾಗಲೀ ಹೇಳಬೇಕೆನ್ನಿಸಲಿಲ್ಲ... ಆಗ ನಾವು ಯಾರನ್ನೂ ಮೆಚ್ಚಿಸಬೇಕಾಗಿರಲಿಲ್ಲ. ನಮ್ಮ ಮನಸ್ಸಾಕ್ಷಿಯಾಗಿ ನಡೆದುಕೊಳ್ಳುತ್ತಿದ್ದೆವು. ಸತಿ ಪತಿಯರಲ್ಲಿ ಒಗ್ಗಟ್ಟಿದ್ದರೆ ಸಾಕು ಆ ಸತ್ಯಾಗ್ರಹದ ದಿನಗಳು ಕಹಿ ಎನಿಸುತ್ತಿರಲಿಲ್ಲ. ಭಾರತ ಭೂಮಿಯಲ್ಲಿ ಜನಿಸಿದ್ದಕ್ಕೆ ಸಾರ್ಥಕವಾಯಿತೆನಿಸಿತ್ತು" ಎಂಬುದೇ ಸುಶೀಲಾ ರವರ ಸಂದೇಶ.

ಗಂಡನನ್ನು ಅನುಸರಿಸಿಕೊಂಡಿದ್ದರೆ ಮಾತ್ರ ಸಾಲದು. ಹೆಂಗಸರೂ ಪ್ರತ್ಯೇಕ ವಾಗಿ ಸೇವೆ ಮಾಡಬೇಕಾದ ಅವಶ್ಯಕತೆ ಇರುತ್ತದೆ ಎಂದರಿತ ಸುಶೀಲಾ ಸ್ವಯಂ ಸೇವಿಕಾ ತರಬೇತಿ ಶಿಬಿರಕ್ಕೆ ಸೇರಿ ತರಬೇತಿ ಪಡೆದರು. ಶಿಬಿರದ ಜೀವನ ಕಷ್ಟಕರ ವಾಗಿತ್ತು ಎನ್ನುತ್ತಾರೆ.

"ಶಿಬಿರದಲ್ಲಿ ಸ್ವಯಂ ಸೇವಿಕಾ ತರಬೇತಿ ಚೆನ್ನಾಗಿ ನಡೆಯುತ್ತಿತ್ತು. ಹತ್ತಿ ಹಿಂಜುವುದರಿಂದ ಹಿಡಿದು ದಾರ ತೆಗೆಯುವ ಕಲೆಯನ್ನು ಕಲಿತೆವು. ಅಧಿವೇಶನಗಳಲ್ಲಿ ಮತ್ತು ಚಳವಳಿಗಳಲ್ಲಿ ಮಹಾತ್ಮಾಜಿಯವರು ಕೊಟ್ಟ ಆದೇಶದಂತೆ ನಡೆದುಕೊಳ್ಳುವ ಅಹಿಂಸಾ ಮಾರ್ಗದಲ್ಲೇ ತಯಾರಾದೆವು. ಸಾಕಷ್ಟು ಸೌಹಾರ್ದತೆ, ಸಹನೆ, ಸಹಕಾರ ಗುಣಗಳನ್ನು ಕಲಿತೆವು. ಉಮಾಬಾಯಿ ಕುಂದಾಪುರ, ಕಮಲಾದೇವಿ ಚಟ್ಟೋಪಾ ಧ್ಯಾಯ ಇವರುಗಳು ಆಗಾಗ್ಗೆ ಬಂದು ಭೇಟಿ ಕೊಟ್ಟು ನಿರ್ದೇಶಿಸುತ್ತಿದ್ದರು. ಈ ಮುಖಂಡ ನಾಯಕಿಯರನ್ನು ಕಂಡರೆ ನಮಗೆ ಭಯವಿರುತ್ತಿತ್ತು. ಅವರು ಬಂದಾಗ ಊಟ ಸರಿಯಿಲ್ಲವೆಂದು ಹೇಳುವ ಧೈರ್ಯವಿದ್ದಿಲ್ಲ. ಅದಕ್ಕೆ ಬದಲು ನಾವು ಶಿಬಿರ ದಿಂದ ಸರಿಯಾಗಿ ಕಲಿತೆವೇ ಎಂದು ನಮ್ಮನ್ನು ನಾವೇ ಪರೀಕ್ಷಿಸಿಕೊಳ್ಳುವಂತಾಗು ತ್ತಿತ್ತು. ಕೊನೆಗೆ, ಇಷ್ಟೂ ದೇಶಸೇವೆಗಾಗಿ ಅಲ್ಲವೇ ಎಂಬ ವೈರಾಗ್ಯ ಬಂದು ಎಲ್ಲ ವನ್ನೂ ಸಹಿಸಿಕೊಳ್ಳುವಂತೆ ಮಾಡಿತು."

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುಳುಗಿದ ಅಂದಿನ ನಮ್ಮ ವನಿತೆಯರಿಗೆ ಧ್ಯೇಯ ಸಾಧನೆಯೇ ಮುಖ್ಯವಾಗಿತ್ತೆಂಬುದು ಸುಶೀಲಾರವರ ಈ ಮಾತುಗಳಿಂದ ಸ್ಪಷ್ಟ ವಾಗುತ್ತದೆ. ಸ್ವಾರ್ಥಾಪೇಕ್ಷೆಯಾಗಲೀ, ಸುಖದ ಬಯಕೆಯಾಗಲೀ, ಸಿರಿಸಂಪತ್ತಿನ ನಿರೀಕ್ಷೆಯಾಗಲೀ ತಮ್ಮ ಹತ್ತಿರ ಸುಳಿಯದಂತೆ ತಮ್ಮ ಕಾಯವನ್ನೂ ಮನವನ್ನೂ ದೇಶದ ಕಾರ್ಯಕ್ಕಾಗಿಯೇ ಸಜ್ಜುಗೊಳಿಸಿದ್ದಾರೆ. ಈ ಮಹಿಳೆಯರ ತ್ಯಾಗ ಜೀವನವು ಇಂದಿನ ಪೀಳಿಗೆಗೆ ಮಾರ್ಗದರ್ಶಕವಾಗಲೇಬೇಕು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಸುಶೀಲಾರವರು ಮುಂದುವರಿಸುತ್ತಾರೆ. ನನಗಿಂತ ನಮ್ಮ ಯಜಮಾನರ ಮೇಲೆ ಬ್ರಿಟಿಷರ ಕ್ರೂರದೃಷ್ಟಿ ಇತ್ತು. ನಾನು ಅವರೊಡನೆ ಇದ್ದರೆ ಅಪಾಯವೆಂದು ಮರೆಯಾಗಿರಲು ಅವರನ್ನು ಮನೆಬಿಟ್ಟು ಕಳುಹಿಸುತ್ತಿದ್ದೆ. ಪೋಲೀಸಿನವರು ಬಂದು ಯಜಮಾನರು ಎಲ್ಲಿದ್ದಾರೆ ಹೇಳಿ ಎಂದು ನನ್ನನ್ನು ಚಿತ್ರಹಿಂಸೆ ಮಾಡುತ್ತಿದ್ದರು, ಆ ಸಮಯದಲ್ಲಿ ಬಾಯಿಬಿಡದೆ ದೇವರನ್ನು ಮೊರೆಯಿಟ್ಟಿದ್ದೇನೆ. 'ಅಮ್ಮಾ ಭಾರತಾಂಬೆ, ನಿನ್ನ ಸೇವೆ ಮಾಡುತ್ತಿದ್ದಾರೆ. ಅವರ ರಕ್ಷಣೆಯನ್ನು ನೋಡಿಕೊ ತಾಯಿ' ಎಂದು ಮನಸ್ಸಿನಲ್ಲೇ ಬೇಡಿಕೊಂಡೆ. ಮಾತೆಗೆ ನನ್ನ ಮಾತು ಕೇಳಿಸಿತೋ ಎನ್ನುವಂತೆ, ಸರ್ಕಾರದ ಮುಷ್ಟಿಯಿಂದ ಇವರು ಪಾರಾದ ಸುದ್ದಿ ನನಗೆ ತಿಳಿದು ಬರುತ್ತಿತ್ತು.

"ಯಾರೋ ಪುಣ್ಯಾತ್ಮರು ಇವರನ್ನು ತಮ್ಮ ಮನೆಯ ಹಂಡೆಯಲ್ಲಿ ಬಚ್ಚಿಟ್ಟಿದ್ದು ಪೋಲೀಸಿನವರು ಬಂದು ಕೇಳಿದಾಗ. ಭೀಮಕುಮಾರರು ಎಲ್ಲಿದ್ದಾರೋ ನಮಗೇನು ಗೊತ್ತು. ಬೇಕಾದರೆ ಮನೆ ಜಪ್ತಿಮಾಡಿ ಎಂದು ಧೈರ್ಯದಿಂದ ಹೇಳಿದರಂತೆ. ಸಿಪಾಯಿಗಳು ಒಳಗೆ ನುಗ್ಗಿ ಮನೆಯೆಲ್ಲಾ ತಡಕಾಡಿದ್ದಾರೆ. ಹಂಡೆಯಲ್ಲಿ ಕೂತಿದ್ದ ಇವರು ಅವರ ಕಣ್ಣಿಗೆ ಬೀಳಲೇ ಇಲ್ಲ. ಇದು ನನ್ನ ಪ್ರಾರ್ಥನೆಯ ಶಕ್ತಿಯಲ್ಲವೆ ?" ಎನ್ನುತ್ತಾರೆ ಸುಶೀಲಾ.

"ಅಯ್ಯೋ ಇವರು ಇಷ್ಟೇನೇ ? ಇನ್ನೂ ಅಪಾಯಕರವಾದ ಸಂದರ್ಭದಲ್ಲಿ ಒಳಚರಂಡಿಯಲ್ಲೇ ಸಂಚಾರ ಮಾಡಿದ್ದಾರೆ, ಒಂದುಕಡೆ ಅವಿತು ಕುಳಿತುಕೊಳ್ಳುವವರಲ್ಲ ಇವರು. ಜನರನ್ನು ಹತ್ತಿಕ್ಕಿ ಚಳವಳಿಯ ಬೆಂಕಿ ಹಬ್ಬಿಸಿ ಬರುತ್ತಿದ್ದರು. ಸರ್ಕಾರ ಇವರನ್ನು ಹೊಂಚುಹಾಕುತ್ತಲೇ ಇತ್ತು. ಸರ್ಕಾರದ ಕೈಗೆ ಸಿಕ್ಕಿಯೂ ಇದ್ದಾರೆ ಒಟ್ಟಿನಲ್ಲಿ ಎಂಟು ವರ್ಷಗಳ ಕಾಲ ಜೈಲುವಾಸ ಅನುಭವಿಸಿದ್ದಾರೆ–" ಎನ್ನುತ್ತಿದ್ದಾಗ ಭೀಮಕುಮಾರ್ ತಮ್ಮ ಸೆರೆಮನೆವಾಸದ ಅನುಭವವನ್ನು ಒಂದಿಷ್ಟು ಹೇಳಲು ಇಷ್ಟಪಡುತ್ತಾರೆ.

"ಸೆರೆಮನೆ ಅನುಭವವೆಂದೇ ಒಂದು ಪುಸ್ತಕವನ್ನು ಬರೆದಿದ್ದೇನೆ. ನಮ್ಮನ್ನು ಕೆಳದರ್ಜೆಯ ಸೆರೆಗೆ ಹಾಕುತ್ತಿದ್ದರು. ಒಂದನೆಯ, ಎರಡನೆಯ ಮತ್ತು ಮೂರನೆಯ ದರ್ಜೆಯ ಸೆರೆಮನೆಯೆಂದು ಮೂರುವಿಧ ಮಾಡಿದ್ದರು. 'ಸಿ' ಕ್ಲಾಸ್ ಅಥವಾ ಕೆಳ ದರ್ಜೆಯ ಖೈದಿಗಳ ಹತ್ತಿರ ಕಷ್ಟದ ಕೆಲಸ ತೆಗೆಯುತ್ತಿದ್ದರು. ರೋಡ್ ರೋಲರ್ ಎಳೆಯುವುದು, ಕಲ್ಲುಗಳನ್ನು ಅಗೆದು ರಸ್ತೆ ನಿರ್ಮಾಣ ಮಾಡುವುದು. ಸೇತುವೆ ಕಟ್ಟುವ ಕೆಲಸ– ಇದೆಲ್ಲಾ ಮಾಡಿದ್ದೇವೆ. ಕೆಲಸ ಮಾಡಲು ಹೆಚ್ಚು ಗಲಾಟೆ ಮಾಡಿದವರಿಗೆ "ಗಂಜಿ" ಶಿಕ್ಷೆ ಕೊಡುತ್ತಿದ್ದರು. ನೀರು ಗಂಜಿಯೇ ಊಟ. ಗೋಣಿ ಮೇಲೆ ಮಲಗುವುದು. ಇದನ್ನು ಅನುಭವಿಸಿದ್ದೇನೆ. ಸೆರೆಮನೆಯಲ್ಲಿ ಈ ಮೇಲು ಕೀಳು ವ್ಯತ್ಯಾಸ ಏಕೆಂದು ಜೈಲಿನಲ್ಲಿದ್ದಾಗಲೇ ಸತ್ಯಾಗ್ರಹ ಹೂಡಿದ್ದೇನೆ. ಎಲ್ಲಾ ರಾಜಕೀಯ ಖೈದಿಗಳನ್ನು ಒಂದೇ ಸಮ ನೋಡಿಕೊಳ್ಳಬೇಕೆಂದು ಸರ್ಕಾರದ ಗಮನ ವನ್ನು ಸೆಳೆದಿದ್ದೇನೆ. ಈ ನನ್ನ ಸತ್ಯಾಗ್ರಹ ಗಾಂಧೀಜಿಯವರಿಗೆ ಹಿತವೆನಿಸಿತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ನ್ಯಾಯಕ್ಕಾಗಿ ಎಲ್ಲಿದ್ದರೂ ಹೋರಾಡುತ್ತೇನೆ." ಎಂದು ನಗುತ್ತಾ ಮುಂದುವರಿಸಿದರು ಭೀಮಕುವರ್.

"ನನ್ನಿಂದ ಅರ್ಹತಾ ಪತ್ರ ಬೇಕೆಂದು ಅನೇಕರು ಬಂದು ಕೇಳುತ್ತಾರೆ. ಅದೇನೆಂದರೆ ನನ್ನೊಡನೆ ಜೈಲಿನಲ್ಲಿದ್ದರು ಎಂದು ವಾಕ್ಯ ಬರೆದುಕೊಟ್ಟರೆ ಸಾಕು. ಸರ್ಕಾರದಿಂದ ಇವರಿಗೆ ಮಾಸಾಶನ ಸಿಕ್ಕುತ್ತದೆ. ಈ ಸುಳ್ಳನ್ನು ನಾನೇಕೆ ಬರೆಯಲಿ ? ಒಬ್ಬರಂತೂ ಅದೆಷ್ಟೋ ಸಾವಿರ ರೂಪಾಯಿ ಕೊಡಲು ಬಂದಿದ್ದರು. ಒಂದು ರುಜುಹಾಕಿ ಎಂದು ದುಡ್ಡಿನ ಆಸೆ ತೋರಿಸಿದರು. ನೋಡಿ ಜನರ ನೀತಿಮಟ್ಟ ಎಷ್ಟಕ್ಕಿಳಿದಿದೆ. ಸರ್ಕಾರವೆಂದರೆ ಪವಿತ್ರ ಭಾವನೆಯೇ ಹೊರಟು ಹೋಯಿತು" ಎಂದು ಚಿಂತಿಸುತ್ತಾರೆ ದಂಪತಿಗಳಿಬ್ಬರೂ.

ಪುತ್ರರಾದ ಶ್ರೀಯುತ ಯಶವಂತಕುಮಾರರ ಮಾತಿನಲ್ಲಿ ಮುಗಿಸುವುದಾದರೆ "ಸಮಾಜದಲ್ಲಿ ಇಂದು ನಾವು ಒಳ್ಳೆಯ ಮಕ್ಕಳು ಎನಿಸಿಕೊಳ್ಳಲು ಕಾರಣ ನಮ್ಮ ತಂದೆ ತಾಯಿ ನಮ್ಮನ್ನು ಬೆಳೆಸಿದ ರೀತಿ. ನಮ್ಮ ತಾಯಿಯಿಂದ ನಾನು ಸಹನೆಯನ್ನು ಕಲಿತಿದ್ದೇನೆ. ಜೀವನದ ಸಮಸ್ಯೆಯನ್ನು ಎದುರಿಸಿ ನಿಲ್ಲುವ ಸಾಮರ್ಥ್ಯವನ್ನು ನಮ್ಮ ತಾಯಿ ಕೊಟ್ಟಿದ್ದಾರೆ, ನಮ್ಮ ತಂದೆಯಿಂದ ಕಲಿತ ಗುಣಗಳು ದೇಶಪ್ರೇಮ, ದೇಶ ಭಕ್ತಿ. ದೇಶಕ್ಕಾಗಿ ಸೇವೆ, ವಿಶಾಲ ಮನೋಭಾವನೆ, ವಿವೇಚನಾ ಶಕ್ತಿ, ಜೀವನದಲ್ಲಿರ ಬೇಕಾದ ವೈಶಾಲ್ಯತೆ. ಜಾತಿಭೇದವಾಗಲೀ ಸಂಕುಚಿತ ಭಾವನೆಯಾಗಲೀ ನನ್ನಲ್ಲಿಲ್ಲ. ಇದಕ್ಕೆ ನಮ್ಮ ತಂದೆಯವರ ನೀತಿ ಮಾರ್ಗವೇ ಕಾರಣ. ಪೂಜೆ, ಧ್ಯಾನ ಇತ್ಯಾದಿ ಸಂಸ್ಕಾರಕ್ಕಿಂತ ನಮ್ಮಲ್ಲಿರುವ ಸಂಸ್ಕಾರ–ಜನೋಪಕಾರ ಅಷ್ಟೆ. ನಮ್ಮ ತಂದೆ ತಾಯಿ ಯಷ್ಟೇ ದೇಶಸೇವೆ, ಸಮಾಜಸೇವೆ ಮಾಡುತ್ತೇನೆನ್ನಲಾಗುವುದಿಲ್ಲ. ಆದರೆ ಈ ಬಗ್ಗೆ ಅವರಿಂದ ನನಗೆ ಸ್ಫೂರ್ತಿ ಖಂಡಿತ ದೊರಕಿದೆ. ಕರುಣೆ, ದಯೆಯ ಧಾರೆಯನ್ನೇ ಎರೆದಿದ್ದಾರೆ ನಮ್ಮ ತಾಯಿ. ನರಳುವ ಪ್ರಾಣಿಗಳನ್ನು ಕಂಡರೆ ಕರುಳು ಹಿಂಡು ವಂತಾಗಿ ನಮ್ಮ ತಾಯಿ ಅಂತಹ ಎಷ್ಟೋ ಪ್ರಾಣಿಗಳನ್ನು ಮನೆಗೆ ತಂದು ಸಾಕಿದ್ದಾರೆ. ಇಂತಹ ಹೃದಯ ಸ್ಪಂದಿಸುವ ಸಂಸ್ಕೃತಿ ನಮ್ಮಲ್ಲಿದೆ."

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

## ಶಾಂತಾಬಾಯಿ ದತ್ತಾತ್ರೇಯ ಕರಮರಕರ

"ಇಷ್ಟೆಲ್ಲಾ ಎಲ್ಲರ ವಿಚಾರವನ್ನೂ ಬರೆದಿರಿ. ಕರಮರಕರರನ್ನು ಹೇಗೆ ಮರೆತಿರಿ ಎನ್ನಬೇಕೆಂದಿದ್ದೆ. ಅಷ್ಟರಲ್ಲಿ ನೀವೇ ಬಂದಿರಿ. ಇಲ್ಲವಾದರೆ ನಿಮ್ಮೊಡನೆ ವಾದಮಾಡಬೇಕೆಂದಿದ್ದೆ"—ಎಂದು ಬಾಯಿತುಂಬ ಮಾತು ಪ್ರಾರಂಭಿಸಿದ ಶ್ರೀಮತಿ ಶಾಂತಾಬಾಯಿ ಕರಮರಕರರ ಮನಸ್ಸು ಎಷ್ಟು ಸ್ವಚ್ಛ, ನುಡಿಗಳು ಎಷ್ಟು ಆತ್ಮೀಯ! ಆ ಭಾವನೆಯನ್ನು ವ್ಯಕ್ತಪಡಿಸುವ ಮಾರ್ಗ ಎಷ್ಟು ನೇರ, ಸ್ವಭಾವ ಎಷ್ಟು ಸರಳ...!

ಅಪರಿಚಿತರನ್ನೂ ಚಿರಪರಿಚಿತರಂತೆ ಪ್ರೀತಿ, ಸ್ನೇಹದಿಂದ ಮಾತಾಡಿಸುವ ಅವರ ಮಾತೃ ಹೃದಯ ನಿಜವಾಗಿಯೂ ಬಹಳ ಹಿತವೆನ್ನಿಸುತ್ತದೆ. ಎಪ್ಪತ್ತೈದು ವರ್ಷ ವಯಸ್ಸು ಮತ್ತು ಪೂರ್ಣ ಅನುಭವದ ಪರಿಪಕ್ವತೆ ಇದ್ದರೂ ಮಕ್ಕಳೊಂದಿಗೆ ಮಗುವಾಗಿ ಯುವಜನರೊಂದಿಗೆ ಯುವತಿಯಾಗಿ, ನಮ್ಮ ವಯಸ್ಸು ವ್ಯಕ್ತಿತ್ವಕ್ಕೆ ಅನುಗುಣವಾಗಿ ಅನುಸರಿಸಿ ಮಾತಾಡುವ ಒಂದು ವಿಶೇಷ ಗುಣ ಶಾಂತಾಬಾಯಿಯವರಲ್ಲಿದೆ.

ಮಾತಾಡುತ್ತಿರುವಾಗ ಅವರ ಮೊಮ್ಮಗು ಹತ್ತಿರ ಬಂದು, ದುಂಡುದುಂಡಾಗಿ ಮೆತ್ತಗಿರುವ ಅಜ್ಜಿಯ ಕೈಮೇಲೆ ಕುಳಿತು ಆಡಲು ಅಪೇಕ್ಷಿಸಿದರೆ ಮಗುವನ್ನು ರಂಜಿಸಿ ಎತ್ತಿ ಮುದ್ದಾಡಿ ಆಡಿಸುತ್ತಾ ಈ ಕಡೆ ಮಾತಿನ ಕಡೆಗೂ ಗಮನ ಕೊಡುವರು.

"ನನ್ನನ್ನು ಕಂಡರೆ ನನ್ನ ಮೊಮ್ಮಕ್ಕಳು ನಿಶಾನೆ ಹಿಡಿದು ನಿಂತು ಜೈ ಎಂದು ಕೂಗಿ ಅಜ್ಜಿ ನೋಡು ಎನ್ನುವರು...ಇದಿಷ್ಟು ಕಲಿತಿದ್ದರೆ ಸಾಕು. ದೇಶಭಕ್ತಿ ಅವರಲ್ಲಿ ಬೆಳೆದಿದೆ ಎಂದು ನನಗೆ ಸಮಾಧಾನ" ಎನ್ನುತ್ತಾರೆ ಶಾಂತಾಬಾಯಿ.

ಕರಮರಕರ ದಂಪತಿಗಳ ಮಾತನ್ನು ಕೇಳುತ್ತಿದ್ದರೆ ಈಗಲೂ ಅವರು ಮಹಾ ರಸಿಕರು, ವಿಲಾಸಿಗಳು ಎನ್ನಿಸುತ್ತದೆ. ಶಾಂತಾಬಾಯಿಯವರು ಮಾತಾಡುವಾಗ ಶ್ರೀ ಕರಮರಕರರು ಪತ್ನಿಯ ಎದುರಲ್ಲಿ ಬಂದು ಕುಳಿತು ಅವರನ್ನೇ ನೋಡುತ್ತಿದ್ದಾಗ ಪತ್ನಿ ಹೇಳುತ್ತಾರೆ, "ಎಲ್ಲರೂ ನನ್ನನ್ನು ಕೇಳುತ್ತಿದ್ದರು, ನಿನ್ನ ಗಂಡನಿಗೆ ನೀನು ಏನು ತಿನ್ನಿಸುತ್ತಿ, ಇಷ್ಟು ಆರೋಗ್ಯವಾಗಿ ಗಟ್ಟಿಯಾಗಿ ಒಂದೇ ತರಹಾ ಇದ್ದಾರಲ್ಲಾ ಎನ್ನುತ್ತಿದ್ದರು. ಮತ್ತೇನು ಕೊಡುತ್ತೇನೆ, ಭಾಕ್ರಿ ಪಲ್ಲೆ ಅಷ್ಟೆ ಎನ್ನುತ್ತಿದ್ದೆ ಎಂದ ಪತ್ನಿಯ ಮಾತನ್ನು ಕೇಳಿ ಕರಮರಕರರು ಹೇಳುವರು, "ಏಕೆ, ಅಷ್ಟೇನೇ ? ಜೊತೆಗೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಪ್ರೀತಿಯನ್ನಿಟ್ಟು ಕೊಡುತ್ತಿರಲಿಲ್ಲವೇ ?" ಗಂಭೀರವಾಗಿ ಹೀಗೆಂದವರು, "ನಮ್ಮಿಬ್ಬರಲ್ಲೂ ಪತಿ ಪತ್ನಿಯರಲ್ಲಿ ಯಾವ ಭೇದಭಾವವೂ ಬಂದಿಲ್ಲ. ನಾವು ಯಾವತ್ತೂ ಯಾವ ವಿಚಾರಕ್ಕೂ ಜಗಳವಾಡಿಲ್ಲ. ನನ್ನ ದೇಶಪ್ರೇಮಕ್ಕೆ ತಕ್ಕ ಮೌಲ್ಯತೆ ಕೊಡುತ್ತಾ ನನ್ನೊಡನೆ ನಡೆದು ಬಂದಿದ್ದಾಳೆ ನನ್ನ ಸತಿ" ಎನ್ನುತ್ತಾರೆ.

"ನಾನೂ ನನ್ನ ಚಿಕ್ಕ ವಯಸ್ಸಿನಲ್ಲಿ ಲಾಠೀ, ಲೆಜೀಮು, ಕುದುರೆ ಸವಾರಿ, ಬಂದೂಕು ಗುರಿ ಹೊಡೆಯುವುದು, ಈಜುವುದು ಎಲ್ಲವನ್ನೂ ಕಲಿತಿದ್ದೇನ" ಎಂದು ಮಾತನ್ನು ಸೇರಿಸಿದ ಶಾಂತಾಬಾಯಿಯವರನ್ನೂ ಅವರ ಪತಿಯನ್ನೂ ನೋಡಿದರೆ ಪತಿಪತ್ನಿಯರು ಪರಸ್ಪರ ಎಲ್ಲದರಲ್ಲೂ ಹೋಲುವುದು ಚೆನ್ನಾಗಿ ತಿಳಿಯುತ್ತದೆ. ಇಬ್ಬರದೂ ಒಂದೇ ಮೈ ಬಣ್ಣ. ಎಂಬತ್ತಾರು ಮತ್ತು ಎಪ್ಪತ್ತಾರು ವಯಸ್ಸಿನ ಅಜ್ಜ ಅಜ್ಜಿಯರಾದರೂ ಕೆನ್ನೆಗಳಲ್ಲಿ ರಕ್ತ ಹಿಂಡುವಂತೆ ಹೊಂಬಣ್ಣ ಮಿಶ್ರ ಕೆಂಪಾದ ತುಂಬುಗೆನ್ನೆಗಳು, ಒಂದೇ ಮೈಗಾತ್ರ, ಸಾಮ್ಯತೆಯ ಎತ್ತರ, ತಿಳಿಹಾಲಿನಂತೆ ಇಬ್ಬರದೂ ಕಲ್ಮಶವಿಲ್ಲದ ಶುಭ್ರವಾದ ಮನಸ್ಸು. ಇವರಿಬ್ಬರ ಸರಳತೆಯನ್ನು ಕಂಡರೆ, ಕರಮರಕರರು ಕೇಂದ್ರ ಸಚಿವ ಸಂಪುಟದಲ್ಲಿದ್ದು ಆರೋಗ್ಯ ಸಚಿವರಾಗಿ ಸೇವೆ ಸಲ್ಲಿಸಿ, ಲೋಕಸಭಾ ಸದಸ್ಯರೂ ರಾಜ್ಯಸಭಾ ಸದಸ್ಯರೂ ಆಗಿದ್ದರೆಂಬುದು ಮರೆತೇ ಹೋಗುತ್ತದೆ.

ಧಾರವಾಡದಲ್ಲಿ ಇವರ ನಿವಾಸ. ಗುಡ್ಡ ದಿಣ್ಣೆಗಳು ವೃಕ್ಷ ಗುಚ್ಛಗಳ ನಿಸರ್ಗ ಸೌಂದರ್ಯದ ಮಧ್ಯೆ ಇದ್ದರೂ ಅತಿ ಚಿಕ್ಕದಾದ ಯಾವ ಆಡಂಬರವಿಲ್ಲದ ಮನೆ. ಮನೆಯೊಳಗೆ ಪುಸ್ತಕಗಳ ರಾಶಿ. ಜನತಾ ಶಿಕ್ಷಣ ಸಂಸ್ಥೆಯ ಆರ್ಥಿಕ ಸಂಶೋಧನಾ ಸಮಿತಿಗೆ ನಿರ್ದೇಶಕರಾಗಿ ಈಗ ಸಲ್ಲಿಸುತ್ತಿರುವ ಕರಮರಕರರು ಜನತಾ ಶಿಕ್ಷಣ ಸಂಸ್ಥೆಯ ಈ ಒಂದು ಸಣ್ಣ ವಾಸಸ್ಥಾನದಲ್ಲೇ ತೃಪ್ತಿಪಟ್ಟುಕೊಂಡಿರುವರು.

ನಿವಾಸದೊಳಗೆ ಪ್ರವೇಶಿಸುತ್ತಿದ್ದಂತೆ ನಮಗೆ ಕಾಣುವುದು ಫಳಫಳ ಹೊಳೆಯುವ 'ವಂದೇ ಮಾತರಂ' ಅಕ್ಷರಗಳ ದೊಡ್ಡದೊಂದು ಫೋಟೋ, ಕೈಯಲ್ಲಿ ಬರೆದಿರುವ ಗಾಂಧಿ ಮಹಾತ್ಮರ ಭಾವಚಿತ್ರ—ಇವು ಶಾಂತಾಬಾಯಿಯವರಿಂದಲೇ ತಯಾರಾದದ್ದು.

ಪ್ರತಿಯೊಂದರಲ್ಲೂ ಪತಿಯೊಡನೆ ಸ್ಪರ್ಧಿಸುವಂತಹ ಸುಗುಣದ ಶಾಂತಾಬಾಯಿಯವರು ಹುಟ್ಟಿದ ಮನೆ ಸಾಮಾನ್ಯವಾದದ್ದೇನೂ ಅಲ್ಲ. ಕರಮರಕರರ ಕರ ಹಿಡಿಯಬೇಕಾದರೆ ಈ ಹೆಣ್ಣಿನ ಸಾಮರ್ಥ್ಯವನ್ನು ತವರುಮನೆಯಲ್ಲೇ ಚಿಕ್ಕವಯಸ್ಸಿನಿಂದ ಅಳೆಯಬಹುದಾಗಿದೆ. ಮಧ್ವರಾವ್ ಕಬ್ಬೂರರ ಮಗಳೇ ಈ ಶಾಂತಾಬಾಯಿ ಎಂದರಷ್ಟೇ ಸಾಕು ಅವರು ಬೆಳೆದು ಬಂದ ಪರಿಸರದ ಅರ್ಥವಾಗುತ್ತದೆ.

ಧಾರವಾಡದ ಕಬ್ಬೂರರ ಮನೆಯನ್ನು ಕಬ್ಬೂರ ಧರ್ಮ ಛತ್ರವೆಂದೇ ಕರೆಯುತ್ತಿದ್ದ ಕಾಲವದು. ದೇಶಭಕ್ತ ಬಾಂಧವರಿಗೆಲ್ಲಾ ಸ್ನಾನ, ಊಟ. ವಿಶ್ರಾಂತಿಗಾಗಿ ಸದಾ ಬಾಗಿಲು ತೆರೆದೇ ಇರುತ್ತಿತ್ತು. ರಾಷ್ಟ್ರೀಯ ಕಾರ್ಯಕರ್ತರಿಗೆ ಕಬ್ಬೂರರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಮನೆ ಅನ್ನ ಛತ್ರವಾಗಿತ್ತು. ಮಧ್ವರಾವ್ ಕಬ್ಬೂರರು ವಕೀಲರಾಗಿ ಸಂಪಾದಿಸಿದ್ದು ಹೀಗೆ ಖರ್ಚಾಗುತ್ತಿದ್ದರೂ ಡಾ॥ ಹರ್ಡೀಕರರು ಬಂದಾಗಲೆಲ್ಲಾ "ಇಕೋ ಇದಿಷ್ಟು ಹಣ ನನ್ನಲ್ಲಿದೆ. ತೆಗೆದುಕೊಂಡು ಹೋಗು" ಎಂದು ದೇಶಕ್ಕಾಗಿ ವಿನಿಯೋಗಿಸಲು ಕೊಡುತ್ತಿದ್ದುದು ಕಬ್ಬೂರರ ವಾಡಿಕೆಯಾಗಿತ್ತು.

ಸತ್ಯಾಗ್ರಹ ಕಾಲದಲ್ಲಿ ಕಬ್ಬೂರ ಮಧ್ವರಾಯರು ಸೆರೆವಾಸ ಅನುಭವಿಸಿದ್ದ ಕಾರಣ ಆರೋಗ್ಯ ಕೆಟ್ಟು ಆಮಶಂಕೆ ಪ್ರಾರಂಭವಾಯಿತು. ಅದು ಕಠಿಣತರ ಬೇನೆಯಾಗಿ ಪರಿಣಮಿಸಿ ಜೈಲುವಾಸದಲ್ಲಿದ್ದಾಗಲೇ ಶಾಂತಾಬಾಯಿಯವರ ತಂದೆ ಕಬ್ಬೂರ ಮಧ್ವರಾವ್ ಕಾಯಿಲೆಯಿಂದ ಮೃತಪಟ್ಟರು.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕಬ್ಬೂರರ ಬಲಿದಾನವೇ ಆಯಿತು ಎನ್ನುತ್ತಾರೆ ಕರಮರಕರರು.

ಇವರ ತಮ್ಮಂದಿರಾದ ಡಾ॥ ಕಬ್ಬೂರ ನಾರಾಯಣರಾಯರು ಎಂ. ಬಿ. ಬಿ. ಎಸ್. ಪದವಿ ಪಡೆದು ಡಾಕ್ಟರಾಗಿ ವೈದ್ಯಕೀಯ ಸೇವೆ ಸಲ್ಲಿಸಿದರು. ೧೯೩೦ರ ಉಪ್ಪಿನ ಸತ್ಯಾಗ್ರಹ, ೧೯೩೨ರಲ್ಲಿ ಕಾಯಿದೆ ಭಂಗ ಚಳವಳಿಯಲ್ಲಿ ಭಾಗವಹಿಸಿ ಬಂಧನಕ್ಕೊಳಗಾದರು. ಜೈಲಿನಲ್ಲಿದ್ದಾಗ ಕೈದಿಗಳ ಬೇಡಿಕೆಗಳನ್ನು ಮಾನ್ಯ ಮಾಡಬೇಕೆಂದ ಹತ್ತು ದಿನಗಳ ಉಪವಾಸ ಮಾಡಿದರು. ಕೈದಿಗಳಿಗೆ ಆರೋಗ್ಯ ರಕ್ಷಣೆ ಕೊಡಬೇಕೆಂದು ಪುನಃ ಬೆಳಗಾವಿಯ ಜೈಲಿನಲ್ಲಿದ್ದಾಗ ಅನ್ನ ಸತ್ಯಾಗ್ರಹ ಮಾಡಿ ಸೆರೆಮನೆಗಳ ಸುಧಾರಣೆಗೆ ಕಾರಣರಾದರು.

ಇಂತಹ ಖ್ಯಾತ ದೇಶಭಕ್ತ ತಂದೆ ಮತ್ತು ಚಿಕ್ಕಪ್ಪನನ್ನು ಪಡೆದ ಶಾಂತಾಬಾಯಿ, "ನಮ್ಮ ಮನೆ ರಾಷ್ಟ್ರೀಯ ನಾಯಕರಿಗೆ ಮುಕ್ತದ್ವಾರವಾಗಿತ್ತು" ಎನ್ನುತ್ತಾರೆ. ತಾಯಿ ಅಹಲ್ಯಾಬಾಯಿ, ಚಿಕ್ಕಮ್ಮ ಕಮಲಾಬಾಯಿ ಮತ್ತು ದಿವಾಕರರ ಪತ್ನಿ ರಾಧಾಬಾಯಿ ಇವರೊಡನೆ ವಿದ್ಯಾರ್ಥಿನಿಯಾಗಿದ್ದಾಗಲೇ ಧಾರವಾಡದಲ್ಲಿ ಪ್ರಭಾತ ಫೇರಿಯಲ್ಲಿ ಶಾಂತಾಬಾಯಿ ಭಾಗವಹಿಸುತ್ತಿದ್ದರು. ಪ್ರಭಾತ ಫೇರಿ ಸಮಯದಲ್ಲಿ ಹಾಡುತ್ತಿದ್ದ ಹಾಡುಗಳಲ್ಲಿ ಒಂದನ್ನು ಜ್ಞಾಪಿಸಿಕೊಂಡು ಹಾಡಿ ತೋರಿಸುವರು—

"ಸತ್ಯವ ಸಾರುತಲಿ ಸತ್ಯದ ಮಾರ್ಗವ ಬೀರುತಲಿ
ಸತ್ಯಮೂರ್ತಿತಾ ಸತ್ಯವ ತೋರುವ ಸತ್ಯಾಗ್ರಹಿಯಾದ
ಸನ್ನುತ ಕಾರ್ಯಕೆ ಕಾಯುವ ಸವೆಸುತ ಸುಜನರು ಹೊರಟಿಹರು"...

ಮತ್ತೊಂದು ಹಾಡಿನ ಕೆಲವು ಸಾಲುಗಳು ಈ ರೀತಿ—

ಶಾಂತಿ ಸಮರದಾ ಕ್ರಾಂತಿಯ ಕೇಳಿ ಎದ್ದು ನಿಂತಿತು ಹಿಂದೂಸ್ತಾನ,
ಭ್ರಾಂತರಾದರಯ್ಯ ಆಂಗ್ಲರು...
ಬೆದರಿ ನಡುಗಿತು ಲಂಡನ್...

ಎಂದು ಶಾಂತಾಬಾಯಿ ಹಾಡಿದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



"ಚಿಕ್ಕ ವಯಸ್ಸಿನಿಂದ ನನಗೆ ಜ್ಞಾಪಕವಿದ್ದಂತೆ ನಮ್ಮ ಮನೆಗೆ ರಾಷ್ಟ್ರನಾಯಕರಾದ ಕಡಪ ರಾಘವೇಂದ್ರರಾವ್, ಶಾಂತಾರಾವ್ ಗಜೇಂದ್ರಘಡ, ಹುಕ್ಕೇರಿಕರ್ ಮತ್ತು ನೆಹರೂ ಇವರೆಲ್ಲಾ ಬರುತ್ತಿದ್ದರು. ಕೃಷ್ಣರಾವ್ ಮುದವೀಡಕರರು ಇಂಗ್ಲಿಷ್ ಮತ್ತು ಮಹಾಭಾರತದಲ್ಲಿಯ ಪಾಠಗಳನ್ನು ಹೇಳಿಕೊಟ್ಟರು. ಶಾಂತಾರಾವ್ ನನಗೆ ಈಜುವುದನ್ನು ಕಲಿಸಿದ್ದರು" ಎನ್ನುತ್ತಾರೆ.

೧೯೩೦ರ ಉಪ್ಪಿನ ಸತ್ಯಾಗ್ರಹದಲ್ಲಿ ಶಾಂತಾಬಾಯಿಯವರು ಪ್ರತ್ಯಕ್ಷ ರಾಷ್ಟ್ರೀಯ ಆಂದೋಲನದಲ್ಲಿ ಭಾಗವಹಿಸಿದರು. ಅನಂತರ ಪರದೇಶೀ ವಸ್ತ್ರ ಬಹಿಷ್ಕಾರದ ಆಂದೋಲನ ಪ್ರಾರಂಭವಾಯಿತು. ಕೃಷ್ಣಾಬಾಯಿ ಪಂಜೇಕರರ ಮುಖಂಡತ್ವದಲ್ಲಿ ವಿದೇಶೀ ವಸ್ತುಗಳ ಅಂಗಡಿಗಳ ಪಿಕೆಟಿಂಗ್ ಮಾಡಿದರು. ೧೯೩೬ರಲ್ಲಿ ಕರಮರಕರರೊಂದಿಗೆ ವಿವಾಹವಾಯಿತು.

ದತ್ತಾತ್ರೇಯ ಪರಶುರಾಮ ಕರಮರಕರ್ ಒಬ್ಬ ಕ್ರಾಂತಿವೀರ ಯುವಕರಿದ್ದರು. ಚಿಕ್ಕ ವಯಸ್ಸಿನ ಒಂದು ಘಟನೆ ಕರಮರಕರರ ಮನಸ್ಸಿನಲ್ಲುಳಿದು ಕ್ರಾಂತಿಗೆ ಪ್ರಚೋದಿಸಿತು. ಗಲ್ಲಿಗೇರಿಸಲ್ಪಟ್ಟ ಕ್ರಾಂತಿಕಾರನೊಬ್ಬನ ಕೂಗು ಆಗಾಗ ಅವರ ಕಿವಿಯಲ್ಲಿ ಮೊಳಗುತ್ತಿತ್ತು. "ನನ್ನೀ ರಕ್ತದ ಹನಿಹನಿಯೂ ಭಾರತದ ಮನೆ ಮನೆಯಲ್ಲಿ ಸ್ವಾತಂತ್ರ್ಯದ ಬೀಜ ಬಿತ್ತಲಿ" ಎಂದು ಘೋಷಿಸಿ ಮೃತಪಟ್ಟ ಕ್ರಾಂತಿಕಾರನ ಮಾತು ಸತ್ಯವೆಂಬಂತೆ ಕರಮರಕರರಂತಹ ಕ್ರಾಂತಿವೀರರು ಹುಟ್ಟಿಕೊಂಡರು.

ಕರ್ನಾಟಕ ಇತಿಹಾಸದಲ್ಲಿ ಅತ್ಯಂತ ಅಭಿರುಚಿಯುಳ್ಳ ಕರಮರಕರರು ಡೆಕ್ಕನ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಗಿಸಿ ಲಾ ಕಾಲೇಜಿನಲ್ಲಿ ಓದುತ್ತಿದ್ದಾಗ ಚಾಲುಕ್ಯರ ಇತಿಹಾಸದ ಅಧ್ಯಯನ ಮಾಡಿ ಒಂದು ನಿಬಂಧ ಮಂಡಿಸಿ ಪದಕ ಪಾರಿತೋಷಗಳನ್ನು ಪಡೆದರು. ೧೯೨೬ರಲ್ಲಿ ಧಾರವಾಡ ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲದ ಕಾರ್ಯದರ್ಶಿಯಾಗಿ ಆರಿಸಲ್ಪಟ್ಟರು. ಈ ಮಂಡಲದ ಅಧ್ಯಕ್ಷರು ಆಲೂರು ವೆಂಕಟರಾಯರು.

ವಕೀಲಿ ವೃತ್ತಿಯನ್ನವಲಂಬಿಸಿ ಧಾರವಾಡದಲ್ಲಿ ನೆಲೆಸಿದರು. ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿ ಕರಮರಕರರು ಕರಮುಕ್ತ ಉಪ್ಪನ್ನು ಹಂಚಿ, ಸತ್ಯ ನುಡಿದು ಕಲೆಕ್ಟರರ ಮನವೊಲಿಸಿಕೊಂಡರು. ೧೯೩೧ರಲ್ಲಿ ಕರ ನಿರಾಕರಣ ಚಳವಳಿಯನ್ನು ಅಂಕೋಲಾನಲ್ಲಿ ಪ್ರಾರಂಭಿಸಿದರು. ದಿವಾಕರರು ಶಿರಸಿ, ಸಿದ್ಧಾಪುರಕ್ಕೆ ಹೋದರು. ಕರಮರಕರರು ಹಿಚಕಡದಲ್ಲಿ ಚಳವಳಿಗೆ ಸಂಘಟನೆ ಮಾಡುತ್ತಿದ್ದಾಗ ವಾರೆಂಟ್ ಬರಲು ಅಲ್ಲಿಂದ ತಪ್ಪಿಸಿಕೊಂಡು ಕಣಗಿಲಕ್ಕೆ ಹೋಗಿ ಗುಡ್ಡದ ಓರೆಯಲ್ಲಿ ಅಡವಿಯ ನಡುವೆ ವಾಸಮಾಡತೊಡಗಿದರು. ಭಾವಿಕೇರಿ, ಸೂರ್ವೆ, ಶೆಟಗೇರಿ, ಹಿಚಕಡ, ವಂದಿಗೆ, ಮೊಗಟಾ, ಹಿಲ್ಲೂರ, ವಾಸ್ರೆ ಮುಂತಾದ ಕಡೆ ಶಿಬಿರಗಳನ್ನಿಟ್ಟು ಕೆಲಸ ಮಾಡುತ್ತಿದ್ದರೂ ಕರಮರಕರರ ಸುಳಿವು ಸರ್ಕಾರಕ್ಕೆ ಸಿಗಲಿಲ್ಲ.

ಕರಮರಕರರನ್ನು ಹಿಡಿದು ಕೊಟ್ಟವರಿಗೆ ಸರ್ಕಾರವು ಬಹುಮಾನ ನೀಡುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಘೋಷಣೆ ಮಾಡಿತ್ತು. ತಪ್ಪಿಸಿ ಓಡಾಡಿದಲ್ಲಿ 'ಗುಂಡಿಟ್ಟು ಕೊಲ್ಲುವ ಅಪ್ಪಣೆಯಾಯ್ತು. ಇಷ್ಟಾದರೂ ನಾನು ಮಾತ್ರ ವೇಷ ಮರೆಸಿಕೊಳ್ಳುತ್ತಿರಲಿಲ್ಲ ಎನ್ನುತ್ತಾರೆ ಕರಮರಕರರು.

ಗ್ರಾಮ ಗ್ರಾಮಗಳಿಗೆ ಹೋಗಿ ಪೋಲೀಸರು ಹೇಗೆ ಜಪ್ತಿ ನಡೆಸುತ್ತಿದ್ದರೆಂದು ವಿವರಿಸುತ್ತಾರೆ, "ಸಣ್ಣಪ್ಪ ದೇವಣ್ಣ ನಾಯ್ಕರ ಮನೆಯಲ್ಲಿ ನಾನು ಕಂಡಂತೆ ಎರಡು ಪೆಟ್ಟಿಗೆ ಮುರಿದು ನೋಡಿದರು. ಕೋಣೆಯಲ್ಲ ನಡುಮಟ್ಟ ಅಗೆದು ನೋಡಿದರು. ಯಾತ್ರೆಗೆ ಹೊರಡಲು ತಾಯಿಗಾಗಿ ಇಟ್ಟಿದ್ದ ಒಂದು ಸಣ್ಣ ಹಣದ ಗಂಟು ಸಿಕ್ಕಿತು. ಹುಲ್ಲಿನ ಗೊಣಬೆಯಲ್ಲಿದ್ದ ಪಾತ್ರೆಗಳನ್ನು ತೆಗೆದುಕೊಂಡರು. ಆಕಳನ್ನು ಜಪ್ತಿ ಮಾಡಿದರು. ದನಗಳ ಜಪ್ತಿ ಆಗುತ್ತಿದ್ದುದನ್ನು ಕಂಡ ಜನರು ತಮ್ಮ ಆಕಳನ್ನು ಅಡವಿಗೆ ಅಟ್ಟುತ್ತಿದ್ದರು."

ಕರಬಂದಿ ಮಾಡಿದವರ ಭೂಮಿ ಸರ್ಕಾರಕ್ಕೆ ಸೇರುತ್ತಿತ್ತು. ಕೆಲವರ ಮನೆಗಳನ್ನೂ ಸರ್ಕಾರ ವಶಪಡಿಸಿಕೊಂಡದ್ದರಿಂದ ಕರಬಂದಿ ಮಾಡಿದವರ ಮಕ್ಕಳ ಪೋಷಣೆಗಾಗಿ ಕೆ. ಎ. ವೆಂಕಟರಾಮಯ್ಯನವರು ಬಾಲಿಕಾಶ್ರಮಗಳನ್ನು ಏರ್ಪಡಿಸಿದರು. ಭೂಮಿ ಸಾಗುವಳಿಯ ನಷ್ಟದ ಪರಿಹಾರಕ್ಕಾಗಿ ನಿರ್ಮಿಸಿದ ಮಂಡಳಿಗಳಲ್ಲಿ ಅಂಕೋಲಾ ಮಂಡಳಿಗೆ ಕರಮರಕರರು ಕಾರ್ಯದರ್ಶಿಯಾದರು.

೧೯೪೦ರಲ್ಲಿ ವೈಯಕ್ತಿಕ ಸತ್ಯಾಗ್ರಹ ಆರಂಭವಾದಾಗ ಕೆ. ಪಿ. ಸಿ. ಸಿ. ಅಧ್ಯಕ್ಷ ಡಾ॥ ನಾಗನಗೌಡರು ಉಪಾಧ್ಯಕ್ಷೆ ಕೃಷ್ಣಾಬಾಯಿ ಪಂಜೇಕರರನ್ನು ತಮ್ಮ ಜಾಗಕ್ಕೆ ನೇಮಿಸಿ ಸತ್ಯಾಗ್ರಹ ಮಾಡಿ ಸೆರೆಮನೆ ಸೇರಿದರು. ಪಂಜೇಕರರು ತಮ್ಮ ಜಾಗಕ್ಕೆ ಕರಮರಕರರನ್ನು ನೇಮಿಸಿ ಸತ್ಯಾಗ್ರಹ ಮಾಡಿದರು. ವಿಶೇಷ ಪ್ರಸಂಗಗಳಲ್ಲಿ ಮಹಾತ್ಮರಿಗೆ ಪತ್ರ ಬರೆದು ಮಾರ್ಗದರ್ಶನ ಪಡೆದು ಅಹಿಂಸಾತ್ಮಕವಾಗಿ ಕಾರ್ಯಕ್ರಮಗಳನ್ನು ಕೈಗೊಂಡರು.

೧೯೪೨ರಿಂದೀಚೆಗೆ ಕರ್ನಾಟಕದ ಎಲ್ಲಾ ಭಾಗದಲ್ಲೂ ಆಂದೋಳನ ಸರಿಯಾಗಿಯೇ ನಡೆಯುತ್ತಿತ್ತು ಎಂದು ಹೇಳುತ್ತಾ ಕರಮರಕರರು ಧಾರವಾಡ, ಬೆಳಗಾಂವ ಜಿಲ್ಲೆಗಳಲ್ಲಿ ಮುಖ್ಯವಾಗಿ ಸುಸಂಘಟಿತ ಗುಂಪುಗಳು ವ್ಯವಸ್ಥಿತವಾಗಿ ಕಾರ್ಯ ಮಾಡುತ್ತಿದ್ದುದರಿಂದ ಈ ಜಿಲ್ಲೆಗಳಲ್ಲಿ ಪ್ರಖರ ಚಟುವಟಿಕೆಗಳು ನಡೆದಿದ್ದುವು ಎನ್ನುತ್ತಾರೆ. ಇದಕ್ಕೆ ಕಾರಣ ಮುಂದಾಳತ್ವದಲ್ಲಿದ್ದವರು ವೆಂಕಟೇಶ ಮಾಗಡಿ, ಬಿಂದಾಚಾರ್ಯ ಬುರ್ಲಿ, ಕೆ. ಎಫ್. ಪಾಟೀಲ, ಶಿವರಾಯಪ್ಪ ಮಾನಣ್ಣವರ ಕರಿಯಪ್ಪ, ಯರೇಶೀಮೆ ತಿಮ್ಮನಗೌಡ ಮೆಣಸಿನಹಾಳ, ಮಹದೇವಪ್ಪ ಮೈಲಾರ, ಗೋವಿಂದಾಚಾರ್ಯ ಅಗ್ನಿಹೋತ್ರಿ, ಶಿವಣ್ಣ ನೇಸ್ವಿ, ಮುಳೆಪ್ಪ ಮಾಯಣ್ಣನವರ, ನಾರಾಯಣ ಹೊಸಕೇರಿ, ನರಸಿಂಹ ದಾಬಡೆ ಮತ್ತು ಬೆಳಗಾಂವಿಯಲ್ಲಿ ಶ್ರೀರಂಗ ಕಾಮತ, ವಾಮನರಾವ್ ಬಿದ್ರಿ, ಅಣ್ಣು ಗುರೂಜಿ, ಅಪ್ಪಣ್ಣಾ ಪಾಟೀಲ, ಜಯದೇವ ಕುಲಕರ್ಣಿ, ಚನ್ನಪ್ಪವಾಲಿ, ರಾಮಚಂದ್ರ ವಡವಿ ಕ್ರಾಂತಿಯ ಮುಖಂಡರಾಗಿದ್ದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಉತ್ತರ ಕನ್ನಡದಲ್ಲಿ ಕೆ. ಜಿ. ಜೋಶಿ, ದಯಾನಂದ ನಾಡಕರ್ಣಿ ಮುಂದಾಳತ್ವ ವಹಿಸಿದ್ದರು. ಇವರುಗಳ ಪ್ರತಿ ಗುಂಪಿನಲ್ಲೂ ಕನಿಷ್ಠ ಐದುನೂರು ಕಾರ್ಯಕರ್ತರಿದ್ದರು.

ಕರ್ನಾಟಕದಲ್ಲಿ ನಡೆದ ಆಂದೋಲನಾ ಕಾರ್ಯಪದ್ಧತಿಯನ್ನು ಬೇರೆ ಪ್ರಾಂತಗಳೂ ಅನುಸರಿಸಿದ್ದರೆ ಒಳಿತಾಗುತ್ತಿತ್ತು ಎಂದು ಜಯಪ್ರಕಾಶ ನಾರಾಯಣ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಬೆಳಗಾಂವ, ಧಾರವಾಡ ಜಿಲ್ಲೆಗಳ ಚಳವಳಿಯನ್ನು ಹಿಮ್ಮೆಟ್ಟಿಸಲು ಸರ್ಕಾರಕ್ಕೆ ಸಾಧ್ಯವಾಗಲಿಲ್ಲವೆನ್ನುತ್ತಾರೆ ಕರಮರಕರರು. ಹಳ್ಳಿಗರು ಚಳವಳಿಗಾರರ ಬಗ್ಗೆ ಯಾವೊಂದು ಸುಳಿವನ್ನೂ ಪೊಲೀಸರಿಗೆ ಕೊಡುತ್ತಿರಲಿಲ್ಲ. ವಿಧ್ವಂಸಕ ಕೃತ್ಯಗಳಿಗಾಗಿ ಮರಣದಂಡನೆ ವಿಧಿಸುವ ವಿಶೇಷಾಧಿಕಾರವುಳ್ಳ ಸ್ಪೆಷಲ್ ಕೋರ್ಟುಗಳನ್ನು ಧಾರವಾಡ, ಬಿಜಾಪುರ, ಬೆಳಗಾಂವ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ನಿರ್ಮಿಸಿದ ಪ್ರಯತ್ನ ವಿಫಲವಾಯಿತು.

ಬೆಳಗಾಂವಿಯಲ್ಲಿ ಸೈನ್ಯದ ಒಂದು ಬೆಟಾಲಿಯನ್ ಇರಬೇಕು. ಬೈಲಹೊಂಗಲ, ಕಿತ್ತೂರು, ಧಾರವಾಡ, ಆಳ್ನಾವರ, ಹಾವೇರಿ, ಗದಗ ಈ ಸ್ಥಳಗಳಲ್ಲಿ ಒಂದೊಂದು ಕಂಪೆನಿ ಇರಬೇಕೆಂದು ಬ್ರಿಟಿಷ್ ಸರ್ಕಾರ ನಿರ್ಧರಿಸಿತು. ಪೋಲೀಸರ ನೆರವಿಗೆ ಸೈನ್ಯ ಬರುವಂತಾದುದು ಸ್ವಾತಂತ್ರ್ಯಾಂದೋಲನದ ಇತಿಹಾಸದಲ್ಲಿ ಬಹುಶಃ ಈ ಜಿಲ್ಲೆಗಳಲ್ಲೇ ಎನ್ನುತ್ತಾರೆ ಕರಮರಕರರು.

ಡಿ. ಎಸ್. ಪಿ. ಯಾಗಿದ್ದ ಕಾಮಟೆಯವರು ಕರಮರಕರರ ಆಪ್ತ ಸ್ನೇಹಿತರಾದ್ದರಿಂದ ಶಿಕ್ಷೆಯನ್ನು ಕಡಿಮೆ ಮಾಡಿ ಜೈಲಿನಿಂದ ಬಿಡುಗಡೆ ಮಾಡುತ್ತಿದ್ದರು. ಮುಂಬೈ ಗವರ್ನರ್ ಇದಕ್ಕೆ ಆಕ್ಷೇಪಿಸಿ ಏಕೆ ಬಿಟ್ಟಿರೆಂದು ಕಾಮಟೆಯವರನ್ನು ಪ್ರಶ್ನಿಸಲು "ಕರಮರಕರರನ್ನು ಬಿಡುಗಡೆ ಮಾಡಿದರೆ ಧಾರವಾಡ ಭಾಗದಲ್ಲಿ ಶಾಂತಿ ಮೂಡಬಹುದೆಂದು ನಾನು ಹಾಗೆ ಮಾಡಿದೆ" ಎಂದರಂತೆ. ಕಾಮಟೆಯವರು ಮಾಡಿದ್ದು ಸರಿಯೆಂದು ಗವರ್ನರ್ ಒಪ್ಪಿಕೊಂಡರಂತೆ.

೧೯೪೫ರಲ್ಲಿ ಬೊಂಬಾಯಿ ಪ್ರಾಂತ್ಯದ ಆರು ಜಿಲ್ಲೆಗಳಿಂದ ಕೇಂದ್ರ ಲೆಜಿಸ್ಲೇಟೀವ್ ಅಸೆಂಬ್ಲಿಗೆ ಪ್ರಚಂಡ ಬಹುಮತದಿಂದ ಕರಮರಕರರು ಆಯ್ಕೆಯಾದರು.

ಹರ್ಡೀಕರ್, ದಿವಾಕರ್, ಹುಕ್ಕೇರಿಕರ್, ಕರಮರಕರ ಈ ನಾಲ್ವರೂ ಆಂದೋಲನ ಕಾಲದಲ್ಲಿ ಒಬ್ಬರನ್ನೊಬ್ಬರು ಬಿಟ್ಟಿರುತ್ತಿರಲಿಲ್ಲ.

"ನಾವು ದೆಹಲಿಯಲ್ಲಿದ್ದಾಗ ಒಂದು ಬಾರಿ ಹೀಗೆ ನಡೆದಿತ್ತು. ಮೂರು ತಿಂಗಳಾದರೂ ಹುಕ್ಕೇರಿಕರ್ ಬರಲಿಲ್ಲ. ತಿಂಗಳಿಗೊಮ್ಮೆ ಬಂದೇ ಬರುತ್ತಿದ್ದರು. ಮಿಕ್ಕ ಮೂವರೂ ಚಡಪಡಿಸಲಾರಂಭಿಸಿದರು. ಕೊನೆಗೊಮ್ಮೆ ಹುಕ್ಕೇರಿಕರ್ ವಿಮಾನ ಇಳಿದು ಮನೆಗೆ ಬಂದರು. ಹುಕ್ಕೇರಿಕರರ ಆಗಮನದ ಆನಂದದಲ್ಲಿ ಅವರನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಆಹ್ವಾನಿಸುತ್ತಾ ಒಬ್ಬರು ಹಣ್ಣು ನಿವಾಳಿಸಿದರು. ಒಬ್ಬರು ಕಾಯಿ ಒಡೆದರು. ಮತ್ತೊಬ್ಬರು ಕಾಲ ಮೇಲೆ ನೀರು ಹಾಕಿದರು. ನಾನು ಆರತಿ ಬೆಳಗಿದೆ. ಹುಕ್ಕೇರಿಕರರು ಇದೆಲ್ಲಾ ಏನೆಂದು ಆಶ್ಚರ್ಯಪಟ್ಟು ಕೇಳಿದಾಗ "ನೀವು ಬಹಳ ದಿವಸ ಬರಲಿಲ್ಲ. ಆದ್ದರಿಂದ ಇದು ಆನಂದದ ಮಹಾಪೂರ ಎಂದರು ಮೂವರೂ" ಎಂದು ಹೇಳಿ ಪುನಃ ನಕ್ಕು ಶಾಂತಾಬಾಯಿ ಮುಂದುವರಿಸುವರು.

8260

"ಹುಕ್ಕೇರಿಕರ ಮಾಸ್ತರರು ೧೯೨೫ರಿಂದಲೇ ನನಗೆ ಚೆನ್ನಾಗಿ ಗೊತ್ತು. ದಿನಾಲು ನಮ್ಮ ತಂದೆಯನ್ನು ಭೆಟ್ಟಿಯಾಗಲು ಬರುತ್ತಿದ್ದರು...ನನಗೆ ಮದುವೆಯಾದ ಮೇಲೆ ಶ್ರೀ ಕರಮರಕರರು ಆರೋಗ್ಯ ಸಚಿವರಾಗಿದ್ದಾಗ ಸ್ವಿಟ್ಸರ್ಲೆಂಡಿನ ಆರೋಗ್ಯ ಪರಿಷತ್ತಿಗೆ ಅವರೊಡನೆ ನಾನೂ ಹೋಗಿದ್ದೆ. ತಿರುಗಿ ಬರುವಾಗ ನಮ್ಮ ವಿಮಾನಕ್ಕೆ ಬೆಂಕಿ ಹತ್ತಿ ಒಂದು ಪಕ್ಕ ಸುಟ್ಟಿತು. ಎಲ್ಲರಿಗೂ ಗಾಬರಿಯಾಗಿತ್ತು. ಹುಕ್ಕೇರಿಕರರು ಕರಾಚಿಯಲ್ಲಿ ತಂಗಿದ ನಮ್ಮ ವಿಮಾನ ನಿಲ್ದಾಣಕ್ಕೆ ಟೆಲಿಫೋನು ಮಾಡಿದರು. ನಾವು ಸುರಕ್ಷಿತವಾಗಿ ಬಂದು ಸೇರಿದುದು ಅವರಿಗೆ ಬಹಳ ಸಂತೋಷ. ಹುಕ್ಕೇರಿಕರರೆಂದರೆ ನಮ್ಮ ಮನೆಗೆ ಸೇರಿದವರಂತೆಯೇ ಇದ್ದರು."

ಈ ಗಂಡಾಂತರ ಘಟನೆ ಹೇಗೆ ಪರಿಹಾರವಾಯ್ತೆಂದು ಅಚ್ಚರಿಗೊಂಡಾಗ, ಕರಮರಕರರು ಮತ್ತೊಂದು ಘಟನೆಯನ್ನು ಹೇಳುವರು, "ಆಂದೋಲನ ಸಮಯದಲ್ಲಿ ನಾನು ಅಡವಿಯಲ್ಲಿ ಅಡ್ಡಾಡುತ್ತಿದ್ದಾಗ ವಿಷಸರ್ಪವೊಂದು ನನ್ನ ಕಾಲನ್ನು ಕಚ್ಚಿತು. ಕೂಡಲೇ ಕಾಲನ್ನು ಝಾಡಾಯಿಸಿ ಒದರಿದೆ. ನನ್ನೊಂದಿಗೆ ಬಂದವರೊಬ್ಬರು ಬಾಯಿಂದ ಕಚ್ಚಿ ವಿಷ ತೆಗೆದರು" ಎಂದು ಹೇಳಿ ಹಾವು ಕಚ್ಚಿದ ಜಾಗ ಈಗಲೂ ಗುರುತಾಗಿರುವುದನ್ನೂ, ತಾವು ಬದುಕಿದ ಆಶ್ಚರ್ಯ ಸಂಗತಿಯನ್ನೂ ಹೇಳಿದರು.

ಮಹಾರಾಷ್ಟ್ರವು ಬಲಿಷ್ಠ ಜನರನ್ನು ಸೃಷ್ಟಿಸಿದೆಯೆಂಬುದಕ್ಕೆ ಈ ದಂಪತಿಗಳೇ ಸಾಕ್ಷಿ. ಶರೀರದಂತೆಯೇ ಜೀವವೂ ಗಟ್ಟಿ. ಇಂತಹ ಜೀವವನ್ನು ದೇಶಕ್ಕಾಗಿ ತ್ಯಾಗ ಮಾಡಲು ಸಿದ್ಧರಿದ್ದ ಅವರ ಮನಸ್ಸೂ ಗಟ್ಟಿಯಲ್ಲವೇ ?

ಪತಿಯಂತೆಯೇ ಶಾಂತಾಬಾಯಿಯವರೂ ವೈಯಕ್ತಿಕ ಸತ್ಯಾಗ್ರಹ ಕಾಲದಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯ, ಜೆ. ಬಿ. ಕೃಪಲಾನಿ, ಸಾದಿಕ್ ಅಲಿ ಇವರ ಮಾರ್ಗದರ್ಶನದಲ್ಲಿ ದೇಶಕ್ಕಾಗಿ ದುಡಿದವರು. ೧೯೪೦ರಲ್ಲಿ ವೈಯಕ್ತಿಕ ಸತ್ಯಾಗ್ರಹದಲ್ಲಿ ಭಾಗವಹಿಸಲು ಅಪೇಕ್ಷಿಸಿದ ಶಾಂತಾಬಾಯಿಗೆ ಆರು ತಿಂಗಳ ಹಸುಗೂಸು. ೧೯೪೨ರ ಕ್ವಿಟ್ ಇಂಡಿಯಾ ಆಂದೋಲನದಲ್ಲಿ ಬಂಧನಕ್ಕೊಳಗಾದರು. ಬಿಡುಗಡೆಯಾದ ನಂತರ ೧೯೪೩ರಲ್ಲಿ ಸತ್ಯಾಗ್ರಹ ಪ್ರಾರಂಭಿಸಿ ಧಾರವಾಡದ ಖಾದೀ ಭಂಡಾರದ ಮೈದಾನಕ್ಕೆ ಶಾಂತಾಬಾಯಿಯವರು ಸಂಘಟಿಸಲು ಹೋದಾಗ ಕೂಡಲೇ ಜನರು ಕಿಕ್ಕಿರಿದು, ಹೂವಿನ ಹಾರಗಳನ್ನು ಹಾಕಿ ಶಾಂತಾಬಾಯಿಯವರನ್ನು ಗೌರವಿಸಿದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ತಮ್ಮ ಕೈಯಲ್ಲಿದ್ದ ಮಗುವನ್ನು ಬುರ್ಲಿಯವರ ಪತ್ನಿಯ ಹತ್ತಿರ ಕೊಟ್ಟು ಕರಪತ್ರಗಳನ್ನು ಹಂಚಿ ಭಾಷಣ ಮಾಡಿದರು. ಕೂಡಲೇ ಪೋಲೀಸರು ಬಂದು ಮಗುವಿನೊಡನೆ ಶಾಂತಾಬಾಯಿಯನ್ನೂ ಮತ್ತು ಅದೇ ಸಮಯಕ್ಕೆ ದತ್ತಾತ್ರೇಯ ಗುಡಿಯ ಹತ್ತಿರ ಸತ್ಯಾಗ್ರಹ ಮಾಡಿದ ಶಕುಂತಲಾ ದಾಬಡೆಯನ್ನೂ ಪೋಲೀಸ್ ವ್ಯಾನಿನಲ್ಲಿ ಒಯ್ದು ವಿಚಾರಣೆ ನಡೆಸಿ ಜೈಲಿಗೆ ಹಾಕಿದರು. ಸಾದಾ ಶಿಕ್ಷೆಯಾದ್ದರಿಂದಲೂ, ಡಿ ಎಸ್ ಪಿ ಕಾಮಟೆಯವರ ಸಹಾಯದಿಂದಲೂ ಶಾಂತಾಬಾಯಿಯವರಿಗೆ ಸೆರೆವಾಸ ಕಠಿಣವೆನಿಸಲಿಲ್ಲ. ಸಣ್ಣ ಮಗುವಿನ ತಾಯಿಯೆಂದು ಹೆಚ್ಚು ಬ್ರೆಡ್, ಹಾಲು ಕೊಡುತ್ತಿದ್ದರು. ಅದನ್ನು ಜೈಲಿನಲ್ಲಿದ್ದ ಚಿಕ್ಕ ಮಕ್ಕಳಿಗೆ ಹಂಚುತ್ತಿದ್ದೆ ಎನ್ನುತ್ತಾರೆ ಶಾಂತಾಬಾಯಿ.

ಮಹಾತ್ಮರಿಗಿಂತ ಹೆಚ್ಚಾಗಿ ಕರಮರಕರ ದಂಪತಿಗಳಿಗೆ ಪಂಡಿತ ನೆಹರೂರವರೊಡನೆ ನಿಕಟ ಸಂಬಂಧವಿತ್ತು. ಪಂಡಿತಜೀಯವರೊಡನೆ ದೆಹಲಿಯಲ್ಲಿದ್ದಾಗ ಗಾಢವಾದ ಸ್ನೇಹ ಬೆಳೆದಿತ್ತು. ಶಾಂತಾಬಾಯಿ ಆ ದಿನಗಳನ್ನು ಮತ್ತೆ ಮತ್ತೆ ಜ್ಞಾಪಿಸಿಕೊಂಡು, ಇಂದಿರಾ ಗಾಂಧಿ ಜೊತೆ ಬೆಳಗಿನ ಝಾವ ಏಳುವುದು ತಣ್ಣೀರು ಸ್ನಾನ. ಧೀರೇಂದ್ರ ಬ್ರಹ್ಮಚಾರಿ ಹೇಳಿಕೊಡುತ್ತಿದ್ದ ಯೋಗ ಎಲ್ಲಾ ನನಗೂ ಅಭ್ಯಾಸವಾಗಿತ್ತೆಂದು ಹೇಳುತ್ತಾರೆ.

೧೯೨೧ರಲ್ಲೇ ಹುಬ್ಬಳ್ಳಿಯ ಸೇವಾದಳದ ಸ್ವಯಂಸೇವಕರಿಗೆ ಪ್ರಮಾಣ ಪತ್ರಗಳನ್ನು ನೀಡುವ ಸಮಾರಂಭದ ಅಧ್ಯಕ್ಷರಾಗಿ ನೆಹರೂರವರು ಹುಬ್ಬಳ್ಳಿಗೆ ಬಂದಿದ್ದಾಗ ದತ್ತಾತ್ರೇಯ ಕರಮರಕರರಿಗೆ ನೆಹರೂರವರ ನೇರ ಪರಿಚಯವಾಗಿತ್ತು. ಅಂದು ಮುನಿಸಿಪಲ್ ಮೈದಾನದಲ್ಲಿ ಸೇರಿದ ಸಭೆಯನ್ನುದ್ದೇಶಿಸಿ, "ಬ್ರಿಟಿಷ್ ಸರ್ಕಾರದೊಡನೆ ಹೋರಾಡಲು ನನ್ನ ಬಾಹುಗಳು ಸ್ಫುರಣಗೊಳ್ಳುತ್ತವೆ" ಎಂದು ಆವೇಶದಿಂದ ಸೇರಿದ ನೆಹರೂರವರ ನುಡಿಗಳು ಕರಮರಕರರ ಎದೆ ತಟ್ಟಿ ಎಚ್ಚರಿಸಿದುವು.

ನೆಹರೂರವರನ್ನು ಮತ್ತೆ ಮತ್ತೆ ನೋಡುವ ಹಂಬಲವಾಯ್ತು. ಪುನಃ ನೆಹರೂರವರು ೧೯೩೭ರಲ್ಲಿ ನಡೆದ ಅಸೆಂಬ್ಲಿಯ ಚುನಾವಣೆಯ ಪ್ರಚಾರಕ್ಕಾಗಿ ಕರ್ನಾಟಕಕ್ಕೆ ಬಂದಾಗ ಧಾರವಾಡದಿಂದ ಸಿಲ್ದಾಣದವರೆಗೆ ಅವರ ಕಾರಿನಲ್ಲೇ ಹರ್ಡೀಕರರೊಡನೆ ಕರಮರಕರರೂ ಇದ್ದರು. ಪರಿಸರ ನೈರ್ಮಲ್ಯದ ವಿಷಯದಲ್ಲಿ ನೆಹರೂ ಅವರಿಗೆ ಅಪರಿಮಿತ ಕಾಳಜಿ. ತಮ್ಮ ಹತ್ತಿರ, ಸುತ್ತಮುತ್ತ ಮಾಲಿನ್ಯವೇನಾದರೂ ಕಂಡರೆ ತಮ್ಮ ಸ್ಥಾನ ಗೌರವವನ್ನು ಮರೆತು ತಾವೇ ಸ್ವಚ್ಛಗೊಳಿಸುತ್ತಿದ್ದರು. ಅವರಿಗೆ ವಸ್ತುಗಳ ಮೌಲ್ಯ ಮತ್ತು ಸಾಂಸ್ಕೃತಿಕ ಮೌಲ್ಯಗಳ ಬಗ್ಗೆ ಸೂಕ್ಷ್ಮ ಪ್ರಜ್ಞೆ ಇತ್ತು. ಈ ಅವರ ಸ್ವಭಾವಕ್ಕೆ ನಿದರ್ಶನಗಳುಂಟು, ಎಂದು ಮೊಗಲ್ ಗಾರ್ಡನ್‌ನಲ್ಲಿ ಉಪಹಾರ ಕೂಟವಿದ್ದಾಗ, ಜನರು ಅಲಕ್ಷ್ಯದಿಂದ ಬಾಳೆಹಣ್ಣಿನ ಸಿಪ್ಪೆಯನ್ನು ಪಕ್ಕದಲ್ಲೇ ಬಿಸಾಕಿದ್ದನ್ನು ಕಂಡು, ನೆಹರೂ ತಾವೇ ಎಲ್ಲವನ್ನೂ ಒಟ್ಟುಗೂಡಿಸಿ ಎತ್ತಿ ಹಾಕಿದ್ದನ್ನೂ, ಅನೇಕ ಸಮಾರಂಭಗಳಲ್ಲಿ ಹೊರಲಾರದಷ್ಟು ಮಾಲೆಗಳನ್ನು ಅವರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಕೊರಳಿಗೆ ಹಾಕಿದಾಗ ಕೈ ನೂಲಿನ ಮಾಲೆಯನ್ನು ಮಾತ್ರ ತಮ್ಮ ಕೊರಳಲ್ಲೇ ಇಟ್ಟು ಕೊಳ್ಳುತ್ತಿದ್ದುದನ್ನೂ, ಒಂದು ಸಲ ಇಂದಿರಾ ಗಾಂಧಿಗೆ ಶಾಂತಾಬಾಯಿ ಉಡುತ್ತಿದ್ದಂತೆ ಒಂಬತ್ತು ಮೊಳದ ಸೀರೆಯುಡಿಸಿ ದೊಡ್ಡ ಕುಂಕುಮ ಹಚ್ಚಿದಾಗ, ಲಕ್ಷಣವಾದ ಮಗಳ ಮುಖವನ್ನು ಆಸಕ್ತಿಯಿಂದ ನೋಡಿ ಹಿಗ್ಗಿದುದನ್ನು— ನಿದರ್ಶನವಾಗಿ ಹೇಳುತ್ತಾರೆ.

ಕರಮರಕರರ ಮಗಳು ಮೋಹಿನೀ ಜೋಶಿ ಚಾಚಾ ನೆಹರೂ ಬಗ್ಗೆ ಹೀಗೆನ್ನುತ್ತಾರೆ. "ನಾನು ವಿದ್ಯಾರ್ಥಿಯಾಗಿದ್ದಾಗಿನ ನೆನಪೊಂದು. ನಮ್ಮ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಳನ ಪ್ರಸಂಗದಲ್ಲಿ ನಾವು ಒಂದು ನಾಟಕ ಮಾಡಿದೆವು. ನೆಹರೂ ಬಹಳ ಉತ್ಸಾಹದಿಂದ ನೋಡುತ್ತಿದ್ದರು. ಕಾರ್ಯಕ್ರಮ ಮುಗಿದ ನಂತರ ನೆಹರೂರವರು ಎಲ್ಲಾ ಬಾಲಕ ಬಾಲಕಿಯರ ಕೈ ಕುಲುಕಿದರು. ಭಾಗವಹಿಸದಿದ್ದವರಿಗೆ, "ನೀವು ಏನು ಮಾಡಿದಿರಿ ? ಏನೂ ಮಾಡದಿದ್ದರೆ ಏನಾಯ್ತು ? ನೀವು ನಾಟಕ ನೋಡಿದ್ದೇ ಒಂದು ಕೆಲಸ" ಎಂದು ಎಲ್ಲರನ್ನೂ ನಗಿಸಿದರು. ಅವರ ಸರಳತೆ, ಸಂವೇದನಾಶೀಲ ಮನಸ್ಸು ಸಂದೇಶ ಕೊಟ್ಟು ಹೋಗುವಂತಹದು. ಬದುಕಿನ ಸಾರವನ್ನು ಬೇರೆಯವರ ಚಿತ್ತದಲ್ಲಿ ಬಿಂಬಿಸುವಂತಹದು" ಎನ್ನುತ್ತಾರೆ ಮೋಹಿನಿ.

"ವಿದೇಶೀ ಅತಿಥಿಗಳು ಬಂದಾಗ ಅವರೆಲ್ಲರನ್ನು ವಿಚಾರಿಸಿಕೊಳ್ಳಲು ನೆಹರೂ ನನ್ನನ್ನು ನೇಮಿಸುತ್ತಿದ್ದರು. ಶಾಂತಾಬಾಯಿ ಇಲ್ಲದೆ ಯಾವ ಸಮಾರಂಭವೂ ಸಂಭ್ರಮವಾಗಲಾರದು ಎನ್ನುತ್ತಿದ್ದರು ನೆಹರೂ" ಎಂದು ಹೇಳಿ, ತಂದೆ ತಾಯಿ ಮಗಳು ಮೂವರೂ ನೆಹರೂ ನೆನಪನ್ನು ವಂದಿಡುತ್ತಾರೆ.

"ನಮ್ಮ ರಾಷ್ಟ್ರ ನಾಯಕರೆಲ್ಲರ ಹುಟ್ಟಿದ ಹಬ್ಬವನ್ನೂ ನಾನು ನಮ್ಮ ಮನೆಯಲ್ಲಿ ಆಚರಿಸುತ್ತೇನೆ" ಎಂದ ಶಾಂತಾಬಾಯಿಯವರು, "ಆ ದಿನಗಳಲ್ಲಿ ಒಂದು ನೂರು ಮಂದಿಯನ್ನಾದರೂ ಕರೆದು ಸಿಹಿ ಹಂಚಿ ಊಟ ಮಾಡಿಸುವೆನು. ಖಾದಿ ಪ್ರಚಾರ ಮಾಡುವೆನು ; ಕರಮರಕರರ ಹುಟ್ಟಿದ ಹಬ್ಬದಂತೆಯೇ ಇವೂ ನಡೆಯುತ್ತವೆ. ಮೊನ್ನೆ ಕೊಪ್ಪೀಕರರವರ ಜನ್ಮ ದಿನಾಚರಣೆ ನಡೆಸಿದೆವು. ಅದಕ್ಕಿಂತ ಅಚ್ಚರಿಯೆಂದರೆ, ರಂಗಣ್ಣ ದಿವಾಕರರು ಬಂದ ದಿನವೇ ಅವರ ಜನ್ಮದಿನದ ಸಂಭ್ರಮ ನಮ್ಮ ಮನೆಯಲ್ಲಿ ನಡೆಯುತ್ತಿತ್ತು. ತಮ್ಮ ಜನ್ಮದಿನವೆಂದೇ ಅವರಿಗೇ ಗೊತ್ತಿಲ್ಲ. ಒಂದು ಮಾಲೆ ಹಾಕಿದೆ. ನಮಸ್ಕರಿಸಿದೆ. ಸಿಹಿ ಕೊಟ್ಟೆ. ದಿವಾಕರರಿಗೆ ವಿಶ್ವಾಸದ ಕಣ್ಣೀರು ಹೊಳೆಯಾಗಿ ಹರಿಯಿತು...... ಅಂದಿನ ಕಾಲದ ನಮ್ಮಲ್ಲಿದ್ದ ರಾಷ್ಟ್ರ ಬಾಂಧವ್ಯ ಹಾಗಿತ್ತು."

ಕರಮರಕರ ದಂಪತಿಗಳ ಮಾತನ್ನು ಆಲಿಸುತ್ತಾ ಅವರು ಅನುಭವದ ಸಂಗತಿಗಳನ್ನು ಕೇಳುತ್ತಿದ್ದರೆ ಸಾಯಂಕಾಲ ಮುಗಿದು ರಾತ್ರಿಯಾದದ್ದೂ ಗೊತ್ತಾಗುವುದಿಲ್ಲ. ಇನ್ನೂ ಹೇಳುವುದಿದೆ ಎನ್ನುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

## ರಮಾಬಾಯಿ
## ಜೀವನರಾವ್ ಯಾಳಗಿ

"೧೯೪೨ರ ಕ್ರಾಂತಿಕಾರಿಕ ಶ್ರೀ ಗಜಾನನ ಯಾಳಗಿಯವರು ೧೯೮೮ರ ಡಿಸೆಂಬರ್ ಮಾಹೆ ೬ರಂದು ಬೆಳಿಗ್ಗೆ ನಿಧನರಾದರು."–ಈ ಸಾಲುಗಳನ್ನು ಮಾರನೆಯ ದಿನ ಪತ್ರಿಕೆಯಲ್ಲಿ ಓದಿ ನನ್ನ ಮೈ ರೋಮಾಂಚನವಾಯಿತು. ಇದಕ್ಕೆ ಒಂದು ವಾರ ಹಿಂದೆ ಮಾತ್ರವೇ ಶ್ರೀ ಗಜಾನನ ಯಾಳಗಿಯವರನ್ನು ನೋಡಿ ಮಾತಾಡಿಸಿ ಬಂದಿದ್ದೆ.

"ಒಂದು ಅಮೋಘ ಅಧ್ಯಾಯ ಅಂತ್ಯ"ವೆಂದು ನಿಟ್ಟುಸಿರು ಬಿಡುವಂತಾಯಿತು. ಜೊತೆಗೆ, ಈ ಮಹಾನ್ ವ್ಯಕ್ತಿಯನ್ನು ಸಂದರ್ಶಿಸಿದ ನನ್ನ ಭಾಗ್ಯವೇ ಭಾಗ್ಯವೆಂದು ಚಕಿತವಾಯಿತು.

ಅವಿಭಕ್ತ ಕುಟುಂಬದ ಯಾಳಗಿ ಸಂಸಾರದವರೊಂದಿಗೆ ಆತ್ಮೀಯರೂ ಅಭಿಮಾನಿಗಳೂ ಇದ್ದು ಛತ್ರದಂತಿರುವ ಯಾಳಗಿಯವರ ಮನೆ ಟಿಳಕವಾಡಿಯಲ್ಲಿ ಕಡೋಳ್ಕರ್ ರಸ್ತೆಯಲ್ಲಿ ಛತ್ರದ ಮಾದರಿಯಲ್ಲೇ ಕಟ್ಟಿರುವ ಮನೆ.

ಒಳಗೆ ಪ್ರವೇಶಿಸಿದರೆ ಮೇಲ್ಛಾವಣಿ ಇಲ್ಲದ ತೆರೆದ ಪಡಸಾಲೆಯಲ್ಲಿ ಔಷಧಿಗಾಗಿ ಕೆಲವರು ರೋಗಿಗಳು ಕಾಯುತ್ತಿರುವರೆಂದು ತಿಳಿಯಿತು. ಗಜಾನನವರ ಸಹೋದರರು ಇವರಿಗೆ ಔಷಧಿ ಉಪಚಾರಕ್ಕೆ ಗಮನ ಕೊಡುತ್ತಿದ್ದರು. ಹಜಾರದಲ್ಲಿ ಆಸನದಲ್ಲಿ ಕುಳಿತುಕೊಳ್ಳಲು ಒಳಗೆ ಕರೆದ ಮನೆಯ ಹೆಂಗಸರು ಗಜಾನನರವರ ಮತ್ತೊಬ್ಬ ಸಹೋದರರನ್ನು ಪರಿಚಯ ಮಾಡಿಕೊಟ್ಟು, "ಇವರು ಈಗ ತಾನೇ ಬೊಂಬಾಯಿಯ ದೂರದರ್ಶನಕ್ಕಾಗಿ 'ಯಾಳಗಿ ಮನೆತನದ ಕೊಡುಗೆ' ಎಂಬ ಕಾರ್ಯಕ್ರಮದಲ್ಲಿ ಭಾಗವಹಿಸಿ ಬಂದಿದ್ದಾರೆ. ಮತ್ತೆ ಅವರು ಈ ಕಾರ್ಯಕ್ರಮಕ್ಕಾಗಿಯೇ ಹೋಗಬೇಕಾಗುತ್ತದೆ" ಎಂದು ಸಂತೋಷದ ಸುದ್ದಿಯನ್ನಿತ್ತರು.

ನೋಡಲು ಗಟ್ಟಿ ಪುಷ್ಟಿ ದೇಹದ ಆಜಾನುಬಾಹುಗಳಾಗಿ ಆರೋಗ್ಯವಂತರಾದ ಈ ಮೂವರು ಸಹೋದರರೂ ಶ್ರೀಮತಿ ರಮಾಬಾಯಿ ಯಾಳಗಿಯವರ ಪತಿಯ ಸಹೋದರರ ಮಕ್ಕಳೆಂಬ ವಿಷಯ ತಿಳಿಯಿತು. ನಮ್ಮ ಕುತೂಹಲವನ್ನು ಕಂಡು ಯಾಳಗಿ ಸಹೋದರರು ತಾವು ಕೊಡುತ್ತಿದ್ದ ಔಷಧಿ ವಿಶೇಷವಾಗಿ ಕಾಮಾಲೆಗೆ ಮತ್ತು ಬಿಳೀಚರ್ಮದ ವ್ಯಾಧಿಗೆ ಎಂದು ಹೇಳಿದರು. ಚಿಕಿತ್ಸೆಗೆ ಒಳಗಾದವರ ಹೆಸರು, ದಿನಾಂಕ, ಬೇರೆ ಕಡೆ ವಾಸಿಯಾಗದೆ ಬಂದವರು. ಅನಂತರ ಇವರಲ್ಲಿ ಗುಣಪಡೆದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ವರು ಈ ಎಲ್ಲಾ ವಿವರಣೆಯನ್ನು ತಮ್ಮ ಡೈರಿ ಪುಸ್ತಕದಲ್ಲಿ ತೋರಿಸಿದರು. ಉಚಿತವಾಗಿ ಚಿಕಿತ್ಸೆ ಕೊಡುತ್ತಿರುವ ಅವರ ಶ್ರದ್ಧೆ ನೋಡಿದರೆ ಯಾರಿಗಾದರೂ ಆಶ್ಚರ್ಯವಾಗುತ್ತದೆ.

"ನಿಮ್ಮ ಮಾತೃಭಾಷೆ ಯಾವುದು ? ನಮಗೆ ಹಿಂದಿ, ಮರಾಠಿ, ಕನ್ನಡ, ತಮಿಳು, ತೆಲುಗು ಎಲ್ಲಾ ಗೊತ್ತು. ನಿಮ್ಮ ಭಾಷೆಯಲ್ಲೇ ಮಾತಾಡುವೆವು" ಎಂದು ತಮ್ಮ ಪರಿಚಯವನ್ನು ಮಾಡಿಕೊಡುವ ಸೊಸೆಯಂದಿರು ಎಲ್ಲರೊಡನೆಯೂ ಹೀಗೆಯೇ ಆತ್ಮೀಯರು. ಯಾಳಗಿ ಮನೆತನದ ಪುರುಷರ ವಿಶಾಲ ಮನೋಭಾವ, ಧಾರಾಳವಾಗಿ ಮಾತಾಡುವ ಸ್ವಭಾವ, ಗಟ್ಟಿ ಶರೀರ, ದೇಶಸೇವೆ ಈ ಎಲ್ಲಾ ಗುಣಗಳಿಗೂ ತಕ್ಕಂತೆ ಆ ಮನೆಗೆ ಸೇರಿದ ಸ್ತ್ರೀಯರೂ ಹಾಗೆಯೇ ಇದ್ದಾರೆನ್ನುವುದರಲ್ಲಿ ಸಂಶಯವಿಲ್ಲ.

"ಕರ್ನಾಟಕದಲ್ಲಿ ಸ್ವಾತಂತ್ರ್ಯ ಚಳವಳಿಯ ಬಿರುಸಿನಲ್ಲಿ ಪ್ರಥಮವಾಗಿ ಹೆಜ್ಜೆ ಇಟ್ಟ ಅಗ್ರಗಣ್ಯ ಜಿಲ್ಲೆ ಬೆಳಗಾವಿ. ಬೆಳಗಾವಿಯಲ್ಲಿ ಪ್ರಥಮವಾಗಿ ಚಳವಳಿಗೆ ಸಂಸಾರ ಸಮೇತ ಮೈಯೊಡ್ಡಿದ ಮನೆತನ ಯಾಳಗಿ ವಂಶ" ಎನ್ನುತ್ತಾರೆ ಶ್ರೀ ಆರ್. ಎಚ್. ಕುಲಕರ್ಣಿಯವರು.

ಬೆಳಗಾವಿಯ ಶ್ರೀ ಜಯದೇವರಾವ್ ಕುಲಕರ್ಣಿ ಮತ್ತು ಆರ್. ಎಚ್. ಕುಲಕರ್ಣಿ ಇಬ್ಬರೂ ಬೆಳಗಾವಿಯಲ್ಲಿ ನಡೆದ ಚಳವಳಿಯ ಘಟನೆಗಳನ್ನು ದಿನಾಂಕದೊಡನೆ ವ್ಯಕ್ತಿಗಳ ಹೆಸರನ್ನು ಸೂಚಿಸಿ ವಿವರಣೆ ಕೊಡಬಲ್ಲರು. ಸ್ವಾತಂತ್ರ್ಯ ಹೋರಾಟ ಕಾಲದ ಸಂಚಾರಿ ನಿಘಂಟು ಎನ್ನಬಹುದಾದ ಇವರಿಬ್ಬರೂ ಚಳವಳಿಗೆ ಕಾರಣಕರ್ತರನ್ನು ಮುಖಂಡರುಗಳನ್ನು ಅವರ ಪ್ರಭಾವವನ್ನೂ ಹೇಳುತ್ತಾರೆ.

"ಸತ್ಯ ದೇಶಭಕ್ತರು ಯಾರು, ನಕಲಿಯವರಾರು ಎಂದು ನಾನು ಹೇಳುತ್ತೇನೆ ಬನ್ನಿ" ಎನ್ನುತ್ತಾರೆ ಆರ್. ಎಚ್. ಕುಲಕರ್ಣಿ.

ಕೆಲಸ ಮಾಡಿದವರಿಗಿಂತ ಪೆನ್‌ಷನ್ ತೆಗೆದುಕೊಳ್ಳುವವರೇ ಹೆಚ್ಚು. ಎಷ್ಟು ನಕಲಿ ದೇಶಭಕ್ತರು ತಾವು ಸ್ವಾತಂತ್ರ್ಯ ಹೋರಾಟಗಾರರೆಂದು ಸರ್ಕಾರದ ಪಿಂಚಣಿ ಪಡೆಯುತ್ತಿರುವಾಗ ನಿಜವಾಗಿ ದುಡಿದ ದೇಶಭಕ್ತರಿಗೆ ಗೌರವವಾದರೂ ಸಲ್ಲಬೇಡವೇ ಎಂದು ಚಿಂತಿಸಿದ ಕುಲಕರ್ಣಿಯವರು ಅಂತಹವರ ಹೆಸರಿನ ಒಂದು ಪಟ್ಟಿ ತಯಾರಿಸಿ, 'ಅವರನ್ನು ಕರೆಯಿಸಿಕೊಳ್ಳುವ ಜವಾಬ್ದಾರಿಯೂ ನನ್ನದೇ ಇರಲಿ' ಎಂದು ಹೇಳಿ ಬೆಳಗಾವಿಯ ಮುಖಂಡರನ್ನು ಉತ್ತೇಜಿಸಿದರು. ಜೀವಸಹಿತ ಇರುವ ಹತ್ತಿರದಲ್ಲೇ ಸಿಕ್ಕುವ ೨೬ ಮಂದಿಯನ್ನು ಪತ್ತೆ ಹಚ್ಚಿ, ಅವರಿಗೆ ಸನ್ಮಾನ ಕೊಡುವೆವೆಂದು ಕಾಗದ ಬರೆಯುವುದರೊಳಗೆ ಮೂವರು ಸತ್ತರು ಎಂದು ಸಂತಾಪ ಪಟ್ಟುಕೊಂಡು. ಆರ್. ಎಚ್. ಕುಲಕರ್ಣಿಯವರು ದಯಾನಂದ ಅರಳಿಕಟ್ಟಿಯನ್ನು ನೆನೆದರು.

'ದಯಾನಂದ ಕ್ರಿಶ್ಚಿಯನ್. ಈತ ಬೆಳಗಾವಿಯಲ್ಲಿ ಪ್ರಥಮ ತಂಡದ ಸತ್ಯಾಗ್ರಹಿ. ಬೆಳಗಾವಿಯ ಎಲ್ಲಾ ಚಳವಳಿಯಲ್ಲೂ ಇವನೇ ಪ್ರಮುಖ. ಆದರೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಸ್ವಾತಂತ್ರ್ಯ ಬಂದಮೇಲೆ ಇವನಿಗೇನಾಯ್ತು ? ಮುರುಕು ಮನೆವಾಸ. ಡಾಕ್ಟರರ ಬಿಲ್ಲು ಕೊಡಲಾರದೆ ಬಡತನದ ರೋಗಿಯಾಗಿ ಮೃತಪಟ್ಟ' ಎಂದು ತಮ್ಮ ಸ್ನೇಹಿತನನ್ನು ನೆನೆದು ನೊಂದುಕೊಂಡರು.

ಸ್ವಲ್ಪ ತಡೆದು ಆರ್. ಎಚ್. ಮುಂದುವರಿಸುತ್ತಾರೆ. 'ಜಾರ್ಜ್ ಸಹೋದರರು ಭಯಂಕರ ದೇಶಭಕ್ತರಿದ್ದರು. ನನ್ನಲ್ಲಿ ದೇಶಭಕ್ತಿಯುಂಟಾಗಲು ನನ್ನ ಶಾಲೆಯ ಅಧ್ಯಾಪಕರಾಗಿದ್ದ ಸೈಮನ್ನರ ಪ್ರಭಾವ ನನ್ನ ಮೇಲೆ ಆಯಿತು. ಇವರು ಭಾರತ ರಾಷ್ಟ್ರೀಯ ಪ್ರವೃತ್ತಿಯುಳ್ಳವರಾಗಿದ್ದರು. ಅವಿವಾಹಿತರು, ಖಾದಿಧಾರಿಗಳು. ಬೆಳಗಾವಿಯಲ್ಲಿ ೧೯೨೮ರಲ್ಲಿ ಸ್ಟೂಡೆಂಟ್ ಯೂನಿಯನ್ ಸ್ಥಾಪಿಸಿದವರಲ್ಲಿ ಇವರೇ ಮೊದಲಿಗರು. ಅಮೆರಿಕನ್ ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿದ್ದ ಈ ಸಂಸ್ಥೆಯಲ್ಲಿ ವಲ್ಲಭಾಯಿ ಪಟೇಲರ ಭಾಷಣ ನಡೆಯಿತು. ಸಂಘಟನೆಯ ವೆಚ್ಚವನ್ನೆಲ್ಲಾ ಸೈಮನ್ನರೇ ವಹಿಸಿಕೊಳ್ಳುತ್ತಿದ್ದರು. ಒಂದು ವೇಳೆ ಊಟಮಾಡಿ ಹಣ ಉಳಿಸಿ ವಿದ್ಯಾರ್ಥಿ ಸಂಸ್ಥೆಗಾಗಿ ಖರ್ಚುಮಾಡುತ್ತಿದ್ದರು. ಸೈಮನ್ ಕಟ್ಟಿದ ವಿದ್ಯಾರ್ಥಿ ಸಂಘವು ಮುಂದೆ ೧೯೩೬ರಲ್ಲಿ ಆಲ್ ಇಂಡಿಯಾ ಸ್ಟೂಡೆಂಟ್ಸ್ ಫೆಡರೇಷನ್ ಶಾಖೆಯಾಗಿ ಬೆಳೆಯಿತು. ಶಾಲೆಯ ಅಮೆರಿಕನ್ ಪ್ರಿನ್ಸಿಪಾಲರೂ ರಾಷ್ಟ್ರೀಯ ವಿಚಾರಗಳಿಗೆ ಸಹಾನುಭೂತಿ ತೋರಿಸುತ್ತಿದ್ದರು. ಈ ಹಿನ್ನೆಲೆಯಲ್ಲೇ ೧೯೪೨ರ ಚಳವಳಿಯಲ್ಲಿ ನನ್ನಂತಹ ಅನೇಕ ವಿದ್ಯಾರ್ಥಿಗಳು ಧುಮುಕಲು ಕಾರಣ. ಆಗ ಒಳ್ಳೆಯ ಸಂಸ್ಕೃತಿಯ ವಾತಾವರಣವಿತ್ತು. ಜಾತಿವಾದ ಇರಲಿಲ್ಲ. ಭಾಷಾವಾದ ಇರಲಿಲ್ಲ. ಈಗಿನ ವಾತಾವರಣ ಬರೀ ಸ್ವಾರ್ಥ" ಎನ್ನುತ್ತಾರೆ ಆರ್. ಎಚ್. ಕೆ. ಯವರು.

"ನನ್ನಲ್ಲಿ ಬೆಳಗಾವಿಯ ಪೂರ್ಣ ಮಾಹಿತಿ ಇದೆ. ೧೯೪೨ರ ಕ್ರಾಂತಿಯಲ್ಲಿ ಭಾಗವಹಿಸಿದ ಹದಿನಾರು ಸಾವಿರ ಮಂದಿಯಲ್ಲಿ ಮೂರು ಸಾವಿರ ಬೆಳಗಾವಿಯಲ್ಲೇ ಕೈಸೆರೆ ಸಿಕ್ಕಿದ್ದಾರೆ. ಇದರಲ್ಲೂ ಮತ್ತೆ ಹೇಳುವುದಾದರೆ ಯಾಳಗಿಯವರ ಸಂಸಾರದಲ್ಲಿ ಇಪ್ಪತ್ತು ಮಂದಿಯಲ್ಲಿ ಮುದುಕರನ್ನೂ ಮಕ್ಕಳನ್ನೂ ಬಿಟ್ಟು ಹದಿಮೂರು ಮಂದಿಯನ್ನು ಸೆರೆಯಲ್ಲಿ ಹಾಕಿದ್ದಾರೆ. ಸ್ವಾತಂತ್ರ್ಯ ಹೋರಾಟದಲ್ಲಿ ಯಾಳಗಿ ಮನೆಯವರ ತ್ಯಾಗಕ್ಕೆ ಸಾಟಿಯಿಲ್ಲವೆನ್ನಬಹುದು. ಬ್ರಿಟಿಷ್ ಸರ್ಕಾರದ ಅತಿ ಕಠಿಣತೆಯನ್ನು ಅನುಭವಿಸಿ, ಸುಖಸಂಪತ್ತನ್ನು ಕಳೆದುಕೊಂಡು ದಿಕ್ಕಾಪಾಲಾಗಿ ಕಷ್ಟಪಟ್ಟು, ಕಾರಾಗೃಹದ ಕಬ್ಬಿಣದ ಕಂಬಿಗಳ ಹಿಂದೆ ಬಂಧಿಸಲ್ಪಟ್ಟು ದೇಶಕ್ಕಾಗಿ ದುಡಿದ ತ್ಯಾಗಿ ಸಂಸಾರವೆಂದರೆ ಯಾಳಗಿಯವರದು" ಎನ್ನುತ್ತಾರೆ ಕುಲಕರ್ಣಿಯವರು.

ಯಾಳಗಿ ಮನೆತನದಲ್ಲಿ ಧೀರ, ಪ್ರಥಮ ಹೋರಾಟಗಾರ ಜೈಲನ್ನು ಕಂಡ ಮೊದಲ ವ್ಯಕ್ತಿ ಗೋವಿಂದರಾವ್ ಯಾಳಗಿ. ಕ್ರಾಂತಿಕಾರೀ ಕಾರ್ಯಕ್ರಮಂಗಳಲ್ಲಿ ನಂಬಿಕೆ ಇದ್ದ ಗೋವಿಂದರಾವ್ ಇಟಲಿಯ ಕ್ರಾಂತಿ ಮುಖಂಡ ಮ್ಯಾಜಿನಿಯ ಅಭಿಮಾನಿಯಾಗಿದ್ದು ಬೆಳಗಾವಿಯಲ್ಲಿ 'ಮ್ಯಾಜಿನಿ ಕ್ಲಬ್' ಎಂಬ ಕ್ರಾಂತಿಕಾರಿ ತರುಣರ ಸಂಘವನ್ನು ಸ್ಥಾಪಿಸಿ ಯುವಕರಿಗೆ ಕತ್ತಿ, ಗುರಾಣಿ, ಲಾಠಿಗಳ ತರಬೇತಿ ಕೊಟ್ಟು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಪಿಸ್ತೂಲು, ಬಾಂಬ್, ಅಣು ಅಸ್ತ್ರಗಳನ್ನು ತಯಾರಿಸುವುದರಲ್ಲಿ ಮಾರ್ಗದರ್ಶನ ಕೊಟ್ಟರು.

ಬೆಳಗಾವಿ ಯುವಕರನ್ನು ಕ್ರಾಂತಿಕಾರೀ ಚಟುವಟಿಕೆಗಳಲ್ಲಿ ತಯಾರು ಮಾಡಿದ ಪ್ರಥಮ ಮುಖಂಡರು ಗೋವಿಂದರಾವ್ ಯಾಳಗಿ. ಕರ್ನಾಟಕದ ಸಿಂಹವೆನಿಸಿದ ಗಂಗಾಧರರಾವ್ ದೇಶಪಾಂಡೆಯವರಿಗೆ ಗೋವಿಂದರಾವ್ ಬುದ್ಧಿಶಕ್ತಿಯಂತಿದ್ದರು. ೧೯೦೫ರಲ್ಲೇ ಬೆಳಗಾವಿಯಲ್ಲಿ ಪ್ರಾರಂಭವಾದ ವಂಗಭಂಗ ಚಳವಳಿಯಲ್ಲಿ ಗೋವಿಂದ ರಾವ್ ಯಾಳಗಿ ಪಾಲ್ಗೊಂಡು ತಮ್ಮ ಇಬ್ಬರು ತಮ್ಮಂದಿರನ್ನೂ ಚಳವಳಿಗೆ ಸೇರಿ ಸಿದವರು.

ಇವರ ತಮ್ಮಂದಿರಾದ ಜೀವನರಾವ್‌ರವರ ಪತ್ನಿಯೇ ರಮಾಬಾಯಿ, ಮತ್ತೊಬ್ಬ ತಮ್ಮಂದಿರಾದ ಕೃಷ್ಣರಾವ್‌ರವರ ಪುತ್ರರೇ ಗಜಾನನರಾವ್ ಮತ್ತು ಸಹೋದರರು.

ಲೋಕಮಾನ್ಯ ತಿಲಕರ ನಿಧನದ ದಿನವೇ ಗಾಂಧೀಜಿಯವರು ತಮ್ಮ ಅಸಹಕಾರ ಆಂದೋಲನವನ್ನು ಸಾರಿ ೧೯೨೦ ಅಕ್ಟೋಬರ್ ತಿಂಗಳಲ್ಲಿ ದೇಶ ಸಂಚಾರ ಕೈಗೊಂಡು ಬೆಳಗಾವಿಗೂ ಹೋದರು. ಅಂದಿನಿಂದ ಅಸಹಕಾರ ಆಂದೋಲನ ಪ್ರಯುಕ್ತ ಕಾಂಗ್ರೆಸ್ ಕಮಿಟಿಯ ಕೆಲಸವೆಲ್ಲಾ ನಡೆಯುತ್ತಿದ್ದುದು ಯಾಳಗಿಯವರ ಮನೆಯ ಅಟ್ಟದಲ್ಲಿ. ಬೆಳಗಾವಿಗೆ ಬಂದ ಕಾಂಗ್ರೆಸ್ ಮುಖಂಡರೆಲ್ಲಾ ಯಾಳಗಿಯವರ ಮನೆಗೇ ಬರುತ್ತಿದ್ದರು. ಇಂತಹ ಮನೆತನಕ್ಕೆ ಸೇರಿದ ರಮಾಬಾಯಿ ಕಾಂಗ್ರೆಸ್ ಮುಖಂಡರ ಪ್ರಭಾವದಿಂದಲೂ, ಮನೆಯ ವಾತಾವರಣದಿಂದಲೂ ಚಳವಳಿಯ ಕಠಿಣತೆಗೆ ತಮ್ಮನ್ನು ಒಗ್ಗಿಸಿಕೊಂಡರು.

ಯಾಳಗಿ ಮನೆತನದವರಿಗೂ ಗಂಗಾಧರರಾಯರಿಗೂ ಅನ್ಯೋನ್ಯ ಸಂಬಂಧ ವಿತ್ತು. 'ಗುರುವಿನ ಮುಂದಾಳತ್ವದಲ್ಲಿ ಶಿಷ್ಯರಂತೆ' ಗುರು ಗಂಗಾಧರರಾಯರನ್ನು ಯಾಳಗಿಯವರು ಹಿಂಬಾಲಿಸುತ್ತಿದ್ದರು.

ಹುದಲಿ ಗ್ರಾಮವು ದೇಶಭಕ್ತ ಗಂಗಾಧರರಾಯರ ಊರು. ಹುದಲಿಯ ಹತ್ತಿರ ಕುಮರಿತೋಟದಲ್ಲಿ ಗಂಗಾಧರರಾವ್ ಒಂದು ಆಶ್ರಮ ತೆಗೆದು ಖಾದಿ ಕಾರ್ಯವನ್ನು ಪ್ರಾರಂಭಿಸಿದರು. ಈ ಆಶ್ರಮವು ಅನೇಕ ಕಾರ್ಯಕರ್ತರ ಗರಡಿ ಮನೆಯೂ ಆಗಿತ್ತು. ಖ್ಯಾತ ಕಾರ್ಯಕರ್ತರಾದ ಅಣ್ಣುಗುರೂಜಿ, ರಾಮಚಂದ್ರ ವಡವಿ, ಪುಂಡಲೀಕಜಿ, ವಾಸುದೇವ ಗೋಸಾವಿ, ಶ್ರೀನಿವಾಸರಾವ್ ಇವರೆಲ್ಲರೂ ಈ ಆಶ್ರಮದಲ್ಲಿ ಕೆಲಸ ಮಾಡಿದರು. ರಮಾಬಾಯಿಯವರ ಪತಿ ಜೀವನರಾವ್ ಯಾಳಗಿಯೂ ಈ ಆಶ್ರಮದ ಶಿಷ್ಯರೇ.

೧೯೩೦ರ ಏಪ್ರಿಲ್ ೬ ರಂದು ದಂಡಿಯಲ್ಲಿ ಉಪ್ಪು ತಯಾರಿಸಿ ಮಹಾತ್ಮರು ಸತ್ಯಾಗ್ರಹ ಮಾಡಿದಾಗ, ಬೆಳಗಾವಿಯಲ್ಲಿ ಈ ಕಾರ್ಯಕ್ರಮವನ್ನು ಅನುಸರಿಸಿದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಜೀವನರಾವ್ ಯಾಳಗಿ ಬಂಧಿತರಾದರು. ಪತ್ನಿ ರಮಾಬಾಯಿಯವರಿಗೆ ಚಳವಳಿಯ ಜವಾಬ್ದಾರಿಯೊಂದು ಕಡೆ, ಸಂಸಾರದ ಜವಾಬ್ದಾರಿ ಮತ್ತೊಂದು ಕಡೆ.

೧೯೩೧ ರಲ್ಲಿ ಯರವಾಡಾ ಜೈಲಿನಲ್ಲಿದ್ದ ಸೊಲ್ಲಾಪುರದ ಸತ್ಯಾಗ್ರಹಿಗಳಾದ ಮಲ್ಲಪ್ಪ ಧನಶೆಟ್ಟಿ, ಶ್ರೀ ಕೃಷ್ಣಾ ಸಾರಡಾ, ಕುರ್ಬಾನಹುಸೇನ ಮತ್ತು ಜಗನ್ನಾಥ ಶಿಂದೆ-ಈ ನಾಲ್ವರನ್ನು ಗಲ್ಲಿಗೇರಿಸಿದ ಸಮಾಚಾರ ಬೆಳಗಾವಿಗೆ ತಲುಪಿದ ಕೂಡಲೇ ಸಾಯಂಕಾಲ ನಾಲ್ಕು ಘಂಟೆಗೆ ಸರಿಯಾಗಿ ಹನುಮಂತನ ಗುಡಿಯಿಂದ ಪ್ರಚಂಡ ಮೆರವಣಿಗೆ ಹೊರಟಿತು. ಜಯದೇವ ಕುಲಕರ್ಣಿ, ಜೀವನರಾವ್ ಯಾಳಗಿ ಮತ್ತು ರಮಾಬಾಯಿಯವರು ಮುಖಂಡತ್ವವಹಿಸಿ ಹೊರಟರು. ಸುಮಾರು ಹತ್ತು ಸಾವಿರ ಜನ ಸೇರಿದ್ದ ಈ ಮೆರವಣಿಗೆಯನ್ನು ನಿಷೇಧಿಸಿ ಚದುರಿಸಬೇಕೆಂದು ಬ್ರಿಟಿಷ್ ಸರ್ಕಾರದ ಅಪ್ಪಣೆಯಾಯಿತು. ಕೂಡಲೇ ಪೋಲೀಸು ತಂಡ ಬಂದು, ಸಂತಾಪ ಸೂಚಕವಾಗಿ ಹೋಗುತ್ತಿದ್ದ ಮೆರವಣಿಗೆಯ ಜನರ ಮೇಲೆ ಹಠಾತ್ತನೆ ಲಾಠಿಪ್ರಹಾರ ನಡೆಸಿದರು.

ಮಹಿಳೆಯರನ್ನು ಗಣಪತಿ ಗಲ್ಲಿಯಿಂದ ಮಾರ್ಕೆಟ್‌ನ ಸಭೆಗೆ ಕಳುಹಿಸಿದರು. ಎಷ್ಟೋ ಜನರ ತಲೆ ಒಡೆಯಿತು. ಎಷ್ಟೋ ಜನರು ಜ್ಞಾನತಪ್ಪಿ ಕೆಳಗೆ ಬಿದ್ದರು. ಈ ಗುಂಪಿನಲ್ಲಿದ್ದ ಜೀವನರಾವ್ ಯಾಳಗಿಯವರು ಭಾರಿ ಪೆಟ್ಟಿನಿಂದ ಕೆಳಗೆ ಕುಸಿದು ಬಿದ್ದು ಎಚ್ಚರ ತಪ್ಪಿ ಡಾಕ್ಟರ್ ಭೋಜರವರ ದವಾಖಾನೆಯಲ್ಲಿ ಚಿಕಿತ್ಸೆ ಪಡೆದರು.

೧೯೩೨ರಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ನಾರಾಯಣ ಜೋಶಿಯವರನ್ನು ಬಂಧಿಸಿದಾಗ ಜೀವನರಾವ್ ಯಾಳಗಿಯವರು ಅವರ ಸ್ಥಾನದಲ್ಲಿ ಅಧ್ಯಕ್ಷರಾಗಿದ್ದರು. ಪ್ರತಿದಿನ ಪೋಲೀಸ್ ಕಛೇರಿಯಲ್ಲಿ ಹಾಜರಿ ಕೊಡಬೇಕೆಂಬ ನಿಬಂಧನೆಯನ್ನು ಉಲ್ಲಂಘಿಸಿ ಜೀವನರಾವ್‌ರವರೂ ಜೈಲು ಸೇರಿದರು.

ಯಾಳಗಿಯವರ ಮನೆ ಬೆಳಗಾವಿಯಲ್ಲಿ ರಾಜಕೀಯ ಚಟುವಟಿಕೆಗಳಿಗೆ ಕೇಂದ್ರವಾಯಿತು. ಪೋಲೀಸಿನವರು ಯಾಳಗಿಯವರ ಮನೆಯ ಅಂಗಳದಲ್ಲಿ ಡೇರೆ ಹಾಕಿ ಬಂದೋಬಸ್ತ್ ಮಾಡಿದ್ದರು.

ಅದೇ ಮನೆಯಲ್ಲಿ ಈಗ ವಾಸವಾಗಿರುವ ಜೀವನರಾವ್‌ರವರ ಸಹೋದರರ ಮಕ್ಕಳಾದ ಗಜಾನನರಾವ್ ಮತ್ತು ಅವರ ತಮ್ಮಂದಿರು ಆ ಜಾಗವನ್ನು ತೋರಿಸಿ, ಗಾಂಧೀಜಿಯವರು ಕುಳಿತುಕೊಳ್ಳುತ್ತಿದ್ದ ಸ್ಥಳವನ್ನು ಪವಿತ್ರಭಾವನೆಯಿಂದ ವಿವರಿಸಿ ಹೇಳುತ್ತಾರೆ.

೧೯೩೭ರಲ್ಲಿ ಹುದಲಿಯಲ್ಲಿ ಗಾಂಧೀ ಸೇವಾಸಂಘದ ಸಮ್ಮೇಳನ ನಡೆದಾಗ, ಸಮ್ಮೇಳನಕ್ಕೆ ಸರ್ವಸಿದ್ಧತೆಯನ್ನು ಮಾಡಿದ ಜೀವನರಾವ್ ಮತ್ತು ರಮಾಬಾಯಿಯವರು ಈ ಸಂದರ್ಭದಲ್ಲಿ ಅಖಿಲ ಭಾರತೀಯ ಮುಖಂಡರ ಸಂಪರ್ಕವನ್ನು ಸಲಹೆಯನ್ನೂ ಪಡೆದರು.

೧೯೩೩ ರಿಂದ ೧೯೩೫ರವರೆಗೆ ಬೆಳಗಾವಿಯ ನಗರಪಾಲಿಕೆಯ ಅಧ್ಯಕ್ಷ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ರಾಗಿದ್ದು ಅನುಭವವಿದ್ದುದರಿಂದ ಜೀವನರಾವ್‌ರವರನ್ನು ೧೯೩೭ರಲ್ಲಿ ಕಾಂಗ್ರೆಸ್ ಕಮಿಟಿಯ ಹುರಿಯಾಳಾಗಿ ನಿಲ್ಲಿಸಿದರು. ಜನರ ನಂಬಿಕೆಯಂತೆ ಜೀವನರಾವ್‌ರವರೇ ಆಯ್ಕೆಯಾಗಿ ಬಂದರು.

೧೯೪೧ರಲ್ಲಿ ಜನವರಿಯಲ್ಲಿ ವೈಯಕ್ತಿಕ ಸತ್ಯಾಗ್ರಹವನ್ನು ನಡೆಸಬೇಕೆಂದು ಮಹಾತ್ಮರು ಆದೇಶ ಕೊಟ್ಟರು. ಇದೇ ಪ್ರಕಾರ ಜೀವನರಾವ್ ಮತ್ತು ರಮಾಬಾಯಿ ಸತ್ಯಾಗ್ರಹ ಮಾಡಿ ಕಾರಾಗೃಹಕ್ಕೆ ಹೋದರು. ಈ ಸತ್ಯಾಗ್ರಹದಲ್ಲೂ ಬೆಳಗಾವಿ ಜಿಲ್ಲೆಯು ಅಗ್ರಸ್ಥಾನದಲ್ಲಿದ್ದು ಐನೂರು ಜನ ಬೆಳಗಾವಿಯಿಂದಲೇ ಸತ್ಯಾಗ್ರಹ ಮಾಡಿದರು. ಅಂತಹ ನಾಡಿನ ಹೆಮ್ಮೆಯ ಸತ್ಯಾಗ್ರಹಿಗಳ ಮುಖಂಡರಲ್ಲಿ ಒಬ್ಬರಾಗಿದ್ದವರು ರಮಾಬಾಯಿ.

೧೯೪೨ರ ಚಲೇಜಾವ್ ಚಳವಳಿ ಬೆಳಗಾವಿ ಜಿಲ್ಲೆಯಲ್ಲಿ ಅತ್ಯಂತ ಬಿರುಸಾಗಿ ನಡೆಯಿತು. ಅಣ್ಣು ಗುರೂಜಿ, ಶ್ರೀರಂಗ ಕಾಮತ, ಜಯದೇವ ಕುಲಕರ್ಣಿ, ಪುಂಡಲೀಕಜಿ. ಚನ್ನಪ್ಪವಾಲಿ, ರಾಮಚಂದ್ರ ವಡವಿ, ವಾಮನರಾವ್ ಬಿದರಿ ಮುಂತಾದ ಜಿಲ್ಲೆಯ ಪ್ರಮುಖ ಕಾರ್ಯಕರ್ತರು ಈ ಚಳವಳಿಯ ನೇತೃತ್ವ ವಹಿಸಿ "ನ ಭೂತೋ ನ ಭವಿಷ್ಯತಿ" ಎನ್ನುವಂತಹ ಸಾಧನೆ ಮಾಡಿದರು. ಈ ಹೋರಾಟದಲ್ಲೇ ಯಾಳಗಿ ಮನೆಯ ಗಜಾನನ, ಅರವಿಂದ, ವಿಠಲ, ಹಣಮಂತ, ಡಾ॥ ಅನಂತ, ದತ್ತಾತ್ರೇಯ, ನಾನಾಸಾಹೇಬ, ವಸಂತಾ ಮತ್ತು ಮಂದಾ–ಈ ಒಂಬತ್ತು ಜನರೂ ಜೈಲಿಗೆ ಹೋದರು.

೧೯೪೧ ಮತ್ತು ೧೯೪೨ರ ಚಳವಳಿಯಲ್ಲಿ ರಮಾಬಾಯಿ ಯಾಳಗಿಯವರ ಪಾತ್ರ ಪ್ರಮುಖವಾದುದು. ೧೯೪೧ರ ಯುದ್ಧ ವಿರೋಧಿ ಘೋಷಣೆಯ ವೈಯಕ್ತಿಕ ಸತ್ಯಾಗ್ರಹದಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಐವತ್ತಕ್ಕೂ ಹೆಚ್ಚು ಮಹಿಳೆಯರು ಯುದ್ಧ ವಿರೋಧಿ ಘೋಷಣೆ ಮಾಡಿ ಬಂಧಿತರಾದರು. ಇವರಲ್ಲಿ ಹೆಚ್ಚು ಜನ ಸವದತ್ತಿ ತಾಲ್ಲೂಕಿನವರು. ಸವದತ್ತಿ ತಾಲೂಕಿನಲ್ಲಿ ಒಂದೇದಿನ ಒಂದೇ ಕಾಲದಲ್ಲಿ ಒಂದು ನೂರು ಸತ್ಯಾಗ್ರಹಿಗಳು ಒಂದು ನೂರು ಗ್ರಾಮಗಳಲ್ಲಿ ಸತ್ಯಾಗ್ರಹಮಾಡಿ ಸೆರೆಮನೆ ಸೇರಿದರು. ಅವರಲ್ಲಿ ಅರ್ಧದಷ್ಟು ಗ್ರಾಮೀಣ ಮಹಿಳೆಯರೇ ಇದ್ದರು. ಇಂತಹ ಸತ್ಯಾಗ್ರಹ ಇಡೀ ಹಿಂದೂಸ್ತಾನದಲ್ಲಿ ಮತ್ತೆಲ್ಲೂ ಆಗಲಿಲ್ಲವೆಂದು ಕುಲಕರ್ಣಿಯವರು ಹೇಳುತ್ತಾರೆ.

ಬೆಳಗಾವಿಯಿಂದ ಹೋದವರಲ್ಲಿ ಪ್ರಮುಖರಾದ ರಮಾಬಾಯಿ ಯಾಳಗಿ, ಸತ್ಯಭಾಮಾಬಾಯಿ ಪ್ರಭು, ಪದ್ಮಾವತಿ ಬಿದರಿ ಇವರುಗಳಿಗೆ ಆರು ತಿಂಗಳ ಶಿಕ್ಷೆಯನ್ನು ವಿಧಿಸಲಾಯಿತು.

೧೯೪೨ರ ಚಲೇಜಾವ್ ಚಳವಳಿ ಪ್ರಾರಂಭವಾಗುತ್ತಲೇ ಇದೇ ವರ್ಷದ ಆಗಸ್ಟ್ ತಿಂಗಳಲ್ಲಿ ಭಾಷಣ ಮಾಡಿದ ಅನೇಕ ಮಹಿಳಾ ಮುಖಂಡರನ್ನು ಹಿಡಿದು ಬ್ರಿಟಿಷ್ ಸರ್ಕಾರವು ಅವರಿಗೆಲ್ಲಾ ಒಂದೂವರೆ ವರ್ಷದ ಶಿಕ್ಷೆ ಕೊಟ್ಟಿತು. ರಮಾಬಾಯಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಯಾಳಗಿ ಮತ್ತು ಪದ್ಮಾವತಿ ಬಿದರಿಯವನ್ನು ಬಂಧಿಸಿ ಸೆರೆಮನೆಗೆ ಸೇರಿಸಿದರು. ಇದೇ ಸಮಯದಲ್ಲಿ ಶಕುಂತಲಾ ಕುರ್ತಕೋಟಿ ಮತ್ತು ಪ್ರಮೀಳಾ ದೇಶಪಾಂಡೆ ಇವರುಗಳ ನೇತೃತ್ವದಲ್ಲಿ ವಿದ್ಯಾರ್ಥಿನಿಯರು ಬುಲೆಟಿನ್ ಹೊರಡಿಸಿ ಹಂಚಿ, ಪ್ರಭಾತಫೇರಿ, ಧ್ವಜವಂದನೆ ನಡೆಸಿ ಜನರಲ್ಲಿ ಸ್ವಾತಂತ್ರ್ಯಕಾಂಕ್ಷೆಯನ್ನು ಜಾಗೃತ ಗೊಳಿಸಿದರು. ಈ ಮಹಿಳಾ ಮುಖಂಡರೊಂದಿಗೆ ಕೆಲಸ ಮಾಡಿದ ಎಲ್ಲಾ ಮಹಿಳಾ ಸತ್ಯಾಗ್ರಹಿಗಳೂ ಬಂಧನಕ್ಕೊಳಗಾದರು.

ಹಿಂಡಲಗಿ ಜೈಲಿಗೆ ಹಾಕಲ್ಪಟ್ಟ ಸತ್ಯಾಗ್ರಹಿಗಳು ಗ್ಯಾಸ್ಟ್ರೊ ಎಂಟ್ರಾಯಟಿಸ್ ಎಂಬ ಬೇನೆಗೆ ತುತ್ತಾಗಿ ವಾಂತಿ ಭೇದಿಯಾಗಿ ಒಬ್ಬೊಬ್ಬರಾಗಿ ಸಾಯತೊಡಗಿದರು. ನಾರಾಯಣ ತಂಗಡಿ, ವಿಠಲ ಸತಾರಾ ಇವರಂತಹ ಭೀಮಕಾಯದ ಪುರುಷರೂ ವಾಂತಿ ಭೇದಿ ಹತ್ತಿದ ಹತ್ತು ನಿಮಿಷದಲ್ಲೇ ಸತ್ತುಹೋದರು. ಪುಣೆಯ ಶ್ರೀಮತಿ ಬಾಳ, ನಿಪ್ಪಾಣಿಯ ಶ್ರೀಮತಿ ಗಂಗೂಬಾಯಿ ಕಿನರೆ ಜೈಲಿನಲ್ಲೇ ಮೃತಪಟ್ಟರು. ಇತರರೂ ಪ್ರಾಣಾಘಾತಕ ಬೇನೆಯನ್ನು ಅನುಭವಿಸಿದರು. ಸತ್ತವರಲ್ಲಿ ಕೆಲವರ ಮನೆಯವರ ಪತ್ತೆಯೂ ತಿಳಿಯದೆ ದೇಶಭಕ್ತರ ಅಂತಿಮ ದರ್ಶನ ಅವರ ಮನೆ ಯವರಿಗೂ ಆಗದಂತಹ ಪರಿಸ್ಥಿತಿ ಇತ್ತು. ಈ ಕಾರಣದಿಂದ ೧೯೪೨ ಡಿಸೆಂಬರ್ ವೇಳೆಗೆ ಚಳವಳಿ ಅತ್ಯುಗ್ರವಾಗಿ ಪರಿಣಮಿಸಿತು.

ಈ ಸಂತಾಪದ ಸಂಗತಿ ಹೇಳುತ್ತಿರುವ ಸಮಯದಲ್ಲಿ ಕವಡಿದ ನಮ್ಮ ಮನಸ್ಸನ್ನು ಉಲ್ಲಾಸಗೊಳಿಸಲು ಕುಲಕರ್ಣಿಯವರು ಸರಸದ ಮಾತೊಂದನ್ನು ಇಲ್ಲಿ ಹೇಳಲು ಬಯಸಿದರು.

"ಜವಾಹರಲಾಲ್ ನೆಹರೂಗೆ ಕೆನ್ನೆ ಕೆಂಪು ತುಟಿ ಕೆಂಪು ಎಂದು ಕೇಳಿದ್ದೆವು. ಆಗ ನಾವೂ ಯುವಕರು. ಆತಕೆನ್ನೆಗೇನು ಬಳಿಯುತ್ತಾನೆಂದು ನೋಡೋಣವೆನ್ನಿಸಿತು ನಮಗೆ ಗಣಮುಕ್ತೇಶ್ವರದಲ್ಲಿ ಕಾಂಗ್ರೆಸ್ ಸಭೆ ಸೇರುವುದಿತ್ತು. ಆಗ ನೆಹರೂ ಬರುತ್ತಾ ರೆಂದು ತಿಳಿದು ಅವರನ್ನು ಹತ್ತಿರ ನೋಡುವ ಅವಕಾಶವಾಯಿತೆಂದು ಖುಷಿಯಾದೆವು. ಆದರೆ ಎಲ್ಲರೂ ರಾಷ್ಟ್ರ ಮುಖಂಡರ ಹತ್ತಿರ ಹೋಗುವಂತಿರಲಿಲ್ಲ. ಸೆಷನ್ ನಡೆದಾಗ ಅವರವರ ಸೇವಾಸ್ಥಾನಕ್ಕೆ ತಕ್ಕಂತೆ ಸಭೆಯಲ್ಲೂ ಸ್ಥಾನ ಇರುತ್ತಿತ್ತು. ನನಗೆ ಮುಂದಿನ ಸಾಲಿನಲ್ಲೇ ಸ್ವಯಂಸೇವಕನ ಸ್ಥಾನವಿದ್ದುದರಿಂದ ಜವಾಹರರ ಮೂರ್ತಿಯನ್ನು ಹತ್ತಿರ ಹೋಗಿ ನೋಡಿದೆ. ಅಬ್ಬ! ನಿಜವಾಗಿ ಅದೆಂತಹ ಬಣ್ಣ ಆತನದು! ಕೆನ್ನೆಗಳು ಗುಲಾಬಿ ಬಣ್ಣದಿಂದ ಮಿಂಚುತ್ತಿದ್ದುವು. ಆ ಕೆಂದುಟಿಯ ಸೊಗಸು ಮತ್ತಾರಿಗಿದೆ ಎನ್ನಿಸಿತು" ಎನ್ನುತ್ತಾ ಕುಲಕರ್ಣಿಯವರು (ಆರ್. ಹೆಚ್.) ಮಾತನ್ನು ಮುಂದುವರಿಸಿದರು, "ಮತ್ತೊಂದು ಸಮಾಚಾರ ಗೊತ್ತೇ ನಿಮಗೆ ? ವೌಂಟ್ ಬ್ಯಾಟನ್‌ರ ಹೆಂಡತಿ ಜವಾಹರಲಾಲ್ ನೆಹರೂವನ್ನು ನೋಡಿ ಪ್ರೀತಿ ಮಾಡಹತ್ತಿದ್ದರು. ಯುವಕ ನೋಡಲು ಬಲು ಚೆನ್ನ, ಭಲೆ ಸಾಮರ್ಥ್ಯಗಾರನೆಂದು ನಮ್ಮ ರಾಷ್ಟ್ರ ನಾಯಕನನ್ನು ಕಂಡು ಆಕೆಗೆ ವಿಶ್ವಾಸ ಬೆಳೆಯಿತು. ಇದನ್ನು ತಿಳಿದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಮೌಂಟ್‌ಬ್ಯಾಟನ್‌ರು ಬಹಳ ಹರ್ಷಗೊಂಡರು. ತಮ್ಮ ಮಡದಿಯು ಮೆಚ್ಚಿಗೆ ಸತ್ಯವಾದುದೆಂದು ಶ್ಲಾಘಿಸಿದರು. ಅವರ ಸ್ವಭಾವಕ್ಕೂ ನಮ್ಮವರ ಸ್ವಭಾವಕ್ಕೂ ವ್ಯತ್ಯಾಸವಿದೆ. ಅಂದ ಚೆಂದ ನೋಡಿ ಒಂದು ಹೆಣ್ಣು ಒಂದು ಗಂಡನ್ನು ಮೆಚ್ಚಿ ಮಾತಾಡಿಸಿದರೆ ತಪ್ಪು ಭಾವಿಸುವರು" ಎನ್ನುತ್ತಾರೆ ಕುಲಕರ್ಣಿಯವರು.

ಸೇವಾಗೆ ತಕ್ಕ ಸ್ಥಾನವೆಂಬ ಮಾತನ್ನು ನಿರೂಪಿಸುತ್ತಾ ಯಾಳಗಿ ಸಹೋದರರು ಹೀಗೆನ್ನುತ್ತಾರೆ. "ಮಹಾತ್ಮರು ಉದ್ದೇಶಿಸಿದ ಸತ್ಯಾಗ್ರಹಕ್ಕೆ ಎಲ್ಲರೂ ಸೇರುವಂತಿರಲಿಲ್ಲ. ಅದರಲ್ಲೂ ಸತ್ಯಾಗ್ರಹದ ಮುಖಂಡರಾಗಬೇಕಾದರೆ ಗಾಂಧೀಜಿಯವರ ಅಪ್ಪಣೆ ಪಡೆಯಬೇಕಾಗಿತ್ತು. ಎಲ್ಲವೂ ಶಿಸ್ತು ನಿಯಮದಂತೆಯೇ ನಡೆಯುತ್ತಿತ್ತು. ಏಕೆಂದರೆ ಯಾರಾದರೂ ತಪ್ಪಿ ನಡೆದರೆ, ಎಲ್ಲಾದರೂ ಅಚಾತುರ್ಯವಾದರೆ ಗಾಂಧೀಜಿ ಅದಕ್ಕೆ ಶಿಕ್ಷೆಯನ್ನು ತಾವು ಅನುಭವಿಸುವಿದ್ದರು. ಉಪವಾಸ ಕೈಗೊಂಡು ಶರೀರವನ್ನು ದಂಡಿಸಿಕೊಳ್ಳುತ್ತಿದ್ದರು. ಅದ್ದರಿಂದ ಎಲ್ಲಾ ಸತ್ಯಾಗ್ರಹಿಗಳೂ ಎಚ್ಚರದಿಂದ ನಡೆದುಕೊಳ್ಳುತ್ತಿದ್ದರು, ಮಾರ್ಗದರ್ಶನವಿಲ್ಲದೆ. ಸಭೆಸಂಘಟನೆಗಳಿಲ್ಲದೆ ಯಾವ ಕೆಲಸವನ್ನೂ ಮಾಡುತ್ತಿರಲಿಲ್ಲ. ಗಾಂಧೀಜಿಯವರ ವಚನದಂತೆ ನಡೆದುಕೊಳ್ಳುವ ಅನುಯಾಯಿಗಳ ನಿರ್ದೇಶನದಲ್ಲೇ ಚಳವಳಿಗಳು ನಡೆಯುತ್ತಿದ್ದುವು. ಇಂತಹದೊಂದು ಕ್ರಮವಿದ್ದಾಗ, ನಮ್ಮ ಚಿಕ್ಕಮ್ಮ ರಮಾಬಾಯಿಯವರು ಮಹಾತ್ಮರೇ ಆರಿಸಿಕೊಂಡು, ಮುಖಂಡರಾಗಿ ಕೆಲಸ ಮಾಡಲು ಒಪ್ಪಿಗೆ ಕೊಟ್ಟರು. ೧೯೩೭ರಲ್ಲಿ ಮಹಾತ್ಮರು ಬೆಳಗಾವಿಗೆ ಬಂದಿದ್ದಾಗ ನಮ್ಮ ಮನೆಯಲ್ಲೇ ಇಳಿದುಕೊಂಡಿದ್ದರು. ನಮ್ಮ ಚಿಕ್ಕಪ್ಪ ಜೀವನರಾವ್ ಮತ್ತು ಚಿಕ್ಕಮ್ಮ ರಮಾಬಾಯಿಯವರ ದೇಶಭಕ್ತಿಯನ್ನು ಕಂಡು ಮಹಾತ್ಮರು ರಮಾಬಾಯಿಯವರಿಗೆ ಚಳವಳಿಗೆ ಸೇರಲು ಅನುಮತಿ ಕೊಟ್ಟರು" ಎಂದು ಹೇಳಿ ಏನನ್ನೋ ಜ್ಞಾಪಿಸಿಕೊಂಡು ಪುನಃ ಹೀಗೆನ್ನುತ್ತಾರೆ. "ಆ ರಾತ್ರಿ ಮಹಾತ್ಮರು ನಮ್ಮ ಮನೆಯಲ್ಲಿ ತಂಗಿದ್ದರು. ರಾತ್ರಿ ಸೊಳ್ಳೆಗಳ ಕಾಟದ ಒಂದು ಘಟನೆ ಜ್ಞಾಪಕಕ್ಕೆ ಬರುತ್ತದೆ. ಎಲ್ಲರೂ ಸೊಳ್ಳೆ ಪರದೆ ಉಪಯೋಗಿಸುತ್ತಿದ್ದೆವು. ಗಾಂಧೀಜಿ ಮಾತ್ರ ತಮಗೆ ಪರದೆಯ ಅವಶ್ಯಕತೆ ಇಲ್ಲವೆಂದರು. ಇವರೇನು ಮಾಡುವರೆಂದುಕೊಂಡೆವು. ಸೊಳ್ಳೆಗಳನ್ನು ತಡೆಯುವ ಅವರ ವಿಧಾನವನ್ನು ಕಂಡು ನಾವು ನಾಚಿದೆವು. ಮೈಗೆ ನಿಂಬೆಹಣ್ಣಿನ ರಸ ಮತ್ತು ಎಣ್ಣೆ ಉಜ್ಜಿಕೊಂಡರು. "ಈಗ ಇದೇ ಅತ್ಯಾಧುನಿಕವಾಗಿದೆ ಅಲ್ಲವೇ ?" ಎಂದು ಹೇಳಿ ಚಿಕ್ಕಮ್ಮನನ್ನು ಮತ್ತೆ ನೆನೆದು, ರಮಾಬಾಯಿಯವರು ತಮ್ಮ ಪತಿಯ ಜೊತೆಯಲ್ಲಿ ಇಡೀ ದೇಶವನ್ನು ಸುತ್ತಿದ್ದಾರೆಂದೂ ತಾವೇ ಮಾಡಿದ ಅಡಿಗೆಯನ್ನೇ ಊಟ ಮಾಡುತ್ತಿದ್ದರೆಂದೂ ಹೆಮ್ಮೆ ಪಡುತ್ತಾರೆ.

"ಚಲಿಸುವ ರೈಲು ಗಾಡಿಯಲ್ಲೂ ರಮಾಬಾಯಿಯವರ ಜೊತೆ ಒಂದು ಒಲೆ, ಕೆಲವು ಸಾಮಗ್ರಿಗಳು ಇದ್ದೇ ಇರುತ್ತಿದ್ದುವು. ಸೆಕೆಂಡ್ ಕ್ಲಾಸ್‌ನಲ್ಲೇ ಪ್ರಯಾಣ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಮಾಡುತ್ತಿದ್ದರು...ಸ್ವಾತಂತ್ರ್ಯದ ನಂತರ ವಿಶ್ವ ನೀಡಂಗೆ ರಮಾಬಾಯಿಯವರು ಸೇವೆ ಸಲ್ಲಿಸಿದ್ದಾರೆ. ನಮ್ಮ ಚಿಕ್ಕಮ್ಮ ರಮಾಬಾಯಿಯವರಿಂದ ನಮ್ಮ ಮೇಲೆ ದೇಶಭಕ್ತಿಯ ಪ್ರಭಾವವಾಗಿದೆ. ಆಕೆಯದು ಮಹಾ ಶಿಸ್ತು, ಅಚ್ಚುಗಟ್ಟು, ದೃಢ ಕಾಯದ ಬಲಿಷ್ಠ ಶರೀರ, ಒಳಗೂ ಹೊರಗೂ ಎಲ್ಲಾ ಕೆಲಸವನ್ನೂ ಮಾಡುವ ಶಕ್ತಿವಂತರಾಗಿದ್ದರು. ಈಗ ಅವರು ಬದುಕಿಲ್ಲದಿದ್ದರೂ ಅವರ ತೇಜಸ್ಸಿನ ಸ್ಫೂರ್ತಿ ನಮ್ಮಲ್ಲಿ ಉಳಿದಿದೆ...ಜೈಲಿನ ಕಷ್ಟಸ್ಥಿತಿಯಿಂದ ಅವರ ಶಕ್ತಿ ಗುಂದಲಿಲ್ಲ. ಅಲ್ಲಿಂದ ನಮಗೆಲ್ಲಾ ಪತ್ರಗಳನ್ನು ಬರೆಯುತ್ತಿದ್ದರು. ಚಳವಳಿಗೆ ಸೇರಲು ಧೈರ್ಯವನ್ನು ಕೊಡುತ್ತಿದ್ದರು."

ತಮ್ಮ ಚಿಕ್ಕಮ್ಮನ ಬಗ್ಗೆ ಹೆಮ್ಮೆಪಟ್ಟುಕೊಳ್ಳುವ ಈ ಸೋದರರಲ್ಲಿ ಹಿರಿಯರಾಗಿದ್ದ ಗಜಾನನರಾವ್ ಯಾಳಗಿಯವರ ಸಾಧನೆಯನ್ನು ಸಾಮರ್ಥ್ಯವನ್ನೂ ಉಲ್ಲೇಖಿಸುವುದು ಸ್ಮರಣೀಯ.

೧೯೮೮ರ ಅಂತ್ಯದಲ್ಲಿ ಗಜಾನನ್‌ರವರ ನಿಧನದಿಂದ ಸ್ವಾತಂತ್ರ್ಯದ ದಿನಗಳ ವೈಭವದ ಒಂದು ಅಧ್ಯಾಯ ಅಂತ್ಯಗೊಂಡಂತಾಯಿತು.

ಒಟ್ಟು ಇವರು ಆರು ಸಹೋದರರು ಮತ್ತು ಐದು ಸಹೋದರಿಯರು. ಹನ್ನೊಂದರ ಕ್ರಿಕೆಟ್ ಟೀಂ ಎಂದು ಇವರನ್ನು ಕರೆಯುತ್ತಿದ್ದರಂತೆ. ಚೀವಳಿ ಹೂಡಲು ಸಹೋದರ ಸಹೋದರಿಯರು ಒಟ್ಟಿಗೆ ಹೋಗುತ್ತಿದ್ದರು. ಇವರಲ್ಲಿ ಹಿರಿಯ ಸಹೋದರ ಗಜಾನನ ಬ್ರಿಟಿಷ್ ಸರ್ಕಾರಕ್ಕೆ ಭಯಾನಕ ವ್ಯಕ್ತಿಯಾಗಿದ್ದರು.

೧೯೩೦ರಿಂದ ಇವರೊಂದಿಗೆ ವ್ಯಾಸಂಗ ಮಾಡಿ ಸ್ನೇಹಿತರಾಗಿದ್ದ ಪ್ರಿಯ ಗೆಳೆಯರೊಬ್ಬರು ಹೀಗೆನ್ನುತ್ತಾರೆ. "ಹೆಚ್ಚು ಮಾತಿಲ್ಲದ ಹೆಚ್ಚು ಸ್ನೇಹವಿಲ್ಲದ ಹುಡುಗ ಗಜಾನನ. ತರಗತಿಯ ನಂತರ ಪ್ರತಿದಿನವೂ ಹಾಕಿ ಆಟದ ಅಭ್ಯಾಸವಿತ್ತು. ಬಹಳ ಸಾಹಸಿ. ನಾಗರಹಾವಿನ ಜೊತೆ ಆಟವಾಡುತ್ತಿದ್ದುದನ್ನು ನಾವು ದೂರದೀದ ಕಿಟಕಿಯಲ್ಲಿ ಇಣಕಿ ನೋಡಿ ಭಯಪಡುತ್ತಿದ್ದೆವು. ಕಾಂಗ್ರೆಸ್ ಅಧಿವೇಶನದ ಸಮಯದಲ್ಲಿ ಬೆಳಗಾವಿಯಲ್ಲಿ ಕಟ್ಟಿಸಿದ ಬಾವಿಗೆ ಕಾಂಗ್ರೆಸ್ ಬಾವಿ ಎಂದು ಹೆಸರು. ಈ ದೊಡ್ಡ ಬಾವಿಯಲ್ಲಿ ಗಂಟೆಗಟ್ಟಲೆ ಈಜುತ್ತಿದ್ದ ಇವನೊಂದಿಗೆ ಯಾರೂ ಸ್ಪರ್ಧಿಸಲಾಗುತ್ತಿರಲಿಲ್ಲ. ವಿಮಾನದ ಪೈಲಟ್ ಆಗಬೇಕೆಂಬ ಆಸೆಯಿಂದ ತಂದೆಯ ಒಪ್ಪಿಗೆಯನ್ನು ಪಡೆದು ಬೇಡವೆಂದು ಅತ್ತ ತಾಯಿಯ ಕಣ್ಣೊರೆಸಿ ಕರಾಚಿ ಏರ್‌ಫೋರ್ಸ್ ಸೇರಿ ಎರಡು ವರ್ಷದ ನಂತರ ಪ್ರಾವೀಣ್ಯತೆ ಪಡೆದು ೧೯೪೦ರಲ್ಲಿ ಪೈಲಟ್ ಆದರು.

ಆದರೆ ೧೯೪೨ರ ಸ್ವಾತಂತ್ರ್ಯ ಸಂಗ್ರಾಮ ಚಳವಳಿಗಾಗಿ ಗಾಂಧೀಜಿಯಿಂದ ಕರೆ ಬಂದ ಕೂಡಲೇ ತಮ್ಮ ಸ್ವಂತ ಆಸೆ ಆಕಾಂಕ್ಷೆಯನ್ನು ಒತ್ತಿಗಿಟ್ಟು ಚಳವಳಿಗೆ ಸೇರಿದರು.

ಟಿಳಕವಾಡಿಯಲ್ಲಿ ಗಜಾನನರಾವ್ ನಡೆಸುತ್ತಿದ್ದ ಗುಪ್ತ ಕಾರ್ಯಗಳು ಬ್ರಿಟಿಷ್ ಸರ್ಕಾರದ ಗಮನವನ್ನು ಸೆಳೆದುವು. ಸಾರಾಯಿ ಅಂಗಡಿಗಳ ಆಕ್ರಮಣ, ಅಟಂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಬಾಂಬುಗಳ ತಯಾರಿಕೆ ಇವೆಲ್ಲಾ ಸಾಧಾರಣ ಕಾರ್ಯಕ್ರಮಗಳು. ಪಿಸ್ತೋಲು ಹಿಡಿದೇ ಓಡಾಡುತ್ತಿದ್ದರು. ಯೂರೋಪಿಯನ್ ಹೆಣ್ಣಿನ ವೇಷ ಧರಿಸಿ ಜಾಣ್ಮೆಯಿಂದ ಸಂಚರಿಸುವ ಗಜಾನನ ಬಗ್ಗೆ ಬ್ರಿಟಿಷರಿಗೆ ಸಂಶಯಕ್ಕೆ ಆಸ್ಪದವೇ ಇರುತ್ತಿರಲಿಲ್ಲ. ಪ್ರತಿದಿನ ಸರ್ಕಾರವನ್ನು ಲೂಟಿ ಮಾಡುವ ಏನಾದರೊಂದು ಕಾರ್ಯಕ್ರಮವಿರುತ್ತಿತ್ತು. ಸಾರ್ವಜನಿಕ ಕಟ್ಟಡಗಳ ಮೇಲೆ ಧ್ವಜ ಏರಿಸಿ ಯಾರಿಗೂ ಪತ್ತೆಯಾಗದಂತೆ ಬರುತ್ತಿದ್ದರು. ವಾಚನಾಲಯದ ಕಟ್ಟಡ ಅತ್ಯಂತ ಎತ್ತರವಾದುದು. ಆಗಸ್ಟ್ ತಿಂಗಳ ಒಂದು ರಾತ್ರಿ ಮಳೆ ಸುರಿಯುತ್ತಿರುವಾಗ ಕಟ್ಟಡದ ಮೇಲೇರಿ ಕಾಲುಜಾರುವಂತಾದರೂ ಯಾರ ಸಹಾಯವೂ ಇಲ್ಲದೆ ಧ್ವಜ ಹಾರಿಸಿ ಸಫಲರಾದರು. ಕೆಳಗೆ ಪೋಲೀಸ್ ಪಹರೆ ಇತ್ತು. ಬೆಳಿಗ್ಗೆ ಧ್ವಜ ಕಂಡ ಪೋಲೀಸರಿಗೇ ಆಶ್ಚರ್ಯ. ಮತ್ತೊಂದು ದಿನ ರಾತ್ರಿ ಒಂಭತ್ತು ಘಂಟೆಯಲ್ಲಿ ಪೋಲೀಸ್ ಸ್ಟೇಷನ್‌ಗೆ ನುಗ್ಗಿ ಐದಾರು ಬಂದೂಕುಗಳನ್ನು ವಶಪಡಿಸಿಕೊಂಡು ಸ್ಟೇಷನ್ನಿಗೆ ಬೆಂಕಿ ಹಚ್ಚಿ ಬಂದರು. ಕಲವೇ ನಿಮಿಷಗಳಲ್ಲಿ ಈ ಘಟನೆ ನಡೆದುಹೋಯಿತು.

ಇಷ್ಟೆಲ್ಲಾ ಯಾರು ನಡೆಸುತ್ತಿದ್ದಾರೆಂದು ಪತ್ತೆಯಾಗದೆ ಯೂರೋಪಿಯನ್ ಅಧಿಕಾರಿಗಳಿಗೆ ಕೋಪ ಮೀರುತ್ತಿತ್ತು. ಗಜಾನನ ಗಾಳಿಯ ಹಾಗೆ ಹಿಡಿಯಲು ಸಿಕ್ಕುತ್ತಿರಲಿಲ್ಲ. ಗಜಾನನರಾವ್‌ನ್ನು ಹಾಜರುಪಡಿಸಿ ಎಂದು ಮನೆಯವರಿಗೆ ಹಿಂಸೆ ಕೊಡಲು ಪಾರಂಭಿಸಿದಾಗ ಗಜಾನನ್ ತಾವೇ ಪೋಲೀಸರ ಮುಂದೆ ಹಾಜರಾದರು.

ಇವರ ಮೇಲೆ ಹದಿನಾಲ್ಕು ಆಪಾದನೆಗಳಿದ್ದು ಕೋರ್ಟಿನಲ್ಲಿ ಖಟ್ಲೆ ನಡೆದ ಮೇಲೆ ನಿರಪರಾಧಿ ಎಂದು ತೀರ್ಮಾನವಾದ ಮೇಲೂ ಕೋರ್ಟಿನ ಹೊರಗೆ ಕಾದಿದ್ದ ಪೋಲೀಸ್ ಅಧಿಕಾರಿಗಳು ಇವರನ್ನು ಬಂಧಿಸಲು ಹೊಂಚು ಹಾಕುತ್ತಿದ್ದರು. ಎಲ್ಲರೂ ನೋಡುತ್ತಿದ್ದಂತೆಯೇ ಕೋರ್ಟಿನ ಹಿಂಬಾಗಿಲ ಗೋಡೆ ಹಾರಿ ನಿಮಿಷದಲ್ಲಿ ಓಡಿಬಿಟ್ಟರು. ಪ್ರಚಂಡ ಪೋಲೀಸ್ ಕಾವಲಿದ್ದರೂ ಹೇಗೆ ಸಾಧ್ಯವಾಯಿತೆಂದು ಎಲ್ಲರಿಗೂ ಆಶ್ಚರ್ಯ. ಮೂರು ದಿನಗಳಾದ ಮೇಲೆ ತಾವೇ ಪೋಲೀಸ್ ಎದುರು ಹಾಜರಾದರು. ಪೋಲೀಸ್ ಇಲಾಖೆಗೆ ನಾಚಿಕೆಯಾಯಿತು. ಗೋವಾ ಸತ್ಯಾಗ್ರಹದಲ್ಲೂ ಭಾಗವಹಿಸಿ ಪೋರ್ಚುಗೀಸರಿಗೆ ಚಳ್ಳೆಹಣ್ಣು ತಿನ್ನಿಸಿದ್ದಾರೆ" ಎನ್ನುತ್ತಾರೆ.

ನಾಥಪೈಯವರು ಗಜಾನನ ಯಾಳಗಿನವರನ್ನು ಹೊಗಳುತ್ತಾರೆ. "ಇವರಂತಹ ಪ್ರೀತಿ ಸ್ವಭಾವ ಮತ್ತಾರಲ್ಲೂ ನೋಡಿಲ್ಲ. ಮಹಾ ಸಾಹಸಿ, ಬೆಳಗಾವಿಯ ಸತ್ಯಾಗ್ರಹಕ್ಕೆ ಇವರಿಂದ ಕಳೆ ಬಂದಿತ್ತು. ಕರ್ತವ್ಯಪರರೆಂದರೆ ಇವರೊಬ್ಬರೇ ಎನ್ನಿಸುತ್ತದೆ. ಎಂತಹ ಕಷ್ಟಕರ ಸಂದರ್ಭದಲ್ಲೂ ಹಿಂದೆಗೆದವರಲ್ಲ. ಯಾಳಗಿ ವಂಶಕ್ಕೆ ಗಜಾನನರಾವ್ ಮೇರುಮಣಿಯಂತಿದ್ದರು."

ಪರಂಪರೆಯಾಗಿ ದೇಶಭಕ್ತಿ ಇದ್ದು ದೇಶಕ್ಕಾಗಿ ಸೇವೆ ಮಾಡುವ ಕುಟುಂಬಕ್ಕೆ ಸೇರಿದ್ದ ರಮಾಬಾಯಿ ತಮ್ಮ ಕರ್ತವ್ಯ ಜವಾಬ್ದಾರಿಯನ್ನು ನಿರ್ವಹಿಸಿ ಅಮರರಾಗಿದ್ದಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

## ಅಡಿಯಿಂದ ಮುಡಿವರೆಗಿನ ಸಂಪ್ರದಾಯಸ್ಥೆ

## ಪಿ. ಆರ್. ಜಯಲಕ್ಷಮ್ಮ

ಭಾರತವನ್ನೆಲ್ಲಾ ಸುತ್ತಿದ್ದೀನಿ. ಖಾದಿ, ಕಾಂಗ್ರೆಸ್ಸು ಎಂಬ ಮಾತು ಎಲ್ಲೆಲ್ಲಿ ಕೇಳಿಸಿತೋ ಅಲ್ಲೆಲ್ಲಾ ಹೋಗಿದ್ದೀನಿ. ಆದರೂ ನನ್ನ ಆಚಾರದ ಸಂಪ್ರದಾಯವನ್ನು ಬಿಟ್ಟಿಲ್ಲ ಎನ್ನುತ್ತಾರೆ ಎಂಬತ್ತು ವರ್ಷವನ್ನು ಸಮೀಪಿಸುತ್ತಿರುವ ಶ್ರೀಮತಿ ಪಿ. ಆರ್. ಜಯಲಕ್ಷಮ್ಮ.

"ತಾಯಿನಾಡು" ಜಯಲಕ್ಷಮ್ಮನೆಂದರೆ ಯಾರಿಗಾದರೂ ಈಕೆಯ ಆತ್ಮೀಯ ಪರಿಚಯವುಂಟು. ಸುಪ್ರಸಿದ್ಧ 'ತಾಯಿನಾಡು' ಪತ್ರಿಕೆಯನ್ನು ನಡೆಸುತ್ತಿದ್ದ ಶ್ರೀ ಪಿ. ಆರ್. ರಾಮಯ್ಯನವರ ಪತ್ನಿಯೇ ಜಯಲಕ್ಷಮ್ಮ. ಈಕೆ ಭಾರತ ಸ್ವಾತಂತ್ರ್ಯ ಸಂಗ್ರಾಮದ ಚಳವಳಿಯ ಚತುರೆ. ಇವರನ್ನು ಎಲ್ಲರೂ ಕರೆಯುವುದು "ಅಕ್ಕಮ್ಮ" ಎಂದು. ಬಂಧು ಬಳಗದವರಿಗೂ ಇವರು ಅಕ್ಕಮ್ಮ. ಶಿಷ್ಯವೃಂದಕ್ಕೂ "ಅಕ್ಕಮ್ಮ"ನೇ. ಅಂತೆಯೇ ಇವರ ಪತಿ ಎಲ್ಲರಿಗೂ "ಅಯ್ಯ"ನಾಗಿದ್ದರು. ಆದ್ದರಿಂದ ಪಾಲಹಳ್ಳಿ ರಾಮ ಅಯ್ಯಂಗಾರ್‌ರು ತಾಯಿನಾಡು ರಾಮಯ್ಯನೆಂದೇ ಪ್ರಸಿದ್ಧಿ.

ನಾವು ಅಪ್ಪಟ ದಕ್ಷಿಣದವರು ಎಂದು ಹೆಮ್ಮೆಯಿಂದ ಹೇಳಿಕೊಂಡು ಅಯ್ಯಂಗಾರ್ ಸಂಪ್ರದಾಯದ ಸೀರೆಯನ್ನುಡುವ ಪಿ. ಆರ್. ಜಯಲಕ್ಷಮ್ಮ ಸಂಪ್ರದಾಯವನ್ನು ಉಳಿಸಿಕೊಂಡರೆ ಸಂಸ್ಕೃತಿ ತಾನಾಗಿ ಉಳಿದೀತು ಎನ್ನುತ್ತಾರೆ.

ಮನೆಯ ಒಳಗೂ ಹೊರಗೂ ಗುಡಿಸಿ ಸಾರಿಸಿದ ಜಾಗದಲ್ಲಿ ನಗುನಗುವಂತೆ ರಂಗೋಲಿ ಇರಬೇಕು. ಅರಿಸಿನ ಕುಂಕುಮ ಆರತಿ ಅಕ್ಷತೆಗಳು ತಟ್ಟೆಯಲ್ಲಿ ಕಂಗೊಳಿಸುತ್ತಿರಬೇಕು. ಮನೆಗೆ ಬಂದವರನ್ನು ಅತಿಥಿಗಳೆಂದು ಸತ್ಕರಿಸಬೇಕು. ಹಬ್ಬಗಳನ್ನು ತಪ್ಪದೆ ಆಚರಿಸಬೇಕು–ಎಂದು ಹೇಳುತ್ತಾ ಜಯಲಕ್ಷಮ್ಮನವರು ಹೋದ ವರ್ಷ ಕೂಡ ತಾವೇ ತಯಾರಿಸಿದ ರಾಮಾಯಣ, ಮಹಾಭಾರತ, ಭಗವದ್ಗೀತೆಯಿಂದ ಆರಿಸಿ ನಿರೂಪಿಸಿದ ಕಥಾರೂಪದ ದಸರಾ ಹಬ್ಬದ ಗೊಂಬೆಗಳನ್ನು ತೋರಿಸುತ್ತಾರೆ. ಸಂಪ್ರದಾಯವನ್ನು ಮಕ್ಕಳ ಮನಸ್ಸಿಗೂ ನಾಟುವಂತೆ ಆಚರಿಸುವ ತಾಳ್ಮೆ, ಹಬ್ಬ ಹರಿದಿನಗಳು ನಿಯಮದಂತೆ ನಡೆಯಬೇಕೆಂಬ ಶ್ರದ್ಧಾಭಕ್ತಿ, ಕಲಾನೈಪುಣ್ಯತೆ ಇಂದಿಗೂ ಜಯಲಕ್ಷಮ್ಮನವರಲ್ಲಿ ಕಡಿಮೆಯಾಗಿಲ್ಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



"ಹಿಂದಿನವರು ಕಾರಣವಿಲ್ಲದೆ ಸಂಪ್ರದಾಯವನ್ನು ಮಾಡಿಲ್ಲ. ಇಂದಿನ ವಿಜ್ಞಾನದಲ್ಲಿರುವಷ್ಟೇ ವಿಚಾರ ಹಿಂದಿನ ಆಚಾರದಲ್ಲೂ ಇತ್ತು. ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು ಅಷ್ಟೆ" ಎನ್ನುತ್ತಾರೆ.

ಇಂತಹ ಆಚಾರಶೀಲರಾದ ಜಯಲಕ್ಷಮ್ಮನವರ ಲೋಕಸೇವಾ ಕ್ಷೇತ್ರವನ್ನು ಸ್ವಲ್ಪ ಅವಲೋಕಿಸೋಣ, ವಿಧಾನಸೌಧದ ಮೆಟ್ಟಿಲನ್ನು ತುಳಿಯಲಿಲ್ಲ ಅಷ್ಟೆ. ಸಮಾಜ ಸೇವೆಯ ಎಲ್ಲ ಕ್ಷೇತ್ರಗಳಲ್ಲೂ ಇವರ ಪಾತ್ರ ಇದ್ದೇ ಇದೆ. 'ಗೋಕುಲಂ ಗಾರ್ಡನ್' ಎಂಬ ಶಾಲೆಯೇ ಇವರ ವಾಸದ ಮನೆ ಅಥವಾ ಇವರ ಮನೆಯೇ ಶಾಲೆಯಾಗಿದೆ ಎನ್ನಬಹುದು. ಹಿಂದಿನ ಕಾಲದ ವಿಶಾಲವಾದ ಮನೆಯಲ್ಲೇ ಒಂದು ಶಾಲೆಯನ್ನು ನಡೆಸುತ್ತಿದ್ದಾರೆ. ಅಶೋಕ ಶಿಶುವಿಹಾರ, ಮಹಿಳಾ ಸಮಾಜ, ಭಾರತೀಯ ಗ್ರಾಮೀಣ ಮಹಿಳೆಯರ ಸಂಘ ಮುಂತಾದ ಸಂಸ್ಥೆಗಳಿಗೆ ಈಕೆ ಅಧ್ಯಕ್ಷರು. ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಸಲಹಾ ಸಮಿತಿಗೆ ಉಪಾಧ್ಯಕ್ಷರು. ಅಬಲಾಶ್ರಮದ ಅಧ್ಯಕ್ಷರು ಒಂದು ವರ್ಷ ಡೆಪ್ಯುಟಿ ಮೇಯರ್ ಆಗಿ ಸೇವೆ ಸಲ್ಲಿಸಿದ್ದಾರೆ. ಅನೇಕ ಮಹಿಳಾ ಕಲ್ಯಾಣ ಸಂಸ್ಥೆಗಳಿಗೆ ಸದಸ್ಯರಾಗಿದ್ದಾರೆ.

ಶಾಸನ ಸಭೆಯ ಸದಸ್ಯರಾಗಬೇಕಾಗಿತ್ತೆಂಬ ಅವರ ಇಚ್ಛೆಯ ಕುರಿತು ಕೇಳಿದರೆ,

"ಇನ್ನೂ ಹೆಚ್ಚು ಜನಸೇವೆ ಮಾಡುವ ಅವಕಾಶವಿರುತ್ತದೆ. ಅಧಿಕಾರದ ಲಾಲಸೆಗಾಗಿ ಅಲ್ಲ, ಸೇವಾಕಾರ್ಯದ ತೃಪ್ತಿಗಾಗಿ. ನಾನು ಇನ್ನೂ ಏನೇನೋ ಮಾಡಬೇಕೆಂಬ ಹಂಬಲವಿತ್ತು" ಎನ್ನುತ್ತಾರೆ.

ಈಗ ಇವರೇ ನಡೆಸುತ್ತಿರುವ ಶಾಲೆಯ ಪೂರ್ಣ ಜವಾಬ್ದಾರಿಯಲ್ಲಿ ಮುಳುಗಿದ್ದಾರೆ. ಸುಮಾರು ಇಪ್ಪತ್ತೈದು ವರ್ಷಗಳಿಂದ ಎಡೆಬಿಡದೆ ಶಾಲಾ ಪ್ರಗತಿಯನ್ನು ಸಾಧಿಸುತ್ತಾ ಬಂದಿದ್ದಾರೆ. ತಮ್ಮ ಸೊಸೆ ಗಾಯತ್ರಿಯನ್ನೂ ಶಾಲಾ ಕೆಲಸದಲ್ಲಿ ನಿಯಮಿಸಿದ್ದಾರೆ. ಸುತ್ತಲೂ ಸುತ್ತಿಕೊಳ್ಳುವ ಮಕ್ಕಳ ಯೋಗಕ್ಷೇಮವನ್ನು ಸದಾ ವಿಚಾರಿಸುತ್ತಿರುತ್ತಾರೆ. ಅತ್ತೆ ಸೊಸೆಯರ ಮಧ್ಯೆ ಮಾತೆಂದರೆ, 'ಎಂಟನೇ ತರಗತಿಯ ಆ ಮಗುವಿಗೆ ಪುಸ್ತಕ ಸಿಕ್ಕಿತೇ ?', 'ಒಂಬತ್ತನೇ ತರಗತಿಯ ಆ ಮಗು ಈ ದಿನ ಸಮವಸ್ತ್ರ ಹಾಕಿಕೊಂಡು ಬಂದಿತ್ತೇ ?'–ಇತ್ಯಾದಿ. 'ಸಾಯಂಕಾಲ ಕಾಫಿ ತಿಂಡಿಯ ಸಮಯದಲ್ಲೂ ಇದೇ ವಿಚಾರ ವಿನಿಮಯ. ರಾತ್ರಿ ಊಟ ಮಾಡುವಾಗಲೂ ಶಾಲೆಯ ಮಕ್ಕಳ ವಿಷಯವೇ ಅಕ್ಕಮ್ಮನ ತಲೆಯಲ್ಲಿ' ಎನ್ನುತ್ತಾರೆ ಸೊಸೆ ಗಾಯತ್ರಿ.

ಎಸ್. ಎಸ್. ಎಲ್. ಸಿ. ವರೆಗೆ ಮಾತ್ರ ವ್ಯಾಸಂಗ ಮಾಡಿರುವ ಜಯಲಕ್ಷಮ್ಮನವರಿಗೆ 'ಯಾವ ವ್ಯವಹಾರ ಕೇಳಿದರೂ ಗೊತ್ತು. ಹಿಂದಿ, ತಮಿಳು, ತೆಲುಗು, ಸಂಸ್ಕೃತ, ಇಂಗ್ಲಿಷ್ ಮುಂತಾದ ಭಾಷೆಗಳ ಜ್ಞಾನವುಂಟು.

ಹನ್ನೆರಡು ವರ್ಷಕ್ಕೆ ಮದುವೆ ನಿಶ್ಚಯವಾಗಿ ಜಯಲಕ್ಷಮ್ಮ ಹೆಸರಾಂತ ಪತ್ರಿಕೋದ್ಯಮಿ ಶ್ರೀ ಪಿ. ಆರ್. ರಾಮಯ್ಯನವರ ಧರ್ಮಪತ್ನಿಯಾದರು. ರಾಮಯ್ಯನವರು ದೇಶಪ್ರೇಮಿ, ಮಹಾತ್ಮಾ ಗಾಂಧಿಯವರ ಕರೆಯ ಮೇರೆಗೆ ಸ್ವಾತಂತ್ರ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಸಂಗ್ರಾಮದ ಅಸಹಕಾರ ಚಳವಳಿ ದಿನಗಳಲ್ಲಿ ಪ್ರಧಾನ ಪಾತ್ರ ವಹಿಸಿದ ದೇಶಭಕ್ತ. ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ಓದುತ್ತಿದ್ದ ರಾಮಯ್ಯನವರು ವ್ಯಾಸಂಗ ವನ್ನು ತ್ಯಜಿಸಿ ಸ್ವಾತಂತ್ರ್ಯ ಹೋರಾಟಕ್ಕಾಗಿ ಬದ್ಧ ಕಂಕಣರಾದರು. ೧೯೨೭ರಲ್ಲಿ 'ತಾಯಿನಾಡು' ಎಂಬ ಕನ್ನಡ ದಿನಪತ್ರಿಕೆಯನ್ನು, 'ಚೇತನ' ಎಂಬ ಕನ್ನಡ ವಾರ ಪತ್ರಿಕೆಯನ್ನು, 'ಡೈಲಿ ನ್ಯೂಸ್' ಎಂಬ ಇಂಗ್ಲಿಷ್ ದಿನಪತ್ರಿಕೆಯನ್ನು ಹೊರಡಿ ಸಿದರು. ಎರಡು ಅವಧಿಯವರೆಗೆ ಕಾಂಗ್ರೆಸ್ ಕಾರ್ಪೊರೇಟರ್ ಆಗಿದ್ದು, ೧೯೫೨ ರಿಂದ ೧೯೫೭ರವರೆಗೆ ರಾಜ್ಯ ವಿಧಾನ ಸಭೆಯ ಅಧ್ಯಕ್ಷರಾಗಿದ್ದರು. ಪತ್ರಿಕೋದ್ಯಮ ದಲ್ಲಿ ಅಮೋಘ ಸೇವೆ ಸಲ್ಲಿಸಿದ್ದಕ್ಕಾಗಿ ೧೯೬೯ರಲ್ಲಿ ರಾಮಯ್ಯನವರಿಗೆ ರಾಜ್ಯ ಪ್ರಶಸ್ತಿ ದೊರಕಿತು. ಹರಿಜನ ಸೇವಕ ಸಂಘದ ಅಧ್ಯಕ್ಷರಾಗಿದ್ದರು. ಎಣಿಕೆಗೆ ಮೀರಿದಷ್ಟು ಸಂಘ ಸಂಸ್ಥೆಗಳೊಡನೆ ಸಂಪರ್ಕವಿಟ್ಟುಕೊಂಡು ಜನಸೇವಾ ನಿರತರಾಗಿದ್ದರು. ಇಂತಹ ವರ ಪತ್ನಿ ಎಂದ ಮೇಲೆ ಜಯಲಕ್ಷ್ಮಮ್ಮನವರಿಗೆ ವಿವಾಹದ ದಿನದಿಂದಲೇ ದೇಶ ಕಾರ್ಯವೇ ದಾಂಪತ್ಯ ಜೀವನವಾಯಿತು.

ಮದುವೆಯಾದ ಮೇಲೆ ನನಗೆ ಅವರು ಬರೆಯುತ್ತಿದ್ದ ಕಾಗದಗಳಲ್ಲಿ ಬರೀ ಗಾಂಧಿ ವಿಚಾರವೇ ಇರುತ್ತಿತ್ತು–ಎನ್ನುತ್ತಾರೆ ಜಯಲಕ್ಷ್ಮಮ್ಮ.

"ಹೀಗೆ ಗಾಂಧಿಯ ವಿಷಯವನ್ನು ಓದುತ್ತಾ ಕೇಳುತ್ತಾ ಅವರನ್ನು ನೋಡ ಬೇಕೆಂಬ ಬಯಕೆ ನನಗೂ ಹುಟ್ಟಿತು. ಗಾಂಧಿ ಮಹಾತ್ಮರನ್ನು ಒಂದು ಸಲ ನೋಡಿ, ಅವರ ಮಾತನ್ನು ಒಂದು ಸಲ ಕೇಳಿದರೆ ಮುಗಿಯಿತು, ಯಕ್ಷಿಣಿಯ ಹಾಗೆ ನಾವಾ ಗಿಯೇ ತಲೆಬಾಗಿ ಶಿಷ್ಯರಾಗಿ ಹೋಗುತ್ತಿದ್ದೆವು. ಎಷ್ಟು ಸಲ ನೋಡಿದರೂ ಮತ್ತೊಮ್ಮೆ ಅವರ ದರ್ಶನ ಸಿಕ್ಕಿ ಅನುಗ್ರಹವಾದೀತೇ ಎನ್ನಿಸುತ್ತಿತ್ತು" ಎನ್ನುತ್ತಾರೆ ಜಯಲಕ್ಷ್ಮಮ್ಮ.

"ಗಾಂಧೀಜಿ ಹೇಗಿದ್ದಾರೆ, ಹೇಗೆ ಮಾತಾಡುತ್ತಾರೆ, ಜನರನ್ನು ಹೇಗೆ ವಶ ಮಾಡಿಕೊಳ್ಳುತ್ತಾರೆ, ಇದೇ ನನ್ನ ತಲೆಯ ತುಂಬಾ ತುಂಬಿತ್ತು. ಇದಕ್ಕೆ ಸರಿಯಾಗಿ ನಮ್ಮ ಯಜಮಾನರು ಕಾಂಗ್ರೆಸ್ ಭಾಷಣವಾಗುತ್ತಿದ್ದ ಕಡೆಗೆಲ್ಲಾ ನನ್ನನ್ನೂ ಕಳುಹಿಸು ತ್ತಿದ್ದರು. ೧೯೨೫ರಲ್ಲಿ ಮದರಾಸಿನಲ್ಲಿ ಪ್ರಪ್ರಥಮವಾಗಿ ಗಾಂಧೀಜಿಯನ್ನು ನೋಡಿ ದುದು ನನ್ನ ಜೀವನದಲ್ಲಿ ಮರೆಯಲಾರದ ಘಟನೆಯಾಗಿದೆ. ಗಾಂಧೀಜಿಯವರು ಮದರಾಸಿಗೆ ಬರುತ್ತಾರೆಂಬ ಸುದ್ದಿ ತಿಳಿದು, ಇದೊಂದು ಸುಯೋಗವೆಂದು ನಾನೂ ಮದರಾಸಿಗೆ ಹೊರಟೆ. ರೈಲಿನಲ್ಲಿ ಉದ್ದಕ್ಕೂ ನನ್ನೊಡನೆ ಬಂದವರೆಲ್ಲಾ ಗಾಂಧೀಜಿ ಯನ್ನು ಸಂದರ್ಶಿಸುವ ಭಾಗ್ಯ ದಕ್ಷಿಣ ದೇಶದವರಿಗೂ ಒದಗಿತೆಂದು ಸಂತೋಷ ಪಡುವವರೇ. ನಾವು ಮದರಾಸನ್ನು ತಲುಪಿದ ದಿನ ಸಾಯಂಕಾಲವೇ ಟ್ರಿಪ್ಲಿಕೇನಿನ ಸಮುದ್ರ ತೀರದ ಮೈದಾನದಲ್ಲಿ ಗಾಂಧಿ ಭಾಷಣ ಮಾಡುತ್ತಾರೆಂದು ಮಧ್ಯಾಹ್ನ ದಿಂದಲೇ ಜನ ಸೇರಲಾರಂಭಿಸಿದರು" ಎನ್ನುತ್ತಿದ್ದ ಜಯಲಕ್ಷ್ಮಮ್ಮ ಅಂದಿನ ಚಿತ್ರ ನಮ್ಮ ಕಣ್ಣು ಮುಂದೆ ತಂದು ನಿಲ್ಲಿಸುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಆ ಕಡೆ ನೋಡಿದರೆ ನೀರಿನ ಸಮುದ್ರ, ಈ ಕಡೆ ಜನ ಸಮುದ್ರ, ಗಾಂಧೀಜಿ ಬಂದ ಕೂಡಲೇ "ಮಹಾತ್ಮಾ ಗಾಂಧೀಜೀ ಕಿ ಜೈ" ಎಂದು ಕೂಗಿದ ಜಯಕಾರ ನಭೋ ಮಂಡಲವನ್ನು ಮುಟ್ಟಿತು. ಕೂಡಲೇ ಅತ್ಯಂತ ನಿಶ್ಶಬ್ದ ವಾತಾವರಣ. ಗಾಂಧೀಜಿ ಮಾತಾಡಿದ ಒಂದೊಂದು ಅಕ್ಷರವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುವ ಆಕಾಂಕ್ಷೆಯಿಂದ ಜನರು ಮೈಯೆಲ್ಲಾ ಕಣ್ಣಾಗಿ ಅವರನ್ನೇ ನೋಡುತ್ತಾ, ಮೈಯೆಲ್ಲಾ ಕಿವಿಯಾಗಿ ಅವರನ್ನೇ ಕೇಳುತ್ತಾ ಶಾಂತರಾಗಿ ಕುಳಿತಿದ್ದರು. ಕೈ ರಾಟೆಯಲ್ಲಿ ನೂಲ ಬೇಕು. ಅಹಿಂಸೆಯಿಂದಲೇ ಸ್ವರಾಜ್ಯ ಸಂಪಾದಿಸಬೇಕು ಎನ್ನುವುದು ಅವರ ಭಾಷಣದ ತಿರುಳಾಗಿತ್ತು.

"ಮೊಟ್ಟಮೊದಲು ಗಾಂಧಿಯನ್ನು ನೋಡಿದ ಯಾರಿಗಾದರೂ ವಿಸ್ಮಯ ವಾಗುತ್ತಿತ್ತು. ಸಾಧಾರಣ ಮನುಷ್ಯ. ಆದರೆ ಇಡೀ ದೇಶವೇ ಹಿಂಬಾಲಿಸುತ್ತದೆ. ಉಡುವುದೊಂದು ತುಂಡು ಪಂಚೆ, ಹೊದೆಯುವುದೊಂದು ಸಣ್ಣ ವಸ್ತ್ರ. ಆದರೆ ಅತ್ಯಾಧುನಿಕ ಆಡಂಬರದ ಬ್ರಿಟಿಷರನ್ನೇ ನಡುಗಿಸುತ್ತಾರೆ. ಅವರ ಸರಳತೆಗೂ, ಜನ ರಿಗೆ ಅವರಲ್ಲಿದ್ದ ನಂಬಿಕೆಗೂ ಶರಣಾಗಿ ಗಾಂಧೀ ಭಕ್ತೆಯಾದೆನು. ಅವರ ವಾಣಿ ನನ್ನ ಕಿವಿಯಲ್ಲಿ ನಿಂತಿದೆ. ಅವರ ಬಿಂಬ ಅಚ್ಚಳಿಯದೆ ಮನಸ್ಸಿನಲ್ಲಿ ನಿಂತಿದೆ. ಇದೇ ಗಾಂಧಿಯವರ ಪ್ರಥಮ ದರ್ಶನದ ಫಲ. ಇದೇ ನನ್ನ ಜೀವನದ ಮರೆಯಲಾಗದ ಸಂಗತಿ" ಎನ್ನುತ್ತಾರೆ ಜಯಲಕ್ಷ್ಮಮ್ಮ.

ಎರಡನೇ ಸಲ ಗಾಂಧಿಯವರನ್ನು ಜಯಲಕ್ಷ್ಮಮ್ಮ ಸಂದರ್ಶಿಸಿದುದು, ಅವರು ನಂದೀ ಬೆಟ್ಟಕ್ಕೆ ವಿಶ್ರಾಂತಿಗಾಗಿ ಬಂದಿದ್ದಾಗ. ಬೆಂಗಳೂರಿನಲ್ಲೇ ಕೆಲವು ದಿನಗಳಿರಲು ಕುಮಾರಾ ಪಾರ್ಕಿನಲ್ಲಿ ತಂಗಿದ್ದಾಗ. ಪ್ರತಿದಿನ ಪ್ರಾರ್ಥನೆಗೆ ಜಯಲಕ್ಷ್ಮಮ್ಮ ಹಾಜರಾಗು ತ್ತಿದ್ದರು. ಅಲ್ಲಿ ನಡೆಯುತ್ತಿದ್ದ ರಾಮನಾಮ ಭಜನೆ, ಮೀರಾಬಾಯಿ ಕೀರ್ತನೆ, ಭಗವದ್ಗೀತೆಯ ಶ್ಲೋಕಗಳು, ಸ್ಥಿತಪ್ರಜ್ಞ ವಿಚಾರ ಇವೆಲ್ಲಾ ಜಯಲಕ್ಷ್ಮಮ್ಮನ ಮೇಲೆ ಬಹಳ ಪರಿಣಾಮ ಬೀರಿದುವು.

ಗಾಂಧೀಜಿಯವರು ಎಲ್ಲೆಲ್ಲಿ ಹೋದರೆ, ಅವರೊಂದಿಗೆ ಹೋಗಬೇಕೆಂಬ ಅಭಿ ಲಾಷೆಯಾಯ್ತು. ಗಾಂಧೀಜಿ ಬೆಂಗಳೂರಿಂದ ಮೈಸೂರಿಗೆ ಹೋದಾಗ, ತಮ್ಮ ಪತಿ ಯೊಡನೆ ಜಯಲಕ್ಷ್ಮಮ್ಮ ಮೈಸೂರಿಗೆ ಹೋಗಿ ಗಾಂಧೀಜಿಯನ್ನು ಮಾತಾಡಿಸುವ ಸೌಲಭ್ಯ ಪಡೆದರು. ದಂಪತಿಗಳು ಪ್ರೀತಿಯಿಂದ, ಭಕ್ತಿಯಿಂದ ಗಾಂಧೀಜಿಗೆ ನಮ ಸ್ಕರಿಸಿ, ಅವರಿಗೆ ಅತ್ಯಂತ ಪ್ರಿಯವಾದ ಭಗವದ್ಗೀತೆಯ ವಾಕ್ಯವನ್ನು ಬರೆದುಕೊಡ ಬೇಕೆಂದು ಗಾಂಧಿಯವರನ್ನು ಪ್ರಾರ್ಥಿಸಿದರು. ಗಾಂಧೀಜಿ ಅತ್ಯಂತ ಸಂತೋಷದಿಂದ ತಮಗೆ ಕೊಟ್ಟ ಡೈರಿಯಲ್ಲಿ,

"ಸುಖ ದುಃಖೇ ಸಮೇಕೃತ್ವಾ ಲಾಭಾ ಲಾಭೌ
ಜಯಜಯೌ..." ಶ್ಲೋಕವನ್ನು ಬರೆದುಕೊಟ್ಟರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಈಗಲೂ ಈ ಡೈರಿಯನ್ನು ಜಯಲಕ್ಷಮ್ಮನವರ ಬಳಿ ನೋಡಬಹುದು. ಗಾಂಧೀಜಿ ಬರೆದು ಕೊಟ್ಟ ಇದೇ ವಾಕ್ಯಗಳು 'ತಾಯಿನಾಡು' ಪತ್ರಿಕೆಯ ಶಿರೋನಾಮೆಯ ಕೆಳಗೆ ಪ್ರತಿದಿನ ಮುದ್ರಿತವಾಗುತ್ತಿದ್ದವು.

ಮೈಸೂರಿನ ಜಗನ್ಮೋಹನ ಪ್ಯಾಲೆಸ್‌ನಲ್ಲಿ ಮಹಿಳೆಯರನ್ನು ಉದ್ದೇಶಿಸಿ ಗಾಂಧೀಜಿ ಮಾತಾಡಿದಾಗ, ದೇಶಸೇವಾಕಾರ್ಯಕ್ಕಾಗಿ ಜಯಲಕ್ಷಮ್ಮ ತಮ್ಮ ಆಭರಣಗಳನ್ನೆಲ್ಲಾ ತೆಗೆದು ಗಾಂಧೀಜಿಗೆ ಸಮರ್ಪಿಸಿದರು.

ಪುನಃ ಗಾಂಧಿಯನ್ನು ೧೯೩೪ರಲ್ಲಿ ಬೆಂಗಳೂರಿನಲ್ಲಿ ಹರಿಜನ ಪ್ರಚಾರಕ್ಕಾಗಿ ಬಂದಿದ್ದಾಗ ಸಂಧಿಸಿದರು. ಹರಿಜನ ನಿಧಿಗಾಗಿ ಮನಃಪೂರ್ವಕವಾಗಿ ಜಯಲಕ್ಷಮ್ಮ ಹಣ ನೀಡಿದರು.

೧೯೪೧ರಲ್ಲಿ ಜಯಲಕ್ಷಮ್ಮ ಮತ್ತು ಮನೆಯವರು ಕಾಶಿಗೆ ಹೋಗುವಾಗ ಗಾಂಧಿಯವರ ಸೇವಾ ಗ್ರಾಮವನ್ನು ನೋಡುವ ಆಸೆಯಿಂದ, ದಾರಿಯಲ್ಲಿ ವಾರ್ಧಾದಲ್ಲಿಳಿದು ಸೇವಾ ಗ್ರಾಮಕ್ಕೆ ತೆರಳಿದರು. "ತಮ್ಮ ಬಿಡಾರದಲ್ಲಿ ನೂಲುತ್ತಾ ಕುಳಿತಿದ್ದ ಗಾಂಧೀಜಿ ಬಂದವರನ್ನು ಸ್ವಾಗತಿಸಿ, ಪ್ರೀತಿಯಿಂದ ಮಾತಾಡಿಸಿ, ಪ್ರಾರ್ಥನೆಗೆ ಇರಲು ಹೇಳಿದರು" ಎನ್ನುತ್ತಾ ಜಯಲಕ್ಷಮ್ಮ, "ಪ್ರಾರ್ಥನೆಯು ಗಾಂಧೀಜಿಯ ಉಸುರಿನ ಉಸುರಾಗಿತ್ತು" ಎನ್ನುತ್ತಾರೆ.

ಪ್ರಾರ್ಥನೆಯ ಸಮಯದಲ್ಲೇ ಗಾಂಧಿಯನ್ನು ಗುಂಡು ಹಾಕಿ ಕೊಂದರೆಂದು ಕೇಳಿಸಿಕೊಂಡಾಗ ತಡೆಯುಲಸಾಧ್ಯವಾದ ಸಂಕಟವಾಯ್ತು ಎಂದು ನೊಂದುಕೊಳ್ಳುತ್ತಾರೆ ಈಗಲೂ ಈ ಗಾಂಧಿಭಕ್ತೆ.

"ಗಾಂಧೀಜಿಯನ್ನು ಎಷ್ಟು ಸಲ ನೋಡಿದರೂ ಮತ್ತೆ ಮತ್ತೆ ನೋಡಬೇಕೆಂಬ ಇಚ್ಛೆ ಹೆಚ್ಚಾಗುತ್ತಿತ್ತು. ಮನಸ್ಸಿಗೆ ತೋರಿದಾಗ, ಅವರ ಆಶ್ರಮಕ್ಕೆ ಹೋಗಬೇಕೆನ್ನಿಸಿ ಸಾಬರಮತಿಗೆ ಹೋಗುತ್ತಿದ್ದೆ. ಗಾಂಧಿಯವರು ಕುಳಿತ ಸ್ಥಳ, ಓಡಾಡಿದ ಸ್ಥಳ, ಪ್ರಾರ್ಥನಾ ಸ್ಥಳಗಳನ್ನು ನೋಡುತ್ತಾ ಮಹಾತ್ಮರ ಮೂರ್ತಿ ಅಲ್ಲೆಲ್ಲಾ ಹೇಗಿತ್ತು ಎಂಬುದನ್ನು ಸ್ಮರಿಸಿದ್ದೇನೆ. ಮಹಾತ್ಮರ ಶಿಷ್ಯರೆಲ್ಲರಿಗೂ ನನ್ನಂತೆಯೇ ಅವರಲ್ಲಿ ಗುರುಭಕ್ತಿ ಭಾವನೆ ಇದ್ದುದರಲ್ಲಿ ಸಂಶಯವಿಲ್ಲ" ಎನ್ನುತ್ತಾರೆ.

ಗಾಂಧೀಜಿಯ ಸಂಪರ್ಕದಿಂದ ಸೇವೆಯೇ ಸರ್ವಸಾಧನವೆಂಬ ನೀತಿಯನ್ನು ಜಯಲಕ್ಷಮ್ಮ ಕಲಿತರು. ಪತಿಯ ಜೊತೆ ಜೊತೆಗೆ ಸ್ವಾತಂತ್ರ್ಯ ಹೋರಾಟದಲ್ಲಿ ಸತತ ಶ್ರಮಿಸಿದರು. ೧೯೨೨ರಲ್ಲಿ ಹುಬ್ಬಳ್ಳಿಯಲ್ಲಿ ನಡೆದ ಕಾಂಗ್ರೆಸ್ ಸಭೆಗೆ ರಾಮಯ್ಯನವರು ತಮ್ಮ ಪತ್ನಿಯನ್ನೂ ಕರೆದುಕೊಂಡು ಹೋದುದು ದೇಶಸೇವೆಗಾಗಿ ಅವರನ್ನು ಸಿದ್ಧಪಡಿಸಿದಂತಾಯಿತು. ಅಲ್ಲಿ ಮಹಮ್ಮದಾಲಿ, ಶೌಕತ್ ಅಲಿ ಇವರ ಭಾಷಣ ಪ್ರಭಾವ ಬೀರಿತು. ಮದರಾಸಿನ "ಸ್ವರಾಜ್ಯ" ಎಂಬ ಪತ್ರಿಕೆಯ ವ್ಯವಹಾರದ ಜವಾಬ್ದಾರಿಯನ್ನು ವಹಿಸಿಕೊಂಡ ರಾಮಯ್ಯನವರು ತಮ್ಮ ಪತ್ನಿಗೆ ಈ ವಿಚಾರ ಆಂದೋಲನದ ಬಗ್ಗೆ ಸಾಕಷ್ಟು ಮನಸೆಳೆಯುವಂತೆ ತಿಳಿಸುತ್ತಿದ್ದರು. ಪತಿಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಪ್ರೇರೇಪಣೆಯ ಪ್ರೋತ್ಸಾಹ ಪಡೆದ ಜಯಲಕ್ಷಮ್ಮ ಮನೆಯ ಸಂಸಾರವನ್ನೂ ನಿರ್ವಹಿಸುತ್ತಾ, ಸಭೆ, ಸಮ್ಮೇಳನ, ಮೆರವಣಿಗೆಗಳಲ್ಲಿ ಭಾಗವಹಿಸುತ್ತಾ ಜನಪ್ರಿಯರಾದರು. ಇವರದ್ದು ಅವಿಭಕ್ತ ಕುಟುಂಬ. ಅತ್ತೆ, ಮಾವ, ಮೈದುನದಿರ ಸೇವೆ, ಗೃಹಕೃತ್ಯದ ಜವಾಬ್ದಾರಿ, ಪೂರ್ವ ಸಂಪ್ರದಾಯದ ಸಂಸಾರ ಕ್ರಮ—ಎಲ್ಲವನ್ನೂ ಆಸಕ್ತಿಯಿಂದ ಮಾಡುತ್ತಿದ್ದ ಮಾದರಿ ಗೃಹಿಣಿಯೂ ಆಗಿದ್ದರು.

ಚಳವಳಿಯ ಸಂದರ್ಭಗಳಲ್ಲಿ, ತರಬೇತಿ ಕೇಂದ್ರಗಳಲ್ಲಿ, ಸಮ್ಮೇಳನ ಸಮಯಗಳಲ್ಲಿ ಊಟದ ವ್ಯವಸ್ಥೆಯ ಜವಾಬ್ದಾರಿ ಜಯಲಕ್ಷಮ್ಮನವರಿಗೇ ಸೇರಿದ್ದು. ದುಡಿದು ದಣಿದ ದೇಶಸೇವಾಕರ್ತರನ್ನು ಆದರಿಸಿ ಸತ್ಕರಿಸಿ ತಾನೇ ಎಲ್ಲರಿಗೂ ಬಡಿಸುವುದೆಂದರೆ ಜಯಲಕ್ಷಮ್ಮನವರಿಗೆ ಅತ್ಯಂತ ಆನಂದದ ಕೆಲಸ. ನಾಗಪುರದ ಕಾಂಗ್ರೆಸ್ ಅಧಿವೇಶನ ಸಮಯದಲ್ಲಿ ಹೆಚ್ಚಿನ ಜವಾಬ್ದಾರಿ ವಹಿಸಿ ಅಧಿವೇಶನ ಯಶಸ್ವಿಯಾಗಲು ಕಾರಣರಾದವರಲ್ಲಿ ಜಯಲಕ್ಷಮ್ಮನೂ ಒಬ್ಬರು. ಕಾಂಗ್ರೆಸ್ ಇಬ್ಭಾಗವಾದಾಗ ಇಂದಿರಾ ಗಾಂಧಿಯವರ ಜೊತೆ ಇದ್ದು ನೆಮ್ಮದಿ ಕಳೆದುಕೊಂಡ ಕಾಂಗ್ರೆಸ್ ಮುಖಂಡರನ್ನು ಸಮಾಧಾನಪಡಿಸಿ ಊಟಕ್ಕೆ ಏರ್ಪಾಡು ಮಾಡಿದವರು ಜಯಲಕ್ಷಮ್ಮನವರೇ.

ಪರರ ಊಟದ ಚಿಂತೆಯೇ ವಿನಃ ಜಯಲಕ್ಷಮ್ಮನವರಿಗೆ ತಮ್ಮ ಊಟದ ಕಡೆ ಗಮನವಿರುತ್ತಿರಲಿಲ್ಲ. ಮಡಿವಂತಿಕೆಯ ಅಡಚಣೆ ಬಂದು ಕೆಲವು ವೇಳೆ ಊಟವೇ ಇಲ್ಲದಂತಾಗುತ್ತಿತ್ತು. ಆದರೂ ಸರ್ವಶಕ್ತಿ ಸಮೃದ್ಧರಂತೆ ಸುಟಿಯಾಗಿ ಕೆಲಸ ಮಾಡುವುದು ಜಯಲಕ್ಷಮ್ಮನವರ ಸ್ವಭಾವ. ಉಪವಾಸ, ವ್ರತಗಳಿಂದಲೇ ಇವರ ಮೈ ಗಟ್ಟಿಯಾಗಿ ಆರೋಗ್ಯವಾಗಿದೆಯೋ ಎನ್ನುವಂತೆ ಕಾಣುತ್ತಾರೆ.

ಮೊನ್ನೆಯಿಂದ ಹಲ್ಲುನೋವು, ಸ್ವಲ್ಪ ಜ್ವರ ಬಂದಂತಿದೆ—ಎನ್ನುತ್ತಾ ನಮ್ಮೊಡನೆ ಎಷ್ಟು ಹೊತ್ತು ಬೇಕಾದರೂ ಕುಳಿತು ಮಾತಾಡುತ್ತಾರೆ. ಎಂತಹ ಸಮಯದಲ್ಲೂ ಅವೇಳೆಯಲ್ಲಿ ಹಾಸಿಗೆಯಲ್ಲಿ ಮಲಗುವವರಲ್ಲ, ಸಡಗರದಿಂದ ಓಡಾಡುತ್ತಾ ಅದೇನಾಯ್ತು, ಇದೇನಾಯ್ತು ಎಂದು ಸೊಸೆಯನ್ನು ಕೇಳುತ್ತಾ, ದೂರವಾಣಿ ಕರೆಯನ್ನು ಗಮನಿಸಲು ತಾವೇ ಬೇಗ ಎದ್ದು ಹೋಗಿ ಮಾತಾಡುತ್ತಾರೆ. ಮನೆಗೆ ಬಂದವರಿಗೆಲ್ಲಾ ತಿಂಡಿ ಕಾಫಿ ಕೊಟ್ಟು ಉಪಚರಿಸುವುದು ಇಂದಿಗೂ ಇವರ ಮನೆಯ ಪದ್ಧತಿ.

ಹಿಂದೆ ಇವರ ಮನೆ ಊಟದ ಛತ್ರವೇ ಆಗಿತ್ತು. ಯಜಮಾನರ ಜೊತೆಯಲ್ಲಿದ್ದ ಚಳವಳಿಗಾರರೆಲ್ಲಾ ನಮ್ಮ ಮನೆಗೇ ಊಟಕ್ಕೆ ಬರುತ್ತಿದ್ದರು ಎನ್ನುತ್ತಾರೆ. ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಚಾಮರಾಜಪೇಟೆಯಲ್ಲಿ ಬಹಳ ಗಲಭೆಯಾಗಿ ಪೋಲೀಸರು ಗುಂಡು ಹಾರಿಸಿದಾಗ ಅನೇಕರಿಗೆ ಆಶ್ರಯ ನೀಡಿತ್ತು ಜಯಲಕ್ಷಮ್ಮನವರ ಮನೆ. ಆಗ ಜಯಲಕ್ಷಮ್ಮ ಹದಿನೈದು ದಿನದ ಬಾಣಂತಿ ಇದೇ ಸಂದರ್ಭದಲ್ಲೇ ರಾಮಯ್ಯನವರನ್ನು ಹಿಡಿದು ಜೈಲಿಗೆ ಹಾಕಿದಾಗ ಕಂಕುಳಲ್ಲಿ ಮಗುವನ್ನೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಕಟ್ಟಿಕೊಂಡು ಜಯಲಕ್ಷಮ್ಮ ಚಳವಳಿಗಾರರನ್ನು ಸುಧಾರಿಸುತ್ತಾ ಆಂದೋಲನಕ್ಕೆ ಸ್ಫೂರ್ತಿ ಕೊಟ್ಟರು.

"ಆಗಿನ ಕಾಲದಲ್ಲಿ ಹೆಣ್ಣುಮಕ್ಕಳು ಹೆಚ್ಚಾಗಿ ಹೊರಗೆ ಹೋಗುತ್ತಿರಲಿಲ್ಲ. ಆದರೆ ಯಜಮಾನರಿಗೆ ಸಹಕರಿಸಿ ಸಹಾಯಮಾಡಿ ಅವರ ದೇಶ ಕಾರ್ಯದಲ್ಲಿ ನನ್ನದೂ ಒಂದು ಪಾತ್ರವನ್ನು ವಹಿಸಿದ್ದೇನೆ. ವೃತ್ತಪತ್ರಿಕೆಗಳಲ್ಲಿ ಚಳವಳಿ ನಡೆಯುತ್ತಿದ್ದ ವಿಷಯಗಳನ್ನು ಬರೆದು ಪ್ರಕಟಿಸಿ ಜನರನ್ನು ಪ್ರಚೋದಿಸುತ್ತಿದ್ದೆ. ಎಲೆಮರೆಯ ಕಾಯಿಯಂತಿದ್ದು ಕಾಯಾ, ವಾಚಾ, ಮನಸಾ ದೇಶಕ್ಕಾಗಿ ದುಡಿದಿದ್ದೇನೆ. ಜೈಲಿಗೆ ಹೋಗಲಿಲ್ಲ ಅಷ್ಟೆ. ಎಲ್ಲಾ ವಿಧದಲ್ಲೂ ಚಳವಳಿ ರೂಪ ತಾಳಿದಂತೆಲ್ಲಾ ಅದಕ್ಕೆ ತಕ್ಕಂತೆ ನನ್ನ ದೇಶ ಸೇವಾ ಕಾರ್ಯವನ್ನು ಅಳವಡಿಸಿಕೊಳ್ಳುತ್ತಿದ್ದೆ" ಎನ್ನುತ್ತಾರೆ.

"ನನಗೆ ಸ್ವಾತಂತ್ರ್ಯ ಸಮರ ಸಂದರ್ಭ ಮಾತ್ರವಲ್ಲ. ನಂತರವೂ ಅಷ್ಟೆ, ಜನ ಸೇವೆಯಲ್ಲಿ ಜೀವನ ತೃಪ್ತಿ. ಕುರುಡ, ಕಿವುಡ, ಮೂಗರಿಗಾಗಿ ಸೆನೆಟ್‌ನಲ್ಲಿ ಕೆಲಸ ಮಾಡಿದ್ದೇನೆ. ಪ್ರವಾಹ ಪೀಡಿತರ ಪರಿಹಾರಕ್ಕಾಗಿ ಬಟ್ಟೆಗಳನ್ನು ಹೊಲಿದು ಕಳುಹಿಸಿದ್ದೇನೆ. ಸ್ಕೌಟ್ ದಳದಲ್ಲಿ ನನ್ನ ಸೇವೆ ಹಿರಿಯ ನಾಯಕರ ಮೆಚ್ಚಿಗೆಯನ್ನು ಪಡೆದಿದೆ. ಎಂ. ಆರ್. ಲಕ್ಷ್ಮಮ್ಮನವರೊಂದಿಗಿದ್ದು ಅವರಿಗೆ ಸಹಕಾರಿಯಾಗಿ ದೇಶಸೇವಾ ಕಾರ್ಯಗಳನ್ನು ಚಳವಳಿಯ ರೂಪದಲ್ಲಿ ಚಲಾಯಿಸಿದ್ದೇನೆ" ಎಂದು ಪಿ. ಆರ್. ಜಯಲಕ್ಷಮ್ಮ ತಮ್ಮ ಸೇವಾ ಕ್ಷೇತ್ರಗಳ ವಿವರಣೆಯನ್ನು ಸಾಲಾಗಿ ಸರಪಣಿಯಂತೆ ಹೇಳುತ್ತಾರೆ.

೧೯೩೪ರಲ್ಲಿ ಸಮಾಜ ಕಲ್ಯಾಣ ಸಂಸ್ಥೆಯನ್ನು ಸೇರಿ ಊರೂರು ಸುತ್ತಿ ಮಕ್ಕಳ ಮತ್ತು ಮಹಿಳೆಯರ ಯೋಗಕ್ಷೇಮಕ್ಕಾಗಿ ಶ್ರಮಿಸಿದರು. ಈಗ ಇವರು ನಡೆಸುತ್ತಿರುವ ಗೋಕುಲಂ ಶಿಕ್ಷಣ ಸಂಸ್ಥೆಯು 'ಗೋಪಾಲ ನಿಕೇತನ' ಎಂಬ ಹೆಸರಿನಲ್ಲಿ ದಿಕ್ಕಿಲ್ಲದ ಮಕ್ಕಳಿಗಾಗಿ ಒಂದು ಅನಾಥಾಲಯವನ್ನು ನಡೆಸುತ್ತಿದೆ. ಅನಾಥಾಲಯದ ಕಟ್ಟಡವು ತನ್ನದೇ ಆದ ನಿವೇಶನದಲ್ಲಿ ಎರಡು ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಾಣಗೊಂಡಿದೆ. ಕಟ್ಟಡದ ಒಟ್ಟು ಖರ್ಚಿನಲ್ಲಿ ಅರ್ಧದಷ್ಟು ಸರ್ಕಾರ ನೀಡಿದೆ. ಉಳಿದ ಮೊಬಲಗನ್ನು ದಾನಿಗಳಿಂದ ಸಂಗ್ರಹಿಸಲಾಗಿದೆ. ಈ ಕಟ್ಟಡದ ನಿರ್ಮಾಣಕ್ಕಾಗಿ ಜಯಲಕ್ಷಮ್ಮ ಐದು ಸಾವಿರ ರೂಪಾಯಿ ದಾನ ಮಾಡಿರುವರು. ಈ ಕಟ್ಟಡದ ಉದ್ಘಾಟನೆ ೩೧–೮–೮೩ರಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆಯವರಿಂದ ನೆರವೇರಿತು. ಸಂಸತ್ ಸದಸ್ಯರಾದ ಶ್ರೀ ವಿ. ಎಸ್. ಕೃಷ್ಣ ಅಯ್ಯರ್, ಶ್ರೀ ಟಿ. ಆರ್. ಶಾಮಣ್ಣ ಈಕೆಗೆ ಸಹಾಯಕರು. ಬೆಂಗಳೂರಿನ ಬಸವನಗುಡಿ ಬಡಾವಣೆಯ ಕೊಳಚೆ ಪ್ರದೇಶದ ಮಕ್ಕಳಿಗಾಗಿ ಜಯಲಕ್ಷಮ್ಮ ಒಂದು ಬಾಲವಾಡಿ ನಡೆಸುತ್ತಿದ್ದಾರೆ. ಗಾನ ಮಂದಿರದ ಸಂಗೀತ ಶಾಲೆಗೆ ಅಧ್ಯಕ್ಷರಾಗಿ ಜಯಲಕ್ಷಮ್ಮನವರು ಬಡ ಹೆಣ್ಣುಮಕ್ಕಳಿಗೆ ವಿಶೇಷ ಗಮನ ನೀಡುತ್ತಿರುವರು. ಇವರ ನಿರ್ದೇಶನದಲ್ಲಿ ಗಾಯತ್ರಿ ಲೇಡೀಸ್ ವೆಲ್‌ಫೇರ್ ಸೊಸೈಟಿಯು ಒಂದು ಕೈಗಾರಿಕಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಪೂರಕ ಘಟಕವನ್ನು ನಡೆಸುತ್ತಿದೆ. ಇಲ್ಲಿ ನೂರಾರು ಹೆಣ್ಣುಮಕ್ಕಳಿಗೆ ಉದ್ಯೋಗ ದೊರೆತಿದೆ. ಶಂಕರಪುರಂ ಬಡಾವಣೆಯ ಉದ್ಯೋಗಸ್ಥ ಮಹಿಳಾ ಹಾಸ್ಟೆಲ್‌ಗೆ ಅಧ್ಯಕ್ಷರಾಗಿದ್ದು, ಎಲ್ಲಾ ಕೋಮಿನ ಉದ್ಯೋಗಸ್ಥ ಹೆಣ್ಣುಮಕ್ಕಳಿಗೆ ವಸತಿ ಸೌಲಭ್ಯ ಒದಗಿಸಿಕೊಟ್ಟಿದ್ದಾರೆ. ಸುಮಾರು ಅರ್ಧ ಶತಮಾನದ ಹಿಂದೆಯೇ ಸ್ಥಾಪಿತವಾಗಿ ಎಲ್ಲಾ ಜಾತಿ ವರ್ಗದ ಗಂಡು ಮತ್ತು ಹೆಣ್ಣು ಮಕ್ಕಳ ಸೇವೆ ಮಾಡುತ್ತಿರುವ ಅಶಕ್ತ ಪೋಷಕ ಸಭಾದ ಉಪಾಧ್ಯಕ್ಷರಾಗಿ ಜಯಲಕ್ಷಮ್ಮ ಹದಿನೈದು ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ. ದಿಕ್ಕಿಲ್ಲದ, ದಾರಿತಪ್ಪಿದ, ಹಿಂದುಳಿದ, ಮುಗ್ಧ ಮತ್ತು ಶೋಷಿತ ಹೆಣ್ಣು ಮಕ್ಕಳಿಗಾಗಿ ಮತ್ತು ವಿಧವೆಯರಿಗಾಗಿ ಸ್ಥಾಪಿತವಾದ ಅಬಲಾಶ್ರಮದಲ್ಲಿ ಶಿಕ್ಷಣ ಮತ್ತು ತರಬೇತಿ ನೀಡಿ ಹೆಣ್ಣುಮಕ್ಕಳನ್ನು ಸ್ವಾವಲಂಬಿಗಳನ್ನಾಗಿ ಮಾಡಿದ್ದಾರೆ. ರಾಜ್ಯದ ಭಿಕ್ಷುಕ ಪರಿಹಾರ ಸಮಿತಿಗೆ ಸದಸ್ಯರಾಗಿದ್ದಾರೆ. ಬರಗಾಲ ಬಂದಾಗ, ಪ್ರವಾಹ ಕೊಚ್ಚಿದಾಗ ಜಯಲಕ್ಷಮ್ಮನವರ ಸಹಾಯ ಎಲ್ಲಿ ಅವಶ್ಯಕವೋ ಅಲ್ಲಿ ಅಕ್ಷಯವಾಗುತ್ತದೆ. ಕುಟುಂಬ ಯೋಜನಾ ಕಾರ್ಯಗಳಲ್ಲಿ ಭಾಗವಹಿಸಿ ಬಡ ಕುಟುಂಬಗಳಿಗೆ ಮಿತಸಂತಾನದ ಮಹತ್ವವನ್ನು ಮನವರಿಗೆ ಮಾಡಿಕೊಡುತ್ತಾರೆ. ಆಡು ಮುಟ್ಟದ ಸೊಪ್ಪಿಲ್ಲ ಎನ್ನುವಂತೆ ಜಯಲಕ್ಷಮ್ಮ ಕೈ ಹಾಕದ ಸೇವಾಕ್ಷೇತ್ರವಿಲ್ಲ.

ಇವರ ಸೇವೆಯನ್ನು ಸಮಾಜವೂ ಸರ್ಕಾರವೂ ಗುರ್ತಿಸದೆ ಇಲ್ಲ. ೧೯೬೩ರಲ್ಲಿ ಕರ್ನಾಟಕ ಸರ್ಕಾರದಿಂದ ಸಮಾಜ ಸೇವೆಗಾಗಿ ಜಯಲಕ್ಷಮ್ಮ ಪ್ರಶಸ್ತಿ ಪಡೆದರು. ಬಡಮಕ್ಕಳ ಕಲ್ಯಾಣ ಕಾರ್ಯವನ್ನು ಯಶಸ್ವಿಯಾಗಿ ಮಾಡಿದ್ದರಿಂದ ೧೯೮೨ರಲ್ಲಿ ಕರ್ನಾಟಕ ಸರ್ಕಾರ ಐದು ಸಾವಿರ ರೂಪಾಯಿ ನೀಡಿ ಗೌರವಿಸಿತು. ಸಮಾಜ ಸೇವಾ ಕ್ಷೇತ್ರದಲ್ಲಿ ಅದ್ವಿತೀಯ ಸೇವೆ ಸಲ್ಲಿಸಿದ್ದಕ್ಕಾಗಿ ಕರ್ನಾಟಕ ಸರ್ಕಾರ ೧೯೮೩ ನವೆಂಬರ್ ಒಂದರಿಂದ ಜಯಲಕ್ಷಮ್ಮನವರಿಗೆ ತಿಂಗಳಿಗೆ ಐನೂರು ರೂಪಾಯಿ ಗೌರವ ಧನ ನೀಡಿದೆ. ಅಬಲಾಶ್ರಮ ಸುವರ್ಣ ಮಹೋತ್ಸವದ ಸಮಾರಂಭದಲ್ಲಿ ಮೈಸೂರು ಮಹಾರಾಜರು ಬಂಗಾರದ ಪದಕವನ್ನು ನೀಡಿದ್ದಾರೆ.

ಇಷ್ಟೆಲ್ಲಾ ಕಾರ್ಯಕಲಾಪಗಳ ಮಧ್ಯೆ ಜಯಲಕ್ಷಮ್ಮ ಬರವಣಿಗೆಯ ಸಾಧನೆಯನ್ನೂ ಮಾಡಿದ್ದಾರೆ. ನಾ ಕಂಡ ಗಾಂಧೀಜಿ, ಗಾಂಧೀಜಿಯ ಸಾಧನೆ, ಮಹಾತ್ಮಾ ಗಾಂಧಿಯವರಲ್ಲಿ ಪ್ರತಿಭೆಯನ್ನು ಬೀರಿದ ಮಹಿಳೆಯರು, ಗೃಹಿಣಿಗೆ ಶಿಕ್ಷಣ ಅಗತ್ಯ' ಸುಖ ದಾಂಪತ್ಯ ಎಂದರೇನು, ಸಂಕ್ರಾಂತಿಯಲ್ಲಿ ಎಳ್ಳು ಬೀರುವ ಪದ್ಧತಿ, ಗಣೇಶ ಚತುರ್ಥಿ, ಸಣ್ಣ ಉಳಿತಾಯ ಯೋಜನೆ, ಸ್ತ್ರೀಯರ ಸಮಸ್ಯೆ—ಮುಂತಾದ ವಿಷಯಗಳು ಇವರ ಲೇಖನಿಯಿಂದ ಹೊರಟಿವೆ.

ಗಾಂಧೀಜಿಯ ಬಗ್ಗೆ ಬರೆಯುತ್ತಾ, ಗೃಹಸ್ಥಾಶ್ರಮದಲ್ಲೇ ಇದ್ದರೂ ಕುಟುಂಬಕ್ಕೆ ಅಂಟಿಕೊಳ್ಳದೆ ಪದ್ಮ ಪತ್ರದ ಮೇಲಿನ ನೀರಿನಂತಿದ್ದರು. ಬಂಧು ಬಳಗದವರನ್ನು ದೂರ ಮಾಡಲಿಲ್ಲ. ವಿಶ್ವಕುಟುಂಬಿಯಾಗಿದ್ದರು. ಇವರೊಬ್ಬ ಸತ್ಯಾನ್ವೇಷಿ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಸತ್ಯಾನ್ವೇಷಿಗೆ ಜಯವಿಲ್ಲ ಅಪಜಯವಿಲ್ಲ. ಲಾಭವಿಲ್ಲ ನಷ್ಟವಿಲ್ಲ. ಆಗಾಗ್ಗೆ ತಮ್ಮ ಹೃದಯದ ಅಂತರ್ವಾಣಿಯನ್ನು ಕೇಳಿದುದಾಗಿ ಹೇಳುತ್ತಿದ್ದರು.

ಉಪ್ಪಿನ ಸತ್ಯಾಗ್ರಹ ಮಾಡಿದಾಗ, ಅಸಹಕಾರ ಚಳವಳಿ ಹೂಡಿದಾಗ, ಇದರಿಂದೇನಾಗುತ್ತದೆ—ಎಂದು ಮೋತಿಲಾಲ್ ನೆಹರು ಮುಂತಾದ ಮುಖಂಡರು ಹಾಸ್ಯ ಮಾಡಿದರೂ, ಗಾಂಧೀಜಿ ಯಾರ ಮಾತಿಂದಲೂ ಧೈರ್ಯಗೆಡದೆ ತಮ್ಮ ಅಂತರ್ಶಕ್ತಿಯಿಂದ ಮುನ್ನಡೆದು ಜಯಿಸಿದ್ದಾರೆ—ಎಂದು ಜಯಲಕ್ಷಮ್ಮ ಗಾಂಧಿಯ ಬಗ್ಗೆ ಬರೆದಿದ್ದಾರೆ.

'ಇಂತಹ ಅಂತರ್ಶಕ್ತಿಯಿಂದಲೇ ಇಂದಿಗೂ ನಾನು ಕೆಲಸ ಮಾಡುತ್ತಿರುವುದು. ಅಂತರ್ಶಕ್ತಿಯ ಪ್ರೇರಣೆ ಇಲ್ಲದೆ ಬಾಹ್ಯ ವಾತಾವರಣ ಪೂರ್ಣ ಸಾಧನೆಗೆ ಸಾಲದು" ಎಂದು ಹೇಳುತ್ತಾ ಗಾಂಧೀಜಿಯವರ ಒಂದು ಹೇಳಿಕೆಯನ್ನು ನಮ್ಮ ಗಮನಕ್ಕೆ ಜಯಲಕ್ಷಮ್ಮ ತರುತ್ತಾರೆ.

> "ಸ್ವರಾಜ್ಯವು ನಮ್ಮ ಅಂತರ್ಶಕ್ತಿಯನ್ನೂ, ಅತಿ ಕಠಿಣ ಪ್ರಸಂಗಗಳನ್ನು ಎದುರಿಸುವ ನಮ್ಮ ಸಾಮರ್ಥ್ಯವನ್ನೂ ಅವಲಂಬಿಸಿದೆ.... ಯಾವುದೇ ಉತ್ತಮ ಭಾವನೆಯೂ ಅವರವರ ಅಂತರಂಗದಿಂದಲೇ ಬರಬೇಕಲ್ಲದೆ ಹೊರಗಿನಿಂದ ಹೇರುವುದು ಸಾಧ್ಯವಿಲ್ಲ. ಪ್ರಜಾಪ್ರಭುತ್ವದ ಭಾವನೆಯೂ ಇದರಲ್ಲೊಂದು"—ಗಾಂಧಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

## ಸೀತಮ್ಮ ಸುಬ್ರಹ್ಮಣ್ಯಶಾಸ್ತ್ರಿ

ನಂಜನಗೂಡಿನ ಹತ್ತಿರದಲ್ಲಿರುವ ಚಾಮರಾಜ ನಗರದಲ್ಲೊಂದು ಪೂರ್ವ ಕಾಲದ ಮನೆ. ಮನೆಯೊಳಗೆ ಪ್ರವೇಶಿಸುತ್ತಾ ಕಂಬಗಳ ಸಾಲಿನ ವಿಶಾಲವಾದ ಪಡಸಾಲೆಯನ್ನು ದಾಟಿ ಒಳಗೆ ಹೋದರೆ ಸದಾ ಸಮೃದ್ಧವಾಗಿ ಭಕ್ಷ್ಯ ಭೋಜ್ಯಗಳ ಸಿದ್ಧತೆಯಲ್ಲಿ ತೊಡಗಿರುವ ಗೃಹಿಣಿಯರ ಸಂಭ್ರಮ ತುಂಬಿದ ಅಡಿಗೆಕೋಣೆ. ಹಿತ್ತಲ ಬಾಗಿಲನ್ನು ತೆರೆದು ಇಣುಕಿದರೆ ಹಸುಕರು ಎಮ್ಮೆಗಳಿಗಾಗಿ ಕಟ್ಟಿರುವ ಕೊಟ್ಟಿಗೆ.

ನಮ್ಮ ದೇಶದ ಗ್ರಾಮೀಣ ನೈಜತೆಯನ್ನು ಚಿತ್ರಿಸುವ, ಇಂದಿಗೂ ಪೂರ್ವಾಚಾರ ಪದ್ಧತಿಯಂತೆಯೆ ದೇಹ ಶ್ರಮದ ಫಲದಿಂದ ಜೀವನ ನಡೆಸುತ್ತಿರುವ ಈ ಕುಟುಂಬ ಸಮೃದ್ಧಿ ಪೂರ್ವೀಕರ ನೆನಪು ಕೊಡುತ್ತದೆ.

ಮನೆಯ ಅತ್ಯಂತ ಸಮೀಪದಲ್ಲೇ ಶ್ರೀ ಮನ್ಮಹಾರಾಜ ಶ್ರೀ ಜಯಚಾಮರಾಜ ಒಡೆಯರ ಹೆಸರಿನಲ್ಲಿ ಕಟ್ಟಿಸಿದ ವೈಭವದ ಜಯಚಾಮರಾಜೇಶ್ವರ ದೇವಾಲಯವಿದೆ

ಚಾಮರಾಜ ನಗರದ ಜನಭರಿತ ಪೇಟೆಬೀದಿಯಲ್ಲಿರುವ ಪೂರ್ವಾಚಾರ ಸಂಪ್ರದಾಯದ ಈ ಮನೆಯಲ್ಲಿ ಊರಿನಜನರೆಲ್ಲಾ ಅಭಿಮಾನದಿಂದ ಹೇಳಿಕೊಳ್ಳುವ ಹೆಮ್ಮೆಯ ಕುಟುಂಬವಿದು.ಜಾತಿ ಭೇದವನ್ನೇ ಅರಿಯದ ಈ ಕುಟುಂಬದ ಸದಸ್ಯರ ಆದರಾತಿಥ್ಯ ಎಲ್ಲರಿಗೂ ಒಂದೇ ಭಾವನೆಯಿಂದ ಸಲ್ಲುತ್ತದೆ. ಊರಿಗೆ ಬಂದ ಆಗಂತುಕರು ಯಾರೇ ಆಗಲಿ ಆತ್ಮೀಯ ಉಪಚಾರದಿಂದ ಸತ್ಕರಿಸಿ ಸಮಾಧಾನಪಡುವ ಸ್ವಭಾವದ ಕುಟುಂಬವಿದು.

"ಇಲ್ಲಿ ಎಲ್ಲರೂ ಸ್ವಾವಲಂಬಿಗಳೇ. ಮಗ ಮೊಮ್ಮಗ ಹೆಚ್ಚು ವಿದ್ಯಾವಂತರು. ಆದರೂ ಎಲ್ಲರೂ ಸ್ವಂತ ದುಡಿಮೆಯಿಂದ, ತೋಟದಲ್ಲಿ ಕೆಲಸಮಾಡಿ, ವ್ಯಾಪಾರದಿಂದ ಸಂಪಾದಿಸಿ ಜೀವನ ನಡೆಸುತ್ತಾರೆ ಎನ್ನುವ ಸ್ವಾಭಿಮಾನವಿದೆ ಮನೆಯ ಹಿರಿಯ ಒಡತಿ ಸೀತಮ್ಮನವರಿಗೆ. ಕುಟುಂಬದ ಈ ಪದ್ಧತಿಗೆ ಕಾರಣರು ಸೀತಮ್ಮನವರೇ.

"ನಮ್ಮ ಅಜ್ಜಿ ಪ್ರತಿಯೊಂದು ವಿಚಾರವನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ ನಮಗೆ ತಿಳಿಸುತ್ತಾರೆ"- ಎನ್ನುತ್ತಾರೆ ಸೀತಮ್ಮನವರ ಮೊಮ್ಮಕ್ಕಳು. ಇದೇ ಸಮಯಕ್ಕೆ ಸೀತಮ್ಮನವರ ಸೊಸೆ ನಮ್ಮ ದಣಿವಾರಿಸಲು ನಿಂಬೆ ಹಣ್ಣಿನ ಪಾನಕ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ತಂದುಕೊಟ್ಟಾಗ, ಇದನ್ನೇ ಉದಾಹರಣೆಯನ್ನಾಗಿ ತೆಗೆದುಕೊಂಡು, "ನಿಂಬೆಹಣ್ಣಿನ ಬಿತ್ತ ತೇಲಿದರೆ ಪಾನಕದ ರುಚಿ ಸರಿಯಾಗಿದೆ ಎಂದರ್ಥ"- ಎಂದು ಹೇಳಿ ಅದಕ್ಕೆ ವಿಜ್ಞಾನದ ಕಾರಣವನ್ನು ಹೀಗೆ ಹೇಳುತ್ತಾರೆ ಸೀತಮ್ಮ. "ನೀರು ಸಂಪೂರ್ಣ ಸಕ್ಕರೆಯ ದ್ರಾವಣವಾದಾಗ ಬಿತ್ತ ತಾನಾಗಿ ಮೇಲೆ ಬರುತ್ತದೆ ಎನ್ನುತ್ತಾರೆ. ಉಪ್ಪಿನ ಕಾಯಿ ಕೆಡದೆ ಇರಲು ಉಪ್ಪಿನ ವೈಜ್ಞಾನಿಕ ಗುಣವನ್ನು ವಿವರಿಸುತ್ತಾರೆ. ಸೊಪ್ಪಿನ ಪಲ್ಯಕ್ಕೆ ಹೆಚ್ಚು ಉಪ್ಪು ಹಿಡಿಸದಿರಲು ಕಾರಣ ಸೊಪ್ಪಿನಲ್ಲೇ ಉಪ್ಪಿದೆ ಎಂದು ತನ್ನ ಸ್ವಂತ ಸಂಶೋಧನೆಯನ್ನು ಹೇಳುತ್ತಾರೆ.

"ಅಜ್ಜಿ ಹೇಳುವುದು ಪುಸ್ತಕದ ಬದನೆಕಾಯಿಯಲ್ಲ. ಕುರುಡು ನಂಬಿಕೆಯ ಸಂಪ್ರದಾಯವೂ ಅಲ್ಲ, ವೈಜ್ಞಾನಿಕ ರೀತಿಯ ವಿಚಾರಧಾರೆ. ಅಜ್ಜಿಯೊಡನೆ ಮಾತಾಡುತ್ತಿದ್ದರೆ ನಮಗೆ ವಿಜ್ಞಾನದ ಅನೇಕ ವಿಷಯಗಳು ತಿಳಿಯುತ್ತವೆ, ಅಷ್ಟೇ ಅಲ್ಲ. ಅಜ್ಜಿಗೆ ಸಸ್ಯ ಶಾಸ್ತ್ರವೂ ಚೆನ್ನಾಗಿ ಗೊತ್ತು. ಕಣಿಗಲೆ ಮತ್ತು ನಂದ್ಯಾ ಬಟ್ಟಲು ಒಂದು ಜಾತಿಗೆ ಸೇರಿದ ಸಸ್ಯಗಳು ಎನ್ನುತ್ತಾರೆ. ಸೀಬೆ ಮತ್ತು ಸುರಗಿ ಒಂದೇ ಜಾತಿಯ ಸಸ್ಯ ಎಂಬ ಸಸ್ಯ ವಿಭಾಗಗಳನ್ನು ಸಸ್ಯಶಾಸ್ತ್ರ ವಿದ್ಯಾರ್ಥಿಗಳಿಗಿಂತ ಹೆಚ್ಚಿನ ಜ್ಞಾನದಿಂದ ಹೇಳುತ್ತಾರೆ."

ಇದನ್ನು ಕೇಳಿ ೮೮ ವಯಸ್ಸಿನ ಅಜ್ಜಿ ಸೀತಮ್ಮನವರ ಚಿಕ್ಕವಯಸ್ಸಿನ ವಿದ್ಯಾಭ್ಯಾಸ ತಿಳಿಯಲು ಕುತೂಹಲವಾಗುತ್ತದೆ.

"ನಾನು ಶಾಲೆಗೇ ಹೋದವಳಲ್ಲ. ನಾನೇನೂ ಓದಿಲ್ಲ. ಶಾಲೆಗೆ ಹೋದರೆ ಮಾತ್ರ ವಿದ್ಯೆ ಬುದ್ಧಿ ಬರುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಪ್ರಕೃತಿಯೇ ಒಂದು ಪುಸ್ತಕ. ಅವನ್ನು ವಿಶ್ಲೇಷಣೆ ಮಾಡಿ ತಿಳಿದರೆ ಅದೇ ಜ್ಞಾನ, ಮತ್ತೇನಿದೆ ಓದುವುದು" ಎನ್ನುತ್ತಾರೆ.

ಸ್ವಾತಂತ್ರ್ಯದ ಚಳವಳಿಯ ಅವಶ್ಯಕತೆಯನ್ನು ಸೀತಮ್ಮನವರು ಅರ್ಥಮಾಡಿಕೊಂಡ ರೀತಿ ಹೀಗೆಯೇ, ಇದೇ ವಿಧವಾದ ಸ್ವತಃ ತರ್ಕ ಪರಿಜ್ಞಾನದಿಂದಲೇ ಅವರು ಕಾರ್ಯ ನಿಮಿತ್ತರಾದುದು. ಸಭೆ ಸಮ್ಮೇಳನಗಳು ಏಕೆ ? ತರಬೇತಿ ತಿರುಗಾಟಗಳು ಏಕೆ ? ಮಹಾತ್ಮರು ಹೇಳಿದ್ದೇನು ? ನಮ್ಮ ಗ್ರಾಮಗಳನ್ನು ಗ್ರಾಮಗಳಾಗಿಯೇ ಉಳಿಸಿಕೊಳ್ಳಿ. ಗ್ರಾಮೀಣ ಕೈಗಾರಿಕೆಗಳು ಅಳಿಯದಂತೆ ನೋಡಿಕೊಳ್ಳಿ, ಭಾರತೀಯರೆಲ್ಲರೂ ಯಾವ ಭೇದವೂ ಇಲ್ಲದ ಒಂದು ಸಮಾಜಕ್ಕೆ ಸೇರಿದವರೆಂದು ಭಾವಿಸಿ, ಇಷ್ಟೇ ಸಾಕು ಸ್ವಾತಂತ್ರ್ಯ ಚಳವಳಿಗೆ ಎಂದರು ಗಾಂಧಿ" ಎನ್ನುತ್ತಾರೆ ಸೀತಮ್ಮ.

ರಾಜ್ಯದ ವಾಣಿಜ್ಯ ಮತ್ತು ಕೈಗಾರಿಕಾ ನಿರ್ದೇಶಕರಾಗಿದ್ದ ಇವರ ಸೋದರ ಮಾವ ಶ್ರೀ ಎಸ್.ಜಿ. ಶಾಸ್ತ್ರಿಗಳು ೧೯೧೨ರಲ್ಲಿ ಇಂಗ್ಲೆಂಡಿನಲ್ಲಿ ಪ್ರವಾಸ ಮಾಡಿ ಬಂದ ನಂತರ ಅವರ ಪ್ರಭಾವ ಸೀತಮ್ಮನವರ ಮೇಲೆ ತೀವ್ರವಾಗಿ ಪರಿಣಮಿಸಿತು.

ನಮ್ಮ ದೇಶ ಬಡತನದ ದೇಶವಾಗಲು ಕ್ರಮೇಣ ಬ್ರಿಟಿಷರೇ ಕಾರಣ ಎಂಬುದನ್ನು ಸೀತಮ್ಮ ತರ್ಕಿಸಿದರು. ಅಂತರರಾಷ್ಟ್ರೀಯ ವ್ಯಾಪಾರದ ಮಾರುಕಟ್ಟೆಯನ್ನೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಬ್ರಿಟಿಷರು ಆಕ್ರಮಿಸಿಕೊಂಡಿರುವಾಗ ನಮ್ಮ ದೇಶದ ಕಚ್ಚಾ ವಸ್ತುಗಳು ನಮ್ಮಿಂದ ಕೈಬಿಟ್ಟು ಹೋಗಿ ವಿದೇಶವನ್ನು ಸೇರುತ್ತವೆ. ಇದರಿಂದಾಗಿ ನಮ್ಮ ದೇಶದ ವ್ಯಾಪಾರ, ಕೈಗಾರಿಕೆ ಹೇಗೆ ಪ್ರಗತಿ ಹೊಂದಲು ಸಾಧ್ಯವೆಂದು ಮನೆಯಲ್ಲೇ ಕುಳಿತು ಯೋಚಿಸಿದ ಸೀತಮ್ಮ ಗ್ರಾಮೋದ್ಯೋಗಗಳಿಗೂ ಗ್ರಾಮಗಳ ಉದ್ಧಾರಕ್ಕೂ ಶ್ರಮಿಸಿದರು. ತಾವೂ ಗ್ರಾಮವಾಸಿಯಾಗಿಯೇ ಇದ್ದರು.

ಸೀತಮ್ಮನವರ ಜನ್ಮಸ್ಥಳ ಒಂದು ಕುಗ್ರಾಮವಾದ ಮತ್ತಿಗೋಡು. (ಹಾಸನದ ರುದ್ರಪಟ್ಟಣದ ಸಮೀಪದಲ್ಲಿ, ಮೈಸೂರು ಜಿಲ್ಲೆಗೆ ಸೇರಿದೆ)ಇವರ ತಂದೆ ಮತ್ತಿಗೋಡು ಶ್ರೀ ವಾಸುದೇವ ಶಾಸ್ತ್ರಿಗಳು ವೇದಾಧ್ಯಯನ ಪಂಡಿತರು. ಇವರ ತಾತಂದಿರಾದ ಸೋರಲೆ ಶ್ರೀ ಅಯ್ಯಾಶಾಸ್ತ್ರಿಗಳು ಮೈಸೂರು ಒಡೆಯರ ಕಾಲದಲ್ಲಿ ಸುಪ್ರಸಿದ್ಧ ಆಸ್ಥಾನ ಕವಿಗಳಾಗಿದ್ದು ಮಹಾರಾಜರಿಂದ "ಕವಿಕುಲ ತಿಲಕ"ರೆಂಬ ಬಿರುದು ಪಡೆದಿದ್ದರು. ಅಯ್ಯಾ ಶಾಸ್ತ್ರಿಗಳು ಸೀತಮ್ಮನವರ ತಾಯಿಯ ತಂದೆ. ಇವರ ಜನಪ್ರಿಯ ರಚನೆಗಳಾದ ನಳಚರಿತ್ರೆ, ವಿಕ್ರಮೋರ್ವಶೀಯ, ಶೇಷರಾಮಾಯಣ ಮುಂತಾದ ಪುಸ್ತಕಗಳನ್ನು ಸೀತಮ್ಮನವರ ಪುಸ್ತಕ ಭಂಡಾರದಲ್ಲಿ ಇಂದಿಗೂ ಕಾಣಬಹುದು. ಅ.ನ.ಕೃ.ರವರ ದೂರದ ನೆಂಟಸ್ತಿಕೆಯೂ ಸೀತಮ್ಮನವರಿಗುಂಟು.

ತಂದೆ ಮತ್ತು ತಾತಂದಿರ ಸಾಹಿತ್ಯ ಪ್ರತಿಭೆ ಸೀತಮ್ಮನವರಲ್ಲಿ. ವ್ಯಕ್ತಿಗತವಾಗಿ ಸಂಸ್ಕೃತ, ಹಳೆಗನ್ನಡವೆಂದರೆ ಸೀತಮ್ಮನವರಿಗೆ ಲೀಲಾಜಾಲವಾಗಿ ಅರ್ಥವಾಗುವ ಭಾಷೆ. ಜೈಮಿನಿ ಭಾರತ, ಹದಿಬದೆಯ ಧರ್ಮ. ಮಂಕುತಿಮ್ಮನ ಕಗ್ಗ, ನೀತಿಬೋಧೆ ಈ ಪುಸ್ತಕಗಳು ಸೀತಮ್ಮನವರ ತಲೆದಿಂಬಿನಲ್ಲೇ ಇದ್ದು ಸದಾ ಕೈಗೆ ಸಿಕ್ಕುವ ಅತ್ಯಂತ ಪ್ರೀತಿಯ ಪುಸ್ತಕಗಳು. ಕನ್ನಡ ಪಂಡಿತರೂ ತಡಬಡಾಯಿಸುವ ಕ್ಲಿಷ್ಟಪದಗಳನ್ನೂ ಈ ಪುಸ್ತಕಗಳಿಂದ ಆರಿಸಿ ಸೀತಮ್ಮ ವಿವರಿಸಬಲ್ಲರು. ಬಾಯಿಪಾಠ ಮಾಡಿ ಕೆಲವು ಪದ್ಯಗಳನ್ನು ಪುಸ್ತಕ ನೋಡದೆ ಹೇಳಬಲ್ಲರು. ವ್ಯಾಸಂಗ ಮಾಡದಿದ್ದರೂ, ಶಾಲೆಗೆ ಹೋಗದಿದ್ದರೂ ಇಂತಹ ಜ್ಞಾನವಮಟ್ಟವಿರಲು ಹೇಗೆ ಸಾಧ್ಯವೆಂದು ಕೇಳಿದರೆ ಅವರ ಉತ್ತರ ಅತಿ ಸರಳ. "ಆಸಕ್ತಿ ಇದ್ದರೆ ಯಾವುದು ಸಾಧ್ಯವಿಲ್ಲ ಹೇಳಿ, ನಮ್ಮ ತಂದೆ ತಾತಂದಿರು ಜಗುಲಿಯ ಮೇಲೆ ಕುಳಿತು ಮನೆಗೆ ಬರುವ ಮಕ್ಕಳಿಗೆ ಹೇಳಿಕೊಡುತ್ತಿದ್ದ ಸಂಸ್ಕೃತ ಮತ್ತು ಕನ್ನಡ ಪಾಠಗಳನ್ನು ಪ್ರತ್ಯಕ್ಷವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ಕಲಿತಿಧ್ದೇನೆ. ಈ ಭಾಷೆಗಳಲ್ಲಿ ನನಗಿರುವ ಅಕ್ಕರೆಯೇ ಕಾರಣ. ಹಾಗೂ ಅರ್ಥವಾಗದಿದ್ದರೆ ನಿಘಂಟು, ಜ್ಞಾನಕೋಶಗಳ ಸಹಾಯದಿಂದ ಕಲಿಯಲು ಸಾಧ್ಯವಿಲ್ಲವೇ. ಮನಸ್ಸಿದ್ದಲ್ಲಿ ಮಾರ್ಗವೆಂಬ ಗಾದೆಯ ಅರ್ಥ ಇದೇ.

"ಹೀಗೆಯೇ ನಮ್ಮ ದೇಶದ ಸ್ಥಿತಿಯನ್ನು ನಾನಿದ್ದಲ್ಲೇ ತಿಳಿದುಕೊಂಡು ನಾನೇ ಚರ್ಚಿಸಿ ಸಮಸ್ಯೆಯನ್ನು ನನ್ನ ಬುದ್ಧಿಯ ಒರೆಗೆ ಹಚ್ಚಿ ಹೇಗೆ ಮಾಡಿದರೆ ನಮ್ಮ ಸಮಾಜ ಉದ್ಧಾರವಾಗಬಹುದೆಂದು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದೆ" ಎನ್ನುತ್ತಾರೆ ಸೀತಮ್ಮ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಹಾಗಾದರೆ ತರಬೇತಿ ಕೇಂದ್ರಕ್ಕೆ ಹೋಗದೆ, ಮುಖಂಡರಿಂದ ಪ್ರಭಾವಿತರಾಗದೆ ದೇಶಸೇವೆ ಮಾಡಿದರೇ ? ಎಂಬ ಪ್ರಶ್ನೆಗೆ ನಿಜವನ್ನು ಮರೆಮಾಚದ ಸೀತಮ್ಮನ ನುಡಿಗಳಿವು– "ಸಮಾಜಸೇವೆ ಮಾಡಲು ತರಬೇತಿ ಏಕೆ ? ಮುಖಂಡರನ್ನೇ ಅವಲಂಬಿಸಿ ಓಡಾಡುತ್ತಿದ್ದರೆ ನಾವೇ ಸ್ವತಃ ಮಾಡುವ ಕೆಲಸ ಏನು ? ನಾನು ಸೇವಾ ಕಾರ್ಯಕ್ಕಾಗಿ ತರಬೇತಿ ಪಡೆದವಳಲ್ಲ. ದೇಶದ ಆ ಸ್ಥಿತಿಯಲ್ಲಿ ಎಂತಹ ಸೇವೆ ಬೇಕಿತ್ತೆಂದು ನನಗೇ ಗೊತ್ತಿತ್ತು. ಹೆಣ್ಣಾಗಿ ಹುಟ್ಟಿ ನಾವು ಮಾಡಬೇಕಾದ ಸಮಾಜ ಕಾರ್ಯಗಳಾವುವೆಂದು ಆಗ ನಾನು ತಿಳಿದಿದ್ದೆ. ಅವರವರು ಇರುವ ಜಾಗದಲ್ಲೇ ಸೇವಾ ಕಾರ್ಯ ಮಾಡಿದರೆ ಇಡೀ ದೇಶದಲ್ಲೆಲ್ಲಾ ಮಾಡಿದಂತೆಯೇ ಆಗಲಿಲ್ಲವೇ ? ನನ್ನ ಈ ತರ್ಕಕ್ಕೆ ಇಲ್ಲಿ ಒಂದು ನಿದರ್ಶನವನ್ನು ಕೊಡುತ್ತೇನೆ.

"ಮೈಸೂರು ರಾಜ್ಯದ ಮಹಿಳಾ ಸಂಘರ್ಷ ಸಮಿತಿಯು ಮೈಸೂರಿನಲ್ಲಿ ಸಭೆ ಸೇರಿದಾಗ ನಾನು ನಡೆಸುತ್ತಿದ್ದ ಸಮಾಜದವತಿಯಿಂದ ಪ್ರತಿನಿಧಿಯಾಗಿ ಸಭೆಗೆ ಹೋಗಿದ್ದೆ. ಅಲ್ಲಿ ನಡೆದ ಮುಖ್ಯ ಕಾರ್ಯಕ್ರಮಗಳಲ್ಲಿ ಕ್ಷಾಮದಿಂದ ಬಳಲುತ್ತಿರುವ ಬಂಗಾಳಕ್ಕೆ ನೆರವು ನೀಡುವ ಅಂಶ ಒಂದಾಗಿತ್ತು. ಬಂಗಾಳಕ್ಕೆ ಸಹಾಯಧನ ಕೊಡಬೇಕೆಂದು ತೀರ್ಮಾನವಾಗುತ್ತಿದ್ದಾಗ ನಾನೊಬ್ಬಳೇ ವಿರೋಧಿಸಿ, ಧೈರ್ಯದಿಂದ ಎದ್ದು ನಿಂತು ಹೀಗೆಂದೆ. 'ಮನೆಯಲ್ಲೇ ಕ್ಷಾಮವಿದೆ. ಮನೆಯ ಬಡತನವನ್ನು ನೀಗಲು ಮೊದಲು ಸಹಕರಿಸಿ. ಯಾವುದನ್ನು ಮಾಡಿದರೂ ಮೊದಲು ಮನೆಯಿಂದ ಪ್ರಾರಂಭಿಸುವುದು ಒಳ್ಳೆಯದು. ನಮ್ಮ ರಾಜ್ಯದಲ್ಲಿ ನಾವು ಕಂಡ ಹಾಗೆ ಒಂದು ಹಿಡಿ ಹುರುಳಿಗೆ ಜೀತಮಾಡುವ ದರಿದ್ರ ಜನರಿದ್ದಾರೆ. ಇವರನ್ನು ಉದ್ಧಾರ ಮಾಡದೆ ಬಂಗಾಳಕ್ಕೆ ಧನ ಸಹಾಯ ಮಾಡುವುದರ ಅರ್ಥವೇನು ?' ಎಂದೆ.

ತಾಯಿಯ ಈ ಮಾತನ್ನು ಕೇಳುತ್ತಾ ಕುಳಿತಿದ್ದ ಶ್ರೀ ವಾಸುದೇವ ಶಾಸ್ತ್ರಿಗಳು– "ಈ ಮಾತುಗಳು ಮಾರನೆಯ ದಿನದ 'ತಾಯಿನಾಡು' ಪೇಪರಿನಲ್ಲಿ ಮುಖ್ಯಾಂಶಗಳಲ್ಲಿ ಒಂದಾಗಿ, ಸಮಾಜ ಸೇವಾನಿರತ ಸೀತಮ್ಮನ ಅಭಿಪ್ರಾಯದಲ್ಲಿ ಹೀಗೆ–ಎಂಬುದಾಗಿ ಪ್ರಕಟವಾಗಿತ್ತು"–ಎನ್ನುತ್ತಾರೆ.

"ನಮ್ಮ ತಾಯಿಯವರು ಆ ಸಭೆಯಲ್ಲಿ ಒತ್ತಿ ಹೇಳಿದ ಮತ್ತೊಂದು ಮಾತು ಸ್ತುತ್ಯರ್ಹ" ಎಂದು ಶಾಸ್ತ್ರಿಗಳು ತಾಯಿಯಾಡಿದ ಮಾತನ್ನು ಜ್ಞಾಪಿಸಿಕೊಳ್ಳುತ್ತಾರೆ. "ನಾವೆಲ್ಲಾ ಸ್ತ್ರೀಯರು ಸೇರಿ ಚರ್ಚಿಸುತ್ತಿರುವ ಸ್ತ್ರೀಯರ ಸಮಸ್ಯೆ ಸ್ತ್ರೀಗೆ ಮಾತ್ರ ಸೀಮಿತವಲ್ಲ. ಇದು ರಾಜ್ಯದ, ಇಡೀ ದೇಶದ ಸಮಸ್ಯೆ." ಎಂದಾಗ ಈ ಮಾತುಗಳು ಕರತಾಡನದಿಂದ ಸ್ವೀಕೃತವಾಯ್ತು.

ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಒಂದು ಸಲ ಭಾರಿ ಸಮ್ಮೇಳನ ನಡೆಯಿತು. ರಾಜ್ಯದ ನಾನಾ ಕಡೆಗಳಿಂದ ಬಂದ ಪ್ರತಿನಿಧಿಗಳಿಗಾಗಿ ಒಂದು ಊಟಕ್ಕೆ ಆಗಿನ ಕಾಲದ ಎರಡು ರೂಪಾಯಿಯಂತೆ ಅಷ್ಟು ಜನರ ಭೋಜನಕ್ಕೂ ಏರ್ಪಾಡು ಮಾಡಿದ್ದರು. ಸೀತಮ್ಮನವರ ಬುದ್ಧಿ ಲೆಕ್ಕಾಚಾರದ ಕಡೆ ಓಡಿತು. ಬಡವರಿಗೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಸಹಾಯ ಮಾಡಬೇಕೆಂದು ವೇದಿಕೆಯ ಮೇಲೆ ಮಾತಾಡುವವರು ಈ ಊಟದ ಖರ್ಚನ್ನು ಇಷ್ಟೇಕೆ ಮಾಡುವರು ಎಂದು ಆಲೋಚಿಸಿ ಸಭಿಕರನ್ನು ಕುರಿತು ಸೀತಮ್ಮ ಹೇಳೇಬಿಟ್ಟರು, "ಒಂದು ಊಟಕ್ಕೆ ಎರಡು ರೂಪಾಯಿ ಇಲ್ಲಿ ವೆಚ್ಚವಾಗುತ್ತಿರುವುದು ಅತಿ ದುಬಾರಿ. ಸರ್ವೇಸಾಮಾನ್ಯ ಮನುಷ್ಯನೊಬ್ಬನಿಗೆ ಆರೇ ಆಣೆಗೆ ಒಂದು ಊಟವಾಗುತ್ತದೆ. ನಮ್ಮಲ್ಲಿ ಜನರು ಸೊಪ್ಪು-ಸೆದೆದಿಂಡು ಆರಿಸಿಕೊಂಡು ರಾಗಿ ಉಪಯೋಗಿಸಿ ಹೊಟ್ಟೆ ತುಂಬಿಸಿಕೊಳ್ಳುತ್ತಾರೆ. ಈ ಸಮ್ಮೇಳನಕ್ಕಾಗಿ ನಾವೇಕೆ ಎರಡು ರೂಪಾಯಿಯ ಊಟ ಮಾಡಬೇಕು. ಇದು ರಾಜ್ಯದ ನಷ್ಟವಲ್ಲವೇ ?" ಎಂದಾಗ ಎಲ್ಲರೂ ಮುಖಮುಖ ನೋಡಿಕೊಂಡರು. "ಆದರೆ ನನ್ನ ನ್ಯಾಯವಾದ ವಾದಕ್ಕೆ ತಲೆದೂಗಿದರು...ದೊಡ್ಡಸ್ತಿಕೆಗೆ ಮನಸೋಲುವವಳಲ್ಲ ನಾನು. ಜನ ಸಾಮಾನ್ಯರ ಪರವಾಗಿಯೇ ಯಾವಾಗಲೂ ನನ್ನ ಮಾತು" ಎನ್ನುತ್ತಾರೆ ಸೀತಮ್ಮ.

ಸೀತಮ್ಮನವರು ಚಿಕ್ಕವಯಸ್ಸಿನಲ್ಲಿ ತಂದೆಯ ಜೊತೆ ಹರಿಜನ ಸೇವೆ ಮಾಡುತ್ತಿದ್ದ ದಿನಗಳನ್ನು ಜ್ಞಾಪಿಸಿಕೊಳ್ಳುತ್ತಾ ತಮ್ಮ ಮಕ್ಕಳಿಗೂ ಅದೇ ವಿಶಾಲವಾದ ಮನೋಭಾವನೆ ಬರಬೇಕೆಂದು ಹೇಳುತ್ತಿರುತ್ತಾರೆ. ಮತ್ತಿಗೋಡು ಗ್ರಾಮದಲ್ಲಿ ತಂದೆಗೆ ಸ್ವಂತ ಮನೆ, ದೊಡ್ಡ ತೋಟದಲ್ಲಿ ಕೆಲಸ ಮಾಡಲು ಅನೇಕ ಕೂಲಿಯಾಳುಗಳಿರುತ್ತಿದ್ದರು. ತಂದೆ ಮತ್ತು ಮಗಳಿಬ್ಬರಿಗೂ ಆಳುಗಳ ಬಗ್ಗೆ ಭೇದಭಾವನೆ ಇರಲಿಲ್ಲ.

"ಆಗಿನ ಕಾಲದಲ್ಲಿ ಆಳುಗಳಿಗೆ ಪ್ರತ್ಯೇಕವಾಗಿ, ತುಪ್ಪ, ತರಕಾರಿ ಇಲ್ಲದ ರಾಗಿ ಮುದ್ದೆ ಊಟ ಕೊಡುವುದು ವಾಡಿಕೆ. ಆದರೆ ನಾನು ಮಾತ್ರ ಅವರ ಜೊತೆಯಲ್ಲೇ ಊಟ ಮಾಡುತ್ತಿದ್ದೆ. ನಾವು ತಿನ್ನುವುದನ್ನೇ ಅವರಿಗೂ ಕೊಡುತ್ತಿದ್ದೆ" ಎನ್ನುತ್ತಾರೆ ಸೀತಮ್ಮ.

ಹರಿಜನ ಕೇರಿಗೆ ಹೋಗಿ ಸೇವೆ ಮಾಡುವುದು ಸೀತಮ್ಮನಿಗೂ ಅವರ ತಂದೆಗೂ ಜೀವನದಲ್ಲಿ ತೃಪ್ತಿಕೊಡುವ ಒಂದು ಕೆಲಸವಾಗಿತ್ತು. ಒಂದು ಸಲ ಇನ್‌ಫ್ಲೂಯೆಂಜಾ ಖಾಯಿಲೆ ಹರಿಜನ ಕೇರಿಯಲ್ಲಿ ಹರಡಿದಾಗ ೧೯೧೭ರಲ್ಲಿ ತಂದೆಯ ಜೊತೆ ಸೀತಮ್ಮನೂ ಕೇರಿಗೆ ಹೋಗಿ ರೋಗಿಗಳಿಗೆ ಬಿಸಿನೀರು, ಗಂಜಿ ಕೊಟ್ಟು ಉಪಚಾರ ಮಾಡಿದರು. ಆಗ ಸೀತಮ್ಮನಿಗೆ ಹದಿಮೂರು ವರ್ಷ ವಯಸ್ಸು.

ಕೆಲವು ವೇಳೆ ದಿನವೆಲ್ಲಾ ಕೇರಿಯಲ್ಲೇ ಇದ್ದು ಶುಚಿ ಕೆಲಸ, ವಿದ್ಯಾ ಪ್ರಸಾರ ಮಾಡುವುದಲ್ಲದೆ, ಸೀತಮ್ಮನ ತಂದೆಯವರು ಕದಿಯುವವನಿಗೆ, ದುಷ್ಟತನಕ್ಕೆ ಶಿಕ್ಷೆ ಕೊಡುತ್ತಿದ್ದರು. ಈ ವಿಷಯವನ್ನು ಜ್ಞಾಪಿಸಿಕೊಳ್ಳುತ್ತಾ ಸೀತಮ್ಮ ಹೀಗೆ ಹೇಳುತ್ತಾರೆ, "ಕದ್ದವನಿಗೆ ಶಿಕ್ಷೆ ಏನು ಗೊತ್ತೆ ? ತೆಂಗಿನಕಾಯಿ ಅಥವಾ ಸೌತೆಕಾಯಿ ಕದ್ದನೆಂದರೆ, ಒಂದು ದೊಣ್ಣೆಗೆ ಅವನು ಕದ್ದ ವಸ್ತುವನ್ನೇ ಕಟ್ಟಿ ಅವನ ಕೈಯಲ್ಲಿ ಆ ದೊಣ್ಣೆಯನ್ನು ಕೊಟ್ಟು ಗ್ರಾಮದಲ್ಲಿ ಮೆರವಣಿಗೆ ಮಾಡುವುದು. ಅವನನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಹೊಡೆಯುತ್ತಿರಲಿಲ್ಲ. ಬಡಿಯುತ್ತಿರಲಿಲ್ಲ. ಅಷ್ಟಕ್ಕೇ ನಾಚಿಕೆಪಟ್ಟು ಸರಿಹೋಗುತ್ತಿದ್ದರು. ಇದೇ ನಮ್ಮ ತಂದೆ ಕಳ್ಳರಿಗೆ ಕೊಡುತ್ತಿದ್ದ ಶಿಕ್ಷೆ."

ಗ್ರಾಮದಲ್ಲಿ ಹುಟ್ಟಿ ಬೆಳೆದು ಈ ವಾತಾವರಣದ ಅಭ್ಯಾಸವಿದ್ದ ಸೀತಮ್ಮನಿಗೆ ಮದುವೆಯಾದ ಮೇಲೆ ಪತಿ ಸುಬ್ರಹ್ಮಣ್ಯ ಶಾಸ್ತ್ರಿಗಳಿಂದಲೂ ಗ್ರಾಮ ಜೀವನದಲ್ಲಿ ಪ್ರೋತ್ಸಾಹ ಸಿಕ್ಕಿತು. ಮತ್ತಿಗೋಡು ಗ್ರಾಮಕ್ಕೆ ಹತ್ತಿರದಲ್ಲೇ ಚಾಮರಾಜನಗರದ ಸುತ್ತಲ ಜಮೀನು ಮತ್ತು ವ್ಯಾಪಾರ ಉದ್ಯಮಗಳಲ್ಲಿ ನುರಿತ ಸುಬ್ರಹ್ಮಣ್ಯ ಶಾಸ್ತ್ರಿಗಳು ಶ್ರಮಜೀವಿಯೂ, ನ್ಯಾಯವಾದಿಯೂ, ಸಾಹಿತ್ಯಾಭಿಮಾನಿಯೂ ಆಗಿದ್ದುದು ಸೀತಮ್ಮನವರಿಗೆ ಬಯಸಿದ ಭಾಗ್ಯವೇ ಬಂದಂತಾಗಿತ್ತು. ಸುಲಕ್ಷಣ ಸುಗುಣೆ ಸೀತಮ್ಮನವರನ್ನು ಸೌಭಾಗ್ಯವತಿ ಸೊಸೆಯೆಂದು ಗೃಹಲಕ್ಷ್ಮಿಯಾಗಿ ಸುಬ್ರಹ್ಮಣ್ಯ ಶಾಸ್ತ್ರಿಗಳು ಸ್ವೀಕರಿಸಿದರು. ಸರಸ ಸಲ್ಲಾಪದಲ್ಲಿ, ಬುದ್ಧಿ ಚುರುಕು ಚಾಣಾಕ್ಷತನದಲ್ಲಿ, ಸಾಹಿತ್ಯ ರಚನಾ ಪ್ರತಿಭೆಯಲ್ಲಿ ಈರ್ವರೂ ಜೋಡಿಯಾಗಿ ಕಲೆತು ಬೆರೆತು ಸಂಸಾರ ನಡೆಸಿದವರು. ಹಳೆಯ ಸಂಪ್ರದಾಯದಲ್ಲಿ ಅಭಿರುಚಿ ಇದ್ದರೂ ಕಂದಾಚಾರಕ್ಕೆ ಕಟ್ಟು ಬಿದ್ದವರಲ್ಲ.

ಸ್ವದೇಶೀ ವಸ್ತುಗಳೆಂದರೆ ಇಬ್ಬರಿಗೂ ಹೆಮ್ಮೆಯ ವಿಷಯ. ಬದನವಾಳದಲ್ಲಿ ಚರಕದಿಂದ ನೂಲು ತೆಗೆದು ಬಟ್ಟೆ ಮಾಡುವುದು, ಕಾಗದ ತಯಾರಿಕೆಯನ್ನು ಸೀತಮ್ಮನವರು ಕಲಿತು ಬರುತ್ತೇನೆ ಎಂದಾಗ ಪತಿ ಅವರಿಗೆ ಅಡ್ಡಬರಲಿಲ್ಲ. ಅಷ್ಟೇ ಅಲ್ಲ, ಸೀತಮ್ಮನವರು ಪತಿಯೊಡನೆ ಚಾಮರಾಜನಗರದಲ್ಲಿ ಸಂಸಾರ ನಡೆಸುವಾಗ ಸ್ವತಃ ಕಾಗದ ತಯಾರಿಸುವುದನ್ನೂ ಸೋಪು ಮಾಡುವುದನ್ನು ಮನೆಯಲ್ಲಿ ಪ್ರಾರಂಭಿಸಿದರು.

'ಇದೇನು, ಶಾಸ್ತ್ರಿಗಳ ಹೆಂಡತಿ ಕಾಗದ ತಯಾರಿಸುತ್ತಾರಂತೆ. ಸೋಪು ಮಾಡುತ್ತಾರಂತೆ' ಎಂದು ಎಲ್ಲರೂ ಹಾಸ್ಯ ಮಾಡಿದಾಗಲೂ ಸತಿಪತಿಯವರು ಯಾರಿಗೂ ಅಂಜಲಿಲ್ಲ.

"ಕಾಗದ ಹೇಗಿತ್ತು ಗೊತ್ತೇ ? ಕತ್ತೆ ಕಾಗದ ಎನ್ನುತ್ತಿದ್ದರು. ಕಂದು ಬಣ್ಣದ ಒರಟು ಕಾಗದ, ಸೋಪನ್ನು ಕಾಸ್ಟಿಕ್ ಸೋಡಾದಿಂದ ತಯಾರಿಸುತ್ತಿದ್ದೆ. ಪರದೇಶೀ ಸೋಪಿನಂತೆ ನೊರೆ ಬರದಿದ್ದರೂ ನಾನೇ ತಯಾರಿಸಿದ್ದು ಎಂಬ ಹೆಮ್ಮೆ ಇತ್ತು. ಉತ್ಸಾಹವಿತ್ತು. ನಮ್ಮ ವಸ್ತು ಎಂಬ ಅಭಿಮಾನ ಇರುತ್ತದೆ ಅಲ್ಲವೇ ?" ಎನ್ನುತ್ತಾರೆ ಸೀತಮ್ಮ.

ಸ್ತ್ರೀ ಸಮಾಜವನ್ನು ಚಾಮರಾಜನಗರದಲ್ಲಿ ಪ್ರಾರಂಭಿಸಿದಾಗಲೂ ಎಲ್ಲರ ಅಪಹಾಸ್ಯಕ್ಕೆ ಒಳಗಾಗಬೇಕಾಯಿತು ಎಂದು ಸೀತಮ್ಮನವರು ನುಡಿದಾಗ ಕಾರಣವೇನೆಂದು ಕೇಳಲು, "ಆಗಿನ ಕಾಲದಲ್ಲಿ ಹೆಣ್ಣು ಹೊಸಲು ದಾಟಿ ಬಂದು ಯಾವ ಕಲಸ ಮಾಡಿದರೂ ಅವಹೇಳನ ಮಾಡುತ್ತಿದ್ದರು. ಹಾಗಿರುವಾಗ, ಇಂತಹ ಕಾರ್ಯಕ್ರಮಗಳನ್ನು ನಡೆಸಿದ ನನ್ನನ್ನು ಹಾಸ್ಯ ಮಾಡದೆ ಬಿಡುವರೇ ?...ಅದಕ್ಕೆ ಸರಿಯಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಒಂದು ಘಟನೆ ನಡೆಯಿತು. ಒಂದು ದಿನ ಸಾಯಂಕಾಲ ಸ್ವಲ್ಪ ಕತ್ತಲಾಗಿದ್ದಾಗ ಸಮಾಜದಲ್ಲಿ ಕಾರ್ಯಕ್ರಮವೊಂದು ನಡೆಯುತ್ತಿತ್ತು. ಆಗ ಲೈಟು ಹೋಯಿತು. ಕರೆಂಟು ರಿಪೇರಿಗಾಗಿ ಗಂಡಸರನ್ನು ಕರೆಯಿಸಬೇಕಾಯಿತು. ಹಾಸ್ಯ ಮಾಡಲು ಕಾಯುತ್ತಿದ್ದವರು ಹೀಗೆಂದರು–ಮಹಿಳೆಯರ ಸಮಾಜಕ್ಕೆ ಮಹನೀಯರ ಪ್ರವೇಶ–ಎಂದು ಕೂಗಿ ಸಾರಿದರು. ಪತ್ರಿಕೆಯಲ್ಲಿ ಪ್ರಕಟಿಸಿದರು ... ನೋಡಿ, ಆಗಿನ ಕಾಲದಲ್ಲಿ ಮಹಿಳಾ ಸಮಾಜವೆಂದರೆ ಗಂಡಸರು ಯಾವುದಕ್ಕೂ ಪ್ರವೇಶಿಸಬಾರದು, ಕೊನೆಗೆ ಪ್ರೋತ್ಸಾಹವನ್ನೂ ಕೊಡುತ್ತಿರಲಿಲ್ಲ. ಆದರೆ ನಾನೇನೂ ಜಗ್ಗಲಿಲ್ಲ, ಕುಗ್ಗಲಿಲ್ಲ. ಹೆಣ್ಣುಮಕ್ಕಳ, ಅನಾಥ ಮಕ್ಕಳ, ವಿಧವೆಯರ ಜೀವನ ಈ ಸಮಾಜದ ಮೂಲಕ ಉದ್ಧಾರವಾಗಬೇಕೆಂಬುದೇ ನನ್ನ ಹಟವಾಗಿತ್ತು" ಎನ್ನುತ್ತಾರೆ ಸೀತಮ್ಮ.

ನಂಜನಗೂಡಿಗೆ ಹತ್ತಿರದಲ್ಲಿರುವ ಬದನವಾಳದಲ್ಲಿ ಮೊಟ್ಟಮೊದಲು ಚರಕಾ ಉಪಯೋಗ ಪ್ರಾರಂಭವಾಯಿತು. ತಗಡೂರು ರಾಮಚಂದ್ರರಾಯರು ಕರ್ನಾಟಕಕ್ಕೆ ಬಂದ ಮಹಾತ್ಮಾಜಿಯವರನ್ನು ಖಾದಿ ಭಂಡಾರದ ಉದ್ಘಾಟನೆಗಾಗಿ ತಗಡೂರಿಗೆ ಕರೆದುಕೊಂಡು ಹೋಗಿದ್ದರು. ಅದೇ ಸಂದರ್ಭದಲ್ಲೇ ಬದನವಾಳದಲ್ಲೂ ಮಹಾತ್ಮಾ ಗಾಂಧಿಯವರಿಂದ ಖಾದಿ ಭಂಡಾರದ ಉದ್ಘಾಟನೆಯಾಯಿತು. ಆಗಲೇ ಹರಪನಹಳ್ಳಿಯಲ್ಲೂ ಚರಕಾಗಳ ಬಳಕೆ ಮತ್ತು ಖಾದಿ ಬಟ್ಟೆಗಳ ಪ್ರಚಾರ ನಡೆಯಿತು. ಹರಪನಹಳ್ಳಿಯ ಖಾದಿ ಭಂಡಾರದ ಪ್ರಾರಂಭೋತ್ಸವಕ್ಕೆ ಸೀತಮ್ಮನವರು ಹೋಗಿದ್ದರು. ಚರಕಾದಲ್ಲಿ ನೂಲು ತೆಗೆಯುವುದನ್ನು ಕಲಿತರು. ಆದರೆ ಸೀತಮ್ಮನವರು ತಮ್ಮ ಚಿಂತನೆಯ ಒಂದು ವಿಷಯವನ್ನು ಅಲ್ಲಿ ಹೇಳದೆ ಬಿಡಲಿಲ್ಲ. "ಖಾದಿ ಬಟ್ಟೆಯ ಉದ್ಘಾಟನೆಯಾಯಿತು. ಚರಕಾವನ್ನು ಕೊಟ್ಟಿದ್ದೀರಿ. ಆದರೆ ಈ ಚರಕಾ ಮೂಲೆಗೊತ್ತಿಸುವ ವಸ್ತುವಾಗಬಾರದು. ಅಥವಾ ಮಕ್ಕಳ ಆಟದ ಸಾಮಾನಾಗಿ ಕೊನೆಗೆ ಕಿತ್ತು ಬಿಸಾಡುವ ವಸ್ತುವಾಗಬಾರದು. ಅಥವಾ ಒಲೆಗೆ ಬೇಕಾದಾಗ ಹಿರಿದು ಒಟ್ಟುವ ವಸ್ತುವಾಗಬಾರದು. ಪವಿತ್ರ ಭಾವನೆಯಿಂದಲೂ ದೇಶದ ಉದ್ಧಾರ ಇದರಿಂದಲೇ ಸಾಧ್ಯವೆಂಬ ನಂಬಿಕೆಯಿಂದಲೂ ನಿತ್ಯವೂ ಎಲ್ಲರೂ ಚರಕಾವನ್ನು ಉಪಯೋಗಿಸಿದರೆ ಮಾತ್ರ ಈ ಉದ್ಘಾಟನೆಯ ಸಮಾರಂಭಕ್ಕೆ ಜೀವವಿರುತ್ತದೆ" ಎಂದು ಹೇಳಿ ಒಂದು ಚರಕಾವನ್ನು ಕೊಂಡು ತಂದು ಸೀತಮ್ಮನವರು ತಮ್ಮ ಗ್ರಾಮದಲ್ಲಿ ಖಾದಿ ಪ್ರಚಾರ ಮಾಡಿದರು.

ಸೀತಮ್ಮನವರಿಗೆ ಆ ಚರಕಾ ಬಗ್ಗೆ ಅದೆಷ್ಟು ಪ್ರೀತಿ ಇತ್ತೆಂದರೆ, ತನ್ನ ಚರಕಾವನ್ನು ಬಣ್ಣದ ಅಂಗಡಿಗೆ ತೆಗೆದುಕೊಂಡು ಹೋಗಿ ಅಂದವಾಗಿ ಬಣ್ಣ ಹಾಕಿಕೊಡಲು ಕೇಳಿದರು.

"ಅಂಗಡಿಯವನ ಸ್ವಾರ್ಥವನ್ನು ನೋಡಿ, ಒಂದು ಚರಕಾಕ್ಕೆ ಬಣ್ಣ ಬಳಿದರೆ ನನಗೆ ಬಂದ ಲಾಭವೇನು ಎಂದು ನಿರಾಕರಿಸಿದ" ಎಂದು ಹೇಳುತ್ತಾ ಈಗಲೂ ಆ ದಿನವನ್ನು ನೆನೆದು ಸೀತಮ್ಮ ದುಃಖಿಸುವರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



"ಒಬ್ಬರಿಗೆ ಮಾತ್ರ ಅಕ್ಕರೆ ಇದ್ದರೆ ಪ್ರಯೋಜನವಿಲ್ಲ. ಇಡೀ ದೇಶವೇ ಮಾರ್ಪಾಡಾಗಬೇಕು... ನನ್ನ ಚರಕಾ ಈಗ ಅಟ್ಟದಲ್ಲಿ ಬಿದ್ದಿದೆ... ನಮ್ಮ ಸಾಧನೆಯ ಫಲವಂತೂ ಕಡಿಮೆ. ನಾವು ಯಾವ ಗುರಿಗಾಗಿ ಯಾವುದನ್ನಾದರೂ ಪ್ರಾರಂಭಿಸು ತ್ತೇವೋ ಅದನ್ನು ಬಿಡದೆ ಹಿಡಿಯಬೇಕು...ಈಗ ನನಗೆ ಬಲಗೈ ಬಲಗಾಲು ಸ್ವಾಧೀನ ವಿಲ್ಲ. ಬೇರೊಬ್ಬರು ಉಪಚಾರ ಮಾಡಬೇಕಾದ ಸ್ಥಿತಿಯಲ್ಲಿದ್ದೇನೆ. ಕುಳಿತು ಓದು ತ್ತೇನೆ ಅಷ್ಟೆ. ಕೆಲಸವಾಗುವುದಿಲ್ಲ. ಈಗ ನಾನು ಯಾರಿಗೂ ಏನನ್ನೂ ಬೋಧಿ ಸಲು ಹೋಗುವುದಿಲ್ಲ....ಗಾಂಧೀಜಿ ಬದುಕಿರುವವರೆಗೂ ಬಳಕೆಯಲ್ಲಿದ್ದ ಚರಕಾ ಈಗ ನಮ್ಮ ದೇಶದಲ್ಲಿ ಎಷ್ಟು ಜನರ ಕೈಯಲ್ಲಿದೆ?" ಎಂದು ಪ್ರಶ್ನಾರ್ಥವಾಗಿ ಮುಗಿಸುತ್ತಾರೆ.

ವಾಸುದೇವಶಾಸ್ತ್ರಿಗಳು ಮುಂದುವರಿಸುತ್ತಾರೆ "ನಮ್ಮ ತಾಯಿಗೆ ಸ್ವದೇಶಿ ವಸ್ತುಗಳ ಬಗ್ಗೆ ಬಹಳ ಅಭಿಮಾನ. ನಾವೇ ಎಲ್ಲವನ್ನೂ ತಯಾರಿಸಬೇಕೆಂಬ ಅಭಿ ಲಾಷೆ. ಇದಕ್ಕಾಗಿ ಬದನವಾಳಕ್ಕೆ ಹೋಗಿ ನೂಲುವುದು, ಬಟ್ಟೆ ತಯಾರಿಸುವುದು, ಚಾಪೆ ಹೆಣೆಯುವುದು, ಕಾಗದ ಮಾಡುವುದು, ಸೋಪು ತಯಾರಿಸುವುದು–ಇದನ್ನೆಲ್ಲಾ ಕಲಿತು ಬಂದರು. ನಮ್ಮ ತಾಯಿಯ ಈ ಸ್ವಭಾವಕ್ಕೆ ನಮ್ಮ ತಂದೆಯ ಮೆಚ್ಚಿಗೆಯೂ ಇತ್ತು. ಪ್ರೋತ್ಸಾಹವೂ ಇತ್ತು. ಅವರ ಮಾತಿನಲ್ಲೇ ಕೇಳಿ"—ಎನ್ನುತ್ತಾರೆ.

"ನನಗೆ ನಮ್ಮ ಯಜಮಾನರೇ ಗುರು. ಪ್ರತಿಯೊಂದನ್ನು ನಾನು ಕಲಿಯ ಬೇಕಾದರೆ ಅದಕ್ಕೆ ಕಾರಣ ನಮ್ಮ ಯಜಮಾನರು. ದೇಶದ ವಿಷಯವನ್ನೆಲ್ಲಾ ನನಗೆ ಬಂದು ಹೇಳುತ್ತಿದ್ದರು. ರಾಜಕೀಯದಲ್ಲಿ ಅವರಿಗೆ ಬಹಳ ಆಸಕ್ತಿ. ಮುನಿಸಿಪಲ್ ಮೆಂಬರ್ ಆಗಿದ್ದರು. ಸಭೆಗಳನ್ನುದ್ದೇಶಿಸಿ ಮಾತಾಡಿ ಜನರನ್ನು ತಿದ್ದಲು ಪ್ರಯತ್ನಿ ಸುತ್ತಿದ್ದರು. ಅಪೆಕ್ಸ್ ಬ್ಯಾಂಕ್ ಮತ್ತು ವ್ಯಾಪಾರ ಸಂಘಗಳಿಗೆ ನಿರ್ದೇಶಕರಾಗಿ ಚುನಾಯಿತರಾಗಿದ್ದರು. ಆಗಾಗ ಬೆಂಗಳೂರಿಗೆ ಹೋಗಿ ಸಂಘದ ಪ್ರಗತಿಗಾಗಿ ಶ್ರಮಿ ಸುತ್ತಿದ್ದರು. ಇವರ ನ್ಯಾಯಕ್ಕಾಗಿ ಇವರು ಜನಪ್ರಿಯರಾಗಿದ್ದರು"—ಎಂದಾಗ

ಎಲೆಕ್ಷನ್‌ನಲ್ಲಿ ಯಜಮಾನರು ನಿಲ್ಲಲಿಲ್ಲವೇ — ಎಂದು ಕೇಳಿದರೆ, "ಅಧಿಕಾರ ಸ್ಥಾನ ಬಂದರೆ ನ್ಯಾಯ ಧರ್ಮಕ್ಕೆ ಎಲ್ಲಿ ಚ್ಯುತಿ ಬರುತ್ತದೆಯೋ ಎಂದೇ ಅವರು ಅಧಿಕಾರವಿಲ್ಲದ ಸೇವೆಯನ್ನು ಆರಿಸಿಕೊಂಡರು. ಸಿ. ಎಸ್. ಸುಬ್ರಹ್ಮಣ್ಯಶಾಸ್ತ್ರಿ ಗಳೆಂದರೆ ನ್ಯಾಯಕ್ಕಾಗಿ, ಧರ್ಮಕ್ಕಾಗಿ ಹೋರಾಡುವವರು ಎಂದು ಹೆಸರುವಾಸಿ ಯಾಗಿದ್ದರು" ಎನ್ನುತ್ತಾರೆ ಸೀತಮ್ಮನವರು.

ಅಲ್ಲೇ ಕುಳಿತಿದ್ದ ಸೀತಮ್ಮನವರ ಪುತ್ರರಾದ ವಾಸುದೇವಶಾಸ್ತ್ರಿಗಳು, "ನಮ್ಮ ತಂದೆಯವರು ಯಾವ ಸಭೆ ಸಮ್ಮೇಳನಗಳಲ್ಲಿ ಮಾತನಾಡಲು ಹೋಗುವ ಮೊದಲು ತಾವು ಏನು ಹೇಳುತ್ತಾರೆಂದು ನಮ್ಮ ತಾಯಿಯವರಿಗೆ ಒಪ್ಪಿಸಿ ಅನಂತರ ಹೇಳು ತ್ತಿದ್ದರು. ಏಕೆಂದರೆ, ನನಗೆ ಜ್ಞಾಪಕವಿದ್ದ ಹಾಗೆ ನಮ್ಮ ತಾಯಿ ತಮ್ಮ ಬುದ್ಧಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಜ್ಞಾನ ತಿಳುವಳಿಕೆಯ ತುಣುಕನ್ನು ಸೇರಿಸಿ ತಂದೆಗೆ ಸಹಕಾರಿಯಾಗಿದ್ದರು" ಎಂದು ಹೇಳಿ, ವಿದ್ಯಾಭ್ಯಾಸವಿಲ್ಲದಿದ್ದರೂ ತಾಯಿಯ ಪ್ರತಿಭೆಯನ್ನು ನಿರೂಪಿಸುತ್ತಾರೆ.

ಸೀತಮ್ಮನವರ ಜೊತೆಗೆ ಪುತ್ರರೂ ಪೌತ್ರರೂ ಸೊಸೆಯಂದಿರೂ ಕೆಲಸದ ಮಧ್ಯೆ ಮಧ್ಯೆ ಬಂದು ಕುಳಿತು ತಮ್ಮ ಕರ್ತವ್ಯವೆಂಬಂತೆ ಮಾತಾಡುತ್ತಿರುವಾಗ ಹಿರಿಯ ಅಣ್ಣನವರಾದ ಶ್ರೀ ಮಹದೇವಶಾಸ್ತ್ರಿಗಳ ಪ್ರವೇಶವಾಯಿತು. ತೋಟದ ಕೆಲಸವನ್ನು ಗಮನಿಸಿ ಬಂದ ಅಣ್ಣನೊಡನೆ ಎಲ್ಲರೂ ಒಟ್ಟಿಗೆ ಕುಳಿತು ಊಟದ ಸಮಯವಾದ್ದರಿಂದ ಭೋಜನ ಕೂಟವೂ ಮುಗಿಯಿತು. ಮನೆಗೆ ಹಿರಿಯ ಪುತ್ರ ರೆನಿಸಿದ ಮಹದೇವಶಾಸ್ತ್ರಿಗಳು ಆರಾಮವಾಗಿ ಕುಳಿತು ತಮ್ಮ ಪಾಲಿನ ಮಾತುಕತೆ ಯನ್ನು ಪ್ರಾರಂಭಿಸಿದರು.

"ನಾನು ಹಿರಿಯ ಅಣ್ಣನೂ ಅಲ್ಲ. ಪ್ರಥಮ ಪುತ್ರನೂ ಅಲ್ಲ. ನನಗೂ ಅಣ್ಣನೊಬ್ಬನಿದ್ದ. ಇಪ್ಪತ್ತೆರಡನೆಯ ವಯಸ್ಸಿನಲ್ಲಿ ಅಕಾಲ ಮರಣಕ್ಕೆ ತುತ್ತಾದ ಮಗನನ್ನು ನೆನೆದು ನಮ್ಮ ತಾಯಿ ಯಾವಾಗಲೂ ದುಃಖಿಸುತ್ತಿದ್ದರು. ಈ ಘಟನೆಯೇ ನಮ್ಮ ತಾಯಿಯವರ ಜೀವನದ ತಿರುವು. ಅಲ್ಲಿಂದೀಚೆಗೆ ಅವರು ದೇಶ ಸೇವೆ ಸಮಾಜ ಸೇವೆಯಲ್ಲೇ ಮುಳುಗಿ ಬಾಳ್ವೆ ನಡೆಸಲು ಅವರ ಮನದ ಮೇಲಾದ ಈ ಆಘಾತವೇ ಕಾರಣ. ಅವರ ಮಾತಿನಲ್ಲೇ ಕೇಳಿ"—ಎನ್ನುತ್ತಾರೆ ಮಹದೇವ ಶಾಸ್ತ್ರಿಗಳು.

ಮಗನ ವಾರ್ತೆಯನ್ನು ಕೇಳುತ್ತಾ ಸೀತಮ್ಮನವರಿಗೆ ಆಗಲೇ ಕಂಠ ಬಿಗಿದಿತ್ತು. ಮಾತಿನ ಧ್ವನಿಗೂ ಅವಕಾಶವನ್ನು ಕೊಡದೆ ಗಂಟಲನ್ನು ತುಂಬಿದ್ದ ದುಃಖವನ್ನು ಒತ್ತಿ ಸರಿಸಿಕೊಳ್ಳುವಂತೆ ಗಟ್ಟಿಯಾಗಿ ಒಂದು ಸಲ ಕೆಮ್ಮಿ ಮಾತಾಡಿದರು. ಆದರೂ ಧ್ವನಿ ಕುಗ್ಗಿತ್ತು.

"ಒಳ್ಳೆ ಆರೋಗ್ಯವಂತ, ದೃಢಕಾಯ, ಆಜಾನುಬಾಹು, ಸುಂದರವಾದ ನವ ತರುಣ ತೇಜಸ್ಸಿನಿಂದಿದ್ದ. ಮಗ ಇದ್ದಕ್ಕಿದ್ದಂತೆ ಅನಾರೋಗ್ಯದ ಕಾರಣ ಸತ್ತು ಹೋದನೆಂದರೆ... ನನ್ನ ಮನಸ್ಸನ್ನು ದಹಿಸುತ್ತಿದ್ದ ಉರಿಯನ್ನು ತಾಳಲಾರದೆ ವಿಲಿ ವಿಲಿ ಒದ್ದಾಡಿದೆ, ನರಳಿದೆ, ಜೀವನವೇ ಜಿಗುಪ್ಸೆಯಾಯಿತು. ಹೀಗೆ ಬಿಸಿಯುಸಿರು ಬೀರುವ ನನ್ನನ್ನು ನೆಂಟರಿಷ್ಟರು ಮಹನೀಯರು ದೇಶಸೇವೆಯೆಡೆಗೆ ಒಯ್ದರು... ನನ್ನ ಒಳಿತಿಗೇ ಎಲ್ಲರೂ ಹೀಗೆನ್ನುತ್ತಿದ್ದಾರೆಂದು ಅರಿತು ಮನೆಯ ಮೂಲೆಯೊಂದ ರಲ್ಲಿ ಕುಳಿತು ಅಳುವುದನ್ನು ನಿಲ್ಲಿಸಿ ಹೊರಗೆ ಬಂದು ಸೇವಾಕಾರ್ಯವನ್ನು ಕೈಗೊಂಡೆ... ನಿಜವಾಗಿಯೂ ಮನಸ್ಸಿಗೆ ನೆಮ್ಮದಿ ಸಿಕ್ಕಿತು. ಕಾರ್ಯತತ್ಪರಳಾದುದರಿಂದ ದುಃಖಿ ಸಲು ವೇಳೆ ಇಲ್ಲದಂತಾಯಿತು. ಅಂದಿನಿಂದ ಮಕ್ಕಳೊಡನೆ ಮಗುವಾಗಿ ಸಮಾಜಕ್ಕೆ ಸಹಾಯಕಳಾಗಿ ಏನೋ ಮಾಡುತ್ತಿದ್ದೇನೆ"—ಇನ್ನೂ ಏನೋ ಹೇಳಬೇಕೆಂದು ಸೀತಮ್ಮ ನವರ ಮನಸ್ಸಿನಲ್ಲಿತ್ತು, ಹೇಳಲಿಲ್ಲ ಸುಮ್ಮನಾದರು.

ಮಹದೇವಶಾಸ್ತ್ರಿಗಳು ಮುಂದುವರಿಸುತ್ತಾರೆ, "೧೯೪೦ರಲ್ಲಿ ಒಂದು ಮಹಿಳಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಸೇವಾ ಸಮಾಜವನ್ನು ಪ್ರಾರಂಭಿಸಿದರು. ಮನೆಮನೆಗೆ ತಿರುಗಿ ಅಲೆದು ಎಂಟಾಣೆ ವಸೂಲಿ ಮಾಡಿ ಮಹಿಳೆಯರನ್ನು ಸದಸ್ಯರನ್ನಾಗಿ ಮಾಡಿಕೊಂಡರು. ಈಗಿನ ಹಾಗಲ್ಲ. ಸೇವೆ ಮಾಡಲು ಹೊರಟರೆ ಧಿಕ್ಕಾರ ಮಾಡುವವರೇ ಹೆಚ್ಚು. ಸಂಕುಚಿತ ಭಾವನೆಯ ಸಮಾಜವಾಗಿತ್ತು. ನಮ್ಮ ತಾಯಿ ಆಗಾಗ ಹೇಳುತ್ತಿದ್ದರು. ಹೆಣ್ಣು ಮಕ್ಕಳಿಗೆ ತಿಂಗಳಿಗೆ ಎಂಟಾಣೆ ಕೊಟ್ಟು ಸದಸ್ಯರಾಗುವ ಸ್ವತಂತ್ರವಿರಲಿಲ್ಲ. ನಮ್ಮ ಯಜಮಾನರನ್ನು ಕೇಳಬೇಕು, ಇಲ್ಲವೇ ನಮ್ಮ ತಂದೆಯವರ ಅನುಮತಿ ಬೇಕು ಎನ್ನುತ್ತಿದ್ದರು. ಹೀಗಾಗಿ ಮಹಿಳಾ ಸೇವಾ ಸಮಾಜ ವಿಸ್ತಾರವಾಗುವುದಕ್ಕೆ ನಮ್ಮ ತಾಯಿ ಬಹಳ ಶ್ರಮಿಸಿದ್ದಾರೆ. ಇಲ್ಲಿ ಒಂದಂಶವೇನೆಂದರೆ, ಯಾವುದರಲ್ಲಾದರೂ ತೊಡಗಿದರೆ ನಮ್ಮ ತಾಯಿ ಬಿಡುವವರಲ್ಲ. ಆಗಿನ ಕಾಲದಲ್ಲಿ ಯಾರು ಏನು ಹೇಳಿದರೂ ಎದುರಿಸುವ ಸಾಮರ್ಥ್ಯ ಇವರಿಗಿತ್ತು ಎಂದು ಮಹದೇವಶಾಸ್ತ್ರಿಗಳು ಹೇಳುತ್ತಿದ್ದಾಗ ಸೀತಮ್ಮನವರು ಸಮಾಜದ ತನಿಖೆಯ ಸಮಯದಲ್ಲಿ ನಡೆದ ಒಂದು ಘಟನೆಯನ್ನು ಜ್ಞಾಪಿಸಿಕೊಂಡು ಹೇಳುತ್ತಾರೆ.

"ಸಮಾಜಕ್ಕೆ ನಾನು ಕೊಂಡುಕೊಂಡಿದ್ದ ಹೊಲಿಗೆ ಯಂತ್ರವನ್ನು ಕೊಟ್ಟೆ. ಗಮಕ ತರಗತಿ ನಡೆಯುವಂತೆ ಏರ್ಪಾಡು ಮಾಡಿದೆ. ರುದ್ರಪಟ್ಟಣಕ್ಕೆ ಹೋಗಿ ಶುಲ್ಕವಿಲ್ಲದೆ ಸಂಗೀತ ಹೇಳಿಕೊಡುವ ವಿದ್ವಾಂಸರನ್ನು ಹಿಡಿದು ತಂದೆ. ಹಿಂದಿ ಪಾಠ, ಹೊಲಿಗೆ ಹೇಳಿಕೊಡುವವರನ್ನು ಗೊತ್ತುಮಾಡಿದೆ. ಕೈಮಗ್ಗ, ಕಾವ್ಯವಾಚನ, ಹಾಡು, ವೀಣೆ ತರಗತಿಗಳು, ಜೊತೆಗೆ ಶಿಶುವಿಹಾರವನ್ನೂ ನಡೆಸುತ್ತಿದ್ದೆ. ಮಕ್ಕಳಿಗೆ ಹಾಲು, ಪುಸ್ತಕ ದಾನ ಸತತವಾಗಿ ನಡೆಯುತ್ತಿತ್ತು. ಹೀಗೆ ಸಮಾಜ ಮುಂದುವರಿಯಲು ದುಡಿಯುತ್ತಿದ್ದಾಗ, ಇನ್‌ಸ್ಪೆಕ್ಟರೊಬ್ಬರು ಸಮಾಜದ ತನಿಖೆಗೆ ಬಂದರು. ನನ್ನನ್ನು ನಿಲ್ಲಿಸಿ ತಾವು ಕುರ್ಚಿಯಲ್ಲಿ ಕುಳಿತರು. ನನ್ನನ್ನು ಕುಳಿತುಕೊಳ್ಳಲು ಹೇಳಲೇ ಇಲ್ಲ. ಇದೇನು ಹೀಗೆ ಎನ್ನಿಸಿತು ನನಗೆ. ನನ್ನ ಸಮಾಜ ನನ್ನ ಮನೆ ಇದ್ದಂತೆ, ನಾನು ಕಷ್ಟಪಟ್ಟು ಮುಂದುವರಿಸುತ್ತಿರುವ ಸ್ಥಳ. ನನಗೆ ಕುಳಿತು ಕೊಳ್ಳಲು ಅಧಿಕಾರವಿಲ್ಲವೇ ಎಂದುಕೊಂಡು ಇನ್ನೊಂದು ಕುರ್ಚಿ ಎಳೆದುಕೊಂಡು ಕುಳಿತೆ. 'ಯಾವ ರೀತಿ ಮುಂದುವರಿಯುತ್ತದೆ ನಿಮ್ಮ ಸಮಾಜ ?' ಎಂದು ಪ್ರಶ್ನೆ ಹಾಕಿದರು. 'ಎಂಟು ರೂಪಾಯಿ ಗ್ರಾಂಟ್ ಕೊಡಬಹುದು' ಎಂದರು. ನನ್ನ ಸ್ವಾಭಿಮಾನ ಮತ್ತಷ್ಟು ಹೆಚ್ಚಿತು. ಅಧಿಕಾರಿಯನ್ನು ಕುರಿತು, 'ನಿಮ್ಮ ಗ್ರಾಂಟ್ ನನಗೆ ಬೇಕಿಲ್ಲ. ನಾನೇ ಸಮಾಜವನ್ನು ನಡೆಸುತ್ತೇನೆ' ಎಂದೆ. ಅವರಿಗೇನನ್ನಿಸಿತೋ, ಇಲ್ಲಿಂದ ಹೋದ ಮೇಲೆ ನೂರು ರೂಪಾಯಿ ಗ್ರಾಂಟ್ ಸ್ಯಾಂಕ್ಷನ್ ಆಗಿದೆ ಎಂದು ಅವರಿಂದಲೇ ಪತ್ರ ಬಂತು."

"ಧೈರ್ಯ, ಅಭಿಮಾನದ ಜೊತೆಗೆ ನಮ್ಮ ತಾಯಿ ಮಾತಿನಲ್ಲಿ ಪ್ರವೀಣರು. ಜನರಲ್ ಕಾರಿಯಪ್ಪನವರು ಒಂದು ಸಲ ಸಮಾಜಕ್ಕೆ ಭೇಟಿ ಕೊಟ್ಟಾಗ, ಅವರ ಬಗ್ಗೆ ಸಭಿಕರಿಗೆ ಹೇಳಿದ ಮಾತನ್ನು ಎಲ್ಲರೂ ಶ್ಲಾಘಿಸಿದರೆಂಬ ವಿಷಯ ಅನೇಕ ವರ್ಷಗಳ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ವರೆಗೂ ಹಚ್ಚಹಸುರಾದ ನೆನಪಾಗಿತ್ತು. ಅವರು ಹೇಳಿದ್ದು ಹೀಗೆ, "ಕೊಡಗಿನಲ್ಲಿ ಜನಿಸಿರುವ ಶ್ರೀ ಕಾರಿಯಪ್ಪನವರು ನಮ್ಮಲ್ಲಿ ಬಂದಿರುವುದರ ಸಂಕೇತವೇನೆಂದರೆ, ಕೊಡಗಿನ ಕಾವೇರಿಯಂತೆ ಉಪಕಾರಿಯಾಗಿ ಸುಭಿಕ್ಷ ಸಮೃದ್ಧಿಯನ್ನು ತರುವವರಂತೆ ಬಂದಿದ್ದಾರೆ. ಇದೊಂದು ಶುಭ ಸಂಕೇತ. ಶುಭ ಸಂದೇಶ"—ಈ ಭಾವಾರ್ಥ ಕಲ್ಪನೆ ಮೆಚ್ಚಿಗೆಯ ಮಾತಾಗಿತ್ತು.

"ನಮ್ಮ ತಾಯಿಯವರ ಪ್ರಮುಖವಾದ ಮೂರು ಗುಣಗಳು ನಮ್ಮ ಮೇಲೆ ಹೆಚ್ಚು ಪ್ರಭಾವ ಬೀರಿವೆ. ಮೊದಲನೆಯದಾಗಿ, ಅವರ ವೈಜ್ಞಾನಿಕ ವಿಚಾರಶೀಲತೆ. ಎರಡನೆಯದು ಜಾತ್ಯಾತೀತ ಪ್ರವೃತ್ತಿಯ ಮಾನವೀಯತೆ, ಮೂರನೆಯದು ರಾಷ್ಟ್ರೈಕ್ಯತೆಯ ಸ್ಫೂರ್ತಿ.

"ನಮ್ಮ ತಾಯಿಯವರ ಮಾನವೀಯತೆ ಎಷ್ಟರ ಮಟ್ಟಿಗೆ ಎಂದರೆ, ನಾವು ಕಂಡಂತೆ ಜಾಡಮಾಲಿಯೊಬ್ಬಳಿಗೆ ಸಮಯೋಪರಿತ ಹೆರಿಗೆ ಮಾಡಿದ್ದಾರೆ. ಒಂದು ದಿನ ಮಧ್ಯರಾತ್ರಿ ಮನೆಯ ಹತ್ತಿರದ ಚರಂಡಿಯ ಬಳಿ ಪ್ರಸವ ವೇದನೆಯಲ್ಲಿ ನರಳುತ್ತಿದ್ದ ಜಾಡಮಾಲಿಯ ಸ್ಥಿತಿಯನ್ನು ಕಂಡು, ರಾತ್ರಿಯೆಲ್ಲಾ ಅವಳ ಹತ್ತಿರದಲ್ಲಿದ್ದು ಸಾಂತ್ವನಗೊಳಿಸುತ್ತಾ ಪ್ರಸವವಾದ ಮೇಲೆ ಅವಳ ವಾಸಸ್ಥಳಕ್ಕೆ ಬಿಟ್ಟು ಬಟ್ಟೆ ಸೀರೆಗಳನ್ನು ಕೊಟ್ಟು ಬಂದಿದ್ದಾರೆ. ಅವಳ ಸಾಂಸಾರಿಕ ಸ್ಥಿತಿ ಬಹಳ ಶೋಚನೀಯ" ಎಂದು ಕೊರಗಿದರು.

"ರಾಷ್ಟ್ರಕ್ಕಾಗಿ ಸ್ಪಂದಿಸುವ ತಾಯಿಯ ಗುಣ ನನ್ನ ಚಿಕ್ಕ ವಯಸ್ಸಿನಿಂದಲೇ ನನ್ನಲ್ಲಿತ್ತು. ಮಿಡಲ್ ಸ್ಕೂಲ್ ಸೆಕೆಂಡಿಯರ್‌ನಲ್ಲಿ ಓದುತ್ತಿದ್ದೆ. ಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳವಳಿ ಬಹಳ ಬಿರುಸಾಗಿದ್ದ ೧೯೪೨ನೇ ಇಸವಿ. ಒಂದು ದಿನ ಶಾಲೆಯ ಪ್ರಾರ್ಥನೆಯಾದ ಕೂಡಲೇ ಗಟ್ಟಿಯಾಗಿ "ಬೋಲೋ ಭಾರತ್ ಮಾತಾಕಿ ಜೈ" ಎಂದು ಕೂಗಿದೆ. ಸರ್ಕಾರದ ವಿರುದ್ಧ ಇದೊಂದು ಮಹಾಪರಾಧ. ಹೆಡ್‌ಮಾಸ್ಟರ್ ನನ್ನನ್ನು ಹಿಡಿದು ಬಲವಾಗಿ ಹೊಡೆದರು. ಮಾರನೆಯ ದಿನ "ಬ್ರಿಟಿಷರೇ, ಇಂಡಿಯಾ ಬಿಟ್ಟು ತೊಲಗಿ" ಎಂದು ಕಾಗದದಲ್ಲಿ ಬರೆದು ಕೈಮೇಲೆ ಅಂಟಿಸಿಕೊಂಡು ಅದನ್ನೇ ಕೂಗುತ್ತಾ ಶಾಲೆಗೆ ಹೋದೆ. ಆಗಲೂ ಹೆಡ್‌ಮಾಸ್ಟರ್ ಕೈಯಲ್ಲಿ ಪೆಟ್ಟು ತಿಂದೆ. ನನ್ನಲ್ಲಿ ಆ ಸ್ಫೂರ್ತಿ ಇದ್ದೇ ಇತ್ತು"—ಎನ್ನುತ್ತಾರೆ ವಾಸುದೇವಶಾಸ್ತ್ರಿಗಳು.

ಸಾಹಿತ್ಯ ಸಂಸ್ಕೃತಿ ದೇಶಭಕ್ತಿಯ ಪ್ರತೀಕವಾಗಿದ್ದ ಸುಬ್ರಹ್ಮಣ್ಯಶಾಸ್ತ್ರಿ ಮತ್ತು ಸೀತಮ್ಮನವರೊಡನೆ ಆತ್ಮೀಯತೆಯಿಂದಿದ್ದವರು ಶ್ರೀ ಎಸ್. ಪಿ. ರಾಮಾನುಜಂರವರ ತಂದೆ ಶ್ರೀ ಸಂಪತ್ಕುಮಾರಾಚಾರ್. ಈ ಸಂಸಾರವನ್ನು ಕಂಡರೆ ಸಂಪತ್ಕುಮಾರಾಚಾರ್‌ರವರಿಗೆ ವಿಶ್ವಾಸವಿರಲು ಕಾರಣವೇನೆಂದರೆ, ಸುಬ್ರಹ್ಮಣ್ಯಶಾಸ್ತ್ರಿಗಳು ಹಣವನ್ನು ಕ್ಷುಲ್ಲಕವೆಂದು ಕಾಣುತ್ತಿದ್ದರು. ಹಣಕ್ಕಾಗಿ ಎಂದೂ ಬಾಯಿ ಬಿಟ್ಟವರಲ್ಲ. ಇವರ ಸಂಸ್ಕೃತಿಯ ಮಟ್ಟ, ಸೇವಾ ಮನೋಭಾವ ಎಸ್. ಪಿ. ರಾಮಾನುಜಂರವರ ತಂದೆಗೆ ಬಹಳ ಇಷ್ಟವಾಗಿತ್ತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಸಂಪತ್ಕುಮಾರಾಚಾರ್‌ರವರು ತಮ್ಮ ಮನೆ ಬಿಟ್ಟು ಬೇರೆಲ್ಲೂ ಏನೂ ತಿನ್ನುತ್ತಿರಲಿಲ್ಲ. ಆದರೆ ಸೀತಮ್ಮನವರು ಕೊಡುತ್ತಿದ್ದ ಒಂದು ಲೋಟ ಹಾಲನ್ನು ಎಂದೂ ನಿರಾಕರಿಸಿದವರಲ್ಲ. ಆದರೂ ಹೀಗೆನ್ನುತ್ತಿದ್ದರಂತೆ, "ಅಮ್ಮಾ, ನೀವು ನನ್ನನ್ನು ಋಣಬಾಧೆಗೆ ಒಳಪಡಿಸುತ್ತಿದ್ದೀರಿ ಈ ಋಣವನ್ನು ನಾನು ಹೇಗೆ ತೀರಿಸುವುದು ?" ಸಾಹಿತ್ಯ ಮತ್ತು ಸಂಸ್ಕೃತಿಯ ಬಾಂಧವ್ಯ ಸುಬ್ರಹ್ಮಣ್ಯಶಾಸ್ತ್ರಿಗಳನ್ನೂ ಸಂಪತ್ಕುಮಾರಾಚಾರ್‌ರನ್ನು ಒಂದಾಗಿಸಿತ್ತು.

ಸುಬ್ರಹ್ಮಣ್ಯಶಾಸ್ತ್ರಿಗಳಿಗೆ ಆಪ್ತರಾದ ಮತ್ತೊಬ್ಬ ಮಹನೀಯರು ಈಗಿನ ಮಂತ್ರಿವರ್ಯರಾಗಿರುವ ಮಾನ್ಯ ಬಿ. ರಾಚಯ್ಯನವರು. ಶಾಸ್ತ್ರಿಯವರ ಮನೆಯವರನ್ನು ಕಂಡರೆ ರಾಚಯ್ಯನವರಿಗೆ ಬಹಳ ವಿಶ್ವಾಸ. ಒಂದು ಸಲ ಉಮ್ಮತ್ತೂರಿನಲ್ಲಿ ಸಹಕಾರ ಸಂಘಗಳ ಸಮ್ಮೇಳನ ನಡೆದಾಗ ಆಲೂರಿಂದ ಸಭಾ ಸದಸ್ಯರಾಗಿ ಸಮ್ಮೇಳನಕ್ಕೆ ಬಂದಿದ್ದರು. ಅನೇಕ ವಿಷಯಗಳ ಚರ್ಚೆ ನಡೆಯಿತು. ಹೆಂಗಸರಿಗೆ ರೇಷ್ಮೆ ಕೈಗಾರಿಕೆಗಾಗಿ ಸಾಲವನ್ನು ಕೊಡಬೇಕೆಂಬ ಮನವಿಯನ್ನು ಸೀತಮ್ಮನವರು ಸದಸ್ಯರ ಮುಂದಿಟ್ಟರು. ಸಭಾ ಸದಸ್ಯರೆಲ್ಲಾ ಬೇರೆ ಬೇರೆ ವಿಷಯಗಳಿಗೆ ಪ್ರಾಮುಖ್ಯತೆ ಕೊಟ್ಟು ಸೀತಮ್ಮನವರ ಮನವಿಯನ್ನು ನಿರ್ಲಕ್ಷಿಸಿದಾಗ ಶ್ರೀ ರಾಚಯ್ಯನವರು— "ಹೆಂಗಸರ ಪರವಾಗಿ ಸೀತಮ್ಮ ನಿಸ್ವಾರ್ಥತೆಯಿಂದ ಕೇಳಿಕೊಳ್ಳುತ್ತಿದ್ದ ಮನವಿ ಅತಿ ಮುಖ್ಯವಾದುದೆಂದೂ, ಮೊದಲು ಆ ವಿಷಯದ ಬಗ್ಗೆ ನಿರ್ಣಯ ತೆಗೆದುಕೊಳ್ಳಬೇಕೆಂದೂ ಸದಸ್ಯರ ಗಮನವನ್ನು ಸೆಳೆದು ಹೆಂಗಸರ ಸಮಸ್ಯೆಗೆ ಗೌರವ ಕೊಟ್ಟು ಮಾತಾಡಿದವರು ಶ್ರೀ ಬಿ. ರಾಚಯ್ಯನವರೇ" ಎನ್ನುತ್ತಾರೆ ಸೀತಮ್ಮನವರು.

ಇಂದಿನ ಯುವಕ ಯುವತಿಯರಿಗೊಂದು ಮಾತು ಹೇಳಲು ಸೀತಮ್ಮನವರು ಅಪೇಕ್ಷಿಸುತ್ತಾರೆ. "ಒಳ್ಳೆಯ ಪುಸ್ತಕಗಳನ್ನು ಓದಬೇಕು. ಸಿನಿಮಾ ನೋಡಿ ಅರ್ಧ ಕೂಡ ಮೈಮುಚ್ಚದ ಉಡಿಗೆ ಹಾಕುವುದು ತಪ್ಪು. ಕರ್ನಾಟಕ ರಾಜ್ಯದ ಮಹಾ ವ್ಯಕ್ತಿಗಳು, ಮಹಾ ಕವಿಗಳ ವಿಷಯವನ್ನು ತಿಳಿಯಬೇಕು. ಎಲ್ಲಾ ಕೆಲಸವನ್ನೂ ಮಾಡಬೇಕು. ನಾವು ಈ ಕೆಲಸವನ್ನು ಮಾಡುವುದಿಲ್ಲವೆಂದು ಯಾರು ಸಂಕೋಚ ಪಡುತ್ತಾರೋ ಅವರು ಉದ್ಧಾರವಾಗುವುದಿಲ್ಲ."

ಸೀತಮ್ಮನವರ ಕಿರಿಯ ಪುತ್ರರೂ ಬಂದು ಹಾಜರಾದರು. ಇವರ ಮಾತಿನಲ್ಲಿ, "ನಮ್ಮ ತಾಯಿಯವರಿಗೆ ಡಾ॥ ಎಚ್. ನರಸಿಂಹಯ್ಯನವರೆಂದರೆ ಬಹಳ ಇಷ್ಟ. ಅವರ ವೈಜ್ಞಾನಿಕ ವಿಚಾರಶೀಲತೆ ನಮ್ಮ ತಾಯಿಗೆ ಹಿಡಿಸಿದೆ. ಒಂದು ಸಲ ನಮ್ಮೂರಿಗೆ ಅವರನ್ನು ಕರೆಯಿಸಬೇಕು. ನಾನವರೊಡನೆ ಮಾತಾಡಬೇಕು ಎಂದು ಹಂಬಲಿಸುತ್ತಾರೆ".

ಶಾಸ್ತ್ರಿಗಳವರ ಮನೆಯವರನ್ನೆಲ್ಲಾ ಪರಿಚಯ ಮಾಡಿಕೊಟ್ಟು ಜೊತೆಯಲ್ಲೇ ಇದ್ದ ಚಾಮರಾಜನಗರದ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯರಾದ ಶ್ರೀ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಶ್ರೀರಂಗರಾಜುರವರಿಗೆ ಧನ್ಯವಾದವನ್ನು ಹೇಳಲು, "ಇವರ ಪರಿಚಯ ನಿಮಗೇನನ್ನಿಸುತ್ತದೆ?" ಎಂದು ಪ್ರಶ್ನೆ ಹಾಕಿ ತಾವೂ ತಮ್ಮ ಅಭಿಪ್ರಾಯವನ್ನು ಕೊಡುತ್ತಾರೆ.

"ಸೀತಮ್ಮನವರನ್ನು ನೋಡಿ ನನಗೆ ಮಾತೃಭಾವನೆಯುಂಟಾಯಿತು. ನನ್ನ ಪರಿಚಯವಿಲ್ಲದಿದ್ದರೂ ಇವರ ಆತ್ಮೀಯತೆ ಆಶ್ಚರ್ಯವನ್ನುಂಟು ಮಾಡಿತು. ಊರಿಗೆ ಹೊಸಬರು ಬಂದರೆ ಇವರಲ್ಲೇ ಊಟ. ಜಾತಿ ಭೇದವನ್ನೇ ಕಂಡವರಲ್ಲ. ತಾಯಿಗೆ ತಕ್ಕ ಮಕ್ಕಳು, ಮೊಮ್ಮಕ್ಕಳು, ಸೊಸೆಯರು. ಇವರೆಲ್ಲರ ಸಹನೆ, ಸೌಹಾರ್ದತೆ, ಸೇವಾಭಾವನೆ ಮಾರ್ಗದರ್ಶನ ನೀಡುವಂತಿದೆ. ಈ ಮಾದರಿ ಕುಟುಂಬದಿಂದ ಕಲಿತುಕೊಳ್ಳಬೇಕಾದುದು ಬೇಕಾದಷ್ಟಿದೆ. ತಂದೆ ಶ್ರೀ ಸುಬ್ರಹ್ಮಣ್ಯಶಾಸ್ತ್ರಿಗಳು ಬದುಕಿದ್ದರೆ ಚೆನ್ನಾಗಿತ್ತು. ಇದೊಂದೇ ವ್ಯಸನದ ವಿಷಯ;"

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಕರನಿರಾಕರಣ ಚಳವಳಿಯ

ಧೀಮಂತ ನಾಯಕಿ

ಗೌರಮ್ಮ

ಸರದಾರ ವೆಂಕಟರಾಮಯ್ಯ

"ಸರ್ದಾರ್" ಎಂಬ ಬಿರುದು ಸಾಮಾನ್ಯರಿಗೆ ಸಿಕ್ಕುವುದಲ್ಲ. ಸ್ವಾತಂತ್ರ್ಯ ಸಮರ ಸಮಯದ ಪ್ರಮುಖ ಪಾತ್ರಧಾರಿಯಾಗಿ, ಯಶಸ್ವಿಯಾಗಿ ನಾಯಕತ್ವ ವಹಿಸಿ ಜನತೆಯನ್ನು ಮುನ್ನಡೆಸಿದ ವೀರ ತ್ಯಾಗಿಗೆ ಈ ಬಿರುದು ಸಲ್ಲುತ್ತಿತ್ತು. ಈ ಬಗೆಯ ವೀರ ನಾಯಕ ವೆಂಕಟರಾಮಯ್ಯನವರಿಗೆ ಮಹಾತ್ಮರಿತ್ತ ಬಿರುದು "ಸರ್ದಾರ್". ಇಡೀ ದೇಶಕ್ಕೆ ಸ್ವಾತಂತ್ರ್ಯ ಸಮರದ ಸರದಾರರು ಮೂವರೇ, ಸರ್ದಾರ್ ವಲ್ಲಭಾಯಿ ಪಟೇಲರು, ಸರ್ದಾರ್ ವೀರಣ್ಣಗೌಡರು ಮತ್ತು ಸರ್ದಾರ್ ವೆಂಕಟರಾಮಯ್ಯ ನವರು.

ಅಂತಹ ಅಪೂರ್ವ ವ್ಯಕ್ತಿ ಸರದಾರ ಕೆ. ಎ. ವೆಂಕಟರಾಮಯ್ಯನವರ ಪತ್ನಿ ಗೌರಮ್ಮನವರು ಪತಿ ಪಡೆದ ಬಿರುದನ್ನು ಸಾರ್ಥಕಪಡಿಸಿದ ಸಹಧರ್ಮಿಣಿ, ವೀರ ತ್ಯಾಗಿ. ಸ್ವಾತಂತ್ರ್ಯ ಸಂಗ್ರಾಮಕ್ಕೆ ಅಸಂಖ್ಯಾತ ಸ್ತ್ರೀಯರನ್ನು ಸೆಳೆದ ಸಮರ್ಥ ಮಹಿಳಾ ನಾಯಕಿ ಗೌರಮ್ಮನವರು. ಗುರಿ ಮುಟ್ಟುವವರೆಗೂ ಛಲದಿಂದ ಚಳವಳಿ ಯನ್ನು ಬಿಗಿಹಿಡಿದ ಹಟವಾದಿ.

ಹೆಣ್ಣು ಶಕ್ತಿ ಸ್ವರೂಪಿಣಿ, ಸಮಯ ಒದಗಿ ಬಂದಾಗ, ಅವಕಾಶ ಕೊಟ್ಟಾಗ, ಅವಳಲ್ಲಿಡಗಿರುವ ಸುಪ್ತ ಶಕ್ತಿ ಸ್ಫೋಟಗೊಂಡು ಎಂತಹ ಅಗಾಧವಾದ ಮತ್ತು ಅಸಾಧಾರಣವಾದ ಕಾರ್ಯವನ್ನೂ ಸಾಧಿಸುವ ಸಮರ್ಥಳಾಗುತಾಳೆ. ಹೆಣ್ತನದ ಸ್ವಭಾವ ಇದು. ಕೆಲವು ವೇಳೆ ವಿದ್ಯೆಯ ಅಗತ್ಯವೂ ಬೇಕಿಲ್ಲ. ಗೌರಮ್ಮ ಇಂತಹ ಶಕ್ತಿಸ್ವರೂಪಿಣಿ ಮಹಿಳೆಯ ಉಜ್ವಲ ಸಾಕ್ಷಿ.

ಕರ್ನಾಟಕದಲ್ಲಿ ನಡೆದ ಕರನಿರಾಕರಣ ಚಳವಳಿಯು ಎಲ್ಲಾ ಸತ್ಯಾಗ್ರಹ ಕಾರ್ಯ ಕ್ರಮಗಳನ್ನು ಮೀರಿಸಿತ್ತು. "ಬಾರ್ಡೋಲಿ ಸತ್ಯಾಗ್ರಹವನ್ನು ಬಿಟ್ಟರೆ, ಸ್ವಾತಂತ್ರ್ಯ ಸಮರದ ಅತ್ಯಂತ ಸಾಧನೀಯ ಸತ್ಯಾಗ್ರಹ 'ಕರ್ನಾಟಕದ ಕರನಿರಾಕರಣ ಚಳವಳಿ,' ಈ ಚಳವಳಿಯ ಸಾಧನೆಯನ್ನು ನೋಡಿದರೆ ಬಹುಶಃ ಸತ್ಯಾಗ್ರಹಗಳ ಪಟ್ಟಿಯಲ್ಲಿ ಇದಕ್ಕೇ ಪ್ರಥಮ ಸ್ಥಾನ ಕೊಡಬೇಕು" ಎನ್ನುತ್ತಾರೆ ಬಾಪು.

ಬ್ರಿಟಿಷ್ ಸರ್ಕಾರಕ್ಕೆ ತೆರಿಗೆಯನ್ನು ತೆರುವುದಿಲ್ಲವೆಂದು ಭಾರತೀಯರು ಪ್ರತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಭಟಿಸಿ ಹೋರಾಡಿದ ಘಟನೆಯೇ "ಕರನಿರಾಕರಣ ಚಳವಳಿ." ಕರವನ್ನು ನಿರಾಕರಿಸಿದವರ ಮನೆಯ ವಸ್ತುಗಳನ್ನು ಸರ್ಕಾರ ಕಸಿದುಕೊಂಡು, ಅವರು ಸಾಕಿದ ಹಸು ಎಮ್ಮೆಗಳನ್ನು ಹರಾಜು ಹಾಕುತ್ತಿತ್ತು. ತೆರಿಗೆ ಪಾವತಿಗೆ ನಿರಾಕರಿಸಿದವರು ತಮ್ಮ ಸ್ಥಿರ-ಚರಾಸ್ತಿಗಳನ್ನು ಕಳೆದುಕೊಳ್ಳಲು ಸಿದ್ಧರಾಗಬೇಕಾಗಿತ್ತು. ಇಡೀ ಕುಟುಂಬದೊಡನೆ ಕಷ್ಟಕ್ಕೆ ಈಡಾಗಬೇಕಾಗಿತ್ತು. ಸರ್ಕಾರ ಮಾಡಬಹುದಾದ ದಮನಕಾರಿ ಕ್ರಮಗಳನ್ನು ಎದುರಿಸುವ ಸಾಮರ್ಥ್ಯವಿರಬೇಕಾಗಿತ್ತು. ಇಂತಹ ಉಗ್ರ ಚಳವಳಿಯನ್ನು ಕೈಗೊಳ್ಳಬೇಕಾದರೆ ಅಸಾಧಾರಣ ಧೈರ್ಯ ಮತ್ತು ನಿರ್ಧಾರ ಕೈಗೊಳ್ಳುವ ಮಾನಸಿಕ ದೃಢತೆ ಬೇಕಾಗಿತ್ತು.

"ಅಹಿಂಸಾತ್ಮಕ ಹೋರಾಟವಲ್ಲಿ ಅಂತಿಮ ಹಂತವೇ ಕರನಿರಾಕರಣೆ"-ಎಂದಿದ್ದಾರೆ ಗಾಂಧೀಜಿ.

ಇಂತಹ ಪ್ರಮುಖ ಚಳವಳಿಯ ಮುಖಂಡರಾದ ಸರದಾರ ದಂಪತಿಗಳ ಪರಿಚಯ ನಮಗೆ ಅತ್ಯಗತ್ಯವೆಂದುಕೊಂಡಾಗ, ಕೇಳಿ ಬಂದ ಮಾತು ಹೀಗೆ- "ಸರ್ದಾರ್ ವೆಂಕಟರಾಮಯ್ಯನವರು ೧೯೮೧ರಲ್ಲಿ ದೈವಾಧೀನರಾದರು. ಅವರ ಪತ್ನಿ ಗೌರಮ್ಮನವರಿಗೆ ಈಗ ೭೪ ವರ್ಷ ವಯಸ್ಸು. ಅವರೀಗ ಯಾವ ಹವ್ಯಾಸಕ್ಕೂ ಹೋಗದೆ ಸರಳ ಜೀವನದಲ್ಲಿ ದಿನಗಳನ್ನು ತಳ್ಳುತ್ತಿದ್ದಾರೆ. ಯಾರೊಡನೆಯೂ ಮಾತಾಡಲು ಇಚ್ಛಿಸುವುದಿಲ್ಲ. ಹೊಗಳಿಕೆ ಹಿಡಿಸದು. ತನ್ನ ವ್ಯಕ್ತಿತ್ವ ಬೆಳಕಿಗೆ ಬರುವುದರಲ್ಲಿ ಇಷ್ಟವಿಲ್ಲ."

ಈ ತೊಡಕನ್ನು ತೆಗೆಯಲು ನನ್ನ ಮಾರ್ಗದರ್ಶಿಯಾಗಿ ಬಂದವರು, ಶ್ರೀಮತಿ ಜಯಲಕ್ಷ್ಮಿ ಮಳಿಗೆ. ಗಾಂಧೀ ಶಾಂತಿ ಪ್ರತಿಷ್ಠಾನದ ಪುಸ್ತಕ ಭಂಡಾರದ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿರುವ ಇವರು, ಸರ್ದಾರ್ ವೆಂಕಟರಾಮಯ್ಯನವರು ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಕಾರ್ಯದರ್ಶಿಯಾಗಿ ಶ್ರಮಿಸುತ್ತಿದ್ದಾಗ, ಅವರ ಮಾರ್ಗದರ್ಶನದಲ್ಲಿ ಕೆಲಸ ಮಾಡಿದ ಸೇವಾ ಮನೋಭಾವದ ಸರಳ ಮಹಿಳೆ. ಜಯಲಕ್ಷ್ಮಿಯ ಸ್ನೇಹ ದೊರಕಿದುದು ಸರ್ದಾರ್‌ರವರ ಪತ್ನಿ ಗೌರಮ್ಮನವರನ್ನು ಕಂಡು ಮಾತಾಡಿಸಲು ಸುಲಭವಾಯಿತು. ಗೌರಮ್ಮನವರ ವಿಳಾಸವನ್ನು ಕಂಡುಹಿಡಿದು ಅವರ ಮಗಳ ಮನೆಯಲ್ಲಿ ಭೇಟಿಯಾದೆವು.

ಜಯಲಕ್ಷ್ಮಿ ಮಳಿಗೆಯವರ ಮೂಲಕ ಮಾತು ಪ್ರಾರಂಭಿಸಿ, ವಿಷಯ ಸಂಗ್ರಹ ಸಾಧನೆಗೆ ನಿರಾಸೆಯಾಗಬಾರದೆಂದು ಹೋದ ನನಗೆ ನಂಬಲಸಾಧ್ಯವಾದ ಸಹಕಾರ ಗೌರಮ್ಮನವರಿಂದ ದೊರಕಿತು. ಗೌರಮ್ಮನವರು ಸುಮಾರು ಮೂರು ಘಂಟೆಗಳ ಕಾಲ ಅವಿರತವಾಗಿ ಮಾತಾಡಿ ತಮ್ಮ ಅನುಭವಗಳನ್ನು ವಿವರಿಸಿದರು. ಅವರು ಹೇಳುವ ಧಾಟಿ ಅತಿವೇಗ, ಬಹಳ ಸ್ವಾರಸ್ಯಕರ, ರೋಮಾಂಚಕ, ಸಾಹಸಮಯ ಸನ್ನಿವೇಶಗಳಿದ್ದ ಅವರ ಅನುಭವ ಆಸಕ್ತಿಯಿಂದ ಆಲಿಸುವಂತಹ ಕತೆಯಂತಿತ್ತು. ಪ್ರಶ್ನೆ ಹಾಕಲು ಅವಕಾಶವೇ ಇಲ್ಲ. ತಾನಾಗಿ ಮುಖ್ಯಾಂಶಗಳನ್ನರಿತು ಹೇಳುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಜಾಣ್ಮೆ ಗೌರಮ್ಮನವರದು. ಪ್ರತಿಗಳಿಗೆಯೂ ಉಪಯುಕ್ತ ಸಾಧನೆಯೇ. ಒಂದೆಡೆ ಸ್ಥಿರವಾಗಿ ನಿಲ್ಲದೆ ಚಳವಳಿಯ ಕಾಲದಲ್ಲಿ ಛಲದಿಂದ ಜನತೆಯ ಸಂಘಟನೆ ಮಾಡಿದ ಗೌರವಮ್ಮನವರು ಈಗಲೂ ಚಟಪಟಗುಟ್ಟುವ ವ್ಯಕ್ತಿ. ದೇಶದ ಪ್ರಗತಿಯಲ್ಲಿ ಆದರ ವಿರುವ ವ್ಯಕ್ತಿ. ಆದರೆ ಅವರೀಗ ಹೇಳುವುದು ಹೀಗೆ—

"ಈಗ ನಾವು ಯಾವುದಕ್ಕೂ ಹೋಗಬಾರದು. ನಾವು ಹೋಗಿ ಮಾಡು ವಂತಹ ಕೆಲಸವೇನಿದೆ ? ಭಾರತ ಮಾತೆಯ ಬಂಧನದ ಸೆರೆ ಬಿಡಿಸಲು ಅಂದು ಬೇಕಾಗಿದ್ದ ನಮ್ಮ ಮುಖಂಡತ್ವ ಈಗ ಬೇಕಿಲ್ಲ... ಈಗ ನನಗೇನೂ ಕಡಿಮೆ ಇಲ್ಲ. ಆದರೆ ಈ ಜೀವಕ್ಕೆ ಏನೂ ಬೇಕಿಲ್ಲ. ಯಾವುದರಲ್ಲೂ ಆಸೆಯಿಲ್ಲ. ಭಗವಂತನ ಧ್ಯಾನದಲ್ಲಿ ತೃಪ್ತಿ" ಎನ್ನುತ್ತಾರೆ.

"ನಿಮ್ಮ ಮಾರ್ಗದರ್ಶನ, ನಿಮ್ಮ ಸೇವಾ ಮನೋಭಾವ, ಭಾವೈಕ್ಯತೆ ಸಾಧನೆ ಇಂದಿನ ಮಕ್ಕಳಿಗೆ ಬೇಕಾಗಿದೆ." ಎಂದಾಗ; ಕೆದಕಿ ಗಾಳಿಯಾಡಿದಾಗ ಭುಗಿಲೆದ್ದ ಕೆಂಡದಂತೆ, ಅವರ ಮನಃಪಟಲದಲ್ಲಿ ಸುತ್ತಿಕೊಂಡಿದ್ದ ಅನುಭವದ ಸುರುಳಿ ತಾನಾಗಿ ಬಿಚ್ಚಿಕೊಂಡಿತು. ಹಿಂದಿನಶಕ್ತಿ, ಸ್ಫೂರ್ತಿ, ಮತ್ತೆ ಬಂದು, ಹೇಳುತ್ತಾ ಹೇಳುತ್ತಾ ಮತ್ತೊಮ್ಮೆ ಯುವತಿಯಾಗಿ ಅನುಭವಿಸಿದರು.

"ದೇಶವೆಲ್ಲಾ ಒಂದೇ. ನಾವೆಲ್ಲಾ ಒಂದು ಎನ್ನುವ ಭಾವನೆಯಿಂದ ಕೆಲಸ ಮಾಡಿ ದವರು ನಾವು. ಸ್ವಾತಂತ್ರ್ಯ ಬಂದ ಮೇಲೆ ಮಹಾತ್ಮರು ನುಡಿದದ್ದೇನು ? 'ಈಗ ಇದು ನಿಮ್ಮ ಮನೆಯಾಯ್ತು. ನೀವು ಏನು ಬೇಕಾದರೂ ಮಾಡಬಹುದು,' ಎಂದರು...ಹೌದು. ನಮ್ಮ ಮನೆಯಾಯ್ತು. ಆದರೆ ನಮ್ಮ ಮನೆ ಏನಾಯ್ತು ?.... ಮನೆಯಲ್ಲೇ ಕಚ್ಚಾಟ ಪ್ರಾರಂಭವಾಯ್ತು.....ಇಂದಿನ ರಾಜಕೀಯವನ್ನು ತಿದ್ದಲು ಮಹಾ ಪುರುಷನೊಬ್ಬನು ಅವತರಿಸಬೇಕು. ಗಾಂಧೀಜಿಯಂತವರಿಗೂ ಸಾಧ್ಯವಿಲ್ಲವೆನ್ನಿ ಸುತ್ತದೆ." ಎನ್ನುತ್ತಾ ಗೌರಮ್ಮನವರ ವಾಣಿ ಗಂಭೀರವಾಗುತ್ತದೆ.

"ಅಂದಿನ ಜನ ಆಸ್ತಿಪಾಸ್ತಿ ಮಕ್ಕಳು ಎಲ್ಲವನ್ನೂ ಕಳೆದುಕೊಂಡರು. ತ್ಯಾಗ ಜೀವಿಗಳಾಗಿದ್ದರು. ದೇಶಪ್ರೇಮಿಗಳಾಗಿದ್ದರು." ಎಂದು ಗೌರಮ್ಮನವರು ಅಂದಿನ ಜನತೆಯ ಕಷ್ಟ ಪರಂಪರೆಯನ್ನು ವಿವರಿಸುತ್ತಾರೆ.

"ನೀವುಗಳು ಎಷ್ಟು ಕಷ್ಟಪಟ್ಟಿದ್ದೀರಿ ಎಂತಹ ಪರಿಸ್ಥಿತಿಗೆ ಒಳಗಾಗಿದ್ದೀರಿ!" ಎಂದು ನಾವು ವಿಸ್ಮಿತರಾಗಿ ಕೇಳಿದರೆ, ಗೌರಮ್ಮನವರ ಭಾವನೆ ಇದು–

"ಕಷ್ಟವೆಂದೇ ಎನಿಸಲಿಲ್ಲ, ನಾವು ಇಷ್ಟಪಟ್ಟೇ ಹೊರಗೆ ಬಂದೆವು. ನಮ್ಮನ್ನು ಚಳವಳಿಯಲ್ಲಿ ಸೇರಿಸಿಕೊಳ್ಳದಿದ್ದರೆ ಮನಸ್ಸಿಗೆ ಕಷ್ಟವಾಗುತ್ತಿತ್ತು. ಅರ್ಹತೆ ಇಲ್ಲ ವೇನೋ ಎಂದು ನೊಂದುಕೊಳ್ಳುತ್ತಿದ್ದವು....ಆ ತಂದೆ ಮಹಾತ್ಮನ ಕರೆ ಹಾಗಿತ್ತು. ಸ್ಫೂರ್ತಿಯ ವಾತಾವರಣ ಎಲ್ಲರನ್ನೂ ಹೊರಗೆ ಬರುವಂತೆ ಮಾಡಿತ್ತು. ಭಾವನೆ ಶುದ್ಧವಾಗಿತ್ತು. ಮನಸ್ಸು ಅಚಲವಾಗಿತ್ತು. ದೃಢವಾದ ಧ್ಯೇಯ ಮನಸ್ಸಿ ನಲ್ಲಿತ್ತು. ಯುವಕ ಯುವತಿಯರೇ ಇದ್ದೆವು. ಆದರೆ ಯಾವೊಂದು ಹುಡುಗನೂ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಹುಡುಗಿಯನ್ನು ಕೆಣಕಿದನೆಂಬ ಗಾಳಿ ಮಾತೂ ಕೇಳುತ್ತಿರಲಿಲ್ಲ.... ಎರಡು ಮೂರು ದಿನಕ್ಕೆ ಒಂದು ಊಟ. ಯಾರಾದರೂ ತಂದುಕೊಟ್ಟರೆ ಒಗೆದ ಬಟ್ಟೆ. ರಾತ್ರಿ ಕಾಡಿನಲ್ಲಿ ಓಡಾಟ...ಒಂದು ವಿಧವಾದ ಸಾಹಸ ಜೀವನ. ಇಂತಹ ಅಪರೂಪ ಅವಕಾಶವಿದ್ದ ನಾವೇ ಧನ್ಯರೆಂದು ಹೆಮ್ಮೆಪಡುತ್ತಿದ್ದೆವು" ಎಂದು ಹೇಳಿ ಮುಂದುವರಿಸುತ್ತಾರೆ.

"ನೈತಿಕ ಬಲವೆಂಬುದು ಬಹು ಶಕ್ತಿಶಾಲಿ, ಈ ನೈತಿಕ ಶಕ್ತಿಯೇ ನಮ್ಮಲ್ಲಿ ಮನೋನಿಶ್ಚಲ, ಮನೋನಿಗ್ರಹ, ಮನೋಧೈರ್ಯವನ್ನು ತುಂಬಿತ್ತು. ಆಗ ಲೋಯರ್ ಸೆಕೆಂಡರಿ ಓದಿದವರೂ ಇರಲಿಲ್ಲ. ಆದರೆ ಉನ್ನತ ಜ್ಞಾನ ತಿಳುವಳಿಕೆ ಇದ್ದ ಜನ. ಯಾವ ಊರನ್ನೂ ಕಾಣರು, ಬೀದಿಗೆ ಬಂದವರೇ ಅಲ್ಲ. ಮನೆಯಲ್ಲಿ ಅತಿ ಕಟ್ಟುನಿಟ್ಟಾದ ಸಂಪ್ರದಾಯ, ಹೀಗಿದ್ದವರು ಇದ್ದಕ್ಕಿದ್ದಂತೆ ಹೊರಗೆ ಬಂದು ಚಳವಳಿಯಲ್ಲಿ ಭಾಗವಹಿಸುವುದೆಂದರೆ ಸಾಮಾನ್ಯವಲ್ಲ, ತುಂಬಿದ ಸಂಸಾರಸ್ಥರು· ಮಕ್ಕಳಿಂದ, ಮನೆಯಿಂದ ಕಳಚಿಕೊಂಡು ಬಂದು ಒಟ್ಟುಗೂಡಿದ ಆ ಹೆಣ್ಣುಮಕ್ಕಳ ಸ್ಥೈರ್ಯ ಎಲ್ಲಕ್ಕೂ ಮಿಗಿಲಾದುದು. ಇಂದಿನ ಹೆಣ್ಣುಮಕ್ಕಳು ಪದವೀಧರರಾಗಿರ ಬಹುದು. ತಾಳ್ಮೆ, ಸಹನೆ, ಸಹಿಷ್ಣುತೆಯಲ್ಲಿ ವಿದ್ಯೆ ಕಲಿಯದ ಅಂದಿನ ಹೆಣ್ಣು ಮಕ್ಕಳೇ ಮೇಲ್ಮೆಯ ಸ್ಥಾನಪಡೆದಿದ್ದರೆಂದೇ ನಾನು ಹೇಳುತ್ತೇನೆ. ಈಗಿನ ಜನ ಜೀವನದಲ್ಲೇನಿದೆ ? ಬರೀ ದುಃಖಕರ. ಅಂದಿನ ಸಾಹಸಿಗಳು, ನಾವಂದು ಖುಷಿ ಯಾಗಿದ್ದೆವು"—ಎಂದು ದೀರ್ಘವಾಗಿ ವಿವರಿಸಿ ನಿರೂಪಿಸುತ್ತಾರೆ ಗೌರಮ್ಮನವರು.

ಈ ಸಾಹಸ ಜೀವನಕ್ಕೆ ಕಾಲಿಟ್ಟಿದ್ದು ಯಾವಾಗ ಎಂದು ಕೇಳಿದರೆ, ತಮ್ಮ ಬಾಲ್ಯದಿಂದ ನಡೆದು ಬಂದ ದಾರಿಯನ್ನು ಹೇಳುತ್ತಾರೆ.

ಏನೂ ಕಲಿಯದ ಹುಡುಗಿ ಗೌರಮ್ಮ, ಹತ್ತುವರ್ಷವಾದಾಗಲೇ ಸೋದರ ತ್ತೆಯ ಮಗ ವೆಂಕಟರಾಮಯ್ಯನಿಗೆ ಕೊಟ್ಟು ಮದುವೆ. ಹುಟ್ಟೂರು ಕನಕಪುರ' ವ್ಯಾಸಂಗವನ್ನು ತ್ಯಜಿಸಿ ದೇಶಪ್ರೇಮದಿಂದ ಶ್ರದ್ಧಾಭಕ್ತಿಯಿಂದ ಡಾ॥ ಹರ್ಡೀಕರ್ ರವರನ್ನು ವೆಂಕಟರಾಮಯ್ಯ ಹಿಂಬಾಲಿಸಿದರು. ದೇಶೋದ್ಧಾರವೇ ಅವರ ಜೀವ ನಾಡಿಯಾದಾಗ ಗೌರಮ್ಮನಿಗೆ ಪತಿದರ್ಶನ ಅಪರೂಪ.

ಪ್ರಾಯದ ದಿನಗಳಿಂದಲೇ ವೆಂಕಟರಾಮಯ್ಯ ತನ್ನ ಜೀವನದಲ್ಲಿ ಏನಾದರೂ ಒಳ್ಳೆಯದೊಂದು ಸಾಧನೆ ಮಾಡಬೇಕು. ರಾಷ್ಟ್ರ ಹಿತಕ್ಕೆ ದುಡಿಯಬೇಕೆಂಬ ಆಕಾಂಕ್ಷೆಯ ಯುವಕ.

"ನೀವು ಇಲ್ಲೇ ಇರಿ, ಇಲ್ಲದಿದ್ದರೆ ನನ್ನನ್ನೂ ನಿಮ್ಮ ಜೊತೆ ಕರೆದುಕೊಂಡು ಹೋಗಿ" ಎಂದು ಗೌರಮ್ಮ ಮೊಂಡು ಹಿಡಿದಿದ್ದೂ ಉಂಟು.

ಮೊದಮೊದಲು ಪತ್ನಿಯನ್ನು ಜೊತೆಯಲ್ಲಿ ಕರೆದುಕೊಂಡು ಹೋಗಲು ವೆಂಕಟರಾಮಯ್ಯ ನಿರಾಕರಿಸಿದರು. "ನಿನಗೆ ಭಾಷೆ ತಿಳಿಯದು. ವ್ಯವಹಾರ ಗೊತ್ತಿಲ್ಲ. ನನ್ನೊಡನೆ ಬಂದು ಏನು ಮಾಡುವಿ ?" ಎನ್ನುತ್ತಿದ್ದರಂತೆ.

ಹನ್ನೊಂದು ದಿನದ ಬಾಣಂತಿ ಗೌರಮ್ಮನನ್ನು ತವರು ಮನೆಯಲ್ಲಿ ಬಿಟ್ಟು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಹುಬ್ಬಳ್ಳಿಗೆ ಹೋದಾಗ, ವೆಂಕಟರಾಮಯ್ಯನವರಿಗೆ ವಾರೆಂಟು ಕಾದಿತ್ತು. ಸೆರೆಮನೆಗೆ ಹಾಕಿದರು. ಪತಿದೇವರು ಜೈಲನ್ನು ಸೇರಿದರೆಂದು ತಿಳಿದು ಗೌರಮ್ಮ ಅತ್ಯಂತ ಸಾಮಾನ್ಯ ಹೆಣ್ಣಿನಂತೆ ಅತ್ತು-ಕರೆದು ದೇಹ ದಂಡನೆ ನಡೆಸಿದ್ದುಂಟು. ಆದರೆ ಈ ಅಸೀಮ ಪತಿಪ್ರೇಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಲು ಮಹತ್ತರ ಪ್ರೇರಣೆಯಾಯಿತು.

ಮಗುವನ್ನು ನೋಡಿಕೊಂಡು ಹೋಗಲು ವೆಂಕಟರಾಮಯ್ಯನವರು ಬಂದಾಗ, ಗೌರಮ್ಮ "ಮಗುವನ್ನು ನಮ್ಮ ತಾಯಿಯ ಬಳಿಬಿಟ್ಟು ನಿಮ್ಮೊಡನೆ ಬರುತ್ತೇನೆ. ನಿಮ್ಮ ಸಹಧರ್ಮಿಣಿಯಾದ ನನಗೆ ದೇಶ ಸೇವೆಯಲ್ಲೂ ಪಾಲ್ಗೊಳ್ಳುವ ಹಕ್ಕುಂಟು" ಎಂದು ಒತ್ತಾಯಿಸಿದ ಮೇಲೆ, ಗೌರಮ್ಮನವರನ್ನು ವೆಂಕಟರಾಮಯ್ಯನವರು ಬಿಟ್ಟು ಹೋಗಲಾಗಲಿಲ್ಲ. ಮರಳಿ ಜೈಲಿಗೆ ಹೋಗಬೇಕಾಗಿದ್ದರಿಂದ ಗೌರಮ್ಮನವರನ್ನು ಹರ್ಡೀಕರ್ ಜೊತೆ ಬರಲು ಏರ್ಪಾಡು ಮಾಡಿ ಹೊರಟರು.

ಆರು ತಿಂಗಳ ಮಗುವನ್ನು ಬಿಟ್ಟು ಹೋಗಲು ಪತಿ ಒಪ್ಪಿದರೂ, ಗೌರಮ್ಮನವರ ತಂದೆ ಅಡ್ಡಿಯಾದರು. ಆದರೆ, ಗೌರಮ್ಮನವರ ತೀರ್ಮಾನ ಒಂದೇ, "ನನ್ನ ಮಗುವನ್ನು ನೋಡಿಕೊಳ್ಳಲು ನೀವು ನಿರಾಕರಿಸಿದರೆ, ಅನಾಥಾಲಯವಿದೆ ಅಥವಾ ಹರ್ಡೀಕರ್‌ರವರ ಮನೆಯಲ್ಲೇ ಬಿಟ್ಟು ಹೋಗುತ್ತೇನೆ"—ಎಂದು ತಂದೆಯೊಡನೆ ವಾದಿಸಿ, ಮಗುವನ್ನು ಅಲ್ಲೇ ಬಿಟ್ಟು ಕೈಬೀಸಿ ಕರೆಯುತ್ತಿದ್ದ ಸ್ವಾತಂತ್ರ್ಯ ಸಂಗ್ರಾಮ ಸಿದ್ಧತೆಗಾಗಿ ದೃಢ ಮನಸ್ಸಿನಿಂದ ಧಾವಿಸಿ ಹೊರಟರು. ಎಲ್ಲಿಗೆ ಹೋಗಬೇಕು, ಏನು ಮಾಡಬೇಕೆಂದು ಹೇಳಿಕೊಟ್ಟವರು ಹರ್ಡೀಕರ್‌ರವರೇ.

"ನಿಗರ್ವಿ, ನಿಸ್ವಾರ್ಥಿ, ಉಚ್ಚಮಟ್ಟದ ವಿದ್ಯಾವಂತ ಡಾ|| ಹರ್ಡೀಕರ್ ನಮ್ಮಂತಹವರನ್ನೂ ತಯಾರುಮಾಡಿ ತಮ್ಮ ಜೊತೆ ಸೇರಿಸಿಕೊಂಡರು. ಒಂದುಸಲ ಅವರೊಂದಿಗೆ ಮಾತಾಡಿದರೆ ಸಾಕು. ಅವರ ವಿಶ್ವಾಸ ಪ್ರೀತಿಗೆ, ಅವರ ಒಳ್ಳೆಯ ಮಾತಿಗೆ, ಅವರ ಗುಣ ವೈಶಾಲ್ಯತೆಗೆ ಒಳಗಾಗಿ ಅವರು ಹೇಳಿದಂತೆ ಕೇಳುತ್ತಿದ್ದೆವು. ಅವರು ನಮಗೆ ಸುಲಭವಾಗಿ ಸಿಕ್ಕುತ್ತಿದ್ದರು, ಎಲ್ಲಿ ಬೇಕೋ ಅಲ್ಲಿ ಸರ್ವಾಂತರ್ಯಾಮಿಯಾಗಿ ಅವರು ಪ್ರತ್ಯಕ್ಷವಾಗುತ್ತಿದ್ದರು, ನಾವು ಗಾಂಧಿಯನ್ನು ಕಂಡವರೇ ಅಲ್ಲ"—ಎನ್ನುತ್ತಾರೆ ಗೌರಮ್ಮನವರು.

ಪ್ರಪ್ರಥಮವಾಗಿ ಹೀಗೆ ಹರ್ಡೀಕರ್‌ರವರ ಮಾರ್ಗದರ್ಶನದಲ್ಲಿ ದೇಶಕ್ಕಾಗಿ ತಮ್ಮನ್ನು ಅರ್ಪಣೆ ಮಾಡಿಕೊಂಡ ಗೌರಮ್ಮ ಚಳವಳಿಯಲ್ಲಿ ಅನಿವಾರ್ಯ ನಾಯಕಿಯೆನಿಸಿಕೊಂಡರು.

ಈ ಮಾರ್ಗ ಅತಿ ದುರ್ಗಮ, ಅತಿ ಕಠಿಣ. ಅತಿ ಪ್ರಯಾಸವೆಂದು ಅನುಭವವಾದರೂ, ಗೌರಮ್ಮ ತೊಟ್ಟ ಹಟವನ್ನು ಬಿಡದಂತಹ ಛಲವಂತೆ.

ಬಾಗಲಕೋಟೆಯ ಸೇವಾದಳದ ಶಿಬಿರಕ್ಕೆ ಸೇರಿದ ನಂತರ ಪ್ರಾರಂಭವಾಯಿತು ಗೌರಮ್ಮನವರ ಹೋರಾಟ. ಶಿಬಿರದಲ್ಲಿ ತರಬೇತಿ ನಡೆಯುತ್ತಿದ್ದಾಗ, ಬ್ರಿಟಿಷ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಸರ್ಕಾರ ಸೇವಾದಳವನ್ನು ರದ್ದುಗೊಳಿಸಿ, ಸ್ವಯಂ ಸೇವಕರನ್ನು ಹೊರಗೆ ಹಾಕಿತು. ಹಿಮ್ಮೆಟ್ಟಿ ಹಿಂತಿರುಗದೆ ಗೌರಮ್ಮ ಹರ್ಡೀಕರ್‌ರವರನ್ನು ಸಂಧಿಸಿ. 'ಎಲ್ಲಿಗಾದರೂ ಕರೆದುಕೊಂಡು ಹೋಗಿ, ಏನಾದರೂ ಸೇವಾ ಕೆಲಸ ಹೇಳಿಕೊಡಿ' ಎಂದು ಬೇಡಿದರು.

ಮುಂಬಯಿಗೆ ಕರೆದುಕೊಂಡು ಹೋಗಲು ನಿಶ್ಚಯಿಸಿ. ಹರ್ಡೀಕರ್ ತಮ್ಮ ಜೊತೆಯಲ್ಲೇ ಗೌರಮ್ಮನವರನ್ನು ರೈಲಿಗೆ ಹತ್ತಿಸಿ ಕರೆದುಕೊಂಡರು. ಬೆಳಗಾಂ ದಾಟಿದರು. ಬಿಸಿಲಿನ ಬೇಗೆ, ಬಾಯಾರಿಕೆ. ದಣಿವಾರಿಸಿಕೊಳ್ಳಲು ಎಲ್ಲರೂ ರೈಲಿ ನಿಂದಿಳಿದಾಗ. ಹರ್ಡೀಕರ್ ಗೌರಮ್ಮನನ್ನೂ ಇಳಿಯಲು ಹೇಳಿದರು. ಸೀಟು ಬಿಟ್ಟು ಇಳಿದರೆ ಎಲ್ಲಿ ತಪ್ಪಿಸಿಕೊಳ್ಳುನೆಸೋ ಎಂದು ಹೆದರಿದ್ದ ಗೌರಮ್ಮ ಮುಂಬಯಿ ತಲಪು ವವರೆಗೂ ಕೆಳಗೆ ಇಳಿಯಲೊಲ್ಲೆನೆಂದರು, 'ನಾನು ಜೊತೆ ಇರುವಾಗ ನಿಮಗೇನು ಯೋಚನೆ. ಒಣಗಿ ಬತ್ತಿದ್ದ ನಾಲಿಗೆ ಒದ್ದೆಯಾಗಲಿ, ಎಳನೀರನ್ನಾದರೂ ಕುಡಿಯಿರಿ' ಎಂದು ಒತ್ತಾಯಿಸಿದರು ಹರ್ಡೀಕರ್.

ಈ ಸಂದರ್ಭವನ್ನು ಹೇಳುವಾಗ, ಘಟನೆ ತಿರುಗಿದ ತಿರುವನ್ನು ನೆನೆದು ಗೌರಮ್ಮನವರು ಪುನಃ ಅನುಭವಿಸಿದಷ್ಟು ಆತಂಕದಿಂದ ಚಿತ್ರಿಸಿದರು.

"ನಾನು ಏಕೆ ಹೆದರಿದ್ದೆನೋ ಅದು ನಡೆದೇ ಹೋಯಿತು. ಗಾರ್ಡ್ ಹಸಿರು ಬಾವುಟ ಬೀಸಿದ, ರೈಲು ಹೊರಟೇ ಬಿಟ್ಟಿತು. ಯಾರೊಡನೆಯೋ ಮಾತಾಡು ತ್ತಿದ್ದ ಹರ್ಡೀಕರ್ ಹೇಗೋ ರೇಲುಗಾಡಿಯೊಳಗೆ ತೂರಿಕೊಂಡು ನನ್ನನ್ನು ಸುತ್ತಲೂ ಹುಡುಕಿದರು. ನಾನು ರೈಲು ಹತ್ತಲಾಗದೆ ಸ್ಟೇಷನ್ನಿನಲ್ಲೇ ಉಳಿದುಕೊಂಡೆ. ದಿಕ್ಕು ತೋಚದೆ ಮಿಕಮಿಕ ಕಣ್ಣುಬಿಡುತ್ತಾ ನಿಂತೆ. ಅದು ಪುಣೆಯ ಸ್ಟೇಷನ್ ಆಗಿತ್ತು. ಅಲ್ಲಿದ್ದು ನಾನೇನು ಮಾಡಲಿ ಎಂದುಕೊಂಡಾಗ, ಅಲ್ಲಿ ನನ್ನ ಕಣ್ಣಿಗೆ ಬಿದ್ದ ಪರಿಚಯದ ವ್ಯಕ್ತಿ ಕಮಲಾದೇವಿ ಚಟ್ಟೋಪಾಧ್ಯಾಯ. ಇಲ್ಲೇಕೆ ನಿಂತೆ ಎಂದು ನನ್ನ ಕೈಹಿಡಿದು ಮಾತಾಡಿಸಿದರು. ಸ್ವಲ್ಪ ಧೈರ್ಯ ಬಂತು. ಹರ್ಡೀಕರ್ ನನ್ನನ್ನು ಬಿಟ್ಟು ಹೋದ ರೆಂದೇ, ಕಮಲಾದೇವಿ ನನ್ನನ್ನು ಅವರ ಮನೆಗೆ ಕರೆದುಕೊಂಡು ಹೋದರು.

ಕಮಲಾದೇವಿಯ ಪಾತ್ರ ಆ ವೇಳೆಗೆ ಬಹು ಹಿರಿದಾಗಿತ್ತು. ಚಳವಳಿಯ ಬಿರುಸಾದ ಕಾರ್ಯಕ್ರಮಗಳಲ್ಲಿ ತೊಡಗಿದ್ದ ಅವರನ್ನು ಕಂಡು ಗೌರಮ್ಮ. "ನಾನಿನ್ನೂ ಕಲಿಯುವುದು ಬೇಕಾದಷ್ಟಿದೆ. ನಿಮ್ಮ ಕೆಲಸ ನಿಮಗೆ, ನನ್ನ ಕೆಲಸ ನನಗೆ. ಆದಷ್ಟು ಬೇಗ ನನ್ನನ್ನು ಕಳುಹಿಸಿ" ಎಂದು ಹಟಮಾಡಿ ಊಟ ಬಿಟ್ಟಾಗ, ಕಮಲಾದೇವಿ ನಿರುಪಾಯರಾಗಿ ಸ್ವಯಂಸೇವಕರೊಬ್ಬರೊಂದಿಗೆ ಗೌರಮ್ಮನನ್ನು ಮುಂಬಯಿಗೆ ಕಳುಹಿಸಿಕೊಟ್ಟರು.

ಪಂಡಿತ ನೆಹರೂರವರೊಂದಿಗೆ ಮಾತಾಡುತ್ತಿದ್ದ ಹರ್ಡೀಕರ್‌ರನ್ನು ಕಂಡೊಡನೆ ಗೌರಮ್ಮ. ಹರ್ಡೀಕರ್‌ರನ್ನು ಮೂದಲಿಸಿ, ನೆಹರೂರವರಿಗೆ ತಾನು ಸಾವಕಾಶವಾಗಿ ಬಂದುದರ ಕಾರಣವನ್ನು ತಿಳಿಸಿದರು.

ಇಷ್ಟರವರೆಟ್ಟಿಗೆ ಧೈರ್ಯವಾಗಿ ಇಬ್ಬರು ಹಿರಿಯ ನಾಯಕರೊಡನೆ ನೇರಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಮಾತಾಡಿದ ಗೌರಮ್ಮನವರಲ್ಲಿ ಕಂಡು ಬರುವ ಎರಡು ಗುಣಗಳು ಅತಿಮುಖ್ಯ. ಹರ್ಡೀಕರ್ ಎಂದರೆ ಗೌರಮ್ಮನವರಿಗಿದ್ದ ಪ್ರೀತಿ, ವಿಶ್ವಾಸ, ಸಮೀಪ ಬಂಧುವೆಂಬ ಭಾವನೆ, ಮತ್ತೊಂದು ಮಹಾಮುಖಂಡ ನೆಹರೂ ಎದುರು ತನ್ನ ಆತ್ಮಾಭಿಮಾನ, ತನ್ನ ಆಸಕ್ತಿ, ಆತಂಕವನ್ನು ತೋಡಿಕೊಳ್ಳುವ ಆವೇಶ. ಇವೆರಡೂ ಚಳವಳಿಗೆ ಅವಶ್ಯಕವಾದ ಅರ್ಹತಾ ಗುಣಗಳು. ಎಷ್ಟೇ ಕಷ್ಟಬಂದರೂ, ತವರು ಮನೆಗೆ ಓಡಿ ಹೋಗಿ, ಸುಖದಲ್ಲಿ ಅವಿತುಕೊಳ್ಳುವ ಯೋಚನೆ ಗೌರಮ್ಮನವರಿಗೆ ಸುಳಿಯಲಿಲ್ಲ. ಎದೆಗುಂದದ ಆ ಹುಡುಗಿಯ ಗಂಡು ಧೈರ್ಯವನ್ನು ಕಂಡು ನೆಹರೂ ಮೆಚ್ಚಿದರು, ಬಹಳ ಚೂಟಿ ಹುಡುಗಿ ಎನ್ನುತ್ತಾ ನೆಹರು ಗೌರಮ್ಮನವರನ್ನು ಬೈಕುಳ (ಬೈಖಳ್)ದ ಸೇವಾದಳಕ್ಕೆ ಕಳುಹಿಸಿಕೊಟ್ಟರು. ಮುಂಬಯಿಯಲ್ಲಿ ಮಾರುಕಟ್ಟೆಯ ಪಿಕೆಟಿಂಗ್ ಮತ್ತೊಂದು ಮುಖ್ಯ ಕಾರ್ಯವಾಗಿತ್ತು. ಒಂದು ಅಂಗಡಿಯ ಬಳಿ ಒಬ್ಬ ಸ್ವಯಂ ಸೇವಿಕೆ ಇರತಕ್ಕದ್ದು. ವಿದೇಶಿ ಸಾಮಾನುಗಳ ಬಹಿಷ್ಕಾರ ಮಾಡತಕ್ಕದ್ದು. ಅಂಗಡಿಯ ಮಾಲೀಕರು ಪಿಕೆಟಿಂಗ್ ಮಾಡಲು ಬಂದ ಹೆಣ್ಣು ಮಕ್ಕಳನ್ನು ಅಲಕ್ಷಿಸಿ ದೂಡುತ್ತಿದ್ದರು. ಹಾಗಾಗಿ ಗೌರಮ್ಮನವರಿಗೆ ಚರಂಡಿಗೆ ಬಿದ್ದು ಗಾಯವಾಯಿತು. ಇಂತಹ ಎಷ್ಟೋ ಗಾಯಗಳನ್ನು ಲಕ್ಷಿಸದ ಗಟ್ಟಿ ಮನದ ಸ್ವಯಂ ಸೇವಿಕೆಯರು ಚಳವಳಿಗೆ ಭಂಗಬಾರದಂತೆ ಲಕ್ಷ್ಯವಿಟ್ಟಿದ್ದರು. ಪ್ರತಿದಿನ ಪಿಕೆಟಿಂಗ್ ಪ್ರಕರಣವಿದ್ದೇ ಇತ್ತು.

ನೆಹರೂರವರ ಮನೆಯಲ್ಲಿರುವುದು ಗೌರಮ್ಮನವರಿಗೆ ಏಕೋ ಅವರ ಅಂತಸ್ತಿಗೆ ಸರಿಹೊಂದದೆನ್ನಿಸಿ, ಸಾವಿತ್ರಿಬಾಯಿ ಎಂಬ ಕರ್ನಾಟಕದ ಗೃಹಿಣಿಯ ಮನೆಯಲ್ಲಿ ಬಂದು ಸೇರಿಕೊಂಡಾಗ, ಗೌರಮ್ಮನವರ ಮೇಲಿದ್ದ ಆಪಾದನೆಯ ಸಲುವಾಗಿ ಸಾವಿತ್ರಿಬಾಯಿಯ ಗಂಡನನ್ನು ಬಂಧಿಸಿದರು. ಇದರಿಂದ ಬೇಸರಗೊಂಡ ಸಾವಿತ್ರಿಬಾಯಿ ಗೌರಮ್ಮನವರಿಗೆ ನಾನಾ ವಿಧದ ಕಷ್ಟಗಳನ್ನು ಕೊಟ್ಟು ನಿಷ್ಠೂರ ಮಾಡಿದರು. ಈ ಕಿರುಕುಳದಿಂದ ತಪ್ಪಿಸಿಕೊಳ್ಳಬೇಕೆಂದಾಗ ಅವರಿಗೆ ಬಂದ ಸುದ್ದಿ ಇದು—"ವೆಂಕಟರಾಮಯ್ಯನವರಿಗೆ ವಾರೆಂಟ್ ಬಂದಿರುವುದರಿಂದ ಸದ್ಯಕ್ಕೆ ಗೌರಮ್ಮನವರು ಎಲ್ಲಿ ಇಳಿದುಕೊಂಡಿದ್ದಾರೋ ಅಲ್ಲಿಯೇ ಇರಬೇಕು."

ಯಜಮಾನರಿಂದ ಬಂದ ಆಜ್ಞೆ ಇದು. ಗೌರಮ್ಮ ತಲೆಬಾಗಿದರು. ಅಷ್ಟರಲ್ಲಿ ಕಾನಕಾನಹಳ್ಳಿಯ ಶರ್ಮಾ ಗೌರಮ್ಮನವರನ್ನು ಭೇಟಿಯಾಗಿ, ಕೊಲಾಬಾ ಮೈದಾನದಲ್ಲಿ ಸಭೆ ಸೇರಿಸುವ ನೆಪದಲ್ಲಿ ಹೋಗಿ ಯಜಮಾನರನ್ನು ಸಂಧಿಸಿ ಬರಲು ಉಪಾಯ ಹೇಳಿಕೊಟ್ಟರು. ಅತಿ ಧೈರ್ಯದಿಂದ ಮುನ್ನುಗ್ಗುತ್ತಿದ್ದ ಗೌರಮ್ಮನವರಿಗೆ ತಲೆಗೆ ಬಿದ್ದ ಪೆಟ್ಟುಗಳೆಷ್ಟೋ! ಮೈ ಕೈ ಗಾಯಗಳೆಷ್ಟೋ! ಬಲಗೈಗೆ ಶಸ್ತ್ರ ಚಿಕಿತ್ಸೆಯಾಗಿತ್ತು. ಹೇಗಾದರಾಗಲೀ, ಪತಿಯನ್ನು ನೋಡುವ ಆಕಾಂಕ್ಷೆಯಿಂದ ಇನ್ನೇನು ಹೊರಡಬೇಕೆನ್ನುವಷ್ಟರಲ್ಲಿ, ಆ ದಿನದ ಸಮಾಚಾರ ಪತ್ರಿಕೆಯಲ್ಲಿದ್ದ ಸಾಲು ಕಣ್ಣಿಗೆ ಬಿತ್ತು—"ಬೈಕುಳಾದ ಜೈಲಿನಿಂದ ವೆಂಕಟರಾಮಯ್ಯ ತಪ್ಪಿಸಿಕೊಂಡಿದ್ದಾರೆ."

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಆದರೆ ಚಳವಳಿಗಾರರು ಸದಾ ಆತಂಕದ ಪರಿಸ್ಥಿತಿಯಲ್ಲಿ ಬದುಕುತ್ತಿದ್ದರೂ ಸಮಯಸ್ಫೂರ್ತಿ ಎಂದೂ ಬತ್ತುತ್ತಿರಲಿಲ್ಲ.

ಟೆಲಿಗ್ರಾಂ ಒಂದು ಬಂತು—"ಕಾವೇರೀ ಬೆಂಗಳೂರಿಗೆ ಬಾ—ಮಧುಕರ" ಎರಡೂ ಗುಪ್ತ ನಾಮಗಳು ಪತ್ತೆಯಾಗದಿರಲೆಂದು ಈ ಸಂಚು. ಇಲ್ಲಿ ಗೌರಮ್ಮನೇ ಕಾವೇರಿ. ವೆಂಕಟರಾಮಯ್ಯ ಮಧುಕರ. ಅರ್ಥಮಾಡಿಕೊಂಡು ಗೌರಮ್ಮ ಕೂಡಲೇ ಬೆಂಗಳೂರಿಗೆ ಹೊರಟು ಬಂದರು. ವೇಷ ಮರೆಸಿಕೊಂಡು, ರೈಲು ಕಂಬಿಯ ಮೇಲೆ ಕಾದ ಕಬ್ಬಿಣದ ಹಳಿಯ ಮೇಲೆ ಹನ್ನೆರಡು ಮೈಲಿ ನಡೆದಿದ್ದ ಕಾರಣ ಕಾಲೆರಡೂ ಬೊಬ್ಬೆಯಾಗಿದ್ದುವು, ಸ್ತ್ರೀ ಸಹಜವಾಗಿ ಪತಿಯ ದುರವಸ್ಥೆಗೆ ಕಣ್ಣೀರ್ಗರೆದರಾದರೂ ದೇಶ ಕಾರ್ಯದ ನಿರ್ಧಾರ ಮಾತ್ರ ಅಚಲವಾಗಿತ್ತು.

ಪೋಲೀಸಿನವರ ಕಟ್ಟಾಜ್ಞೆ. ಊರೊಳಗೆ ಹೋಗುವಂತಿಲ್ಲ. ಇಬ್ಬರೂ ಕೂಡಿ ಅಲ್ಲೇ ನಿರ್ಧಾರ ಮಾಡಿ, ಕರ್ನಾಟಕದಲ್ಲೇ ನೆಲೆಸಿ ಸ್ವಾತಂತ್ರ್ಯ ಸಂಗ್ರಾಮದ ಚಟುವಟಿಕೆ ನಡೆಸಲು ತೀರ್ಮಾನಿಸಿದರು.

ಬೆಂಗಳೂರಲ್ಲಿ ಚಳವಳಿಗಾರರಿಗೆ ಹೆಚ್ಚು ತೊಂದರೆಯಿದ್ದುದರಿಂದ, ಅಲ್ಲಿಂದ ಇಬ್ಬರೂ ಸೊರಬ, ಸಾಗರಕ್ಕೆ ಬಂದು, ತಾಳಗುಪ್ಪೆಯನ್ನು ತಮ್ಮ ಚಟುವಟಿಕೆಗಳ ಕೇಂದ್ರವನ್ನಾಗಿ ಮಾಡಿಕೊಂಡರು. ಸಿದ್ದಾಪುರಕ್ಕೆ ಹೋಗತಕ್ಕದ್ದೆಂದು ತೀರ್ಮಾನಿಸಿ, ಕರನಿರಾಕರಣ ಚಳವಳಿಯನ್ನು ಬಿರುಸಾಗಿ ಕೈಗೊಂಡರು.

ಬೃಹತ್ ಸಭೆಯೊಂದು ಸೇರಿತು. ಮುಖಂಡರು ವೆಂಕಟರಾಮಯ್ಯನವರೇ. ಕರನಿರಾಕರಣ ಚಳವಳಿಯಲ್ಲಿ ಹೆಣ್ಣು-ಗಂಡು ಭೇದವಿಲ್ಲದೆ ಎಲ್ಲರೂ ಪಾಲ್ಗೊಳ್ಳಬೇಕೆಂದು ಉತ್ಸಾಹ ತುಂಬಿದರು.

ಹೆಣ್ಣು ಮಕ್ಕಳ ಬಗ್ಗೆ ಮಾನಾಪಮಾನದ ಗೌರವದ ಪ್ರಶ್ನೆ ಬಂದು, ವೆಂಕಟರಾಮಯ್ಯನವರ ಪತ್ನಿ ಗೌರಮ್ಮನೇ ಈ ಜವಾಬ್ದಾರಿ ವಹಿಸಲಿ. ಮಹಿಳಾ ಮಂಡಳಿಯ ಮುಖಂಡತ್ವವನ್ನು ಗೌರಮ್ಮನೇ ತೆಗೆದುಕೊಳ್ಳಲಿ ಎಂದು ಎಲ್ಲರೂ ಅಭಿಪ್ರಾಯಪಟ್ಟರು.

ದೇಶಕ್ಕಾಗಿ ಅರ್ಪಿಸಿಕೊಂಡವರಿಗೆ ಸ್ವಂತ ಸುಖದುಃಖಗಳಿಗೆ ಎಡೆಯಿಲ್ಲ. ಗೌರಮ್ಮ ಹಿಂದು ಮುಂದು ನೋಡದೆ, ಕಾಲಾವಕಾಶ ಕೇಳದೆ, ಕೂಡಲೇ ಹೆಣ್ಣು ಮಕ್ಕಳ ತಂಡದ ನಾಯಕಿಯ ಪಾತ್ರ ವಹಿಸಿ, ತಾಲ್ಲೂಕುಗಳಿಗೆ ಕಾಲ್ನಡಿಗೆಯಲ್ಲಿ ಹೋಗಿ ಸ್ತ್ರೀ ಸಮುದಾಯವನ್ನು ಐಕ್ಯತಾ ಶಕ್ತಿಯಾಗಿ ರೂಪಿಸಿದರು.

ಸಿರಸಿ, ಸಿದ್ದಾಪುರದಲ್ಲಿ ಆರಂಭಿಸಿದ ಚಳವಳಿ ಸರಕಾರಕ್ಕೆ ಬಿಸಿ ಮುಟ್ಟಿಸಿದ ಕಾರಣ ಗೌರಮ್ಮನವರಿಗೂ ವೆಂಕಟರಾಮಯ್ಯನವರಿಗೂ ಜೈಲುವಾಸ ಬೆನ್ನಟ್ಟಿ ಬಂತು, ವೆಂಕಟರಾಮಯ್ಯನವರ ವ್ಯಕ್ತಿತ್ವ ಚಳವಳಿಯಲ್ಲಿ ಎಷ್ಟು ಮುಖ್ಯವಾಗಿತ್ತೆನ್ನುವುದಕ್ಕೆ ಸಾಕ್ಷಿ ಯಾವುದೆಂದರೆ, ಅವರ ಪತ್ತೆ ಹಚ್ಚಲು ಪೋಲಿಸರು ಪಡುತ್ತಿದ್ದ ಪಾಡು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಮುಖಂಡರು ಸಿಕ್ಕದಿದ್ದಾಗ, ಅವರ ಹೆಂಡತಿಯನ್ನು ಹಿಂಸಿಸಿ ಪತ್ತೆ ಕೊಡಲು ಕಾಡಿಸುವುದು ಪೋಲೀಸರ ಕ್ರಮವಾಗಿತ್ತು. ಗೌರಮ್ಮನವರು ಅನುಭವಿಸಿದ ಕ್ರೂರ ದಂಡನೆಯಲ್ಲಿ ಇದೂ ಒಂದು. ಮೈಸೂರಿಗೆ ಸ್ವಾತಂತ್ರ್ಯ ಬರುವವರೆಗೂ ಬಿಡದೆ ವೆಂಕಟರಾಮಯ್ಯ ಚಳವಳಿ ನಡೆಸಿದರು. ಗೌರಮ್ಮ ಬ್ರಿಟಿಷ್ ಸರ್ಕಾರದ ಕಿರುಕುಳ ಅನುಭವಿಸಿದರು.

ಇವರಿಬ್ಬರ ನಾಯಕತ್ವದಲ್ಲಿ ನಡೆದ ಕರನಿರಾಕರಣ ಚಳವಳಿ ಉಗ್ರರೂಪ ತಾಳಿತು. ಸಿದ್ದಾಪುರ ತಾಲ್ಲೂಕಿನ ಜನರು ನುಡಿದ ಧೀರವಾಣಿ ಅವರ ದೃಢ ಸಂಕಲ್ಪವನ್ನು ಪ್ರತಿಬಿಂಬಿಸುತ್ತದೆ. "ನಾವು ಪ್ರಪಂಚಕ್ಕೆ ಬಂದಾಗ ಏನು ತಂದೆವು ? ಪ್ರಪಂಚವನ್ನು ಬಿಟ್ಟು ಹೋಗುವಾಗ ಏನು ತೆಗೆದುಕೊಂಡು ಹೋಗುವೆವು ? ನಮ್ಮ ಆಸ್ತಿಪಾಸ್ತಿಗಳು ನಷ್ಟವಾಗುತ್ತವೆಂದು ನಾವೇಕೆ ಮರುಗಬೇಕು ? ಭಿಕ್ಷೆ ಎತ್ತಿಕೊಂಡಾದರೂ ಇರೋಣ. ಈ ದುಷ್ಟ ಸರ್ಕಾರಕ್ಕೆ ಕಂದಾಯ ಕೊಡುವ ಪಾಪ ಕಾರ್ಯವನ್ನು ಮಾತ್ರ ಎಂದಿಗೂ ಮಾಡಬಾರದು. ನಮ್ಮನ್ನು ಅವರು ದೋಚುವುದಕ್ಕೆ ಬಂದಲ್ಲಿ ನಮ್ಮ ಅಲ್ಪ ಸ್ವಲ್ಪ ಸ್ವತ್ತನ್ನೂ ಆವರ ಕೈಗೆ ಬೀಳದಂತೆ ಬೆಂಕಿ ಹಚ್ಚಿ ಸುಟ್ಟು ಹಾಕುವೆವು."

ಸರ್ಕಾರ ವಶಪಡಿಸಿಕೊಂಡ ಮನೆಗಳನ್ನು ಖಾಲಿ ಮಾಡಿಸುವಾಗ ಪೋಲೀಸರು ಹೆಂಗಸರಿಗೆ ಚಿತ್ರಹಿಂಸೆ ಕೊಡುತ್ತಿದ್ದರು. ಒಲೆಯ ಮೇಲಿಟ್ಟ ಅನ್ನದ ಗಡಿಗೆಯನ್ನು ಒಡೆದು ಎಸೆಯುವುದು, ತೊಟ್ಟಿಲಲ್ಲಿ ಮಲಗಿದ್ದ ಮಗು ಸಹಿತ ತೊಟ್ಟಿಲನ್ನು ಕಳಚಿ ಹೊರಗೆ ಹಾಕುವುದು. ಹೆಂಗಸರನ್ನು ರೆಟ್ಟೆ ಎಳೆದು ತಳ್ಳುವುದು—ಇಂತಹ ದಬ್ಬಾಳಿಕೆಯನ್ನು ಸಹಿಸಿಕೊಂಡು, ಪೋಲೀಸರು ಮನೆಗೆ ಹಾಕುತ್ತಿದ್ದ ಬೀಗದ ಮೊಹರುಗಳನ್ನು ಒಡೆದು ಸತ್ಯಾಗ್ರಹ ನಡೆಸುತ್ತಿದ್ದರು. ಹರಾಜು ಹಾಕಿದ ಗೋವುಗಳನ್ನು ಕೊಂಡವರ ಮನೆಯ ಮುಂದೆ ಉಪವಾಸ ಸತ್ಯಾಗ್ರಹ ಹೂಡುತ್ತಿದ್ದರು.

ಸಿದ್ದಾಪುರದಿಂದ ಎರಡು ಮೈಲಿ ದೂರದ ಅಕ್ಕುಂಜಿ ಗ್ರಾಮದ ಗೌಡರು ಕರನಿರಾಕರಣ ಮಾಡಿದವರ ಎಮ್ಮೆಯನ್ನು ಕೊಂಡಾಗ, ಗೌರಮ್ಮ ಅಲ್ಲಿ ಹೋಗಿ ಗೌಡರ ಮನೆಯ ಮುಂದೆ ಕುಳಿತು ಉಪವಾಸ ಮಾಡಿದರು. ಪೋಲೀಸರು ಗೌರಮ್ಮನನ್ನು ಬಂಧಿಸಿ, ಸೆರೆಮನೆಗೆ ಹಾಕಿದರು. ಸೆರೆಮನೆಯಲ್ಲೂ ಉಪವಾಸವನ್ನು ಮುಂದುವರಿಸಿದಾಗ, ಯಾರು ಎಷ್ಟು ಹೇಳಿದರೂ ಗೌರಮ್ಮ ಏನೂ ತಿನ್ನಲಿಲ್ಲ. "ನಾನೇಕೆ ಉಪವಾಸ ಮಾಡುತ್ತಿದ್ದೇನೆ ? ಕರನಿರಾಕರಣಕ್ಕೆ ಗೌಡರು ಸಹಕರಿಸಬೇಕು. ಅವರು ಮಾಡಿದ್ದು ತಪ್ಪೆಂದು ಒಪ್ಪಿ ಎಮ್ಮೆಯನ್ನು ಹಿಂತಿರುಗಿಸಬೇಕು. ಅದುವರೆಗೂ ಊಟ ತ್ಯಜಿಸಿದ್ದೇನೆ" ಎಂದರು. ಐದು ದಿನಗಳ ಉಪವಾಸದ ನಂತರ ಸಿರಸಿ ಮ್ಯಾಜಿಸ್ಟ್ರೇಟರ ಮುಂದೆ ವಿಚಾರಣೆ ನಡೆಯಿತು. ಉಪವಾಸದ ಸಂಕಷ್ಟದ ಜೊತೆಗೆ ಲಾಠಿ ಹೊಡೆತ, ಬಂದೂಕಿನ ಹಿಂಬದಿಯಿಂದ ಚುಚ್ಚುತ್ತಿದ್ದ ಯಾತನೆ ಸಹಿಸಿಕೊಂಡು ಕೋರ್ಟ್ ಸೇರಿದರು. ಏಳುವು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ದಕ್ಕೂತ್ರಾಣವಿಲ್ಲದೆ ಮಲಗಿದ್ದಲ್ಲೇಹೇಳಿಕೆ ನೀಡಿದರು. ಗೌರಮ್ಮನನ್ನುನೋಡಲುಬಂದಿದ್ದ ಅವರ ತಾಯಿಯೂ ಮತ್ತು ಅವರ ಇಬ್ಬರು ಮಕ್ಕಳಾದ ಸುವರ್ಣ ಮತ್ತು ಸುಶೀಲ ಈ ಘೋರ ದೃಶ್ಯವನ್ನು ಕಂಡು ಸಹಿಸಲಾರದೆ ಯಾತನೆಪಟ್ಟರು. ಇವರು ಬಂದು ನೋಡಿದುದು ಗೌರಮ್ಮನಿಗೆ ಸರಿಹೋಗಲಿಲ್ಲ. ಶಿಕ್ಷೆಗಿಂತ ಹೆಚ್ಚಾಗಿ ಇವರು ಬಂದಿದ್ದ ಕ್ಕಾಗಿ ಹಿಂಸೆಪಟ್ಟರು.

ಸೊರಬ ತಾಲ್ಲೂಕಿನ ಹೆಚ್ಚೆ ಗ್ರಾಮದ ಪಟೇಲ ರಾಮಪ್ಪ ಸಿದ್ದಾಪುರಕ್ಕೆ ಹೋಗಿ ಕರನಿರಾಕರಿಸಿದವರ ಮನೆಯ ಎಮ್ಮೆಯನ್ನು ಕೊಂಡಾಗಲೂ, ಗೌರಮ್ಮ ತನ್ನೊಡನೆ ಕೆಲವು ಹೆಣ್ಣು ಮಕ್ಕಳನ್ನು ಸೇರಿಸಿಕೊಂಡು ರಾಮಪ್ಪನ ಮನೆಯ ಮೊಗಸಾಲೆಯಲ್ಲಿ ಕುಳಿತು ಉಪವಾಸ ಪ್ರಾರಂಭಿಸಿದರು. ಅಲ್ಲಿ ಕುಳಿತುಕೊಳ್ಳಲು ಅವಕಾಶ ಕೊಡದಿದ್ದಾಗ, ಸತ್ಯಾಗ್ರಹಿಗಳು ಬೀದಿಯಲ್ಲೇ ಕುಳಿತರು. ಕತ್ತಲಾದರೂ ಕದಲಲಿಲ್ಲ. ನಿರಶನ ವ್ರತ ಮೂರನೇ ದಿನವೂ ಮುಂದುವರಿಯಿತು. ರಾಮಪ್ಪನ ಅಕ್ಕನಿಗೆ ಬಿದ್ದ ಕನಸಿನ ಪರಿಣಾಮವಾಗಿ ಎಮ್ಮೆಯನ್ನು ಸತ್ಯಾಗ್ರಹಿಗಳಿಗೆ ಒಪ್ಪಿಸಲಾಯಿತು.

ಜೈಲಿನಲ್ಲಿದ್ದಾಗ ಗೌರಮ್ಮನವರು ಮಾಡಿದ ಸುಧಾರಣೆ ಗಮನಾರ್ಹ. "ಜೈಲಿಗೆ ನಮ್ಮನ್ನು ಹಾಕಬೇಕಾದರೆ ಜಾಗವಿದೆಯೇ ಎಂದು ಪೋಲೀಸರು ತಿಳಿದುಕೊಳ್ಳುತ್ತಿದ್ದುದು ಹೇಗೆಂದರೆ, ಕಾಲೇಜಿನಲ್ಲಿ ಸೀಟು ಇದೆಯೇ ಎಂದು ಕೇಳಿದ ಹಾಗೆ. ಅಷ್ಟು ಕಿಕ್ಕಿರಿದ ಜೈಲುಗಳಲ್ಲಿ, ಸೋತು ಸೊರಗಿ ಹೋಗಿದ್ದ ನಮ್ಮನ್ನು ದಬ್ಬಿದಾಗ, ಅಲ್ಲಿ ನಮಗಿಂತ ಮೊದಲೇ ಇರುತ್ತಿದ್ದ ನಮ್ಮ ಜೊತೆಯ ಚಳವಳಿಗಾರರು ಕೈ ಬೀಸಿ ಕರೆದು ಸಮಾಧಾನ ಮಾಡುತ್ತಿದ್ದರು.

"ಕಾರವಾರ, ಬೆಳಗಾವಿ, ಸಿದ್ದಾಪುರದ ಕಾರಾಗೃಹಗಳಲ್ಲಿ ವಾಸಿಸಿದ್ದೇನೆ. ಒಂದು ಸಲ ಕೆಂಪು ಸೀರೆಯ ಮಡಿ ಹೆಂಗಸು ಭವಾನಮ್ಮನಿಗೆ ಜೈಲಿನ ಮೆಟ್ರನ್ ಒಬ್ಬಳು ದುರಹಂಕಾರದಿಂದ ಕೈಲಿದ್ದ ಬೀಗದಿಂದ ಅವರ ತಲೆಯನ್ನು ಕುಕ್ಕಿದಾಗ, ಗಾಯಗೊಂಡು ಅವಮಾನಪಟ್ಟ ಸತ್ಯಾಗ್ರಹಿ, ಖೈದಿ ಆ ಹೆಂಗಸಿಗಾಗಿ ನನ್ನ ಮನನೊಂದಿತು. ರೋಷ ಉಕ್ಕಿತು ಜೈಲಿನವಳು ಕ್ಷಮೆ ಕೇಳುವವರೆಗೂ ಉಪವಾಸ ಮಾಡಿದ್ದೇನೆ."

"ಮತ್ತೊಮ್ಮೆ ಜೈಲಿನೊಳಗೇ ಮರಾಠಿ ಮತ್ತು ಕನ್ನಡ ಭಾಷೆ ಮಾತಾಡುವವರ ಮಧ್ಯೆ ಘರ್ಷಣೆಯಾವಾಗ, ಎಲ್ಲರಿಗೂ ಬುದ್ಧಿ ಕಲಿಸಿದ್ದೇನೆ, ಮಾನಸಿಕವಾಗಿ ನಾವೆಲ್ಲಾ ಹಿಂಸೆಗೆ ಒಳಗಾದವರು. ನಮ್ಮಲ್ಲಿ ಭಾವೈಕ್ಯತೆಯ ಭಾವನೆಗಳು ಇರಬೇಕಾದಾಗ, ಭಾಷೆಯ ಬಡಿದಾಟವೇಕೆ ? ಇಲ್ಲಿ, ಕಲಿತವರು. ಜಾಣರು ದಡ್ಡರು, ಓದು ಬರುವವರು. ಅವಿದ್ಯಾವಂತರೆಂದು ಭೇದಕ್ಕೆ ಅವಕಾಶವೇ ಇಲ್ಲ. ಜೈಲಿಗೆ ಬರಲು ವಿದ್ಯಾವಂತರು ಏನು ಕೆಲಸ ಮಾಡಿದ್ದರೋ ನಾವೂ ಅದೇ ಮಾಡಿದ್ದೇವೆ ಎಂದು ಹೇಳಿ ಸಮಾನತೆಯನ್ನು ಸಾರಿದ್ದೇನೆ" ಎನ್ನುತ್ತಾರೆ ಗೌರಮ್ಮ.

"ಇಂದಿನ ಮಕ್ಕಳು ಕಲಿಯಬೇಕಾದದ್ದೂ ಇದೇ. ಸಮಾನತೆ ಮತ್ತು ಐಕ್ಯತೆ,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಮತ್ತೇನೂ ಕಷ್ಟಪಡಬೇಕಾಗಿಲ್ಲ. ತ್ಯಾಗ ಮಾಡಬೇಕಾಗಿಲ್ಲ, ಹಿಂದಿನ ಉಪದೇಶ ಬೇಕಿಲ್ಲ. ಆಗ ನಾವು ಯುವತಿಯರು ಮಹಾತ್ಮನಿಗೆ ಹೀಗೆ ಬರೆದುಕೊಟ್ಟು ಚಳವಳಿಗೆ ಧುಮುಕುತ್ತಿದ್ದೆವು—

"ಧೈರ್ಯದಿಂದ ನಾವು ಸತ್ಯಾಗ್ರಹ ಸಮರಕ್ಕೆ ಇಳಿಯುತ್ತಿದ್ದೇವೆ. ಈ ಹೋರಾಟದಲ್ಲಿ ನಮ್ಮ ಗೌರವಕ್ಕೆ ಕುಂದುಂಟಾಗುವ ಪ್ರಸಂಗ ಬಂದಲ್ಲಿ ಆತ್ಮಾರ್ಪಣೆಗೆ ಸಿದ್ಧರಾಗಿದ್ದೇವೆ" ಎಂದು ಪ್ರತಿಜ್ಞೆ ಮಾಡುತ್ತಿದ್ದೆವು. ಈ ಕಷ್ಟ ಇಂದಿನವರಿಗಿಲ್ಲ. ಇಂದಿನವರಿಗೆ ಏನು ಬೇಕೋ ಅದನ್ನು ಹೇಳಿ ಕೊಡಿ" ಎಂದು ಗೌರಮ್ಮನವರು ನಮ್ಮನ್ನು ಇಂದಿನ ನಾಯಕರನ್ನಾಗಿ ಮಾಡುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

# ಸುಶೀಲಾಬಾಯಿ ಕುಲಕರ್ಣಿ

ಸುಶೀಲಾಬಾಯಿ ಹುಟ್ಟಿದ ಊರು, ಹುಟ್ಟಿದ ಮನೆ, ಹುಟ್ಟಿ ಬೆಳೆದ ವಾತಾವರಣ, ಮದುವೆಯಾಗಿ ಸೇರಿದ ಕುಟುಂಬ ಎಲ್ಲವೂ ರಾಷ್ಟ್ರಭಕ್ತಿಮಯ. ರಾಷ್ಟ್ರೀಯ ಸೇವೆಗಾಗಿಯೇ ಮೀಸಲಾದ ಮನೆ. ರಾಷ್ಟ್ರೀಯ ಸೇವೆಯನ್ನೇ ದೀಕ್ಷೆಯಾಗಿಟ್ಟುಕೊಂಡ ಪತಿ. ರಾಷ್ಟ್ರೀಯ ಸೇವಾ ಕೇಂದ್ರ ಸ್ಥಳವೇ ಸ್ವಂತ ಸ್ಥಳ. ಪ್ರತಿ ಕ್ಷಣದಲ್ಲೂ ಪ್ರತಿ ಚಳವಳಿಯಲ್ಲೂ ಆಂದೋಲನವನ್ನೆಬ್ಬಿಸುವ ಸ್ವಾತಂತ್ರ್ಯ ಹೋರಾಟದ ಕೇಂದ್ರದಲ್ಲಿ ಸುಶೀಲಾರವರ ಬಾಳ್ವೆ. ಇಂತಹ ಪರಿಸರದಲ್ಲಿದ್ದು ಹತ್ತು ವರ್ಷ ವಯಸ್ಸಿನ ಬಾಲಿಕೆಯಿಂದ ಈಗ ಎಪ್ಪತ್ತು ವರ್ಷದ ಮುಪ್ಪಿನವರೆಗೂ ಸುಶೀಲಾಬಾಯಿಯವರ ಧಮನಿಯಲ್ಲಿ ಸಂಚರಿಸುತ್ತಿರುವ ಒಂದೇ ಸ್ಫೂರ್ತಿ "ರಾಷ್ಟ್ರ ಪ್ರೇಮ" ರಾಷ್ಟ್ರಭಕ್ತಿ ಜಪವೇ ಜೀವನ ಮಂತ್ರ.

ಬೆಳಗಾವಿಯ ಮುರುಗೋಡು ಎಂಬ ಹಳ್ಳಿಯ ರಾಷ್ಟ್ರ ಜೀವಾತುವಾಗಿದ್ದ ಮಾಟೊಳ್ಳಿ ಬಾಬುರಾವ್ ಎಂದು ಪ್ರಸಿದ್ಧರಾಗಿದ್ದ ಧೋಂಡೊಯಲ್ಲೊ ಕುಲಕರ್ಣಿಯವರೆ ಸುಶೀಲಾರವರ ತಂದೆ. ಬ್ರಿಟಿಷ್ ಸರ್ಕಾರದ ನಿಷ್ಠ ಸೇವಕರಾಗಿದ್ದ ಕುಲಕರ್ಣಿಯವರು ಒಂದು ಸಲ ಗಂಗಾಧರರಾವ್ ದೇಶಪಾಂಡೆಯವರ ಭಾಷಣ ಕೇಳಿ ಅಂದಿನಿಂದ ಕಾಂಗ್ರೆಸ್ಸಿಗೆ ಬೆಂಬಲ ನೀಡಲು ಪ್ರತಿಜ್ಞೆ ಮಾಡಿದರು. ಅಸಹಕಾರ ಚಳವಳಿಯ ಬೃಹತ್ ಸಭೆಯೊಂದರಲ್ಲಿ ತಮ್ಮ ನೌಕರಿಗೆ ರಾಜಿನಾಮೆ ಘೋಷಿಸಿ ಚಳವಳಿಗೆ ಸೇರಿಕೊಂಡರು. ಸೇವಾದಳಕ್ಕೆ ಸೇರಿ ನಾಗಪುರ ಧ್ವಜ ಸತ್ಯಾಗ್ರಹದಲ್ಲಿ ಭಾಗವಹಿಸಿ ಸಾಕಷ್ಟು ಅನುಭವ ಪಡೆದರು. ಹುಬ್ಬಳ್ಳಿಯ ವಿಶೇಷ ಶಿಬಿರದಲ್ಲಿ ತರಬೇತಿ ಹೊಂದಿ ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಪಾಲ್ಗೊಂಡರು. ಅಥಣಿ, ಪಾಚ್ಚಾಪುರ, ಮುರುಗೋಡು ಈ ಸ್ಥಳಗಳಲ್ಲಿ ನಡೆದ ಸೇವಾದಳಗಳಲ್ಲಿ ವಿಶೇಷ ಕೆಲಸ ಮಾಡಿ ರೈತರಲ್ಲಿ ಜಾಗೃತಿ ಮೂಡಿಸಿದರು. ಕುಲಕರ್ಣಿಯವರ ಉತ್ತೇಜನದಲ್ಲಿ ಕರಮರಕರರ ಅಧ್ಯಕ್ಷತೆಯಲ್ಲಿ ನಾಲ್ಕು ಸಾವಿರ ರೈತರು ಸೇರಿ ಸಂಘಟಿತರಾಗಿದ್ದರು. ಮುದವೀಡು ಕೃಷ್ಣರಾಯರು ಮತ್ತು ಕೌಜಲಗಿಯವರು ಈ ಬೃಹತ್ ಸಂಘಟನೆಯನ್ನು ಶ್ಲಾಘಿಸಿದ್ದಾರೆ. ಕುಲಕರ್ಣಿಯವರ ನಿರ್ದೇಶನದಲ್ಲಿ ಪ್ರಚಾರ ಸಭೆಯಲ್ಲಿ ಮತ್ತು ಚಳವಳಿಯಲ್ಲಿ ಭಾಗವಹಿಸಿದ ರೈತರ ಸಮುದಾಯವನ್ನು ಕಂಡು ಹರ್ಡೀಕರ್ ಮತ್ತು ದಿವಾಕರ್ ಅಚ್ಚರಿಪಟ್ಟಿದ್ದಾರೆ. ೧೯೨೦ ರಿಂದ ೩೦ರವರೆಗೆ ಸ್ಥಳೀಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಕಾರ್ಯದರ್ಶಿಯಾಗಿದ್ದು ೧೯೩೨ರಲ್ಲಿ ಬೆಳಗಾವಿಯ ಮಾರುತಿಗುಡಿಯ ಆವರಣದಲ್ಲಿ ಜಿಲ್ಲಾ ರೈತ ಸಭೆಯ ಅಧ್ಯಕ್ಷರಾಗಿದ್ದಾಗ ಕುಲಕರ್ಣಿಯವರು ಪೋಲೀಸರ ಬಂಧನ ಕ್ಕೊಳಗಾದರು.

೧೯೩೦ರ ಉಪ್ಪಿನ ಸತ್ಯಾಗ್ರಹದಲ್ಲಿ ಕುಲಕರ್ಣಿಯವರು ಸವದತ್ತಿಯಲ್ಲಿ ಉಪ್ಪು ಮಾರಿದ್ದರಿಂದ ಸೆರೆ ಅನುಭವಿಸಬೇಕಾದಾಗ ಇಡೀ ಮುರಗೋಡಿನವರು ಅವರನ್ನು ಬಿಡಿಸಲು ಚಳವಳಿ ಹೂಡಿದರು. ಹತ್ತು ವರ್ಷದ ಬಾಲೆ ಸುಶೀಲಾ ಈ ದೃಶ್ಯವನ್ನು ಕಂಡಳು. ಜನರು ತಂದೆಯ ಮೇಲಿಟ್ಟ ಪ್ರೀತಿ ಅವಳ ಮನಸ್ಸಿನಲ್ಲಿ ನೆಟ್ಟಿತು. ತಂದೆಯ ದೇಶಪ್ರೇಮ ಅವಳಲ್ಲಿ ಬೇರೂರಿತು. ಲೋಕಸೇವೆಯೇ ಜೀವನ ಧ್ಯೇಯವೆಂದು ಗಟ್ಟಿಮಾಡಿಕೊಂಡಳು.

೧೯೨೪ರ ಬೆಳಗಾವಿ ಕಾಂಗ್ರೆಸ್ಸಿಗೆ ಸ್ವಯಂಸೇವಿಕೆಯಾಗಿ ಹೋಗಿದ್ದ ಸುಶೀಲಾ ರವರ ತಾಯಿ ಹಿಂತಿರುಗಿದಾಗ ಕುಲಕರ್ಣಿಯವರು ಸೆರೆಯಲ್ಲಿದ್ದರು. ಮಕ್ಕಳೊಂದಿಗೆ ತಾವೂ ಪತಿಯೊಡನೆ ಸೆರೆಯಲ್ಲಿರಬೇಕೆಂದು ಇಚ್ಛೆಪಟ್ಟು ಬಂದ ಪತ್ನಿಯನ್ನು ಕಂಡು "ನೀನೂ ಉಪ್ಪು ತಯಾರಿಸಿ ಮಾರು. ನಿನ್ನನ್ನು ಬಂಧಿಸುವರು" ಎಂದು ನಗೆ ಮಾತಾಡಿದ ಪತಿಯ ಮಾತನ್ನು ಗಂಭೀರವಾಗಿ ತೆಗೆದುಕೊಂಡು ಸುಶೀಲಾರವರ ತಾಯಿ ಅನುಸರಿಸಿದರು. ಒಂದು ದಿನವೂ ತಪ್ಪದೆ ರಾಟೆಯಿಂದ ನೂಲು ತೆಗೆಯು ವುದು ಮನೆಯ ಪದ್ಧತಿಯಾಗಿತ್ತು.

ಇಂತಹ ತಂದೆ ತಾಯಿ, ಇಂತಹ ಸಂಸ್ಕಾರದಲ್ಲಿ ಬೆಳೆದ ಸುಶೀಲಾ ಚಿಕ್ಕ ವಯಸ್ಸಿನಿಂದ ಪ್ರಭಾತಫೇರಿ, ಧ್ವಜವಂದನೆಯಲ್ಲಿ ಪ್ರತಿದಿನ ಭಾಗವಹಿಸಿ ರಾಷ್ಟ್ರ ಪ್ರೇಮವನ್ನು ಹೆಚ್ಚಿಸಿಕೊಂಡಳು. ಮೆರವಣಿಗೆಯಲ್ಲಿ "ಮಹಾತ್ಮಾ ಗಾಂಧೀಜಿ ಕಿ ಜೈ, ವಂದೇಮಾತರಂ" ಎಂದು ಜಯಕಾರ ಮಾಡಿ ಪುಟ್ಟಹುಡುಗಿ ಸುಶೀಲಾ ಪೋಲೀಸರ ಬೆದರಿಕೆ ಬಂಧನವನ್ನೂ ಅನುಭವಿಸಿದಳು.

ಮುರಗೋಡು ಭಾಗದ ಎಲ್ಲಾ ಆಂದೋಲನವನ್ನೂ ಮೆಚ್ಚುತ್ತಾ ಶ್ರೀ ಅಣ್ಣು ಗುರೂಜಿಯವರು ಹೀಗೆನ್ನುತ್ತಾರೆ.

"ಮುರಗೋಡು ಹಳ್ಳಿ, ಸವದತ್ತಿ ತಾಲ್ಲೂಕಿಗೆ ಸೇರಿತ್ತು. ಬೆಳಗಾವಿ ಜಿಲ್ಲೆಯ ಸ್ವಾತಂತ್ರ್ಯ ಸಮರದಲ್ಲಿ ಸವದತ್ತಿ ತಾಲ್ಲೂಕಿನ ಪಾತ್ರ ಅಮೂಲ್ಯವಾದ.ದು. ಗಾಂಧಿ ಪ್ರಾಂತವೆಂದು ಕರ್ನಾಟಕವು ಹೆಸರು ಗಳಿಸಿದ್ದರೆ ಸವದತ್ತಿ ತಾಲ್ಲೂಕನ್ನು ಗಾಂಧಿ ತಾಲ್ಲೂಕೆಂದು ಖಂಡಿತವಾಗಿ ಹೇಳಬಹುದು. ಅಷ್ಟು ನಿಷ್ಠೆಯಿಂದ ಈ ತಾಲ್ಲೂಕಿನ ಕಾರ್ಯಕರ್ತರು ಎಲ್ಲಾ ಚಳವಳಿಗಳಲ್ಲೂ ಕೆಲಸ ಮಾಡಿದ್ದಾರೆ.

ಹಾಗೆ ನೋಡಿದರೆ ಈ ತಾಲ್ಲೂಕು ನಮ್ಮ ಜಿಲ್ಲೆಯಲ್ಲೇ ಹಿಂದುಳಿದಿತ್ತು. ಆದರೆ ಗಾಂಧಿ ನಿಷ್ಠೆಯಲ್ಲಿ, ದೇಶ ಸೇವೆಯಲ್ಲಿ, ತ್ಯಾಗ ತಪಸ್ಸಿನಲ್ಲಿ, ಧೈರ್ಯ ಸಾಹಸದಲ್ಲಿ ಜಿಲ್ಲೆಯಲ್ಲೇ ಮುಂದೆನಿಸಿಕೊಂಡಿತು.

ಈ ತಾಲ್ಲೂಕಿನಲ್ಲಿ ನಡೆದಷ್ಟು ರಾಜಕೀಯ ಜಾಗೃತಿ, ಪ್ರಚಾರ, ಪ್ರಸಾರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಬೇರೆಲ್ಲೂ ಇಲ್ಲವೆನ್ನಬಹುದು. ಈ ತಾಲ್ಲೂಕಿನ ರಾಜಕೀಯ ಇತಿಹಾಸದಲ್ಲಿ ಮುರಗೋಡು ಮಹಾಲಯದ ಕಾರ್ಯ ಸೇರುತ್ತದೆ.

೧೯೩೦ರ ಕಾಯಿದೆ ಭಂಗ ಚಳವಳಿಯಲ್ಲಿ ಸವದತ್ತಿ ತಾಲ್ಲೂಕು ಅಗ್ರಸ್ಥಾನದಲ್ಲಿತ್ತು. ವೆಂಕಾರೆಡ್ಡಿ ಹೂಲಿಯವರು ಈ ಚಳವಳಿಯಲ್ಲಿ ಈ ತಾಲ್ಲೂಕಿಗೆ ಮೊದಲನೆ ಸ್ಥಾನ ದೊರಕಿಸಿಕೊಟ್ಟಿದ್ದಾರೆ. ಎಲ್ಲಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಬೆಳಗಾವಿ ಜಿಲ್ಲೆಯಲ್ಲಿ ಜೈಲಿಗೆ ಹೋದವರಲ್ಲಿ ಈ ತಾಲ್ಲೂಕಿನವರೇ ಹೆಚ್ಚು. ೧೯೪೧ರ ಯುದ್ಧವಿರೋಧಿ ಘೋಷಣೆಯ ವೈಯಕ್ತಿಕ ಸತ್ಯಾಗ್ರಹದಲ್ಲಿ ನೂರಾರು ಸತ್ಯಾಗ್ರಹಿಗಳು ಜೈಲಿಗೆ ಹೋದ ಘಟನೆ ಇಡೀ ಭಾರತದಲ್ಲಿ ಮತ್ತೆಲ್ಲೂ ನಡೆಯಲಿಲ್ಲವೆನ್ನಬಹುದು. ವೆಂಕಾರೆಡ್ಡಿ ಹೂಲಿಯವರ ಜೊತೆಗೆ ಶ್ರೀರಂಗ ಕಾಮತರ ಮತ್ತು ಸುಶೀಲಾರವರ ತಂದೆಯವರ ದುಡಿಮೆ ಸ್ಮರಣೀಯ. ಮುರಗೋಡು ತಂಡಗಳು ಹೊಸೂರು ಗುಂಪಿನಲ್ಲೂ, ಉಳಿದ ತಂಡಗಳು ಹೂಲಿ ಗುಂಪಿನಲ್ಲೂ ಕೆಲಸ ಮಾಡುತ್ತಿದ್ದವು. ಶ್ರೀರಂಗ ಕಾಮತರು ಈ ತಾಲ್ಲೂಕಿನಲ್ಲಿ ಆಗಾಗ ಸಂಚರಿಸಿ ಎಲ್ಲಾ ತಂಡಗಳಿಗೆ ಪ್ರೋತ್ಸಾಹ ಕೊಡುತ್ತಿದ್ದರು. ಮಾರ್ಗದರ್ಶನ ಮಾಡುತ್ತಿದ್ದರು. ಸ್ಟೇಷನ್ ಸುಡುವ ಕಾರ್ಯಕ್ರಮ ಈ ತಾಲ್ಲೂಕಿನಲ್ಲಿ ಎಲ್ಲ ಕಡೆಗೂ ಮಿಗಿಲಾಗಿ ನಡೆದಿದೆ. ಶ್ರೀರಂಗ ಕಾಮತರು ವಿಶಿಷ್ಟ ಕಾರ್ಯಕ್ರಮದ ಪ್ರಣೇತಾರರಾಗಿದ್ದರು. ಇಷ್ಟೆಲ್ಲಾ ಅಪೂರ್ವ ಕಾರ್ಯ ಮಾಡಿದರೂ ಈ ತಾಲ್ಲೂಕಿನ ಹೋರಾಟಗಾರರಲ್ಲಿ ಅಹಂಭಾವ ಎಂದೂ ಕಾಣಲಿಲ್ಲ. ಮಾತೃಭೂಮಿಯ ಬಂಧವಿಮೋಚನೆಗಾಗಿ ತಮ್ಮ ಪಾಲಿನ ಕರ್ತವ್ಯ ಮಾಡಿದ ಸಾತ್ವಿಕ ಸಮಾಧಾನವು ಇಂದಿಗೂ ಎಲ್ಲರ ಮುಖದ ಮೇಲೆ ಎದ್ದು ಕಾಣುತ್ತದೆ. ಕಾರ್ಯಕ್ಕಿಂತ ಪ್ರಸಿದ್ಧಿಯ ಕಡೆಗೆ ಹೆಚ್ಚು ಲಕ್ಷ್ಯ ಕೊಡಲಾಗುತ್ತಿರುವ ಈಗಿನ ಕಾಲದಲ್ಲಿ ಕರ್ಮಯೋಗಿಗಳಾಗಿ ನಿಷ್ಕಾಮ ಬುದ್ಧಿಯಿಂದ ಭಾರತಮಾತೆಯ ಸೇವೆಗೈದ ಸವದತ್ತಿ ತಾಲ್ಲೂಕಿನ ಶೂರ ಸ್ವಾತಂತ್ರ್ಯ ಸೈನಿಕರು ನಿಜವಾಗಿಯೂ ಧನ್ಯರು! ಮೊದಲಿಂದಲೂ ಮುರಗೋಡು ರಾಜಕೀಯ ಜಾಗೃತಿ ಹೊಂದಿತ್ತು. ವಲ್ಲಭಾಯಿ ಪಟೇಲ್, ಸಾವರ್‌ಕರ್, ಡಾ॥ ಹರ್ಡೀಕರ್ ಮೊದಲಾದವರು ೧೯೩೦ರ ಚಳವಳಿಯ ಪೂರ್ವದಲ್ಲೂ ಗಾಂಧೀಜಿ, ಜವಾಹರಲಾಲ್ ನೆಹರು, ಬಾಳಸಾಹೇಬ ಖೇರ, ಮುರಾರ್ಜಿ ದೇಸಾಯಿ ಮುಂತಾದ ಮುಖಂಡರು ಚಳವಳಿ ಕಾಲದಲ್ಲೂ ಇಲ್ಲಿಗೆ ಭೇಟಿಕೊಟ್ಟಿದ್ದಾರೆ. ದಾದಾ ಕಾಳೆಯವರು ನಂದಗಡದಲ್ಲಿ ರಾಷ್ಟ್ರೀಯ ಶಾಲೆಯನ್ನು ನಡೆಸುತ್ತಿದ್ದು, ಗಂಗಾಧರರಾಯರ ಕುಮಾರಿ ಖಾದಿ ಆಶ್ರಮದಲ್ಲಿ ಸೇರಿ ಚಳವಳಿಗೆ ಕಾಲಿಟ್ಟರು. ಬೆಳಗಾವಿ ಸತ್ಯಾಗ್ರಹ ಶಿಬಿರದ ಅಧಿಪತಿಯಾಗಿ ಕೆಲಸ ಮಾಡಿದರು" ಎಂದು ಮುರಗೋಡಿನ ವಿಷಯವನ್ನು ಅಣ್ಣು ಗುರೂಜಿ ಹೇಳುತ್ತಾರೆ. ಇಂತಹ ಊರಿನಲ್ಲಿ ಹುಟ್ಟಿ ಬೆಳೆದ ಸುಶೀಲಾ ಕ್ರಾಂತಿಕಾರಳಾದುದರಲ್ಲಿ ಸಂದೇಹವಿಲ್ಲ.

ಸುಶೀಲಳ ವಿದ್ಯಾಭ್ಯಾಸದ ಬಗ್ಗೆ ತಂದೆಯವರು ಬಹಳ ಆಸಕ್ತಿ ವಹಿಸಿದ್ದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ತಂದೆಗಾಗಿ ವರ್ತಮಾನ ಪತ್ರಿಕೆ ಓದುವುದು, ತಂದೆಯು ಹೋಗುತ್ತಿದ್ದ ಸಭೆಗಳಿಗೆ, ಚರ್ಚೆಗಳಿಗೆ ಹೋಗುವುದು ಸುಶೀಲಳ ವಾಡಿಕೆಯಾಗಿತ್ತು.

ಕನ್ನಡ ಶಾಲೆಯೊಂದರಲ್ಲಿ ವಿದ್ಯಾಭ್ಯಾಸವನ್ನು ಪ್ರಾರಂಭಿಸಿದ ಸುಶೀಲಾ ಮದುವೆಯಾದ ನಂತರವೂ ಪತಿಯ ಮತ್ತು ಪಿತನ ಪ್ರೋತ್ಸಾಹದಿಂದ ಸಂಸಾರ ದಲ್ಲಿದ್ದುಕೊಂಡು ಚಳವಳಿಯಲ್ಲೂ ಭಾಗವಹಿಸಿ ಅವಕಾಶ ಸಿಕ್ಕಿದಾಗಲೆಲ್ಲಾ ವ್ಯಾಸಂಗ ವನ್ನು ಮುಂದುವರಿಸಿದರು. ಬೆಳಗಾವಿಯ ವನಿತಾ ವಿದ್ಯಾಲಯದಲ್ಲಿ ಸೇರಿ ಎಸ್. ಎಸ್. ಎಲ್. ಸಿ. ವರೆಗೂ ಮುಗಿಸಿ ಪರೀಕ್ಷೆಗೆ ಹಾಜರಾಗಬೇಕೆಂದಿರುವಾಗ ಜೈಲುವಾಸದಲ್ಲಿರಬೇಕಾಯಿತು. ಬಿಡುಗಡೆಯಾದ ಮೇಲೆ ಬಿಡದೆ ಪರೀಕ್ಷೆಗೆ ಕುಳಿತು ಮೆಟ್ರಿಕ್ ಪರೀಕ್ಷೆಯಲ್ಲಿ (ಎಸ್. ಎಸ್. ಎಲ್. ಸಿ.) ಉತ್ತೀರ್ಣರಾದುದು ಎಲ್ಲರಿಗೂ ಆಶ್ಚರ್ಯವೆನ್ನಿಸಿತು. ಸಂಸ್ಕೃತ ಮತ್ತು ಕನ್ನಡದಲ್ಲಿ ಇವರು ಡಿಗ್ರಿ ಪಡೆದುದು ೧೯೪೪ರಲ್ಲಿ.

ಕಲಿಯುವ ಆಸಕ್ತಿ ಇದ್ದರೆ ವಯಸ್ಸು ಅಡ್ಡಿಯಾಗದು. ಬೇರೆ ವಿಧದ ಅಡ್ಡಿ ಗಳಿದ್ದರೂ ಎದುರಿಸಬಹುದು ಎನ್ನುತ್ತಾರೆ ಸುಶೀಲಾಬಾಯಿ.

ತಮ್ಮ ವಿವಾಹದ ವಿಚಾರವನ್ನು ನೆನೆದು ಹೀಗೆನ್ನುತ್ತಾರೆ. "೧೯೩೦–೩೧ ರಲ್ಲಿ ನಮ್ಮ ತಂದೆಯ ಜೊತೆ ಇದ್ದು ಸ್ವಾತಂತ್ರ್ಯದ ಚಳವಳಿಯಲ್ಲಿ ಉಗ್ರ ಸತ್ಯಾಗ್ರಹ ವನ್ನು ಮಾಡಿ ಜೈಲಿನಲ್ಲಿದ್ದ ಒಬ್ಬ ತರುಣನನ್ನು ತಮ್ಮ ಅಳಿಯನಾಗಿ ಮಾಡಿಕೊಳ್ಳ ಬೇಕೆಂದು ನಮ್ಮ ತಂದೆ ನಿಶ್ಚಯಿಸಿದ್ದರು. ರೈತ ಪರಿಷತ್ತಿಗಾಗಿ ಮುರಗೋಡಿಗೆ ಬಂದಿದ್ದ ಈ ತರುಣ ಶ್ರೀ ಜಯದೇವರಾವ್ ಕುಲಕರ್ಣಿಯವರನ್ನು ನಮ್ಮ ತಾಯಿಗೆ ತೋರಿಸಿ ಇವರೇ ತಾವು ನೋಡಿದ ವರನೆಂದರು. ಉದ್ಯೋಗ ಉತ್ಪನ್ನ ಯಾವು ದನ್ನೂ ನೋಡದೆ ಸ್ವಾತಂತ್ರ್ಯ ಸಂಗ್ರಾಮದ ಸೈನಿಕನೆಂಬ ಕಾರಣದಿಂದಲೇ ಅವರಿಗೆ ನನ್ನನ್ನು ಕೊಟ್ಟು ವಿವಾಹ ಮಾಡಲು ತಾಯಿ ಒಪ್ಪಿಕೊಂಡರು. ರಾಷ್ಟ್ರ ಧ್ವಜದಡಿ ೧೯೩೪ರ ಜೂನಿನಲ್ಲಿ ಮದುವೆಯಾಯಿತು. ಓಲಗ, ವಾದ್ಯ, ಅದ್ದೂರಿಯ ಊಟೋಪಚಾರ ಇದಾವುದೂ ಇಲ್ಲವೇ ಇಲ್ಲ" ಎನ್ನುತ್ತಾರೆ ಸುಶೀಲಾ ಕುಲಕರ್ಣಿ.

ಮದುವೆಯಾದ ನಂತರ ಪುಣೆಯ ಆಯುರ್ವೇದ ಕಾಲೇಜಿಗೆ ಅಧ್ಯಯನಕ್ಕಾಗಿ ಯಜಮಾನರು ಹೋದಾಗ ಸುಶೀಲಾರವರೂ ಪುಣೆಗೆ ಹೋದರು. ಅಲ್ಲಿ ಜಯದೇವ ಕುಲಕರ್ಣಿಯವರೊಡನೆ ಇದ್ದ ಬಾಬಾಚಾರ್ಯ ತೇರದಾಳಕರ, ರಾ. ಹ. ಕಾಳೆ, ಅಣ್ಣು ಗುರೂಜಿಯವರ ತಮ್ಮ ದೇಶಪಾಂಡೆ ಇವರ ಸಹವಾಸದಲ್ಲಿ ಗಂಡನಮನೆ ಸುಶೀಲಾರವರಿಗೆ ಆಶ್ರಮದಂತೆ ಇತ್ತು. ಕಾಳೆಯವರು ಮರಾಠಿಯನ್ನೂ, ದೇಶಪಾಂಡೆಯವರು ಇಂಗ್ಲೀಷನ್ನೂ ಸುಶೀಲಾಗೆ ಕಲಿಸಿದರು. ಸ್ವಯಂಪಾಕಿಗಳಾಗಿ ಶಿಸ್ತಿನಿಂದಿದ್ದ ಪತಿಯಿಂದ ಅಡಿಗೆ ಮಾಡುವುದನ್ನೂ, ಜೀವನದ ಶಿಸ್ತನ್ನೂ ಸುಶೀಲಾ ಕಲಿತರು.

೧೯೩೬ರಲ್ಲಿ ಆಯುರ್ವೇದ ಶಿಕ್ಷಣದ ಡಿಗ್ರಿ ಪಡೆದು ಜಯದೇವರಾವ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಹುಬ್ಬಳ್ಳಿಗೆ ನೌಕರಿಗೆ ಬಂದರು. ಈ ವೇಳೆಗೆ ಸರಿಯಾಗಿ ಪಂತ ಬಾಳೇಕುಂದ್ರಿಯಲ್ಲಿ ಶ್ರೀರಂಗ ಕಾಮತರು ಕರೆದಿದ್ದ ಗುಪ್ತ ಸಭೆಯ ನಿರ್ಣಯದಂತೆ ಜಯದೇವರಾಯರು ಬೆಳಗಾವಿಯ ಜಿಲ್ಲಾ ಕೇಂದ್ರ ಕಾಂಗ್ರೆಸ್ ಕಚೇರಿಯ ಕೆಲಸ ನೋಡಿಕೊಳ್ಳಬೇಕಾಯಿತು. ಸ್ವಾತಂತ್ರ್ಯ ಚಳವಳಿಯ ಗುಪ್ತ ಕೆಲಸಗಳು ನಡೆಯಬೇಕಾದ್ದರಿಂದ ಸುಶೀಲಾ ಮತ್ತು ಜಯದೇವ ಕುಲಕರ್ಣಿಯವರು ಬೆಳಗಾವಿಯಲ್ಲಿ ಒಂದು ಸಣ್ಣ ಓಣಿಯಂತಿದ್ದ ಬೀದಿಯಲ್ಲಿ ಸಂದಿಯೊಂದರಲ್ಲಿ ಚಿಕ್ಕ ಮನೆ ಮಾಡಿ ಜಿಲ್ಲೆಯ ಕೆಲಸ ಸಂಯೋಜನೆ ಬುಲೆಟಿನ್ ಪ್ರಕಟಣೆ, ಹಣ ಸಂಗ್ರಹ ಮುಂತಾದ ಅತ್ಯಂತ ಜವಾಬ್ದಾರಿ ಕೆಲಸಗಳನ್ನು ವಹಿಸಿ ಯಶಸ್ವಿಯಾಗಿ ನಡೆಸಿದರು.

"ಆ ಮನೆ ಎಷ್ಟು ಸಂದಿಯಲ್ಲಿತ್ತೆಂದರೆ ಅಲ್ಲಿಂದ ಈ ಎಲ್ಲಾ ಕೆಲಸಗಳೂ ನಡೆದೀತೆಂದು ಯಾರಿಗೂ ಸಂಶಯ ಬರುವಂತಿರಲಿಲ್ಲ. ರಾತ್ರಿ ಆ ಮನೆಗೆ ಜೀವಕಳೆ. ಕಾರ್ಯಕರ್ತರೆಲ್ಲಾ ಈ ಮನೆಯಲ್ಲೇ ಸೇರಿ ಕ್ರಾಂತಿಕಾರಿ ಚಟುವಟಿಕೆಯ ಯೋಜನೆ, ಸಲಕರಣೆಗಳ ಹೊಂದಾಣಿಕೆ ಮಾಡುತ್ತಿದ್ದುದು. ಅಷ್ಟು ಜನರಿಗೂ ಅಡಿಗೆ ಮಾಡಿ, ರೊಟ್ಟಿ ಕಟ್ಟಿಕೊಡುವುದು ನನ್ನ ಕೆಲಸವಾಗಿತ್ತು" ಎನ್ನುತ್ತಾರೆ ಸುಶೀಲಾರವರು.

ಕೂಡಲೇ ಬೇಕಾಗಿದ್ದ ಹಣದ ವ್ಯವಸ್ಥೆಗಾಗಿ ಸುಶೀಲಾ ತಮ್ಮ ಬಂಗಾರದ ಬಳೆಗಳನ್ನು ಕೊಟ್ಟರು.

"ಕಮಲ ಮತ್ತು ವಿಮಲ ಇಬ್ಬರು ಹೆಣ್ಣುಮಕ್ಕಳು ಹುಟ್ಟಿದ ಮೇಲೆ ನನ್ನ ಅನುಭವವೇನೆಂದರೆ ಬಾಣಂತನಕ್ಕೆ ಬರುವುದು, ಮಗುವನ್ನು ನೋಡಿಕೊಳ್ಳುವುದು, ಇವೆಲ್ಲಾ ಚಳವಳಿಯ ಕಾರ್ಯಕ್ರಮಕ್ಕೆ ಅಡ್ಡಿಯಾಗುವುದನ್ನು ನೋಡಿ ಒಂದು ಗಂಡು ಮಗುವಾಗಬೇಕೆಂಬ ಆಸೆ ಇದ್ದರೂ ಅಂತಹ ಆಸೆ ಮೂರ್ಖತನವೆನ್ನಿಸಿತು. ದೇಶ ಸೇವೆಯು ಇಂತಹ ಆಸೆಗಳಿಂದ ಮೂಲೆ ಪಾಲಾಗುತ್ತದೆಯೆಂದು ಯೋಚಿಸಿ ನಾವಿಬ್ಬರೂ ಕುಟುಂಬ ಯೋಜನೆ ಕೈಗೊಂಡೆವು" ಎಂದು ಸುಶೀಲಾರವರು ತಮ್ಮ ದೇಶಸೇವೆಯ ಧ್ಯೇಯವನ್ನು ನಿರೂಪಿಸುತ್ತಾರೆ.

ಕರ್ನಾಟಕದ ಪ್ರತಿಯೊಂದು ಚಳವಳಿಯಲ್ಲೂ ಬೆಳಗಾವಿಯ ಪಾತ್ರ ಅನಿವಾರ್ಯ. ಹಾಗೆಯೇ ಬೆಳಗಾವಿಯ ಪ್ರತಿಯೊಂದು ಚಳವಳಿಯಲ್ಲಿ ಜಯದೇವ ಕುಲಕರ್ಣಿಯವರ ಪಾತ್ರ ಅನಿವಾರ್ಯ. ಇವರ ಜೊತೆಯಲ್ಲಿ ಪಾತ್ರವಹಿಸಿದ ಅಣ್ಣು ಗುರೂಜಿ ಹೀಗೆ ಹೇಳುತ್ತಾರೆ. "ಸಾಮಾನ್ಯ ಜನರನ್ನೂ ತ್ಯಾಗಕ್ಕೆ ಸಿದ್ಧಮಾಡಿದ ಪೂರ್ಣ ಯಶಸ್ಸು ತಿಲಕರು ಮತ್ತು ಗಾಂಧೀಜಿಯವರಿಗೇ ಸಲ್ಲುವುದು...ಕೋಟ್ಯಾಧೀಶ್ವರರ ಹೆಣ್ಣುಮಕ್ಕಳಲ್ಲೂ ಹಳ್ಳಿಯ ನಿರಕ್ಷರ ಕುಕ್ಷಿಗಳಲ್ಲೂ ಚಿಕ್ಕಮಕ್ಕಳಲ್ಲೂ ದೇಶಾಭಿಮಾನ ತುಂಬಿ ಅವರನ್ನು ದೇಶಕ್ಕಾಗಿ ಬಲಿದಾನ ಮಾಡಲು ಸಾವಿರ ಸಂಖ್ಯೆಯಲ್ಲಿ ಸಿದ್ಧಮಾಡಿದ ಗಾಂಧೀಜಿಯನ್ನು ಒಬ್ಬ ಜಾದೂಗಾರನೆನ್ನಬಹುದು. ನಾವೆಲ್ಲಾ ಅವರ ನೆರಳಲ್ಲಿ ಕೆಲಸ ಮಾಡಿದ್ದೇವೆ ಅಷ್ಟೆ."

೧೯೩೩ರಿಂದ ೨೮ರವರೆಗೆ ವಿದ್ಯಾರ್ಥಿಗಳ ಸಂಘಟನಾ ಕೆಲಸ ನಡೆಯಿತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ವಿದ್ಯಾರ್ಥಿಗಳಲ್ಲಿ ವಿಧಾಯಕ ಕಾರ್ಯದ ಪ್ರವೃತ್ತಿ, ಸ್ವದೇಶೀ ಪ್ರಚಾರ, ಗ್ರಾಮ ಸುಧಾರಣೆಯ ಚಟುವಟಿಕೆಗಳು, ಸಹಕಾರ ಭಾವನೆ, ರಾಷ್ಟ್ರಾಭಿಮಾನ ಇತ್ಯಾದಿ ಕಾರ್ಯಕ್ಕೆ ಜಯದೇವರಾವ್ ಕುಲಕರ್ಣಿ ಪ್ರಮುಖ ಕಾರ್ಯಕರ್ತರಲ್ಲೊಬ್ಬ ರಾಗಿದ್ದರು.

ಜಯದೇವ್‌ರವರು ನಿಪ್ಪಾಣಿಯಲ್ಲಿ ತಿಲಕ ರಾಷ್ಟ್ರೀಯ ಶಿಕ್ಷಣ ನೀಡಿದರು. ಹುದಲಿಯ ಕುಮಾರಿ ಆಶ್ರಮದ ನಿಷ್ಠೆಯ ಕಾರ್ಯಕರ್ತರಾಗಿ ಕೆಲಸ ಮಾಡಿದರು. ಅಣ್ಣಾ ಗುರೂಜಿ, ಜಯದೇವ ಕುಲಕರ್ಣಿ, ಶ್ರೀರಂಗ ಕಾಮತ್ ಮುಂತಾದ ಮುಖಂಡರ ಶ್ರಮದಿಂದ ಬೆಳಗಾವಿ ಜಿಲ್ಲೆಯಲ್ಲಿ ಬೆಳಗಾಂ, ಪಾಚ್ಛಾಪುರ, ಸಂಕೇಶ್ವರ, ಹುದಲಿ, ನಿಪ್ಪಾಣಿ, ಬೈಲಹೊಂಗಲ ಈ ಸ್ಥಳಗಳಲ್ಲಿ ಜಾಹೀರ ಸಭೆಗಳಾಗಿ ಸಾವಿರಾರು ಜನರು ಸ್ವಾತಂತ್ರ್ಯದ ಪ್ರತಿಜ್ಞೆ ಸ್ವೀಕರಿಸಿದರು. ಆ ದಿನಗಳ ದೃಶ್ಯವನ್ನು ನೋಡಿ ಗಾಂಧಿಯವರು "ದೇಶದ ನಾಡಿಪರೀಕ್ಷೆಯಲ್ಲಿ ಜನರು ಉತ್ತೀರ್ಣರಾಗಿದ್ದಾರೆ" ಎಂದು ಸಮಾಧಾನಪಟ್ಟು ಜನರಲ್ಲಿ ವಿಶ್ವಾಸವಿಟ್ಟು ೧೯೩೦ರ ಉಪ್ಪಿನ ಸತ್ಯಾಗ್ರಹವನ್ನು ಘೋಷಿಸಿದರು. ಏಪ್ರಿಲ್ ೧೩, ೧೯೩೦ರಿಂದ ಕಾರ್ಯಾರಂಭವಾಯಿತು. ಆ ದಿನವೇ ಚಂದಘಡದ ಸಭೆಯಲ್ಲಿ ಭಾಷಣ ಮಾಡಿ ಉಪ್ಪು ಮಾರಿದ್ದಕ್ಕಾಗಿ ಜಯದೇವ ಕುಲಕರ್ಣಿಯನ್ನು ಬಂಧಿಸಿ ಹಿಂಡಲಗಿ ಜೈಲಿಗೆ ಕಳುಹಿಸಿದರು.

ಬೆಳಗಾವಿಯ ಚಳವಳಿ ಅತ್ಯಂತ ಯಶಸ್ವಿಯಾಗಿ ಕರ್ನಾಟಕವು ಗುಜರಾತಿಗಿಂತ ಒಂದು ಕೈ ಮೇಲು ಎಂಬ ಬ್ರಿಟಿಷ್ ಸರ್ಕಾರದ ವರದಿಯನ್ನು ಕೇಳಿ ಮಹಾತ್ಮಾಜಿ ಯವರು ಮೆಚ್ಚಿಗೆಯನ್ನು ವ್ಯಕ್ತಪಡಿಸಿ ಗಂಗಾಧರರಾವ್ ದೇಶಪಾಂಡೆಯವರಿಗೆ ಪತ್ರ ಬರೆದರು. ಜಯದೇವ ಕುಲಕರ್ಣಿಯವರಂತಹ ಮುಖಂಡರಿದ್ದುದರಿಂದಲೇ ಇದು ಸಾಧ್ಯವಾಯಿತೆಂಬುದು ಮುಖ್ಯ ಸಂಗತಿ.

ಜೈಲಿನಲ್ಲಿದ್ದಾಗ ಭಗವದ್ಗೀತಾ ಪುಸ್ತಕವನ್ನು ಓದಲು ಬಿಡಲಿಲ್ಲವಾದ್ದರಿಂದ ಜಯದೇವ ಕುಲಕರ್ಣಿಯವರು ಐದು ದಿನ ಉಪವಾಸ ಮಾಡಿದರು. ಜೈಲಧಿಕಾರಿ ಗಳನ್ನು ಲೆಕ್ಕಿಸದೆ ಪ್ರಾರ್ಥನೆ ಮಾಡಿದ್ದಕ್ಕಾಗಿ ಜಯದೇವ ಕುಲಕರ್ಣಿಯವರನ್ನು ಕತ್ತಲು ಕೋಣೆಯಲ್ಲಿಟ್ಟು ಗಂಜಿ ಸಜಾ ಕೊಟ್ಟರು.

ವೇಷ ಮರೆಸಿಕೊಂಡು ಪೋಲೀಸರಿಂದ ತಪ್ಪಿಸಿಕೊಂಡ ಒಂದು ಸಂದರ್ಭವನ್ನು ಸುಶೀಲಾರವರು ಹೀಗೆ ಹೇಳುತ್ತಾರೆ.

"ಬಾಬುರಾವ್ ಕಾಮತರು ಕಣಬರಗಿಯಲ್ಲಿ ತಂತಿ ಕತ್ತರಿಸಿ ಬಂಧಿತರಾದಾಗ ಅವರ ಜೇಬಿನಲ್ಲಿದ್ದ ಒಂದು ಚೀಟಿಯ ಆಧಾರದಿಂದ ಪೋಲೀಸರು ಅದೇ ಸಂಜೆ ನಮ್ಮ ಮನೆಗೆ ಮುತ್ತಿಗೆ ಹಾಕಿದರು. ಜಯದೇವರಾಯರನ್ನು ಹಿಡಿಯಲು ಬಂದ ಪೋಲೀಸರಿಗೆ ನಿರಾಸೆ ಏಕೆಂದರೆ ಜಯದೇವರಾಯರು ಸಿಗಲಿಲ್ಲ. ಹುಬ್ಬಳ್ಳಿಗೆ ಪಾರಾ ಗಿದ್ದರು. ಪೋಲೀಸರಿಂದ ನಮ್ಮ ಮನೆಯ ಝಡತಿ ಆಗಾಗ ನಡೆಯುತ್ತಿತ್ತು. ೨೦-೧೧-೪೨ರಲ್ಲಿ ವೆಂಗುರ್ಲಾದಲ್ಲಿ ಟಪಾಲು ಲೂಟಿ ಆದ ದಿನ ನಮ್ಮ ಮನೆಯನ್ನು,

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಬಾಳೇಕುಂದ್ರಿಯ ನಮ್ಮ ಭಾವನ ಮನೆಯನ್ನೂ ಝಡತಿ ಮಾಡಿದರು. ಈ ಎಲ್ಲಾ ವಿಷಯದ ವಿವರ ಮೊದಲೇ ತಿಳಿದಿದ್ದ ನಮ್ಮ ಯಜಮಾನರು ನನ್ನನ್ನು ಹುಬ್ಬಳ್ಳಿಗೆ ಬರಲು ಹೇಳಿದ್ದರು. ನಾನು ರೈಲಿನಲ್ಲಿ ಹೋಗುತ್ತಿರುವಾಗ ಧಾರವಾಡದಲ್ಲಿ ನನ್ನ ಡಬ್ಬಿಗೇ ಜರಿ ರುಮಾಲು, ಪೇಟಾ, ಕೋಟು, ಧೋತರ ತೊಟ್ಟು ಬಂದ ಇವರನ್ನು ನಾನು ಗುರ್ತಿಸಲಿಲ್ಲ. ಹುಬ್ಬಳ್ಳಿಯಲ್ಲೇ ರೈಲಿನಿಂದಿಳಿದು ಇವರೇ ಮಾತಾಡಿಸಿದಾಗ ಜಯದೇವರಾಯರೇ ನನ್ನ ಡಬ್ಬಿಯಲ್ಲೇ ಕುಳಿತು ಬಂದವರು ಎಂದು ಅಚ್ಚರಿಪಟ್ಟೆ."

೧೯೩೦-೩೧ರ ಆಂದೋಲನದಲ್ಲಿ ಪ್ರಮುಖ ಪಾತ್ರ ವಹಿಸಿದ ಕಾರ್ಯಕರ್ತರಲ್ಲಿ ಬೆಳಗಾವಿಯಲ್ಲಿ ಅಣ್ಣು ಗುರೂಜಿಯವರು ಉಲ್ಲೇಖಿಸಿರುವ ಹೆಸರುಗಳಲ್ಲಿ ಗಂಗಾಧರ ರಾವ್ ದೇಶಪಾಂಡೆ ಕೃಷ್ಣರಾವ್ ಮತ್ತು ಜೀವನರಾವ್ ಯಾಳಗಿ, ದಯಾನಂದ ಅರಳಿಕಟ್ಟಿ ಇವರ ಜೊತೆಗೆ ಜಯದೇವರಾಯರ ಹೆಸರೂ ಉಲ್ಲೇಖವಾಗಿದೆ.

"೧೯೩೨ರಲ್ಲಿ ಅನೇಕ ಪ್ರಮುಖ ಕಾರ್ಯಕರ್ತರು ಬಂಧಿತರಾದಾಗ ಜಯದೇವ ಕುಲಕರ್ಣಿ ಪೋಲೀಸರ ಕಣ್ಣಿಗೆ ಬೀಳದೆ ಭೂಗತರಾಗಿ ಚಳವಳಿಯ ಸಂಘಟನೆ ಮಾಡಿದರು. ಪ್ರತಿದಿನ ಬುಲೆಟಿನ್ ಹೊರಡಿಸಿ ಜನರನ್ನು ಕಾಯಿದೆ ಭಂಗಕ್ಕೆ ಪ್ರಚೋದಿಸಿದರು. ಬುಲೆಟಿನ್ ಹಂಚಲು ಸ್ವಯಂಸೇವಕರನ್ನು ತಯಾರು ಮಾಡಿದರು. ವಾರಕ್ಕೊಮ್ಮೆ ಪ್ರಭಾತ ಫೇರಿ, ಧ್ವಜವಂದನೆ ಕಾರ್ಯಕ್ರಮಗಳನ್ನೇರ್ಪಡಿಸಿ ಸ್ವಯಂಸೇವಕರು ಜೈಲಿಗೆ ಹೋಗುವಂತೆ ಮಾಡಿದರು" ಎನ್ನುತ್ತಾರೆ ಪ್ರಮುಖ ಮುಖಂಡ ಅಣ್ಣು ಗುರೂಜಿ.

ವೃತ್ತಪತ್ರಿಕೆಗಳ ಮೇಲೆ ಬ್ರಿಟಿಷ್ ಸರ್ಕಾರ ನಿರ್ಬಂಧ ಹಾಕಿದಾಗ ಬುಲೆಟಿನ್‌ಗಳಿಗೆ ಮಹತ್ವ ಬಂದಿತ್ತು. ಪತ್ರಿಕೆಗಳನ್ನು ಸೈಕ್ಲೋಸ್ಟೈಲ್ ಮಾಡಿ ಪೋಲೀಸರಿಗೆ ಕಣ್ಣುಮುಚ್ಚಾಲೆ ಆಡಿಸಿ ಸ್ವಯಂಸೇವಕರು ಹಂಚುತ್ತಿದ್ದ ಈ ಪತ್ರಿಕೆಗಳನ್ನು ಜನರು ಬಹಳ ಆಸಕ್ತಿಯಿಂದ ಓದುತ್ತಿದ್ದರು.

ಈ ಬುಲೆಟಿನ್‌ಗಳನ್ನು ಜಯದೇವ ಕುಲಕರ್ಣಿಯವರು ಶಹಾಪುರದ ಒಂದು ಗುಪ್ತ ಸ್ಥಳದಿಂದ ಹೊರಡಿಸುತ್ತಿದ್ದರು. ಪೋಲೀಸರಿಗೆ ಸಂಶಯ ಬಂದು ಜಯದೇವ ರಾಯರನ್ನೂ ಸೈಕ್ಲೋಸ್ಟೈಲ್ ಮೆಷಿನನ್ನೂ ಹುಡುಕುವ ಪ್ರಯತ್ನಪಟ್ಟರು. ಜಯದೇವ ಕುಲಕರ್ಣಿಯವರನ್ನು ಸೆರೆ ಹಿಡಿಯುವ ಸಮಾಚಾರ ತಿಳಿದಾಗ ಅವರು ಸೈಕ್ಲೋಸ್ಟೈಲ್ ಮೆಷಿನನ್ನು ತಮ್ಮ ಸೋದರಮಾವ ಗಂಗಾಧರರಾವ್ ಕುಲಕರ್ಣಿಯವರ ನೆರೆಮನೆಯ ನೆಲದಲ್ಲಿ ಹುಗಿದಿಟ್ಟರು. ಈ ಬಗ್ಗೆ ಸುಶೀಲಾ ಕುಲಕರ್ಣಿಯವರು ವಿವರ ಕೊಡುತ್ತಾರೆ. "೨೧-೨-೪೩ಕ್ಕೆ ಶ್ರೀರಂಗ ಕಾಮತರನ್ನೂ ನನ್ನ ಯಜಮಾನರನ್ನೂ ಬಂಧಿಸಿ ನಮ್ಮ ಮನೆಯನ್ನು ಟೈಪ್‌ರೈಟರ್ ಮಿಷನ್‌ಗಾಗಿ ಜಪ್ತಿ ಮಾಡಿದರು. ಭಾರಿ ಸಂಖ್ಯೆಯಲ್ಲಿ ಬಂದ ಪೋಲೀಸರು ಕಣಜದಲ್ಲಿದ್ದ ಭತ್ತವನ್ನ ಓಣಿಗೆ ಚೆಲ್ಲಿ ಸಾಮಾನುಗಳನ್ನೆಲ್ಲಾ ಚಲ್ಲಾಪಿಲ್ಲಿಯಾಗಿ ಎಸೆದರು. ಮುಲ್ಲಪ್ಪ ಎಂಬ ಬಾಲಕನನ್ನು ಬಂಧಿಸಿ ಅವನ ಮೇಲೆ ಸೀಮೆಎಣ್ಣೆ ಸುರಿದು ಕಡ್ಡಿ ಗೀಚುತ್ತೇವೆಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಹೆದರಿಸಿದಾಗ, ಅವನು ಬೆದರಿಕೆಯಿಂದಾಗಿ ಕೆಲವು ವಿವರಗಳನ್ನು ಕೊಟ್ಟನು. ಜಯದೇವರಾಯರ ಹೆಂಡತಿಯೂ ಇದರಲ್ಲಿ ಪಾತ್ರವಹಿಸಿದ್ದಾಳೆಂದು ರಾಮನವಮಿ ದಿನ ನಾನು ಮಕ್ಕಳೊಂದಿಗೆ ಊಟಕ್ಕೆ ಕುಳಿತಾಗ ನನ್ನನ್ನು ಬಂಧಿಸಿ ಮೋಟಾರಿನಲ್ಲಿ ಹಾಕಿದರು. ಕ್ಯಾಂಪ್ ಲಾಕಪ್ಪಿಗೆ ಒಯ್ದು ನನ್ನನ್ನು ಆಗಾಗ ಆಫೀಸಿಗೆ ಕರೆಯಿಸಿ ಕೊಂಡು 'ಗುಪ್ತ ಚಳವಳಿಯ ಪ್ರಮುಖರು ಯಾರು ? ಅಣ್ಣು ಗುರೂಜಿ, ವಾಮನ ಬಿದರಿ ಎಲ್ಲಿದ್ದಾರೆ ?' ಎಂದು ಪ್ರಶ್ನಿಸಿ ಪೀಡಿಸಿದರು. ಅವರು ಕೊಡುತ್ತಿದ್ದ ಚಿತ್ರ ಹಿಂಸೆಯನ್ನು ಸಹಿಸುತ್ತಾ ಏನೂ ಗೊತ್ತಿಲ್ಲಾ ಎಂಬುದೇ ನನ್ನ ಉತ್ತರವಾಗಿತ್ತು."

೧೯೪೩ ಸೆಪ್ಟೆಂಬರ್ ೩೦ಕ್ಕೆ ಜಯದೇವ ಕುಲಕರ್ಣಿಯನ್ನು ಬಂಧಿಸಿ ಸಾಂಗಲಿ ಜೈಲಿಗೆ ಕಳುಹಿಸಲಾಯಿತು. ವಿಚಾರಣೆ ಇಲ್ಲದೆ ಈ ಸಲ ಬಂಧಿಸಿದ್ದರಿಂದ ಉಪವಾಸ ವ್ರತ ಕೈಗೊಂಡರು.

"ಯುದ್ಧವಿರೋಧಿ ಘೋಷಣಾ ಚಳವಳಿಯಲ್ಲಿ ಬೆಳಗಾವಿ ಜಿಲ್ಲೆಯು ಕರ್ನಾಟಕಕ್ಕೆ ಮಾತ್ರವಲ್ಲ ಇಡೀ ಭಾರತಕ್ಕೆ ಪ್ರಥಮ ಸ್ಥಾನ ಗಳಿಸಿತು" ಎನ್ನುತ್ತಾರೆ ಅಣ್ಣು ಗುರೂಜಿಯವರು.

ಸುಶೀಲಾರವರು ಮುಂದುವರಿಸುತ್ತಾರೆ. "ಸಿಕ್ಕಲ್ಲಿ ಗುಂಡಿಕ್ಕಿ ಕೊಲ್ಲಲು ಪೋಲೀಸರಿಗೆ ಹುಕುಂ ಇತ್ತು. ಕೊನೆಯ ತ್ಯಾಗಕ್ಕೆ, ಜೀವದ ಬಲಿದಾನಕ್ಕೆ ಬಹಿರಂಗ ವಾಗಿ ಬಂದು ನಿಲ್ಲುವುದು ಕೆಲವೇ ಕೆಲವು ದೇಶಭಕ್ತರಿಗೆ ಮಾತ್ರ ಸಾಧ್ಯವಾಗಿತ್ತು. ಗುಪ್ತ ಕಾರ್ಯಗಳನ್ನು ನಡೆಸುತ್ತಿದ್ದ ಭೂಗತ ಕಾರ್ಯಕರ್ತರನ್ನು ಕೊಲ್ಲುವುದೇ ಪೋಲೀಸರ ಹವಣಿಕೆಯಾಗಿತ್ತು. ಗಂಡನನ್ನು ಇಂತಹ ಬಲಿದಾನಕ್ಕೆ ಒಪ್ಪಿಸಿ ನಾವು ಹೆಂಗಸರು ಧ್ವಜವಂದನೆ, ಪ್ರಭಾತ ಫೇರಿ, ಪತ್ರಿಕೆ ಹಂಚುವುದು ಮುಂತಾದವುಗಳನ್ನು ಮಾಡಿ ಜೈಲಿಗೆ ಹೋಗುತ್ತಿದ್ದೆವು. ಗಂಡನ ಪತ್ತೆ ಕೊಡಬೇಕೆಂದು ನಾನಾ ವಿಧ ಹಿಂಸೆ ಮಾಡುತ್ತಿದ್ದರು."

"ಭೂಗತರಾದ ಕಾರ್ಯಕರ್ತರು ಈ ಅವಧಿಯಲ್ಲಿ ಎಲ್ಲವನ್ನೂ ನಿರೀಕ್ಷಿಸುತ್ತಾ ಪೋಲೀಸರ ಕೈಗೆ ಸಿಗದಂತೆ ಸುರಕ್ಷಿತ ಸ್ಥಳಗಳಲ್ಲಿ ಇದ್ದುಕೊಂಡು ಸಂಘಟನೆ ಹಾಗೂ ಕಾರ್ಯಯೋಜನೆ ಮಾಡುವುದರಲ್ಲಿ ತೊಡಗಿದ್ದೆವು" ಎಂದು ಜಯದೇವ ಕುಲಕರ್ಣಿ ಯವರು ಅಂದಿನ ಅವರ ಸ್ಥಿತಿಯನ್ನು ವಿವರಿಸುತ್ತಾರೆ.

"ಒಬ್ಬರಿಗೊಬ್ಬರು ಭೆಟ್ಟಿಯಾಗುವಂತಿಲ್ಲ. ರೈಲು, ಬಸ್ಸುಗಳಲ್ಲಿ ಪ್ರಯಾಣ ಮಾಡುವಂತಿರಲಿಲ್ಲ. ಟಪಾಲಿನಲ್ಲಿ ಪತ್ರ ಹಾಕುವಂತಿಲ್ಲ. ಕೆಲವರಾದರೂ ಒಂದೆಡೆ ಸೇರಿ ವಿಚಾರ ವಿನಿಮಯ ಮಾಡುವಂತಿರಲಿಲ್ಲ. ನಮ್ಮ ವೇಷಭೂಷಣಗಳನ್ನು ಬದ ಲಾಯಿಸಿಕೊಂಡು ಹೊರಗೆ ಬರುತ್ತಿದ್ದೆವು. ಪತ್ರ ವ್ಯವಹಾರದಲ್ಲಿ ಬೇರೆ ಹೆಸರು ಇಟ್ಟುಕೊಂಡೆವು. ಅಲ್ಲಲ್ಲಿ ಹೊಸ ಪೋಲೀಸು ಠಾಣೆಗಳು ನಿರ್ಮಾಣವಾಗುತ್ತಿದ್ದವು. ರಾತ್ರಿ ಹಗಲೆನ್ನದೆ ಪೋಲೀಸ್ ಜೀಪುಗಳು ಓಡಾಡಹತ್ತಿದವು.

ಚಲೇಜಾವ್ ಚಳವಳಿಯ ಕಾಲ ಅತಿ ಕಠಿಣವಾಗಿತ್ತು. ನೀರು ಕೂಳು ಇಲ್ಲದೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಗುಡ್ಡ ಗುಡ್ಡಗಳಲ್ಲಿ ಅಲೆದಾಡುತ್ತಿದ್ದೆವು. ಮನೆಯವರಿದ್ದರೂ ಮನೆಯಲ್ಲಿ ಊಟವಿಲ್ಲ. ನಿದ್ದೆಗೆ ಸ್ಮಶಾನವೋ ಹೊಲಗದ್ದೆಯೋ ಕಂದರವೋ ನಿಶ್ಚಿತವಿಲ್ಲ. ಉರಿಬಿಸಿಲಿನ ತಾಪವಿರಲಿ, ಮಳೆ ಬೀಳುತ್ತಿರಲಿ ದಿನಕ್ಕೊಂದು ಸ್ಥಳವನ್ನು ಬದಲಿಸಿ ಮಲಗುತ್ತಿದ್ದೆವು. ಪೋಲೀಸರಿಗೆ ಸುಳಿವು ಹತ್ತಬಾರದೆಂದು ರಾತ್ರಿ ಕತ್ತಲಲ್ಲಿ ಬ್ಯಾಟರಿ ಹಿಡಿಯುವುದು ನಿಷೇಧವಾಗಿತ್ತು. ಹಾಡುವಂತಿಲ್ಲ. ಎತ್ತರ ಧ್ವನಿಯಲ್ಲಿ ಮಾತಾಡುವಂತಿಲ್ಲ. ಹೀಗೆ ಒಂದೂವರೆ ವರ್ಷ ಅಜ್ಞಾತವಾಸ ಮಾಡಿದ್ದೇವೆ."

ಬೆಳಗಾವಿ ಜಿಲ್ಲೆಯ ಗುಪ್ತ ಸಭಾ ಸಂಘಟನೆಗಳು ಎಲ್ಲಿ ಹೇಗೆ ನಡೆಯುತ್ತಿತ್ತೆಂದು ಅಣ್ಣು ಗುರೂಜಿ ಹೇಳುತ್ತಾರೆ.

"ಮೊದಲನೇ ಸಭೆ ಆಗಸ್ಟ್ ಮೂರನೇ ವಾರ ಪಂತ ಬಾಳೇಕುಂದ್ರಿಯ ದೇವ ಸ್ಥಾನದಲ್ಲಿ ನಡೆಯಿತು. ಈ ಸಭೆಗೆ ಎಂ. ಪಿ. ಪಾಟೀಲ, ನಾನು, ಜಯದೇವ ಕುಲಕರ್ಣಿ, ವಾಮನರಾವ್ ಬಿದರಿ, ಶ್ರೀರಂಗ ಕಾಮತ್, ವೆಂಕಣ್ಣ ಮಠದ ಇವರೆಲ್ಲ ಇದ್ದೆವು. ಎರಡನೇ ಗುಪ್ತ ಸಭೆ ಗೋಕಾಕಿನ ಘೋಡಗೇರಿಯಲ್ಲಿ ಸೇರಿತು. ನಾನು, ವಾಮನ ಬಿದರಿ, ಶ್ರೀರಂಗ ಕಾಮತ ಇದ್ದೆವು. ಮೂರನೇ ಸಭೆ ಜಮಖಂಡಿಯಲ್ಲಿ ನಡೆಯಿತು. ನಾಲ್ಕನೆಯದು ಕೊಲ್ಲಾಪುರದಲ್ಲಿ. ನನ್ನ ಜೊತೆ ಶ್ರೀರಂಗ ಕಾಮತ ಇದ್ದರು. ಐದನೇ ಸಭೆ ಧಾರವಾಡದಲ್ಲಿ ನಡೆಯಿತು. ಈ ಸಭೆಯ ತೀರ್ಮಾನದಂತೆ ಮುಂಬಯಿಯ ಕಾರ್ಯಕರ್ತರೊಡನೆ ಸಂಪರ್ಕವಿಟ್ಟುಕೊಳ್ಳಲು ಶ್ರೀರಂಗ ಕಾಮತ ಮತ್ತು ಜಯದೇವ ಕುಲಕರ್ಣಿ ಮುಂಬಯಿಗೆ ಹೋಗುವುದೆಂದಾಯಿತು. ಇದಿಷ್ಟು ಸಭೆಗಳು ನಡೆದಿದ್ದೂ ಯಾರಿಗೂ ತಿಳಿಯದು."

ಕ್ರಾಂತಿಕಾರರ ಚಟುವಟಿಕೆಗಳು ಉಗ್ರವಾದವು. ಟೆಲಿಫೋನ್, ತಂತಿ, ರೈಲ್ವೆ ಲೈನಿನ ಮತ್ತು ಹೆದ್ದಾರಿಗಳ ತಂತಿಗಳು ಕತ್ತರಿಸಲಾಗಿ ಕಂಬಗಳು ಪಟಪಟ ಬಿದ್ದವು. ಸರ್ಕಾರ ಗಾಬರಿಗೊಂಡಿತು. "ದೇಶಭಕ್ತಿಯ ಸೋಮರಸವನ್ನುಂಡು ತಾಂಡವ ವಾಡುತ್ತಿದ್ದ ಕ್ರಾಂತಿವೀರರನ್ನು ಹಿಡಿಯುವುದು ಸರ್ಕಾರಕ್ಕೆ ಸಾಧ್ಯವಾಗಲಿಲ್ಲ."

"ಸರ್ಕಾರಕ್ಕೆ ಮಣಿಯದ ಜಿಲ್ಲೆ, ಭಾರಿ ಪುಂಡ ಜಿಲ್ಲೆ ಬೆಳಗಾವಿ ಎಂದಾಯಿತು" ಎನ್ನುತ್ತಾರೆ ಅಣ್ಣು ಗುರೂಜಿ.

ಶ್ರೀರಂಗ ಕಾಮತರು, ಜಯದೇವ ಕುಲಕರ್ಣಿ ಇವರಿಬ್ಬರು ಒಂದೇ ದಿನ ನಾಲ್ಕು ರೈಲ್ವೆ ಸ್ಟೇಷನ್‌ಗಳನ್ನು ಭಸ್ಮ ಮಾಡುವ ಯೋಜನೆ ಹಾಕಿಕೊಂಡು ಯಶಸ್ವಿ ಯಾದರು. ಬೇರೆ ಯಾವ ಚಳವಳಿಗೂ ಹೆಚ್ಚು ಹೆದರದ ಬ್ರಿಟಿಷ್ ಸರ್ಕಾರ ತಂತಿ ಕತ್ತರಿಸುವ ಕಾರ್ಯಕ್ರಮದಿಂದ ನಡುಗಿತು. ಯಾಳಗಿ ತಂಡದವರು ಮದ್ಯದ ಸಾರಾಯಿ ಪೀಪಾಯಿಗಳನ್ನು ಸುಟ್ಟರು. ಇಂತಹ ಕ್ರಾಂತಿ ಕೇಂದ್ರದ ಬೆಳಗಾವಿಯ ವಾತಾವರಣದಲ್ಲಿ ಜಯದೇವ ಕುಲಕರ್ಣಿಯವರ ಪತ್ನಿ ಸುಶೀಲಾರವರ ಪಾತ್ರ ಮಹಿಳೆಯರ ಪರವಾಗಿ ಅದ್ವಿತೀಯವಾಗಿತ್ತು.

"ಮನೆ ಮಕ್ಕಳು, ಊಟ ಬಟ್ಟೆ ಇದಾವುದರ ಚಿಂತೆಯೂ ನಮಗೆ ಇದ್ದಿಲ್ಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಚಳವಳಿಯ ಮಾತೇ ಸದಾ ನಡೆಯುತ್ತಿತ್ತು. ಕಾರ್ಯಕ್ರಮದ ಚಿಂತನೆಯೇ ಇರುತ್ತಿತ್ತು" ಎನ್ನುತ್ತಾರೆ ಸುಶೀಲಾಬಾಯಿ.

ಕ್ರಾಂತಿಕಾರರನ್ನು ಎಲ್ಲಿ ಬಂಧಿಸುತ್ತಾರೆ, ಯಾವ ಜೈಲಿಗೆ ಕಳುಹಿಸುತ್ತಾರೆಂಬುದು ತಿಳಿಯುತ್ತಿರಲಿಲ್ಲ. ಅಂತಹ ಒಂದು ಘಟನೆಯನ್ನು ನೆನೆದು ಸುಶೀಲಾರವರು ಹೇಳುತ್ತಾರೆ. "೧೯೪೩ರಲ್ಲಿ ಒಂದು ದಿನ ಅತಿ ಪ್ರಚಂಡ ಪ್ರಮುಖರೆಂದು ಜಯದೇವರಾಯರನ್ನು, ಶ್ರೀರಂಗ ಕಾಮತರನ್ನು. ಬೆಳಗಾವಿಯ ಕೇಳಕರಬಾಗ್‌ನಲ್ಲಿದ್ದ ಶ್ರೀನಿವಾಸ ಕುಲಕರ್ಣಿಯವರ ಮನೆಯಲ್ಲಿದ್ದಾಗ ಸೆರೆ ಹಿಡಿದರು. ಕ್ಯಾಂಪ್ ಲಾಕಪ್‌ನಲ್ಲಿ ಹದಿನೈದು ದಿನ ಇಟ್ಟು ಹಿಂಡಲಗಿ ಜೈಲಿಗೆ ಕಳುಹಿಸಿದರು. ಮುಂದೆ ಹಿಂಡಲಗಿಯಿಂದ (ನಮ್ಮ ಯಜಮಾನರು) ಜಯದೇವರಾಯರನ್ನು ಪಿಸ್ತೂಲು ಪ್ರಕರಣದ ತಪಾಸಣೆಗಾಗಿ ಗೋಟೂರು ಬಂಗಲೆಗೆ ಕಳುಹಿಸಿದರು. ಕೈಗೆ ಬೇಡಿ ಹಾಕಿ, ಮಿಲಿಟರಿ ಮೋಟಾರಿನಿಂದ ರಾತ್ರಿ ೨ ಗಂಟೆಗೆ ಅವರನ್ನು ಅಲ್ಲಿಗೆ ಕರೆದುಕೊಂಡು ಹೋದರು. ಇನ್‌ಸ್ಪೆಕ್ಟರ್‌ರವರು ಜಯದೇವರಾಯರ ಕಾಲಿಗೂ ಬೇಡಿ ಹಾಕಿಸಿ ಪೋಲಿಸರು ಇವರಿಗೆ ಹಗ್ಗ ಕಟ್ಟಿ, ಹಗ್ಗವನ್ನು ಹಿಡಿದು ನಿಲ್ಲುವಂತೆ ಮಾಡಿದರು. ಸಶಸ್ತ್ರ ಪೋಲೀಸರನ್ನು ಸುತ್ತ ಕಾವಲು ಇರಿಸಿದರು."

ಜಯದೇವ ಕುಲಕರ್ಣಿಯವರನ್ನು ನೋಡಿ ಪೋಲೀಸ್ ಇನ್‌ಸ್ಪೆಕ್ಟರನೊಬ್ಬನು ಚಳವಳಿಯ ಅವರ ಸಾಮರ್ಥ್ಯವನ್ನು ಕಂಡು ಹೀಗೆ ಹೇಳಿದನಂತೆ. "೨೫೦ ಪೌಂಡು ಗಾತ್ರದ ನನ್ನ ದೇಹವಿದ್ದಿದ್ದರೆ ನೀವು ಬ್ರಿಟಿಷ್ ಸರ್ಕಾರವನ್ನು ಹಾರಿಸಿಬಿಡುತ್ತಿದ್ದಿರಿ" ಅದಕ್ಕೆ ಕುಲಕರ್ಣಿಯವರು "ನಮ್ಮ ಹೋರಾಟದಲ್ಲಿ ದೇಹಕ್ಕಲ್ಲ ಬುದ್ಧಿ ಭಾವನೆಗೆ ಮಹತ್ವ" ಎಂದರಂತೆ ಇವರಂತಹ ಚಾಣಾಕ್ಷ ಕಾರ್ಯಕರ್ತರಿದ್ದುದರಿಂದಲೇ ಚಳವಳಿಯ ಸಂಘಟನೆ ಸಾಧ್ಯವಾಯಿತು.

"ಕೇವಲ ಐದು ಅಡಿ ಎತ್ತರದ ಬಡಕಲು ದೇಹದ ಮನುಷ್ಯರಾದ ಜಯದೇವ ಕುಲಕರ್ಣಿಯವರಿಗೆ ಸರ್ಕಾರ ಇಷ್ಟೊಂದು ಹೆದರಿತ್ತು!" ಎನ್ನುತ್ತಾರೆ ಅಣ್ಣು ಗುರೂಜಿಯವರು. ಬ್ರಿಟಿಷ್ ಸರ್ಕಾರದ ಅಧಿಕಾರಿಗಳಿಂದ ಜಯದೇವರಾಯರಿಗೆ ಗೌರವದಿಂದ ಪ್ರಶ್ನೆ ಹಾಕಲಾಯಿತು "ನೀವು ಸುಮ್ಮನೆ ಪಿಸ್ತೂಲು ಮತ್ತು ಟೈಪ್‌ರೈಟರ್ ಕೊಟ್ಟುಬಿಡಿರಿ. ವಿನಾಕಾರಣ ಹದಿನೈದು ವರ್ಷ ಜೈಲಿನಲ್ಲಿ ಏಕೆ ಕೊಳೆಯುವಿರಿ? ನಿಮಗಂತೂ ಸ್ವರಾಜ್ಯ ಸಿಗುವುದಿಲ್ಲ. ಇದು ಖಂಡಿತ. ಆದುದರಿಂದ ಬೇಗ ಬಿಡುಗಡೆ ಹೊಂದುವ ಹಾದಿ ಹುಡುಕಿರಿ" ಎಂದ ಬ್ರಿಟಿಷ್ ಅಧಿಕಾರಿಯ ಉಪದೇಶವನ್ನು ಕೇಳಿ ಜಯದೇವರಾಯರು,

"ಪಿಸ್ತೂಲು, ಟೈಪ್‌ರೈಟರ್‌ಗಳನ್ನು ನಿಮಗೆ ಕೊಡಲು ನಮ್ಮ ಜನ ಕುಸಿದು ಕುಳಿತಿಲ್ಲ. ನನ್ನ ಬಳಿ ಇದ್ದುದು ನಿಜ. ಹಸ್ತಾಂತರ ಹೊಂದುತ್ತಿವೆ. ನಿಮಗೆ ಸಿಗಲಾರದು" ಎಂದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಬಿಡುಗಡೆಯ ಆಮಿಷಕ್ಕೆ ಜಯದೇವರಾಯರು ಬಲಿಯಾಗದಿದ್ದುದನ್ನು ಕಂಡು ಬ್ರಿಟಿಷ್ ಸಾಹೇಬರು ನಿರಾಶರಾದರು. ಬೆಳಗಾವಿ ಲಾಕಪ್ಪಿಗೆ ಮತ್ತೆ ಕಳಿಸಿ ಮತ್ತಷ್ಟು ಹಿಂಸೆ ಕೊಟ್ಟರು ಎನ್ನುತ್ತಾರೆ ಸುಶೀಲಾ ಕುಲಕರ್ಣಿ.

ಸುಶೀಲಾಬಾಯಿ ಜಯದೇವ ಕುಲಕರ್ಣಿಯವರ ಅಳಿಯಂದಿರಾದ (ಗೀತಾ ದೇಸಾಯಿಯವರ ಪತಿ) ಶ್ರೀ ಗೋವಿಂದಮೂರ್ತಿಯವರು ತಮ್ಮ ಅತ್ತೆ ಮಾವಂದಿರ ಬಗ್ಗೆ ಹೀಗೆ ಹೇಳುತ್ತಾರೆ. "ಹೆಂಡತಿಗೆ ತಕ್ಕ ಗಂಡ, ಇಬ್ಬರದೂ ಹಾದಿ ಒಂದೇ ಗುರಿ ಒಂದೇ, ಗುಟ್ಟು ಒಂದೇ. ಮಾತು ಒಂದೇ, ಕೃತಿ ಒಂದೇ. ಮನೆಯಲ್ಲಿ ಮಾಡುವ ಕುರ್ಚಿಯ ಅರಿವೆಯೂ ಖಾದಿ ಬಟ್ಟೆ."

"ಕಾಂಗ್ರೆಸ್ ಕಾರ್ಯಕರ್ತರಿಗಾಗಿ ಸಮಾಜ ಸೇವಕರಿಗಾಗಿ ಇವರ ಮನೆಯಲ್ಲಿ ಯಾವಾಗಲೂ ಸ್ವಾಗತವಿತ್ತು. ಇವರ ಮನೆ ರಾಷ್ಟ್ರೀಯ ಸ್ವತ್ತಾಗಿತ್ತು. ಜಯ ದೇವರಾಯರು ಭೂಗತರಾಗಿ ಕೆಲಸ ಮಾಡುತ್ತಿದ್ದಾರೆಂದು ತಿಳಿಯಲು ಪೋಲೀಸರು ಸುಶೀಲಾರವರಿಗೆ ತುಂಬಾ ತೊಂದರೆಕೊಟ್ಟರು, ಎಷ್ಟೇ ಕಷ್ಟವಾದರೂ ವೀರ ಸತ್ಯಾಗ್ರಹಿಯಂತಿದ್ದರು.

ಒಂದೆಡೆ ಬಡತನದ ಬಳಲಿಕೆ, ಇನ್ನೊಂದೆಡೆ ಪೋಲೀಸರ ಹಿಂಸೆ. ಒಂದು ಕೈಯಲ್ಲಿ ಪುಸ್ತಕ. ಮತ್ತೊಂದು ಕೈಯಲ್ಲಿ ಮಕ್ಕಳ ಪೋಷಣೆ, ಒಂದೆಡೆ ಗಂಡ ಜೈಲಿನಲ್ಲಿ. ಮನಸ್ಸು ವಿಮುಖತೆಯಲ್ಲಿ ಯಾವುದನ್ನು ಮಾಡಬೇಕು, ಯಾವುದನ್ನು ಬಿಡಬೇಕು ಎಂಬ ಗೊತ್ತು ಗುರಿಯಿಲ್ಲದ ಬಿರುಗಾಳಿಗೆ ಸಿಕ್ಕ ಸಂಸಾರ ನೌಕೆಯ ಚುಕ್ಕಾಣಿಯನ್ನು ಸರಿಯಾಗಿ ತಿರುಗಿಸಿದರು."

ಸುಶೀಲಾ ಕುಲಕರ್ಣಿ ಬಲು ಜಾಣೆ, ಹೆಚ್ಚು ಓದಿದ್ದಾರೆ, ಹೆಚ್ಚು ತಿಳಿದವರೂ ಆಗಿದ್ದಾರೆ. ಅತಿ ಸರಳ ಜೀವಿ. ಅಲಂಕಾರ ಪ್ರಿಯರಲ್ಲ. ಮಾತು ಕಡಿಮೆ, ಆದರೆ ಆಡಿದ ಮಾತಿನಲ್ಲಿ ಮಹತ್ವದ ಅರ್ಥವಿದೆ. ತಮ್ಮ ಅನುಭವದ ಮಾತನ್ನು ಮಾತ್ರವೇ ಅವರು ಹೇಳುವುದು. ಈಗಲೂ ಮನೆಯ ಕೆಲಸವನ್ನೆಲ್ಲಾ ತಾವೇ ಮಾಡುವರು, ಅನೇಕ ಸಂಸ್ಥೆಯವರು ಇವರ ಸಲಹೆಗೆ, ಸಹಕಾರಕ್ಕೆ ಬರುತ್ತಿರುತ್ತಾರೆ. ಎಲ್ಲರೊಡನೆ ಆತ್ಮೀಯತೆಯಿಂದ ಮಾತಾಡುವರು. ಅಖಿಲ ಭಾರತ ಮಹಿಳಾ ಮಂಡಲದ ಶಾಖೆಯಾದ ಬೆಳಗಾವಿಯ ಭಗಿನೀ ಮಂಡಳವನ್ನು ಕಟ್ಟಿ ಬೆಳೆಸುವುದರಲ್ಲಿ ಶ್ರಮಪಟ್ಟಿದ್ದಾರೆ. ಸುಶೀಲಾಬಾಯಿಯವರು ಬೆಳಗಾವಿಯ ರಾಜಕಾರಣ ಹಾಗೂ ಸಮಾಜ ಸೇವೆಯ ಅವಿಭಾಜ್ಯ ಅಂಗವೆನಿಸಿಕೊಂಡಿದ್ದಾರೆ.

ಮುಂಬೈ ಪ್ರಾದೇಶಿಕ ಮೋಟಾರು ಸಾರಿಗೆಯ ಸದಸ್ಯರಾಗಿ ಜಿಲ್ಲಾ ಅಭಿವೃದ್ಧಿ ಮಂಡಲದ ಸದಸ್ಯರಾಗಿ ಅಂಬರ ಚರಕಾ ವರ್ಗಗಳನ್ನು ನಡೆಸಿ ಸಮಾಜಸೇವೆ ಮಾಡಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ದ್ದಾರೆ. ಮಹಿಳೆಯರಲ್ಲಿ ಅಪಾರ ಜಾಗೃತಿಯನ್ನುಂಟು ಮಾಡಿದ್ದಾರೆ. ಉತ್ತರ ಭಾರತವನ್ನೂ ಸುತ್ತಾಡಿ ಅಲ್ಲಿಯ ಜನಜೀವನವನ್ನೂ ತಿಳಿದುಕೊಂಡಿದ್ದಾರೆ. ಮಾತೊಂದು ಮುತ್ತೊಂದು ಎನ್ನುವಂತೆ ಸುಶೀಲಾರವರ ನುಡಿ ಅತಿ ಕಡಿಮೆ ಯಾದರೂ ಮುತ್ತಿನಂತಹ ವಿವೇಕದ ಅನುಭವದ ನುಡಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

# ಪ್ರಮೀಳಾಬಾಯಿ ದೇಶಪಾಂಡೆ

ಕರ್ನಾಟಕದಲ್ಲಿ ಮೊಟ್ಟಮೊದಲ ಚಳವಳಿಯ ಕೇಂದ್ರ ಬೆಳಗಾವಿ. ಪ್ರಪ್ರಥಮವಾಗಿ ಕರ್ನಾಟಕದಲ್ಲಿ ಅಖಿಲಭಾರತ ಕಾಂಗ್ರೆಸ್ ಅಧಿವೇಶನ ನಡೆದದ್ದು ೧೯೨೪ರಲ್ಲಿ ಬೆಳಗಾವಿಯಲ್ಲಿ. ಮಹಾತ್ಮಾ ಗಾಂಧಿಯವರೇ ಈ ಅಧಿವೇಶನದ ಅಧ್ಯಕ್ಷರಾಗಿದ್ದುದರಿಂದ ಬೆಳಗಾವಿಯ ಜನರ ಮೇಲೆ ಸ್ವಾತಂತ್ರ್ಯ ಚಳವಳಿಯ ಪ್ರಭಾವ ಹೆಚ್ಚಾಯಿತು. ಒಂದು ಲಕ್ಷಕ್ಕೂ ಮೀರಿ ದೇಶಭಕ್ತರ ಸಭೆ ಬೆಳಗಾವಿಯಲ್ಲಿ ನಡೆದು ಸಂಗ್ರಾಮದ ಸಸಿ ನೆಟ್ಟಂತಾಯಿತು.

ಬೆಳಗಾವಿಯ ಟಿಳಕವಾಡಿ ಬಡಾವಣೆ ಸ್ವಾತಂತ್ರ್ಯ ಹೋರಾಟದ ಕಾರ್ಯಕರ್ತರ ಕೇಂದ್ರವಾಯಿತು.

ಬೆಳಗಾವಿ ನವನಾಗರಿಕತೆಯಿಂದ ತುಂಬಿದ್ದರೂ ಟಿಳಕವಾಡಿ ಈಗಲೂ ಹಳೆಯ ಊರೇ. ಅಗ್ರಗಣ್ಯ ನಾಯಕರಾದ ಅಣ್ಣು ಗುರೂಜಿ, ಜಯದೇವ ಕುಲಕರ್ಣಿ, ಶ್ರೀರಂಗ ಕಾಮತ, ಯಾಳಗಿಯವರು, ಜೋಶಿಯವರು, ಆರ್. ಎಚ್. ಕುಲಕರ್ಣಿ ಮುಂತಾದ ಸ್ವಾತಂತ್ರ್ಯ ಚಳವಳಿಗಾರರ ಮನೆಗಳು ಇಂದಿಗೂ ಈ ಹಳೆಯ ಬೆಳಗಾವಿಯಲ್ಲೇ ಇವೆ. ಅಲ್ಲಿ ಹೋದರೆ ಈ ನಾಯಕರೆಲ್ಲರ ಭೇಟಿಯಾಗುವ ಅವಕಾಶವಿದೆ. ಲೋಕಮಾನ್ಯ ತಿಲಕರ ಪ್ರಭಾವಕ್ಕೊಳಗಾಗಿ ಬೆಳಗಾವಿಯ ಈ ಭಾಗ ಟಿಳಕವಾಡಿ ಎಂದಾಯಿತು.

ಬೆಳಗಾವಿಯ ಟಿಳಕವಾಡಿ ಬಡಾವಣೆಯಲ್ಲಿ ಮಹಾತ್ಮಾ ಗಾಂಧಿ ಮಾರ್ಗದ ಅಡ್ಡ ರಸ್ತೆಯಲ್ಲಿರುವ ಶ್ರೀರಂಗ ಕಾಮತರ ಮನೆಯನ್ನು ಸಣ್ಣದೊಂದು ಅಂಗಡಿಯ ಬಾಲಕನೂ ಬಲ್ಲ. ಕಾಮತರ ಮನೆ ತೋರಿಸುವೆನೆಂದು ಹೇಳಿದ ಬಾಲಕನನ್ನು ಹಿಂಬಾಲಿಸಿದಾಗ ಹಳೆಯರಸ್ತೆಯ ಮಾದರಿಯಲ್ಲಿರುವ ದಾರಿಗೆ ಕರೆದು ತಂದು ಬಿಟ್ಟು ತೋರಿಸಿ, 'ಅದೋ ಅದೇ ಮನೆ' ಎಂದ.

ಒಂದೇ ಆವರಣದಲ್ಲಿ ಐದಾರು ಮನೆಗಳು. ಯಾವ ಮನೆಗೂ ವಿಳಾಸವಿಲ್ಲ ಹೆಸರಿನ ಫಲಕವಿಲ್ಲ. ಎಲ್ಲಾ ಒಂದೇ ವಿಧವಾದ ಹಳೆಯ ಮನೆಗಳು. ಬಾಗಿಲು ತಟ್ಟಿದಾಗ, ಹೆಣ್ಣಿನ ಧ್ವನಿ ಕೇಳಿಸಿತು. "ಬೆಳಿಗ್ಗೆ ಟೆಲಿಫೋನ್ ಮಾಡಿದವರು ನೀವೇ ಅಲ್ಲವೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಅವರು ಇದ್ದಾರೆ. ಒಳಗೆ ಬನ್ನಿ," ನಮ್ಮನ್ನು ಕಂಡ ಆ ವ್ಯಕ್ತಿ ಸ್ವಾಗತಿಸಿದರು. ಇವರೇ ಶ್ರೀರಂಗ ಕಾಮತರ ಪತ್ನಿ ಪ್ರಮೀಳಾದೇವಿ ಇರಬಹುದೆಂದು ಯೋಜಿಸುವಷ್ಟರಲ್ಲಿ ಆಕೆ ಒಳಗೆ ಹೋಗಿದ್ದರು.

ಬೆಳಿಗ್ಗೆ ದೂರವಾಣಿಯಲ್ಲಿ ಕೇಳಿಸಿಕೊಂಡ ವಾಣಿಯೂ ಇದೇ ಎನ್ನಿಸಿತು. ಶ್ರೀರಂಗ ಕಾಮತರು ಸಿಗಲಾರದೆಂದಿದ್ದರು. ಅವರ ಶ್ರೀಮತಿಯವರನ್ನೇ ಕಾಣಲು ಬರುವೆವೆಂದಿದ್ದೆವು. ಇದ್ದಾರೆ ಬನ್ನಿ ಎಂದಾಗ ಆಶ್ಚರ್ಯವೂ ಆನಂದವೂ ಆಯಿತು.

ಒಳಗೆ ಹೋದರೆ ಸಣ್ಣದೊಂದುಹಜಾರ. ಹಜಾರದಲ್ಲಿ ಗೋಡೆಗೆ ಒರಗಿಸಿಟ್ಟ ಒಂದು ದಿಂಬು. ನೆಲದ ಮೇಲೆ ಹಾಸಿರುವ ಮೆತ್ತನೆಯ ಗದ್ದುಗೆ, ಬಂದವರನ್ನು ಅಲ್ಲೇ ಕೂರಿಸುವ ರೂಢಿ. ನೆಲದ ಮೇಲೆ ಕೂರಲಾರದವರಿಗೆ ಪಕ್ಕದಲ್ಲೇ ಕುರ್ಚಿಯೂ ಉಂಟು. ಈ ಆಸನದ ಬಲಬದಿಯಲ್ಲಿ ಪುಸ್ತಕಗಳು, ಫೈಲುಗಳ ಗಂಟುಗಳು. ನೋಡಲಾಗಿ ಯಾವುದರಲ್ಲೂ ಕಾಮತರ ನಾಮಧೇಯವಿರಲಿಲ್ಲ. ಕಾಮತರು ಓದುವ ಪುಸ್ತಕಗಳಿರ ಬಹುದೆಂದಾಯ್ತು. ಫೈಲುಗಳಲ್ಲಿ ಪತ್ರಿಕೆಗಳಿಂದ ಕತ್ತರಿಸಿದ ಕಾಗದ ಭಾಗಗಳು ಮತ್ತು ಪತ್ರಿಕೆಗಳ ಪ್ರತಿಗಳು. ಅವರ ಬಗ್ಗೆ ಯಾರಾದರೂ ಬರೆದ ಲೇಖನಗಳಿರಬಹುದೇ ಎಂದು ಕಣ್ಣು ಹಾಯಿಸುತ್ತಿರುವಾಗ, ಒಳಗಿಂದ ತೆಳ್ಳನೆಯ, ಬೆಳ್ಳನೆಯ, ಎಪ್ಪತ್ತರ ವಯಸ್ಸಿರಬಹುದೆಂದು ಹೇಳಬಹುದಾದ ಎತ್ತರದ ಖಾದಿಧಾರಿಯೊಬ್ಬರು ನಸುನಗುತ್ತಾ, ನಮಸ್ಕರಿಸುತ್ತಾ ಬಂದು, 'ಬನ್ನಿ ಕುಳಿತುಕೊಳ್ಳಿ' ಎಂದರು. ಇವರೇ ಶ್ರೀರಂಗ ಕಾಮತರೆನ್ನಲು ಸಂದೇಹವಿಲ್ಲ.

'ಆ ಫೈಲುಗಳಲ್ಲಿ ಏನಿದೆಯೆಂದು ಹೇಳುತ್ತೇನೆ' ಎಂದು ನಮ್ಮ ಆಸಕ್ತಿಯನ್ನು ಅರಿತು ಅವರೇ ಹೇಳಿದರು-

ಕತ್ತರಿಸಿಟ್ಟ ಕಾಗದ ಒಂದನ್ನು ಅದರಿಂದ ತೆಗೆಯುತ್ತಾ, 'ಇದರಲ್ಲಿ ಏನಿದೆ ಓದಿ' ಎಂದರು.

ಅದು ೧೬-೧-೮೮ ಶುಕ್ರವಾರ ಸಂಯುಕ್ತ ಕರ್ನಾಟಕದಲ್ಲಿ ಪ್ರಕಟವಾದ "ಪಾದಯಾತ್ರಿಗಳಲ್ಲೊಬ್ಬ ಪುಟ್ಟ ಬಾಲಕ"— ಲೇಖನ, "ಪಶ್ಚಿಮ ಘಟ್ಟ ಉಳಿಸಿ" ಅಭಿಯಾನದ ಉದ್ದಕ್ಕೂ ಪಾದಯಾತ್ರೆಯಾಗಿ ಹೊರಟಿರುವ ಆರು ವರ್ಷದ ಈ ಆದಿವಾಸಿ ಗಿರಿಜನ ಹುಡುಗನ ಕಡೆಗೆ ನಮ್ಮ ಗಮನವನ್ನು ಶ್ರೀರಂಗ ಕಾಮತ ಸೆಳೆಯುತ್ತಾರೆ.

ಜನ ಜಾಗೃತಿ ಪುಸ್ತಕ ಮಾಲೆಯಲ್ಲಿ ಎರಡು ಪುಸ್ತಕಗಳನ್ನೆಳೆದು "ನೆಡದಿರಿ ನೀಲಗಿರಿ", "ಪಶ್ಚಿಮ ಘಟ್ಟಗಳ ಅಳಿವು ಉಳಿವು" ಪುಸ್ತಕಗಳನ್ನು ಕೊಟ್ಟು ನೀವೇ ಇಟ್ಟುಕೊಳ್ಳಿ" ಎಂದರು. ಧಾರವಾಡದ ಸಮಾಜ ಪರಿವರ್ತನ ಸಮುದಾಯವು ಪ್ರಕಟಿಸಿರುವ "Whither common land ?" ಪುಸ್ತಕವನ್ನು ಓದಲು ಕೊಡುತ್ತಾರೆ. ತರುಣ ಭಾರತ ಪತ್ರಿಕೆಯ ಮತ್ತೊಂದು ಹಾಳೆಯನ್ನು ತೋರಿಸಿ. 'ಇದನ್ನು ಓದಿದ್ದೀರಾ' ಎನ್ನುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಫೈಲುಗಳಲ್ಲಿ ಇಂತಹ ಕಾಗದಗಳೇ. ಕೆಲವು ಜೆರಾಕ್ಸ್ ಪ್ರತಿಗಳು. ಕಾಮಂತರ ಬಗ್ಗೆಯಾಗಲೀ ಅವರ ಪತ್ನಿಯ ಬಗ್ಗೆ ಬರವಣಿಗೆಯಾಗಲೀ ಯಾವುದೂ ಇಲ್ಲ.

ನಾವು ಮಾತಾಡುವ ಮೊದಲು 'ಸ್ವಲ್ಪ ಒಳಗೆ ಹೋಗಿ ಬರೋಣ ಬನ್ನಿ' ಎಂದು ಹಜಾರದ ಒಳಗಿನ ಮನೆಯ ಭಾಗಕ್ಕೆ ಕರೆದುಕೊಂಡು ಹೋಗಿ, 'ಇಲ್ಲಿ ನೋಡಿ ಇದೇ ನಮ್ಮ ಆಸ್ತಿ' ಎಂದರು.

ಅಲ್ಲಿ ಕಂಡದ್ದು ಮರದ ಹಲಗೆಗಳ ಮೇಲೆ ಜೋಡಿಸಿಟ್ಟ ಪುಸ್ತಕಗಳ ರಾಶಿ.

ನಾವು ಇವರನ್ನು ಹುಡುಕಿಕೊಂಡು ಬಂದುದರ ಉದ್ದೇಶ ಅರ್ಥವಾಗಿಲ್ಲವೆಂದು ಮಾತಾಡಲು ಹೊರಟಾಗ, ಶ್ರೀರಂಗ ಕಾಮತರು ಹೀಗೆಂದರು. "ನಾನೂ ಪ್ರಮೀಳಾ ಈಗ ಮಾಡುತ್ತಿರುವ ಕೆಲಸ ಇದೇ. ವಿಚಾರಪೂರ್ಣ ಪುಸ್ತಕಗಳನ್ನು, ಪ್ರಕಟಣೆಗಳನ್ನೂ ಓದುತ್ತೇವೆ" ಎಂದು ಪುನಃ ಅವರೇ ನಮ್ಮನ್ನು ಪ್ರಶ್ನಿಸಿದರು. "ನೀವು ಏನು ಹುದ್ದೆಯಲ್ಲಿದ್ದೀರಿ ?"

ಊರಿನ ಪರಿಚಯವಿದ್ದ ಶ್ರೀ ಸಿ. ವಿ. ಮಠದರವರೂ ಜೊತೆಯಲ್ಲಿದ್ದುದರಿಂದ, ಇಬ್ಬರೂ ಕಾಲೇಜಿನಲ್ಲಿ ಪ್ರಾಚಾರ್ಯರೆಂದು ತಿಳಿಸಲು, ಕಾಮತರ ದೃಷ್ಟಿಕೋನ ಆ ಕಡೆಗೆ ಜರುಗಿತು.

"ಮಾನವರನ್ನು ತಯಾರುಮಾಡುವ ಶಿಕ್ಷಕರು ಇಲ್ಲ. ಬುದ್ಧಿ ಮನಸ್ಸು ಸ್ವಚ್ಛತೆ ಇಲ್ಲ. ಮೆಡಿಕಲ್ ಕಾಲೇಜುಗಳು ಶರೀರಕ್ಕೆ ಇವೆ. ಮನೋಬಲಕ್ಕೆ ನಮ್ಮಲ್ಲಿ ಯಾವ ಕಾಲೇಜಿದೆ ? ಹಿಂದೆ ನಮ್ಮ ಋಷಿ ಮುನಿಗಳು ಮನೋಬಲಕ್ಕೆ ಗಮನ ಕೊಡುತ್ತಿದ್ದರು.... ಈಗ ಮಕ್ಕಳು ಏನು ಕಲಿಯುತ್ತಾರೆ ? ಮನೆ ಲೆಕ್ಕ ಇರುವುದಿಲ್ಲ. ಜೀವನ ವ್ಯವಹಾರ ಬೇಕಿಲ್ಲ. ಈಗ ಸರಿಯಾದ ವಿದ್ಯಾ ಇಲ್ಲ. ಆದ್ದರಿಂದ ಗೊಂದಲ. ಕೆಳಮಟ್ಟಕ್ಕೆ ನಮ್ಮ ಮಕ್ಕಳನ್ನು ಇಳಿಸಿಬಿಟ್ಟಿದ್ದೇವೆ. ಯುವ ಶಕ್ತಿಯನ್ನು ದಿಕ್ಕೆಟ್ಟ ಹಾಗೆ ಮಾಡಿದ್ದೇವೆ... ಗಿಡ ಬೆಳೆಸಿ ಎಂಬ ಹೊಸ ಪಾಠ ಏಕೆ ? ಹಿಂದೆ ಗಿಡಗಳನ್ನೂ ನೆಡುತ್ತಿದ್ದರು. ಪುಕ್ಕಟೆ ಉರವಲೂ ಸಿಕ್ಕುತ್ತಿತ್ತು. ಈಗ ಕಲಿತಿರುವುದೇನು ? ನಾಶಮಾಡುವುದು" ಎಂದು ನೀಳವಾಗಿ ಹೇಳುತ್ತಾರೆ.

ಪ್ರಮೀಳಾರವರೂ ಆ ಹೊತ್ತಿಗೆ ಬಂದು ಕುಳಿತರು. ನಮಗೆ ಬೇಕಾದ ವಿಷಯ ವೇನೆಂದು ಪ್ರಮೀಳಾರವರಿಗೆ ಗೊತ್ತಿತ್ತು. "ಕಳೆದು ಹೋದ ವಿಚಾರ ಅವರಿಗೆ ಬೇಕಿಲ್ಲ. ಈಗಿನ ವಿಚಾರವನ್ನೇ ಅವರು ಮಾತಾಡುವುದು" ಎಂದರು.

"ನೀವು ಪ್ರಮೀಳಾರವರನ್ನು ಮದುವೆಯಾದದ್ದು ಹೇಗೆ ? ಇಚ್ಛಿಸಿ ಇವರನ್ನೇ ಮದುವೆಯಾದಿರೇ. ?"

ಈ ಪ್ರಶ್ನೆ ಶ್ರೀರಂಗ ಕಾಮತರನ್ನು ನಮ್ಮ ಕಡೆಗೆ ಸೆಳೆಯಿತೆನ್ನಿಸಿತು. ಹೆಂಡತಿಯ ಮುಖವನ್ನೊಮ್ಮೆ ನೋಡಿದರು. ಮುಗುಳುನಗೆ ನಕ್ಕರು. ಅವರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಮನಃಪಟಲದಲ್ಲಿ ಹಿಂದಿನ ಚಿತ್ರಗಳು ಕಂಡಿರಬಹುದು. ಸ್ವಾತಂತ್ರ್ಯ ಸಂಗ್ರಾಮದ ದಿನಗಳನ್ನು ನೆನೆದರು. ಕೂಡಲೇ ಉತ್ತರಿಸಿದರು.

"ನಾನೂ ಪ್ರಮೀಳಾ ಜೈಲಿನಲ್ಲಿದ್ದಾಗ ಒಬ್ಬರನ್ನೊಬ್ಬರು ಮೆಚ್ಚಿಕೊಂಡೆವು. ಅವಳ ಧ್ಯೇಯವೂ ನನ್ನ ಧ್ಯೇಯವೂ ಒಂದೇ ಎಂದು ಕಂಡಾಗ ನಮ್ಮ ಮದುವೆಯಾಯಿತು."

ಗಂಡನ ಮಾತು ಪ್ರಮೀಳಾರವರಿಗೂ ಹಿಂದಿನ ನೆನಪು ತಂದಿತು. ತಲೆತಗ್ಗಿಸಿ ನಾಚಿಕೆಯಿಂದ ಮುಗುಳುನಗೆ ನಕ್ಕರು. ಪ್ರಮೀಳಾ ಹೆಚ್ಚು ಮಾತಾಡುವ ಸ್ವಭಾವದವರಲ್ಲವೆಂದು ತಿಳಿಯಿತು.

ಶ್ರೀರಂಗ ಕಾಮತರೇ ಮುಂದುವರಿಸಿದರು. "ಈ ಪ್ರಮೀಳಾ ಸಾಮಾನ್ಯವಾದ ಹುಡುಗಿಯಾಗಿರಲಿಲ್ಲ. ಐಶ್ವರ್ಯವಿದ್ದ ವಿಷ್ಣುಪಂತ ದೇಶಪಾಂಡೆಯವರ ಮಗಳು ಈಕೆ. ಶ್ರೀಮಂತಿಕೆಯನ್ನೂ ಭೋಗಿಸಿದ್ದಾಳೆ. ಆಗಿನ ಕಾಲದಲ್ಲಿ ಮೂಕ ಸಿನೆಮಾ ಇದ್ದಿತು. ಆ ಸಿನೆಮಾದ ಮಾಲೀಕರು ಈಕೆಯ ತಂದೆ. ಸಾಹಿತ್ಯ ನಾಟಕ ಅಕಾಡೆಮಿಯಲ್ಲಿ ಪ್ರಸಿದ್ಧರೆನಿಸಿದ್ದರು. ಈಕೆಗೆ ಒಬ್ಬ ಅಣ್ಣ, ಒಬ್ಬ ತಮ್ಮ. ವಿಷ್ಣುಪಂತರ ಈ ಮೂರುಮಕ್ಕಳೂ ಸ್ವಾತಂತ್ರ್ಯ ಸಂಗ್ರಾಮದ ದಿನಗಳಲ್ಲಿ ಜೈಲು ಕಂಡಿದ್ದರು. ತಂದೆಯ ಐಶ್ವರ್ಯವನ್ನು ತ್ಯಜಿಸಿದ ತ್ಯಾಗಿ ಅಲ್ಲವೇ ? ದೇಶಭಕ್ತಳಲ್ಲವೇ ? ಅವಳಲ್ಲಿದ್ದ ಈ ವಿಶೇಷ ಗುಣ ನನಗೆ ಸರಿಯೆನಿಸಿತು. ನಾವಿಬ್ಬರೂ ಸಮ ವಿಚಾರದವರಾಗಿದ್ದೆವು, ಆದ್ದರಿಂದ ಜೀವನದ ಸಹ ಬಾಳ್ವೆಯೂ ಸಾಧ್ಯವಾಯಿತು."

ಶ್ರೀರಂಗ ಕಾಮತರ ವಾಕ್ಸರಣಿ, ಮಾತುಗಳಲ್ಲಿ ಉತ್ತಮ ಭಾಷೆ ಯಾರನ್ನಾದರೂ ಆಕರ್ಷಿಸಬಲ್ಲದು.

"ಈಗಲೂ ಪ್ರಮೀಳಾ ನನ್ನನ್ನು ಚೆನ್ನಾಗಿ ನೋಡಿಕೊಳ್ಳುವಳೆಂಬ ನಂಬಿಕೆ ಇದೆ. ಇನ್ನೂ ಮೂರು ಪೀಳಿಗೆಗೆ ಆಗುವಷ್ಟು ಶರೀರ ಶಕ್ತಿ ಅವಳಲ್ಲಿದೆ. ದೇಶ ಸೇವಾಕಾರ್ಯ ಮಾಡಿದಳು. ನನ್ನ ಜೊತೆಗೇ ಇದ್ದು ಸಂಗ್ರಾಮದ ಕೆಲಸಗಳಲ್ಲಿ ಶ್ರಮ ವಹಿಸಿದಳು. ಹೆಣ್ಣು ಮಕ್ಕಳ ಸಂಘಟನಾ ಮಾಡಿದಳು. ಎಚ್ಚೆತ್ತ ಬೆಳಗಾವಿಯ ಪ್ರಮುಖ ಪಾತ್ರಧಾರಿಗಳಲ್ಲೊಬ್ಬಳಾದಳು. ಪ್ರಮೀಳಾ ಶ್ರೀರಂಗ ಕಾಮತ ಎನ್ನುವುದಕ್ಕಿಂತ ಎಲ್ಲರಿಗೂ ಈಕೆಯ ಪರಿಚಯ ಪ್ರಮೀಳಾ ದೇಶಪಾಂಡೆ ಎಂದೇ, ಸ್ವಾತಂತ್ರ್ಯ ಹೋರಾಟ ದಿನಗಳಲ್ಲಿ ನನ್ನ ಸಹೋದ್ಯೋಗಿಗಳು ನನ್ನನ್ನು ಕಂಡಾಗಲೆಲ್ಲಾ 'ಪ್ರಮೀಳಾ ತಾಯಿ ಹೇಗಿದ್ದಾರೆ' ಎನ್ನುತ್ತಿದ್ದರು, ಎಲ್ಲರಿಗೂ ಬೇಕಾದವಳಾಗಿ ಆಗಿನ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಎಲ್ಲರನ್ನೂ ವಿಚಾರಿಸಿ ನೋಡಿಕೊಂಡಿದ್ದಾಳೆ."

ಶ್ರೀರಂಗ ಕಾಮತರು ಪ್ರಮೀಳಾ ವಿಷಯ ಹೇಳಿದರೇ ವಿನಃ ತಮ್ಮ ಕುರಿತು ಏನನ್ನೂ ಹೇಳಲಿಲ್ಲ. ಅವರ ಬಾಯಿಂದಲೇ ಅವರ ಬಗ್ಗೆ ಕೇಳುವ ನಮ್ಮ ಆಸಕ್ತಿಯನ್ನು ಕಂಡು ಹೀಗೆಂದರು, "ಇತಿಹಾಸ ಜನಾಂಗದ ಇತಿಹಾಸವಾಗಬೇಕಷ್ಟೆ. ವ್ಯಕ್ತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಗಳದ್ದಲ್ಲ. ನಾವು ಮೂರ್ತಿ ಪೂಜಕರು. ವಿಚಾರ ಪೂಜಕರಲ್ಲ. ಗಾಂಧಿಗೆ ಹಾರ ಹಾಕಿದರೆ ಮುಗಿಯಿತೆನ್ನುವ ಜನ ನಾವು. ಗಾಂಧಿಯ ವಿಚಾರಧಾರೆಯನ್ನು ಆಚರಣೆಯಲ್ಲಿ ತಂದಿದ್ದೇವೆಯೇ ? ಇಲ್ಲ... ವಿಚಾರಧಾರೆ ಹರೀತಾ ಇರಬೇಕು. ಆಗ ಮಲಿನವಾಗೋದಿಲ್ಲ. ನೀರು ನಿಂತು ಹೋದರೆ ಮಲಿನವಾಗುವುದಿಲ್ಲವೆ ? ನಮಗೇಕೆ ಸನ್ಮಾನಗಳು ? ನಮಗೇಕೆ ಸರ್ಕಾರದ ಪಿಂಚಣಿ ? ನಮ್ಮನ್ನು ನಾವು ನೋಡಿಕೊಳ್ಳಬಲ್ಲೆವು ಸರ್ಕಾರ ನಮ್ಮನ್ನು ನೋಡಿಕೊಳ್ಳುತ್ತದೆ ಎಂದು ನಾವು ಸ್ವಾತಂತ್ರ್ಯಕ್ಕಾಗಿ ದುಡಿದವರಲ್ಲ" ಎಂದು ನುಡಿಯುತ್ತಾರೆ.

"೧೯೩೯ರಲ್ಲಿ ಹೈಸ್ಕೂಲು ಬಿಟ್ಟೆ. ೧೯೪೬ವರೆಗೆ ಜೈಲು. ೧೯೪೩ರಲ್ಲಿ ಪ್ರಮೀಳಾ ಪರಿಚಯ ಮತ್ತು ಪರಿಣಯ. ೧೯೪೮ ರಿಂದ ೫೮ರವರೆಗೆ ಸರ್ವೋದಯ ಯೋಜನೆ. ಹಳ್ಳಿಯ ಬ್ಯಾಡರೊಡನೆ ಜೀವನ. ೩೩ ವರ್ಷದಿಂದ ಖಾದಿಯಲ್ಲಿದ್ದೇನೆ. ಖಾದಿಯನ್ನು ಮಿಷನರಿ ತರಹ ಮಾಡಬೇಕು. ಮುಂದಿನ ಪೀಳಿಗೆಯನ್ನು ಇದರಲ್ಲಿ ತಯಾರು ಮಾಡಬೇಕು ಎಂಬ ಉದ್ದೇಶದಿಂದ ಖಾದಿ ಗ್ರಾಮೋದ್ಯೋಗದಲ್ಲಿದ್ದೇನೆ" ಎಂದಷ್ಟೆ ಹೇಳಿ ಮುಗಿಸಿದರು,

ಪ್ರಮೀಳಾಬಾಯಿಯವರ ಕಡೆಗೆ ತಿರುಗಿ ನೋಡಿದಾಗ, ಅವರು ಅಷ್ಟರಲ್ಲಿ ಅಡಿಗೆ ಮನೆಯಿಂದ ಪಾನೀಯವನ್ನು ಸಿದ್ಧಮಾಡಿ ತಂದಿದ್ದರು. ಕಾಮತರೇ ಮುಂದುವರಿಸಿದರು,

"ನನ್ನ ಹಿರಿಯ ಅಣ್ಣ ಶಂಕರರಾವ್ ಕಾಮತ ನನ್ನನ್ನೂ ನನ್ನ ತಮ್ಮ ಬಾಬುರಾವನನ್ನೂ ಸೈನ್ಯ ಶಿಕ್ಷಣ ಪಡೆಯಲು ಹೇಳುತ್ತಿದ್ದ. ಆತನ ಮನಸ್ಸಿನಲ್ಲಿದ್ದುದು ಹೀಗೆ, ಬ್ರಿಟಿಷ್ ಸೇನಾಬಲದಲ್ಲಿ ದೇಶಪ್ರೇಮಿಗಳನ್ನು ಸೇರಿಸಿದರೆ ಪ್ರಸಂಗ ಬಂದಾಗ ಸ್ವಾತಂತ್ರ್ಯ ಸಂಗ್ರಾಮಕ್ಕೆ ಅಂತಹವರ ಸಹಾಯ ಬೇಕಾಗುತ್ತದೆ ಎಂದು ನೌಕಾಬಲ ತರಬೇತಿಯನ್ನೂ ಕುದುರೆ ಸವಾರಿ ಇತ್ಯಾದಿ ತರಬೇತಿ ಪಡೆಯಲು ನಮ್ಮನ್ನು ಪ್ರಚೋದಿಸಿದ. ನೆಹರೂ ಮನೆತನದ ಹಾಗೆ ಕಾಮತರ ಮನೆತನ ಆಗಬೇಕೆಂದು ಅಣ್ಣನ ಹಂಬಲ. ಕಾಮತರೆಂದರೆ ದೇಶದಲ್ಲೇ ಪ್ರಸಿದ್ಧರಾಗಬೇಕು. ಭಾರತೀಯರು ನಾವು ಭಲೋ ಆಗಬೇಕು ಎಂದು ತಮ್ಮಂದಿರಾದ ನಮಗೆ ಬೋಧಿಸಹತ್ತಿದ್ದ. ನನ್ನ ತಮ್ಮ ಬಾಬುರಾವನನ್ನು ನೌಕಾಪಡೆಗೆ ಸೇರಿಸಿದ್ದೂ ಆಯಿತು. ನಾನು ಮಾತ್ರ ಸೈನಿಕ ಆಗೊಲ್ಲ. ನನಗೆ ಯುದ್ಧ ಶಿಕ್ಷಣ ಬೇಡ- ಸೇವಾಭಾವದಿಂದಿರುತ್ತೇನೆಂದು ನಿರ್ಧರಿಸಿದೆ. ಭಾರತದ ಸೇವಕನಾಗಿ ನಿಲ್ಲಬೇಕೆಂದುಕೊಂಡಾಗ ರಾಜಗೋಪಾಲಾಚಾರಿಯವರೊಡನೆ ಭೇಟಿ ಲಭಿಸಿತು. ಅವರ ಸಲಹೆಯನ್ನು ಕೇಳಿದೆ. ಅವರು ಒಂದು ಭಲೋ ವಿಚಾರ ಹೇಳಿದರು "ನೀನು ಈಗ ವಿಚಾರಶೀಲನಾಗಿದ್ದೀ. ಈಗ ಸೇವಾಮಾಡಬೇಕು. ಸತ್ತ ಮೇಲೆ ಏನು ಮಾಡಲು ಸಾಧ್ಯ" ಎಂದ ಮಾತು ಮನಸ್ಸಿಗೆ ಹೋಯಿತು. ಆರ್ಥಿಕ ಸ್ವಾತಂತ್ರ್ಯ ಬೇಕು. ವಿಚಾರ ಸ್ವಾತಂತ್ರ್ಯ ಬೇಕು ಎಂದು ಗಾಂಧಿಯವರ ಚಳವಳಿಗೆ ಧುಮುಕಿದೆ. ಈ ವೇಳೆಗೆ ಆನಂದ ಕಬ್ಬೂರರು ಸಮುದಾಯ ಜಾಗೃತಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಮಾಡುತ್ತಿದ್ದರು. ಪ್ರಮುಖರ ಪ್ರಭಾವ ಎಲ್ಲಾ ಒಟ್ಟಿಗೆ ಸೇರಿತು. ನನ್ನ ತಮ್ಮನೂ ನೌಕಾದಳ ಬಿಟ್ಟು ಬಂದು ನನ್ನೊಂದಿಗೆ ಸೇರಿದ.

"ಬೆಳಗಾವಿಯು ೧೯೦೫ ರಿಂದಲೇ ಚಳವಳಿಗೆ ಕೇಂದ್ರವಾಗಿತ್ತು. ೧೯೦೫ರಲ್ಲಿ ವಂಗ ಭಂಗ ಚಳವಳಿ ಪ್ರಾರಂಭವಾಗಿ ಗಂಗಾಧರರಾವ ದೇಶಪಾಂಡೆ, ಲೋಕಮಾನ್ಯ ತಿಲಕ ಮೊದಲಾದವರು ಬೆಳಗಾವಿ ಜಿಲ್ಲೆಯಲ್ಲಿ ಸ್ವದೇಶಿ, ಬಹಿಷ್ಕಾರ, ರಾಷ್ಟ್ರೀಯ ಶಿಕ್ಷಣ ಮತ್ತು ಸ್ವರಾಜ್ಯ ಈ ನಾಲ್ಕು ಸೂತ್ರದ ಕಾರ್ಯಕ್ರಮವನ್ನು ಪ್ರಚಾರ ಮಾಡಿದರು. ಆದ್ದರಿಂದ ಬೆಳಗಾವಿ ಜಿಲ್ಲೆಯಲ್ಲಿ ಅಪೂರ್ವ ಜಾಗೃತಿಯಾಯಿತು"—ಎನ್ನುತ್ತಾರೆ ಶ್ರೀರಂಗ ಕಾಮತರು.

ಬೈಲಹೊಂಗಲದಲ್ಲಿ ಒಂದು ಸಲ ತಿಲಕರ ಸಭೆ ಸೇರಿದಾಗ, ಈ ಸಭೆಗೆ ಅವಕಾಶ ಕೊಡಬಾರದೆಂದು ಬ್ರಿಟಿಷ್ ಸರ್ಕಾರ ತಡೆಹಾಕಲು, ಅದನ್ನು ಲೆಕ್ಕಿಸದೆ ತಮ್ಮ ಹತ್ತಿ ಗಿರಣಿಯ ಆವರಣದಲ್ಲಿ ಸಭೆ ಏರ್ಪಡಿಸಿದ್ದ ದಿಟ್ಟ ವಾಮನರಾವ್ ಕಾಮತರೆ ಶ್ರೀರಂಗರವರ ತಂದೆ.

ಐತಿಹಾಸಿಕ ಪ್ರಸಿದ್ಧವಾದ ೧೯೨೪ರ ಬೆಳಗಾವಿಯ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನವು ವಿದ್ಯಾರ್ಥಿಗಳನ್ನು ಆಕರ್ಷಿಸಿತು. ಈ ಅಧಿವೇಶನಕ್ಕೆ ಜಿಲ್ಲೆಯ ಪ್ರತಿ ಭಾಗದಿಂದಲೂ ಸ್ವಯಂಸೇವಕರಾಗಿ ಹೋಗಿ ಸೇವಾದಳ ಸೇವಾಕಾರ್ಯ ಮಾಡಿದ್ದ ವಿದ್ಯಾರ್ಥಿಗಳನೇಕರು ಅಧಿವೇಶನದಿಂದ ಪ್ರಭಾವಿತರಾಗಿ ಚಳವಳಿಗೆ ಧುಮುಕಿ ಶಾಲೆ ತ್ಯಜಿಸಿದರು. ಇಂತಹ ವಿದ್ಯಾರ್ಥಿಗಳಲ್ಲಿ ಶ್ರೀರಂಗ ಕಾಮತರೂ ಒಬ್ಬರು.

ಈ ಅಧಿವೇಶನದ ಸಿದ್ಧತೆ ಬೆಳಗಾವಿಯಲ್ಲಿ ಅತಿ ಜಾಗರೂಕತೆಯಿಂದ ನಡೆದಿತ್ತು. ನಕ್ಷೆಯನ್ನು ತಯಾರಿಸಿ, ಧ್ವಜಸ್ತಂಭ ಸ್ಥಾಪನೆಗೆ ಜಾಗವನ್ನು ಗೊತ್ತುಮಾಡಿ, ಆಕಾಶದಲ್ಲಿ ಸ್ವಾತಂತ್ರ್ಯ ಧ್ವಜವು ಹಾರಾಡುವಂತೆ ಎತ್ತರದ ಕಂಬವನ್ನು ಕಟ್ಟಲಾಗಿತ್ತು. ರಾಷ್ಟ್ರದ ಮೂಲೆಮೂಲೆಗಳಿಂದ ಬಂದ ದೇಶ ಬಾಂಧವರಿಗೆ ಇಳಿದುಕೊಳ್ಳಲು ಡೇರಗಳು ನಿರ್ಮಿತವಾದುವು. ಅಧಿವೇಶನಕ್ಕಾಗಿ ಬಂದ ಲಕ್ಷಾಂತರ ಜನರ ನೀರಿನ ಪೂರೈಕೆಗಾಗಿ ದೊಡ್ಡ ಬಾವಿಯೊಂದನ್ನು ತೋಡಿಸಲಾಯ್ತು. ಈ ಬಾವಿಗೆ ಕಾಂಗ್ರೆಸ್ ಬಾವಿಯೆಂದು ಹೆಸರಿಡಲಾಯ್ತು. ಆದ್ದರಿಯ ಈ ಅಧಿವೇಶನದ ಸ್ಮಾರಕವಾಗಿ ಇಂದಿಗೂ ಕಾಂಗ್ರೆಸ್ ಬಾವಿಯನ್ನು ಕಾಣಬಹುದು.

ಸ್ವಯಂಸೇವಕರಾಗಿ ಕೆಲಸ ಮಾಡಿದ ವಿದ್ಯಾರ್ಥಿಗಳಿಗೆ ನಿಷ್ಠಾವಂತ ದೇಶಭಕ್ತರ ಪರಿಚಯವಾಯ್ತು. ಈ ಅಧಿವೇಶನದ ಪ್ರಭಾವ ಎಷ್ಟಿತ್ತೆಂದರೆ, ಸ್ವಾತಂತ್ರ್ಯ ಬರುವವರೆಗೂ ದೇಶಸೇವೆಯ ದೀಕ್ಷೆಯನ್ನು ಪಡೆದು ಕಾರ್ಯ ಮಾಡುವ ತರುಣರನ್ನು ತಯಾರುಮಾಡಿತು. ಇಂತಹ ತರುಣರಲ್ಲಿ ಕಾರ್ಯ ತತ್ಪರತೆ, ಕಷ್ಟ ಸಹಿಷ್ಣುತೆ, ದೇಶಭಕ್ತಿ ತುಂಬಿ ಮುಖಂಡರು ಇವರನ್ನು ಚಳವಳಿಗೆ ಸಿದ್ಧಪಡಿಸಿ ಜೈಲಿಗೆ ಹೋಗಲು ಹುರಿದುಂಬಿಸಿದರು. ಈ ತರುಣರಲ್ಲಿ ಶ್ರೀರಂಗ ಕಾಮತರೂ ಒಬ್ಬರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಅಣ್ಣು ಗುರೂಜಿಯವರು ಉಪ್ಪಿನ ಸತ್ಯಾಗ್ರಹ ಚಳವಳಿಯ ಸಲುವಾಗಿ ೧೯೩೦ರಲ್ಲಿ ಬೆಳಗಾವಿ, ಬಾಗೇವಾಡಿ, ಸಂಪಗಾವಿ, ಬೈಲಹೊಂಗಲ, ಮುರಗೋಡ, ಸವದತ್ತಿ—ಈ ಸ್ಥಳಗಳಲ್ಲಿ ಪಾದಯಾತ್ರೆಮಾಡಿ ಸಭೆ ಸೇರಿಸುವ ಕಾರ್ಯ ಕೈಗೊಂಡರು.

ಒಂದು ದಿನ ರಾತ್ರಿ ಮುರಗೋಡದಲ್ಲಿ, ಹೀಗೆ ಶ್ರೀ ಲಕ್ಷ್ಮೀ ಗುಡಿಯಲ್ಲಿ ದೊಡ್ಡ ಸಭೆ ಸೇರಿದಾಗ ಅಣ್ಣು ಗುರೂಜಿ ಭಾಷಣ ಮಾಡಲು ಆರಂಭಿಸಿದರು. ಕೂಡಲೇ ಅಲ್ಲಿಯ ಸಬ್ ಇನ್‌ಸ್ಪೆಕ್ಟರ್ ಹಮೀರ್‌ಖಾನ್ ಪಿಸ್ತೂಲು ಹಿಡಿದು ಗುರೂಜಿಗೆ ಬೆದರಿಕೆ ಹಾಕಿ, "ಭಾಷಣ ನಿಲ್ಲಿಸಿ. ಇಲ್ಲದಿದ್ದರೆ ನಿಮಗೆ ಗುಂಡುಹಾಕುವೆ" ನೆಂದು ಘರ್ಜಿಸುತ್ತಾ ಗುರೂಜಿಯವರ ಎದೆಗೆ ಸರಿಯಾಗಿ ಪಿಸ್ತೂಲು ಹಿಡಿದಾಗಃ ಶ್ರೀರಂಗ ಕಾಮತರು ಎದ್ದು ನಿಂತು, "ಅಣ್ಣು ಗುರೂಜಿಯವರು ಪರ ಊರಿನಿಂದ ಬಂದಿದ್ದಾರೆ. ನಾನು ಇದೇ ಊರಿನವನು. ನನ್ನ ಮೇಲೆ ಗುಂಡು ಹಾಕಿರಿ" ಎಂದು ತಮ್ಮ ಎದೆ ಮುಂದುಮಾಡಿ ನಿಂತರು.

ಶ್ರೀರಂಗ ಕಾಮತರು ಆ ಪ್ರದೇಶದ ಪ್ರತಿಷ್ಠಿತ ಮನೆತನದವರಾದ್ದರಿಂದ ಈ ಘಟನೆಯ ಕಾರಣದಿಂದ ಜನತೆ ಪ್ರಕ್ಷುಬ್ಧವಾಯಿತು. ಅಷ್ಟರಲ್ಲಿ ಯಾರೋ ಗ್ಯಾಸ್ ದೀಪವನ್ನು ಆರಿಸಿದರು, ಸುತ್ತಲೂ ಕತ್ತಲಾವರಿಸಿತು. ಆ ಕತ್ತಲಲ್ಲಿ ಊರಜನರು ಸಬ್ ಇನ್‌ಸ್ಪೆಕ್ಟರನ್ನು ಚನ್ನಾಗಿ ಥಳಿಸಬೇಕೆಂದು ಗಡಿಬಿಡಿ ಮಾಡಿದರು. ಆತ ಕಾಲಿಗೆ ಬುದ್ಧಿ ಹೇಳಿ ಮಾಯವಾದನು. ಪುನಃ ಗ್ಯಾಸ್‌ದೀಪ ಬಂತು. ಅಣ್ಣು ಗುರೂಜಿಯವರ ಭಾಷಣ ನಡೆದೇ ನಡೆಯಿತು. ವಂದೇ-ಮಾತರಂ ಹಾಡಿ ಸಭೆ ಮುಗಿಯಿತು.

ಶ್ರೀರಂಗ ಕಾಮತರು ತಮ್ಮ ದೇಶಭಕ್ತಿಯ ಅಂಕುರದಿಂದಲೇ ಅಸಾಧಾರಣ ವ್ಯಕ್ತಿತ್ವವನ್ನು ನಿರೂಪಿಸಿದ್ದಾರೆ, ಇಂತಹ ಮತ್ತೊಂದು ಸಭೆಯ ಸಂದರ್ಭದಲ್ಲಿ ಶ್ರೀರಂಗ ಕಾಮತರು ಸೆರೆ ಸಿಕ್ಕಿದರು. ಮುಖಂಡರನ್ನಿಟ್ಟ ಬಿ ಕ್ಲಾಸ್ ಬ್ಯಾರಾಕಿಗೆ ಅಣ್ಣು ಗುರೂಜಿಯವರ ಜೊತೆ ಕಾಮತರನ್ನೂ ಹಾಕಿದರು. ಇವರ ಜೊತೆಯ ಕೆಲವರನ್ನು ಸಿ ಕ್ಲಾಸಿಗೆ ಕಳುಹಿಸಿ ಕ್ರಿಮಿನಲ್ ಕೈದಿಗಳ ಜೊತೆ ಕಷ್ಟಪಡಬೇಕಾದ ಸ್ಥಿತಿ ಯನ್ನು ತಿಳಿದು ರಾಜ ಬಂದಿಗಳಿಗೆ ಬಿ ಕ್ಲಾಸ್ ಕೊಡಬೇಕೆಂದೂ, ಹಾಗಿಲ್ಲದಿದ್ದರೆ ಎಲ್ಲರೂ ಸಿ ಕ್ಲಾಸ್ ಊಟವನ್ನೇ ತಿನ್ನಬೇಕೆಂದೂ ನಿರ್ಣಯ ಮಾಡಿಕೊಂಡರು. ಎ ಕ್ಲಾಸ್ ಬ್ಯಾರಕ್‌ನಲ್ಲಿದ್ದ ದಿವಾಕರರೂ ಈ ಸೂಚನೆಗೆ ಬೆಂಬಲ ಕೊಟ್ಟು ಅವರೂ ಸಿ ಕ್ಲಾಸ್ ಊಟವನ್ನೇ ತರಿಸಿಕೊಂಡರು. ಈ ಒಗ್ಗಟ್ಟಿನಿಂದ ಸಿ ಕ್ಲಾಸ್ ಊಟ ಸುಧಾರಿಸಿತು.

೧೯೩೦ ಉಪ್ಪಿನ ಸತ್ಯಾಗ್ರಹವಾದರೆ, ೧೯೩೨ರ ಆಂದೋಲನ ಜಂಗಲ್ ಸತ್ಯಾಗ್ರಹವೆಂದು ಪ್ರಸಿದ್ಧಿಯಾಯಿತು. ಅರಣ್ಯದಲ್ಲಿಯ ಸಾಗವಾನಿ ಮತ್ತು ಗಂಧದ ಮರಗಳು ಕಡಿಯಲ್ಪಟ್ಟವು. ಈ ಸಲ ಸತ್ಯಾಗ್ರಹಿಗಳಿಗೆ ಕಠಿಣ ಶಿಕ್ಷೆ ವಿಧಿಸಲಾಯ್ತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಇದಾದ ಮೇಲೆ ಗಾಂಧೀಜಿಯವರ ಹರಿಜನ ಪ್ರವಾಸ ಕಾರ್ಯದಲ್ಲಿ ಪಾಲ್ಗೊಂಡು ಶ್ರೀರಂಗ ಕಾಮತರು ನೂರಾರು ಹಳ್ಳಿಗಳನ್ನು ಕಾಲು ನಡಿಗೆಯಲ್ಲಿ ಸುತ್ತಾಡಿದರು. ಮತ್ತೆ ಸತ್ಯಾಗ್ರಹ ಮಾಡಿ ಹಿಂಡಲಗಿ ಜೈಲಿಗೆ ಹಾಕಲ್ಪಟ್ಟರು.

೧೯೩೭ರ ಚುನಾವಣೆಗಾಗಿ ಹಗಲಿರುಳು ಪ್ರಚಾರ ಕಾರ್ಯ ಕೈಗೊಂಡರು. ಕಾಂಗ್ರೆಸ್ ಸಮಿತಿಯ ಸಂಘಟನಾ ಕಾರ್ಯದಲ್ಲಿ ಅಣ್ಣು ಗುರೂಜಿ, ಚೆನ್ನಪ್ಪ ವಾಲಿ, ವೆಂಕರೆಡ್ಡಿ ಹೂಲಿ, ವಾಮನರಾವ್ ಬಿದರಿ ಇವರುಗಳೊಡನೆ ಕೆಲಸಮಾಡಿದರು. ಜಿಲ್ಲೆಯ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಕೆಲಸದ ವಿಭಾಗ ಹಂಚಿಕೊಂಡು ವಾಲಿ ಗುಂಪು, ಹೂಲಿ ಗುಂಪೆಂದು ಪ್ರಸಿದ್ಧರಾದರು. ಶ್ರೀರಂಗ ಕಾಮತರು ಹೂಲಿ ಗುಂಪಿಗೆ ಸೇರಿದ ಪ್ರಮುಖರಾಗಿದ್ದರು.

೧೯೪೨ರಲ್ಲಿ ಸತ್ಯಾಗ್ರಹಿಗಳು ಸರ್ಕಾರದ ವಿರುದ್ಧ ಬಂಡಾಯ ಘೋಷಿಸಿದಾಗ, ದಬ್ಬಾಳಿಕೆ ಶುರುವಾಗಬಹುದೆಂದು ಮೊದಲೇ ಯೋಚಿಸಿದ್ದ ಕಾರ್ಯಕರ್ತರು ಪೋಲೀಸರ ಕೈಗೆ ಸಿಗದೆ ಭೂಗತರಾಗಿ ಹೋರಾಟ ನಡೆಸಲು ತೀರ್ಮಾನಿಸಿದ್ದರು. ಅದೇ ಪ್ರಕಾರ ಶ್ರೀರಂಗ ಕಾಮತ, ಅಣ್ಣು ಗುರೂಜಿ, ಜಯದೇವ ಕುಲಕರ್ಣಿ ಮುಂತಾದ ಮುಖಂಡರು ಭೂಗತರಾಗಿದ್ದು ಚಟುವಟಿಕೆ ನಡೆಸಿದರು. ಪೋಲೀಸರ ಗುಂಡಿಗೆ ಬಲಿಯಾಗಬಾರದೆಂದು ಹೊರಗೆ ಬಂದಾಗ ಬೆಟ್ಟ ಗುಡ್ಡಗಳಲ್ಲಿ ಹಳ್ಳಕೊಳ್ಳಗಳಲ್ಲಿ ಹಗಲೂ ಇರುಳೂ ವಾಸ ಮಾಡಬೇಕಾಯಿತು. ರಾತ್ರಿ ಕತ್ತಲಲ್ಲಿ ಹೊಲಗಳಲ್ಲಿ ಮಳೆ ಸುರಿದರೂ ಮಂಜು ಬಿದ್ದರೂ ಮಲಗಬೇಕಾಯಿತು. ಮಾತಾಡಿದರೆ ಪೋಲೀಸರಿಗೆ ಸುಳಿವು ಸಿಕ್ಕಬಹುದೆಂದು ಮೂಕರಂತಿರಬೇಕಾಯಿತು. ಕೈಗೆ ಸಿಕ್ಕ ರೊಟ್ಟಿ, ಬೇಳೆ ಉಪ್ಪು ಖಾರ ನೋಡದೆ ಹೊಟ್ಟೆಗೆ ತುರುಕಿ ಹಸಿವು ನೀಗಬೇಕಾಯಿತು. ಹಾಲು ಮಜ್ಜಿಗೆ ನೋಡಿ ಎಷ್ಟೋ ದಿನಗಳಾಯ್ತು. ಈ ರೀತಿಯ ವನವಾಸ ಜೀವನವನ್ನು ನಡೆಸಿ ಕಾರ್ಯಕರ್ತರು ವಿಧ್ವಂಸಕ ಚಟುವಟಿಕೆ ನಡೆಸಿದರು. ತಂತಿ ಕತ್ತರಿಸುವುದು, ಕಛೇರಿಯ ಮೇಲೆ ದಾಳಿ ಮಾಡುವುದು– ಹೀಗೆ ಮಾಡುವ ಪ್ರತಿಯೊಂದು ಕ್ಷಣದಲ್ಲೂ ಪೋಲೀಸರ ಗುಂಡೇಟಿನ ಭಯವಿದ್ದರೂ ಸುಸಂಘಟಿತರಾಗಿ ಬ್ರಿಟಿಷ್ ಸರ್ಕಾರ ಬೆರಗಾಗುವಂತೆ ಕಾರ್ಯಮಾಡಿ ತೋರಿಸಿದರು.

"ಜಯಪ್ರಕಾಶ್ ನಾರಾಯಣ್, ಅಚ್ಯುತರಾವ್ ಪಟವರ್ಧನ್, ಸುಚೇತಾ ಕೃಪಲಾನಿ, ರಂಗನಾಥ ದಿವಾಕರ ಮುಂತಾದ ಮುಖಂಡರು ಗುಪ್ತ ರೀತಿಯಲ್ಲಿ ನಮಗೆ ಮಾರ್ಗದರ್ಶನ ಮಾಡಿದರು"— ಎನ್ನುತ್ತಾರೆ ಶ್ರೀರಂಗ ಕಾಮತ.

ಎಲ್ಲಾ ಮುಖಂಡರನ್ನೂ ಬಂಧಿಸಿಟ್ಟಿದ್ದರಿಂದ ಗಾಂಧೀಜಿಯವರು ಹೇಳಿದಂತೆ ಪ್ರತಿಯೊಬ್ಬ ಕಾರ್ಯಕರ್ತನೂ ತನ್ನಷ್ಟಕ್ಕೆ ತಾನೇ ಮುಖಂಡನಾಗಿ ಕಾರ್ಯಮಾಡಬೇಕೆಂದಾಯಿತು. ಬೆಳಗಾವಿ ಜಿಲ್ಲೆಯಲ್ಲಿ ಅಣ್ಣು ಗುರೂಜಿಯವರ ತಂಡ, ಚೆನ್ನಪ್ಪ ವಾಲಿಯವರ ತಂಡ, ವಡವಿ ಮಾಸ್ಕರ ತಂಡ, ಶ್ರೀರಂಗ ಕಾಮತರ ತಂಡ— ಹೀಗೆ ಮುಖ್ಯವಾದ ತಂಡಗಳು ಕಾರ್ಯ ಮಾಡುತ್ತಿದ್ದುದರಿಂದ ಈ ಮುಖಂಡರನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಹಿಡಿದುಕೊಟ್ಟವರಿಗೆ ತಲಾ ಐದು ಸಾವಿರ ರೂಪಾಯಿ ಬಹುಮಾನ ಕೊಡುವುದಾಗಿ ಸರ್ಕಾರ ಪ್ರಕಟಣೆ ಹೊರಡಿಸಿತ್ತು. ಪ್ರತಿಯೊಂದು ತಂಡದಲ್ಲಿ ಸುಮಾರು ನಲವತ್ತು ಕಾರ್ಯಕರ್ತರಿರುತ್ತಿದ್ದರು.

ಆಗಿನ ಪರಿಸ್ಥಿತಿ ಇಷ್ಟು ಭಯಾನಕವಾಗಿದ್ದರೂ ಕಠಿಣ ಶಿಕ್ಷೆಗಾಗಲೀ ಪ್ರಾಣಾಪಾಯವೆಂದಾಗಲೀ ಶ್ರೀರಂಗ ಕಾಮತರಂತಹ ದೇಶಭಕ್ತರು ಹಿಮ್ಮೆಟ್ಟಲಿಲ್ಲ.

ಇಂತಹ ಚಳವಳಿಗಾರ ಮುಖಂಡರ ಮನ ಒಲಿದ ಹೆಣ್ಣು ಪ್ರಮೀಳಾಬಾಯಿ ಎಂದರೆ ಆಕೆ ಸಾಮಾನ್ಯ ಹುಡುಗಿಯಾಗಿರಲಿಲ್ಲವೆಂಬುದು ಸ್ಪಷ್ಟ.

ಹುಕ್ಕೇರಿಯಲ್ಲಿ ಬೆಳೆದ ಈ ಹುಡುಗಿ ಕರ್ನಾಟಕ ಸಿಂಹರೆಂದು ಪ್ರಸಿದ್ಧರಾದ ದೇಶಭಕ್ತ ಗಂಗಾಧರ ದೇಶಪಾಂಡೆಯವರ ಪ್ರಭಾವಕ್ಕೊಳಗಾದಳು. ಲೋಕಮಾನ್ಯ ತಿಲಕ್ ಮತ್ತು ಮಹಾತ್ಮಾ ಗಾಂಧಿಯವರ ಪಟ್ಟ ಶಿಷ್ಯರಾಗಿದ್ದ ಗಂಗಾಧರರಾಯರ ಪ್ರಯತ್ನದಿಂದ ಇಡೀ ಬೆಳಗಾವಿ ಜಿಲ್ಲೆಯಲ್ಲಿ ಕಾಂಗ್ರೆಸ್ ಗಾಳಿ ಬೀಸಲು ಪ್ರಾರಂಭವಾಯಿತು.

ಬೆಳಗಾವಿ, ಸಂಕೇಶ್ವರ, ಪಾಚ್ಛಾಪುರ, ನಿಪ್ಪಾಣಿ, ಅಥಣಿ, ಕಿತ್ತೂರು, ಚಿಕ್ಕೋಡಿ ಮುಂತಾದ ಊರುಗಳಲ್ಲಿ ಕಾಂಗ್ರೆಸ್ಸಿನ ವಾತಾವರಣ ಹರಡಿದಾಗ, ಪಾಚ್ಛಾಪುರದ ಬಾಳಾಜಿ ಯ. ದೇಶಪಾಂಡೆ (ಅಣ್ಣು ಗುರೂಜಿ)ಯವರ ಬಾಲ ಮನದ ಮೇಲೆ ಮಂತ್ರದಂತೆ ಟಿಳಕರ ಮಾತು ಅಚ್ಚೊತ್ತಿತು. ೧೯೧೦ರಿಂದಲೇ ಸ್ವದೇಶೀವ್ರತ ಕೈಗೊಂಡು ಪಾಚ್ಛಾಪುರ ಜಿಲ್ಲೆಯನ್ನು ಅತ್ಯಂತ ಚಳವಳಿಯ ಕೇಂದ್ರವನ್ನಾಗಿ ಮಾಡಿದರು. ಕೈ ನೂಲನ್ನೇ ಉಪಯೋಗಿಸುವ ಇವರ ಉಪದೇಶ ಪ್ರಮೀಳಾರವರನ್ನು ಆಕರ್ಷಿಸಿತು. ಮಹಾರಾಷ್ಟ್ರದ ಮಹಿಳಾ ಸೇನಾ ತರಬೇತಿಯನ್ನು ಪಡೆದರು. ಮಕ್ಕಳನ್ನು ಸೇರಿಸಿಕೊಂಡು ಚರಕಾದಲ್ಲಿ ನೂಲು ತೆಗೆಯುವುದು, ಹಂಜಿ ಮಾಡುವುದನ್ನು ಹೇಳಿಕೊಟ್ಟರು.

ಅಸಹಕಾರ ಚಳವಳಿಯ ಸಮಯದಲ್ಲಿ ಬೆಳಗಾವಿಯ ಮಹಿಳೆಯರ ಪಾತ್ರ ಅತಿಮುಖ್ಯ. ಪ್ರಭಾತ ಫೇರಿ ಹೊರಡುವುದು, ರಾಷ್ಟ್ರ ಭಕ್ತಿ ಗೀತೆಗಳನ್ನು ಹಾಡುತ್ತಾ ರಾಷ್ಟ್ರ ಧ್ವಜದೊಡನೆ ಮೆರವಣಿಗೆ ಹೊರಡುವುದು ಇವು ಎಲ್ಲಾ ಮಹಿಳೆಯರ ದಿನಚರಿಯಾಗಿತ್ತು. ೧೯೩೦ರ ಆಗಸ್ಟ್‌ನಲ್ಲಿ ಶೇಂದಿ ಗಿಡಗಳನ್ನು ಕಡಿದುಹಾಕುವ ಚಳವಳಿ ಆರಂಭವಾದಾಗ, ಮೆರವಣಿಗೆಯಲ್ಲಿ ಹೊರಟವರಿಗೆ ಮಹಿಳೆಯರು ಆರತಿಮಾಡಿ,ರೊಟ್ಟಿ ಬುತ್ತಿಕೊಟ್ಟು ಹಾರೈಸಿ ಕಳುಹಿಸುತ್ತಿದ್ದರು. ಇಂತಹ ವಾತಾವರಣವೇ ಇದ್ದ ಬೆಳಗಾವಿ ಜಿಲ್ಲೆಯಲ್ಲಿ ಪ್ರಮೀಳಾಬಾಯಿಯಂತಹ ಹೆಣ್ಣು ಭಾಗವಹಿಸಿದುದು ವಿಶೇಷವೇನಲ್ಲ.

೧೯೪೨ರ ಚಲೇಜಾವ್ ಚಳವಳಿ ಪ್ರಾರಂಭವಾಗುತ್ತಲೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಾಕಷ್ಟು ಪ್ರಭಾವಿತರಾಗಿದ್ದ ಹದಿನೆಂಟು ವರ್ಷದ ನವತರುಣಿ ಪ್ರಮೀಳಾಬಾಯಿ ದೇಶಪಾಂಡೆ ವಿದ್ಯಾರ್ಥಿನಿಯರನ್ನು ಕಲೆಹಾಕಿ ಮುಖಂಡತ್ವ ವಹಿಸಿದರು. ಇವರ ನೇತೃತ್ವದಲ್ಲಿ ಕರಪತ್ರ ಹೊರಡಿಸಿ ಹಂಚುವುದು, ಅಕ್ಟೋಬರ್ ೨ ರಂದು ಗಾಂಧೀ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಜಯಂತಿ ನಡೆಸುವುದು. ಜನವರಿ ೨೬ ರಂದು ಸ್ವಾತಂತ್ರ್ಯ ದಿನಾಚರಣೆ. ಆಗಸ್ಟ್ ೯ರ ಚಲೇಜಾವ್ ಕ್ರಾಂತಿ ದಿನ–ಈ ವಿಶೇಷ ದಿನಗಳಲ್ಲಿ ಪ್ರಭಾತ ಫೇರಿ ಧ್ವಜವಂದನೆ, ಸಾಮುದಾಯಿಕ ಸೂತ್ರಯಜ್ಞ ಮೊದಲಾದ ಕಾರ್ಯಕ್ರಮ ವಿದ್ಯಾರ್ಥಿ ವೃಂದದಿಂದ ಜರುಗುತ್ತಿತ್ತು. ಈ ಕಾರ್ಯಕ್ರಮಗಳಿಂದ ಪ್ರಮೀಳಾಬಾಯಿ ಜನರಲ್ಲಿ ಸ್ವಾತಂತ್ರ್ಯಾಕಾಂಕ್ಷೆಯನ್ನುಂಟುಮಾಡಿ ಜಾಗೃತಗೊಳಿಸುವುದರಲ್ಲಿ ಸಫಲರಾದರು. ಆದರೆ ಪೋಲಿಸರ ಶಿಕ್ಷೆ ಕಾದಿತ್ತು. ಬಂಧನಕ್ಕೊಳಗಾದರು.

"೧೯೪೨ರ ಚಲೇಜಾವ್ ಚಳವಳಿ ಗಾಳಿ ಬೀಸಿ, ಆ ಗಾಳಿಯಲ್ಲಿ ಇವಳು ಸಿಕ್ಕಿ ಹಾಕಿಕೊಂಡಳು."—ಎನ್ನುತ್ತಾರೆ ಶ್ರೀರಂಗ ಕಾಮತ. ಈ ಚಳವಳಿಯ ಹೋರಾಟವು ಬೆಳಗಾವಿ ಜಿಲ್ಲೆಯಲ್ಲಿ ಅತ್ಯಂತ ಪ್ರಖರವಾಗಿದ್ದು ಜಿಲ್ಲೆಯ ಪ್ರಮುಖ ಕಾರ್ಯಕರ್ತರಲ್ಲೊಬ್ಬರಾದ ಶ್ರೀರಂಗ ಕಾಮತರು ಚಳವಳಿಯ ನೇತೃತ್ವ ವಹಿಸಿ ನ ಭೂತೋ ನ ಭವಿಷ್ಯತಿ ಎಂದು ಹೇಳಬಹುದಾದ ಕಾರ್ಯ ಮಾಡಿದರೆಂದು ವರದಿ ಇದೆ.

ಭೂಗತರಾಗಿ ಸಾಧನೆ ಮಾಡುತ್ತಿದ್ದ ಕಾರ್ಯಕರ್ತರಿಗೆ ನೆರವಾಗಿ ಅವರು ಹೇಳಿದ ಕೆಲಸವನ್ನು ಗುಪ್ತವಾಗಿ ಮಾಡಬೇಕಾದುದು ಹೆಣ್ಣುಮಕ್ಕಳ ಕರ್ತವ್ಯವಾಗಿತ್ತು. ಇಂತಹ ಸಂದರ್ಭದಲ್ಲಿ ಶ್ರೀರಂಗ ಕಾಮತರಿಗೆ ಪ್ರಮೀಳಾಬಾಯಿ ನೆರವಾಗಿ ನಿಂತರು.

"ನಮ್ಮ ಮದುವೆಯಾದ ಮೇಲೆ ಕಾಂಗ್ರೆಸ್ ಕಾರ್ಯಕರ್ತರು, ದೇಶಭಕ್ತರು ಯಾರು ಬಂದರೂ ನಮ್ಮ ಮನೆ ಬಾಗಿಲು ತೆರೆದೇ ಇತ್ತು, ಬಂದವರಿಗೆಲ್ಲಾ ಮನೆಯಲ್ಲಿ ಊಟ. ಪ್ರಮೀಳಾ ದಿನಕ್ಕೆ ಕಡೇ ಪಕ್ಷ ಹದಿನೈದು ಜನಕ್ಕೆ ರೊಟ್ಟಿ ಬಡೀತಿದ್ದಳು"— ಎನ್ನುತ್ತಾರೆ ಕಾಮತ್. ಬೆಳಗಾವಿಯಲ್ಲಿ ಬಾಲವಾಡಿ ಪ್ರಾರಂಭ ಮಾಡಿದ ಮಹಿಳಾ ಮುಖಂಡರಲ್ಲಿ ಪ್ರಮೀಳಾ ದೇಶಪಾಂಡೆಯವರು ಒಬ್ಬರು.

'ಹುಕ್ಕೇರಿಯಲ್ಲಿ ಒಂದು ಸಲ ಮಹಿಳಾ ಮಂಡಳಿಗೆ ಗ್ರಾಂಟ್ ಕೊಡಲು ತನಿಖೆ ನಡೆದಾಗ, ಲಿಂಗಾಯಿತರ ಮಹಿಳಾ ಮಂಡಳಿಯೊಂದು, ಬ್ರಾಹ್ಮಣರ ಮಹಿಳಾ ಮಂಡಳಿಯೊಂದು ಹೀಗೆ ಎರಡು ಪ್ರತ್ಯೇಕ ಮಂಡಳಿ ಇದ್ದುದರಿಂದ ಇದನ್ನು ಕಂಡ ಅಧಿಕಾರಿ, ನಮ್ಮ ಭಾವನೆಯಲ್ಲಿ ಮಹಿಳಾಮಂಡಲ ಎನ್ನುವುದೊಂದೇ. ಪ್ರತ್ಯೇಕವಾಗಿ ಎರಡು ಮಂಡಳಿಗೆ ಗ್ರಾಂಟ್ ಕೊಡಲಾಗುವುದಿಲ್ಲವೆಂದಾಗ ಎರಡು ಸಂಘಟನೆಗಳೂ ಒಂದಾದರು'—ಎಂದು ಹುಕ್ಕೇರಿಯ ಘಟನೆಯನ್ನು ನೆನೆದು ಹೇಳುತ್ತಾರೆ ಪ್ರಮೀಳಾ.

ಸತ್ಯಾಗ್ರಹದಲ್ಲಿ ಪ್ರಮೀಳಾರವರ ವೈಯಕ್ತಿಕ ಸಾಧನೆಯನ್ನು ಪ್ರಶ್ನಿಸಲು "ನಾನೇನ್ರೀ ಮಾಡಿದ್ದೇನೆ ? ಮದುವೆಗೆ ಮುಂಚೆ ಜೈಲುವಾಸ. ಜೈಲುಬಿಟ್ಟು ಬಂದ ಮೇಲೆ ಶ್ರೀರಂಗ ಕಾಮತರು ಹೇಳಿದ್ದನ್ನು ಮಾಡಿದ್ದೇನೆ ಅಷ್ಟೆ. ಅವರ ಮಾರ್ಗದರ್ಶನವೇ ಇಲ್ಲಿ ಮುಖ್ಯ. ನನ್ನದೇ ಪ್ರತ್ಯೇಕವಾಗಿ ಚಳವಳಿ ಇಲ್ಲ. ಈಗ ಶಾಲೆಯೊಂದರ ಶಿಕ್ಷಕಿಯಾಗಿದ್ದೇನೆ. ಖಾದಿ ಗ್ರಾಮೋದ್ಯೋಗದ ಕೆಲಸವಿರುತ್ತದೆ. ಮೊದಲು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಪ್ರಾರಂಭಿಸಿದ ಈ ಉದ್ಯೋಗ ಈಗ ಹತ್ತು ಹನ್ನೆರಡು ಕೇಂದ್ರಗಳಾಗಿವೆ"—ಎಂದು ಸರಳವಾಗಿ ಹೇಳುತ್ತಾರೆ.

ಸಹನಾ ಎಂಬುದು ಹೆಣ್ಣಿಗೆ ಎಷ್ಟಿರಬೇಕೆಂದು ಪ್ರಮೀಳಾಳಿಂದ ತಿಳಿಯ ಬಹುದು—ಎಂದು ಹೇಳಿದವರು ಕಾಮತರೇ.

"ತಾಳ್ಮೆ ಇಟ್ಟ ಹೊರತು ತಿಳುವಳಿಕೆ ಬರೋದಿಲ್ಲ. ಮನೆ ಗೃಹಿಣಿಯಾಗಿ ಹೊರಗೆ ದುಡಿದು ಬಂದು ಮಿಕ್ಕ ವೇಳೆಯಲ್ಲಿ ಪುಸ್ತಕಗಳನ್ನೂ ಓದುತ್ತಾಳೆ. ಸಾಹಿತ್ಯ ಪ್ರತಿಭೆ ಇರುವುದರಿಂದ ವ್ಯಾಖ್ಯಾನ ಚೆನ್ನಾಗಿ ಮಾಡುತ್ತಾಳೆ. ವೈಚಾರಿಕವಾಗಿ ಜೀವನ ನಡೆಸಬೇಕು. ನಾವು ಆಸ್ತಿ ಮಾಡಿಲ್ಲ. ಜೀವನ ಪಾಯಾ ಶುದ್ಧ ಇರಬೇಕು. ಜೀವನದಲ್ಲಿ ಎಷ್ಟು ಅಭ್ಯಾಸ ಮಾಡಿದರೂ ಕಡಿಮೆ. ಸಂಸ್ಕಾರ ದೃಷ್ಟಿಯಿಂದ ನಾವು ಛಲೋ ಆಗಬೇಕು. ನಮ್ಮ ಮಕ್ಕಳಿಗೆ ಇದನ್ನೇ ಕಲಿಸಬೇಕು."

ಸೇವಾ ಎಂದರೆ ನಿಷ್ಕಾಮ ಕರ್ಮವಾಗಬೇಕು. "ಸೇವೆ ಕಷ್ಟ ಅಲ್ಲ. ಸಮಾ ಧಾನ, ಮನಸ್ಸಿನ ತೃಪ್ತಿ—ಇದೇ ಸೇವಾಭಾವ. ತಾಯಿ ತ್ಯಾಗಿಯಾಗಬೇಕು. ಹೆಣ್ಣು ಪರರ ಮನೆಗೆ ಹೋದರೂ ಹೊಂದಿಕೊಳ್ಳುತ್ತಾಳೆ. ನಮ್ಮ ಜನಾಂಗದ ಶೌರ್ಯ ಮತ್ತೆಲ್ಲಿದೆ ? ಸಂಗ್ರಾಮದ ಹೋರಾಟದಲ್ಲಿ ಮಗ ಸತ್ತನೆಂದು ತಿಳಿದು ತಾಯಿ ಬಂದೂಕು ತೆಗೆದು ತನ್ನನ್ನೇ ತಿವಿದು ಕೊಂಡಳು. ಹೀಗಿದ್ದರೂ ಈಗಲೂ ನಮ್ಮ ದೇಶದಲ್ಲಿ ಸ್ತ್ರೀ ಮತ್ತು ಶೂದ್ರರಿಗೆ ಸ್ಥಳವಿಲ್ಲ, ಇದಕ್ಕಾಗಿಯೇ ಸ್ತ್ರೀ ಶಕ್ತಿ ಜಾಗೃತಿ ಬೇಕಾಗಿದೆ" ಎಂದು ಹೇಳಿ ಶ್ರೀರಂಗ ಕಾಮತರು ಧಾರವಾಡದ ಗಾಂಧೀಶಾಂತಿ ಪ್ರತಿ ಷ್ಠಾನದ ಮಹಿಳಾ ವಿಭಾಗದ ಕಾರ್ಯಸಾಧನೆಯನ್ನು ತಿಳಿಸಿ, ಕಾರ್ಯದರ್ಶಿ ಶಕುಂತಲಾ ಕುರ್ತಕೋಟಿಯವರು ಪ್ರಕಟಿಸಿರುವ ಮಹಿಳಾ ಪಾತ್ರದ ಬಿನ್ನಹ ಪತ್ರಿಕೆಯನ್ನು ಕೊಡುವರು.

ಹೆಣ್ಣಿನ ಬಗ್ಗೆ ಶ್ರೀರಂಗ ಕಾಮತರಿಗಿರುವ ಕಳಕಳಿ ಇದರಿಂದ ಅರ್ಥವಾಗುತ್ತದೆ.

ಪ್ರಮೀಳಾ ಮತ್ತು ಶ್ರೀರಂಗ ಕಾಮತರ ಭಾವಚಿತ್ರ ಬೇಕೆಂದಾಗ, ಕಾಮತರು. "ಮತ್ತೆ ಮೂರ್ತಿ ಪೂಜಾ ಬೇಡವೆನ್ನಬೇಕಾಗುತ್ತದ"—ಎಂದು ಎಚ್ಚರಿಕೆ ಕೊಟ್ಟು ಕಳುಹಿಸಿದರು.

ನಮ್ಮೊಡನೆ ಹೊರಗೆ ಬಂದ ಪ್ರಮೀಳಾಬಾಯಿ, ಮತ್ತೊಂದು ಸಂದರ್ಭವನ್ನು ನೆನೆದು, 'ಫೋಟೋಗ್ರಾಫರ್ ಬಂದಾಗಲೂ ಅವನಿಗೆ ಮುಖ ಕೊಡದೆ ಒಳಗೆ ಹೋಗಿ ದ್ದಾರೆ' ಎಂದು ಹೇಳಿ ಕೈಯಲ್ಲಿ ಒಂದು ಫೋಟೋವನ್ನು ಮರೆಯಾಗಿ ತಂದಿಟ್ಟರು.

"ಮನೆಯವರಿಗಾಗಿ ಎಂದ ಮೇಲೆ ಈ ಫೋಟೋಕ್ಕೆ ನಿಂತರು ಅಷ್ಟೆ. ಅವರಿಗೆ ಕಾಣದೆ ಕೊಟ್ಟಿದ್ದೇನೆ. ಆಮೇಲೆ ಬೇಕಾದರೆ ನನ್ನನ್ನು ದೂಷಿಸಲಿ" ಎಂದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

## ಪವಿತ್ರ ಮೃತ್ತಿಕಾ ವಾಹಿನಿ

# ಅನ್ನಪೂರ್ಣಾದೇವಿ ತಿಮ್ಮಾರೆಡ್ಡಿ

ಇದು ಸ್ವಾತಂತ್ರ್ಯದ ೪೦ನೆಯ ಹುಟ್ಟು ಹಬ್ಬದ ವರ್ಷ. ಮತ್ತು ಹೆಚ್ಚಿನ ಹರ್ಷವೆಂದರೆ, ಕ್ವಿಟ್ ಇಂಡಿಯಾ ಚಳವಳಿಯಾಗಿ ೪೫ ವರ್ಷಗಳು ಸಂದವು. ಮತ್ತೊಂದು ಸಂತೋಷ ಸುದ್ದಿ–ಇದೇ ವರ್ಷವೇ ಜವಾಹರ್‌ಲಾಲ್ ನೆಹರೂರವರ ಶತಾಬ್ಧಿ ಮಹೋತ್ಸವ ಪ್ರಾರಂಭವೂ ತುಂಬಿ ಬಂತು. ಈ ಎಲ್ಲಾ ಹೆಗ್ಗಳಿಕೆಯ ಶುಭ ಸೂಚಕವಾಗಿ ೧೯೮೭ನೆಯ ಆಗಸ್ಟ್ ತಿಂಗಳಲ್ಲಿ ನಮ್ಮ ರಾಷ್ಟ್ರವು ಅದ್ದೂರಿಯಿಂದ ವಿಜೃಂಭಿಸಿತು. ಈ ಶುಭದ ಸಂಕೇತವಾಗಿ ರಾಷ್ಟ್ರದ ೨೪ ರಾಜ್ಯಗಳಿಂದಲೂ ಮೃತ್ತಿಕೆಯನ್ನು ಸಂಗ್ರಹಿಸಿ ರಾಷ್ಟ್ರದ ರಾಜಧಾನಿ ದೆಹಲಿಗೆ ತಲುಪಿಸಲಾಯಿತು. ೨೪ ರಾಜ್ಯದ ಮಣ್ಣೂ ದೆಹಲಿಯ ರಾಜ್‌ಘಾಟ್‌ನಲ್ಲಿ ಬೆರೆತು ೧೯೮೭ನೆಯ ಆಗಸ್ಟ್ ತಿಂಗಳ ನೆನಪಿಗಾಗಿ ಹುಟ್ಟು ಹಾಕಿದ ವೃಕ್ಷಕ್ಕೆ ಮೂಲಾಧಾರವಾಗಿ ೧೬-೮-೮೭ರಂದು ನೆಲೆಗೊಂಡಿತು.

ಪ್ರತಿ ರಾಜ್ಯದ ಸ್ವಾತಂತ್ರ್ಯ ಹೋರಾಟದ ಐತಿಹಾಸಿಕ ಪ್ರಸಿದ್ಧ ಸ್ಥಳಗಳ ಭೂಮಿಯ ಮಣ್ಣನ್ನು ಅತ್ಯಂತ ಪವಿತ್ರವೆಂದು ಪರಿಗಣಿಸಲಾಗಿ, ಅಂತಹ ಪವಿತ್ರ ಮೃತ್ತಿಕೆಯನ್ನು ಕಲಶಗಳಲ್ಲಿ ತುಂಬಿ, ಶಾಸ್ತ್ರೋಕ್ತ ಶುಭ ಸಂಪ್ರದಾಯದಂತೆ ಅಲಂಕಾರ ಪೂಜೆಗಳು ನಡೆದು ವಾದ್ಯಘೋಷಗಳೊಡನೆ ವಿವಿಧ ರಾಜ್ಯಗಳ ಮಣ್ಣು ದೆಹಲಿಯಲ್ಲಿ ಒಂದುಗೂಡಿತು.

ಮೃತ್ತಿಕೆಯನ್ನು ಸಂಗ್ರಹಿಸುವ ಸ್ಥಳಗಳು ಹೇಗೆ ಸ್ವಾತಂತ್ರ್ಯ ಸಂಗ್ರಾಮದ, ಪವಿತ್ರ ಸ್ಥಳಗಳೋ ಹಾಗೆ ಕಲಶಗಳನ್ನು ಹಿಡಿದು ಮೆರವಣಿಗೆ ಹೊರಡುವ ವ್ಯಕ್ತಿಗಳೂ ಸ್ವಾತಂತ್ರ್ಯ ಹೋರಾಟದ ತ್ಯಾಗಿಗಳಾದ ಪವಿತ್ರ ವ್ಯಕ್ತಿಗಳಾಗಿರುವಂತೆ ನಿರ್ಣಯಿಸಲಾಗಿತ್ತು.

ಮೃತ್ತಿಕೆಯನ್ನು ಕೊಟ್ಟ ಕರ್ನಾಟಕದ ಐತಿಹಾಸಿಕ ಪ್ರಸಿದ್ಧ ಸ್ಥಳಗಳು–ವಿದುರಾಶ್ವತ್ಥ, ಅಂಕೋಲ ಮತ್ತು ಶಿವಪುರ. ಈ ಮೂರು ಸ್ಥಳಗಳಿಂದ ಮೃತ್ತಿಕೆಯನ್ನು ಹೊತ್ತ ಮಹಾವ್ಯಕ್ತಿಗಳು ಕ್ರಮವಾಗಿ ಶ್ರೀಮತಿ ಅನ್ನಪೂರ್ಣಾದೇವಿ, ಶ್ರೀ ಅನಂತ ಪೈ ಮತ್ತು ಶ್ರೀ ಕೆ.ಸಿ. ಚನ್ನಯ್ಯ.

ಆಗಸ್ಟ್ ಏಳನೆಯ ದಿನ ವಿದುರಾಶ್ವತ್ಥದಿಂದ ಅನ್ನಪೂರ್ಣಾದೇವಿಯವರ(ಅಮೃತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಹಸ್ತದಿಂದ ಕಲಶದಲ್ಲಿ ಸಂಗ್ರಹಿಸಿದ ಮಣ್ಣು ಒಂಭತ್ತನೆಯ ದಿನ ಕರ್ನಾಟಕದ ಮುಖ್ಯ ಮಂತ್ರಿ ಶ್ರೀ ರಾಮಕೃಷ್ಣ ಹೆಗಡೆಯವರಿಗೆ ತಲುಪಿತು. ವಿಧಾನಸೌಧದಿಂದ ಈ ಮಣ್ಣನ್ನು ಅನ್ನಪೂರ್ಣಾದೇವಿಯವರೇ ಆಗಸ್ಟ್ ಹದಿಮೂರನೆಯ ದಿನ ದೆಹಲಿಗೆ ತೆಗೆದುಕೊಂಡು ಹೋದರು. ಹೀಗೆಯೇ ಎಲ್ಲಾ ರಾಜ್ಯಗಳಿಂದಲೂ ಆಗಸ್ಟ್ ಹದಿನೈದಕ್ಕೆ ಪವಿತ್ರ ಮೃತ್ತಿಕೆ ದೆಹಲಿಯಲ್ಲಿ ಒಂದುಗೂಡಿತು.

ಕರ್ನಾಟಕದ ಶಿವಪುರವು ಧ್ವಜಾರೋಹಣದ ಯಶಸ್ಸಿಗೆ ಪ್ರಸಿದ್ಧಿ. ಅಂಕೋಲ ಉಪ್ಪು ಸತ್ಯಾಗ್ರಹಕ್ಕೆ ಪ್ರಸಿದ್ಧಿ. ವಿದುರಾಶ್ವತ್ಥವನ್ನು ದಕ್ಷಿಣದ ಜಾಲಿಯನ್ ವಾಲಾಬಾಗ್ ಎಂದೇ ಕರೆಯುವರು. ಬ್ರಿಟಿಷ್ ಸರ್ಕಾರದ ಕ್ರೌರ್ಯದಿಂದ ಇಲ್ಲಿ ನಡೆದ ಹತ್ಯಾಕಾಂಡವನ್ನು ಜಾಲಿಯನ್‌ವಾಲಾಬಾಗ್‌ನ ದುರಂತಕ್ಕೆ ಹೋಲಿಸಬಹುದು. ಅಂತೆಯೇ ವಿದುರಾಶ್ವತ್ಥದಲ್ಲಿ ದೇಶಕ್ಕಾಗಿ ಬಲಿದಾನವಾದ ದೇಶಪ್ರೇಮಿಗಳ ಚಿರಸ್ಮರಣೀಯವಾದ ಸ್ಮಾರಕವಿದೆ.

ವಿದುರಾಶ್ವತ್ಥ ಪುರಾಣದ ದೃಷ್ಟಿಯಿಂದ ಪುಣ್ಯಭೂಮಿ. ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ ಸ್ವಾತಂತ್ರ್ಯ ಚಳವಳಿಯ ಐತಿಹಾಸಿಕ ಪ್ರಸಿದ್ಧ ಭೂಮಿಯೂ ಹೌದು.

ಇಂತಹ ಪವಿತ್ರ ಸ್ಥಳಕ್ಕೆ ಸೇರಿದವರು ಅನ್ನಪೂರ್ಣಾದೇವಿ ತಿಮ್ಮಾರೆಡ್ಡಿಯವರು. ೭೩ ವರ್ಷ ವಯಸ್ಸಿನ ಈಕೆಯನ್ನು ನೋಡಿದರೆ ಇಂದಿಗೂ ವೀರಾಗ್ರಣಿ ಎನ್ನಬಹುದು. ಎತ್ತರದ ನಿಲುವು, ಕುಗ್ಗದ ಶರೀರ, ದೇಶಭಕ್ತಿಯ ಕಳೆ. ಮುಖಂಡತ್ವಕ್ಕೆ ಯೋಗ್ಯವಾದ ವ್ಯಕ್ತಿತ್ವ ಇವರಲ್ಲಿ ಎದ್ದುಕಾಣುತ್ತದೆ.

ಅನಿರೀಕ್ಷಿತವಾಗಿ ತಿಮ್ಮಾರೆಡ್ಡಿಯವರು ೧೫-೯-೮೭ರಂದು ನಿಧನರಾದರು. ಅನ್ನಪೂರ್ಣಾದೇವಿಯವರನ್ನು ಕಾಣಲು ಹೋದಾಗ, ಭೇಟಿಯ ಪ್ರಥಮ ವಾಕ್ಯವೇ ಇದು, "ಅವರು ಹೋಗಿ ಇಂದಿಗೆ ಸರಿಯಾಗಿ ಒಂದು ತಿಂಗಳಾಯ್ತು." ಎಂದು ತಗ್ಗಿದ ಧ್ವನಿಯಲ್ಲಿ ಮಾತು ಪ್ರಾರಂಭಿಸಿದರು.

ಬಹಳ ವ್ಯಸನದಲ್ಲಿರುತ್ತಾರೆಂದು ಗೊತ್ತು. ಆದರೆ ಟೆಲಿಫೋನ್ ಮೂಲಕ ಸಂಪರ್ಕಿಸಿದಾಗ, "ಪರವಾಗಿಲ್ಲ ಬನ್ನಿ. ನಾನು ಮಾತಾಡುವೆನು... ಮನುಷ್ಯರಾಗಿ ಹುಟ್ಟಿದ ಮೇಲೆ ಇದನ್ನೆಲ್ಲಾ ನೋಡಲೇಬೇಕು. ಸಹಿಸಿಕೊಳ್ಳಬೇಕು... ನೆನ್ನೆಯವರೆಗೂ ವಿದೇಶದಲ್ಲಿರುವ ನನ್ನ ಹೆಣ್ಣುಮಕ್ಕಳೂ ಮತ್ತು ಮಗನೂ ಇಲ್ಲಿ ಬಂದು ಬಂದು ನನ್ನೊಂದಿಗಿದ್ದರು, ನಿನ್ನೆ ಎಲ್ಲರೂ ಪ್ರಯಾಣಮಾಡಿದರು. ಈಗ ನಾನು ನನ್ನ ಮಗಳು ಲಕ್ಷ್ಮಿಯೊಂದಿಗಿದ್ದೇನೆ ಬನ್ನಿ"– ಎಂಬ ಉತ್ತರ ಬಂದಮೇಲೆಯೇ ಭೇಟಿಯಾದುದು. ಆದರೂ ನೇರಾಗಿ ಕಂಡಾಗ ದುಃಖ ಒತ್ತರಿಸಿ ಬಂತು. ಹದಿಮೂರನೆಯ ತಾರೀಖನ್ನು ಗಮನಿಸದೆ ಅವರನ್ನು ಕಾಣಲು ಹೋದುದು ಪರಸ್ಪರ ವ್ಯಸನದಲ್ಲಿ ಮುಳುಗುವಂತಾಯಿತು.

ಕರ್ನಾಟಕದಲ್ಲಿ ನಿಸ್ವಾರ್ಥ ಸೇವಾ ನಿರತರಾಗಿ ಜೀವನ ಕಳೆದ ತಿಮ್ಮಾರೆಡ್ಡಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಯವರ ಪತ್ನಿ ಅನ್ನಪೂರ್ಣಾದೇವಿ ತನ್ನ ಪತಿಯಾಗುವವರೊಡನೆ ಸಹ ಜೀವನ ನಡೆಸಲು ಸಿದ್ಧರಾಗಿ ಅವರ ಕೈಹಿಡಿದವರೆಂಬಂತೆ, ಚಿಕ್ಕ ವಯಸ್ಸಿನಲ್ಲೇ ದೇಶಭಕ್ತಿ ದೇಶ ಪ್ರೇಮದ ವಾತಾವರಣದಲ್ಲಿ ಬೆಳೆದು ಬಂದವರು. ಇವರ ಜನನ ಆಂಧ್ರಪ್ರದೇಶ ದಲ್ಲಿ. ಆಂಧ್ರದ ಗುಂಟೂರು ಡಿಸ್ಟ್ರಿಕ್ಟಿನ ದೊಡ್ಲೇರು ಎಂಬ ಹಳ್ಳಿಯಲ್ಲಿ ಹುಟ್ಟಿದ ಅನ್ನಪೂರ್ಣೆಗೆ ಪ್ರೈಮರಿ ವಿದ್ಯಾಭ್ಯಾಸ ನಡೆದುದು ಸ್ವಂತ ಹಳ್ಳಿಯಲ್ಲೇ. ತಂದೆ ವೆಂಕಟಪ್ಪರೆಡ್ಡಿ ತೆಲುಗು ಪಂಡಿತರು. ದೇಶೀಯ ಭಾಷೆಗಳ ಮೇಲೆ ಮೋಹವುಳ್ಳ ವರು. ಹೆಣ್ಣು ಮಕ್ಕಳೂ ವಿದ್ಯೆ ಕಲಿತು ಮುಂದುವರಿಯಬೇಕೆಂಬ ಧ್ಯೇಯದ ಅಂದಿನ ಉದಾರ ಭಾವನೆಯ ಅಪರೂಪದ ವ್ಯಕ್ತಿಗಳಲ್ಲೊಬ್ಬರು. ವಿಶಾಲ ಮನೋ ಭಾವನೆಯ ಉದಾತ್ತ ವ್ಯಕ್ತಿಗಳು.

"ನಿನ್ನ ಮದುವೆಯ ಸಮಯದಲ್ಲಿ ಮಂತ್ರಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳ ಬೇಕಮ್ಮ. ಮಂತ್ರಗಳನ್ನು ಕಿವಿಗೊಟ್ಟು ಕೇಳು' ಎಂದಿದ್ದರು ನಮ್ಮ ತಂದೆ. 'ಹೆಣ್ಣು ಮಕ್ಕಳೂ ಸಂಸ್ಕೃತ ಕಲಿತು ಹಿಂದೂ ಪವಿತ್ರ ಗ್ರಂಥಗಳನ್ನು ಓದಬೇಕು. ಹಿಂದೂ ಸಂಸ್ಕೃತಿಯನ್ನು ತಿಳಿದುಕೊಳ್ಳಬೇಕು' ಎನ್ನುತ್ತಿದ್ದರು"–ಎನ್ನುತ್ತಾರೆ ಮದುವೆ ಚಪ್ಪರದಲ್ಲಿ ತಮ್ಮ ಮದುವೆಯ ದಿನ ತಂದೆ ಹೇಳಿದ್ದ ಮಾತನ್ನು ನೆನೆದು.

ಇಂತಹ ತಂದೆಯ ಪುತ್ರಿಯಾಗಿ ಜನಿಸಿದ ಅನ್ನಪೂರ್ಣಾದೇವಿಗೆ ಬಾಲ್ಯದಿಂದ ಉತ್ತೇಜನವಿದ್ದುದರಲ್ಲಿ ಸಂದೇಹವಿಲ್ಲ.

ಗುಂಟೂರಿನ ಪ್ರಸಿದ್ಧ ನ್ಯಾಷನಲ್ ಶಾರದಾ ನಿಕೇತನವೆಂಬ ಶಾಲೆಯ ಸ್ಥಾಪಕ ರಾದ ಶ್ರೀ ಲಕ್ಷ್ಮೀನಾರಾಯಣ ದಂಪತಿಗಳು ಅನ್ನಪೂರ್ಣಾದೇವಿಯನ್ನು ಆಕರ್ಷಿಸಿ ದರು. ಮಗಳ ಇಚ್ಛೆಯಂತೆ ವೆಂಕಟಪ್ಪರೆಡ್ಡಿಯವರು ಗುಂಟೂರಿನ ನ್ಯಾಷನಲ್ ಶಾಲೆಯಾದ ಶಾರದಾ ನಿಕೇತನ ರೆಸಿಡೆನ್ಷಿಯಲ್ ಸ್ಕೂಲಿಗೆ ಮಗಳನ್ನು ಸೇರಿಸಿ ಹಾಸ್ಟೆಲ್‌ನಲ್ಲಿ ಬಿಟ್ಟರು. ಒಂಬತ್ತು ವರ್ಷದ ಬಾಲಿಕೆಯಾಗಿದ್ದಾಗ ಶಾಲೆಗೆ ಸೇರಿದ ಅನ್ನಪೂರ್ಣಾ ಹದಿನೆಂಟು ವರ್ಷದ ಯುವತಿಯಾಗುವವರೆಗೂ ಅಲ್ಲೇ ವ್ಯಾಸಂಗ ಮಾಡಿದರು.

"ನನ್ನಲ್ಲಿ ದೇಶಭಕ್ತಿ ಉಂಟಾಗಲು ಗುಂಟೂರಿನ ನ್ಯಾಷನಲ್ ಶಾಲೆಯೇ ಕಾರಣ. ಇದರ ಸಂಸ್ಥಾಪಕರಾದ ಶ್ರೀ ಲಕ್ಷ್ಮೀನಾರಾಯಣರವರು ಬ್ಯಾರಿಸ್ಟರ್ ಪದವಿಗಳಿಸಿ ದ್ದರೂ ಹೆಣ್ಣುಮಕ್ಕಳ ಪ್ರಗತಿಗಾಗಿ ಈ ಶಾಲೆಯ ಸೇವಾಕಾರ್ಯವನ್ನು ವಹಿಸಿ ಕೊಂಡರು. ಹೆಣ್ಣು ಮಕ್ಕಳಿಗೆ ಸಂಸ್ಕೃತ ಕಲಿಸಬೇಕು. ನಮ್ಮ ದೇಶದ ಸಂಸ್ಕೃತಿ ಯನ್ನು ಬೋಧಿಸಬೇಕು. ಹಿಂದೂ ಧರ್ಮವನ್ನೂ ವೇದ ಪಾಠವನ್ನು ಹೆಂಗಸರೂ ಅಭ್ಯಸಿಸಬೇಕು ಎಂಬ ಧ್ಯೇಯದಿಂದ ತೆರೆದ ಶಾಲೆ ಇದು. ನಮ್ಮ ದೇಶದ ಸಂಸ್ಕೃತಿ ಯನ್ನು ಕಲಿಯುತ್ತಾ, ಅರ್ಥ ಮಾಡಿಕೊಳ್ಳುತ್ತಾ ನನ್ನಲ್ಲಿ ದೇಶಪ್ರೇಮ ಉಂಟಾ ಯಿತು"–ಎನ್ನುತ್ತಾರೆ.

ಅನ್ನಪೂರ್ಣಾದೇವಿಯವರ ಮಗಳು ಲಕ್ಷ್ಮಿಯ ಮಾತಿನಲ್ಲಿ–"ನಮ್ಮ ತಾಯಿ ಯನ್ನು ನೋಡಿದವರೆಲ್ಲಾ ಬ್ರಾಹ್ಮಣ ಕುಟುಂಬಕ್ಕೆ ಸೇರಿದವಳೆಂದೇ ಭಾವಿಸಿದ್ದರಂತೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಬ್ರಾಹ್ಮಣ ಸಂಪರ್ಕದಲ್ಲೇ ಇದ್ದು ಬ್ರಾಹ್ಮಣ ಸಂಪ್ರದಾಯದಲ್ಲೇ ಬೆಳೆದವರು ನಮ್ಮ ತಾಯಿ."

ಬಾಲ್ಯದಲ್ಲಿ ಬೇರೂರಿದ ದೇಶಭಕ್ತಿ, ಹಿಂದೂ ಸುಸಂಸ್ಕೃತ ಭಾವನೆ ಅನ್ನಪೂರ್ಣಾದೇವಿಯಲ್ಲಿ ಬಲವಾಗಿ ಬೆಳೆದು ಭವಿಷ್ಯ ದೇಶಸೇವೆಗೆ ತಳಪಾಯ ಹಾಕಿ ದಂತಾಯಿತು.

"ನ್ಯಾಷನಲ್ ಶಾಲೆಯ ಮುಖೇನ ತೆಲುಗು ಮತ್ತು ಸಂಸ್ಕೃತ ಎರಡು ಭಾಷೆ ಗಳ ವಿದುಷಿಯಾದೆ. ಭಾಷಾಲಾಲಸೆ ನನ್ನಲ್ಲಿ ಎಷ್ಟಿತ್ತೆಂದರೆ, ಶಾಲೆಗೆ ನಾನೇ ಅತ್ಯುತ್ತಮ ವಿದ್ಯಾರ್ಥಿ ಎನಿಸಿಕೊಂಡು ಚಿನ್ನದ ಪದಕವನ್ನು ಗಳಿಸಿದೆ. ಲಕ್ಷ್ಮೀ ನಾರಾಯಣ ಮತ್ತು ಅವರ ಪತ್ನಿ ಲಕ್ಷ್ಮೀಬಾಯಿಯವರಿಗೆ ನನ್ನನ್ನು ಕಂಡರೆ ಬಹಳ ಪ್ರೀತಿ. ಶಾಲೆಯ ಪ್ರತಿ ಕಾರ್ಯಕ್ರಮಕ್ಕೂ ನನ್ನನ್ನೇ ಲೀಡರ್ ಮಾಡುತ್ತಿದ್ದರು. ಸಾಂಸ್ಕೃತಿಕ ಚಟುವಟಿಕೆಗಳ ಜೊತೆಗೆ ಆಗತಾನೆ ಅವಶ್ಯಕವೆನಿಸುತ್ತಾ ಬರುತ್ತಿದ್ದ ರಾಷ್ಟ್ರೀಯ ಸೇವಾದಳದ ತರಬೇತಿಗೂ ನನ್ನನ್ನು ಕಳುಹಿಸುತ್ತಿದ್ದರು. ನಾನು ಓದು ತ್ತಿದ್ದ ನ್ಯಾಷನಲ್ ಶಾಲೆಯು ರಾಷ್ಟ್ರದ ಪ್ರಗತಿಯ ಎಲ್ಲಾ ಕಾರ್ಯಕ್ರಮವನ್ನೂ ಹಾಕಿಕೊಳ್ಳುತ್ತಿತ್ತು. ಈ ಪರಿಸರ ನನ್ನಲ್ಲಿ ದೇಶಭಕ್ತಿಯನ್ನು ಉಕ್ಕಿಸುವಂತೆ ಮಾಡಿತು" ಎನ್ನುತ್ತಾರೆ ಅನ್ನಪೂರ್ಣಾದೇವಿ. ಒಂದು ಕಡೆ ಪ್ರೋತ್ಸಾಹ ನೀಡುವ ತಂದೆಯಿಂದಲೂ ಮತ್ತೊಂದು ಕಡೆ ಉತ್ಸಾಹಭರಿತ ಶಾಲೆಯಿಂದಲೂ ಪ್ರಭಾವಿತ ರಾದ ಅನ್ನಪೂರ್ಣಾದೇವಿಯ ಬಾಲ್ಯವೂ ಅತ್ಯಂತ ಚುರುಕಾದ ಚಟುವಟಿಕೆಯಿಂದ ಚಿಗುರಿತು.

"ಚಿಕ್ಕ ವಯಸ್ಸಿಂದಲೂ ಖಾದಿಯನ್ನೇ ನಾನು ಉಡುತ್ತಿದ್ದುದು. ಆಗ ಹಳ್ಳಿ ಗಳಲ್ಲಿ ಚರಕಾದಿಂದ ನೂಲು ತೆಗೆಯುವ ಕ್ರಮವಿತ್ತು. ಗಾಂಧೀಜಿಯವರು ಇದನ್ನೇ ಬೋಧಿಸಿದುದು. ಗಾಂಧೀಜಿ ಬೋಧಿಸಿದ ನಂತರವೇ ಚರಕಾ ಅಭ್ಯಾಸಕ್ಕೆ ಬಂತು ಎಂದು ಹೇಳಲಾಗುವುದಿಲ್ಲ. ಬಹಳ ಹಿಂದಿನಿಂದಲೂ ನಮ್ಮ ಹಳ್ಳಿಗಳಲ್ಲಿ ಸಂಬಳ ಕೊಟ್ಟು ನೂಲು ತೆಗೆಯುವವರನ್ನು ಇಟ್ಟಿರುತ್ತಿದ್ದರು. ಇವರು ಹತ್ತಿಕೊಟ್ಟರೆ ನೂಲು ತೆಗೆದು ಬಟ್ಟೆ ಮಾಡಿಕೊಡುತ್ತಿದ್ದರು. ಈ ಕ್ರಮ ಹಳ್ಳಿಗಳಲ್ಲಿ ಇದ್ದೇ ಇತ್ತು. ಪಟ್ಟಣಗಳಲ್ಲಿ ಮಾತ್ರವೇ ವಿದೇಶೀ ಬಟ್ಟೆಗಳ ಬಳಕೆ ಬಂದುದು. ಆದ್ದರಿಂದ ಚಿಕ್ಕ ಹುಡುಗಿಯಿಂದಲೂ ನನಗೆ ನೂಲು ತೆಗೆಯುವುದರಲ್ಲಿ ಬಹಳ ಆಸಕ್ತಿ ಇತ್ತು. ಗುಂಟೂರಿನ ಶಾಲೆಯಿಂದ ರಜೆಯಲ್ಲಿ ನಮ್ಮ ಹಳ್ಳಿಗೆ ಹೋದಾಗ ನೂಲುವುದೇ ಮುಖ್ಯ ಕೆಲಸವಾಗಿತ್ತು. ನೂಲು ತೆಗೆದುಕೊಟ್ಟರೆ ಹೊಸ ಬಟ್ಟೆ ಬರುತ್ತದೆ ಎಂಬ ಖುಷಿಯಿಂದ ಗಂಟೆಗಟ್ಟಲೆ ಕುಳಿತು ಚರಕಾದಲ್ಲಿ ನೂಲು ತೆಗೆಯುತ್ತಿದ್ದೆ"-ಎನ್ನು ತ್ತಾರೆ.

ಹಾಗಾದರೆ ಮಹಾತ್ಮಾಜಿಯವರಿಂದ ಚರಕಾ ಉಪಯೋಗಕ್ಕೆ ಮಹತ್ವ ಬಂತೆನ್ನು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ವುದರಲ್ಲಿ ನಿಮ್ಮ ಅಭಿಪ್ರಾಯವೇನೆಂದು ಕೇಳಿದರೆ, ಅನ್ನಪೂರ್ಣಾದೇವಿಯವರ ಅನುಭವ ಭಂಡಾರದಿಂದ ಯೋಚಿಸದೆಯೇ ಉತ್ತರ ಸಿಗುತ್ತದೆ.

"ಚರಕಾಕ್ಕೆ ಮಹತ್ವ ಬಂದಿದ್ದು ಯಾವ ರೀತಿ ಎಂದರೆ, ಹಳ್ಳಿಗಳ ಉದ್ಯಮವಾಗಿದ್ದ ನೂಲು ತೆಗೆಯುವ ಕ್ರಮವನ್ನು ಆದಷ್ಟು ಸಂರಕ್ಷಿಸಲು ಪ್ರಯತ್ನಿಸಿದರು ಮಹಾತ್ಮಾಜಿ. ಪರಕೀಯರು ಬಂದು ನಮ್ಮ ದೇಶದ ಗೃಹಕೈಗಾರಿಕೆಯನ್ನು ನಾಶ ಮಾಡುವುದರಿಂದ ತಡೆದರು. ವಿದೇಶೀ ಬಟ್ಟೆಗಳ ಚಟಕ್ಕೆ ಬೀಳದಂತೆ ನಮ್ಮನ್ನು ಎಚ್ಚರಿಸಿದರು. ನೂಲುವುದರಿಂದಲೇ ದೇಶದ ಉದ್ಧಾರವೆಂಬ ಮಂತ್ರವನ್ನು ಹಳ್ಳಿ ಹಳ್ಳಿಗೆ ಹೋಗಿ ಉಪದೇಶಿಸಿದರು. ಹಳ್ಳಿಗಳಲ್ಲಿ ಮಾತ್ರವಲ್ಲ, ಪಟ್ಟಣದವರೂ ಚರಕದಿಂದ ತೆಗೆದ ನೂಲಿನ ಬಟ್ಟೆಯನ್ನೇ ಉಡುವ ಪ್ರತಿಜ್ಞೆಮಾಡಿದರೆ ನಮ್ಮ ದೇಶಕ್ಕೆ ದುರ್ದೆಸೆ ಬರುವುದಿಲ್ಲವೆಂದರು. ಎಲ್ಲೆಲ್ಲೂ ಎಲ್ಲರೂ ಚರಕಾ ಹಿಡಿಯಬೇಕು. ನೂಲು ತೆಗೆಯುವುದನ್ನು ಕಲಿಯಬೇಕು ಎಂದರು"–ಎಂಬ ವಿವರಣೆ ಕೊಡುತ್ತಾರೆ ಅನ್ನಪೂರ್ಣಾದೇವಿ.

ಸ್ವಾತಂತ್ರ್ಯ ಹೋರಾಟದ ಧುರೀಣರಾದ ತಿಮ್ಮಾರೆಡ್ಡಿಯವರ ಕೈ ಹಿಡಿಯುವ ಮೊದಲೇ ಅನ್ನಪೂರ್ಣಾದೇವಿಗೆ ಚರಕಾದಲ್ಲಿ ನೂಲು ತೆಗೆಯುವುದು ಗೊತ್ತಿತ್ತು. ಸೇವಾದಳದ ತರಬೇತಿ ಪಡೆದು ರಾಷ್ಟ್ರ ಸೇವಿಕೆಯಾಗುವ ಅರ್ಹತೆ ಇತ್ತು. ಕಮಲಾದೇವಿ ಚಟ್ಟೋಪಾಧ್ಯಾಯರವರು ಕ್ಯಾಪ್ಟನ್ ಆಗಿದ್ದ ಕಾಕಿನಾಡ ಕಾಂಗ್ರೆಸ್ ಅಧಿವೇಶನದಲ್ಲಿ ಸೇವಿಕೆಯಾಗಿ ಕೆಲಸ ಮಾಡಿದ್ದರು. ವಿದೇಶೀ ಬಟ್ಟೆಗಳನ್ನು ಸುಡುವ ಚಳವಳಿಯಲ್ಲಿ ಗುಂಟೂರಿನಲ್ಲಿ ಭಾಗವಹಿಸಿದ್ದರು. ಉಪ್ಪಿನ ಸತ್ಯಾಗ್ರಹದ ಕರೆ ಕೇಳಿ, ಸಮುದ್ರದಿಂದ ನೀರು ತಂದು ಗುಂಟೂರಿನಲ್ಲೇ ಚಳವಳಿಗಾರರ ಸಂಘಟನೆ ಮಾಡಿ ಉಪ್ಪು ತಯಾರಿಸಿ ಬ್ರಿಟಿಷ್ ಸರ್ಕಾರವನ್ನು ಪ್ರತಿಭಟಿಸಿದ್ದರು. ಈ ಸತ್ಯಾಗ್ರಹದ ತಂಡಕ್ಕೆ ಕೊಂಡಾ ವೆಂಕಟರಾಮಯ್ಯ ಪಂತುಲು ಮುಖಂಡರಾಗಿದ್ದರು. ಗುಂಟೂರಿನ ಅಂಗಡಿಗಳ ಮುಂದೆ ಅನ್ನಪೂರ್ಣಾದೇವಿ ಪಿಕೆಟಿಂಗ್ ನಡೆಸಿದ್ದರು. ಇಷ್ಟೆಲ್ಲಾ ಸ್ವಾತಂತ್ರ್ಯ ಚಳವಳಿಯ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಅನುಭವ ಪಡೆದಿದ್ದ ಹದಿನೆಂಟು ವರ್ಷದ ಯುವತಿ ದೇಶ ಸ್ವಾತಂತ್ರ್ಯ ಪ್ರಿಯೆ ಅನ್ನಪೂರ್ಣೆಯನ್ನು ಪಾಣಿಗ್ರಹಣ ಮಾಡಿದಾಗ ತಿಮ್ಮಾರೆಡ್ಡಿಯವರಿಗೆ ಅತ್ಯಂತ ತೃಪ್ತಿ.

"ಆಂಧ್ರ ರಾಜ್ಯದ ನಿಮಗೂ ಕರ್ನಾಟಕ ರಾಜ್ಯದ ತಿಮ್ಮಾರೆಡ್ಡಿಯವರಿಗೂ ಪರಿಚಯವಾಗಿ ಸಂಬಂಧ ಬೆಳೆದುದು ಹೇಗೆ" ಎನ್ನಲು–

"ತಿಮ್ಮಾರೆಡ್ಡಿಯವರು ಲಾ ಕಾಲೇಜಿನಲ್ಲಿ ಓದುತ್ತಿದ್ದಾಗ, ಶಾರದಾ ನಿಕೇತನ ನಿರ್ವಾಹಕಿಯಾದ ಶ್ರೀಮತಿ ಲಕ್ಷ್ಮೀಬಾಯಿಯವರು ಚಂದಾ ವಸೂಲಿಗಾಗಿ ಲಾ ಕಾಲೇಜಿಗೆ ಹೋಗುತ್ತಿದ್ದರು. ನನ್ನನ್ನು ಕಂಡರೆ ಲಕ್ಷ್ಮೀಬಾಯಿಗೆ ಬಹಳ ಪ್ರೀತಿ, ತಿಮ್ಮಾರೆಡ್ಡಿಯವರ ಪರಿಚಯ ಕೊಟ್ಟು, ದೇಶಪ್ರೇಮಿಗಳಾದ ಅವರೇ ನನಗೆ ತಕ್ಕ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಪತಿಯೆಂದು ತೀರ್ಮಾನಿಸಿ ಮದುವೆ ಮಾಡಿಸಿದವರು ಲಕ್ಷ್ಮೀಬಾಯಿಯವರೇ"– ಎನ್ನುತ್ತಾರೆ ಅನ್ನಪೂರ್ಣಾದೇವಿಯವರು.

ವಿದುರಾಶ್ವತ್ಥದ ನಾಗಸಂದ್ರ ತಿಮ್ಮಾರೆಡ್ಡಿಯವರ ಸ್ಥಳ. ದೊಡ್ಡ ಜಮೀನು ದಾರರು. ಅಣ್ಣ ತಮ್ಮಂದಿರಾದ ನಾಗಯ್ಯರೆಡ್ಡಿ ಮತ್ತು ತಿಮ್ಮಾರೆಡ್ಡಿಯವರೆಂದರೆ ಕೋಲಾರ ಜಿಲ್ಲೆಯಲ್ಲಿ ದೇಶಭಕ್ತರೆಂದೇ ಪ್ರಸಿದ್ಧಿ.

"ನಾವು-ನಮ್ಮ ಬಾಲ್ಯವನ್ನು ಕಂಡೇ ಇಲ್ಲ. ಆಟವಾಡಿಕೊಂಡು ಫ್ರೀಯಾಗಿದ್ದ ವರಲ್ಲ. ನನಗೆ ಬುದ್ಧಿ ತಿಳಿದಾಗಿನಿಂದ ನಮ್ಮ ತಂದೆ ಜೈಲಿಗೆ ಹೋಗುತ್ತಿದ್ದುದೇ ನನ್ನ ಬಾಲ್ಯದ ನೆನಪು. ನಮ್ಮ ತಾಯಿಗೆ ತಂದೆಯವರ ಯೋಚನೆ. ಅದೂ ಅಲ್ಲದೆ ತಂದೆಯವರು ಜೈಲಿನಲ್ಲಿದ್ದಾಗ ಜನರನ್ನು ಸಂಘಟಿಸುವ ಮತ್ತು ಭಾಷಣಗಳ ಮೂಲಕ ಜನರನ್ನು ದೇಶಸೇವೆಗೆ ಸಿದ್ಧಪಡಿಸುವ ಕೆಲಸದಲ್ಲಿ ನಮ್ಮ ತಾಯಿ ನಿರತರಾಗುತ್ತಿದ್ದರು" ಎಂದು ಅವರ ಪುತ್ರಿ ಲಕ್ಷ್ಮಿ ಹೇಳುತ್ತಾರೆ.

ಆ ಮಾತಿಗೇ ಸೇರಿದಂತೆ ಅನ್ನಪೂರ್ಣಾದೇವಿಯವರು, "ಮೈಸೂರು ದೇಶದ ಹೋರಾಟಗಾರರಲ್ಲೆಲ್ಲಾ ಬಹುಶಃ ನಮ್ಮ ಯಜಮಾನರೇ ಹೆಚ್ಚು ವರ್ಷಗಳು ಜೈಲಿ ನಲ್ಲಿದ್ದವರು. ಆರು ಸಲ ಜೈಲುವಾಸವನ್ನನುಭವಿಸಿ ಬಂದಿದ್ದಾರೆ. ಆ ಸಮಯ ಗಳಲ್ಲಿ ಅವರ ಸ್ಥಾನವನ್ನು ವಹಿಸಿ ನಾನು ಭಾಷಣಗಳನ್ನು ಮಾಡುತ್ತಿದೆ. ಬೆಂಗಳೂರಿನ ಚಿಕ್ಕಲಾಲ್‌ಬಾಗ್, ಗೌರಿಬಿದನೂರು ಇಂತಹ ಜನಸಂದಣಿ ಸೇರಿದ ಕಡೆ ಭಾಷಣ ಮಾಡುತ್ತಿದ್ದೆ"—ಎನ್ನುತ್ತಾರೆ ಅನ್ನಪೂರ್ಣಾದೇವಿ.

'ಹೀಗೆ ಬಹಿರಂಗ ಸಭೆಗಳಲ್ಲಿ ಸರ್ಕಾರದ ವಿರುದ್ಧ ಮಾತಾಡಿದಾಗ ನಿಮ್ಮನ್ನು ಬಂಧಿಸಲಿಲ್ಲವೇ' ಎಂಬ ಪ್ರಶ್ನೆಗೆ ಅನ್ನಪೂರ್ಣಾದೇವಿಯವರು ತಾವು ಸೆರೆಗೆ ಹೋಗಲಿಲ್ಲ ವೆಂದೂ ಸರ್ಕಾರ ಅವರನ್ನು ಬಂಧಿಸಲಿಲ್ಲವೆಂದೂ ಹೇಳುತ್ತಾರೆ. ನಾಗಯ್ಯರೆಡ್ಡಿ, ತಿಮ್ಮಾರೆಡ್ಡಿಯವರನ್ನು ಜೈಲಿಗೆ ಹಾಕಿದ್ದರು. ಅನ್ನಪೂರ್ಣಾದೇವಿಯವರನ್ನು ದಸ್ತಗಿರಿ ಮಾಡಿದರೆ ಹೆಚ್ಚು ಗಲಾಟೆಗಳಾಗಬಹುದೆಂದು ಸರ್ಕಾರ ಒಂದೇ ಸಂಸಾರದಲ್ಲಿ ಎಲ್ಲರನ್ನೂ ಬಂಧಿಸುತ್ತಿರಲಿಲ್ಲವೆನ್ನುತ್ತಾರೆ.

ವಿದುರಾಶ್ವತ್ಥ ಪ್ರದೇಶ ಕಾಂಗ್ರೆಸ್‌ಗೆ ತಿಮ್ಮಾರೆಡ್ಡಿಯವರೇ ಮುಖಂಡರಾಗಿದ್ದ ರಿಂದ ಅನ್ನಪೂರ್ಣಾದೇವಿಯವರ ಸಹಕಾರ ಪತಿಯ ಜೊತೆಗೇ ಇರುತ್ತಿತ್ತು. ಅವಿಭಕ್ತ ಕುಟುಂಬಕ್ಕೆ ಸೇರಿದ ಅನ್ನಪೂರ್ಣಾದೇವಿ ಮನೆಯಲ್ಲೂ ಎಲ್ಲರಿಗೂ ಅಚ್ಚುಮೆಚ್ಚಾ ಗಿದ್ದು ಸಮಯ ಬಂದಾಗಲೆಲ್ಲ ಚಳವಳಿಯಲ್ಲಿ ಭಾಗವಹಿಸುತ್ತಿದ್ದರು. ಸೈಮನ್ ಕಮಿಷನ್‌ಗೆ ವಿರುದ್ಧವಾಗಿ ಇಡೀ ದೇಶದ ಎಲ್ಲಾ ಸ್ಥಳಗಳಲ್ಲೂ ಕಪ್ಪುಬಾವುಟ ಹಿಡಿದು ಸೈಮನ್ ಕಮಿಷನ್ ಬರದಂತೆ ತಡೆಯಬೇಕೆಂದು ರಾಷ್ಟ್ರ ಮುಖಂಡರ ಆದೇಶದಂತೆ ಅನ್ನಪೂರ್ಣಾದೇವಿಯವರು ಒಂದು ದೊಡ್ಡ ಮೆರವಣಿಗೆಯನ್ನು ಹೊರಡಿಸಿ ಕಪ್ಪು ಬಾವುಟ ಹಿಡಿದು ವಿರೋಧಿಸಿದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



"೧೯೪೨ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಬ್ರಿಟಿಷ್ ಸರ್ಕಾರ ಭಾರತೀಯರಿಗೆ ಬಹಳ ಕಷ್ಟಕೊಟ್ಟಿದೆ. ಮುಖಂಡರನ್ನೆಲ್ಲಾ ಬಂಧಿಸಿದುದಲ್ಲದ ಸೆರೆಮನೆಯಲ್ಲಿ ಅವರಿಗೆಲ್ಲಾ ಕಠಿಣ ಶಿಕ್ಷೆ ಕೊಟ್ಟರು. ಕಳ್ಳರಂತೆಯೇ ವಸ್ತ್ರ ಧರಿಸಬೇಕಾಗಿತ್ತು. ರಾಗಿ ಬೀಸುವುದು ಮುಂತಾದ ಕಷ್ಟದ ಕೆಲಸಗಳನ್ನು ಮಾಡಬೇಕಾಗಿತ್ತು. ಇಂತಹ ಕಠಿಣ ಸಜಾ ಸಮಯದಲ್ಲಿ ಚಂಗಲರಾಯರೆಡ್ಡಿ, ಕೆ. ಟಿ. ಭಾಷ್ಯಂ, ತಿಮ್ಮಾರೆಡ್ಡಿಯವರು ಒಂದೇ ಕಡೆ ಇದ್ದರು. ಇವರೆಲ್ಲಾ ಕಠಿಣ ಶಿಕ್ಷೆ ಅನುಭವಿಸಿದವರು"—ಎನ್ನುತ್ತಾರೆ ಅನ್ನಪೂರ್ಣಾದೇವಿ.

"ಹರಿಜನ್ ಫಂಡ್‌ಗೆ ಗಾಂಧೀಜಿ ಬಂದಿದ್ದಾಗ ನಾಲ್ಕು ಚಿನ್ನದ ಬಳೆಗಳನ್ನು ತೆಗೆದುಕೊಟ್ಟೆ. ಮತ್ತು ಚೈನಾ ಮುತ್ತಿಗೆಯ ಸಮಯದಲ್ಲಿ ಇಂದಿರಾ ಗಾಂಧಿಗೆ ಮತ್ತೆರಡು ಬಳೆಗಳನ್ನು ದೇಶದ ರಕ್ಷಣೆಯ ಉಪಯೋಗಕ್ಕಾಗಿಕೊಟ್ಟೆ. ನಮ್ಮ ಯಜಮಾನರ ಕಡೇ ಆಸ್ತಿಯಾಗಿದ್ದ ಜಮೀನುಗಳು ಈಗ ಇಲ್ಲ, ಎಲ್ಲಾ ಮಾರಿ ಬಿಟ್ಟೆವು.

"ಸ್ವಾತಂತ್ರ್ಯ ಬಂದ ಮೇಲೆ ಏನಾದರೂ ಉದ್ಯೋಗಮಾಡಿ ಜೀವನ ನಡೆಸಬೇಕಾಯಿತು. ಮದರಾಸಿಗೆ ಹೋಗಿ ನೆಲೆಸಿದೆವು"–ಎನ್ನುತ್ತಾರೆ.

೧೯೫೮ರಲ್ಲಿ ರಾಜ್ಯಸಭಾ ಸದಸ್ಯರಾಗಿ ಅನ್ನಪೂರ್ಣಾದೇವಿಯವರು ಚುನಾಯಿತರಾದಾಗ ಬೆಂಗಳೂರಿಗೆ ಬಂದು ನೆಲೆಸಿದರು. ೧೯೫೮ ರಿಂದ ೧೯೬೦ರವರೆಗೆ ರಾಜ್ಯಸಭಾ ಸದಸ್ಯರಾಗಿದ್ದರು. ಈಗ ಅನ್ನಪೂರ್ಣಾದೇವಿಯವರಿಗೆ ಕೇಂದ್ರ ಸರ್ಕಾರದಿಂದ ತಿಂಗಳಿಗೆ ಎಂಟುನೂರ ಐವತ್ತು ರೂಪಾಯಿ ಗೌರವಧನ ಬರುತ್ತಿದೆ.

"ಗುಂಟೂರು, ವಿದುರಾಶ್ವತ್ಥ, ಮದರಾಸು--ಎಲ್ಲಾ ನೆನಪಿನ ಸರಣಿಯಲ್ಲಿ ಉಳಿದಿದೆ" ಎನ್ನುತ್ತಾರೆ.

ನಮ್ಮೊಂದಿಗೇ ಕುಳಿತು ಆಗಾಗ ತಮ್ಮ ಅನುಭವವನ್ನೂ ಜ್ಞಾಪಿಸಿಕೊಳ್ಳುತ್ತಿದ್ದ ಲಕ್ಷ್ಮಿ "ನಮ್ಮ ತಾಯಿ ನನಗೆ ಇಟ್ಟ ಹೆಸರು ಅಲಮೇಲು. ಬಾಬು ರಾಜೇಂದ್ರ ಪ್ರಸಾದ್‌ರವರು ನನ್ನನ್ನು ಲಕ್ಷ್ಮಿ ಎಂದು ಕರೆದರು. ಅದೇ ಹೆಸರು ಉಳಿಯಿತು"-ಎನ್ನುತ್ತಾರೆ.

ಅತ್ಯಂತ ಹೆಚ್ಚಿನ ವ್ಯಾಸಂಗ, ಉತ್ತಮ ಉದ್ಯೋಗವಿರುವ ತಮ್ಮ ಮಕ್ಕಳ ವಿಷಯದಲ್ಲಿ ಹೆಮ್ಮೆಯನ್ನು ಹೇಳಿಕೊಳ್ಳದ ಸರಳ ವ್ಯಕ್ತಿ ಅನ್ನಪೂರ್ಣಾದೇವಿ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



## ತ್ಯಾಗ, ವೈರಾಗ್ಯ ನಿಧಿ ಮೈಸೂರಿನ ಸುನಂದಮ್ಮ ತಾಂಡೂರು ನರಸಿಂಹ ಅಯ್ಯಂಗಾರ್

"ಸುನಂದಮ್ಮ ಯಾವಾಗಲೂ ಪ್ರಚಾರಕ್ಕೆ ಅಡ್ಡಿ ಬರುತ್ತಿದ್ದರು. ಅವರು ಬದುಕಿದ್ದರೆ ಬಹುಶಃ ಈ ಲೇಖನಕ್ಕೆ ಅವಕಾಶ ಕೊಡುತ್ತಿರಲಿಲ್ಲವೆನಿಸುತ್ತದೆ" ಎನ್ನುತ್ತಾರೆ ಶ್ರೀಮತಿ ರುಕ್ಮಿಣಿ ಗಿರಿಮಾಜಿ.

ಗಿರಿಮಾಜಿ ಮನೆತನದವರು ಹಿಂದಿನಿಂದಲೂ ಗಾಂಧೀ ಭಕ್ತರು. ಖಾದಿ ಧರಿಸುವುದು ಮತ್ತು ದೇಶ ಪ್ರೇಮ ವಂಶಪಾರಂಪರ್ಯವಾಗಿ ರುಕ್ಮಿಣಿಯವರಲ್ಲಿ ರಕ್ತಗತವಾಗಿ ನೆಲೆಯಾಗಿದ್ದುದರಿಂದ ಸುನಂದಮ್ಮನವರ ಸ್ನೇಹ ರುಕ್ಮಿಣಿ ಗಿರಿಮಾಜಿಗೆ ಅತ್ಯಂತ ಪ್ರಿಯವಾಗಿತ್ತು. ರುಕ್ಮಿಣಿಯವರ ಮನವನ್ನು ಹೆಚ್ಚು ಸೆಳೆದಿದ್ದು ಸುನಂದಮ್ಮನವರ ತ್ಯಾಗ ಮತ್ತು ವೈರಾಗ್ಯ.

೧೯೬೩ ರಿಂದ ಸುಮಾರು ಹದಿನೈದು ವರ್ಷಗಳ ಕಾಲ ಸುನಂದಮ್ಮನ ಸಹೋದರಿಗಿಂತ ಹೆಚ್ಚಾಗಿ ಅವರೊಡನೆ ಇದ್ದು ಅವರನ್ನು ಅತ್ಯಂತ ಮೆಚ್ಚಿಕೊಂಡಿದ್ದ ಶ್ರೀಮತಿ ಗಿರಿಮಾಜಿಯವರಿಗೆ ಸುನಂದಮ್ಮನ ನಿಕಟ ಪರಿಚಯವಿತ್ತು.

ದೇಶಸೇವೆ ಸುನಂದಮ್ಮನ ಉಸಿರಾಗಿತ್ತು ಎನ್ನುತ್ತಾರೆ ರುಕ್ಮಿಣಿ. ಮೈಸೂರಿನ ವಿ. ವಿ. ಮೊಹಲ್ಲಾದಲ್ಲಿ ಸುನಂದಮ್ಮನ ಮನೆಯ ಹೆಸರು "ಸ್ವರಾಜ್ಯ ಭವನ" ಮಾತಾಡಿದರೆ ಸ್ವರಾಜ್ಯದ ಮಾತೇ, ಕೆಲಸ ಮಾಡಿದರೆ ಸ್ವರಾಜ್ಯಕ್ಕಾಗಿಯೇ ಕೆಲಸ. ವಾಸ ಮಾಡುವುದಾದರೆ ಸ್ವರಾಜ್ಯದ ಮನೆಯಲ್ಲಿ—ಹೀಗಿದ್ದವರು ಸುನಂದಮ್ಮ. ಕೊನೆಗೆ ಅವರು ಪಡೆದ ಪದವಿ ವೈರಾಗ್ಯ. ತ್ಯಾಗಿಯಾಗಿ, ಯೋಗಿಯಾಗಿ, ಆಧ್ಯಾತ್ಮಿಕತೆಯಲ್ಲಿ ತನ್ಮಯರಾಗಿ ಸತ್ಯ ಸಾಯಿಗೆ ಶರಣಾಗಿ ಸರ್ವಸ್ವವನ್ನೂ ಬಾಬಾರವರ ಸನ್ನಿಧಿಗೆ ಸಮರ್ಪಿಸಿ ಸಮಾಧಾನ ಪಡೆದವರು ಸುನಂದಮ್ಮ. ದೇಶಕ್ಕೆ ಸ್ವರಾಜ್ಯ ಬಂದ ಮೇಲೆ ತಮ್ಮ ಹೊಸ ಮನೆಗೆ "ಸತ್ಯಂ ಶಿವಂ ಸುಂದರಂ" ಎಂದು ಹೆಸರಿಟ್ಟರು.

"ಸ್ವರಾಜ್ಯ ಬರುವವರೆಗೂ ತನು-ಮನ-ಧನವನ್ನು ದೇಶಕ್ಕಾಗಿ ಮೀಸಲಾಗಿಟ್ಟು ಸ್ವರಾಜ್ಯ ಬಂದ ಕೂಡಲೇ ರಾಜಕೀಯದಿಂದ ಜಾರಿಕೊಂಡು ತನ್ನಷ್ಟಕ್ಕೆ ಸಮಾಜ ಸೇವಾಕರ್ತರಾಗಿ ದೀನದಲಿತರಿಗಾಗಿ, ಅಂಗವಿಕಲರಿಗಾಗಿ ಬುದ್ಧಿಮಾಂದ್ಯ ಮಕ್ಕಳಿಗಾಗಿ ಸಂಸ್ಥೆ ತೆರೆದು ತಾವೇ ನಡೆಸಿ ಜೀವ ಸವೆಸಿದರು" ಎನ್ನುತ್ತಾರೆ ರುಕ್ಮಿಣಿ ಗಿರಿಮಾಜಿ ಆತ್ಮೀಯಭಾವದಿಂದ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಅವರ ಬಗ್ಗೆ ಹೆಚ್ಚು ಜ್ಞಾಪಕ ಬರುತ್ತಾ ಶ್ರೀಮತಿ ಗಿರಿಮಾಜಿಯವರ ಕಂಠ ಬಿಗಿಯುತ್ತದೆ. ಚಳವಳಿಯ ದಿನಗಳಲ್ಲಿ ಉಪವಾಸ ಮಾಡಿ ಮಾಡಿ ಸುನಂದಮ್ಮನ ಹೊಟ್ಟೆ ಎಷ್ಟು ಕೆಟ್ಟಿತ್ತೆಂದರೆ ಊಟಮಾಡಿದರೆ ಉದರ ಬಾಧೆ ಎನ್ನುತ್ತಿದ್ದರು. ಅದಕ್ಕೆ ಸರಿಯಾಗಿ ತನ್ನಲ್ಲಿದ್ದ ಹಣವನ್ನೆಲ್ಲಾ ದೇಶಕ್ಕೂ ಬಾಬಾರವರ ಸೇವೆಗೂ ಅರ್ಪಿಸಿದರು. ಒಂದೆರಡು ಬಿಸ್ಕತ್ತೇ ಅವರ ಒಂದು ದಿನದ ಊಟವಾಗಿತ್ತು.

ಚಿಕ್ಕ ವಯಸ್ಸಿನಲ್ಲೇ ತಾಯಿಯನ್ನು ಕಳೆದುಕೊಂಡ ಸುನಂದಮ್ಮನನ್ನು ಪೋಷಿಸಿ ಸಾಕಿದವರು ಮದರಾಸಿನಲ್ಲಿ ಅವರ ತಾತಂದಿರಾದ ಶ್ರೀ ರಾಘವಾಚಾರ್ಯರು. ಇವರು ತಮ್ಮ ಥಿಯಾಸಫಿ ತತ್ವ ಪ್ರಕಾರ ಮೊಮ್ಮಗಳನ್ನು ಮಾಮೂಲಿ ಹೆಣ್ಣಿನಂತಲ್ಲದೆ ಧೈರ್ಯ, ಧರ್ಮದ ಧಾಟಿಯಲ್ಲೇ ಬೆಳೆಸಿದರು. ಹದಿನೇಳನೆಯ ವಯಸ್ಸಿನಲ್ಲಿ ದೊಡ್ಡಬಳ್ಳಾಪುರದಲ್ಲಿ ವಕೀಲರಾಗಿದ್ದ ತಾಂಡೂರು ನರಸಿಂಹ ಅಯ್ಯಂಗಾರ್‌ರವರೊಂದಿಗೆ ವಿವಾಹವಾದನಂತರ ಸುನಂದಮ್ಮನ ಜೀವನ ಧ್ಯೇಯವಾಗಿದ್ದ ದೇಶಸೇವೆಗೆ ಯಾವ ಅಡ್ಡಿ ಆತಂಕವೂ ಆಗಲಿಲ್ಲ. ಪತಿ ನರಸಿಂಹ ಅಯ್ಯಂಗಾರ್ ಅತ್ಯಂತ ಸರಳ ಸೌಮ್ಯ ವ್ಯಕ್ತಿ. ಅವರೂ ಖಾದೀಧಾರಿಗಳೇ ಆದ್ದರಿಂದ ಸುನಂದಮ್ಮನ ಉಡಿಗೆ ತೊಡಿಗೆಗೆ ತೊಡಕು ಬರಲಿಲ್ಲ. ತನ್ನ ಪತಿಯ ಅಣ್ಣತಮ್ಮಂದಿರಾದ ದ್ವಾರಕಾನಾಥ್ ಮತ್ತು ಟಿ. ಆರ್. ಅಯ್ಯಂಗಾರ್‌ರೊಡನೆ ಸುನಂದಮ್ಮ ಗೌರವ ವಿಶ್ವಾಸದಿಂದಿದ್ದರು. ನೆಂಟರಿಷ್ಟರೆಲ್ಲರಿಗೂ ಬಂಧು ಬಳಗದವರಿಗೂ ನರಸಿಂಹ ಅಯ್ಯಂಗಾರ್ ಚಿಕ್ಕಪ್ಪನಾಗಿದ್ದರು. ಸುನಂದಮ್ಮ ಅಂತೆಯೇ ಎಲ್ಲರಿಗೂ ಚಿಕ್ಕಮ್ಮ. ತನಗೆ ಮಕ್ಕಳಾಗದಿದ್ದರೂ ಭಾವ ಮೈದುನರ ಮಕ್ಕಳೆಂದರೆ ಸುನಂದಮ್ಮನಿಗೆ ಬಹಳ ಪ್ರೀತಿ.

ಪತಿ ಪತ್ನಿಯರಾದ ನರಸಿಂಹ ಅಯ್ಯಂಗಾರ್ ಮತ್ತು ಸುನಂದಮ್ಮನ ಸಂಬಂಧ ಹೇಗಿತ್ತೆಂದರೆ, ವಿವಾಹ ಮಂಟಪದಲ್ಲಿ ಪಾಣಿಗ್ರಹಣವಷ್ಟೆ. 'ಸ್ವರಾಜ್ಯ ಬರುವವರೆಗೂ ನಮಗೆ ದಾಂಪತ್ಯ ಸುಖ ಬೇಡ' ಎಂದು ಸುನಂದಮ್ಮ ಪ್ರತಿಜ್ಞೆ ಮಾಡಿದ್ದರಂತೆ. 'ಮಹಾತ್ಮಾ ಗಾಂಧಿಯವರ ಪ್ರಭಾವದಿಂದ ಬ್ರಹ್ಮಚರ್ಯದಲ್ಲೇ ಇದ್ದರವರು' ಎನ್ನುತ್ತಾರೆ ರುಕ್ಮಿಣಿ ಗಿರಿಮಾಜಿ.

ಸುನಂದಮ್ಮ ಆಗಾಗ ಜ್ಞಾಪಿಸಿಕೊಳ್ಳುತ್ತಿದ್ದುದು ಶಿವಪುರದ ಧ್ವಜ ಸತ್ಯಾಗ್ರಹವನ್ನು. 'ಈ ಧ್ವಜ ಸತ್ಯಾಗ್ರಹ ಬಹಳ ಯಶಸ್ವಿಯಾಗಿ ನಡೆಯಿತು. ನಮ್ಮ ಛಲದ ಸಾಧನೆಯಾಯಿತು. ಈ ಸತ್ಯಾಗ್ರಹದಲ್ಲಿ ಗಂಡಸಿಗಿಂತ ಹೆಂಗಸರ ಪಾತ್ರವೇ ಮುಖ್ಯವಾಗಿತ್ತು' ಎನ್ನುತ್ತಿದ್ದರಂತೆ ಸುನಂದಮ್ಮ.

ಸುನಂದಮ್ಮನವರಿಗಿದ್ದ ದೈವದತ್ತವಾದ ವರವೆಂದರೆ ಸೊಗಸಾದ ಕಂಠ. ಬಹಳ ಮಧುರವಾಗಿ ಹಾಡುತ್ತಿದ್ದರು ಮತ್ತು ಅಸಾಧಾರಣವಾಗಿ ಆಶುಭಾಷಣ ಮಾಡುತ್ತಿದ್ದರು.

"ವೇದಿಕೆಯನ್ನು ಏರಿದರೆ ಸಾಕು. ಅದೆಲ್ಲಿಂದ ಉತ್ಪತ್ತಿಯಾಗಿ ಲೀಲಾಜಾಲವಾಗಿ ವಾಕ್ಯಗಳು ಹೊರಡುತ್ತಿದ್ದವೋ! ವೀರಾವೇಶದಿಂದ ಮಾತಾಡಿ ಜನರ ಮನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ವನ್ನು ಗೆಲ್ಲುವ ಒಂದು ಅದ್ಭುತ ಶಕ್ತಿ ಇತ್ತು ಅವರಲ್ಲಿ" ಎನ್ನುತ್ತಾರೆ ಗಿರಿವಾಜಿ. ಸುನಂದಮ್ಮ ಹೇಳುತ್ತಿದ್ದ ಮುಖ್ಯವಾದೊಂದು ಮಾತನ್ನು ನೆನೆದು ಹೀಗೆನ್ನುತ್ತಾರೆ ರುಕ್ಮಿಣಿ. ಈ ಮಾತನ್ನಂತೂ ಮರೆಯುವಂತೆಯೇ ಇಲ್ಲ. ಮದರಾಸಿನಲ್ಲಿದ್ದಾಗ ಡಾ॥ ಅನಿಬೆಸೆಂಟ್ ಹೇಳುತ್ತಿದ್ದುದನ್ನು ನಮ್ಮಲ್ಲಿ ಆಗಾಗ ಹೇಳುತ್ತಿದ್ದರು. "ಮುಷ್ಕರ" ಭಾರತ ದೇಶಕ್ಕೆ ಸರಿಹೋಗುವುದಿಲ್ಲ. ಅವಿದ್ಯಾವಂತರು ಇದನ್ನು ದುರುಪಯೋಗಪಡಿಸುವರು. ಸ್ವಾರ್ಥಕ್ಕಾಗಿ ಮುಷ್ಕರದ ನೀತಿಯನ್ನು ತಪ್ಪುದಾರಿಗೆ ಎಳೆಯುವವರು ಎಂಬ ಅನಿಬೆಸೆಂಟರ ಈ ಮಾತಿನ ಸತ್ಯದಲ್ಲಿ ಸುನಂದಮ್ಮನವರಿಗೆ ನಂಬಿಕೆ ಇತ್ತು.

"ಅವರ ನುಡಿ ನಿಜವಾಯಿತಲ್ಲವೇ ? ಈಗ ಮುಷ್ಕರಗಳ ಮಾರ್ಗವನ್ನೂ ಅನರ್ಥವನ್ನೂ ನಾವು ನೋಡುತ್ತಿದ್ದೇವೆ, ಅನುಭವಿಸುತ್ತಿದ್ದೇವೆ. ಮುಷ್ಕರಗಳಿಂದ ಅನರ್ಥವಾಗುತ್ತಿದೆಯೇ ವಿನಃ ತಿದ್ದಿ ಸರಿಪಡಿಸುವ ಹಾದಿಯಾಗುತ್ತಿಲ್ಲ. ಮತ್ತೊಂದೇ ನಾಯಿತೆಂದರೆ, ಮಹಾತ್ಮರು ಹೇಳುತ್ತಲೇ ಇದ್ದರು, ಕಾಂಗ್ರೆಸ್ ಸಂಸ್ಥೆಯನ್ನು ಸ್ವರಾಜ್ಯ ಬಂದ ಕೂಡಲೇ ವಿಸರ್ಜಿಸಬೇಕೆಂದು. ಅದು ನಡೆಯಿತೇ ? ಒಂದು ಉದ್ದೇಶಕ್ಕಾಗಿ ಸ್ಥಾಪಿತವಾದ ಸಂಸ್ಥೆ ಅದು ಅಷ್ಟೆ. ಉದ್ದೇಶ ಪೂರೈಸಿದ ಮೇಲೆ ಸಂಸ್ಥೆಯನ್ನು ರದ್ದುಗೊಳಿಸುವುದು ಉತ್ತಮವೆಂದಿದ್ದರು. ಮಹಾತ್ಮರು ಹೇಳಿದುತೆ ಮಾಡಿದ್ದರೆ ಕಾಂಗ್ರೆಸ್ಸಿಗೆ ಮಹತ್ವವಿರುತ್ತಿತ್ತು ಎಂದು ಬಹಳ ಬೇಸರಪಟ್ಟುಕೊಂಡು ಈ ಎರಡು ಅಂಶಗಳನ್ನೂ ಹೇಳುತ್ತಾ ಸುನಂದಮ್ಮ ಕೊರಗುತ್ತಿದ್ದುದನ್ನು ರುಕ್ಮಿಣಿ ಜ್ಞಾಪಕಪಡಿಸಿಕೊಳ್ಳುತ್ತಾರೆ.

"ಗಾಂಧೀಜಿ ಜೊತೆಯಲ್ಲಿ ಸಾಬರ್ಮತಿ ಆಶ್ರಮದಲ್ಲಿದ್ದು ಸೇವಾ ಕಾರ್ಯ, ಭಜನೆ, ಧ್ಯಾನವೆಂದರೆ ಸುನಂದಮ್ಮನವರಿಗೆ ಮೊದಲಿಂದಲೂ ಅತ್ಯಂತ ಪ್ರಿಯವಾಗಿತ್ತು. ಹಿರಿಯ ನಾಯಕರೆಲ್ಲರ ಪರಿಚಯವಿದ್ದರೂ ಸ್ವಾತಂತ್ರ್ಯದ ನಂತರ ತನಗಾಗಿ, ಯಾರನ್ನೂ ಏನನ್ನೂ ಕೇಳಿದವರಲ್ಲ.

೧೯೬೦ರಲ್ಲಿ ಬೆಂಗಳೂರಿನ ಅರಮನೆಯ ಆವರಣದಲ್ಲಿ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸಭೆ ಸೇರಿದ್ದಾಗ ಶ್ರೀಮತಿ ಇಂದಿರಾ ಗಾಂಧಿಯವರು ಅತಿ ಆತ್ಮೀಯತೆ ಯಿಂದ ಸುನಂದಮ್ಮನವರೊಡನೆ ಮಾತಾಡಿ ನಿಮಗೆ ಈ ಸಂದರ್ಭದಲ್ಲಿ ಕಮಿಟಿಯ ನಡವಳಿಕೆಯಲ್ಲಿ ಅತ್ಯಂತ ಉನ್ನತ ಅಧಿಕಾರಿಯಾಗಿ ನೇಮಿಸುತ್ತೇನೆ ಎಂದರಂತೆ. ಹಿರಿಯ ನಾಯಕರೆಲ್ಲಾ ಸೇರಿದ್ದ ಸಭೆ. ಹಾಗೇನಾದರೂ ಸುನಂದಮ್ಮ ಒಪ್ಪಿದ್ದರೆ ಸರ್ಕಾರದಲ್ಲಿ ಮಂತ್ರಿ ಪದವಿಯೂ ಸಿಕ್ಕುತ್ತಿತ್ತು. ಆದರೆ ಅವರು ಇಂದಿರಾ ಗಾಂಧಿ ಯವರಿಗೆ, "ನನಗೆ ಅಧಿಕಾರದ ಆಸೆ ಇಲ್ಲ. ಸಭೆಯು ಸುಸೂತ್ರವಾಗಿ ನಡೆಯ ಬೇಕಾದರೆ ದೇಶದ ಮೂಲೆ ಮೂಲೆಗಳಿಂದ ಬಂದಿರುವವರ ಮಕ್ಕಳನ್ನು ನೋಡಿ ಕೊಳ್ಳುವ ಕೆಲಸ ಮುಖ್ಯ. ಆದ್ದರಿಂದ ಈ ಕೆಲಸವನ್ನು ನಾನು ವಹಿಸಿಕೊಂಡು ಈ ಕಡೆ ಈ ಮೂಲೆಯಲ್ಲೊಂದು ಡೇರಾ ಹಾಕಿಕೊಂಡು ಮಕ್ಕಳನ್ನು ಆಡಿಸಿ ನೋಡಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಕೊಳ್ಳುತ್ತೇನೆ. ನಿಮ್ಮ ಕೆಲಸ ನೀವು ಮಾಡಿಕೊಳ್ಳಿ ನಾನು ಮಕ್ಕಳ ಸಮೂಹದಲ್ಲಿ ಆನಂದವಾಗಿರುತ್ತೇನೆ" ಎಂದು ಹೇಳಿದರಂತೆ.

ಸೇವಾದಳದಲ್ಲಾಗಲೀ ಚಳವಳಿಯ ಸಮಯದಲ್ಲಾಗಲೀ ಸುನಂದಮ್ಮನ ಸಾಮರ್ಥ್ಯ ಸಾಮಾನ್ಯವಾದುದೇನಲ್ಲ. ಡಾ|| ನಾ. ಸು. ಹರ್ಡೀಕರ್ ಜೊತೆ ಇದ್ದು ಅತ್ಯಂತ ಶಿಸ್ತಿನ ತರಬೇತಿ, ವ್ಯಾಯಾಮ, ಸೈನಿಕ ಶಿಕ್ಷಣ ಪಡೆದಿದ್ದರು. ೧೯೪೨ರ ಚಳವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. Direct action day ಸಂದರ್ಭದಲ್ಲಿ ಹಿಂದೂ–ಮುಸ್ಲಿಮರ ಸ್ನೇಹಕ್ಕಾಗಿ ಶ್ರಮಿಸಿ ಭಾಯಿಭಾಯಿ ಘೋಷಣಾ ಕಾರ್ಯ ಕ್ರಮ ನಡೆಸಿದರು. ಇಷ್ಟೆಲ್ಲಾ ಮಾಡಿದರೂ, ಕೊನೆಗೆ ಅವರು ಸ್ನೇಹ ಬೆಳೆಸಿದ್ದು ಶ್ರೀಮತಿ ಲೀಲಾವತಿ ಮುನ್ಷಿಯವರಂತಹ ಸಾತ್ವಿಕರೊಡನೆ. ಎಂ. ಆರ್. ಲಕ್ಷಮ್ಮ ನವರೊಂದಿಗೇ ಸುನಂದಮ್ಮನೂ ಕೆಲಸ ಮಾಡಿದರು. ಆದರೆ ಎಂ. ಆರ್. ಲಕ್ಷಮ್ಮ ಸ್ವಾತಂತ್ರ್ಯದ ನಂತರವೂ ಎದ್ದು ನಿಂತರು. ಸುನಂದಮ್ಮ ಸೋತು ಕೂತರು. ದೇಶ ಕೆಟ್ಟಿತಲ್ಲಾ ಎಂದು ಜಿಗುಪ್ಸೆ ಹೊಂದಿದರು" ಎನ್ನುತ್ತಾರೆ ರುಕ್ಮಿಣಿ ಗಿರಿಮಾಜಿ.

ಗಿರಿಮಾಜಿಯವರು ಸುನಂದಮ್ಮನ ಜೊತೆಯಲ್ಲಿ ರೆಡ್‌ಕ್ರಾಸ್ ಸಂಸ್ಥೆಯ ಮೂಲಕ ಒಂದು ಸಲ ಸಿಮ್ಲಾಕ್ಕೆ ಹೋಗಿದ್ದಾಗ ಅಲ್ಲಿ ನಡೆದ ಘಟನೆಯನ್ನು ನೆನೆದು ಸುನಂದಮ್ಮನ ಸ್ವಭಾವ ಹೇಗಿತ್ತೆಂದು ವರ್ಣಿಸುವರು.

ಸಿಮ್ಲಾದಲ್ಲಿ ತಾರಾದೇವಿ ಎಂಬುದೊಂದು ಜಾಗದಲ್ಲಿ ಡಾಕ್ಟರೊಬ್ಬಳು ಯಾವಾಗಲೂ ಚಿಂತಾಕ್ರಾಂತಳಾಗಿರುವುದನ್ನು ಕಂಡು ರುಕ್ಮಿಣಿ, ಸುನಂದಮ್ಮ ಇಬ್ಬರೂ ಆಕೆಯನ್ನು ಹೀಗೇಕಿದ್ದಾಳೆಂದು ಮಾತಾಡಿಸಿದರಂತೆ.

"ಎಲ್ಲರ ಸೇವೆ ಮಾಡುತ್ತಿ. ನೀನೇಕೆ ಉಲ್ಲಾಸವಾಗಿಲ್ಲ ? ನಿನ್ನಲ್ಲಿ ಹರ್ಷವೇ ಕಾಣುವುದಿಲ್ಲ" ಎಂದಾಗ ಆ ಡಾಕ್ಟರು ಹೀಗೆಂದರಂತೆ, "ನಾನೊಬ್ಬಳು ವಿಧವೆ. ಹಿಂದೂ–ಮುಸ್ಲಿಂ ಗಲಾಟೆಯಲ್ಲಿ ನನ್ನ ಗಂಡನನ್ನು ನನ್ನ ಕಣ್ಣೆದುರೇ ಹೊಡೆದು ಬಡಿದು ಚೂರು ಚೂರಾಗಿ ಕತ್ತರಿಸಿ ನನ್ನ ಮುಂದೆ ಹಾಕಿದರು. ಈ ದೃಶ್ಯವನ್ನು ನನ್ನಿಂದ ಮರೆಯಲು ಆಗುತ್ತಿಲ್ಲ. ಈ ದೃಶ್ಯ ಯಾವಾಗಲೂ ನನ್ನ ಕಣ್ಣ ಮುಂದೆಯೇ ಇರುತ್ತದೆ. ನಾನು ಜೀವಸಹಿತ ಇರುವವರೆಗೂ ನಾನಿದನ್ನು ಮರೆಯಲಾರೆ. ಹೇಗೆ ಹರ್ಷದಿಂದಿರಲಿ ಹೇಳಿ" ಎಂದಳಂತೆ. ಈ ಮಾತನ್ನು ಹೇಳುತ್ತಾ ಹೇಳುತ್ತಾ ಸುನಂದಮ್ಮನ ಕಣ್ಣುಗಳು ತೇವವಾದವು.

"ನೋಡಿದಿರಾ, ಇಂತಹವರೆಲ್ಲಾ ಯಾರಿಗೂ ಗೊತ್ತಿಲ್ಲದೆ ಮೂಕ ಸಂಕಟವನ್ನು ಅನುಭವಿಸುತ್ತಾ ಸೇವೆ ಮಾಡುತ್ತಿರುವಾಗ ನನ್ನನ್ನು ಹೊಗಳುವುದರಲ್ಲೇನಿದೆ ?" ಎಂದರು.

'ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ತಮ್ಮ ಅನುಭವವನ್ನು ಏನೆಂದು ಹೇಳುತ್ತಿದ್ದರು' ಎನ್ನಲು, "ಕುದುರೆ ಕಾಲಿಗೆ ಕಟ್ಟಿ ಎಳೆಯುವಂತಹ ಅಮಾನುಷ ರೀತಿಯಲ್ಲಿ ಬ್ರಿಟಿಷರು ನಡೆದುಕೊಳ್ಳುತ್ತಿದ್ದರು" ಎಂದು ಕೆಲವು ವೇಳೆ ಅವರು ಹೇಳು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ತ್ತಿದ್ದುದು ನೆನಪಿದೆ. ಸಂಗ್ರಾಮಕ್ಕಾಗಿ ಅವರ ಶರೀರ ಎಷ್ಟು ಕಷ್ಟಪಟ್ಟಿತೋ ಏನೋ, ಅಷ್ಟೇನೂ ಹೆಚ್ಚಾಗಿ ಆ ಕಷ್ಟಗಳನ್ನು ಹೇಳಿಕೊಳ್ಳುತ್ತಿರಲಿಲ್ಲ. ಅವರಿಗೆ ಬಹಳ ಹಿತವಾದದ್ದೆಂದರೆ ಸಾತ್ವಿಕ ಜೀವನ. ದೇವರ ವಿಚಾರ, ಧರ್ಮ, ತತ್ವ ಇವುಗಳಲ್ಲಿ ಶ್ರದ್ಧೆ ಆಸಕ್ತಿ ಬೆಳೆಯಿತು" ಎನ್ನುತ್ತಾರೆ ರುಕ್ಮಿಣಿ.

ಚಿಕ್ಕಬಳ್ಳಾಪುರದಲ್ಲಿ ವಕೀಲಿ ವೃತ್ತಿಯಲ್ಲಿದ್ದ ಪ್ರಸಿದ್ಧ ದೇಶ ಸೇವಾ ನಿರತ, ಸ್ವಾತಂತ್ರ್ಯಯೋಧ ಶ್ರೀವಾಸ್ ಸಂಪತ್ಕುಮಾರನ್‌ರವರ ಪತ್ನಿ ಶ್ರೀಮತಿ ಶೃಂಗಾರಮ್ಮ ಸುನಂದಮ್ಮನವರನ್ನು ಬಹಳವಾಗಿ ಜ್ಞಾಪಿಸಿಕೊಳ್ಳುತ್ತಾರೆ.

ಮದುವೆಯಾದ ಮೇಲೆಯೇ ಸುನಂದಮ್ಮನ ದೇಶ ಸೇವಾ ಕೆಲಸ ಪ್ರಾರಂಭವಾಯಿತೆನ್ನಬಹುದು—ಎಂದು ಪ್ರಾರಂಭಿಸಿದ ಶೃಂಗಾರಮ್ಮನವರು ಸುನಂದಮ್ಮನ ಬಗ್ಗೆ ಹೀಗೆ ಹೇಳುತ್ತಾರೆ—"ಚಂಗಲರಾಯರೆಡ್ಡಿ, ಟಿ. ಸಿದ್ದಲಿಂಗಯ್ಯನವರೊಡನೆ ಸುನಂದಮ್ಮನು ಚಿಕ್ಕಬಳ್ಳಾಪುರದಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿ ನಡೆಯುವಾಗ ನಮ್ಮ ಮನೆಗೆ ಬರುತ್ತಿದ್ದರು. ಟೌನ್‌ಹಾಲ್ ಎದುರು ಮೈದಾನದಲ್ಲಿ ಇವರ ಕಮಿಟಿ ನಡೆದರೆ ನಾನು ಕಮಿಟಿಗೆ ಬಂದವರಿಗೆಲ್ಲಾ ಊಟ ತಯಾರಿಸುತ್ತಿದ್ದೆ. ಇವರೆಲ್ಲಾ ಬಂದಾಗ ನಮ್ಮ ಮನೆಯಲ್ಲಿ ಸಂಭ್ರಮವೋ ಸಂಭ್ರಮ. ಸುನಂದಮ್ಮ ನಮ್ಮ ಮನೆಯವರಲ್ಲಿ ಒಬ್ಬಳಂತೆಯೇ ಇದ್ದರು. ಈಗ ಎರಡು ವರ್ಷದ ಕೆಳಗೆ ಮೈಸೂರಿಗೆ ನಾವು ಅವರ ಮನೆಗೆ ಹೋಗಿದ್ದಾಗ ಸುನಂದಮ್ಮನಿಗೆ ಅದೆಷ್ಟು ಸಂತೋಷವಾಯಿತೆಂದರೆ, ನಮ್ಮಿಬ್ಬರಿಗೂ ದೀರ್ಘ ದಂಡ ನಮಸ್ಕಾರ ಮಾಡಿಬಿಟ್ಟರು. ಏನೋ ಕಾರಣದಿಂದ ಬಿದ್ದು ಪೆಟ್ಟಾಗಿ ಕಾಲು ನೋವಿದ್ದರೂ ಅದನ್ನೂ ಮರೆತು ನೆಲಮುಟ್ಟಿ ನಮಗೆ ನಮಸ್ಕರಿಸಿದರು. ಬಹಳ ವರ್ಷಗಳ ನಂತರ ಕಂಡು ಆತ್ಮೀಯತೆಯನ್ನು ತೋಡಿಕೊಂಡರು.

"ಆಕೆಯ ಚಿಕ್ಕವಯಸ್ಸಿನ ಮಾತು. ಚನ್ನಪಟ್ಟಣದಲ್ಲಿ ಕಾಂಗ್ರೆಸ್ ಅಧಿವೇಶನ ಸಮಾವೇಶಗೊಂಡಾಗ ಮಹಿಳಾ ಖಂಡದ ಮುಖಂಡಳಾಗಿ ಕೆಲಸ ಮಾಡಿದರು. ಒಂದು ಸಲಹ ಅಧಿವೇಶನವೆಂದರೆ ಮೂರು ದಿನಗಳು ನಡೆಯುತ್ತಿತ್ತು, ಟಿ. ಸುಬ್ರಹ್ಮಣ್ಯಂ ಅಧ್ಯಕ್ಷರಾಗಿದ್ದರು. G O C ಪರವಾಗಿ ಜವಾಬ್ದಾರಿ ಹೊತ್ತಿದ್ದವರು ಸುನಂದಮ್ಮನವರೇ. ಅವರೇ ಸ್ವಾಗತ ಗೀತೆಯನ್ನು ರಚಿಸಿ ಹಾಡಿದರು. ಎಲ್ಲರಿಗೂ ಕವಾಯಿತು ಹೇಳಿ ಕೊಡುತ್ತಿದ್ದವರು ಅವರೇ."

ಶೃಂಗಾರಮ್ಮ ಸಂಪತ್ಕುಮಾರನ್‌ರವರ ಮಗಳು ಶ್ರೀಮತಿ ರುಕ್ಮಾಯಿ ತನ್ನ ಚಿಕ್ಕ ವಯಸ್ಸಿನಲ್ಲೇ ಸುನಂದಮ್ಮನಿಂದ ಆಕರ್ಷಿಸ್ಪಟ್ಟಿದ್ದರು. ತಾಂಡೂರು ಸುನಂದಮ್ಮ "ಎಲೆಮರೆಯ ಕಾಯಿಯಂತೆ" ಎಂದು ವಿವರಿಸುತ್ತಾರೆ ರುಕ್ಮಾಯಿಯವರು.

'ಸ್ವಾತಂತ್ರ್ಯ ಪೂರ್ವದಲ್ಲಿ ಹಳೆಯ ಮೈಸೂರು ಪ್ರಾಂತ್ಯದಲ್ಲಿದ್ದ ಹಲವೇ ಹೋರಾಟಗಾರ್ತಿಯರ ಪೈಕಿ ಪ್ರಮುಖರೆನಿಸಿದ್ದ ಶ್ರೀಮತಿ ತಾಂಡೂರು ಸುನಂದಮ್ಮ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ನವರ ಬಗ್ಗೆ ಅನೇಕರಿಗೆ ಅರಿವಿರಲಾರದು. ಇದಕ್ಕೆ ಕಾರಣ ದೇಶ ಸ್ವಾತಂತ್ರ್ಯ ಗಳಿಸಿದ ನಂತರ ತಮ್ಮ ಕಾರ್ಯಕ್ಷೇತ್ರವನ್ನು ಸಮಾಜ ಸೇವೆಗೆ ಮೀಸಲಾಗಿಟ್ಟು ರಾಜಕೀಯ ಸ್ಥಾನಮಾನದ ಹಂಬಲ ಅವರಿಗಿಲ್ಲದೇ ಇದ್ದುದೇ ಇರಬಹುದು' ಎನ್ನುತ್ತಾರೆ ರುಕ್ಮಾಯಿ.

ಚಿಕ್ಕಬಳ್ಳಾಪುರದಲ್ಲಿ ಒಂದು ಸಲ ಸಭೆಯನ್ನುದ್ದೇಶಿಸಿ ಮಾತಾಡಿದ ಸುನಂದಮ್ಮನ ಧೈರ್ಯ, ಸಾಹಸ, ವಾಕ್‌ಚಾತುರ್ಯ, ದೇಶಸೇವೆಯ ಆಕಾಂಕ್ಷೆ ಇವುಗಳು ರುಕ್ಮಾಯಿಯ ಚಿಕ್ಕ ವಯಸ್ಸಿನಲ್ಲೇ ಅವರ ಬಗ್ಗೆ ಆಶ್ಚರ್ಯವನ್ನೂ ಹೆಮ್ಮೆಯನ್ನೂ ಉಂಟುಮಾಡಿತ್ತು. ಆಗಿನ ಕಾಲದಲ್ಲಿ ಅಂತಹ ಚಿಕ್ಕ ಊರಿನಲ್ಲಿ ಧೈರ್ಯವಾಗಿ ಮುನ್ನುಗ್ಗಿ ನ್ಯಾಯಕ್ಕಾಗಿ ಹೋರಾಡುತ್ತಿದ್ದ ಹೆಣ್ಣೊಬ್ಬಳನ್ನು ಕಂಡು ಚಕಿತರಾಗಿದ್ದರು.

ಚಿಕ್ಕ ವಯಸ್ಸಿನಿಂದ ಸುನಂದಮ್ಮನನ್ನು ಕಂಡ ರುಕ್ಮಾಯಿಗೆ ಸುನಂದಮ್ಮನ ವಿಷಯ ಹೇಳುವುದು ಲೀಲಾಜಾಲ.

'ಸುನಂದಮ್ಮನ ವಿದ್ಯಾಭ್ಯಾಸ ಆಂಧ್ರದ ಮದನಪಲ್ಲಿಯಲ್ಲಿ ನಡೆಯಿತು. ಡಾಕ್ಟರ್ ಅನಿಬೆಸೆಂಟರ ಪ್ರಭಾವ ಇವರ ಮೇಲೆ ಹೆಚ್ಚು' ಎನ್ನುತ್ತಾರೆ ರುಕ್ಮಾಯಿ. "ಸುನಂದಮ್ಮ ವಿಶ್ವವಿದ್ಯಾನಿಲಯದ ಪದವೀಧರೆ ಅಲ್ಲದಿದ್ದರೂ ಇಂಗ್ಲೀಷ್, ಕನ್ನಡ, ತಮಿಳು, ತೆಲುಗು ಭಾಷೆಗಳಲ್ಲಿ ಪ್ರಾವೀಣ್ಯತೆ ಗಳಿಸಿದ್ದರು. ಈ ಎಲ್ಲಾ ಭಾಷೆಗಳನ್ನೂ ನಿರರ್ಗಳವಾಗಿ ಮಾತಾಡುತ್ತಿದ್ದುದು ಮಾತ್ರವಲ್ಲ, ಉತ್ತಮ ವಾಗ್ಮಿಯೂ ಆಗಿದ್ದರು. ಇವರ ಮೈದುನ ಶ್ರೀ ದ್ವಾರಕಾನಾಥ್, ಶ್ರೀ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್ ಸಿನಿಮಾಟೋಗ್ರಫಿ ವಿಭಾಗದ ಮುಖ್ಯಸ್ಥರಾಗಿದ್ದರು. ಮಾವಂದಿರ ಮನೆಯರೆಲ್ಲರೂ ಕಲೋಪಾಸಕರು. ಅದಕ್ಕೆ ಸರಿಯಾಗಿ ಸುನಂದಮ್ಮ ಸಂಗೀತ, ಸಾಹಿತ್ಯ, ಅಭಿನಯ ತಾರೆಯಾಗಿ ಅವರ ಮನೆ ಸೊಸೆಯಾಗಿ ಸೇರಿದರು.

"ಕನ್ನಡದ ಪ್ರಥಮ ವಾಕ್ಚಿತ್ರ "ಧ್ರುವಕುಮಾರ" ಚಿತ್ರದಲ್ಲಿ ಸುನಂದಮ್ಮ ಅಭಿನಯಿಸಿದ್ದರು. ನಾಟಕ ಶಿರೋಮಣಿ ವರದಾಚಾರ್ ಮೆಮೋರಿಯಲ್ ಸಂಸ್ಥೆಯಲ್ಲಿ ಸುನಂದಮ್ಮನಿಗೆ ಬಹು ಅಭಿರುಚಿ.

"ದೊಡ್ಡಬಳ್ಳಾಪುರದಲ್ಲಿ ಅವರ ಪತಿ ನರಸಿಂಹ ಅಯ್ಯಂಗಾರ್ ಅವರೊಡನೆ ವಾಸಿಸುತ್ತಿದ್ದ ಸುನಂದಮ್ಮನವರು ರಾಷ್ಟ್ರಪಿತ ಬಾಪೂಜಿಯ ಕರೆಗೆ ಓಗೊಟ್ಟು ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದರು.

"ಐದು ದಶಕಗಳ ಹಿಂದೆ ನಮ್ಮ ದೇಶದಲ್ಲಿ ಮಹಿಳೆಯರಿಗೆ ಸಮಾಜದಲ್ಲಿ ಎಂತಹ ಸ್ಥಾನಮಾನವಿತ್ತೆಂಬುದನ್ನು ವಿವರಿಸುವ ಅಗತ್ಯವಿಲ್ಲ. ಮನೆ ಮಠ ತೊರೆದು ಗಂಡಸರಿಗೆ ಸರಿಸಮಾನವಾಗಿ ಅವರ ಜೊತೆಯಲ್ಲಿ ಓಡಾಡುತ್ತ ಕಾಂಗ್ರೆಸ್ ಸಂಸ್ಥೆಯ ಕೆಲಸ ಮಾಡುವುದು ಸುಲಭಸಾಧ್ಯವಾದ ಕೆಲಸವಾಗಿರಲಿಲ್ಲ. ಹೆಂಗಸರೂ ಗಂಡಸರೂ ಆಡುತ್ತಿದ್ದ ವ್ಯಂಗ್ಯ ನುಡಿಗಳನ್ನು ಲೆಕ್ಕಿಸದೆ ಧೈರ್ಯದಿಂದ ಹೆಜ್ಜೆ ಹಾಕಿದ ಹಲವೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಮಹಿಳೆಯರಲ್ಲಿ ಸುನಂದಮ್ಮನವರು ಮುಖ್ಯರು. ಹಳೆಯ ಮೈಸೂರಿನ ಹಿರಿಯ ನಾಯಕರಾಗಿದ್ದ ಟಿ. ಸಿದ್ಧಲಿಂಗಯ್ಯನವರೂ ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರೂ ಈ ದಂಪತಿಗಳಿಗೆ ಅತಿ ಆಪ್ತರಾಗಿದ್ದರು" ಎನ್ನುತ್ತಾರೆ ರುಕ್ಮಾಯಿ.

"೧೯೩೮ರ ಕೋಲಾರ ಜಿಲ್ಲೆಯ ಚಿಕ್ಕಬಳ್ಳಾಪುರದಲ್ಲಿ ಪುರಸಭೆಯ ಚುನಾವಣೆಗೆ ಕಾಂಗ್ರೆಸ್ ಸಂಸ್ಥೆ ತನ್ನ ಅಭ್ಯರ್ಥಿಗಳನ್ನು ನಿಲ್ಲಿಸಿತ್ತು. ಕಾಂಗ್ರೆಸ್ ಅಭ್ಯರ್ಥಿಗಳಿಗೆ ಮತ ಕೊಡಬೇಕೆಂದು ಮನವಿ ಮಾಡಿಕೊಳ್ಳುವ ಸಲುವಾಗಿ ಅನೇಕ ರಾಜಕೀಯ ಮುಖಂಡರು ಆಗಮಿಸಿದ್ದರು. ಅವರೊಡನೆ ಆಗಮಿಸಿದ್ದ ಏಕೈಕ ಮಹಿಳೆ ಸುನಂದಮ್ಮ. ಅಂದು ಸುನಂದಮ್ಮನವರು ಕಾಂಗ್ರೆಸ್ ಸಂಸ್ಥೆಯ ಧ್ಯೇಯ ಧೋರಣೆಗಳ ಬಗ್ಗೆ ಬಹಿರಂಗ ಸಭೆಯಲ್ಲಿ ಮಾಡಿದ ಭಾಷಣ ಇನ್ನೂ ನನ್ನ ನೆನಪಿನಲ್ಲಿ ಹಚ್ಚ ಹಸಿರಾಗಿದೆ" ಎನ್ನುತ್ತಾ ರುಕ್ಮಾಯಿಯವರು 'ಅದೇ ಮೊದಲ ಬಾರಿಗೆ ಚಿಕ್ಕಬಳ್ಳಾಪುರ ದಂತಹ ಸಣ್ಣ ಊರಿನಲ್ಲಿ ಮಹಿಳೆಯೊಬ್ಬರು ಧೈರ್ಯವಾಗಿ ನಿಂತು ಮಾತಾಡಿದ್ದನ್ನು ಕಂಡೆ' ಎನ್ನುತ್ತಾರೆ.

ಅಂದಿನ ಮೈಸೂರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿದ್ದವರಲ್ಲಿ ಸುನಂದಮ್ಮ ಒಬ್ಬರೇ ಮಹಿಳೆ. ೧೯೪೦ರಲ್ಲಿ ಹಳೆಯ ವಿಧಾನಸಭೆಯ ಅಧ್ಯಕ್ಷರೂ ಮಾಜಿ ವಿದ್ಯಾ ಮಂತ್ರಿಗಳೂ ಆಗಿದ್ದ ವಿ. ವೆಂಕಟಪ್ಪನವರ ಗ್ರಾಮವಾದ ತಿಟ್ಟಮಾರಹಳ್ಳಿಯಲ್ಲಿ ಮೈಸೂರು ಕಾಂಗ್ರೆಸ್ ಪ್ರಾಂತೀಯ ಅಧಿವೇಶನ ನಡೆಯಿತು. ರಾಜ್ಯದ ಹಿರಿಯ ನಾಯಕರಲ್ಲೊಬ್ಬರಾದ ತಾಳಿಕೆರೆ ಸುಬ್ರಹ್ಮಣ್ಯಂ ಅಧಿವೇಶನದ ಅಧ್ಯಕ್ಷರಾಗಿದ್ದರು. ಆಗ ಮಹಿಳಾ ಸ್ವಯಂ ಸೇವಕಿಯರ ನಾಯಕಿ ಸುನಂದಮ್ಮನವರೇ. "ಸಮಾಜಸೇವೆ ಮಾಡುವ ಮನೋಭಾವ ನನ್ನಲ್ಲಿ ಬೆಳೆಯಲು ಸುನಂದಮ್ಮ ಬಹುಮಟ್ಟಿಗೆ ಕಾರಣ. ಅವರು ಸ್ವಯಂಸೇವಕಿಯರಿಗೆ ತರಬೇತಿ ಕೊಡುತ್ತಿದ್ದ ರೀತಿ ಯಾವ ಕಮಾಂಡಿಂಗ್ ಆಫೀಸರ್‌ಗೂ ಕಡಿಮೆ ಇರಲಿಲ್ಲ" ಎಂದು ರುಕ್ಮಾಯಿ ಅಭಿಪ್ರಾಯ ಪಡುತ್ತಾರೆ.

೧೯೩೮ರಿಂದ ಪ್ರಾರಂಭವಾಗಿ ಶಿವಪುರದ ಸತ್ಯಾಗ್ರಹ, ವಿದುರಾಶ್ವತ್ಥ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳವಳಿ, ಮೈಸೂರು ಚಲೋ ಸತ್ಯಾಗ್ರಹ ಈ ಎಲ್ಲಾ ಆಂದೋಲನಗಳಲ್ಲೂ ಸುನಂದಮ್ಮ ಭಾಗವಹಿಸಿ ಸೆರೆಮನೆವಾಸ ಅನುಭವಿಸಿದ್ದಾರೆ. ಅಂದಿನ ಮೈಸೂರು ಸಂಸ್ಥಾನದ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು. ದೇಶಕ್ಕೆ ಸ್ವಾತಂತ್ರ್ಯ ಬಂದನಂತರ ದೇಶದ ಬೆಳವಣಿಗೆಗೆ ಬೇಕಾದ ರಚನಾತ್ಮಕ ಕಾರ್ಯಗಳನ್ನು ಕೈಗೊಳ್ಳಬಲ್ಲ ಶ್ರದ್ಧಾವಂತ ಕಾರ್ಯಕರ್ತರ ಅಗತ್ಯವಿದೆಯೆಂದು ಮನಗಂಡು ಸುನಂದಮ್ಮನವರು ತಮ್ಮ ಮುಂದಿನ ಜೀವನವನ್ನೆಲ್ಲಾ ರಚನಾತ್ಮಕ ಕಾರ್ಯಗಳಿಗಾಗಿಯೇ ಮುಡುಪಿಟ್ಟರು. ಅವರ ವಾಸಸ್ಥಳವು ಮೈಸೂರಿಗೆ ಬದಲಾದುದರಿಂದ ಅವರ ಕಾರ್ಯಕ್ಷೇತ್ರವೂ ಮೈಸೂರು ನಗರಕ್ಕೆ ಸೀಮಿತವಾಯಿತು. ಹಲವಾರು ವರ್ಷಗಳು ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿ ಸೇವೆ ಸಲ್ಲಿಸಿದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



"೧೯೫೦ರಲ್ಲಿ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ನಡೆದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಲು ಬಂದಿದ್ದ ಸುಮಾರು ಐದು ಸಾವಿರ ಪ್ರತಿನಿಧಿಗಳಿಗೆ ಊಟೋಪಚಾರದ ವ್ಯವಸ್ಥೆಯ ಮೇಲ್ವಿಚಾರಣೆಯನ್ನು ಎಂ. ಆರ್. ಲಕ್ಷಮ್ಮನವ ರೊಡನೆ ಸುನಂದಮ್ಮ ವಹಿಸಿಕೊಂಡಿದ್ದರು. ಈಗಿನ ಕಾಲದಲ್ಲಿ ಯಾವುದೇ ಅಧಿವೇಶನ ವಾದರೂ ಪ್ರತಿನಿಧಿಗಳ ಊಟದ ವ್ಯವಸ್ಥೆಯನ್ನು ಯಾವುದಾದರೂ ಹೋಟಲಿಗೆ ವಹಿಸಿ ಸಹಸ್ರಾರು ರೂಪಾಯಿ ವೆಚ್ಚ ಮಾಡುವ ಪರಿಪಾಠ ಬೆಳೆದಿದೆ. ಆಗ ನಿಸ್ವಾರ್ಥ ಮನಸ್ಸಿನಿಂದ ಸೇವಾ ಮನೋಭಾವದಿಂದ ಕೆಲಸ ಮಾಡಲು ಯುವಕ ಯುವತಿಯರು ಮುಂದೆ ಬರುತ್ತಿದ್ದರು. ಈ ಅಧಿವೇಶನದಲ್ಲಿ ಕೆಲಸ ಮಾಡಲು ೨೫೦ಕ್ಕೂ ಹೆಚ್ಚಿನ ಸ್ವಯಂ ಸೇವಕಿಯರನ್ನೂ ಕಲೆ ಹಾಕಿ ಅಧಿವೇಶನಕ್ಕೆ ಬಂದಿದ್ದ ಪ್ರತಿನಿಧಿಗಳಿಗೆ ಊಟ ಉಪಚಾರ ಮಾಡಿದರು. ಅಂದಿನ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಟಂಡನ್ ಮತ್ತು ಪ್ರಪ್ರಥಮ ಪ್ರಧಾನಿಯಾಗಿದ್ದ ನೆಹರೂ—ಈ ಇಬ್ಬರು ಪ್ರಮುಖ ನಾಯಕರು ವಾಸವಿ ಧರ್ಮಶಾಲೆಗೆ ಆಗಮಿಸಿ ಭೋಜನ ಕೂಟ ದಲ್ಲಿ ಭಾಗವಹಿಸುವಂತೆ ಸುನಂದಮ್ಮನವರು ಮಾಡಿದಾಗ, ಅವರಿಗೆ ಇದರಿಂದ ಯಾವ ಪ್ರತಿಫಲಾಪೇಕ್ಷೆಯೂ ಇರಲಿಲ್ಲ...ತಮಗೆ ಮಕ್ಕಳಿಲ್ಲವೆಂದು ಸುನಂದಮ್ಮನವರು ಎಂದೂ ಕೊರಗಿದವರಲ್ಲ. ಅನೇಕ ಅನಾಥ ಮಕ್ಕಳನ್ನು ಸಾಕಿ ಸಲಹಿ ಬಡ ವಿದ್ಯಾರ್ಥಿ ಗಳಿಗೆ ಶಿಕ್ಷಣದ ಏರ್ಪಾಡು ಮಾಡಿದ್ದರು. ಬುದ್ಧಿಮಾಂದ್ಯದ ಮಕ್ಕಳಿಗಾಗಿ ತಮ್ಮ ಮನೆಯಲ್ಲೇ ಶಾಲೆಯನ್ನು ತೆರೆದರು. ಅವಿಶ್ರಾಂತವಾಗಿ ಕೊನೆಯ ಉಸುರಿನವರೆಗೂ ಸುನಂದಮ್ಮ ದೇಶಸೇವೆ ಮಾಡಿದ್ದಾರೆ" ಎನ್ನುತ್ತಾರೆ ರುಕ್ಮಾಯಿ.

ಶ್ರೀಮತಿ ಮಧುರಾ ಛತ್ರಪತಿಯವರ ಮಾತಿನಲ್ಲಿ ಹೇಳುವುದಾದರೆ "ಶ್ರೀಮತಿ ಸುನಂದಮ್ಮನವರು ಯಾವಾಗಲೂ ಯಾವುದಾದರೊಂದು ಚಟುವಟಿಕೆಯಲ್ಲಿ ನಿರತ ರಾಗಿದ್ದರು. ಅವರ ಚೂಟಿತನ ಎಲ್ಲರನ್ನೂ ಆಕರ್ಷಿಸುತ್ತಿತ್ತು. ಅವರ ಸ್ವಭಾವ ಅತಿ ಸರಳ. ಅವರ ಮನೆ ಎಲ್ಲರಿಗೂ ಯಾವಾಗಲೂ ತೆರೆದೇ ಇರುತ್ತಿತ್ತು. ಗಾಂಧೀ ತತ್ವವನ್ನು ಪಾಲಿಸಲು ಮನೆಯಲ್ಲಿ ಯಾರೂ ಅಡ್ಡಿ ಬರುತ್ತಿರಲಿಲ್ಲ. ಖಾದಿ ಸೀರೆ ಯುಡಲು ಯಾವ ಆಕ್ಷೇಪಣೆಯೂ ಇರಲಿಲ್ಲ. ಗಾಂಧೀಜಿ ಅಪೇಕ್ಷೆಪಟ್ಟಂತೆ ಸುನಂದಮ್ಮ ಸೇವಾನಿರತರಾದರು."

ಇಲ್ಲಿ ಮಧುರಾ ಛತ್ರಪತಿಯವರು ಒಂದು ವಿಶೇಷ ವ್ಯಾಖ್ಯಾನ ಕೊಡಲು ಇಷ್ಟಪಡುತ್ತಾರೆ. "ಗಾಂಧೀಜಿ ಹೆಂಗಸರೆನ್ನುವ ಕಾರಣದಿಂದ ಹೆಚ್ಚು ಉತ್ತೇಜಿಸಿದರು ಎಂದರೆ ತಪ್ಪಾಗುವುದು. ಗಾಂಧೀಜಿ ಹೆಂಗಸರನ್ನೂ ಎಲ್ಲರಂತೆಯೇ ಕಂಡರು. ಅವ ರಿಗೆ ಹೆಂಗಸು ಗಂಡಸು ಎಂಬ ವ್ಯತ್ಯಾಸದ ಭಾವನೆಯೇ ಇರಲಿಲ್ಲ. ಯಾವ ಕೆಲಸಕ್ಕೆ ಯಾರು ಅರ್ಹರು ಎಂಬುದನ್ನು ಮಾತ್ರ ಗಮನಿಸುತ್ತಿದ್ದರು. ಗಾಂಧೀಜಿ ಹೆಂಗಸ ರಿಗೆ ಹೆಚ್ಚು ಪ್ರೋತ್ಸಾಹ ಕೊಟ್ಟರು ಎಂದೇಕೆ ಹೇಳಬೇಕು. ಹೆಣ್ಣಿನ ಸಾಮರ್ಥ್ಯ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ವನ್ನು ಗುರ್ತಿಸಿದರು ಎನ್ನಬಹುದು ಅಥವಾ ಕೆಲಸ ಮಾಡಲು ಹೆಣ್ಣು ಗಂಡಿನ ಭೇದ ಅವರ ತಲೆಯೊಳಗೆ ಪ್ರವೇಶ ಮಾಡಲಿಲ್ಲವೆನ್ನಬಹುದು" ಎನ್ನುತ್ತಾರೆ ಮಧುರಾ.

ಆಧುನಿಕ ಸ್ತ್ರೀಯರಿಗೆ ಪ್ರಗತಿಯ ಪರವಾಗಿ ಆಶಾಜ್ಯೋತಿಯನ್ನು ನೀಡುವ ಸ್ವಭಾವದ ಮಧುರಾ ಛತ್ರಪತಿಯವರು ಒಬ್ಬ ಪ್ರಸಿದ್ಧ ಸಮಾಜ ಸೇವಕಿ. ನಾನು ಹೆಣ್ಣೆಂದು ಹೇಳಿಕೊಂಡು ಹಿಂದುಳಿದರೆ ಅದಕ್ಕೆ ಯಾರೇನು ಮಾಡುವರು ಎಂಬ ಹೊಸ ಸವಾಲನ್ನು ಎದುರಿಸುವ ಹೆಣ್ಣು ಈಕೆ. ಸುನಂದಮ್ಮನವರನ್ನು ಮೆಚ್ಚಿಕೊಂಡಿರುವುದು ಮಧುರಾರವರ ಸ್ವಭಾವಕ್ಕೆ ಸಹಜ. ದೇಶಸೇವಾ ಕಾರ್ಯದಲ್ಲಿ ಮೈಸೂರು ಹಾಗೂ ಮೈಸೂರಿನ ಮಹಿಳೆಯರನ್ನೂ ರಾಷ್ಟ್ರಪಿತ ಗಾಂಧಿ ಬಹುವಾಗಿ ಮೆಚ್ಚಿದ್ದರು. ಇಂತಹ ಕರ್ತೃತ್ವ ತುಂಬಿದ ಮಹಿಳೆಯರನ್ನೂ ಗಾಂಧಿ ತತ್ವ ಪ್ರಚಾರಕ್ಕೆ, ಸೇವಾ ಕಾರ್ಯಕ್ಕೆ ಸಿದ್ಧಪಡಿಸಿದವರು ಸುನಂದಮ್ಮ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

## ಅನ್ನಪೂರ್ಣಮ್ಮ ನಂಜಪ್ಪ

ವೀರ ವನಿತೆಯರು ಎಂದ ಕೂಡಲೇ ಕಣ್ಣ ಮುಂದೆ ಸುಳಿಯುವ ಚಿತ್ರ-ಕತ್ತಿ ಹಿಡಿದು ಕುದುರೆ ಏರಿ ವೀರಾವೇಶದಿಂದ ಸಂಗ್ರಾಮಕ್ಕೆ ಓಡುತ್ತಿರುವ ಕಿತ್ತೂರು ರಾಣಿ ಚೆನ್ನಮ್ಮನದು. ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುಂದಾಳಾಗಿ ನಿಂತ ಝಾನ್ಸಿ ರಾಣಿ ಲಕ್ಷ್ಮೀಬಾಯಿಗೂ ಮೊದಲೇ ಬ್ರಿಟಿಷರ ವಿರುದ್ಧ ಬಂಡಾಯ ಹೂಡಿ ಈಕೆ ಬ್ರಿಟಿಷ್ ಸೈನ್ಯದೊಡನೆ ಯುದ್ಧ ಮಾಡಿದ ಕೆಚ್ಚೆದೆಯ, ಸ್ವಾತಂತ್ರ್ಯಪ್ರಿಯೆ. ಚೆನ್ನಮ್ಮನ ಧೈರ್ಯ ಸಾಹಸ ಭಾರತೀಯರಲ್ಲಿ ಕಿಚ್ಚೆಬ್ಬಿಸುವ ಸ್ಫೂರ್ತಿಯಂತಿತ್ತು.

ಐತಿಹಾಸಿಕ ವೀರ ವನಿತೆಯರ ಜೀವನದ ಸ್ಫೂರ್ತಿಯ ಜೊತೆಗೆ ಸಾಮಾಜಿಕ ಸುಧಾರಣಾ ಕ್ರಾಂತಿಯ ಸಮಯದಲ್ಲಿ ಶ್ರೀಮತಿ ರಮಾಬಾಯಿ ರಾನಡೆ ಮತ್ತು ಸ್ತ್ರೀ ಯೋಧ ದಳವನ್ನು ಹುಟ್ಟು ಹಾಕಿದ ಕ್ಯಾಪ್ಟನ್ ಲಕ್ಷ್ಮೀಬಾಯಿ–ಇವರಂತಹ ವೀರ ರಮಣಿಯರ ನಾಯಕತ್ವದಲ್ಲಿ ಮಹಿಳೆಯರು ಕ್ರಮೇಣ ಹೆಚ್ಚು ಸಂಖ್ಯೆಯಲ್ಲಿ ಧೈರ್ಯದಿಂದ ಮುಂದೆ ಬಂದರು.

ಇಪ್ಪತ್ತನೆಯ ಶತಮಾನದಲ್ಲಿ ಸ್ವಾತಂತ್ರ್ಯಗಳಿಸುವ ಛಲವನ್ನು ಮುಂದುವರಿಸಿ ಮಹಾತ್ಮಾಜಿಯವರ ಪತ್ನಿ ಕಸ್ತೂರಿಬಾ ಗಾಂಧಿ ಮತ್ತು ಡಾ॥ ಅನಿಬೆಸೆಂಟ್, ವಿಜಯಲಕ್ಷ್ಮೀ ಪಂಡಿತ್, ಸರೋಜಿನಿ ನಾಯ್ಡು, ಸುಚೇತ ಕೃಪಲಾನಿ, ಇಂದಿರಾ ಗಾಂಧಿ—ಇವರಂತಹ ದಿಟ್ಟ ಹೆಜ್ಜೆ ಇಟ್ಟ ಮುಖಂಡರ ಪ್ರಭಾವದಿಂದ ಮಹಿಳೆಯರು ದೇಶ ಸೇವೆಯಲ್ಲಿ ಹೆಚ್ಚು ಹೆಚ್ಚು ಪಾಲ್ಗೊಂಡರು.

ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರೊಡನೆ ಖಡ್ಗ ಹಿಡಿದು ಹೋರಾಡುವ ಮಾರ್ಗ ಬದಲಾಯಿಸಿ, ಗಾಂಧೀಜಿಯವರ ನಾಯಕತ್ವದಲ್ಲಿ ಬಲವಾದ ದೃಢವಾದ ಅಸಹಕಾರ ಚಳವಳಿ ಪ್ರಾರಂಭವಾಯಿತು. ಈ ಕ್ರಾಂತಿಯೇ ಭಾರತೀಯ ಹೆಣ್ಣು ಮಕ್ಕಳ ಸಹನೆ, ತಾಳ್ಮೆ, ತ್ಯಾಗ, ಧೀಮಂತ ಶಕ್ತಿಯನ್ನು ಹೊರಗೆಳೆದು ದೇಶ ಸೇವೆಮಾಡುವ ಅವಕಾಶವನ್ನು ಕಲ್ಪಿಸಿದುದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಯುದ್ಧಕ್ಕೆ ಸೈನ್ಯವನ್ನು ಕೂಡಿಸುವಂತೆಯೇ, ಈ ಕ್ರಾಂತಿಯಲ್ಲಿ ಜನ-ಸಂಗ್ರಹಣೆ, ಕಷ್ಟ ಸಹಿಷ್ಣುತೆ, ಅಹಿಂಸಾ ಮಾರ್ಗ ಅತ್ಯಾವಶ್ಯಕವಾಯಿತು.

ಅಂತಹ ಒಂದು ಪಾತ್ರ ಶ್ರೀಮತಿ ಅನ್ನಪೂರ್ಣಮ್ಮ ನಂಜಪ್ಪನವರದು.

"ದೇಶಬಾಂಧವರೇ, ನಾಡಿನ ಸ್ವಾತಂತ್ರ್ಯಕ್ಕಾಗಿ ಮೈಸೂರು ಸಂಸ್ಥಾನದ ಕಾಂಗ್ರೆಸ್ ಸತ್ಯಾಗ್ರಹದ ಘೋಷಣೆಮಾಡಿ ಹದಿನೈದು ದಿನಗಳಾದುವು. ಈ ಎರಡು ವಾರದ ಅವಧಿಯಲ್ಲಿ ನಾಡಿನ ಮಕ್ಕಳು ಅಸಾಧಾರಣ ಧೈರ್ಯ, ಸ್ಥೈರ್ಯಗಳನ್ನು ತೋರಿ ಮಹಾತ್ಯಾಗ ಮಾಡಿದ್ದಾರೆ. ಆಳುವವರ ದಬ್ಬಾಳಿಕೆ, ಲಾಠಿ ಪ್ರಹಾರ, ಛಡೀ ಪೆಟ್ಟು, ಗುಂಡಿನ ಸುರಿಮಳೆಗಳನ್ನು ಆಬಾಲವೃದ್ಧರೂ. ಮಹಿಳಾಮಣಿಗಳೂ ಎದುರಿಸಿ ಪ್ರಾಣಾರ್ಪಣೆ ಮಾಡಿದ್ದಾರೆ. ಹಸುಗೂಸುಗಳೂ ತಮ್ಮ ನೆತ್ತರು. ಪ್ರಾಣವನ್ನು ಹತ್ಯಾಕಾರಿಗಳ ದೌರ್ಜನ್ಯಕ್ಕೆ ಸಮರ್ಪಣೆ ಮಾಡಿದ್ದಾರೆ. ಇವೆಲ್ಲಾ—ಪವಿತ್ರ ದೇಶದ ಸ್ವಾತಂತ್ರ್ಯಕ್ಕಾಗಿ. ನಿರಂಕುಶ ದಬ್ಬಾಳಿಕೆಯ ಸರ್ಕಾರ ನಾಶವಾಗಿ ಪ್ರಜಾನುರಾಗಿ ಸ್ವರಾಜ್ಯ ಸ್ಥಾಪನೆಯಾಗುವುದಕ್ಕಾಗಿ. ಇಂದು, ನಮ್ಮೆಲ್ಲರ ಶಕ್ತಿಯನ್ನೂ, ತ್ಯಾಗಶೀಲತೆಯನ್ನೂ ದೇಶಕ್ಕಾಗಿ ಮೀಸಲಾಗಿಡುವ ಸುಸಮಯ ಬಂದಿದೆ. ಕಾಂಗ್ರೆಸ್ ಧರ್ಮಯುದ್ಧವನ್ನು ಮುಂದುವರಿಸಿ. ಸಂಪೂರ್ಣ ಸ್ವಾತಂತ್ರ್ಯವೇ ಗುರಿ. ಅಲ್ಲಿಯವರೆಗೂ ಹೋರಾಟ ನಡೆಸಲು ಸಂಕಲ್ಪಮಾಡಿ, ಇದಕ್ಕಾಗಿ ಹೊರಡುವ "ಚಲೋ ಮೈಸೂರು" ಜಾಥಾದಲ್ಲಿ ಎಲ್ಲರೂ ಪಾಲ್ಗೊಂಡು ದೇಶಸೇವೆ ಸಲ್ಲಿಸಿ...ಬನ್ನಿ "

ಹೀಗೆ ಜನರನ್ನು ಹುರಿದುಂಬಿಸಿ ಸ್ವಾತಂತ್ರ್ಯದ ಗುರಿ ಮುಟ್ಟುವವರೆಗೂ ಹಟತೊಟ್ಟು ಹೋರಾಡಿದ ಹೆಣ್ಣು ಶ್ರೀಮತಿ ಬಿ.ಎಲ್. ಅನ್ನಪೂರ್ಣಮ್ಮ ನಂಜಪ್ಪ. ಈಕೆ "ಚಲೋ ಮೈಸೂರು" ಕ್ರಾಂತಿಯ ಮಹಿಳಾ ಮುಖಂಡರು. ಬೆಂಗಳೂರು ವಿಭಾಗದ ಮೈಸೂರು ಕಾಂಗ್ರೆಸ್ಸಿನ ಏಕಮಾತ್ರ ಪ್ರಥಮ ವನಿತೆ.

ಈಗ ಅನ್ನಪೂರ್ಣಮ್ಮನವರಿಗೆ ೮೫ ವರ್ಷಗಳು. ಸ್ವಾತಂತ್ರ್ಯ ಹೋರಾಟದಲ್ಲಿ ಸವೆಸಿದ ಶರೀರ ಇವರದು. ದೇಶ ಸ್ವತಂತ್ರವಾದುದನ್ನು ಕಂಡು, ಸರ್ವಶಕ್ತಿಗೊಂಡು, ಈಗಲೂ ಸ್ಫೂರ್ತಿಯಿಂದ ಮಾತಾಡುವ ಈ ಘನ ವ್ಯಕ್ತಿಯನ್ನು ನೋಡಿದರೆ ಇವರಿಗೆ ೮೫ ವರ್ಷ ವಯಸ್ಸು ಎನ್ನಲಾಗುವುದಿಲ್ಲ. ಉತ್ಸಾಹದ ಯುವತಿಯಂತೆ ಅಂದಿನ ದಿನಗಳನ್ನು ನೆನೆದು, ನಮ್ಮ ಕಣ್ಣ ಮುಂದೆ ಚಿತ್ರ ಕಟ್ಟುವಂತೆ ಆ ಆಂದೋಲನದ ದಿನಗಳಲ್ಲಿ ತಮ್ಮ ಪಾತ್ರವನ್ನು ವಿವರಿಸುವರು. ಇಂದಿಗೂ ಇವರು ಕಂಚಿನ ಕಂಠದಲ್ಲಿ ಧ್ವನಿ ಎತ್ತರಿಸಿ ಮಾತಾಡುವರು.

"ಈಗ ಏನಮ್ಮ ಇದೆ ? ದೇಶಕ್ಕಾಗಿ ಎಂತಹ ತ್ಯಾಗವನ್ನಾದರೂ ಮಾಡುವಂತಹ ಜನ ಆಗ ಇದ್ದರು. ಹೋರಾಟದ ಸಮಯದಲ್ಲಿದ್ದಂತಹ ಕಷ್ಟ ಪರಿಸ್ಥಿತಿಯೂ ಇಲ್ಲ. ಸ್ವಾತಂತ್ರ್ಯ ಬಂದ ಹೊಸದರಲ್ಲಿದ್ದ ಆನಂದ ಉತ್ಸಾಹವೂ ಇಲ್ಲ. ಯಾವ ದೃಷ್ಟಿಯಿಂದ ಸ್ವಾತಂತ್ರ್ಯಕ್ಕಾಗಿ ಹೋರಾಡಿದೆವೋ, ಆ ಭಾವನೆ ಇಂದು ನಮ್ಮ ಜನತೆಯಲ್ಲಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಕಂಡುಬರುವುದಿಲ್ಲ. ಮಹಾತ್ಮಾಜಿಯವರು ತೋರಿಸಿಕೊಟ್ಟ ಆದರ್ಶಗಳನ್ನು ಪಾಲಿಸ ಬೇಕೆಂದು ನನ್ನ ಪಾಡಿಗೆ ಹೇಳಿಕೊಳ್ಳಬೇಕಷ್ಟೆ" ಎನ್ನುತ್ತಾರೆ ನಿರಾಶೆಯಿಂದ.

ಇಂದಿನ ಪೀಳಿಗೆಗೆ ಅನ್ನಪೂರ್ಣಮ್ಮನವರ ಜೀವನ ಆದರ್ಶವಾಗಬೇಕು. ಸೇವಾ ತತ್ಪರತೆಯಿಂದ ಜನರ ಒಲುಮೆ ಗಳಿಸಿ ಬೆಂಗಳೂರು ನಗರಸಭೆಗೆ ನಾಲ್ಕುಸಲ ಚುನಾಯಿತರಾದ ಇವರು ಜನ ಹಿತರಕ್ಷಣೆಯಲ್ಲಿಯೇ ಜೀವನ ಸವೆಸಿದ್ದಾರೆ. ದೇಶಕ್ಕೆ ಸ್ವಾತಂತ್ರ್ಯಗಳಿಸಿಕೊಟ್ಟ ನಂತರವೂ ನೆರೆಹೊರೆಯ ಪ್ರಾಂತ್ಯಗಳಲ್ಲಿ ಸಂಚಾರ ಮಾಡಿ ಅಲ್ಲಿಯ ಸ್ಥಳೀಯ ಸಂಸ್ಥೆಗಳು ಮಹಿಳೆಯರ, ಮಕ್ಕಳ ಮತ್ತು ಹರಿಜನರ ಪ್ರಗತಿ ಸಾಧನೆಗಾಗಿ ಶ್ರಮಿಸುತ್ತಿವೆಯೆ ಎಂಬುದರ ಬಗ್ಗೆ ಪರಿಶೀಲನೆ ನಡೆಸಿದ್ದಾರೆ. ಸಮಾಜ ಕಲ್ಯಾಣಕ್ಕಾಗಿ ಇವರ ಸೇವೆ ಬಹಳ ವಿಶಾಲವಾದುದು. ಕರ್ನಾಟಕದಲ್ಲಿ ಕಾಂಗ್ರೆಸ್ ಹುಟ್ಟಿದಾಗಿನಿಂದ ಅದರ ಸದಸ್ಯೆ ಮತ್ತು ಹಿತೈಷಿ. ಬೆಂಗಳೂರು ನಗರದಲ್ಲಿ ಕಾಂಗ್ರೆಸ್ಸಿಗೆ ಸೇರಿದ ಮಹಿಳೆಯರಲ್ಲಿ ಅನ್ನಪೂರ್ಣಮ್ಮನವರು ಪ್ರಥಮ ಮಹಿಳೆ. ಜೊತೆಗೆ ಪ್ರಜಾ ಪ್ರತಿನಿಧಿ ಸಭೆ, ಕಾಂಗ್ರೆಸ್ ಕಮಿಟಿ, ಅಖಿಲ ಮೈಸೂರು ನೂಲುವವರ ಸಂಘ, ಬೆಂಗಳೂರು ಗ್ರಾಮಾಭ್ಯುದಯ ಸಮಿತಿ, ಆಹಾರ ಇಲಾಖೆ ಕಮಿಟಿ, ಕಾಂಗ್ರೆಸ್ ಪಂಚಾಯಿತಿ ಸಮಿತಿ, ಬೆಂಗಳೂರು ವಿದ್ಯಾ ಇಲಾಖೆಯ ಸಮಿತಿ, ಪೋಷಕ–ಬೋಧಕ ಸಂಘ—ಮುಂತಾದ ಉಪಯುಕ್ತ ಸಂಘ ಸಂಸ್ಥೆಗಳಲ್ಲಿ ಭಾಗವಹಿಸಿ ಬಿಡುವಿಲ್ಲದೆ ಪ್ರತ್ಪೂರ್ವಕವಾಗಿ ದುಡಿದ ಹಿರಿಯ ಜೀವಿ ಇವರು.

೧೯೪೭ರ ಉಗ್ರ ಚಳವಳಿಯಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ಅನ್ನಪೂರ್ಣಮ್ಮನವರ ಪಾತ್ರ ಪ್ರಚಂಡವಾದುದು. ಈ ಚಳವಳಿಯಲ್ಲಿ ನೇತೃತ್ವ ವಹಿಸಬೇಕಾಗಿದ್ದ ಶ್ರೀ ಕೆ.ಸಿ. ರೆಡ್ಡಿಯವರು ಬಂಧನಕ್ಕೊಳಗಾದುದರಿಂದ, ಚಲೋ ಮೈಸೂರು ಚಳವಳಿಯಲ್ಲಿ ಅನ್ನಪೂರ್ಣಮ್ಮನವರೇ ಪ್ರಮುಖ ಪಾತ್ರವಹಿಸಿ ಸ್ವಾತಂತ್ರ್ಯ ಯೋಧರ ಮುಂದಾಳಾಗಿ ನಿಂತರು. ಚಳವಳಿ ಜಾಥಾ ಹೊರಡಿಸುವ ಮುಖಂಡರಿಗೆ ಕಠಿಣ ಶಿಕ್ಷೆಯಾಗುವುದೆಂದು ತಿಳಿದಿದ್ದರೂ, ಹೆಂಗಸರು ಈ ಜಾಥಾದಲ್ಲಿ ಹೋಗುವುದು ಬೇಡವೆಂದು ಕೆಲವರು ತಡೆದರೂ, ಅನ್ನಪೂರ್ಣಮ್ಮ ಬೆಂಗಳೂರು ಪರವಾಗಿ ನಾನು ಹೋಗುತ್ತೇನೆಂದು ಛಲ ಹಿಡಿದು ಹೊರಟರು. ಕಾಂಗ್ರೆಸ್ ಕಛೇರಿಯ ಮುಂದೆ ಧ್ವಜ ಹಾರಿಸಿ, ಶುಭ ಹಾರೈಕೆಯಿಂದ ಜಾಥಾ ಹೊರಡುವ ಸಿದ್ಧತೆ ಮಾಡಿಕೊಂಡರು.

ಧ್ವಜ ಹಾರಿಸುವುದಾಗಲೀ, ಧ್ವಜವಂದನೆಯಾಗಲೀ ಬ್ರಿಟಿಷರ ದೃಷ್ಟಿಯಲ್ಲಿ ಅಪರಾಧವಾದ್ದರಿಂದ ಅನ್ನಪೂರ್ಣಮ್ಮ ಧ್ವಜವನ್ನು ಸೆರಗಿನಲ್ಲಿ ಮುಚ್ಚಿಟ್ಟುಕೊಂಡು ಹೋಗಿಧ್ವಜವನ್ನು ಹಾರಿಸಿಯೇ ಜಾಥಾ ಪ್ರಾರಂಭಿಸಿದರು. ಇವರ ಸ್ಫೂರ್ತಿಯಿಂದ ಪ್ರಭಾವಗೊಂಡ ಜನರು ಸಾವಿರ ಸಾವಿರ ಸಂಖ್ಯೆಯಲ್ಲಿ ಸಹಕರಿಸಿ ಬೆಂಬಲಕೊಟ್ಟು ಹೊರಟರು. ಮಧ್ಯೆ ಅಲ್ಲಲ್ಲಿ ತಂಗಿ ಭಾಷಣಮಾಡಿ ಜನರನ್ನು ಕೂಡಿಸಿ ಜಾಥಾವನ್ನು ಬೃಹದಾಕಾರದಲ್ಲಿ ಮುಂದುವರಿಸಿದರು. ಜನರ ಗುಂಪು ಸೇರಿಸುವ ಮುಖಂಡರ ದಸ್ತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಗಿರಿಯಾಗುತ್ತಿತ್ತು. ಈ ಶಿಕ್ಷೆಗೆ ಹೆದರದೆ ಅನ್ನಪೂರ್ಣಮ್ಮ ಹಳ್ಳಿಯವರಂತೆ ವೇಷಮರೆಸಿಕೊಂಡು ಜನರಲ್ಲಿ ಉತ್ಸಾಹ ತುಂಬುವ ಕೆಲಸವನ್ನು ಗುಪ್ತವಾಗಿ ಮಾಡುತ್ತ ಬಂದರು. ಸರ್ಕಾರದ ಕಣ್ಣು ತಪ್ಪಿಸಲು ಸಾಧ್ಯವಾಗದೆ ಕೆಲವು ವೇಳೆ ಸಿಕ್ಕಿಹಾಕಿಕೊಂಡರು. ದಸ್ತಗಿರಿ ಮಾಡಿದುದಲ್ಲದೆ ಸರ್ಕಾರ ಇವರನ್ನು ಗಡೀಪಾರು ಶಿಕ್ಷೆ ವಿಧಿಸಿತು. ಆಗ ಅನ್ನಪೂರ್ಣಮ್ಮನವರು ತಮ್ಮ ತವರು ಮನೆಯಾದ ಆಂಧ್ರದಲ್ಲಿ ತಲೆಮರೆಸಿಕೊಂಡಿರಬೇಕಾಯಿತು.

ಬಾಂಬುಗಳನ್ನು ತಯಾರಿಸುವುದು, ಈಚಲ ಮರ ಕಡಿಯುವುದು, ಪರದೇಶೀ ವಸ್ತುಗಳ ಬಹಿಷ್ಕಾರ ಮುಂದುವರಿಯುತ್ತಲೇ ಇತ್ತು. ತಾವು ಇದ್ದಡೆಯಲ್ಲೆಲ್ಲ ಹೆಣ್ಣು ಮಕ್ಕಳನ್ನು ಚಳವಳಿಗೆ ಎಳೆಯುವುದು ಅನ್ನಪೂರ್ಣಮ್ಮನವರ ಕಾಯಕವಾಗಿತ್ತು.

"ದಸ್ತಗಿರಿಯಾದವರನ್ನು ಕೆಲವು ವೇಳೆ ಜೈಲಿನಲ್ಲಿ ಜಾಗವಿಲ್ಲದೆ ಎಲ್ಲೋ ಕಾಡಿನ ಮಧ್ಯೆ ಕರೆದುಕೊಂಡುಹೋಗಿಬಿಡುತ್ತಿದ್ದರು. ರಾತ್ರಿ ಹನ್ನೆರಡು ಗಂಟೆಯವರೆಗೋ ಅಥವಾ ಇಡೀ ದಿನ ಅಲ್ಲೇ ಇರಬೇಕಾದ ಶಿಕ್ಷೆ ಕೊಡುತ್ತಿದ್ದರು. ಆದ್ದರಿಂದಲೇ ಹೆಣ್ಣು ಮಕ್ಕಳು ಚಳವಳಿಯಲ್ಲಿ ಭಾಗವಹಿಸಲು ಹೆದರುತ್ತಿದ್ದರು" ಎನ್ನುತ್ತಾರೆ ಅನ್ನಪೂರ್ಣಮ್ಮ.

"ನನಗೆ ಖಾದಿ ಧರಿಸಿದ ಕೂಡಲೇ ಏನೋ ಒಂದು ವಿಧವಾದ ಧೈರ್ಯ ಬರುತ್ತಿತ್ತು. ಖಾದಿ ಹಾಕಿಕೊಂಡರೆ ಎಲ್ಲವನ್ನೂ ಎದುರಿಸಬಲ್ಲೆವೆಂಬ ನಂಬಿಕೆ. ಖಾದಿ ಬಟ್ಟೆಯನ್ನು ಕಂಡರೆ ಮೊದಲಿಂದಲೂ ನನಗೆ ಬಹಳ ವಿಶ್ವಾಸ...ನಾವು ಮಾಡಿದ ಆಂದಿನ ಎದೆಗುಂದದ ಧೈರ್ಯವನ್ನು ನೆನೆಸಿಕೊಂಡರೆ ಈಗ ಮೈ ಜುಂ ಎನ್ನುತ್ತದೆ. ಅದೇನು ಶಕ್ತಿ ಇತ್ತೋ, ಪರಮಾತ್ಮನ ಇಚ್ಛೆ ಇತ್ತೋ, ಇಟ್ಟ ಹೆಜ್ಜೆಯನ್ನು ಹಿಂದೆಗೆಯದೆ ಮುನ್ನುಗ್ಗಿದೆವು. ಸರ್ಕಾರದ ಶಿಕ್ಷೆ ಅನುಭವಿಸಿದಷ್ಟೂ ನಮ್ಮಲ್ಲಿ ಹೋರಾಟದ ಛಲ ಇನ್ನೂ ಹೆಚ್ಚುತ್ತಿತ್ತು. ಶಿಕ್ಷೆಗೆ ಹಿಂಜರಿಯಲಿಲ್ಲ, ಹೆಂಗಸಾದರೂ ಮನೆಯೊಳಗೆ ಕುಳಿತು ಕಾಲಹರಣ ಮಾಡಲಿಲ್ಲ ನಮ್ಮ ಪಾತ್ರ ಚಳವಳಿಯಲ್ಲಿ ಬೇಕೇ ಬೇಕೆಂಬ ನಿರ್ಧಾರ ನಮ್ಮಿಂದ ಕೆಲಸ ಮಾಡಿಸಿತು ಎನ್ನಿಸುತ್ತದೆ ಪೋಲೀಸ್ ವ್ಯಾನ್ ಬಂದಿತೆಂದರೆ ಮುಗಿಯಿತು. ಗುಂಪು ಕಟ್ಟಿದ ಜನರನ್ನು ಚಿಕ್ಕವರು ದೊಡ್ಡವರೆನ್ನದೆ ನಾಯಿ ನರಿಗಳ ಹಾಗೆ ಎಳೆದುಕೊಂಡು, ವ್ಯಾನಿನಲ್ಲಿ ತುಂಬಿಸಿಕೊಂಡು ಹೋಗುತ್ತಿದ್ದರು. ಎಷ್ಟೊಂದು ಮಕ್ಕಳು ಈ ಹೋರಾಟದಲ್ಲಿ ಪ್ರಾಣ ಕಳೆದುಕೊಂಡಿವೆ."

ಹೃದಯ ಮಿಡಿಯುವ ಈ ಮಾತುಗಳನ್ನು ಅನ್ನಪೂರ್ಣಮ್ಮನವರಿಂದ ನೇರಾಗಿ ಕೇಳಿದರೆ, ಅಂದಿನ ಜನತೆಯ ತ್ಯಾಗ, ಧೈರ್ಯ, ಸ್ಫೂರ್ತಿ, ಧ್ಯೇಯಸಾಧನೆ, ದೇಶಪ್ರೇಮ–ಪ್ರತಿ ಗಳಿಗೆ ಗಳಿಗೆಗೂ ಪ್ರತಿ ವ್ಯಕ್ತಿಯ ಕಣ ಕಣದಲ್ಲೂ ಹೇಗೆ ಉಕ್ಕುತ್ತಿತ್ತು ಎನ್ನುವುದು ಅರ್ಥವಾಗುತ್ತದೆ.

ಅನ್ನಪೂರ್ಣಮ್ಮ ಒಳ್ಳೆಯ ವಾಗ್ಮಿ. ತನ್ನ ವಾಕ್ಚಾತುರ್ಯವನ್ನು ಚಳವಳಿಯ ಸಮಯದಲ್ಲಿ ಜನರಲ್ಲಿ ಉತ್ಸಾಹ ತುಂಬಲು ಬಳಸಿಕೊಂಡು ತನ್ನ ಭಾಷಣಗಳಿಂದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಜನರನ್ನು ಆಕರ್ಷಿಸಿದ್ದಾರೆ. ಹಿಂದೂಪುರದ ಹತ್ತಿರ ಒಂದು ಸೇವಾಶ್ರಮ ಮಾಡಿ ಕೊಂಡು ಗ್ರಾಮಸೇವಕಿಯರನ್ನು ತಯಾರು ಮಾಡುತ್ತಿದ್ದುದು ಇವರ ಒಂದು ಸಾಧನೆ. ಹಳ್ಳಿಹಳ್ಳಿಗೆ ಹೋಗಿ ಜನರನ್ನು ಸೇರಿಸಿ ಚಳವಳಿಗೆ ಮಹಿಳೆಯರನ್ನೂ ಸ್ಫೂರ್ತಿಸಿದ ಅಂದಿನ ಕಾಲದ ಅಸಾಧಾರಣ ವೀರವನಿತೆ ಅನ್ನಪೂರ್ಣಮ್ಮನವರು.

"ಏನೇ ಆಗಲಿ ನಮ್ಮನ್ನು ಉತ್ತೇಜಿಸಿ ಮುಂದುವರಿಸಿದವರು ಮಹನೀಯರು ಗಳೇ. ನನ್ನ ಪತಿಯೊಂದಿಗೆ ಶ್ರೀ ಕೆ.ಸಿ. ರೆಡ್ಡಿಯವರನ್ನೂ ಕಬ್ಬನ್‌ಪೇಟೆಯ ರಾಮ ಸ್ವಾಮಿಯವರನ್ನೂ ನಾನು ಇಂದಿಗೂ ಸ್ಮರಿಸುತ್ತೇನೆ" ಎಂದು ಹೇಳುತ್ತಾ ತಮ್ಮ ಸ್ಫೂರ್ತಿಗೆ ಪುರುಷರ ಬೆಂಬಲವೂ ಸಹಾಯವಾಗಿತ್ತೆಂದು ಅನ್ನಪೂರ್ಣಮ್ಮ ನವರು ಮರೆಮಾಚದೆ ತಿಳಿಸುತ್ತಾರೆ.

೧೫–೮–೪೭ರಲ್ಲಿ ಭಾರತ ಸ್ವತಂತ್ರವಾಯಿತು. ಆದರೆ ಮೈಸೂರು ಸಂಸ್ಥಾನಕ್ಕೆ ಸ್ವರಾಜ್ಯ ಬರಲಿಲ್ಲ. ಇಡೀ ಭಾರತ ಸ್ವಾತಂತ್ರ್ಯ ದಿನವನ್ನು ಆಚರಿಸಿದಾಗ ಮೈಸೂರು ಸರ್ಕಾರ ರಾಷ್ಟ್ರೀಯ ಧ್ವಜವನ್ನು ಹಾರಿಸಲಿಲ್ಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

## ದೀನದಲಿತ ದುಃಖಿಗಳ ಆಪ್ತಬಂಧು

# ಕಮಲಾನಾಯ್ಡು

"ಅಪ್ಪಾಜಿ, ನನ್ನ ಕ್ಲಾಸ್‌ನಲ್ಲಿ ಯಾವುದಕ್ಕೂ ನನಗೆ ಲೀಡರ್‌ಷಿಪ್ ಕೊಡುವುದಿಲ್ಲ, ಕ್ಲಾಸ್ ಲೀಡರ್ ಒಬ್ಬ ಕ್ರಿಶ್ಚಿಯನ್ ಹುಡುಗ. ಅದೇನೋ ಮೀಟಿಂಗ್ಸ್ ಅಂತಾರೆ. ಕ್ರಿಶ್ಚಿಯನ್ ಹುಡುಗರೇ ಅದರಲ್ಲೂ ಸೇರಿದ್ದಾರೆ. ಒಬ್ಬರು ಇನ್‌ಸ್ಪೆಕ್ಟರ್ ಬರುತ್ತಾರೆ. ಅವರೂ ಕ್ರಿಶ್ಚಿಯನ್. ನನ್ನನ್ನು ಯಾವುದಕ್ಕೂ ಸೇರಗೊಡುವುದಿಲ್ಲ."

ಮಚಲಿಪಟ್ಟಣದ ಶಾಲೆಯೊಂದರ ವಿದ್ಯಾರ್ಥಿನಿ ಕಮಲಾ ತನ್ನ ತಂದೆಗೆ ಹೀಗೆ ದೂರು ಕೊಟ್ಟಳು.

ಕಮಲಳ ತಂದೆ ಪಂಡಿತ ಗಿರಿರಾವ್ ದೇಶೀಯ ಭಾಷಾಪ್ರಿಯರು. ಪರಕೀಯರ ಅನುಕರಣೆ ನಮಗೇಕೆಂದು ಬೋಧಿಸುತ್ತಿದ್ದವರು.

ಅತಿ ಚೂಟಿಯಾಗಿದ್ದ ಚುರುಕುಬುದ್ಧಿಯ ಮಗಳು ಕಮಲಳನ್ನು ಕಂಡರೆ ಹೆಚ್ಚು ಪ್ರೀತಿ. ಮಗಳನ್ನು ಹೀಗೆ ಸಮಾಧಾನಗೊಳಿಸಿದರು. "ನೀನು ಹೋಗುತ್ತಿರುವ ಶಾಲೆ ಯಾವುದು ಹೇಳು. ಕ್ರಿಶ್ಚಿಯನ್ನರ ಶಾಲೆ ಅಲ್ವೇನಮ್ಮ. ಬ್ರಿಟಿಷರ ದರ್ಬಾರು, ಕ್ರಿಶ್ಚಿಯನ್ನರಾದ ಬ್ರಿಟಿಷರ ಸ್ಕೂಲು. ಆ ಭಾಷೆ ಆ ಸ್ಕೂಲು ಬೇಡವೆಂದರೆ ನೀನು ಕೇಳುವುದಿಲ್ಲ."

ಕ್ರಿಶ್ಚಿಯನ್ನರಲ್ಲದ ವಿದ್ಯಾರ್ಥಿಗಳಿಗೆ ಕ್ರಿಶ್ಚಿಯನ್ ಮಿಷನರಿ ಸ್ಕೂಲ್‌ಗಳಲ್ಲಿ ಪ್ರೋತ್ಸಾಹ ಕಡಿಮೆ. ಇಂತಹ ಶಾಲೆಗಳಲ್ಲಿ ಶಿಕ್ಷಕರೂ ಕ್ರಿಶ್ಚಿಯನ್ನರು. ಅಧಿಕಾರಿಗಳೂ ಕ್ರಿಶ್ಚಿಯನ್ನರು. ಎಷ್ಟೇ ದೊಡ್ಡಸ್ತಿಕೆಯ ಮನೆಯಿಂದ ಬಂದಿದ್ದರೂ ತನ್ನನ್ನು ಲಕ್ಷ್ಯಮಾಡುತ್ತಿಲ್ಲವೆಂದು ಕಮಲಳ ಎಳೆಯ ಮನಸ್ಸಿನ ಮೇಲೆ ಪರಿಣಾಮವಾಗಿ ಬ್ರಿಟಿಷರ ಬಗ್ಗೆ ಶಾಲಾ ದಿನಗಳಲ್ಲಿಯೇ ಕ್ರೋಧ ತಾಳಿದಳು.

ಶಾಲೆಯ ವಾತಾವರಣ ಬ್ರಿಟಿಷರವಿರುದ್ಧ ವಾದಿಸಲು ಈ ಪುಟ್ಟಹುಡುಗಿಯನ್ನು ಪ್ರೇರೇಪಿಸಿತು. ತನ್ನ ಗೆಳತಿಯರೊಂದಿಗೆ ಮಾತಾಡುವಾಗಲೂ ಕ್ರಿಶ್ಚಿಯನ್ ಮಿಷನರಿಯವರ ಭೇದಭಾವ ನೀತಿಯ ಮಾತು. ಮನೆಯಲ್ಲೂ ಇದೇ ಮಾತು,

ಬ್ರಿಟಿಷರ ವಿರುದ್ಧ ಹಾಗೆ ಕದಡಿದ ಈ ಮನಸ್ಸನ್ನು ಮತ್ತಷ್ಟು ದೃಢಪಡಿಸಲು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಕಮಲಳ ತಂದೆ ಗಾಂಧಿಯಿಂದ ಬರುವ ವಿಚಾರವನ್ನು ಓದಲು ಉತ್ತೇಜಿಸುತ್ತಿದ್ದರು. ಕಮಲ ಗಾಂಧಿಯವರನ್ನು ನೇರಾಗಿ ಕಂಡಿಲ್ಲದಿದ್ದರೂ 'ನಮಗಾಗಿ ಶ್ರಮಿಸುವ ನಾಯಕರೊಬ್ಬರೆ' ಎಂಬ ಹೆಮ್ಮೆಯಿಂದ ಬೀಗುತ್ತಿದ್ದಳು.

ಗಾಂಧೀ ಭಕ್ತಿಭಾವನೆ ಅಂಕುರಿಸಿದ ದಿನದಿಂದ ಕಮಲಾಗೆ ತಾನೂ ದೇಶಕ್ಕಾಗಿ ನಮ್ಮ ಜನಕ್ಕಾಗಿ ಏನಾದರೂ ಸೇವೆ ಮಾಡಬೇಕೆಂಬ ಹಂಬಲ ಹೆಚ್ಚಿತು.

ಶಾಲಾದಿನಗಳಲ್ಲಿ ಬ್ರಿಟಿಷರ ದಬ್ಬಾಳಿಕೆಯ ವಿರುದ್ಧ ಮಾತಾಡುತ್ತಿದ್ದರೂ ಕಮಲಾ ನಾಯ್ಡು ಇಂಗ್ಲಿಷ್ ಭಾಷೆಯನ್ನೋದಿ ಬಿ.ಎ. ಪದವೀಧರೆಯಾದರು.

"ಅಂದಿನ ಕಾಲದಲ್ಲಿ ದೇಶೀಯ ಭಾಷಾ ಶಾಲೆಗಳಿಗೆ ಮನ್ನಣೆ ಇರಲಿಲ್ಲ. ನಾವು ಶಾಲೆಗೆ ಹೋಗಿ ಅರ್ಹತೆ ಪಡೆಯಬೇಕಾದರೆ ಇಂಗ್ಲಿಷ್ ಸ್ಕೂಲಿಗೇ ಸೇರಬೇಕಾಗಿತ್ತು." ಎನ್ನುತ್ತಾರೆ ಕಮಲಾರವರು.

ಆದರೆ ಮನೆಯ ವಾತಾವರಣ ಸಂಪೂರ್ಣವಾಗಿ ಭಾರತೀಯ ತಂದೆ ದೇಶೀಯ ಭಾಷಾ ಪಂಡಿತರು. ದೇಶೀಯ ವೈದ್ಯಕೀಯಪಂಡಿತರೂ ಆಗಿದ್ದರು. ಇವರ ಸನಿಹವನ್ನಪೇಕ್ಷಿಸಿ ಸ್ನೇಹ ಬಯಸಿ ಉತ್ತಮ ಪಂಡಿತರನೇಕರು ಇವರ ಮನೆಗೇ ಬರುತ್ತಿದ್ದರು.

ಚಳ್ಳಪಿಳ್ಳೈ ವೆಂಕಟಶಾಸ್ತ್ರಿಯವರು ಪಂಡಿತ ಗಿರಿರಾವ್‌ರವರ ಆಪ್ತ ಸ್ನೇಹಿತರಲ್ಲೊಬ್ಬರು. ಆಂಧ್ರ ವಿಶ್ವವಿದ್ಯಾನಿಲಯವು ಇವರಿಗೆ ಕಲಾಪ್ರಪೂರ್ಣರೆಂದು ಬಿರುದು ಕೊಟ್ಟು ಸನ್ಮಾನಿಸಿತ್ತು. ಆಂಧ್ರಪ್ರದೇಶದ ಪ್ರಮುಖ ಪಂಡಿತರೆನಿಸಿಕೊಂಡಿದ್ದ ಇವರು ಕಮಲಾರವರ ಮನೆಗೆ ಆಗಾಗ್ಗೆ ಬರುತ್ತಿದ್ದರು. ಕಮಲಾರವರ ಮನೆಯಲ್ಲಿ ಇಂತಹ ವಿದ್ವಜ್ಜನರ ಸಭೆಯೇ ನಡೆಯುತ್ತಿತ್ತು. ಇವರ ಮಧ್ಯೆ ಕುಳಿತು ಭಾರತ ಸಂಸ್ಕೃತಿಯ ವೈಭವವನ್ನೂ ಪ್ರಾಚೀನ ಪುರಾಣ ಇತಿಹಾಸಗಳ ವಿಚಾರ ವೈಖರಿಯನ್ನೂ ಕೇಳಿಸಿಕೊಳ್ಳುವುದು ಚಿಕ್ಕಹುಡುಗಿ ಕಮಲಳಿಗೆ ಬಹಳ ಆನಂದವಾಗಿರುತ್ತಿತ್ತು. ಇದೇ ನಿಜವಾದ ಜ್ಞಾನವೆಂದು ಅವಳ ಹೃದಯ ಹೇಳುತ್ತಿತ್ತು. ಮಾನವಸೇವೆ ಮಾಡಬೇಕೆಂಬ ಉದಾತ್ತತತ್ವ ಭಾರತ ದೇಶದ ಒಂದು ನೀತಿಯೆಂಬುದು ಅಚ್ಚಳಿಯದೆ ಹೃದಯದಲ್ಲಿ ಉಳಿಯಿತು.

"ನಮ್ಮ ತಂದೆಯವರು ಆಂಧ್ರ ನಾಡಿನಲ್ಲಿ ಪ್ರಸಿದ್ಧರು. ಅವರಿಂದ ಪ್ರಭಾವಿತರಾದವರು ಅನೇಕರು. ಹೀಗಿರುವಾಗ ನಮ್ಮ ತಂದೆಯವರ ಬೋಧನೆ ನನ್ನ ಮೇಲೆ ಪರಿಣಾಮಕಾರಿಯಾಗದಿರುವುದೇ ?" ಎನ್ನುತ್ತಾರೆ ಕಮಲಾ ನಾಯ್ಡು.

ಇಂದಿಗೂ ಮಚಲಿಪಟ್ಟಣದ ಒಂದು ರಸ್ತೆಗೆ ಕಮಲಾ ನಾಯ್ಡು ತಂದೆಯವರ ನೆನಪಿನಲ್ಲಿ ಪಂಡಿತ ಗಿರಿರಾವ್ ರಸ್ತೆ ಎಂದು ಹೆಸರಿಟ್ಟಿದ್ದಾರೆ. ಇವರ ಸ್ವತ್ತಾಗಿ ಉಳಿದಿರುವ ಅಲ್ಲಿಯ ಮನೆಗೆ "ಗಿರಿಬನ"ವೆಂದೇ ಹೆಸರು,

ಕಮಲಾರವರ ತಾಯಿ ಸರಳ. ಆದರೆ ಭಾವೋದ್ರೇಕ ಸ್ವಭಾವದವರು. ಕಡಾ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಯವಾಗಿ ಚರಕಾದಲ್ಲಿ ನೂಲು ತೆಗೆಯುವುದನ್ನೂ, ದೇಶಭಕ್ತಿ ಗೀತೆಗಳನ್ನು ಹಾಡುವುದನ್ನೂ ಎಲ್ಲರಿಗೂ ಹೇಳಿಕೊಡುತ್ತಿದ್ದರು.

"ಕಾಟೂರಿ ವೆಂಕಟೇಶ್ವರರಾವ್ ಬಳಿ ನಮ್ಮ ತಾಯಿ ಚರ್ಚೆ ಮಾಡುತ್ತಿದ್ದರು. ಚರಕಾದಲ್ಲಿ ನೂಲು ತೆಗೆಯುವುದನ್ನು ಪ್ರತಿಯೊಬ್ಬರೂ ಅನುಸರಿಸಬೇಕು. ನಾನು ತೆಗೆದ ದಾರದಿಂದ ಮಾಡಿದ ಬಟ್ಟೆಯನ್ನೇ ನಾನು ಹಾಕಿಕೊಳ್ಳುತ್ತೇನೆ. ಹಾಗೆಯೇ ಎಲ್ಲರೂ ತಮ್ಮ ತಮ್ಮ ಬಟ್ಟೆಗಳನ್ನು ಸಿದ್ಧಪಡಿಸಿಕೊಂಡು ಸ್ವಾಭಿಮಾನಿಗಳಾಗಿರಬೇಕು ಎನ್ನುತ್ತಿದ್ದರು ನಮ್ಮ ತಾಯಿ. ತಕಲಿ, ಚರಕಾ ಇವೆರಡರ ಉಪಯೋಗವೂ ಅವರಿಗೆ ತಿಳಿದಿತ್ತು. ಈ ವಿಷಯವನ್ನು ಹೆಮ್ಮೆಯಿಂದ ಹೇಳಿಕೊಳುತ್ತಿದ್ದರು." ಎಂದು ಹೇಳಿ ಕಮಲಾ ನಾಯ್ಡು ತಮ್ಮ ತಾಯಿಯವರು ದೇಶಭಕ್ತಿ ಗೀತೆಗಳನ್ನು ರಚಿಸಿ ಹಾಡಿ ಮಕ್ಕಳಿಗೂ ಹೇಳಿಕೊಡುತ್ತಿದ್ದುದನ್ನು ಜ್ಞಾಪಿಸಿಕೊಳ್ಳುತ್ತಾರೆ.

"ಇದನ್ನೆಲ್ಲಾ ನಾವು ಮನೆಯಲ್ಲಿ ಹಾಡುತ್ತಿದ್ದೆವು. ಹಾಡು ಕಲಿಯುವುದೊಂದು ಫ್ಯಾಶನ್ ಆಗಿತ್ತು ಆಗ. ಸಿನಿಮಾ ಹಾಡುಗಳನ್ನು ಹೇಳಿದರೆ ಹಾಸ್ಯಮಾಡುತ್ತಿದ್ದರು ದೇಶಭಕ್ತಿ ಗೀತೆಗಳನ್ನು. ದೇವರ ನಾಮಗಳನ್ನೂ ಜನರು ಬಹಳ ಮೆಚ್ಚಿಕೊಳ್ಳುತ್ತಿದ್ದರು."

"ನನಗೆ ತಿಳಿದ ಮಟ್ಟಿಗೆ ಭಾರತೀಯರು ಎನಿಸಿಕೊಂಡವರೆಲ್ಲಾ ಒಂದಲ್ಲ ಒಂದು ವಿಧದಲ್ಲಿ ಸ್ವಾತಂತ್ರ್ಯಗಳಿಸಲು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಕೆಲಸ ಮಾಡಿದ್ದಾರೆ. ಸಭೆಗಳನ್ನು ಸೇರಿಸುವುದು, ಮುಖಂಡರ ಭಾಷಣ ಏರ್ಪಡಿಸುವುದು, ಖಾದಿ ಬಟ್ಟೆ ಧರಿಸುವುದು, ಗಾಂಧಿ ಹೇಳಿದ್ದನ್ನು ತಮ್ಮ ಕೈಲಾದಷ್ಟು ಪರಿಪಾಲಿಸುವುದು. ಇಡೀ ದೇಶದಲ್ಲಿ ಇದೇ ವಾತಾವರಣವಿತ್ತು"—ಎನ್ನುತ್ತಾರೆ ಕಮಲಾ ನಾಯ್ಡು.

ಕಾಲೇಜು ವಿದ್ಯಾಭ್ಯಾಸದ ಸಮಯದಲ್ಲಿ ಕಮಲಾರವರ ಗೆಳೆಯರನೇಕರು ಖಾದಿ ವಸ್ತ್ರವನ್ನು ಧರಿಸಿ ಬರುತ್ತಿದ್ದರು. ಖಾದಿ ಟೋಪಿ ಹಾಕಿ ಬರುತ್ತಿದ್ದರು. ಇದನ್ನು ಕಂಡು ಕಮಲಾಗೆ ಅತ್ಯಂತ ಸಮಾಧಾನವಾಗುತ್ತಿತ್ತು. ಗಾಂಧಿಯನ್ನು ಅನುಕರಿಸುತ್ತೇವೆಂಬುದಕ್ಕೆ ಅವರ ಹಿತ ನುಡಿಯಂತೆ ಖಾದಿ ಧರಿಸುವುದೂ ಅತ್ಯವಶ್ಯಕವೆಂದು ಕಮಲಾ ನಂಬಿದರು.

"ಕಾಲೇಜಿನಲ್ಲಿ ದೇಶಭಕ್ತಿಯ ಸಂಬಂಧವಾಗಿ ನಾವೇ ಒಂದು ಕಾರ್ಯಕ್ರಮವನ್ನಿಟ್ಟುಕೊಂಡಿದ್ದೆವು. ಚಳವಳಿಯಲ್ಲಿ ಯಾರು ಭಾಗವಹಿಸುವರೋ ಅವರನ್ನು ಕಾಲೇಜಿನ ಹೀರೋ ಅಥವಾ ಹೀರೋಯಿನ್ ಎಂದು ಕರೆದು ಸಮಾರಂಭದಲ್ಲಿ ಗೌರವಿಸುತ್ತಿದ್ದೆವು" ಎನ್ನುತ್ತಾರೆ.

"ಇಷ್ಟಾದರೂ ನಾವು ಹೆಣ್ಣುಮಕ್ಕಳೇ. ಮನೆಬಿಟ್ಟು ಹೊರಗೆ ಹೋಗಿ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೊಡೆದಾಡುವ ಸ್ವಾತಂತ್ರ್ಯವನ್ನು ನಮ್ಮ ಸಮಾಜ ನಮಗೆ ಕೊಟ್ಟಿರಲಿಲ್ಲ. ಸ್ವಲ್ಪ ದೊಡ್ಡಸ್ತಿಕೆಯ ಮನೆಯ ಹೆಣ್ಣುಮಕ್ಕಳೆಂದರೆ ಕಾಲೇಜಿಗೆ ಹೋಗುವಾಗ ಘೋಷಾಗಾಡಿಯಲ್ಲಿ ಕುಳಿತು ಹೋಗಬೇಕಾಗಿತ್ತು. ಇಲ್ಲ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ದಿದ್ದರೆ ನಮ್ಮವರೇ ನಮ್ಮನ್ನು ಅಡಿಕೊಂಡು ಅವಮರ್ಯಾದೆ ಮಾಡುತ್ತಿದ್ದರು"— ಎನ್ನುತ್ತಾರೆ ಕಮಲಾ.

ಚಲ್ಲಪಲ್ಲಿ, ಪಿಠಾಪುರ ಮುಂತಾದ ಪ್ರಸಿದ್ಧ ಜಮೀನುದಾರ ವಂಶಕ್ಕೆ ಸೇರಿದವರು ಕಮಲಾ. ಜಮೀನ್ದಾರರನ್ನು ರಾಜರೆಂದೇ ಕರೆಯುವ ವಾಡಿಕೆಯಿತ್ತು. ರೆಡ್ಡಿ, ನಾಯ್ಡು, ಮುಂತಾದ ತಮ್ಮ ವಂಶಸ್ಥರು ಆಗರ್ಭ ಶ್ರೀಮಂತರೆನಿಸಿಕೊಂಡಿದ್ದರು. ಶ್ರೀಮಂತಿಕೆಯ ಅಂತಸ್ತಿಗೆ ತಕ್ಕಂತೆ ಮನೆಯ ಹೆಂಗಸರು ನಡೆದುಕೊಳ್ಳಬೇಕಾಗಿತ್ತು. ಸರ್ವ ಸಾಮಾನ್ಯರಂತೆ ಹೆಣ್ಣುಮಕ್ಕಳು ಹೊರಗೆ ಹೋಗುವಂತಿಲ್ಲ. ಪಟ್ಟು ಪೀತಾಂಬರ, ಒಡವೆ, ರೇಷ್ಮೆವಸ್ತ್ರ ಧರಿಸುವುದು ಪದ್ಧತಿಯಾಗಿತ್ತು. ಕಮಲಾರವರ ತಂದೆ ಗಿರಿರಾವ್‌ರವರನ್ನು ಅರಮನೆಗೆ ಕರೆಯಿಸಿಕೊಂಡು ಅವರ ಸಾಹಿತ್ಯ ಪಾಂಡಿತ್ಯಕ್ಕಾಗಿ ಆಗಾಗ್ಗೆ ಸನ್ಮಾನಿಸುತ್ತಿದ್ದರು. ಕವಿಗಳಿಗೂ, ಪಂಡಿತರಿಗೂ ದೇಶೀಯ ರಾಜವಂಶದ ಪರವಾಗಿ ಅತ್ಯಂತ ಮೆಚ್ಚಿಗೆ ಇರುತ್ತಿತ್ತು. ರಾಜವಂಶದವರನ್ನು ಹೊಗಳಿ ಹಾಡುವುದು ಅಂದಿನ ಕ್ರಮವಾಗಿತ್ತು. ಈ ಅಭಿಮಾನವಿದ್ದ ಕಮಲಾರವರ ತಂದೆ ವಿದೇಶೀಯರನ್ನು ವಿರೋಧಿಸುತ್ತಿದ್ದುದರಲ್ಲಿ ಅತಿಶಯವಿಲ್ಲ. ಕ್ರಿಶ್ಚಿಯನ್ನರು ಬಂದು ಹಿಂದೂ ಸಂಸ್ಕೃತಿಯನ್ನು ಕೆಡಿಸುತ್ತಾರೆಂಬ ಭಾವನೆಯೂ ಜನರಲ್ಲಿತ್ತು.

ರಾಜಪಂಡಿತರ ದೊಡ್ಡಸ್ತಿಕೆಯ ಸಂಪ್ರದಾಯ ಚಿಕ್ಕ ವಯಸ್ಸಿನಿಂದ ಕಮಲಾಗೆ ಕಸಿವಿಸಿಯನ್ನುಂಟುಮಾಡುತ್ತಿತ್ತು. ದೊಡ್ಡ ಅಂತಸ್ತಿನ ಉಪ್ಪರಿಗೆಯ ಮನೆ. ವಿಶಾಲವಾದ ತೋಟ. ಮನೆಯಲ್ಲೂ ತೋಟದಲ್ಲೂ ಕೆಲಸಮಾಡುವ ಕೂಲಿಯವರೊಂದಿಗೆ ಸ್ನೇಹ ಬೆಳೆಸಿ ಮಾತಾಡುವುದು ಕಮಲಾಗೆ ಅತ್ಯಂತ ಪ್ರಿಯ. ಕೆಲಸದವಳ ಮಗಳು ತನ್ನ ಓರಿಗೆಯವಳಿದ್ದರೆ ಅವಳಿಗೆ ಅಕ್ಷರ ಕಲಿಸಿ, ಅವಳ ಮನೆಯ ಕಷ್ಟವನ್ನು ವಿಚಾರಿಸುತ್ತಿದ್ದಳು ಚಿಕ್ಕಹುಡುಗಿ ಕಮಲಾ. ತನ್ನೆಲ್ಲಾ ಗೆಳತಿಯರಿಗಿಂತ ಗೊಲ್ಲರ ಹುಡುಗಿಯನ್ನು ಕಂಡರೆ ಕಮಲಾಗೆ ಹೆಚ್ಚು ಪ್ರೀತಿ. ಮಹಡಿ ಹತ್ತಿ ಗವಾಕ್ಷದ ಬಳಿ ನಿಂತು ನೋಡಿದರೆ ಅಷ್ಟು ದೂರದಲ್ಲಿ ಕೂಲಿಯವರ ಮನೆಗಳು ಕಾಣುತ್ತಿದ್ದವು. ಅವರ ಮನೆಗಳಲ್ಲಿ ಏಕೆ ಜಗಳವಾಡುತ್ತಿದ್ದಾರೆಂದು ಕಿವಿಗೊಟ್ಟು ಕೇಳಿಸಿಕೊಂಡು ಅದಕ್ಕೆ ಪರಿಹಾರ ಹುಡುಕಬೇಕೆಂಬುದು ಕಮಲಳ ಇಚ್ಛೆಯಾಗಿತ್ತು. ಆದರೆ ಕೂಲಿಯವರೊಡನೆ ಬೆರೆಯಲು ಮನೆಯವರು ಅಡ್ಡಿಯಾಗುತ್ತಿದ್ದರು.

"ಅಂದು ಅದುಮಿಟ್ಟ ನನ್ನ ಮನಸ್ಸು ಭುಗಿಲೆದ್ದಂತಾಗಿ ಈಗ ಅವಕಾಶ ಸಿಕ್ಕಿರುವಾಗ ಇಡೀ ನನ್ನ ಜೀವನವನ್ನೇ ಇಂತಹ ಜನರ ಏಳಿಗೆಗಾಗಿ ಮೀಸಲಿಟ್ಟಿದ್ದೇನೆ, ಈ ನನ್ನ ಸೇವೆ ನನಗೆ ತೃಪ್ತಿಕೊಟ್ಟಿದೆ."—ಎನ್ನುತ್ತಾರೆ ಕಮಲಾನಾಯ್ಡು.

ಪ್ರಿಯ ಪುತ್ರಿ ಕಮಲಳನ್ನು ಗಿರಿರಾವ್‌ರವರು ಚಳವಳಿ ಸಮಯದಲ್ಲಿ ಭಾಷಣಗಳಾಗುವ ಸಭೆಗೆ ಕಳುಹಿಸುತ್ತಿದ್ದರು. ಕಾಟೂರು ವೆಂಕಟೇಶ್ವರರಾವು ಅಂದಿನ ಆಂಧ್ರ ಪ್ರದೇಶದ ಚಳವಳಿಯ ನಾಯಕರಲ್ಲೊಬ್ಬರು.

"ಈತ ಸದಾ ನಮ್ಮ ಮನೆಗೆ ಬರುತ್ತಿದ್ದರು. ನಮ್ಮ ತಂದೆಯನ್ನು ಕಂಡರೆ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಇವರಿಗೆ ಬಹಳ ವಿಶ್ವಾಸವಿತ್ತು. ಬಿ.ಎ. ಓದುತ್ತಿದ್ದ ಈ ಯುವಕ ಕಾಂಗ್ರೆಸ್ ಭಕ್ತನಾಗಿ ಕಾಲೇಜು ಬಿಟ್ಟು ಚಳವಳಿಗೆ ಸೇರಿಕೊಂಡು ಬಿಟ್ಟರು. ನಮ್ಮೂರಿನಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ಯಾವ ಚಳವಳಿಯೇ ನಡೆಯಲಿ ಅದರಲ್ಲಿ ಕಾಟೂರು ವೆಂಕಟೇಶ್ವರ ರಾವ್ ಇದ್ದೇ ಇರುತ್ತಿದ್ದರು. ಗಲಭೆ ಎಬ್ಬಿಸಿ ಏಟು ತಿಂದು ಬರುವವ ಎಂದೇ ಈತನನ್ನು ಎಲ್ಲರೂ ಕರೆಯುತ್ತಿದ್ದುದು. ದೇಶದಲ್ಲಿ ಏನೇನು ನಡೆಯುತ್ತದೆಯೆಂದು ಈತನಿಂದ ನಾನು ತಿಳಿದುಕೊಳ್ಳುತ್ತಿದ್ದೆ. ನನ್ನ ಆಸಕ್ತಿಯನ್ನು ಗಮನಿಸಿದ ಈ ಕಾಂಗ್ರೆಸ್ ಯುವಕ ಊರಿಗೆ ಯಾವ ಕಾಂಗ್ರೆಸ್ ಮುಖಂಡರು ಬಂದರೂ ನನಗೆ ತಿಳಿಸುತ್ತಿದ್ದರು. ಮುಖಂಡರನ್ನು ನೋಡುವ ಆಸೆ ನನಗೆ. ತಂದೆಯ ಒಪ್ಪಿಗೆ ಪಡೆದು ಕಾಂಗ್ರೆಸ್ ಮುಖಂಡರ ಭಾಷಣ ಕೇಳಲು ಹೋಗುತ್ತಿದ್ದೆ." ಎಂದು ಹೇಳುತ್ತಾ ಕಮಲಾನಾಯ್ಡು ಏನನ್ನೋ ಜ್ಞಾಪಿಸಿಕೊಂಡವರಂತೆ ಹೀಗೆನ್ನುತ್ತಾರೆ "ಈ ಮುಖಂಡರಲ್ಲಿ ಅದೆಂತಹ ಅಪೂರ್ವ ಶಕ್ತಿ ಇತ್ತೊ ದೇವರೇ ಬಲ್ಲ. ಅವರಾಡಿದ ಮಾತನ್ನು ಕೇಳಿಸಿಕೊಂಡರೆ ನಮ್ಮ ಕಟ್ಟುನಿಟ್ಟು ವಾತಾವರಣವನ್ನು ಕಿತ್ತೆಸೆದು ಅವರೊಡನೆ ಚಳವಳಿಗೆ ಸೇರಬೇಕೆಂಬ ಹಟ ಹುಟ್ಟುತ್ತಿತ್ತು. ನಾವು ದೇಶಕ್ಕಾಗಿ ತ್ಯಾಗವಮಾಡಲೇ ಬೇಕೆಂಬ ಪ್ರತಿಜ್ಞೆ ತೆಗೆದುಕೊಳ್ಳುವಂತಾಗುತ್ತಿತ್ತು."

ಹೀಗೆ ಕಮಲಾನಾಯ್ಡು ಕೇಳಿಸಿಕೊಂಡ ಭಾಷಣಕಾರರು ಸರೋಜಿನಿ ನಾಯ್ಡು, ಟಂಗುಟೂರಿ ಪ್ರಕಾಶಂ ಇಂತಹ ಪ್ರಭಾವಪೂರ್ಣ ವ್ಯಕ್ತಿಗಳು. "ಸರೋಜಿನಿ ನಾಯ್ಡುರವರ ಮಾತು ನನ್ನಲ್ಲಿ ಆಳವಾಗಿ ಬೇರುಬಿಟ್ಟಂತಾಗಿದೆ—ಮುಖಂಡರ ಭಾಷಣಗಳು ಮನಸ್ಸಿನಲ್ಲಿ ಕಿಚ್ಚೆಬ್ಬಿಸಿ ನನ್ನನ್ನು ಕಾರ್ಯರೂಪಕ್ಕೆ ತರುವಂತೆ ಮಾಡಿತ್ತು. ಸರೋಜಿನಿ ನಾಯ್ಡುವಂತೆ ನಾನೂ ದೇಶದ ನಾಯಕಳಾಗಬೇಕೆಂಬ ಆಸೆ ಮೂಡಿತ್ತು." ಎನ್ನುತ್ತಾರೆ ಕಮಲಾ ನಾಯ್ಡು.

ಮುಖಂಡರು ಸ್ವಾತಂತ್ರ್ಯ ಚಳವಳಿಗೆ ವಾತಾವರಣವನ್ನು ಹೇಗೆ ಸಿದ್ಧಪಡಿಸುತ್ತಿದ್ದರೆಂಬುದು ಕಮಲಾನಾಯ್ಡುರವರ ಈ ಹೇಳಿಕೆಯಿಂದ ಸ್ಪಷ್ಟವಾಗುತ್ತದೆ. ಮನೆಯೊಳಗೆ ಅಡಗಿ ಕುಳಿತಿರುವವರನ್ನೂ ಎಚ್ಚರಿಸಿ ಎಬ್ಬಿಸುತ್ತಿತ್ತು. ಅನೇಕ ಭಾರತ ವೀರ ಮಹಿಳೆಯರ ಆದರ್ಶ ಪ್ರೇರಣಾಶಕ್ತಿಯಾಗಿತ್ತು. ಭಾರತೀಯರೆಲ್ಲಾ ಒಂದಾಗಬೇಕೆಂಬ ಭಾವನೆ ಪ್ರತಿಯೊಬ್ಬರ ಮನದಾಳ ಹೋಗುವಂತೆ ಮಾಡಿತ್ತು. ಚಳವಳಿಯಲ್ಲಿ ಕಾರ್ಯೋನ್ಮುಖರಾದ ಭಾರತೀಯರು ಎಂತಹ ತ್ಯಾಗ ಮಾಡುತ್ತಿದ್ದಾರೆಂಬ ನಿದರ್ಶನಗಳನ್ನು ಈ ಮುಖಂಡರ ಮೂಲಕ ಕೇಳಿ ತಿಳಿದು ತಾವೂ ಸೇವೆಗೆ ಸಿದ್ಧರಾಗಬೇಕೆಂಬ ಪರಿವರ್ತನೆಯಾಗಿತ್ತು. ದೇಶದ ಸ್ವಾತಂತ್ರ್ಯಕ್ಕಾಗಿ ನಾವೂ ಏನಾದರೂ ಮಾಡಬೇಕೆಂದು ಮನಸ್ಸು ಮಾಡಿದ ಭಾರತೀಯರೆಲ್ಲರೂ ಅವರವರಿದ್ದ ಸ್ಥಳದಲ್ಲಿ ತಮ್ಮ ಕೈಲಾದ ಕೆಲಸವನ್ನು ಹೇಗೆ ಮಾಡುತ್ತಿದ್ದರೆಂಬುದನ್ನು ಕಮಲಾರವರು ಹೀಗೆ ವರ್ಣಿಸುತ್ತಾರೆ. "ಇದು ಅಳಿಲು ಸೇವೆಯಂತೆ ನಡೆದಿತ್ತು. ಯಾರ ತೋರಿಕೆಗಾಗಿಯೂ ಮಾಡಿದ್ದಲ್ಲ. ದೇಶಸೇವೆ ಎಲ್ಲರಲ್ಲೂ ತಾನೇ ತಾನಾಗಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಮೂಡಿ ಬಂದಿತ್ತು. ನಾನೇ ಕಂಡಂತೆ, ಅಂಗಡಿಗೆ ಹೋದರೆ ಓವಲ್ಟಿನ್ ಸಿಗುತ್ತಿರಲಿಲ್ಲ. ಪಾಶ್ಚಾತ್ಯ ದೇಶದಿಂದ ಬಂದ ಸರಕನ್ನು ಕಂಡರೆ ಭಾರತೀಯರು ಬಿಸಾಡಿ ಹೊರಗೆ ಚೆಲ್ಲುತ್ತಿದ್ದರು. ಷಾಪ್‌ನಲ್ಲಿ ಔಷಧಿಗಳು ಸಿಗುತ್ತಿರಲಿಲ್ಲ. ಮಲೇರಿಯಾ ಜ್ವರವಿದ್ದರೂ ವಿದೇಶೀ ಮಾತ್ರೆಗಳನ್ನು ತೆಗೆದುಕೊಳ್ಳಲು ಜನರು ಒಪ್ಪರು...ಹಳ್ಳಿಗಳಿಗೆ ಹೋದರೆ ಎಲ್ಲೆಲ್ಲೂ ಚರಕಾದಿಂದ ನೂಲು ತೆಗೆಯುವ ದೃಶ್ಯ. ಹತ್ತಿಯಿಂದ ತೆಗೆದ ದಾರದಿಂದಾದ ಬಟ್ಟೆಯನ್ನೇ ಉಡಲು ಜನರು ನಿರ್ಧರಿಸಿದಂತಿತ್ತು."

ಒಂದು ಕಡೆ ಭಾರತೀಯರು ಪಾಶ್ಚಾತ್ಯರನ್ನು ತಡೆಯಲು ಈರೀತಿ ಸಹಾಯ ಮಾಡುತ್ತಿದ್ದರೆ ಮತ್ತೊಂದು ಕಡೆ ತಮ್ಮ ಮೇಲೆ ಹೇರುತ್ತಿದ್ದ ವಿದೇಶೀ ಸಂಸ್ಕೃತಿಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಮನೆಮನೆಗೆ ಕ್ರಿಶ್ಚಿಯನ್ನರು ಬಂದು ಏಸುವಿನ ಮೇಲೆ ಪದ್ಯ ಹೇಳಿದವರಿಗೆ ಬಹುಮಾನ ಕೊಡುತ್ತಿದ್ದರು. ಕ್ರಿಶ್ಚಿಯನ್ ಮಿಷಿನರಿಯವರು ಹಾಡುಗಳನ್ನು ಕಲಿಸಲು ಬರುತ್ತಿದ್ದರು. 'ನಿಮಗಾಗಿ ನಾವು ಶಾಲೆ ತೆರೆದಿದ್ದೇವೆ ಬನ್ನಿ' ಎಂದು ಒತ್ತಾಯಪಡಿಸುತ್ತಿದ್ದರು. ಹಿಂದುಗಳು ತಮ್ಮ ಧರ್ಮವನ್ನು ಬಿಟ್ಟು ಹೋಗಲು ಇಷ್ಟಪಡುತ್ತಿರಲಿಲ್ಲ,

ಈ ಪರಿಸ್ಥಿತಿಯ ಆಳವನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದ ಕಮಲಾ ಸಂಪೂರ್ಣವಾಗಿ ತನ್ನ ಭಾವನೆಯನ್ನು ದೇಶಭಕ್ತಿಯೊಡನೆ ಹೊಸೆತುಕೊಂಡರು. ಆದರೆ ಚಳವಳಿಯ ಮುಖಂಡತ್ವಕ್ಕೆ ತಂದೆ ಬಿಡುತ್ತಿರಲಿಲ್ಲ.

"ನೀನು ಮದುವೆಯಾಗುವಷ್ಟುಹುಡುಗಿ, ಹೀಗೆ ಹೋದರೆ ಹೇಗಮ್ಮ" ಎಂದು ಗಂಭೀರವಾಗಿಯೇ ಹೇಳಿ ತಪ್ಪಿಸುತ್ತಿದ್ದರು. "ಮದುವೆಯಾದ ಮೇಲೆ ನಿನ್ನಿಷ್ಟದಂತೆಯೇ ಇರು" ಎಂಬ ಭರವಸೆಯನ್ನೂ ಕೊಡುತ್ತಿದ್ದರು.

"ಹಾಗಾದರೆ ನನಗೆ ಬೇಗ ಮದುವೆ ಮಾಡಿಬಿಡು" ಎಂದು ತಂದೆಯನ್ನು ಕಮಲಾ ಪೀಡಿಸಿದುದುಂಟು.

ಕಮಲಾರವರ ಇಚ್ಛೆಯಂತೆಯೇ ಲೋಕೋಪಯೋಗಿ ಇಲಾಖೆಯ ಶ್ರೀ ಎಸ್. ಕೃಷ್ಣಮೂರ್ತಿನಾಯ್ಡು ಪತಿಯಾಗಿ ಬಂದು ಲೋಕೋಪಕಾರಕ್ಕಾಗಿ ಪತ್ನಿ ಕೆಲಸ ಮಾಡಲು ಅನುಮತಿಕೊಟ್ಟರು.

ಇವರು ಮದುವೆಯಾದ ಸಂದರ್ಭ ಸ್ವಾರಸ್ಯವಾಗಿತ್ತು.

೧೯೪೨ರ ಬಿರುಸಾದ ಚಳವಳಿಯಲ್ಲಿ ಭಾರತ ಅಸಹಕಾರ ಚಳವಳಿ ಪ್ರಾರಂಭವಾಗಿ ಭಾರತಾದ್ಯಂತ ಹರಡಿ ಸರ್ಕಾರಕ್ಕೆ ತೊಂದರೆ ಮೂಡಿತ್ತು. ರೈಲುಕಂಬಿಗಳು ತುಂಡಾಗಿದ್ದುವು. ಟೆಲಿಗ್ರಾಂ ತಂತಿಗಳು ಕಡಿದು ಹೋಗಿದ್ದುವು. ಪತ್ರವ್ಯವಹಾರ ಸ್ಥಗಿತಗೊಂಡಿತ್ತು.

ಈ ದಿನಗಳಲ್ಲಿ ಒಂದು ದಿನ, ಒಬ್ಬ ಯುವಕ ಬ್ರೀಫ್ ಕೇಸ್ ಒಂದನ್ನು ಹಿಡಿದು ಕಮಲಾರ ಮನೆಗೆ ಬಂದು ಬಾಗಿಲು ತಟ್ಟಿದನು. ಬಾಗಿಲನ್ನು ತೆಗೆದವರು ಕಮಲಾರವರೇ. ತಂದೆಯ ಸ್ನೇಹಿತರ ಮಗನಿರಬಹುದೆಂದುಕೊಂಡರು. ಆದರೆ ಫುಲ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಸೂಟಿನಲ್ಲಿ ಬಂದಿದ್ದಾರೆ! ಮಚಲಿಪಟ್ಟಣದಲ್ಲಿ ಯಾರೂ ಟೈ ಕಟ್ಟುವುದಿಲ್ಲವಲ್ಲಾ ಎಂದು ಭ್ರಮಿಸಿ, "ನೀವು ಯಾರು ?" ಎಂದು ನಿಸ್ಸಂಕೋಚವಾಗಿ ಆ ಯುವಕನನ್ನು ಕೇಳಿದರು. "ಟೆಲಿಗ್ರಾಂ ಕೊಟ್ಟಿದ್ದರಲ್ಲಾ ಅವರು ಬಂದಿದ್ದಾರೆ ಎಂದು ನಿಮ್ಮ ತಂದೆಗೆ ತಿಳಿಸಿ" ಎಂಬ ಉತ್ತರ ಬಂತು.

'ಟೆಲಿಗ್ರಾಂ ಯಾವುದೂ ಬಂದಿರಲಿಲ್ಲ. ಇವರು ಬರುತ್ತಾರೆಂದು ಪತ್ರಗಳೂ ಬಂದಿರಲಿಲ್ಲ. ಬಂದವರು, ಯಾರೆಂದು' ತಿಳಿಯದೆ ಹೋಗಿ ಕರೆದರು ಕಮಲಾ.

ರೈಲು ನಿಂತುಹೋಗಿ ಸುಮಾರು ದೂರ ರೈಲು ಕಂಬಿಗಳ ಮೇಲೆಯೇ ನಡೆದು ಬಂದು ಸುಸ್ತಾಗಿದ್ದರೂ ಟಿಪ್‌ಟಾಪ್ ಆಗಿ ಕಾಣುತ್ತಿದ್ದ ಯುವಕನನ್ನು ಕಮಲಾರವರ ತಂದೆ ಒಳಗೆ ಕರೆದು ಉಪಚರಿಸಿದರು.

ಇವರೇ ಮದುಮಗನೆಂದು ಕೇಳಿದಮೇಲೆ ಕಮಲಾ ಸಂಕೋಚಪಟ್ಟು ನಾಚಿಕೆ ಯಿಂದ ಒಳಗೆ ಓಡಿದರಂತೆ.

ಮೈಸೂರಿನಲ್ಲಿ ಸರ್ಕಾರೀ ಕೆಲಸದಲ್ಲಿದ್ದ ಕೃಷ್ಣಮೂರ್ತಿ ನಾಯ್ಡುರವರ ಕೈಹಿಡಿದ ಕಮಲಾ ಕನ್ನಡನಾಡಿಗೆ ಬಂದು ನೆಲೆಸಿದರು. ಕನ್ನಡ ಭಾಷೆ ಬರದು. ಕನ್ನಡಿಗರು ಹೇಗೋ ಎಂದುಕೊಂಡು ಬಂದ ಕಮಲಾನಾಯ್ಡುರವರ ಮಾತಿನಲ್ಲೇ ಹೇಳುವು ದಾದರೆ.

"ಕನ್ನಡ ದೇಶಕ್ಕೂ ನಮ್ಮ ಆಂಧ್ರದೇಶಕ್ಕೂ ಬಹಳ ವ್ಯತ್ಯಾಸವಿರುವುದನ್ನು ಕಂಡೆ. ಅಲ್ಲಿ ಯಾರು ಶ್ರೀಮಂತರೋ ಅಂತಹವರಿಗೆ ಗೌರವ ಹೆಚ್ಚು. ಭಾರಿ ಸೀರೆ ಯುಡದಿದ್ದರೆ ಹಾಸ್ಯಮಾಡುವರು. ಹೆಚ್ಚು ಒಡವೆ ಹಾಕಿದವರಿಗೆ ಸಮಾಜ ದಲ್ಲಿ ಗೌರವವುಂಟು. ಆದರೆ ಇಲ್ಲಿ ಹಾಗಲ್ಲ. ಸರಳವಾಗಿದ್ದರೂ ಸಮಾಜ ಮರ್ಯಾದೆ ತೋರಿಸುತ್ತದೆ. ಸಮಾಜ ಸೇವೆ ಮಾಡುವವರಿಗೆ ಪ್ರೋತ್ಸಾಹವುಂಟು. ಮೇಲು ಕೀಳೆಂಬ ಭಾವನೆ ಇಲ್ಲಿ ಅಷ್ಟಾಗಿ ಕಾಣಲಿಲ್ಲ. ನಾನು ಬಯಸಿದ ಭಾಗ್ಯ ಸಿಕ್ಕಿ ತೆಂದುಕೊಂಡೆ. ಆಂಧ್ರನಾಡನ್ನು ಬಿಟ್ಟು ಬಂದನೆಂದು ಕೊರಗಲಿಲ್ಲ. ಅದಕ್ಕೆ ಬದಲಾಗಿ ನಾನು ಇಚ್ಛೆಪಟ್ಟಂತೆ ಸ್ವತಂತ್ರವಾಗಿ ಓಡಾಡಲು ಯಜಮಾನರ ಅನುಮ ತಿಯೂ ಇತ್ತು. ಯಜಮಾನರಿಂದ ನನಗೆ ಸಂಪೂರ್ಣ ಸಹಕಾರ ದೊರಕಿತು.... ನಿಜವಾಗಿ ಹೇಳುವುದಾದರೆ ಮನುಷ್ಯ ಜೀವನದ ಕಷ್ಟಗಳನ್ನು ನಾನು ಸರಿಯಾಗಿ ತಿಳಿದುಕೊಂಡಿದ್ದು ಕರ್ನಾಟಕಕ್ಕೆ ಬಂದ ಮೇಲೆಯೇ"–ಎಂದು ಹೇಳಿ ಕಮಲಾನಾಯ್ಡು ಕರ್ನಾಟಕದಲ್ಲಿ ತಮ್ಮ ಅನುಭವವನ್ನು ಸೇವಾರ್ಯವನ್ನು ಹೀಗೆ ವಿವರಿಸುವರು.

"ಅನೇಕ ಭಾವನೆಗಳು ನನ್ನ ಮನಸ್ಸಿನಲ್ಲೇ ಮನೆ ಮಾಡಿಕೊಂಡಿದ್ದುವು. ಮದುವೆ ಯಾದ ಮೇಲೆ ನಮ್ಮ ಯಜಮಾನರು ಕೆಲಸ ನಿಮಿತ್ತ ಹೋಗುವ ಕಡೆಗೆಲ್ಲಾ ನಾನೂ ಹೋಗುವ ಅವಕಾಶ ಸಿಕ್ಕಿತು. ಇಂಜನಿಯರ್ ಆಗಿದ್ದರಿಂದ ನಾಲಾವಳಿ ನಿರ್ಮಾಣಕ್ಕೆ ಹಳ್ಳಿಗಳಿಗೂ ಹೋಗಬೇಕಾಗಿ ಬಂತು.

"ಆಗ ನನಗೆ ತಾನಾಗಿ ಹಳ್ಳಿಯವರೊಡನೆ ಸಂಪರ್ಕ ಬೆಳೆಯಿತು. ಗಾಂಧೀಜಿ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಯವರ ತತ್ವ ಜ್ಞಾಪಕಕ್ಕೆ ಬಂತು, ತತ್ವಪರಿಪಾಲನೆಯ ಪ್ರಯೋಗಕ್ಕೆ ಇದುವರೆಗೂ ನನಗೆ ಸರಿಯಾದ ಸ್ಥಳ ಸಿಕ್ಕಿರಲಿಲ್ಲ. ಈಗ ಹಳ್ಳಿಯರೊಂದಿಗೇ ಇದ್ದು ನನಗೆ ತಿಳಿದ ಮಟ್ಟಿಗೆ ನಮ್ಮ ದೇಶ ಅಪೇಕ್ಷಿಸುತ್ತಿರುವ ಸ್ಥಿತಿಯನ್ನು ಹಳ್ಳಿಗಳಲ್ಲಿ ಉಳಿಸಬೇಕೆಂದು ಕಾರ್ಯಾಸಕ್ತಳಾದೆ. ಹಳ್ಳಿಯವರೇ ನಿಜವಾಗಿಯೂ ಕುಶಲ ಕಲೆಗಾರರೆನಿಸಿತು. ಎಂತಹ ಅಂದವಾದ ಕೆಲಸವಮಾಡುತ್ತಾರೆ ! ಬುಟ್ಟಿ, ಚಾಪೆ, ಬೆತ್ತದ ಕೆಲಸ, ನೂಲುವುದು, ನೇಯುವುದು, ಮಣ್ಣಿನಲ್ಲಿ ಸುಂದರವಾದ ಮಡಿಕೆಗಳನ್ನು ತಯಾರಿಸುವುದು, ಕಂಬಳಿ ಹೆಣೆಯುವುದು, ಬಣ್ಣ ಹಾಕುವುದು—ಎಲ್ಲವನ್ನೂ ಇವರಿಂದ ನಾವು ಕಲಿಯುವುದಿದೆ ಎಂದುಕೊಂಡೆ. ಇಂಜಿನೀಯರ್‌ಗಿಂತ ಹೆಚ್ಚಾಗಿ ಮನೆಕಟ್ಟುವ ತಿಳುವಳಿಕೆ ಗಾರೆ ಕೆಲಸದವನಿಗಿರುತ್ತದೆ. ಇವರು ತಯಾರಿಸಿದ ವಸ್ತುಗಳಿಗೆ ಮಾರಾಟ ಸಿಕ್ಕಿದರೆ ಸಾಕು ಇವರಿಗಿಂತ ಐಶ್ವರ್ಯವಂತರಾರು ಎನಿಸಿತು....ಆದರೆ ಇವರು ಜೀವನ ನಡೆಸುವ ರೀತಿ ಕಷ್ಟವಾಗಿರುತ್ತಿತ್ತು. ಇದಕ್ಕೆ ನನ್ನ ಅನುಭವದ ಒಂದು ನಿದರ್ಶನ ಕೊಡುತ್ತೇನೆ ...

"ಕಟ್ಟಡ ನಿರ್ಮಿಸಬೇಕಾದ ಸ್ಥಳದಲ್ಲೇ ಒಂದು ಸಣ್ಣ ಗುಡಿಸಿಲನ್ನು ಹಾಕಿಕೊಂಡು ನಿರ್ಮಾಣ ಕೆಲಸಮಾಡುವ ಒಡ್ಡರು ಜೀವಿಸುತ್ತಿದ್ದರು. ಇವರ ಕೊಳಕುತನ, ಹರಕಲು ಬಟ್ಟೆ, ಅನಾರೋಗ್ಯ ಆಹಾರ, ನೀರಿನ ಅಭಾವ—ಇದೆಲ್ಲವನ್ನೂ ನೋಡಿ ನನಗೆ ಕರುಳು ಕಿವಿಚುವಂತಾಯಿತು. ಇವರಿಗೆ ಮಕ್ಕಳು ಹೆಚ್ಚು. ಅವುಗಳಿಗೆ ವಿದ್ಯೆ ಬುದ್ಧಿ ಕಲಿಸುವ ಗೋಜಿಗೇ ಹೋಗುವುದಿಲ್ಲ. ಕಲ್ಲುಕುಟ್ಟಿ ಸಂಪಾದಿಸುವ ಒರಟು ಜನರು. ಕನ್ನಡನಾಡಿನಲ್ಲೂ ತೆಲುಗು, ತಮಿಳು ಮಾತಾಡುವ ಕೂಲಿಗಾರರಿದ್ದರು. ಇವರ ಜೊತೆ ತೆಲುಗು ಭಾಷೆಯಲ್ಲೇ ಮಾತಾಡಿ ಸ್ನೇಹ ಬೆಳೆಸಿಕೊಂಡೆ. ನಮ್ಮ ಪ್ರೀತಿ ವಿಶ್ವಾಸವನ್ನು ಅವರು ಬಹಳ ಬೇಗ ಅರ್ಥಮಾಡಿಕೊಳ್ಳುತ್ತಿದ್ದರು. ಆದ್ದರಿಂದ ಅವರಿಗೆ ಬೋಧಿಸುವುದು ನನಗೆ ಕಷ್ಟವೆನಿಸಲಿಲ್ಲ. ನಾನಿರುವ ಕಡೆ ಅವರನ್ನು ಕರೆಯುತ್ತಿರಲಿಲ್ಲ, ಅವರ ವಾಸಸ್ಥಳಕ್ಕೆ ನಾನೇ ಹೋಗಿ ಕುಳಿತುಕೊಳ್ಳುತ್ತಿದ್ದೆ. ನನ್ನ ಸುತ್ತಲೂ ಕುಳಿತು ನಾನು ಹೇಳುವುದನ್ನು ಕೇಳಿಸಿಕೊಳ್ಳುತ್ತಿದ್ದರು. ಅಕ್ಷರ ಕಲಿತರು. ಬಿಡುವಿನ ವೇಳೆಯಲ್ಲಿ ಯಾವರೀತಿ ಜೀವನ ನಡೆಸಿದರೆ ಬಡತನ ನಿರ್ಮೂಲವಾಗುತ್ತದೆಯೆಂದು ಗಾಂಧೀಜಿಯ ತತ್ವನೀತಿಯನ್ನೂ ಬೋಧಿಸಿದೆನು ಮಕ್ಕಳು ಎರಡಕ್ಕಿಂತ ಹೆಚ್ಚು ಇರಕೂಡದೆಂದು ಮುಖ್ಯವಾಗಿ ಹೇಳಿಕೊಟ್ಟೆ"— ಎನ್ನುತ್ತಾರೆ ಕಮಲಾನಾಯ್ಡು.

ಬಹುಶಃ ಈ ಒಡ್ಡರ ಬಹು ಸಂತಾನವೇ ಕಮಲಾರವರ ಮನಸ್ಸಿನ ಮೇಲೆ ವಿಶೇಷ ಪರಿಣಾಮವಾಗಿರಬಹುದು. ಈಗ ಕಮಲಾನಾಯ್ಡುರವರ ಪ್ರಧಾನ ಕಾರ್ಯಕ್ಷೇತ್ರ ಕುಟುಂಬಯೋಜನಾ ಸಂಸ್ಥೆ. ಭಾರತ ಕುಟುಂಬಯೋಜನಾ ಸಂಸ್ಥೆಯ ಬೆಂಗಳೂರು ಕೇಂದ್ರಕ್ಕೆ ಈಗ ಇವರೇ ಚೇರ್‌ಮನ್. ಒಂದೊಂದು ಕಡೆಯ ಅನುಭವದಲ್ಲೂ ಒಂದೊಂದು ಪಾಠ ಕಲಿತು ಅದರ ಪ್ರಯೋಗವನ್ನು ನಡೆಸಿ ಜಯಿಸಿದ್ದಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



"ಹಳ್ಳಿಗಳಲ್ಲಿ ನನ್ನ ನಿಜವಾದ ಹೃತ್ಪೂರ್ವಕವಾದ ಸೇವೆ ಪ್ರಾರಂಭವಾಯಿತ್ತು ಹೀಗೆ"–ಎಂದು ಹೇಳಿ ಕಮಲಾನಾಯ್ಡು ಮುಂದುವರಿಸುತ್ತಾರೆ. "ನಮ್ಮ ಯಜಮಾನರು ಆಫೀಸು ಕೆಲಸಕ್ಕೆ ಹೋದರೆ ನಾನು ಈಕಡೆ ಒಡ್ಡರ ಸಂಸಾರದೊಂದಿಗೇ ಸಾಯಂಕಾಲದವರೆಗೂ ಇರುತ್ತಿದ್ದೆ. ಬಾವಿಯಿಂದ ನೀರು ಸೇದುವುದು, ಸಗಣಿಯಿಂದ ಸಾರಿಸಿದ ನೆಲದ ಅಭ್ಯಾಸ ನನಗಾಯಿತು. ಮನದಲ್ಲೇ ಗಾಂಧಿಯನ್ನು ನೆನೆದೆ. 'ಓ ಮಹಾತ್ಮಾ, ನಿನ್ನೊಡನೆ ಆಶ್ರಮದಲ್ಲಿದ್ದು ಹಳ್ಳಿಗಳಿಗೆ ಹೋಗಿ ಸೇವೆ ಮಾಡದಿದ್ದರೂ ನಿನಗೊಪ್ಪಿಗೆಯಾಗುವ ಈ ಕೆಲಸ ಮಾಡುತ್ತಿದ್ದೇನೆ. ಇದು ನಿನಗೆ ಸಮರ್ಪಣೆ' ಎಂದುಕೊಂಡೆ. ಹೆಂಗಸರಿಗಾಗಿ ಹೆಚ್ಚು ಕೆಲಸ ಮಾಡಬೇಕೆನ್ನಿಸಿತು. ಬಸುರಿ ಬಾಣಂತಿ ಎನ್ನದೆ ಹೆಣ್ಣು ಸದಾ ದುಡಿಯುವ ಜೀವವಾಗಿತ್ತು. ಅವಳ ಆರೋಗ್ಯದ ಕಡೆ ಗಂಡನಿಗೆ ಗಮನವಿರುತ್ತಿರಲಿಲ್ಲ. ಅನೇಕ ವಿಧದಲ್ಲಿ ಹೆಣ್ಣು ಮೋಸಕ್ಕೊಳಗಾಗುತ್ತಿದ್ದಳು. ಇದನ್ನು ಕಂಡು ಸ್ತ್ರೀಯರೆಲ್ಲಾ ಅಕ್ಷರಸ್ಥರಾಗಬೇಕೆಂದು ನನಗೆ ಹಟ ಬಂದುದು ಆಗಲೆ."

ಅಲ್ಲಿಂದ ನಂಜನಗೂಡಿಗೆ ಬಂದಾಗಲೇ ಕಮಲಾನಾಯ್ಡುರವರಿಗೆ ಕನ್ನಡನಾಡಿನ ಮೊಟ್ಟಮೊದಲ ಪಟ್ಟಣವಾಸ ಅನುಭವವಾದುದು. ಇಲ್ಲಿ ಮಹಿಳೆಯರ ಸ್ಥಿತಿ ಶೋಚನೀಯವಾಗಿದ್ದುದನ್ನು ಕಂಡರು. ಈ ವೇಳೆಗೆ ಸ್ವಲ್ಪಮಟ್ಟಿಗೆ ಕನ್ನಡ ಭಾಷೆಯನ್ನು ಕಲಿತಿದ್ದ ಕಮಲಾನಾಯ್ಡು ನಂಜನಗೂಡಿನ ಮಹಿಳಾ ಸಂಘದ ಸದಸ್ಯೆಯಾದರು. ಹೆಸರಿಗೆ ಸಂಘವಷ್ಟೆ. ಹೆಚ್ಚು ಮಹಿಳೆಯರು ಭಾಗವಹಿಸುತ್ತಿರಲಿಲ್ಲ. ಕಮಲಾನಾಯ್ಡು ಮನೆಮನೆಗೆ ಹೋಗಿ ಹೆಂಗಸರು ಹೊರಗೆ ಬಂದು ಸಂಘದ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂತೆ ಮಾಡಿದರು,

"ಈ ಸಮಾಜದ ಸದಸ್ಯೆಯರಾಗಿದ್ದ ಸ್ತ್ರೀಯರಿಗೆ ಏನುಮಾಡಬೇಕೆಂಬುದು ಗೊತ್ತಿರಲಿಲ್ಲ ಯಾವ ಪ್ರಗತಿಪರ ಕೆಲಸಕ್ಕೂ ಜಾತಿ ಅಡ್ಡಬರುತ್ತಿತ್ತು. ಮಹಿಳಾ ಸಂಘದ ಕೆಲಸಕ್ಕೆ ಅಡ್ಡಿ ತಂದೊಡ್ಡುತ್ತಿದ್ದವರು ಗಂಡಸರೇ. ಜಾತಿ ಭೇದವನ್ನು ನಿರ್ಮೂಲ ಮಾಡುವುದರ ಜೊತೆಗೆ ಸಮಾಜದಲ್ಲಿ ಹೆಂಗಸರ ಪಾತ್ರಕ್ಕೆ ಆಗುತ್ತಿದ್ದ ತೊಂದರೆಯನ್ನು ತಡೆಯುವುದು ನನ್ನ ಮುಖ್ಯಸಾಧನೆಯಾಯಿತು" ಎನ್ನುತ್ತಾರೆ.

ಶಿವಮೊಗ್ಗಾ, ಚಿಕ್ಕಮಗಳೂರಿನಲ್ಲಿದ್ದಾಗ ಕಮಲಾನಾಯ್ಡುರವರ ಅನುಭವವೇ ಬೇರೆ. ಇಲ್ಲಿ ಶ್ರೀಮಂತಿಕೆಯವರೇ ಹೆಚ್ಚು. ಸ್ತ್ರೀ ಸಮಾಜಗಳು ಬೇಕಾದಷ್ಟಿದ್ದುವು. ಈ ಶ್ರೀಮಂತಕೂಟಗಳ ಧ್ಯೇಯವೇ ಬೇರೆಯಾಗಿತ್ತು. ಬೆಂಗಳೂರಿಗೆ ಬಂದಮೇಲೆ ಕಮಲಾನಾಯ್ಡುರವರ ಸೇವಾಕ್ಷೇತ್ರ ವಿಸ್ತರಿಸಿತು.

"ನಾನು ಬೆಂಗಳೂರಿಗೆ ಬಂದಮೇಲೆ ಎಂ.ಆರ್. ಲಕ್ಷಮ್ಮನವರ ಸ್ನೇಹ ಸಿಕ್ಕಿ, ಅವರೊಡನಿದ್ದು ನಿಜವಾದ ಸಮಾಜ ಸೇವೆಯನ್ನು ಕಲಿತೆ, ಈಕೆಯ ಸೇವಾಕ್ಷೇತ್ರದಲ್ಲಿ ಜಾತಿಭೇದವಿಲ್ಲ. ಮೇಲುಕೀಳು ಭಾವನೆ ಇಲ್ಲ. ಲಕ್ಷಮ್ಮನವರ ವ್ಯಕ್ತಿತ್ವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ನನಗೆ ಬಹಳ ಹಿಡಿಸಿತು. ಅವರೊಡನೆಯೇ ಇರುತ್ತಿದ್ದೆ. ಕಾಮೇಶ್ವರಮ್ಮ ಕುಪ್ಪು ಸ್ವಾಮಿ, ಪ್ರಮೀಳಾ ದೇಶಪಾಂಡೆ ಮುಂತಾದ ಸಮಾಜ ಸೇವಾಕರ್ತರ ಸಹವಾಸ ದೊರಕಿತು. ಕನ್ನಡಭಾಷೆ ಚೆನ್ನಾಗಿ ಅಭ್ಯಾಸವಾಯಿತು. ಎಂ. ಆರ್. ಲಕ್ಷಮ್ಮ ಮತ್ತು ನಾನೂ ಅಕ್ಕತಂಗಿಯರಂತಾಗಿಬಿಟ್ಟೆವು"– ಎಂದು ಗಾಂಧೀ ತತ್ವದ ಸರಳಜೀವಿ ಎಮ್.ಆರ್. ಲಕ್ಷಮ್ಮನನ್ನು ಬಹಳವಾಗಿ ಕಮಲಾನಾಯ್ಡು ನೆನೆದರು.

"ಆಕೆಯದು ಒಂದು ಹೊಸರೀತಿಯ ಪ್ರಯೋಗ ಮತ್ತು ಸೇವಾತತ್ಪರತೆ, ಅತಿ ಸಣ್ಣ ವಿಷಯವಾದರೂ ಜನಸಾಮಾನ್ಯರಿಗೆ ಅನ್ವಯಿಸುವುದಾದರೆ ಅದನ್ನು ಎತ್ತಿ ತೋರಿಸಿ ಪಾರ್ಲಿಮೆಂಟಿನವರೆಗೂ ಹೋಗುತ್ತಿದ್ದರು. ಎಲ್ಲಿ ಅನ್ಯಾಯವೋ ಅಲ್ಲಿ ಅದನ್ನು ಸರಿಪಡಿಸಲು ಎಮ್.ಆರ್. ಲಕ್ಷಮ್ಮ ಇರುತ್ತಿದ್ದರು. ಸೀಮೆಎಣ್ಣೆ, ಹಾಲು ಬಸ್ಸಿನಲ್ಲಿ ಪ್ರಯಾಣ-ಹೀಗೆ ಸಾಮಾನ್ಯ ಜನರ ವಿಷಯವೇ ಲಕ್ಷಮ್ಮನವರ ತಲೆಯಲ್ಲಿ ದ್ದುದು" ಎನ್ನುತ್ತಾರೆ ಕಮಲಾನಾಯ್ಡು.

ಎಮ್ಮಾರ್ ಲಕ್ಷಮ್ಮನವರ ಸಹವಾಸದ ಪರಿಣಾಮವಾಗಿ ಕಮಲಾನಾಯ್ಡು ರವರ ಜೀವನ ಸಮಾಜ ಸೇವೆಗಾಗಿ ಮುಡುಪಾಗಿದೆ.

ಬೆಂಗಳೂರಿನ ವಿಲ್ಸನ್‌ಗಾರ್ಡನ್‌ನಲ್ಲಿರುವ ಅಭಯಾಶ್ರಮದಲ್ಲಿ ಸುಮಾರು ಹದಿನೈದು ವರ್ಷಗಳಿಂದ ಸೇವೆಸಲ್ಲಿಸುತ್ತಿದ್ದಾರೆ. ರಕ್ಷಣೆ ಇಲ್ಲದ ಹೆಣ್ಣುಮಕ್ಕಳಿಗಾಗಿ ಈ ಆಶ್ರಮದ ಮೂಲಕ ಸೇವೆ ಸಲ್ಲಿಸುತ್ತಾ ಹಗಲಿರುಳು ಅವರದೇ ಚಿಂತೆಯಲ್ಲಿದ್ದಾರೆ. ಭಾರತದ ಕುಟುಂಬ ಯೋಜನಾ ಸಂಸ್ಥೆಯ ಧ್ಯೇಯ ಸಾಧನೆಯಲ್ಲಿದ್ದಾರೆ. ಭಾರತದ ಸಮಾಜ ಕಲ್ಯಾಣ ಸಂಸ್ಥೆಯಲ್ಲಿ ಸದಸ್ಯರಾಗಿದ್ದಾರೆ. ಕರ್ನಾಟಕ ರಾಜ್ಯದ ಬಳಕೆದಾರರ ಸಂಘದ ಕಾರ್ಯದರ್ಶಿಯಾಗಿದ್ದಾರೆ. ವಿಶ್ವವಿದ್ಯಾನಿಲಯದ ಮಹಿಳಾ ಸಂಘಕ್ಕೆ ಚೇರ್‌ಮನ್ ಆಗಿದ್ದಾರೆ. ಹೊಂಬೇಗೌಡ ಹೈಸ್ಕೂಲಿನ ಸಹಕಾರ್ಯದರ್ಶಿ ಯಾಗಿದ್ದಾರೆ. ಕಮಲಾನಾಯ್ಡುರವರ ನೆರವು ಯಾರಿಗೆ ಬೇಕೋ ಎಲ್ಲಿ ಬೇಕೋ ಅಲ್ಲಿ ಸಿದ್ಧ, ಅರವತ್ತೈದು ವರ್ಷ ಮೀರಿದ್ದರೂ ಚಿಕ್ಕದಾಗಿ ಚೊಕ್ಕವಾದ ಅವರ ದೇಹದ ಆಕಾರ ಚಕ್ಕೆಯಂತೆ ಚುರುಕಾಗಿ ಓಡಾಡಲು ಅನುವಾದಂತಿದೆ.

"ಈಗ ಈ ಸಮಸ್ಯೆ ಇದೆ. ಅದಕ್ಕೆ ನೀವು ಏನು ಮಾಡಬೇಕೆಂದಿರುವಿರಿ ?" ಎಂದು ನಮ್ಮನ್ನು ಸಲಹೆ ಕೇಳಿ, ಸಮಸ್ಯೆ ವಿವರಿಸಿ ಹೇಳುತ್ತಾರೆ ಕಮಲಾನಾಯ್ಡು. ಅವರೊಡನೆ ಮಾತಾಡುತ್ತಿದ್ದರೆ ಗಂಟೆಗಳು ಸಾಗುವುದು. ಗಮನವೇ ಮರೆತು ಹೋಗುತ್ತದೆ. ಅವರ ಮಾತಿಗೆ ವಿರಾಮವಿಲ್ಲ. ಏಕೆಂದರೆ ಇಂದಿನ ಸಮಸ್ಯೆಯನ್ನು ಅಷ್ಟೇ ಆಸಕ್ತಿಯಿಂದ ಆಶಾದಾಯಕವಾಗಿ ಮಾತಾಡುತ್ತಾರೆ. ಅವರ ಸೇವಾ ಪ್ರಯೋಗದಲ್ಲಿ ನಮ್ಮನ್ನು ಸೇರಿಸಿಕೊಳ್ಳುತ್ತಾರೆ. ಅವರ ಈ ಸರಳ ವ್ಯಕ್ತಿತ್ವ ನಮ್ಮನ್ನು ಆಕರ್ಷಿಸದೆ ಇರದು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

## ಶಾರದಮ್ಮ ಗೋವಿಂದರಾವ್

ಚಳವಳಿಯಲ್ಲಿ ಭಾಗವಹಿಸಿದ ಮತ್ತೊಬ್ಬ ಮಹಿಳೆ, ತಮ್ಮ ಅನುಭವವನ್ನು ನೇರಾಗಿ ಮಾತಾಡಿ ಹೇಳಿದ ಶ್ರೀಮತಿ ಶಾರದಮ್ಮನವರಿಗೆ ಈಗ ೬೪ ವರ್ಷ ವಯಸ್ಸು.

೧೯೪೨ರ ಉಗ್ರ ಚಳವಳಿಯಲ್ಲಿ ಇವರು ಹದಿನೇಳು ವರ್ಷದ ತರುಣಿ. ಇವರ ಹುಟ್ಟೂರು ಹಾಸನ. ತಂದೆ ಬೆಳವಾಡಿ ಸೂರ್ಯನಾರಾಯಣರಾವ್. ಹಾಸನದ ಬೆಳವಾಡಿ ಸೂರ್ಯನಾರಾಯಣರಾವ್‌ರವರ ಮನೆಯೆಂದರೆ ಕ್ರಾಂತಿಯ ಕೇಂದ್ರ, ಸಂಸ್ಕೃತಿಯ ಕೇಂದ್ರವೆಂದೇ ಹೆಸರು. ಹಾಸನದ ಇಂದಿನ ಅಂಬಾ ಭವಾನಿ ಕಲ್ಯಾಣ ಮಂಟಪವೇ ಶಾರದಮ್ಮನವರ ತವರು ಮನೆ. ಮೊದಲಿಂದಲೂ ಛತ್ರವಿದ್ದಂತೆ. ಚಳವಳಿಯಲ್ಲಿ ಭಾಗವಹಿಸಿ, ಮೆರವಣಿಗೆ ಹೊರಟು, ದೇಶಪ್ರೇಮಿಗಳನ್ನು ಸಂಘಟಿಸಿ ಸುಸ್ತಾಗಿ ಬಂದ ಕ್ರಾಂತಿಕಾರರಿಗೆ ಶಾರಮ್ಮನವರ ಮನೆ—ಊಟ ಉಪಚಾರದ, ವಿಚಾರ ವಿನಿಮಯದ ಕೇಂದ್ರ.

ಇವರದು ಚಳವಳಿಗಾಗಿ ಜೀವ ಸವೆಸಿದ ಮನೆತನ. ಇವರ ಅಜ್ಜಿ, ತಂದೆ, ತಾಯಿ, ಅಕ್ಕ, ಭಾವ, ಪತಿ, ತಮ್ಮಂದಿರು—ಇಷ್ಟು ಮಂದಿಯೂ ಗಾಂಧೀ ಭಕ್ತರಾಗಿ ಕಾಂಗ್ರೆಸ್ ಸಂಸ್ಥೆಗೆ ಸೇವೆ ಸಲ್ಲಿಸಿದ್ದಾರೆ. ಶಾರದಮ್ಮನವರಲ್ಲಿ ಎಲ್ಲರಿಗಿಂತ ಹೆಚ್ಚಾಗಿ ಶ್ರದ್ಧೆ. ದೇಶಭಕ್ತಿಯುಂಟಾದುದು ಹಾಸನಕ್ಕೆ ಮಹಾತ್ಮಾಜಿಯವರ ಪ್ರವೇಶದ ಪ್ರಭಾವದಿಂದಲೇ. ಆಗ ಮೂರು ವರ್ಷದ ಬಾಲಕಿಯಾಗಿದ್ದ ಶಾರದಮ್ಮ ಗಾಂಧೀಜೀಯವರ ದಿವ್ಯವಾಣಿಯನ್ನು ಕೇಳಲು ಏರ್ಪಡಿಸಿದ್ದ ಭಾಷಣದ ಸ್ಥಳಕ್ಕೆ ತನ್ನ ಅಕ್ಕನೊಡನೆ ಹೋದರು. ಚಿಕ್ಕ ಮಗುವಿಗೂ ಸ್ಫೂರ್ತಿ ಬರುವಂತೆ ಹೇಳಿದ ಗಾಂಧಿಯವರ ಮಾತಿನ ಮೋಡಿ ಇವರನ್ನು ಗಾಂಧಿಯವಗ ಉಪದೇಶದ ಕಡೆಗೆ ಎಳೆಯಿತು. ಕಸ್ತೂರಿಬಾರವರು ಹೆಣ್ಣುಮಕ್ಕಳನ್ನು ತಮ್ಮ ಹತ್ತಿರ ಕರೆದು, ಅವರಿಗೆ ಗುಟ್ಟೊಂದು ಹೇಳುವಂತೆ—'ನೀನೇ ಭಾರತದ ಮುಂದಿನ ಪೀಳಿಗೆ. ನೀವು ಸ್ವತಂತ್ರರಾಗಿರಬೇಕು. ಪರತಂತ್ರ ಬೇಡ. ಜಾತಿ ಭೇದವಿಲ್ಲದೆ ಹೋರಾಡಿ....' ಎಂದು ಮೆಲು ದನಿಯಲ್ಲಿ ಹೇಳಿದ ಬಾ ಅವರ ಮಾತು ಇಂದಿಗೂ ಶಾರದಮ್ಮನವರ ಕಿವಿಯಲ್ಲಿ ಮೊಳಗುವಂತಿದೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಬಡವರಿಗಾಗಿ ಈ ಜೋಳಿಗೆ—ಎಂದು ಮಹಾತ್ಮಾಜಿಯವರು ಹಣ ಸಂಗ್ರಹಿಸುವ ಅವಶ್ಯಕತೆ ಹೇಳಿದಾಗ, ಶಾರದಮ್ಮನವರ ಗೆಳತಿ ರತ್ನ ತನ್ನ ಒಡವೆಗಳೆಲ್ಲವನ್ನೂ ಬಿಚ್ಚಿಕೊಟ್ಟು ಖಾದಿ ಧರಿಸಿದ ದೃಶ್ಯವನ್ನು ಕಂಡು ಶಾರದಮ್ಮನವರು ಮತ್ತಷ್ಟು ಸ್ಫೂರ್ತಿಗೊಂಡು 'ಇನ್‌ಕ್ವಿಲಾಬ್ ಜಿಂದಾಬಾದ್' ಎಂದು ಕಂಠವೆತ್ತಿ ಕೂಗಿ ಚಳವಳಿಗೆ ನಾಂದಿ ಹಾಡಿದರು.

ರಾ. ಶಿ. ಯವರು ಇವರ ಭಾವಂದಿರು. ಹೀಗೆ ಇವರ ಸಂಸಾರಕ್ಕೆ ಸೇರಿದವರೂ ಪ್ರೋತ್ಸಾಹ ಕೊಡುವವರೇ ಆಗಿದ್ದು ಬೆಳಗಿನ ಝಾವ ಮನೆ ಬಿಟ್ಟು ಚಳವಳಿಯ ಕೂಟದೊಂದಿಗೆ ಬೀದಿ ಬೀದಿಗಳಲ್ಲಿ ಮೆರವಣಿಗೆ ಹೊರಟು, ರಾಗ ರಾಗವಾಗಿ ದೇಶಪ್ರೇಮ ಗೀತೆಗಳನ್ನು ಹಾಡುತ್ತಾ ಜನರನ್ನು ತಮ್ಮ ಉದ್ದೇಶದ ಕಡೆಗೆ ಆಕರ್ಷಿಸುತ್ತಾ ದಿನವಿಡೀ ಕಳೆದು ರಾತ್ರಿ ಮನೆ ಸೇರುವುದು ವಾಡಿಕೆಯಾಯಿತು. ಪೋಲೀಸರ ಕೈಗೆ ಸಿಕ್ಕಿ ದಸ್ತಗಿರಿಯಾಗಿ ಅನ್ನ ನೀರಿಲ್ಲದೆ ಅರ್ಧ ರಾತ್ರಿಯಲ್ಲಿ ಮನೆ ಸೇರುತ್ತಿದ್ದ ಕಷ್ಟದ ದಿನಗಳನ್ನು ಈಗ ಶಾರದಮ್ಮನವರು ನೆನೆಸಿಕೊಂಡು, ಆ ದಿನಗಳು ನಿಜವಾಗಿಯೂ ನಮ್ಮ ಜೀವನದ ಸಾರ್ಥಕವಾದ ದಿನಗಳು—ಎನ್ನುತ್ತಾರೆ.

ಇವರ ಅಜ್ಜಿ ಮಡಿ ಹೆಂಗಸು, ಸಂಪ್ರದಾಯಸ್ಥರು. ಆದರೆ ಚಳವಳಿಗೆ ಅವರ ಪ್ರೋತ್ಸಾಹ ಅತ್ಯದ್ಭುತ. ಬೆಳಗು ಮೂಡುವ ಮೊದಲೇ ಮೊಮ್ಮಕ್ಕಳನ್ನು ಹಾಸಿಗೆಯಿಂದೆಬ್ಬಿಸಿ, ಸ್ನಾನಮಾಡಿಸಿ, ಹೊಟ್ಟೆ ತುಂಬಾ ತಿಂಡಿ ತಿನ್ನಿಸಿ, ಮನೆಯ ಬಾಗಿಲ ಬಳಿ ಕಾಯುತ್ತಾ ಕ್ರಾಂತಿಕಾರರ ಗುಂಪಿನ ಕೂಗು ಬಂದ ಕೂಡಲೇ ಮೊಮ್ಮಕ್ಕಳನ್ನು ಅಣಿ ಮಾಡಿ ಕಳುಹಿಸಿ, ಮಧ್ಯಾಹ್ನ ಊಟಕ್ಕೆ ಬರುವುದನ್ನೇ ಕಾಯುತ್ತಾ ಇರುತ್ತಿದ್ದರಂತೆ. "ಪರದೇಶಿ ಬಟ್ಟೆಗಳನ್ನು ಬಿಸಾಕಿ, ಖಾದಿ ಬಟ್ಟೆ ಉಡಿ" ಎಂದು ಅಜ್ಜಿಯ ಉಪದೇಶ. ಜಾತಿಭೇದದ ಮೌಢ್ಯತೆಯನ್ನು ಮುರಿದವರು ಅಜ್ಜಿಯೇ. ತನ್ನ ಮನೆಯಲ್ಲಿ ಎಲ್ಲರೊಂದಿಗೆ ಶೂದ್ರರನ್ನೂ ಕೂರಿಸಿ ಅನ್ನ ಬಡಿಸಿದ ಕೈ ಅಜ್ಜಿಯದು. ಜಾತಿಭೇದ ಬೇಡ. ಒಗ್ಗಟ್ಟಾಗಿರಿ—ಎಂದು ಅಜ್ಜಿಯ ಆದೇಶ.

ಇಂತಹ ಮನೆಯ ವಾತಾವರಣದಲ್ಲಿ ಬೆಳೆದ ಶಾರದಮ್ಮನವರಿಗೆ ಮದುವೆಯಾದ ಮೇಲೂ ಪತಿಯಿಂದ ಚಳವಳಿ ಮುಂದುವರಿಸಲು ಪ್ರೋತ್ಸಾಹ ಸಿಕ್ಕಿತು. ಆಗಾಗ್ಗೆ ಭಾಷಣಕಾರರ ಹುರಿದುಂಬುವಿಕೆ. ಶ್ರೀಮತಿ ಎಂ. ಆರ್. ಲಕ್ಷಮ್ಮ, ಯಶೋಧರ ದಾಸಪ್ಪ, ಭಾಗೀರಥಿಬಾಯಿ—ಇಂತಹ ಕ್ರಾಂತಿಕಾರರಿಂದ ಉತ್ತೇಜಿಸಿ, ಸತ್ಯಾಗ್ರಹ, ಧರಣಿ ಹೂಡುವುದನ್ನು ಕಲಿತರು.

"ಕ್ರಾಂತಿಯ ಹುಮ್ಮಸ್ಸು ಇನ್ನೂ ಹುಚ್ಚೆದ್ದು ಕುಣಿಯಲು ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರ ಭಾಷಣ ಕಾರಣವಾಯಿತು. ಚಳವಳಿಯಲ್ಲಿ ಮಗನನ್ನು ಬಲಿಕೊಟ್ಟ ಅಯ್ಯಂಗಾರರು ಮಗನನ್ನು ಕಳೆದುಕೊಂಡ ದುಃಖದಿಂದ ಮತ್ತಷ್ಟು ಸ್ಫೂರ್ತಿದಾಯಕವಾಗಿ ದೊಡ್ಡ ಜನಸಮೂಹವನ್ನುದ್ದೇಶಿಸಿ ಮಾತಾಡಿದರು. "ನನ್ನ ಮಗ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮರಣವನ್ನಪ್ಪಿದ ವೀರ ಮಗ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಅವನ ಪ್ರಾಣತ್ಯಾಗ ನಿಮಗೆ ಸ್ಫೂರ್ತಿದಾಯಕವಾಗಲಿ'—ಎಂದಾಗ ನಮ್ಮಲ್ಲಿ ಹತ್ತು ಪಟ್ಟು ಶಕ್ತಿ ತುಂಬಿದಂತಾಯಿತು"—ಎನ್ನುತ್ತಾರೆ ಶಾರದಮ್ಮ. ಅಂದಿನಿಂದ ಬ್ರಿಟಿಷರ ವಿರುದ್ಧ ಸಂಘಟನೆಯ ಕೆಲಸ ಭರದಿಂದಸಾಗಿ, ತಾವು ವಹಿಸಿಕೊಂಡ ನಿರ್ವಹಣೆಯನ್ನು ಸಾಧಿಸಿದರೆಂದು ಶಾರದಮ್ಮನವರಿಗೆ ತೃಪ್ತಿ.

ಚಿಕ್ಕಂದಿನಿಂದ ಸುಶ್ರಾವ್ಯವಾಗಿ ಹಾಡುವ ಪ್ರತಿಭೆಯುಳ್ಳ ಶಾರದಮ್ಮನವರು ಈಗಲೂ ಒಳ್ಳೆಯ ಸಂಗೀತಗಾರ್ತಿ, ನಾಟಕ ಇವರಿಗೆ ಬಲು ಪ್ರಿಯ. ಅತಿ ನಾಜೂಕಾದ ಕಸೂತಿ ಕೆಲಸಗಳನ್ನು ಮಾಡಿದ್ದಾರೆ. ಈಗ ಹಾಸನದ ಮಹಿಳಾ ಸಮಾಜದ ಸದಸ್ಯೆಯಾಗಿ, ಹೆಣ್ಣು ಮಕ್ಕಳ ಅಭಿವೃದ್ಧಿಗಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರಂತೆಯೇ ಇವರ ಮಗಳು ಪಂಕಜಾಸಿಂಹ ಕ್ರಾಂತಿ ಭಾವನೆಯುಳ್ಳವರು. ಇಂದಿಗೂ ಶಾರದಮ್ಮನವರು ಮಕ್ಕಳನ್ನು ಅಹಿಂಸಾ, ಸತ್ಯದ ದಾರಿಯಲ್ಲೇ ಧೈರ್ಯವಾಗಿ ಮುನ್ನುಗ್ಗುವಂತೆ ಬೋಧಿಸುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

## ಪರಿಸರದಿಂದ ಕಿಡಿಯೊಡೆದ

## ಆಜೀ ರಂಗನಾಯಕಿ

"ವಂಜಿಕೋಟೆ ವಾಲಿಬನ್, ಕಪ್ಪಲೋಟಿಯ ತಮಿಳನ್–ಇವರ ವಿಷಯವಾಗಿ ಬರೆಯಲಿಲ್ಲ. ಬ್ರಿಟಿಷರ ಆಡಳಿತ ಆರ್ಭಟದ ಜ್ವಾಲೆಯಲ್ಲಿ ಬೆಂದ ಮದರಾಸಿನ ಪ್ರಸಿದ್ಧ ಪ್ರಪ್ರಥಮ ನಾಯಕರಾದ ಇವರುಗಳು ಭಾರತದ ಚರಿತ್ರೆಯಲ್ಲಿ ಅಮರರಾಗಿದ್ದಾರೆ" ಎಂದು ಶ್ರೀ ವಿ. ಎಸ್. ನಾರಾಯಣರಾವ್‌ರವರು ನನಗೆ ಆಗಾಗ್ಗ ಹೇಳುತ್ತಲೇ ಇದ್ದರು. ಈ ನಾಯಕರ ಜೀವಸವು ಕಥೆಯ ರೂಪದಲ್ಲಿ ಇತಿಹಾಸವಾಗಿ ಎಲ್ಲರಿಗೂ ತಿಳಿಯುವಂತೆ ಹರಡಿತ್ತು ಎಂಬುದರ ಆಧಾರದ ಮೇಲೆ, ಈ ವಿಷಯ ಸಂಗ್ರಹಕ್ಕೆ ಸಂಬಂಧಪಟ್ಟ ಕುಟುಂಬದವರನ್ನು ಹುಡುಕಿ ಹೊರಟಾಗ, ಆಜೀ ರಂಗನಾಯಕಿ ನನ್ನ ಕಣ್ಣಿಗೆ ಬಿದ್ದರು. ವೀರ ವನಿತೆಯ ಮಾಲಿಕೆಯಲ್ಲಿ ಈಕೆಯ ವಿಷಯವನ್ನು ಸೇರಿಸಬಹುದೆಂದೂ, ವಂಜಿ ಅಯ್ಯರ್ ಮತ್ತು ನೌಕಾ ಕಂಪನಿಯ ಚಿದಂಬರಂ ಪಿಳ್ಳೈ—ಇವರಿಬ್ಬರ ವಿಷಯವೂ ಸಂಗ್ರಹವಾಯಿತೆಂದೂ ಹೇಳಿದಾಗ ನಾರಾಯಣರಾವ್‌ರವರಿಗೆ ತೃಪ್ತಿಯಾಯಿತು.

ಆಜೀ ರಂಗನಾಯಕಿಯವರು ತಾವು ಇಂತಹ ಪರಿಸರದಲ್ಲಿ ಬೆಳೆದವರೆಂದು ವಿವರಿಸಿ ಹೇಳಿ ಬಹಳ ಅಮೂಲ್ಯವಾದ ಕೆಲವು ಕೈ ಬರಹಗಳನ್ನು ಕೊಟ್ಟರು. ಇದರಿಂದ ವಿಷಯ ನಿರೂಪಣೆ ಸುಲಭವಾಯಿತು.

ವಿಶ್ವವಿಖ್ಯಾತವಾದ ಪುದುಚೇರಿಯ ಶ್ರೀ ಅರವಿಂದಾಶ್ರಮವೇ ರಂಗನಾಯಕಿಯ ಕುಟುಂಬದವರಿಗೆ ಆಂದೋಲನ ಚಟುವಟಿಕೆಗೆ ಆಶ್ರಯ ಕೊಟ್ಟ ಕೇಂದ್ರ. ರಂಗನಾಯಕಿಯ ತಂದೆಯವರಾದ "ಶ್ರೀ" ಶ್ರೀನಿವಾಸಾಚಾರ್ಯರು "ಇಂದಿಯ" ಎಂಬ ಪ್ರಸಿದ್ಧ ಪತ್ರಿಕೆಯನ್ನು ಬ್ರಿಟಿಷರ ವಿರುದ್ಧ ನಡೆಸಿ ಜಯಿಸಿದ ವೀರ ದೇಶಭಕ್ತರು.

"ಶ್ರೀ" ಎಂದರೆ ಶ್ರೀರಂಗಪಟ್ಟಣದವರು ಎಂದರ್ಥ. ಹಿಂದೆ, ಶ್ರೀರಂಗಪಟ್ಟಣದಲ್ಲಿ ನೆಲೆಸಿದ್ದ ರಂಗನಾಯಕಿಯವರ ತಾತ, ಮುತ್ತಾತಂದಿರು ಟಿಪ್ಪು ಸುಲ್ತಾನನ ಕಾಲದಲ್ಲಿ ತೊಂದರೆಗೀಡಾಗಿ, ಭಾರತ ಸಂಸ್ಕೃತಿಯ ಉದ್ಧಾರಕ್ಕಾಗಿ ಶ್ರೀರಂಗಪಟ್ಟಣವನ್ನೇ ತ್ಯಜಿಸಿ ಮದರಾಸಿಗೆ ಬಂದು ಸೇರಿಕೊಂಡರು. ಮದರಾಸಿನಲ್ಲಿ ಬ್ರಿಟಿಷರ ಹಿಂಸೆಯನ್ನು ಸಹಿಸಲಾರದೆ ಪರಕೀಯರ ಆಡಳಿತವನ್ನು ವಿರೋಧಿಸಿ ಆಂದೋಲನ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ವನ್ನೆಬ್ಬಿಸಿ, ಮದರಾಸನ್ನೂ ಬಿಟ್ಟು ಪುದುಚೇರಿಗೆ ಪ್ರಯಾಣ ಮಾಡಿದರು. ಪುದುಚೇರಿಯಲ್ಲಿ ಫ್ರೆಂಚರ ಆಶ್ರಯದಲ್ಲಿದ್ದು ಬ್ರಿಟಿಷರ ವಿರುದ್ಧ ಚಟುವಟಿಕೆ ನಡೆಸುವುದರಲ್ಲಿ ಸಫಲತೆ ಕಂಡರು.

ಪುದುಚೇರಿಯಲ್ಲಿ ಇವರ ಕಾರ್ಯಕ್ರಮವನ್ನು ಮೆಚ್ಚಿ ಪ್ರೋತ್ಸಾಹಿಸಿ ಸಹಾಯವನ್ನೂ, ಸ್ಫೂರ್ತಿಯನ್ನೂ ನೀಡಿದವರು ಇಬ್ಬರು ಜಗತ್ಪ್ರಸಿದ್ಧ ಮಹನೀಯರು—ಬಂಗಾಳಿ ಯೋಗಿ ಎನಿಸಿದ ಶ್ರೀ ಬಾಬು ಅರವಿಂದ ಘೋಷರು ಮತ್ತು ತಮಿಳುನಾಡಿನ ಕವಿಶ್ರೇಷ್ಠರೆನಿಸಿದ ಶ್ರೀ ಸುಬ್ರಹ್ಮಣ್ಯ ಭಾರತಿಯಾರ್‌ರವರು.

ರಂಗನಾಯಕಿಯ ಜೀವನದಲ್ಲಿ ಪ್ರಭಾವ ಬೀರಿದ ಭಾರತ ಭೂಮಿಯ ಮೂರು ಸ್ಥಳಗಳ ವೈವಿಧ್ಯ ರೂಪಗಳನ್ನು ನಾವು ಕಾಣಬಹುದು. ಶ್ರೀರಂಗಪಟ್ಟಣವು ಇವರ ತವರೂರು. ಇವರು ಮದುವೆಯಾಗಿ ಸೇರಿದ್ದು ಮಳೂರು. ಆಂದೋಳನವನ್ನು ನಡೆಸಿದ ಸ್ಥಳಗಳು ಪುದುಚೇರಿ ಮತ್ತು ಮದರಾಸು.

ಆಜೀ ವಂಶದವರು ಪ್ರಸಿದ್ಧ ಸಮಾಜ ಸುಧಾರಕರಾದ ಶ್ರೀ ರಾಮಾನುಜಾಚಾರ್ಯರ ಅನುಯಾಯಿಗಳು. ತಮಿಳುನಾಡಿನಲ್ಲಿ ಜನಿಸಿದ ಶ್ರೀ ರಾಮಾನುಜರು ವಿಶಿಷ್ಟಾದ್ವೈತ ತತ್ವವನ್ನು ಸಾರಿ, ಇಡೀ ದಕ್ಷಿಣ ಭಾರತದಲ್ಲಿ ಮಾನವ ಸರಿಸಮಾನತೆಯ ಅರ್ಥವನ್ನು ನಿರೂಪಿಸಿ ದೈವಭಕ್ತಿಯನ್ನೂ ವೇದಸಾರ ಸೌರಭವನ್ನೂ ಹರಡಿದರು. ಈ ಆಚಾರ್ಯರ ಶಿಷ್ಯರಾಗಿ, ಅವರ ನಂತರ ಗುರುಪೀಠವನ್ನು ಅಲಂಕರಿಸಿದ ಮಹನೀಯರಿಗೆ "ಜೀಯರ್" ಎಂದು ಹೆಸರು. ಇವರು ಮೈಸೂರು ಮಹಾರಾಜರ ಆಸ್ಥಾನ ಗುರುಗಳೂ ಆಗಿದ್ದರು.

ಮಹಾರಾಜರು ಆ ಜೀಯರ್ ಮನೆಯವರು ಎಂಬ ದೀರ್ಘ ಪದಕ್ಕೆ ಬದಲಾಗಿ "ಆಜೀ" ಎಂದೇ ಮೊಟಕು ಮಾಡಿ ಕರೆಯುತ್ತಿದ್ದರು. ಮಹಾರಾಜರು ಕರೆಯುತ್ತಿದ್ದ ಹೆಸರೇ ಉಳಿದು, ಈಗಲೂ ಆ ವಂಶಸ್ಥರಿಗೆ "ಆಜೀ"ಯವರೆಂದೇ ಹೆಸರು. ಈ ವಂಶವೃಕ್ಷದ ಒಂದು ಶಾಖೆಯವರು ಮಂಡ್ಯದ ಹತ್ತಿರವಿರುವ ಮಳೂರಿನಲ್ಲಿ ನೆಲೆಸಿ ಮಳೂರು ಆಜೀ ಎನಿಸಿಕೊಂಡರು. ರಂಗನಾಯಕಿಯು ಮದುವೆಯಾಗಿ ಸೇರಿದುದು ಈ ಮಳೂರು ಆಜೀ ಕುಟುಂಬಕ್ಕೆ.

ರಂಗನಾಯಕಿಯ ತಂದೆ ಶ್ರೀನಿವಾಸಾಚಾರ್ಯರ ಸಹೋದರರು ತಿರುಮಲಾಚಾರ್ಯ ಮತ್ತು ಪಾರ್ಥಸಾರಥಿ. ಶ್ರೀರಂಗಪಟ್ಟಣದ ಸಹೋದರತ್ರಯರೆಂದು ಪ್ರಸಿದ್ಧರಾದ ಈ ಮೂವರೂ ಸ್ವಾತಂತ್ರ್ಯ ಚಳವಳಿಯ ನಾಯಕರು. ಕಾಡು ಕಿಚ್ಚಿನಂತೆ ಆಂದೋಲನವನ್ನು ಹರಡುವ ನಿಸ್ಸೀಮರಾಗಿದ್ದರು. ಈ ಸಂಗ್ರಾಮದ ಬೆಂಕಿಗೆ ತುಪ್ಪ ಸುರಿದಂತೆ ಅಖಿಲ ಭಾರತ ಕಾಂಗ್ರೆಸ್ ತೀವ್ರಗಾಮಿ ಮುಖಂಡರಾಗಿದ್ದ ಬಿಪಿನ್ ಚಂದ್ರಪಾಲ್ ಒಂದು ಸಲ ಮದರಾಸಿಗೆ ಪ್ರವಾಸ ಬಂದುದು ಈ ಚಳವಳಿಗಾರರಿಗೆ ಮತ್ತಷ್ಟು ಶಕ್ತಿ ಬಂದಂತಾಯಿತು.

ಶ್ರೀರಂಗಪಟ್ಟಣವನ್ನು ಬಿಟ್ಟು ಸಂಸಾರ ಸಮೇತರಾಗಿ ಮದರಾಸಿಗೆ ಬಂದು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ನೆಲೆಸಿದ ಈ ಅಯ್ಯಂಗಾರ್ ಕುಟುಂಬದವರು ತಮ್ಮ ಪ್ರತಿಭೆಯಿಂದ ಅತ್ಯಂತ ಐಶ್ವರ್ಯವಂತರಾದರು. ವಕೀಲ ವೃತ್ತಿಯಿಂದ ಸಂಪಾದಿಸಿದ ಹಣದಿಂದ ಅತಿ ವಿಶಾಲವಾದ ಮನೆಯನ್ನು ಟ್ರಿಪ್ಲಿಕೇನ್‌ನಲ್ಲಿ ಕಟ್ಟಿದರು. ಈ ಮನೆಯ ವಿಸ್ತಾರ ವನ್ನು ವಿವರಿಸುತ್ತಾ ರಂಗನಾಯಕಿಯ ಅತ್ತಿಗೆ ಜಾನಕಿ ಹೀಗೆ ಹೇಳುತ್ತಾರೆ, "ಒಂದು ಸಲ ಮನೆಯನ್ನು ಸುತ್ತು ಹಾಕಿ ಬರುವಷ್ಟರಲ್ಲಿ ಕಾಲು ಸೋತುಹೋಗುತ್ತಿತ್ತು. ಅಷ್ಟು ದೊಡ್ಡ ಮನೆ! ಅನೇಕ ಎಕರೆಗಳಷ್ಟು ಜಮೀನು, ತೋಟ ಎಲ್ಲಾ ಇತ್ತು. ತೋಟದಲ್ಲಿ ಒಂದು ದೊಡ್ಡ ಗಂಗಾಳವನ್ನು ಹೂತಿದ್ದರು. ಹೆಣ್ಣುಮಕ್ಕಳಿಗೆ ಮದುವೆ ಯಾದರೆ, ಒಂದೂವರೆ ಫರ್ಲಾಂಗು ದೂರಕ್ಕೆ ಸಾಲಾಗಿ ಜೋಡಿಸುವಷ್ಟು ಪಾತ್ರೆ ಪದಾರ್ಥಗಳು ಬಳುವಳಿಯಾಗಿ ಹೋಗುತ್ತಿದ್ದವು. ಈ ವಂಶದ ಅಂತಸ್ತಿಗೆ ತಕ್ಕಂತೆ ಗೌರವ ಕುಟುಂಬದ ಹೆಂಗಸರು ಮೇನಾದಲ್ಲೇ ಕುಳಿತು ಓಡಾಡುತ್ತಿದ್ದರು. ಭಾರತವು ಬ್ರಿಟಿಷರ ವಶವಾದ ಮೇಲೆ ಈ ಮರ್ಯಾದೆಯೆಲ್ಲಾ ಮಾಯವಾಯಿತು.

ಈ ಕುಟುಂಬದ ಅತುಲೈಶ್ವರ್ಯದ ಒಂದು ಪಾಲು ಮುಳುಗಿ ಹೋಗಲು ಬ್ರಿಟಿಷರೇ ಕಾರಣ. ತೂತ್ತುಕೋರಿನ್ ಬಂದರಿನಲ್ಲಿ ವಿ. ಓ. ಚಿದಂಬರಂ ಪಿಳ್ಳೈ ಸ್ಥಾಪಿಸಿದ್ದ "ಸ್ವದೇಶೀ ಸ್ಟೀಂ ನ್ಯಾವಿಗೇಷನ್ ಕಂಪನಿ"ಗೆ ಈ ಶ್ರೀರಂಗಪಟ್ಟಣದವರು ಬಂಡವಾಳವನ್ನು ಹಾಕಿದ್ದರು. ಮದರಾಸಿನ ಇತಿಹಾಸದಲ್ಲಿ ಪ್ರಸಿದ್ಧ ಸತ್ಯ ಕಥೆ ಯಾಗಿ ಇಂದಿಗೂ ಜನಮನದಲ್ಲಿ ಉಳಿದಿರುವ "ಕಪ್ಪಲ್ ಓಟ್ಟಿಯ ತಮಿಳನ್" ಸಂಗತಿಯಲ್ಲಿ ಭಾಗಿಯಾಗಿದ್ದವರಲ್ಲಿ ರಂಗನಾಯಕಿಯ ಕುಟುಂಬದವರೂ ಒಬ್ಬರು.

ಬ್ರಿಟಿಷರು ಮದರಾಸಿನಲ್ಲಿ ನೌಕಾದಳವನ್ನು ಸ್ಥಾಪಿಸುವುದಕ್ಕೆ ಎಷ್ಟೋ ವರ್ಷ ಗಳ ಮೊದಲೇ ಮದರಾಸಿನ ಬಂದರಿನಿಂದ ಸ್ವದೇಶೀ ವಸ್ತುಗಳು ಹಡಗಿನ ಮೂಲಕ ಹೊರದೇಶಗಳಿಗೆ ಹೋಗುತ್ತಿದ್ದವು. ಇಂತಹದೊಂದು ವ್ಯಾಪಾರ ನೌಕೆಯ ಕಂಪನಿಯ ಮುಖ್ಯಸ್ಥರಾದ ಚಿದಂಬರಂಪಿಳ್ಳೈಯನ್ನು ವಂಚಿಸಲು ಬ್ರಿಟಿಷ್ ಸರ್ಕಾರ ಪ್ರಯತ್ನಿ ಸಿತು. ಕೆಲವು ಸ್ವಾರ್ಥಿಗಳ ಮತ್ತು ದೇಶದ್ರೋಹಿಗಳ ನೆರವಿನಿಂದ ಸಮುದ್ರಯಾನ ಮಾಡುತ್ತಿದ್ದ ಈ ಕಂಪನಿಯ ಹಡಗನ್ನು ತಿರುನಲ್ವೇಲಿಯ ಕಲೆಕ್ಟರಾಗಿದ್ದ ಬ್ರಿಟಿಷ್ ಅಧಿಕಾರಿ ರಾಬರ್ಟ್ ವಿಲಿಯಂ ಆ್ಯಷ್ ಮುಳುಗಿಸಿಬಿಟ್ಟ. ಅಂದಿನ ಮೌಲ್ಯದ ಎರಡು ಲಕ್ಷಕ್ಕೂ ಮೀರಿದ ಹಣ ಅಯ್ಯಂಗಾರ್ ಕುಟುಂಬದವರಿಗೆ ಇದರಿಂದ ನಷ್ಟ ವಾಯಿತು. ಚಿದಂಬರಂಪಿಳ್ಳೈ ಸಿಡಿಲು ಬಡಿದಂತೆ ತಟಸ್ಥರಾಗಿ ಹೋದರು.

ಈ ಅನ್ಯಾಯವನ್ನು ವಿರೋಧಿಸಿ ೧೯೧೧ರಲ್ಲಿ ಚಿದಂಬರಂಪಿಳ್ಳೈಯ ಸಹೃದಯಿ ಯಾದ ಮದರಾಸಿನ ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ವಂಜಿ ಅಯ್ಯರ್ ಎಂಬುವವರು ವಿಲಿಯಂ ಆ್ಯಷ್‌ನನ್ನು ಕೊಂದುಬಿಟ್ಟರು. ಬ್ರಿಟಿಷ್ ಅಧಿಕಾರಿಯನ್ನು ಕೊಲೆ ಮಾಡಿದ ಕೊಲೆಗಾರನೆಂದು ವಂಜಿ ಅಯ್ಯರ್‌ರನ್ನು ಬ್ರಿಟಿಷ್ ಸರ್ಕಾರ ಮರಣ ದಂಡನೆಗೆ ಗುರಿಮಾಡಿತು. ಈ ಕೊಲೆಯ ಸಂಬಂಧದಲ್ಲೇ ವಕೀಲ್ ವೆಂಕಟೇಶ ಅಯ್ಯರ್ ಮತ್ತು ಧರ್ಮರಾಜ ಅಯ್ಯರ್ ಇಬ್ಬರನ್ನೂ ಬ್ರಿಟಿಷರು ಸೆರೆಹಿಡಿದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಬ್ರಿಟಿಷ್ ಸರ್ಕಾರದ ಅನ್ಯಾಯದ ಈ ಶಿಕ್ಷೆಯನ್ನು ಅನುಭವಿಸುವುದಕ್ಕೆ ಬದಲು ಪ್ರಾಣತ್ಯಾಗ ಮಾಡುವುದು ಒಳಿತೆಂದು ಈ ಇಬ್ಬರು ವಕೀಲರೂ ಆತ್ಮಹತ್ಯೆ ಮಾಡಿಕೊಂಡು ದೇಶಕ್ಕಾಗಿ ಬಲಿದಾನವಾದರು.

ವಂಜಿ ಅಯ್ಯರ್ "ವೀರ ವಾಂಜಿ"ಯಾಗಿ ತಮಿಳುನಾಡಿದ ಚರಿತ್ರೆಯಲ್ಲಿ ದೇಶಭಕ್ತಿಯ ಸ್ಫೂರ್ತಿಯಾಗಿ, ಧರ್ಮದ ಪ್ರತೀಕವಾಗಿ, ಅನ್ಯಾಯದ ವಿರುದ್ಧ ಪ್ರಾಣತ್ಯಾಗ ಮಾಡಿ ಅಮರರಾದರು.

ಚಿದಂಬರಂಪಿಳ್ಳೆಯ ಕಂಪನಿ ಮುಚ್ಚಿಹೋಯಿತು. ಈ ಕಂಪನಿಯ ಬಂಡವಾಳಗಾರರಾಗಿದ್ದ ರಂಗನಾಯಕಿಯ ತಂದೆ ಮತ್ತು ತಂದೆಯ ಸಹೋದರರು ಖಿನ್ನಮನಸ್ಕರಾಗಿ ಮದರಾಸನ್ನೇ ತ್ಯಜಿಸಿ ವಿಶಾಲವಾದ ಸ್ವಯಾರ್ಜಿತ ಮನೆ ಆಸ್ತಿ ಎಲ್ಲವನ್ನೂ ಬಿಟ್ಟು ಇದೇ ಸಂದರ್ಭದಲ್ಲೇ ಪುದುಚೇರಿಗೆ ಹೋಗಿ ನೆಲೆಸಿದುದು.

ಪುದುಚೇರಿಗೆ ಇವರೊಡನೆ ಬಂದ ಆಸ್ತಿಯೆಂದರೆ ಪುಸ್ತಕ ಭಂಡಾರವಷ್ಟೆ. ಈ ಪುಸ್ತಕಗಳೂ ಶ್ರೀರಂಗಪಟ್ಟಣದಿಂದ ಇವರನ್ನು ಹಿಂಬಾಲಿಸಿ ಬಂದಿದ್ದುವು.

ಶ್ರೀರಂಗಪಟ್ಟಣದ ಈ ಅಯ್ಯಂಗಾರ್ ವಂಶಜರು ವಿದ್ಯೆ, ಬುದ್ಧಿ, ದೇಶಭಕ್ತಿ, ಹಿಂದೂ ಸಂಸ್ಕೃತಿಯ ಪ್ರತಿಪಾದಿತರಾಗಿದ್ದರು. ಇದೇ ವಂಶದವರಲ್ಲೊಬ್ಬರಾದ ಪಾರ್ಥಸಾರಥಿ "ಯೋಗಿ" ಎಂಬ ಬಿರುದನ್ನು ಪಡೆದಿದ್ದರು. ಇವರನ್ನು ಯೋಗಿ ಎಂದು ಕರೆದವರು ಮದರಾಸ್ ಹೈಕೋರ್ಟಿನ ನ್ಯಾಯಾಧೀಶರಾಗಿದ್ದ ಬ್ರಿಟಿಷ್ ಅಧಿಕಾರಿಗಳು. ಪಾರ್ಥಸಾರಥಿಯ ಬುದ್ಧಿಶಕ್ತಿ, ಆಸಕ್ತಿ, ಶ್ರದ್ಧೆ, ಧರ್ಮನೀತಿ ಬ್ರಿಟಿಷರನ್ನೂ ಆಕರ್ಷಿಸಿತ್ತು. ಯೋಗಿಗಳು ಎಷ್ಟು ಪ್ರತಿಭಾವಂತ ವಕೀಲರಾಗಿದ್ದರೋ ಅಷ್ಟೇ ದೇವರಲ್ಲಿ, ದೇಶದಲ್ಲಿ ಭಕ್ತಿಯುಳ್ಳವರಾಗಿದ್ದರು. ದರ್ಭಾಶಯನದಲ್ಲಿ ಸಿಕ್ಕಿದ ಶ್ರೀರಾಮ ಸೀತಾ ಲಕ್ಷ್ಮಣರ ವಿಗ್ರಹಗಳನ್ನು ಅಯೋಧ್ಯೆಗೆ ಬಿಜಮಾಡಿಕೊಂಡು ಹೋಗಿ, ಅಲ್ಲಿ ಸುಂದರ ದೇವಾಲಯವನ್ನು ಕಟ್ಟಿಸಿ ವಿಗ್ರಹಗಳನ್ನು ಪ್ರತಿಷ್ಠಾಪಿಸಿದರು.

೧೮೯೩ರಲ್ಲಿ ಅಮೆರಿಕಾದ ಚಿಕಾಗೋದಲ್ಲಿ ನಡೆದ ಪ್ರಪ್ರಥಮ ವಿಶ್ವ ಸರ್ವಧರ್ಮ ಸಮ್ಮೇಳನಕ್ಕಾಗಿ ಯೋಗಿ ಪಾರ್ಥಸಾರಥಿಯವರು ಹಿಂದೂ ಧರ್ಮಸಿದ್ಧಾಂತದ ಮೇಲೆ ಒಂದು ಸಂಶೋಧನಾ ರೂಪವನ್ನು ಬರೆದು, ಸರ್ವಕಾಲಕ್ಕೂ ಸರ್ವದೇಶಕ್ಕೂ ಈ ಧರ್ಮ ಅನ್ವಯಿಸುತ್ತದೆ ಎಂಬುದನ್ನು ನಿರೂಪಿಸಿ ಕಳುಹಿಸಿದ್ದರು. ಪ್ರಸಿದ್ಧ ವಕೀಲರಾಗಿದ್ದುದರ ಜೊತೆಗೆ ಇವರು ಸಂಸ್ಕೃತ, ತಮಿಳು, ತೆಲುಗು, ಕನ್ನಡ, ಫ್ರೆಂಚ್ ಮತ್ತು ಲ್ಯಾಟಿನ್ ಭಾಷಾಪಂಡಿತರಾಗಿದ್ದರು. ಮದರಾಸಿನ "ಶ್ರೀ ಸರಸ್ವತೀ" ಪುಸ್ತಕ ಭಂಡಾರಕ್ಕೆ ದಾನಿಗಳಾಗಿದ್ದು ಈ ಭಂಡಾರವನ್ನು ಹಿಂದೂ ಸಾಹಿತ್ಯದ ಸಂಪತ್ತನ್ನಾಗಿ ಮಾಡಿದರು.

ಈ ಭಂಡಾರವೇ ಪುದುಚೇರಿಗೆ ಹೊತ್ತುತಂದ ಭಂಡಾರವಾಗಿತ್ತು. ರಂಗನಾಯಕಿಯ ತಂದೆ ಮತ್ತು ಕುಟುಂಬದವರಿಗೆ ಜೀವನೋಪಾಯಕ್ಕಿಂತ ಹೆಚ್ಚಾಗಿ ಈ ಐಶ್ವರ್ಯವು ಭಾರತ ಸಂಸ್ಕೃತಿಯನ್ನುಳಿಸುವ ಸಂಕೇತದ ಸಂಪತ್ತಾಗಿತ್ತು. ಈ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಪುಸ್ತಕಗಳನ್ನು ಅಚ್ಚುಹಾಕಿ ಮಾರುವುದು, ಇಂಗ್ಲಿಷ್ ಮತ್ತು ಫ್ರೆಂಚ್ ಭಾಷೆಗೆ ತರ್ಜುಮೆ ಮಾಡಿ ವಿಕ್ರಯ ಮಾಡುವುದು ಪುದುಚೇರಿಯಲ್ಲಿ ಇವರ ಪ್ರಾರಂಭದ ಉದ್ಯೋಗವಾಯಿತು. ಫ್ರೆಂಚ್ ಭಾಷಾ ಪಾರಂಗತರಾದ ರಂಗನಾಯಕಿಯ ತಂದೆಯನ್ನು ಈಗಲೂ ಫ್ರೆಂಚ್ ವಾಧ್ಯಾರ್ ಎಂದೇ ಗುರ್ತಿಸುವರು.

ಪುದುಚೇರಿಗೆ ಬರುವುದಕ್ಕೆ ಮೊದಲು ಬ್ರಿಟಿಷರ ವಿರುದ್ಧ ಈ ಸಹೋದರರ ಮನಸ್ಸು ಎಷ್ಟು ರೋಷದಿಂದ ತುಂಬಿತ್ತೆಂದರೆ, ಸೈನ್ಯಕ್ಕೆ ಸೇರಿ ವೀರಯೋಧರಾಗಿ ಯುದ್ಧದಲ್ಲಿ ಬ್ರಿಟಿಷರನ್ನು ಸೋಲಿಸಿ ಭಾರತದಿಂದ ಓಡಿಸಬೇಕೆಂಬ ಛಲದಿಂದ ತುಂಬಿತ್ತು. ಈ ಉದ್ದೇಶ ಸಾಧನೆಗಾಗಿ ರಂಗನಾಯಕಿಯ ಚಿಕ್ಕಪ್ಪನವರಾದ ಪಾರ್ಥಸಾರಥಿಯು ದರ್ಭಾಂಗದ ಮಹಾರಾಜರ ಸಹಾಯದಿಂದ ಗುಪ್ತವಾಗಿ ನೇಪಾಳಕ್ಕೆ ತೆರಳಿದರು. ಅಲ್ಲಿ ಸೈನ್ಯಕ್ಕೆ ಸೇರಿ, ಸೈನಿಕರಲ್ಲಿ ಸ್ವಾತಂತ್ರ್ಯದ ಹುಚ್ಚೆಬ್ಬಿಸಿ ತಮಗೊಂದು ಮುಖ್ಯ ಸ್ಥಾನವನ್ನು ಗಿಟ್ಟಿಸಿಕೊಂಡರು. ಈ ಸೈನಿಕರ ಸಹಾಯದಿಂದ ಭಾರತದ ಗಡಿಯಿಂದ ಹೊರಗಿದ್ದುಕೊಂಡೇ ಸೈನ್ಯ ಸಿದ್ಧತೆ ಮಾಡಲು ಸಂಚು ಹೂಡಿದರು. ಇವರ ವೀರಾವೇಶದ ಸುಳಿವು ತಿಳಿದ ಬ್ರಿಟಿಷ್ ಪೋಲೀಸರು ಪಾರ್ಥಸಾರಥಿಯನ್ನು ಹೊಂಚು ಹಾಕಿ ಹಿಡಿದು, ಅವರ ಸಂಚನ್ನು ಮೊಳಕೆಯಲ್ಲೇ ಚಿವುಟಿ ಹಾಕಿದರು. ಉತ್ಸಾಹ ಬುಡಮೇಲಾದ ಮೇಲೆ ನೇಪಾಳದಲ್ಲಿದ್ದು ಪ್ರಯೋಜನವಿಲ್ಲವೆಂದು ಪುನಃ ಮದರಾಸಿಗೆ ಹಿಂತಿರುಗಿದ ಪಾರ್ಥಸಾರಥಿ ತಮ್ಮ ಚಳವಳಿಗಾರರ ಗೆಳೆಯರೊಂದಿಗೂ ದೇಶಭಕ್ತ ಬಂಧು ಬಾಂಧವರೊಂದಿಗೂ ಕಲೆತು ಸ್ವಾತಂತ್ರ್ಯ ಸಮರ ಸಿದ್ಧತೆಯಲ್ಲಿ ನಿರತರಾದರು. ಮದರಾಸಿನ ದೊಡ್ಡ ಅಂತಸ್ತಿನ ಹಿರಿದಾದ ಬಹು ಕುಟುಂಬಗಳಿದ್ದ ಇವರ ಮನೆ "ಗೌತಮ" ಆಶ್ರಮವಾಯಿತು.

ಗೌತಮ ಆಶ್ರಮವೆಂದು ಹೆಸರು ಬರಲು ಕಾರಣವನ್ನೂ ರಂಗನಾಯಕಿ ಹೇಳುತ್ತಾರೆ, "ನಮ್ಮ ದೊಡ್ಡಪ್ಪ ತಿರುಮಲಾಚಾರ್ಯರನ್ನು ಎಲ್ಲರೂ ಗೌತಮರೆಂದೇ ಕರೆಯುತ್ತಿದ್ದರು. ಈ ಹೆಸರನ್ನೇ ಆಶ್ರಮಕ್ಕೂ ಇಟ್ಟರು. ಕಷ್ಟಪಡಬೇಕು, ತ್ಯಾಗ ಮಾಡಬೇಕು ಎನ್ನುವುದೇ ಇವರ ತತ್ವ. ಸತ್ಯ, ಧರ್ಮ, ನೀತಿಗಾಗಿ ಹೋರಾಡುವುದೇ ಇವರ ಧ್ಯೇಯ."

ಗೌತಮಾಶ್ರಮವು ಪ್ರಸ್ಥಾನತ್ರಯೀ ಎನಿಸಿದ ಉಪನಿಷತ್ತು ಭಗವದ್ಗೀತೆ, ಬ್ರಹ್ಮ ಸೂತ್ರ ಇವುಗಳ ಅಧ್ಯಯನಕ್ಕೂ ಯೋಗ ಸಾಧನಗಳ ಅಭ್ಯಾಸ, ಹಟಯೋಗ, ರಾಜಯೋಗಗಳ ಅನುಷ್ಠಾನಕ್ಕೂ ಕೇಂದ್ರವಾಯಿತು. ಸ್ವಾತಂತ್ರ್ಯ ಚಳವಳಿಯ ಹೊಸ ತಿರುವಾದ ಸತ್ಯಾಗ್ರಹದ ಶಕ್ತಿ ಸಂಯಮದ ಸಂಸ್ಥೆಯಾಯಿತು. ಎಷ್ಟೇ ಸುವ್ಯವಸ್ಥಿತವಾಗಿದ್ದರೂ ಈ ಚಳವಳಿಗಾರರಿಗೆ ಮದರಾಸು ಅಪಾಯ ಸ್ಥಳವೆಂದೆನಿಸಿ ಬ್ರಿಟಿಷರ ಕೈಗೆ ಸಿಕ್ಕಿ ಸೆರೆ ಸೇರುವುದಕ್ಕೆ ಬದಲು ಫ್ರೆಂಚರ ಆಡಳಿತದಲ್ಲಿದ್ದ ಪುದುಚೇರಿಗೆ ಹೋಗಿ ತಮ್ಮ ಚಳವಳಿ ಕಾರ್ಯಕ್ರಮವನ್ನು ಮುಂದುವರಿಸಲು ನಿರ್ಧಾರ ಮಾಡಿದರು. ಮದರಾಸಿನ ವರೌಂಟ್ ರೋಡಿನಲ್ಲಿ ಸ್ಥಾಪಿಸಿದ್ದ ಜನರಲ್

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ನೆಯಿಲ್ ಎಂಬ ಬ್ರಿಟಿಷ್ ಅಧಿಕಾರಿಯ ವಿಗ್ರಹವನ್ನು ತೆಗೆದುಹಾಕಲು ಸತ್ಯಾಗ್ರಹ ಹೂಡಿದ್ದ ಪಟ್ಟಣದ ಈ ಸಹೋದರರ ಮೇಲೆ ಬ್ರಿಟಿಷರ ಕಣ್ಣಿತ್ತು.

ಪುದುಚೇರಿಯಲ್ಲಿ ತಮಿಳು ಭಾಷೆಯಲ್ಲಿ ಹೊರಡಿಸಿದ "ಇಂಡಿಯಾ" ಎಂಬ ಪತ್ರಿಕೆ ಈ ಮೂವರು ಸಹೋದರರ ಸಾಮರ್ಥ್ಯ, ಧೈರ್ಯ, ಸಾಹಸವನ್ನು ನಿರೂಪಿಸಿತು. ಈ ಪತ್ರಿಕೆಯಿಂದ ಆಕರ್ಷಿಸಲ್ಪಟ್ಟ ಸುಬ್ರಹ್ಮಣ್ಯ ಭಾರತಿಯವರು ಪತ್ರಿಕೆಯು ಜನಾನುರಾಗವಾಗಲು ಸಹಾಯ ಮಾಡಿದರು. ಸ್ವಾತಂತ್ರ್ಯದ ಕಿಡಿ ಎಬ್ಬಿಸುವ ಈ ಪತ್ರಿಕೆಯೇ ಪಟ್ಟಣದ ಸಹೋದರರನ್ನು ಅರವಿಂದ ಘೋಷರಿಗೂ ಪರಿಚಯ ಮಾಡಿಕೊಟ್ಟಿತು.

ಕಲ್ಕತ್ತಾದಲ್ಲಿ "ಕರ್ಮಯೋಗಿ" ಎಂಬ ಆಧ್ಯಾತ್ಮಿಕ ಪತ್ರಿಕೆಯನ್ನು ಹೊರಡಿಸುತ್ತಿದ್ದ ಅರವಿಂದರನ್ನೂ ಬ್ರಿಟಿಷರು ಕಟ್ಟುಪಾಡು ಮಾಡಿ ಹಿಂದೂ ಸಂಸ್ಕೃತಿಯ ಪುನರುತ್ಥಾನಕ್ಕೆ ಅಡ್ಡಿ ಬರುತ್ತಿರುವರೆಂದು ತಿಳಿದ ಸಹೋದರರು ಅರವಿಂದರನ್ನು ಪುದುಚೇರಿಗೆ ಬರಲು ಆಹ್ವಾನಿಸಿದರು. ಪುದುಚೇರಿಯಲ್ಲಿ ಅಷ್ಟಾಗಿ ಬಂಧನವನ್ನನು ಭವಿಸಬೇಕಾಗಿಲ್ಲವೆಂದು ತಿಳಿದು ಅರವಿಂದ ಘೋಷರು ಭಾರತಿಯಾರ್‌ರವರ ಇಚ್ಛೆಯನ್ನು ಅನುಮೋದಿಸಿ ಪುದುಚೇರಿಗೆ ಬಂದು ನೆಲೆಸಿದರು. ಕ್ರಮೇಣ ಒಂದು ಆಶ್ರಮವನ್ನೂ ಕಟ್ಟಿದರು. ಹಟಯೋಗಿ ಸಹೋದರರ ಜೊತೆಗೆ ದೇಶಭಕ್ತ ಸಾಹಿತ್ಯ ರತ್ನವಾದ ಭಾರತಿಯವರೂ, ಸಂಸ್ಕೃತಿಯ ಪುನಶ್ಚೇತನವಾದ ಅರವಿಂದ ಘೋಷರೂ ಒಟ್ಟಿಗೆ ಕಲೆತಂತಾಯಿತು.

ಇಂತಹ ವಾತಾವರಣದಲ್ಲಿ ಚಿಕ್ಕ ವಯಸ್ಸಿನಿಂದ ಬೆಳೆದ ರಂಗನಾಯಕಿಯ ಮನಸ್ಸು ಸದಾ ದೇಶದ ಸ್ವಾತಂತ್ರ್ಯಕ್ಕಾಗಿ ಹಂಬಲಿಸುತ್ತಿತ್ತು. ಪುದುಚೇರಿಯಲ್ಲಿದ್ದ ಹನ್ನೆರಡು ವರ್ಷ ಕ್ರಾಂತಿಕಾರೀ ದಿನಗಳು ರಂಗನಾಯಕಿಯ ಎಳೆಯ ಮನಸ್ಸಿನ ಮೇಲೆ ಉತ್ತಮ ಪ್ರಭಾವ ಬೀರಿದವು. ಪುಟ್ಟ ಹುಡುಗಿ ರಂಗನಾಯಕಿ ಉಜ್ವಲ ದೇಶಪ್ರೇಮಿಯಾದಳು. ತಂದೆ ಮತ್ತು ತಾತ ಭಾಗವಹಿಸುತ್ತಿದ್ದ ಚಳವಳಿ ಕಾರ್ಯಕ್ರಮಗಳಲ್ಲಿ ತಾನೂ ಭಾಗಿಯಾಗಲು ಹಾತೊರೆಯುವಳು. ಪತ್ರಿಕೆ ಅಚ್ಚಾಗುವಾಗ, ಕರಪತ್ರಗಳನ್ನು ಗುಪ್ತವಾಗಿ ತಲುಪಿಸುವಾಗ ಸಡಗರ ಪಡುವಳು. ಪತ್ರಗಳನ್ನು ಟಪಾಲಿಗೆ ಹಾಕುವುದು, ಬಂದ ಪತ್ರಗಳನ್ನು ಜೋಪಾನವಾಗಿ ತಂದೆಗೆ ತಲುಪಿಸುವುದು ರಂಗನಾಯಕಿಯ ಜವಾಬ್ದಾರಿ ಕೆಲಸವಾಗಿತ್ತು.

ರಂಗನಾಯಕಿ ಶಾಲೆ ಕಂಡವಳಲ್ಲ. ತಾತನ ಹತ್ತಿರವೇ ಪಾಠ ಪ್ರವಚನ. ರಾಮಾಯಣ, ಮಹಾಭಾರತ, ಭಗವದ್ಗೀತೆಯ ಅಭ್ಯಾಸ ಮನೆಯಲ್ಲೇ. ಸಂಸ್ಕೃತ, ತಮಿಳು, ಹಿಂದೀ ಭಾಷೆಗೆ ಪ್ರಾಧಾನ್ಯತೆ. ಇಂಗ್ಲಿಷ್ ಔಷಧಿಯನ್ನು ಮುಟ್ಟುವುದಿಲ್ಲ, ಇಂಗ್ಲಿಷ್ ಭಾಷೆಯನ್ನು ಕಲಿಯುವುದಿಲ್ಲವೆಂದು ಹಟತೊಟ್ಟಳು ರಂಗನಾಯಕಿ.

ನೀತಿ ಪಾಠಗಳ ಬೋಧನೆಯೂ ನಡೆಯುತ್ತಿತ್ತು. ಕೆಲಸದ ಆಳುಗಳನ್ನು ಗೌರವದಿಂದ ಕಾಣಬೇಕು. ಅವರನ್ನು ರಾಮು, ಕೃಷ್ಣ, ಲಕ್ಷ್ಮಿ ಎಂಬ ಹೆಸರಿನಿಂದಲೇ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಕರೆಯಬೇಕು. ಆಳುಗಳ ಜೊತೆಗೆ ತಾವೂ ಕೆಲಸ ಮಾಡಬೇಕು. ಈ ಪಾಠ ಅಭ್ಯಾಸ ದಲ್ಲೂ ಇತ್ತು.

ಫ್ರೆಂಚ್ ಕಡೆಯ ಸಿ ಐ ಡಿ ಯೊಬ್ಬ ರಂಗನಾಯಕಿಯವರ ಕುಟುಂಬದ ಮೇಲೆ ಕಾವಲಿರುತ್ತಿದ್ದ. ಫ್ರೆಂಚರ ವಿರೋಧವಾಗಿ ಸನ್ನಾಹ ನಡೆದಾಗ ಇವರನ್ನು ಹಿಡಿ ಯಲು ಅವನಿಗೆ ಆಜ್ಞೆಯಾಗಿತ್ತು. ತಮ್ಮ ಹಿಂದೆ ಮುಂದೆ ಬರುತ್ತಾ ಊಟ ನಿದ್ರೆ ಬಿಟ್ಟು ಬಳಲುತ್ತಿದ್ದ ಆ ಸಿ ಐ ಡಿ ಯನ್ನು ಕಂಡು ಕನಿಕರಪಟ್ಟು ರಂಗನಾಯಕಿಯ ಮನೆಯವರು ಅವನನ್ನೂ ತಮ್ಮೊಡನೆ ಊಟಕ್ಕೆ ಕರೆಯುತ್ತಿದ್ದರು.

ಸುಬ್ರಹ್ಮಣ್ಯ ಭಾರತಿಯವರಿಗೆ ಈ ಕುಟುಂಬದ ಸಂಸ್ಕೃತಿ ಬಹಳ ಮೆಚ್ಚಿಗೆ ಯಾಯಿತು. ಆಗಾಗ್ಗೆ ಇವರೊಡನೆ ಸಂಪರ್ಕವಿಟ್ಟುಕೊಂಡು ಉತ್ತೇಜನ ಕೊಡು ತ್ತಿದ್ದರು. ರಂಗನಾಯಕಿಗೆ ಭಾರತ ಸಂಸ್ಕೃತಿಯ ಜೊತೆಗೆ ಭಾರತಿಯಾರ್‌ರವರು ದೇಶಭಕ್ತಿಯನ್ನೂ ಮಾನವ ಸರಿಸಮಾನತೆಯನ್ನೂ ಉಪದೇಶಿಸುತ್ತಿದ್ದರು.

ಈವತ್ತಿಗೂ ಅವರ ಮಾತುಗಳು ನನ್ನ ಮನದಲ್ಲಿ ಊರಿಬಿಟ್ಟಿವೆ ಎನ್ನುತ್ತಾರೆ ರಂಗನಾಯಕಿ, "ನಮಗಂತೂ ಸುಬ್ರಹ್ಮಣ್ಯ ಭಾರತಿಗೂ ಮಹಾತ್ಮಾ ಗಾಂಧಿಗೂ ವ್ಯತ್ಯಾಸವೇ ಗೊತ್ತಾಗುತ್ತಿರಲಿಲ್ಲ. ಇಬ್ಬರ ಧ್ಯೇಯವೂ ಒಂದೇ ಆಗಿತ್ತು. ಭಾರತ ದಲ್ಲಿ ಬಡವರೇ ಇರಕೂಡದೆಂದು ಭಾರತಿಯಾರ್ ನಮಗೆ ಬೋಧಿಸುತ್ತಿದ್ದರು. ಇವರಿಂದಾಗಿ ಪುದುಚೇರಿಯ ಛತ್ರಗಳಲ್ಲಿ ಬಡವ ಭಿಕ್ಷುಕರಿಗೆಲ್ಲಾ ಗಂಜಿಯೂಟ ನಡೆಯುತ್ತಿತ್ತು.

ಇಂತಹದೊಂದು ಚಿತ್ರಣ ನಮ್ಮೆದುರೇ ಇರುವಾಗ ಪುದುಚೇರಿಯಲ್ಲಿ ಫ್ರೆಂಚರ ಮಹಾಶಯನೆನಿಸಿದ ಡೂಪ್ಲೆಯ ಕಂಚಿನ ಪ್ರತಿಮೆಗೆ ಅದ್ದೂರಿಯಿಂದ ಸಮಾರಂಭ ನಡೆಯುತ್ತಿತ್ತು. ವಿಗ್ರಹದ ಸುತ್ತಲೂ ಅಲಂಕಾರ, ಕಂಚಿನ ಕಂಬಗಳ ವೈಭವ, ಬ್ಯಾಂಡ್ ಸೆಟ್ ಹಾಡುಗಳು. ಅಬ್ಬ! ಈ ಉತ್ಸವದ ಉತ್ಸಾಹವನ್ನು ಕಂಡಾಗಲೆಲ್ಲಾ ಡೂಪ್ಲೆಯ ವಿಗ್ರಹವನ್ನು ಕಿತ್ತು ಬಿಸಾಡುವಷ್ಟು ನಮಗೆ ಕೋಪ ಬರುತ್ತಿತ್ತು. ನಮ್ಮನ್ನು ಬಡವರನ್ನಾಗಿ ಮಾಡಿ ಈ ಪರಕೀಯರು ಐಶ್ವರ್ಯವಂತರಾಗಿದ್ದಾರೆ ಎಂದು ನಮಗೆ ದುಃಖವಾಗುತ್ತಿತ್ತು"—ಎನ್ನುತ್ತಾರೆ ರಂಗನಾಯಕಿ.

ಫ್ರೆಂಚರು ಯಾವ ರೀತಿ ರಕ್ಷಣೆ ಕೊಟ್ಟಿದ್ದರು ಎಂಬ ಪ್ರಶ್ನೆಗೆ ರಂಗನಾಯಕಿ ಯವರ ಉತ್ತರ ಬಹಳ ಸ್ಪಷ್ಟ—"ಫ್ರೆಂಚರಾದರೇನು ? ಅವರೂ ನಮಗೆ ಪರಕೀ ಯರೇ. ಬಹು ನಾಜೂಕಾದ ಫ್ರೆಂಚ್ ಸಿಲ್ಕ್ ಬಟ್ಟೆಗಳು ಆಗ ಸಿಗುತ್ತಿದ್ದವು. ಆದರೆ ನಾವು ಅದನ್ನು ಉಡುತ್ತಿರಲಿಲ್ಲ. ಫ್ರೆಂಚರೂ ನಮ್ಮ ವೈರಿಗಳೇ. ಆದರೆ ಬ್ರಿಟಿಷರಷ್ಟು ಇವರು ನಯವಂಚಕರಾಗಿರಲಿಲ್ಲ. ಬ್ರಿಟಿಷರಂತೆ ನಮ್ಮನ್ನು ಅಧೀನ ಪಡಿಸಿಕೊಂಡಿರಲಿಲ್ಲ. ಫ್ರೆಂಚರು ಬ್ರಿಟಿಷರ ವೈರಿಗಳಾದ್ದರಿಂದ ಬ್ರಿಟಿಷರ ವಿರುದ್ಧ ನಡೆಯುತ್ತಿದ್ದ ನಡವಳಿಕೆಗೆ ಅಷ್ಟಾಗಿ ಅಡ್ಡಿಬರುತ್ತಿರಲಿಲ್ಲ. ನಾವು ಫ್ರೆಂಚರ ನೆರಳಿ ನಲ್ಲಿದ್ದುದರಿಂದ ಜೈಲಿಗೆ ಹೋಗುವುದು ತಪ್ಪಿತು."

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಹನ್ನೆರಡು ವರ್ಷದ ಹುಡುಗಿಗೆ ಅಂದಿನ ಪರಿಸ್ಥಿತಿಯ ಪರಿಜ್ಞಾನ ಇಷ್ಟರ ಮಟ್ಟಿಗೆ ಬೆಳೆದಿತ್ತೆಂದರೆ, ಅವಳು ಬೆಳೆದ ಪರಿಸರದ ಪ್ರಭಾವವನ್ನು ನಾವು ಊಹಿಸಬಹುದು.

ರಂಗನಾಯಕಿಯವರ ವಯಸ್ಸಾದ ಅಜ್ಜಿಯ ಬಲಾತ್ಕಾರದಿಂದ ರಂಗನಾಯಕಿಯ ಕುಟುಂಬ ಪುದುಚೇರಿಯಿಂದ ೧೯೨೦ರಲ್ಲಿ ಮತ್ತೆ ಮದರಾಸನ್ನು ಹೊಕ್ಕಿತು. ಇವರು ದ್ವಿಗುಣ ದೇಶಭಕ್ತಿ ಸ್ಫೂರ್ತಿಯನ್ನು ತಮ್ಮ ನರನಾಡಿಗಳಲ್ಲಿ ತುಂಬಿಸಿಕೊಂಡು ಬಂದಿದ್ದರು. ವಿದ್ಯಾರ್ಹತೆ ಇದ್ದರೂ ಇವರು ಬ್ರಿಟಿಷ್ ಸರ್ಕಾರದಲ್ಲಿ ಕೆಲಸಕ್ಕೆ ಸೇರಲಿಲ್ಲ. ಟ್ರಿಪ್ಲಿಕೇನಿನ ಗೌತಮಾಶ್ರಮ ರಾಷ್ಟ್ರೀಯ ಚಳವಳಿಯ ಕೇಂದ್ರವಾಯಿತು.

ಮದರಾಸಿನಲ್ಲಿ ರಾಷ್ಟ್ರನಾಯಕರ ಭಾಷಣಗಳನ್ನು ಕೇಳುವ ಅವಕಾಶವಿರುತ್ತಿತ್ತು. "ಮಂಟಪಗಳಲ್ಲಿ ದೇವಾಲಯದ ಸಭಾಂಗಣಗಳಲ್ಲಿ ಎಲ್ಲೆಲ್ಲೂ ದೇಶಭಕ್ತಿಯನ್ನುಕ್ಕಿಸುವ ಭಾಷಣಗಳ ಏರ್ಪಾಡಾಗುತ್ತಿತ್ತು. ಗಾಂಧಿ, ನೆಹರು, ಅರವಿಂದ ಘೋಷ್, ಭಾರತಿಯಾರ್–ಇವರುಗಳ ಭಾಷಣ ಎಂತಹ ಭಾರತೀಯನನ್ನೂ ತಟ್ಟಿ ಎಬ್ಬಿಸುವಂತಿತ್ತು. ಸರಳಾ ಬೆನ್ ಬಹಳ ಚನ್ನಾಗಿ ಕಥೆಯ ರೂಪದಲ್ಲಿ ದೇಶದ ಕಡೆಗೆ ನಮ್ಮ ಮನಸ್ಸನ್ನು ಸೆಳೆಯುತ್ತಿದ್ದರು. ಇವರಂತೆಯೇ ನಾವೂ ಒಬ್ಬೊಬ್ಬರೂ ನಾಯಕ ನಾಯಕಿಯರಾಗಿ ಜನರನ್ನು ಚಳವಳಿಗೆ ಸಂಘಟಿಸುತ್ತಿದ್ದೆವು"—ಎನ್ನುತ್ತಾರೆ ಶ್ರೀಮತಿ ರಂಗನಾಯಕಿ.

"ಆಟವಾಡುವಾಗಲೂ ನಾವು ದೇಶಭಕ್ತಿಯ ವಿಷಯವನ್ನೇ ತೆಗೆದುಕೊಳ್ಳುತ್ತಿದ್ದೆವು. ದೊಡ್ಡ ಆಫೀಸಿನಲ್ಲಿ ಬ್ರಿಟಿಷ್ ಅಧಿಕಾರಿ ಕುಳಿತಿರುವುದು. ಅವನನ್ನು ನಾವು ಕೊಂದು ಹಾಕಿ ಸ್ವತಂತ್ರವಾಗುವುದು. ಸಂತೋಷದಿಂದ ನಾವು ಭಾರತೀಯರು ಎಂದು ನಲಿದಾಡುವುದು. ಇದೇ ನಮ್ಮ ಆಟದ ವೈಖರಿಯಾಗಿತ್ತು" ರಂಗನಾಯಕಿ ತಮ್ಮ ಚಿಕ್ಕ ವಯಸ್ಸಿನ ಆಟವನ್ನು ನೆನೆದು.

"ಸೂರ್ಯೋದಯಕ್ಕೆ ಸರಿಯಾಗಿ ಸಮುದ್ರ ತೀರಕ್ಕೆ ಹೋಗುತ್ತಿದ್ದೆವು. "ಶುಭ್ರ ಜ್ಯೋತ್ಸ್ನಾ"ಎಂದು ಹಾಡುತ್ತಾ ಆಹಾಡಿನ ಅರ್ಥವನ್ನು ನಿಜವಾಗಿ ಅನುಭವಿಸುತ್ತಾ, ಸಮುದ್ರದಂಚಿನಿಂದ ತೇಲಿ ಮೇಲೆ ಮೇಲೆ ಬರುತ್ತಿದ್ದ ಸ್ವಚ್ಛ ಸೂರ್ಯ ಮಂಡಲವನ್ನು ನೋಡಿ ಆನಂದಿಸಿ ಸೂರ್ಯ ನಮಸ್ಕಾರ ಮಾಡಿ ಮನೆಗೆ ಬರುತ್ತಿದ್ದೆವು. ಮನೆಯಲ್ಲಿ ನಿಯಮಬದ್ಧ ಶಿಸ್ತಿನ ಜೀವನ ಕ್ರಮವಿರುತ್ತಿತ್ತು. ದೇವರ ಫೋಟೋಗಳಿಗಿಂತ ಮಿಗಿಲಾಗಿ ನಮ್ಮ ಮನೆಯಲ್ಲಿ ಭಾರತ ಮಾತೆಯ ಫೋಟೋ ಇತ್ತು. ಚರಕದಲ್ಲಿ ನೂಲು ತೆಗೆಯುವುದು ಪ್ರತಿದಿನದ ಮುಖ್ಯ ಕೆಲಸವಾಗಿತ್ತು. ನಾವೇ ತೆಗೆದ ನೂಲಿನಿಂದ ಮಾಡಿದ ಬಟ್ಟೆಯ ಮೇಲೆ ನಮಗೆ ಬಹಳ ಪ್ರೀತಿ. ಸಾಯಂಕಾಲವಾದರೆ ದೇವಸ್ಥಾನಕ್ಕೆ ಹೋಗಿ ದೀಪಹಚ್ಚಿ ಬರುತ್ತಿದ್ದೆವು"–ಎಂದು ಹೇಳಿ ತಮ್ಮ ಬಾಲ್ಯದ ದಿನಗಳನ್ನು ವಿವರಿಸುವರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



"ಗಾಂಧಿಯ ಹಾಗೆಯೇ ಭಾರತಿಯಾರ್ ಸತ್ಯವನ್ನೇ ನುಡಿಯಿರಿ. ಸತ್ಯದಿಂದಲೇ ಜಯಿಸಿ. ನಿಮ್ಮ ಕೆಲಸದಲ್ಲಿ ನಿಮಗೆ ನಂಬಿಕೆ ಇರಲಿ ಎಂದು ಬಾರಿ ಬಾರಿಗೂ ಹೇಳುತ್ತಿದ್ದರು. ಅದರಂತೆಯೇ ನಮಗೆ ಸ್ವತಂತ್ರ ಬಂದೇ ಬರುತ್ತದೆ ಎಂಬ ನಂಬಿಕೆಯಿಂದ ಕರ್ತವ್ಯ ನಿರತರಾಗುತ್ತಿದ್ದೆವು. ಇಂಡಿಯನ್ ರಿಪಬ್ಲಿಕ್ ಎಂಬ ಪತ್ರಿಕೆಯನ್ನು ನಮ್ಮ ತಂದೆಯವರು ಹೊರಡಿಸಿದ ಐವತ್ತು ವರ್ಷಕ್ಕೆ ಸರಿಯಾಗಿ ಸತ್ಯವಾಗಿಯೂ ಇಂಡಿಯಾ ದೇಶ ರಿಪಬ್ಲಿಕ್ ಎನಿಸಿಕೊಂಡಿತು. ನಾವು ಸ್ವತಂತ್ರವನ್ನು ಕಂಡೇ ಕಂಡೆವು"–ಎಂದು ಹರ್ಷೋತ್ಸಾಹಿಯಾಗುತ್ತಾರೆ ರಂಗನಾಯಕಿ.

"ಬಾಪೂಜಿ ಉಪವಾಸವಿದ್ದಾಗಲೆಲ್ಲಾ ನಮ್ಮ ತಂದೆಯೂ ಏನೂ ತಿನ್ನದೆ ಉಪವಾಸವಮಾಡುತ್ತಿದ್ದರು. ನಮ್ಮ ತಾಯಿ ಎಷ್ಟು ಹೇಳಿದರೂ ಕೇಳುತ್ತಿರಲಿಲ್ಲ. ಗಾಂಧಿ ಉಪವಾಸ ನಿಲ್ಲಿಸಿದ ಸುದ್ದಿ ಬಂದಾಗಲೇ ನಮ್ಮ ತಂದೆ ಊಟ ಮಾಡುತ್ತಿದ್ದುದು"–ಎನ್ನುತ್ತಾರೆ ರಂಗನಾಯಕಿ,

ಬಾಪೂಜಿಯನ್ನು ಕಂಡರೆ ರಂಗನಾಯಕಿಯ ತಂದೆಯವರಿಗಿದ್ದ ಭಕ್ತಿಯನ್ನು ಪ್ರೀತಿಯನ್ನೂ ತೋರಿಸುವ ಈ ಸಂಗತಿ ಮನಮುಟ್ಟುವಂತಾಗುತ್ತದೆ.

ಗೌರೂರಿನ ಪರಿಸರ ರಂಗನಾಯಕಿಯ ಈ ವಿಧದ ವ್ಯಕ್ತಿತ್ವವನ್ನು ರೂಪಿಸಿದರೆ, ಇವರು ವಿವಾಹವಾಗಿ ಸೇರಿದ ಮನೆ "ಆಜೀ" ವಂಶವು ಸಾತ್ವಿಕತೆ, ನಿಷ್ಠೆ, ದಯೆ, ಕರುಣೆ ಅದರಲ್ಲೂ ಮುಖ್ಯವಾಗಿ ಪ್ರಾಣಿದಯೆಗೆ ಪ್ರಖ್ಯಾತವಾದುದು. ಇವರೂ ಖಾದಿ ಪ್ರಿಯರೇ, ಆದರೆ ಆಜೀ ಮನೆತನದವರು ನೂಲಿನ ಬಟ್ಟೆಯನ್ನು ಇಷ್ಟಪಡುತ್ತಿದ್ದುದು ಬೇರೆಯ ಕಾರಣಕ್ಕಾಗಿ. ಮದುವೆಯಾಗಿ ಬಂದ ಹೆಣ್ಣು ಮಕ್ಕಳಿಗೂ ಹದಿನೆಂಟು ಮೊಳದ ನೂಲಿನ ಸೀರೆಯುಡಬೇಕೆಂಬುದೇ ನಿಯಮವಾಗಿತ್ತು. ರೇಷ್ಮೆ ಬಟ್ಟೆಯ ವೈರಿಗಳಾಗಲು ಕಾರಣ, ರೇಷ್ಮೆ ಹುಳುಗಳನ್ನು ಹಿಂಸಿಸಿದ ನೋವು ಆ ನೂಲಿನಲ್ಲಿ ಅಡಗಿತ್ತು. ಈ ಮನೆತನದವರೊಬ್ಬರಾದ ಶ್ರೀ ಎಂ. ಎ. ನಾರಾಯಣ ಅಯ್ಯಂಗಾರ್ ಮೈಸೂರು ರಾಜ್ಯದ ಶಿಕ್ಷಣ ಇಲಾಖೆಯಲ್ಲಿ ಅತ್ಯುನ್ನತ ಅಧಿಕಾರಿಯಾಗಿದ್ದರು. ಆಗಿನಕಾಲದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ರಾಜ್ಯಕ್ಕೆ ಒಬ್ಬರೇ ಡೆಪ್ಯುಟಿ ಡೈರೆಕ್ಟರ್ ಇದ್ದುದು. ಇಂತಹ ಗಣ್ಯ ಸ್ಥಾನಗಳಿಸಿ ಅತ್ಯಂತ ತೃಪ್ತಿಕರವಾದ ಸೇವೆಯನ್ನು ಸಲ್ಲಿಸಿದುದಲ್ಲದೆ ಆಧ್ಯಾತ್ಮಿಕ ನೀತಿ ಮೌಲ್ಯಗಳನ್ನು ಕಾಪಾಡಿ ಜನರನ್ನು ತಿದ್ದಲು ಗೌರಿಬಿದನೂರಿನಲ್ಲಿ "ನವ ಭಾರತ ಆಶ್ರಮ"ವನ್ನು ಸ್ಥಾಪಿಸಿದರು.

ಶಾಂತಿ ಮಾರ್ಗ, ಗೀತೆಯ ಸಂದೇಶ, ಭಗವದ್ಗೀತೆಯಲ್ಲಿ ಭಕ್ತಿಯೋಗ, ನಾಸ್ತಿಕವಾದಿಗಳಿಗೆ ಭಾರತೀಯ ವೇದಾಂತಿಗಳ ಪ್ರತಿವಾದ- ಇವು ಇವರ ಕೆಲವು ಪುಸ್ತಕಗಳು. ಇವರ ಪುತ್ರರಾದ ಶ್ರೀನಿವಾಸ ಅಯ್ಯಂಗಾರ್ ಶಿಕ್ಷಣ ಇಲಾಖೆಯಲ್ಲಿ ಶಿಕ್ಷಕರಾಗಿದ್ದು ಸಮಾಜ ಸೇವೆ ಸಲ್ಲಿಸಿದುದಕ್ಕೆ ಸರ್ಕಾರ ಇವರನ್ನು ಗುರುತಿಸಿ ರಾಷ್ಟ್ರ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಪ್ರಶಸ್ತಿ ನೀಡಿದೆ. ಇಂತಹ ಸೇವಾಸಕ್ತರಾಗಿ, ಸರಳ ಜೀವನ, ಉತ್ಕೃಷ್ಟ ಚಿಂತನೆಗೆ ಹೆಸರಾದ ಆಜೀ ವಂಶಕ್ಕೆ ಸೇರಿದ ರಂಗನಾಯಕಿಯ ಜೀವನ ದೈವ ಭಕ್ತಿಯಲ್ಲೂ ಹಿರಿಯರ ಸೇವೆಯಲ್ಲೂ ಕಳೆಯಿತು.

"ಮದುವೆಯಾಗಿ ನಾನು ಕರ್ನಾಟಕಕ್ಕೆ ಬಂದಾಗ, ಮದರಾಸಿನಲ್ಲಿರುವಷ್ಟು ಚಳವಳಿಯ ಬಿಸಿ ವಾತಾವರಣ ಕರ್ನಾಟಕದಲ್ಲಿಲ್ಲವೆನ್ನಿಸಿತು. ಅದೂ ಅಲ್ಲದೆ, ಕರ್ನಾಟಕಕ್ಕೆ ಸಂಘಟನೆಯ ಬಿಸಿ ತಾಗಬೇಕಾದರೆ ಮುಖಂಡರ ಅವಶ್ಯಕತೆ ಇತ್ತು. ೧೯೨೦ಕ್ಕೆ ಮೊದಲೇ ಮದರಾಸು ದಕ್ಷಿಣ ನಾಡಿನಲ್ಲಿ ಚಳವಳಿಯ ಪ್ರಥಮ ಪ್ರಮುಖ ಸ್ಥಾನವಾಗಿತ್ತು, ಈ ಕಾರಣದಿಂದಲೂ ಮತ್ತು ನನ್ನ ಅತ್ತೆಯ ಮನೆಯವರು ದೇಶದ ಆಂದೋಲನದಲ್ಲಿ ನಾನು ಭಾಗವಹಿಸಲು ಇಷ್ಟಪಡದಿದ್ದುದರಿಂದಲೂ ನನ್ನ ದೇಶ ಸೇವಾ ಕಾರ್ಯ ಅಷ್ಟಕ್ಕೆ ನಿಂತು, ಜನಸೇವಾಕಾರ್ಯ ಶುರುವಾಯಿತು"– ಎನ್ನುತ್ತಾರೆ ರಂಗನಾಯಕಿ.

ಮಳೂರಿನಲ್ಲಿ ಮರಳು ತೋಡಿ ಚಿಲುಮೆಯಲ್ಲಿ ಸಿಹಿನೀರು ತೆಗೆಯುವುದು ಒಂದು ಕ್ರಮವಾಗಿತ್ತು. ರಂಗನಾಯಕಿ ಇಂತಹ ಕಷ್ಟದ ಗೃಹಕೃತ್ಯದಲ್ಲೂ ಆಸಕ್ತಿ ವಹಿಸಿ ಮಾಡುತ್ತಿದ್ದರು. ಇವರ ಪತಿ ಸಮಾಜದ ಪ್ರತಿಷ್ಠಿತ ಉದ್ಯೋಗವೆನಿಸುವ ಡಾಕ್ಟರಾಗಿದ್ದರು. ವೆಟರ್ನರಿ ಡಾಕ್ಟರಾಗಿದ್ದ ಇವರು ಕರ್ನಾಟಕದ ಅನೇಕ ಸ್ಥಳಗಳಲ್ಲೂ, ಜೋಧ್‌ಪುರದಲ್ಲೂ ಸೇವೆಸಲ್ಲಿಸಿದ ಕಡೆಗೆಲ್ಲಾ ರಂಗನಾಯಕಿಯೂ ಹೋಗಿ ಪತಿಯ ಜೊತೆಯಲ್ಲಿದ್ದು ಅಲ್ಲಲ್ಲಿಯ ಸಂಪ್ರದಾಯಕ್ಕನುಗುಣವಾಗಿದ್ದರು.

ಜೋಧ್‌ಪುರದ ವಿಷಯ ಹೇಳುವಾಗ, ಅಲ್ಲಿಯ ಅಂದಿನ ಹೆಂಗಸರ ಸ್ಥಿತಿಯನ್ನು ನಾವು ಚಿತ್ರಿಸಿಕೊಳ್ಳಬಹುದು, ಹೆಂಗಸರು ಹೊರಗೆ ಹೋಗಬೇಕಾದರೆ ಮುಸುಕು ಹಾಕಿದ ಮೇನಾದಲ್ಲಿ ಅಥವ ಪರದೆ ಎಳೆದ ಕುದುರೆ ಗಾಡಿಯಲ್ಲಿ ಕುಳಿತು ಹೋಗಬೇಕಾಗಿತ್ತು. ಮನೆಯ ಮುಂಬಾಗಿಲ ಮುಂದೆ ಒಂದು ಅಡ್ಡಗೋಡೆ. ಈ ಗೋಡೆಯ ಹಿಂದೆ ನಿಂತೇ ಹೆಂಗಸು ಮಾತಾಡತಕ್ಕದ್ದು. ಗಂಡಸರು ಮನೆಯಲ್ಲಿಲ್ಲದಿದ್ದಾಗ ಯಾರಾದರೂ ಬಂದರೆ ಗೋಡೆಯ ಹಿಂದೆ ಮುಖ ಮರೆಸಿಕೊಂಡು ಮಾತಾಡಬೇಕು. ಪರಪುರುಷರನ್ನು ನೋಡುವಂತಿರಲಿಲ್ಲ.

"ಡಾಕ್ಟರನ್ನು ನೋಡಲು ನಮ್ಮ ಮನೆಗೆ ಅನೇಕರು ಬರುತ್ತಿದ್ದರು. ಡಾಕ್ಟರ್ ಪತ್ನಿಯಾದ ನಾನು ಗೋಡೆಯ ಮರೆಯಲ್ಲಿ ನಿಂತು ಡಾಕ್ಟರ್ ಮನೆಯಲ್ಲಿಲ್ಲ ಎಂದು ಎಂದು ಹೇಳುವುದಷ್ಟೇ ಕೆಲಸವಾಗಿತ್ತು"–ಎಂದು ಹೇಳುತ್ತಾ ರಂಗನಾಯಕಿ ನಗುತ್ತಾರೆ.

ಮದರಾಸಿನಲ್ಲಿದ್ದಾಗ ಚಳವಳಿಯ ಗುಂಪಿಗೆ ನಾಯಕಿಯಾಗಿ ಮೆರವಣಿಗೆ ಹೊರಡುತ್ತಿದ್ದರು. ಮದುವೆಯಾದ ಮೇಲೆ ಮಳೂರಿಗೆ ಬಂದು ಗೃಹಕೃತ್ಯದಲ್ಲಿ ಮುಳುಗಿ ಮನೆಯೊಳಗಿರುತ್ತಿದ್ದರು. ಜೋಧ್‌ಪುರದಲ್ಲಿ ಮುಖವನ್ನೂ ತೋರಿಸದೆ ಘೋಷಾ ಅನುಸರಿಸಿದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



"ಮದುವೆಯಾದ ಮೇಲೆ ನಾನು ಓದುವುದು, ಬರೆಯುವುದರಲ್ಲೇ ಹೆಚ್ಚು ಕಾಲ ಕಳೆಯುತ್ತಿದ್ದೆ. ಭಾರತಿಯವರ ಮುತ್ತಿನಂತಹ ಮಾತುಗಳನ್ನು ನೆನೆದು ಬರೆದಿದ್ದೇನೆ ಇಂದಿರಾಜಿ, ಸರಳಾ ಬೆನ್ ಗಾಂಧಿ, ನೆಹರೂ ಇವರನ್ನು ಸ್ಮರಿಸಿ ಬರೆದಿದ್ದೇನೆ. ವಿವೇಕಾನಂದ, ಅರವಿಂದರನ್ನು ವಂದಿಸಿ ಬರೆದಿದ್ದೇನೆ. ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ತಂದೆ ತಾತಂದಿರು ನನ್ನ ಚಿಕ್ಕ ವಯಸ್ಸಿನಲ್ಲಿ ಮನನಾಟುವಂತೆ ಹೇಳಿದ್ದ ರಾಮಾಯಣ, ಮಹಾಭಾರತ, ಭಗವದ್ಗೀತೆಯ ಅಮೃತ ಸಾರವನ್ನು ಆಗಾಗ ಸ್ವಾದಿಸುತ್ತಾ ಕಾಲ ಕಳೆಯುತ್ತೇನೆ" ಎನ್ನುತ್ತಾರೆ. ಈಗ ೭೮ ವರ್ಷ ದಾಟಿದೆ ರಂಗನಾಯಕಿಯವರಿಗೆ.

೧೯೬೭ರಲ್ಲಿ ಪತಿಯನ್ನು ಕಳೆದುಕೊಂಡ ರಂಗನಾಯಕಿಗೆ ಸಾತ್ವಿಕ ಜೀವನ ನಡೆಸುವುದರಲ್ಲಿ ತೃಪ್ತಿ.

ಪುದುಚೇರಿಯ ಅರವಿಂದಾಶ್ರಮ, ಮದರಾಸಿನ ಗೌತಮ ಆಶ್ರಮ, ಗೌರಿಬಿದನೂರಿನ ನವ ಭಾರತ ಆಶ್ರಮ–ಇವುಗಳು ರಂಗನಾಯಕಿ ತಮ್ಮ ಜೀವನದಲ್ಲಿ ಕಂಡ ದೇಶ ಸೇವಾ ಆಶ್ರಮಗಳು. ಇಂದಿಗೂ ಇದೇ ಹೆಸರಿನಲ್ಲಿ ಜನಪ್ರಿಯವಾಗಿವೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

## ಸರ್ವೋದಯ ಕಾರ್ಯಕರ್ತೆ
## ಗಾಂಧಿ ನಾಮಸ್ಮರಣೆಯ ಪುನೀತೆ
## ಬಿ. ಕಾಮಾಕ್ಷಮ್ಮ

ಬೃಹದಾಕಾರವಾಗಿ ಬೆಳೆಯುತ್ತಿರುವ ಬೆಂಗಳೂರಿನ ಮಲ್ಲೇಶ್ವರ ಬಡಾವಣೆಯ ಒಂಭತ್ತನೇ ಅಡ್ಡರಸ್ತೆಯಲ್ಲಿ ಅತಿ ಚಿಕ್ಕದಾದ ಎರಡು ಕೋಣೆಯ ಒಂದು ಪುಟ್ಟ ಮನೆ. ಅಡಿಗೆ ಮಾಡಲು ಒಂದು ಕೋಣೆ. ವಿಶ್ರಾಂತಿಗೊಂದು ಕೋಣೆ. ಇಷ್ಟು ಚಿಕ್ಕ ಮನೆಯಾದರೂ ವಿಳಾಸ ಅತಿ ಸುಲಭ, ಇದು ಎಲ್ಲರಿಗೂ ಪರಿಚಯದ ಮನೆ. ಮಲ್ಲೇಶ್ವರದಲ್ಲಿ ಕಾಮಾಕ್ಷಮ್ಮನವರ ಈ ಮನೆ ಗೊತ್ತಿಲ್ಲವೆನ್ನುವವರು ಅಪರೂಪ.

ಆಗರ್ಭ ಶ್ರೀಮಂತ ಕುಟುಂಬದಲ್ಲಿ ಜನಿಸಿ, ಅತುಳೈಶ್ವರ್ಯ ಸಂಪನ್ನರೊಡನೆ ವಿವಾಹ ಸಂಬಂಧ ಬೆಳೆಸಿ, ಅರಮನೆಯಂತಹ ಮನೆಗೆ ಒಡತಿಯಾಗಿದ್ದರೆಂದರೆ ಕಾಮಾಕ್ಷಮ್ಮನವರನ್ನು ಈಗ ಕಂಡವರು ಯಾರೂ ನಂಬಲಾರರು. ಅಷ್ಟೊಂದು ಸರಳ, ನಿರಾಭರಣ ಜೀವಿ. ೭೫ ವರ್ಷ ದಾಟಿರುವ ಇವರಿಗೆ ಇಂದಿಗೂ ಕನ್ನಡದ ಅವಶ್ಯಕತೆ ಇಲ್ಲ. ಫಳ ಫಳ ಹೊಳೆಯುವ ಕಣ್ಣುಗಳು ವ್ಯಕ್ತಿಯ ಚುರುಕುತನವನ್ನು ಹೊರಸೂಸುತ್ತಿದೆಯೋ ಎನ್ನುವಂತೆ ಕಳೆಗುಂದದ ವರ್ಚಸ್ಸಿನ ಮುಖ. ಅರಳು ಹುರಿದಂತೆ ಪಟಪಟ ಮಾತಾಡುವ ಸ್ವಭಾವ, ಮಾತಿನ ಸ್ಫೂರ್ತಿ ಬಂದಾಗ ಭಾವವನ್ನು ಸೇರಿಸಿ ಕಣ್ಣೆಯುಬ್ಬಿಸಿ ಮುಗ್ಧ ಮಗುವಂತೆ ಮಾತಾಡುವ. ಎಂತಹವರನ್ನೂ ಮಾತಾಡಿಸುವ ಈ ವ್ಯಕ್ತಿಗೆ ಚಿಕ್ಕವರಿಂದ ಹಿಡಿದು ಮುದುಕರವರೆಗೆ ಎಲ್ಲರೂ ಸ್ನೇಹಿತರೆ.

ಇಂತಹ ಸ್ನೇಹ ಜೀವಿ, ಭಾವ ಜೀವಿಗೆ ಆಸ್ತಿಪಾಸ್ತಿಗಳ ಮೇಲೆ ಗಮನ ಬೇಕಾಗಿಲ್ಲ. ಪುಸ್ತಕಗಳೇ ಅವರ ಆಸ್ತಿ. ಅವರ ಸಣ್ಣ ವಿಶ್ರಾಂತಿ ಕೋಣೆಯಲ್ಲಿ ಕಂಡು ಬರುವುದು-ಒಂದು ಮಂಚ. ಸುತ್ತಲೂ ಪುಸ್ತಕಗಳು. ಉಡುವ ಸೀರೆಯ ಮೇಲೂ ಗಮನವಿಲ್ಲ. ಯಾವುದೋ ಒಂದು ಹಳೆಯ ಖಾದಿ ಸೀರೆಯಲ್ಲೇ ತೃಪ್ತಿ. "ನಮ್ಮ ತಂದೆಗೆ ಕೊನೆವರೆಗೂ ಕಣ್ಣು ಚೆನ್ನಾಗಿ ಕಾಣುತ್ತಿತ್ತು. ನನಗೂ ಕಣ್ಣು ಚೆನ್ನಾಗಿದೆ. ನಮ್ಮ ತಾಯಿಗೆ ಪಾರ್ಶ್ವವಾಯು ಇತ್ತು. ನನಗೂ ಈಗ ಬಂದಿದೆ" ಎಂದು ಇತ್ತೀಚೆಗೆ ವಾಯುಸೆಳೆತದಿಂದ ಒಂದು ಕಾಲು ಬಲಹೀನವಾದುದರ ಕುರಿತು ಸರಸವಾಗಿ ಕಾಮಾಕ್ಷಮ್ಮ ಹೇಳುವರು.

ನನಗೆ ಈಗ ಬೇಕಾಗಿರುವುದು ಗಾಂಧೀನಾಮಸ್ಮರಣೆ ಅಷ್ಟೆ. ನಾನು ಓದುವ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಪುಸ್ತಕಗಳನ್ನು ನೋಡಿ. ಆ ಮಹಾತ್ಮನ ವಿಷಯವಾಗಿ ಓದುತ್ತಿದ್ದರೆ ಜೀವನಪೂರ್ತಿ ಓದಿದರೂ ಮುಗಿಸಲಾರೆವು. ಈ ಪುಸ್ತಕಗಳನ್ನು ಓದುವ ಆನಂದ ಮತ್ತೆಲ್ಲಿ ಸಿಗುತ್ತದೆ ? ಎನ್ನುತ್ತಾರೆ.

ಇವರಿಗೆ ಓದಿನಲ್ಲಿರುವಷ್ಟೇ ಆಸಕ್ತಿ ಬರವಣಿಗೆಯಲ್ಲೂ ಇದೆ, ಇವರ "ಕಸ್ತೂರಿ ಬಾ" ಪುಸ್ತಕವು ಒಂದು ಅತ್ಯುತ್ತಮ ಬರವಣಿಗೆ. ಕಸ್ತೂರಿಬಾರವರ ಸೆರೆಮನೆವಾಸದ ಚಿತ್ರಣ ಓದುಗರ ಮನಸ್ಸನ್ನು ಸೆರೆಹಿಡಿಯುತ್ತದೆ; ದಕ್ಷಿಣ ಆಫ್ರಿಕಾ ದಲ್ಲಿ ಕಸ್ತೂರಿಬಾ ಮತ್ತು ಮಹಾತ್ಮ ಗಾಂಧೀ ಕಳೆದ ಇಪ್ಪತ್ತು ವರುಷಗಳ ಕಾಲದ ಇತಿಹಾಸ ಬಹಳ ದೊಡ್ಡ ಗ್ರಂಥ ಎನ್ನುತ್ತಾರೆ ಕಾಮಾಕ್ಷಮ್ಮ. ಅಲ್ಲಿಯ ಭಾರತೀಯ ಜನ ಜೀವನದ ಮಧ್ಯೆ ಹಾಸು ಹೊಕ್ಕಾಗಿ ಇಬ್ಬರೂ ಬೆರೆತ ಕಥೆ ಮಾನವ ಭವ್ಯ ಇತಿಹಾಸದ ಪರಂಪರೆಯಾಗಿದೆ. ಅವರ ಜೀವನ-ಪ್ರವಾಹ ಬಹಳ ವೇಗದಿಂದ ಹರಿದ ಕಾಲ ಅದು. ಅದರಲ್ಲಿ ಅನೇಕ ಸುಳಿಗಳು ಬಂಡೆಗೆ ಅಪ್ಪಳಿಸಿ ಮುಂದೆ ಮುಂದೆ ಸಾಗಿದ ಆ ಕಥೆ ಬಹಳ ರೋಮಾಂಚಕ ಎಂದು ಕಾಮಾಕ್ಷಮ್ಮ ಬರೆದಿದ್ದಾರೆ.

ಇಂತಹ ಅಮೂಲ್ಯ ಪುಸ್ತಕ ಕಸ್ತೂರಿಬಾ ೧೯೮೨ರಲ್ಲಿ ಬಿಡುಗಡೆಯಾದ ಮೇಲೆ ಪುಸ್ತಕವನ್ನು ಕೊಂಡುಕೊಳ್ಳುವವರು ಯಾರು ಎಂದು ಮನೆ ಮನೆ ಅಲೆದಿದ್ದಾರೆ ಕಾಮಾಕ್ಷಮ್ಮ. ಮುದ್ರಣ ಕಾಣದೆ ಬಿದ್ದಿರುವ ಹಸ್ತಪ್ರತಿಯನ್ನು ತೋರಿಸುತ್ತಾರೆ.

ಬಾಪೂಜಿಯ ಜೀವನದ ಪ್ರತಿ ತಿರುವಿನಲ್ಲೂ 'ಬಾ' ರವರ ಪ್ರಭಾವವಿದೆ ಎನ್ನುತ್ತಾ. "ಹೆಣ್ಣಿನ ಕುಲಕ್ಕೆ ಕಸ್ತೂರಿಬಾ ಒಬ್ಬರೇ ಸಾಕು ತಿಲಕವಿಟ್ಟಂತೆ. ಅವರ ನಿತ್ಯ ಜೀವನದ ಸತ್ಯತೆ ಇಂದಿನ ಹೆಣ್ಣು ಮಕ್ಕಳಿಗೆ ಉದಾಹರಣೆಯಾಗಬೇಕು" ಎಂದು ನುಡಿಯುತ್ತಾರೆ.

ದೇಶ ಸೇವೆಯ ಆ ದಿನಗಳ ಧ್ಯಾನದಲ್ಲೇ ಇರುವ ಕಾಮಾಕ್ಷಮ್ಮನವರನ್ನು ಸ್ವಲ್ಪವೇ ಕೆದಕಿದರೆ ಸಾಕು, ಪ್ರವಾಹದಂತೆ ಮುನ್ನುಗ್ಗಿ ಬರುತ್ತದೆ ಅವರ ಅನುಭವದ ಮಾತುಗಳು. ಉಕ್ಕಿಬರುವ ಆ ರಭಸದಲ್ಲಿ ಹೇಳುವ ಮಾತುಗಳೂ, ರಭಸವೇ. ಒಟ್ಟೊಟ್ಟಿಗೆ ಹೇಳುವ ಆತುರ. ಆಶ್ರಮದಲ್ಲಿದ್ದ ಕಾಲ ಒಂದಿಷ್ಟು, ಹಿಂದಿ ಕಲಿತ ಸಂಭ್ರಮ, ರಾಷ್ಟ್ರ ಭಾಷಾ ಪ್ರವೀಣೆಯಾಗಿ ಗಾಂಧೀಜಿಯವರೊಡನಿದ್ದ ಹೆಮ್ಮೆ, ನಿರರ್ಥಕವಾದ ಕಾಲದ ವೈಶಾಲ್ಯತೆಯ ತಿರುವು, ತಂದೆಯೊಡನಿದ್ದ ದಿನಗಳು, ಗಾಂಧೀ ಸಾನ್ನಿಧ್ಯದ ಆನಂದ-ಹೀಗೆ ಕಾಲಾನುಕ್ರಮವಿಲ್ಲದೆ ಯಾವುದು ಹಾಯ್ದು ಬಂದು ಮನಹೊಕ್ಕಿತೋ ಅದೆಲ್ಲವನ್ನೂ ಒಟ್ಟಿಗೇ ತೋಡಿಕೊಳ್ಳುತ್ತಾ ಹೋಗುವ ಸಂಭ್ರಮ ಪಡುತ್ತಾರೆ, ಎಷ್ಟು ಹೇಳಿದರೂ ತೃಪ್ತಿ ಇಲ್ಲ. ಎಷ್ಟು ನೆನೆದರೂ ಮತ್ತೆ ಹರ್ಷಪಡುತ್ತಾ ನೆನೆಯುವ ಕುತೂಹಲ.

"ನಮ್ಮನ್ನು ಯಾರೂ ಅನುಸರಿಸದಿದ್ದರೆ ಬೇಡ, ನಮ್ಮ ಅನುಭವದ ಆನಂದದ ಲ್ಲಾದರೂ ಭಾಗಿಗಳಾಗಲಿ ಎನ್ನುವುದೇ ನನ್ನ ಇಚ್ಛೆ ಎನ್ನುತ್ತಾ "ನನ್ನ ಸ್ವಂತ ಜೀವನ, ಬಾಲ್ಯ, ಮದುವೆಯಾದುದು ಇದೆಲ್ಲಾ ಸಾರವಿಲ್ಲದ್ದು, ಇದನ್ನು ಕೇಳಬೇಡಿ-

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಸ್ವಾತಂತ್ರ್ಯದ ಚಳವಳಿಯಲ್ಲಿ ನಾನು ಕಳೆದ ದಿನಗಳು ಸಾರ್ಥಕವಾದವು. ಆದಷ್ಟೇ ಹೇಳಲು ಬಯಸುತ್ತೇನೆ" ಎಂದವರು ಬೇಡ ಬೇಡವೆಂದರೂ ಮದುವೆಯು ಆಟದಂತೆ ನಡದು ಹೋಗಿ ಜೀವನದ ಒಂದು ಅಂಕವನ್ನು ಕೊನೆ ಮಾಡಿದ ತನ್ನ ವಿವಾಹ, ಅನಂತರ ವಿಧವೆಯಾದ ದಿನಗಳು ಕಣ್ಮುಂದೆ ಸುಳಿದಂತಾಗಿ ಹೀಗೆನ್ನುತ್ತಾರೆ.

"ಚಿಕ್ಕ ವಯಸ್ಸಿನಿಂದ ಅತಿ ಚುರುಕು ಹುಡುಗಿ ನಾನು, ಸಂಗೀತ ಕಲಿಯುವುದು ನಾಟಕವಾಡುವುದೆಂದರೆ ಬಹಳ ಗೀಳು. ಹಾರ್ಮೋನಿಯಂ ನುಡಿಸುವ ಆಸೆ ಆದಷ್ಟು ಮುಂದುವರಿಯಿತೆಂದರೆ. ಒಂದು ಡಬ್ಬಕ್ಕೆ ಸಪ್ತ ಸ್ವರವೆಂದು ಏಳು ಬೊಟ್ಟು ಸುಣ್ಣ ಹಚ್ಚಿ ಅವುಗಳ ಮೇಲೆ ಕೈಯಾಡಿಸಿ ಸಂತೋಷಪಡುತ್ತಿದ್ದೆ" ಸಂಗೀತ, ನಾಟಕ ಕಲಿತರೆ ಕೆಟ್ಟು ಹೋಗುತ್ತಾಳೆನ್ನುವ ಭಾವನೆ ತಂದೆ ತಾಯಿಯರಿಗಿದ್ದುದರಿಂದ ಪುಟ್ಟ ಹುಡುಗಿ ಕಾಮಾಕ್ಷಿಗೆ ಈ ನಿರ್ಬಂಧ. ಕಲಾಭಿಮಾನದ ಅಪಮಾನ, ಮನನೊಂದ ಕಲಾಕಿಶೋರಿ, ತನಗೆ ಕೆಟ್ಟ ಹೆಸರು ಬಂದರೆ ಬರಲಿ, ಎಂದು ವಾದಿಸುತ್ತಿದ್ದಳಂತೆ.

ಮುಂದಿನ ಜೀವನದಲ್ಲೂ ಅಷ್ಟೆ. ವಾದವಿವಾದ ವಿರೋಧ ಪ್ರತಿಬಂಧಕಗಳೊಡನೆ ಘರ್ಷಣೆಯಾಗುತ್ತಲೇ ಸಾಗಿತು ಕಾಮಾಕ್ಷಮ್ಮನವರ ದೇಶ ಸೇವಾ ಪ್ರವೃತ್ತಿಯ ಬಾಳ್ವೆ. ವರ್ಷಕ್ಕೆ ಹನ್ನೊಂದು ಮದುವೆಯಾಗಿ ದೊಡ್ಡ ಜಮೀನ್ದಾರರ ಸೊಸೆಯಾದರು.

"ಗಂಡನನ್ನು ನೋಡಿದರೆ ನನಗೆ ಭಯವಾಗುತ್ತಿತ್ತು. ಹೆಣ್ಣು ಗಂಡಿನ ಪ್ರೀತಿಯ ಗಂಧವಿಲ್ಲದ ವಯಸ್ಸು. ಆಟವಾಡುವ ಮನಸ್ಸು. ನಾದಿನಿಯೊಡನೆ ಆಟವಾಡಲು ಆಸೆ ಪಟ್ಟು ಅತ್ತೆಯ ಮನೆಗೆ ಹೋದಾಗ ನನ್ನ ಕಣ್ಣುಗಳು ನನ್ನ ನಾದಿನಿಯನ್ನು ಹುಡುಕುತ್ತಿತ್ತು, ಅಷ್ಟೆ ನನ್ನ ಮದುವೆಯ ಸಂಬಂಧ. ನನ್ನ ಹನ್ನೆರಡನೆಯ ವಯಸ್ಸಿನಲ್ಲಿ ಗಂಡ ಸತ್ತು ವಿಧವೆಯ ಪಟ್ಟ ಬಂತು. ತಂದೆಯೇ ಶರಣೆಂದು ತವರು ಮನೆಯಲ್ಲೇ ಉಳಿದೆ. ತಾಯಿಯ ಪ್ರೇಮಮಯ ಆಸರೆ ಸಿಕ್ಕಿತು" ಎಂದು ಮಾತಾಪಿತರನ್ನು ನೆನೆಯುತ್ತಾರೆ.

ತಂದೆಯ ಮನೆಯಲ್ಲಿದ್ದರೂ ಕಾಮಾಕ್ಷಮ್ಮ ಸ್ವೇಚ್ಛೆಯಾಗಿರುವಂತಿರಲಿಲ್ಲ. ಪೂರ್ವಾಚಾರ ಸಂಪ್ರದಾಯಸ್ಥರಾದ ತಂದೆ ಕಾಮಾಕ್ಷಮ್ಮನಿಗೆ ಎಲ್ಲಿ ಹೋಗುವುದಕ್ಕೂ ಕಟ್ಟಳೆ ಹಾಕುತ್ತಿದ್ದರು, ಬೇಸರವಾದಾಗ, ಓದಬೇಕೆನಿಸಿದಾಗ ಕಾಮಾಕ್ಷಮ್ಮನಿಗೆ ಸಿಕ್ಕಿದ ಮೊದಲ ಪುಸ್ತಕ ಮಹಾತ್ಮರ "ಸ ತ್ಯ ಶೋ ಧ ನೆ" ಈ ಪುಸ್ತಕದ ಸಾರಾಂಶ ಕಾಮಾಕ್ಷಮ್ಮನ ಅಂತರಾಳ ಹೊಕ್ಕಿತು.

ಗಾಂಧೀಜಿ ದೇಶಕ್ಕಾಗಿ, ಜನರಿಗಾಗಿ ಎಷ್ಟು ಕಷ್ಟ ಪಡುತ್ತಿರುವರೆನಿಸಿತು. ಈತ ಪುರಾಣದ ವ್ಯಕ್ತಿಯಲ್ಲ, ಈಗ ಈ ಕ್ಷಣದಲ್ಲಿದ್ದಾರೆ. ಅವರನ್ನು ಎಲ್ಲರೂ ನೋಡಬಹುದಾಗಿದೆ ಎಂಬ ಸತ್ಯವು ಕಾಮಾಕ್ಷಮ್ಮನನ್ನು ಪುಳಕಿತಗೊಳಿಸಿತು, ಗಾಂಧೀಜಿಯ ಬಗ್ಗೆ ಹೆಚ್ಚು ಓದಿ ತಿಳಿದುಕೊಂಡರು. ಈ ಮಹಾತ್ಮನನ್ನು ನೋಡುವ ಕುತೂಹಲ ಕೆರಳಿತು ಅವಕಾಶಕ್ಕಾಗಿ ಜಪಿಸಿ ತಪಿಸುತ್ತಿದ್ದರು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಒಂದು ಸಲ, ಕಾಮಾಕ್ಷಮ್ಮನ ತಂದೆಯವರು ಪಾವಗಡದಲ್ಲಿ ಕೆಲಸದಲ್ಲಿದ್ದಾಗ, ಉಮಾಬಾಯಿ ಕುಂದಾಪುರ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿದ್ದನ್ನು ಕಾಮಾಕ್ಷಮ್ಮ ಕೇಳಿಸಿಕೊಂಡರು. ಆ ಹೆಣ್ಣಿನ ಧೈರ್ಯವನ್ನು ಕಂಡು ಕಾಮಾಕ್ಷಮ್ಮ ಪರಮಾಶ್ಚರ್ಯಪಟ್ಟರು. ತಾನೂ ಏನು ಪ್ರಯೋಜನವಿಲ್ಲವೆಂದು ತಮ್ಮನ್ನು ಹಳಿದು ಕೊಂಡರು.

ತವಕಪಡುತ್ತಿದ್ದವರಿಗೆ ತಂಪೆರೆದು ಕೈ ಹಿಡಿದು ನಡೆಸಲು ದೈವಚಿತ್ತದ ಪ್ರೇರೆಣೆಯೋ ಎಂಬಂತೆ ಕಾಮಾಕ್ಷಮ್ಮನ ತಂದೆಯವರು ವಿರಾಮ ಪಡೆದು ಬೆಂಗಳೂರಿಗೆ ಬಂದು ನೆಲಸಿದಾಗ ಮಲ್ಲೇಶ್ವರದ ವಾಚನಾಲಯದ ಪಕ್ಕದ ಮೈದಾನಕ್ಕೆ ಗಾಂಧೀಜಿ ಬರುತ್ತಾರೆಂಬ ಸುದ್ದಿ ಕೇಳಿ ಬಂತು. ನೈತಿಕ ಬಲದಿಂದ ಅಪೂರ್ವ ಕ್ರಾಂತಿಯನ್ನುಂಟು ಮಾಡಿ ದೇಶೋದ್ಧಾರಕ್ಕಾಗಿ ಕಂಕಣ ಕಟ್ಟಿರುವ ಮಹಾತ್ಮರನ್ನು ನೋಡಲು ಮುಂಜಾನೆ ಎದ್ದು ಕಾಮಾಕ್ಷಮ್ಮ ಮೈದಾನಕ್ಕೆ (ಈಗ ಗಾಂಧೀ ಸಾಹಿತ್ಯ ಸಂಘದ ಮೈದಾನ) ಧಾವಿಸಿದರು. ಪೂರ್ವಾಭಿಮುಖವಾಗಿ ಎತ್ತರದ ಪೀಠದ ಮೇಲೆ ಮಂಡಿಸಿದ್ದ ಗಾಂಧೀಜಿ ಹಿಂದಿ ಭಾಷೆಯಲ್ಲಿ ಭಾಷಣ ಮಾಡುತ್ತಿದ್ದರು. ಆಗತಾನೇ ಉದಯಿಸಿದ ಸೂರ್ಯನ ಎಳೆಯ ಕಿರಣಗಳು ಅವರ ಮೇಲೆ ಬಿದ್ದು, ಅವರ ಕಣ್ಣುಗಳು ತೇಜಃಪುಂಜವಾಗಿ ಪ್ರಕಾಶಿಸುತ್ತಿದ್ದವು. ಕಾಮಾಕ್ಷಮ್ಮನ ಜೀವನದ ಸೂರ್ಯೋದಯದ ಆರಂಭವೂ ಅಂದಿನಿಂದಲೇ.

ಹಿಂದಿ ಅರ್ಥವಾಗದಿದ್ದರೂ ಏಕಾಗ್ರತೆಯಿಂದ ಭಾಷಣವನ್ನು ಕೇಳಿಸಿ ಕೊಳ್ಳುತ್ತಿದ್ದ ಕಾಮಾಕ್ಷಮ್ಮನಿಗೆ ಗಾಂಧೀಜಿಯವರ ಮಾತನ್ನು ಚೆನ್ನಾಗಿ ಅರ್ಥ ಮಾಡಿ ಕೊಳ್ಳಲು ತಾನು ಹಿಂದಿ ಕಲಿಯಬೇಕೆಂಬ ಆಸೆ ಅಂಕುರಿಸಿತು, ಭಾಷಣ ಮುಗಿದ ಮೇಲೆ ಪಾಶ್ಚಾತ್ಯ ಹೆಂಗಸೊಬ್ಬಳು—ಗಾಂಧಿ ಮಹಾತ್ಮರ ಸೇವಾಕಾಂಕ್ಷಿಯಾಗಿ ಬಂದು ಭಾರತದಲ್ಲೇ ನೆಲೆಸಿ. ಮೀರಾಬೆನ್ ಎಂದು ಮಹಾತ್ಮರಿಂದ ಕರೆಯಲ್ಪಟ್ಟ ಸ್ಲೇಡ್ ಎಂಬ ಈ ಪಾಶ್ಚಾತ್ಯ ಹೆಂಗಸು–ಹುಂಡಿ ಡಬ್ಬವನ್ನು ಹಿಡಿದು ಜನರ ಮಧ್ಯೆ ಚಂದಾ ಎತ್ತಲು ಬಂದಳು. ಬರಿಗೈಯಲ್ಲಿ ಬಂದಿದ್ದ ಕಾಮಾಕ್ಷಮ್ಮ, ಹಣ ತರಬೇಕಾಗಿತ್ತೆಂದು ಕೊರಗಿದರು. ಆದರೂ ಅವರ ಮನಸ್ಸಿಗೆ ಉಂಟಾದ ನೆಮ್ಮದಿ, 'ಮಹಾತ್ಮರಿಗೆ ನಾನೇನು ಕೊಡಬಲ್ಲೆ? ಮೊದಲ ದರ್ಶನದಲ್ಲಿ ನಾನೇ ಅವರಿಂದ ವರವನ್ನು ಪಡೆಯಲು ಬಂದಿದ್ದೇನೆ' ಎಂದುಕೊಂಡು ಕಣ್ತುಂಬ ಗಾಂಧೀಜಿಯನ್ನು ನೋಡಿ ಆನಂದಿಸಿದರು.

ಅಂದಿನಿಂದ ಕಾಮಾಕ್ಷಮ್ಮನವರಿಗೆ ಗಾಂಧೀಜಿಯವಾಣಿ ಅತಿ ಮಧುರವಾಯ್ತು. ಅವರನ್ನು ಕಾಣುವುದು ಪುಣ್ಯವೆನಿಸಿತು. ಅವರ ಸಾನ್ನಿಧ್ಯ ಅತಿ ಹಿತವಾಯ್ತು. ಮುಂದಿನ ಬಾಳಿನ ದಿನಗಳನ್ನು ನೆಮ್ಮದಿಯಿಂದ ಕಳೆಯಬೇಕಾದರೆ ಗಾಂಧಿಯ ಉಪದೇಶದಂತೆ ದೇಶ ಸೇವೆ ಮಾಡುವುದೇ ಸರಿ ಎಂದು ನಿರ್ಧರಿಸಿದರು. ಇನ್ನು ಕಾಮಾಕ್ಷಮ್ಮನನ್ನು ಯಾರೂ ತಡೆಯಲಾಗಲಿಲ್ಲ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಮಹಾತ್ಮರ ಭಾಷಣವನ್ನು ನೇರವಾಗಿ ಕೇಳಬೇಕಾದರೆ ಹಿಂದಿ ಭಾಷೆಯನ್ನು ಕಲಿಯಲೇಬೇಕೆಂಬ ಬಯಕೆ ಹಿರಿದಾಯಿತು. ತನ್ನ ಬಾಲ್ಯ ಸ್ನೇಹಿತೆಯೊಬ್ಬಳ ಸಹಾಯ್ಯದಿಂದ ಹಿಂದೀ ತರಗತಿಗೆ ಸೇರಿದರು. ಹಿಂದೀ ಪರೀಕ್ಷೆಗಳಿಗೆ ಓದಬೇಕಾಗಿದ್ದ ಪುಸ್ತಕಗಳು ಸ್ವದೇಶ, ಸ್ವರಾಜ್ಯ, ಗಾಂಧೀಜಿಯವರ ಜೀವನಕ್ಕೆ ಸಂಬಂಧ ಪಟ್ಟ ಪುಸ್ತಕಗಳು. ಇವುಗಳೇ ಕಾಮಾಕ್ಷಮ್ಮನ ಮನವನ್ನು ಸೂರೆಗೊಳ್ಳುತ್ತಿದ್ದ ವಿಷಯಗಳು, ಈ ಪುಸ್ತಕಗಳನ್ನು ಕೇವಲ ಪಠ್ಯಪುಸ್ತಕಗಳೆಂದೆಣಿಸದೆ, ಧಾರ್ಮಿಕ ಗ್ರಂಥಗಳೆಂದು ಅಧ್ಯಯನ ಮಾಡಿದರು, ಕಾಮಾಕ್ಷಮ್ಮನ ನೊಂದ ಹೃದಯ ಹಗುರವಾಗಿ, ತನ್ನ ಜೀವನವನ್ನು ಅಳವಡಿಸಿಕೊಳ್ಳುವ ಅಂಶಗಳು ಇವುಗಳಲ್ಲಿ ಸಿಕ್ಕಿದುವು.

ಗಾಂಧೀಜಿಯವರ ಸಾ ಹಿ ತ್ಯ ವ ನ್ನು ಅಧ್ಯಯನ ಮಾಡುತ್ತಾ, ಮಾಡುತ್ತಾ, ಕಾಮಾಕ್ಷಮ್ಮನವರಲ್ಲಿ ಅವರಿಗೆ ಅರಿವಿಲ್ಲದೆಯೇ ಕ್ರಮೇಣ ಬದಲಾವಣೆಯಾಗುತ್ತಾ ಬಂತು.

"ಶರೀರವನ್ನು ಕಾಪಾಡು. ಕೊಬ್ಬಿಸಬೇಡ. ತನ್ನಲ್ಲಿ ನಂಬಿಕೆ ಇಡದವರನ್ನು ದೇವರೂ ಕಾಪಾಡಲಾರ. ಮಾನಸಿಕ ಪರಾವಲಂಬನೆ ದೂರ ಮಾಡು. ಕೇಡು ಮಾಡಿದವರಿಗೂ ಕೆಡಕನನ್ನು ಬಯಸಬಾರದು. ತನ್ನನ್ನು ತಾನು ಕೀಳಾಗಿ ಭಾವಿಸಬಾರದು, ಅಜ್ಞಾನವೆಂಬುದೇ ದಾರಿದ್ರ್ಯ. ದುಡಿಮೆಗೆ ಹೆಚ್ಚು ಬೆಲೆ ಕೊಡು" ಈ ಸೂಕ್ತಿಗಳು ಮಹಾತ್ಮರಲ್ಲಿ ಜೀವಂತ ತತ್ವಗಳಾಗಿದ್ದುವು.

"ಮಹಾತ್ಮರ ಸಂದೇಶಗಳು ಎಣಿಕೆಗೆ ಎಟುಕಲಾರದವು. ಸಮುದ್ರವನ್ನು ಹೊಕ್ಕವರು ತಮ್ಮ ಯೋಗ್ಯತಾನುಸಾರ ಬೆಲೆಯಾದ ಮುತ್ತು ರತ್ನಗಳನ್ನು ಆಯ್ದುಕೊಳ್ಳುವಂತೆ ನಾನು ನನ್ನ ಯೋಗ್ಯತೆಗೆ ತಕ್ಕಂತೆ ಮಹಾತ್ಮರ ಸಂದೇಶಗಳನ್ನು ಹೆಕ್ಕಿಕೊಂಡೆನು"-ಎನ್ನುತ್ತಾರೆ ಕಾಮಾಕ್ಷಮ್ಮ.

ಅವರ ಈ ನುಡಿಗಳಲ್ಲಿ ಗಾಂಧೀಜಿಯವರ ಜೀವನ ತತ್ವವನ್ನು ಕಾಮಾಕ್ಷಮ್ಮನವರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ಹೇಗೆ ಸಿದ್ಧತೆ ಮಾಡಿಕೊಂಡರೆಂದು ಅರ್ಥವಾಗುತ್ತದೆ. ಗಾಂಧೀಜಿಯ ತತ್ವಗಳು ಜೀವನ ರತ್ನಗಳೆಂದು ಗ್ರಹಿಸಿದರು. ಗ್ರಹಿಸಿದರೆ ಮಾತ್ರ ಸಾಲದೆಂದು ಆ ತತ್ವಗಳಿಗೆ ತಮ್ಮ ಜೀವನವನ್ನು ಹೊಂದಿಸಿಕೊಂಡರು. ತಾವು ಮಾತ್ರ ಅಳವಡಿಸಿಕೊಂಡರೆ ಸ್ವಾರ್ಥವೆನಿಸುವುದೆಂದು ಯಥೇಚ್ಚವಾಗಿ ಬೇರೆಯವರಿಗೂ ಹೇಳಿಕೊಟ್ಟರು.

ಬಾಪೂಜಿಯ ಅಮೃತಹಸ್ತದಿಂದ ಆಶೀರ್ವಾದವನ್ನು ಅಪೇಕ್ಷಿಸಿದ್ದ ಕಾಮಾಕ್ಷಮ್ಮನಿಗೆ ಅನಿರೀಕ್ಷಿತ ಅವಕಾಶವೊಂದು ದೊರಕಿತು; ಹಿಂದೀ ರಾಷ್ಟ್ರಪರೀಕ್ಷೆಯ ಪ್ರಮಾಣ ಪತ್ರವನ್ನು ಕೊಡಲು ಗಾಂಧೀಜಿಯವರು ಆಗಮಿಸಿದರು. ಅಂದಿನ ಸಭೆಯಲ್ಲಿ ಹಿಂದಿ ಕಲಿತ ಮಹಿಳೆಯರ ಸಂಖ್ಯೆ ಪುರುಷರಿಗಿಂತ ಮಿಗಿಲಾಗಿದ್ದಿತು. ಮಹಾತ್ಮರು ಒಂದು ಸಲ ಸುತ್ತಲೂ ತಮ್ಮ ತೇಜಸ್ವೀ ನೋಟವನ್ನು ಬೀರಿ ಹೆಣ್ಣು ಮಕ್ಕಳ ಬಗ್ಗೆ ಆಡಿದ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಪ್ರಶಂಸಾಪರವಾದ ಮಾತುಗಳು ಇಂದಿಗೂ ಕಿವಿಯಲ್ಲಿ ಪ್ರತಿಧ್ವನಿಸುತ್ತಿದೆ ಎಂದು ಮಹಾತ್ಮರ ಆ ನುಡಿಗಳನ್ನು ಮತ್ತೊಮ್ಮೆ ನುಡಿಯುತ್ತಾರೆ.

"ಮಹಿಳೆಯರು ಯಾವ ಕಾರ್ಯದಲ್ಲಿ ಮುಂದಾಗುವರೋ ಅದರ ಭವಿಷ್ಯ ಉಜ್ವಲ ಮತ್ತು ಮಂಗಳಕರವಾದುದು. ಸ್ವಾತಂತ್ರ್ಯ ಸಂಗ್ರಾಮವೂ ಮಹಿಳೆಯರ ನೆರವಿನಿಂದ ಮಂಗಳಕರವಾಗುತ್ತದೆ."

ಮಹಾತ್ಮರ ಈ ಮಾತಿನಿಂದ ಅಮೃತವೇ ಮಳೆಗರೆದಂತಾಗಿ ಕಾಮಾಕ್ಷಮ್ಮ ನವರು ಸಂತೋಷದಿಂದ ಹಿಗ್ಗಿದರು. ತಾನೂ ಸಹ ಸಮಾಜಕ್ಕೆ ಉಪಯುಕ್ತವಾದ ಜೀವ ದಂಡದ ಕೂಳು ತಿನ್ನುವವಳಲ್ಲ ಎಂಬ ಉಚ್ಚ ಮನೋಭಾವನೆ ಮೂಡಿಬಂದು ಕಾಮಾಕ್ಷಮ್ಮನವರಲ್ಲಿ ಜಾಗೃತವಾಯಿತು. ಅವರ ವಿಚಾರ-ಶಕ್ತಿಗೆ ಚಾಲನೆ ದೊರ ಕಿತು. ಆತ್ಮಶಕ್ತಿ ಬೆಳೆಯಿತು.

ಹಿಂದೀ ಪ್ರಚಾರದ ನೆಪವನ್ನಿಟ್ಟುಕೊಂಡು ೧೯೪೨ರ ಸ್ವಾತಂತ್ರ್ಯ ಚಳವಳಿಯಲ್ಲಿ ಕಾಮಾಕ್ಷಮ್ಮ ಭಾಗವಹಿಸಿದರು. ತಂದೆಯವರ ಆಣತಿಯಂತೆ, ಸೆರೆಮನೆವಾಸದ ಪ್ರಸಂಗ ಬಂದಾಗಲೆಲ್ಲಾ ಉಪಾಯದಿಂದ ತಪ್ಪಿಸಿಕೊಳ್ಳುತ್ತಿದ್ದರು. ಕರಪತ್ರಗಳನ್ನು ಮನೆಮನೆಗೆ ಗುಪ್ತವಾಗಿ ಹಂಚುವುದು, ಸಭೆಗಳನ್ನೇರ್ಪಡಿಸುವುದು, ಧ್ವಜಗಳನ್ನು ಹಾರಿಸುವುದು-ಇವೆಲ್ಲಾ ಚಟುವಟಿಕೆಗಳನ್ನು ಗುಟ್ಟಾಗಿ ಮಾಡುತ್ತಿದ್ದರು.

ಪೂಜ್ಯಮಾತಾ ಕಸ್ತೂರಿಬಾರವರು ಕಾರಾಗೃಹದಲ್ಲಿ ಸ್ವರ್ಗಸ್ಥರಾದನಂತರ ಅವರ ಹೆಸರಿನಲ್ಲಿ ೧೯೪೩ರಲ್ಲಿ ಅಖಿಲಭಾರತ ಮಹಿಳೆಯರ ಶಿಕ್ಷಣ ಶಿಬಿರವೊಂದು ಮುಂಬಯಿಯ ಬಳಿ ಬೋರಿವಿಲಿ ಎಂಬ ಸ್ಥಳದಲ್ಲಿ ನಡೆಯಲಿರುದ ವಿಷಯಗಳೊಂದಿಗೆ ಗಾಂಧೀಜಿಯವರು ಕೆಲವು ದಿನಗಳು ಶಿಬಿರದಲ್ಲಿರುವರೆಂಬ ಸುದ್ದಿ ಕಾಮಾಕ್ಷಮ್ಮನನ್ನು ಶಿಬಿರಕ್ಕೆ ಹೋಗಲು ಪ್ರೇರೇಪಿಸಿತು, ಆಯ್ಕೆಯೂ ಆಯಿತು.

ಇದೇ ಸಂದರ್ಭದಲ್ಲಿ ಕಾಮಾಕ್ಷಮ್ಮನ ತಾಯಿಯವರ ದೇಹಸ್ಥಿತಿ ಬಹಳ ದುರ್ಬಲವಾಗಿತ್ತು, ಹಾಗಿದ್ದರೂ ಮನಸ್ಸು ಗಟ್ಟಿಮಾಡಿ ಮಗಳನ್ನು ಶಿಬಿರಕ್ಕೆ ಕಳುಹಿಸಲು ತಾಯಿ ಒಪ್ಪಿದರು. ತಂದೆ ಮಾತ್ರ ಮುಖ ಓರೆಮಾಡಿ ಸಿಟ್ಟಿನಿಂದಲೇ ಬೀಳ್ಕೊಟ್ಟರು.

"ಗಾಂಧೀಜಿ ನನಗೇನು ಮಾಡಿದರು" ಎಂಬ ಶೀರ್ಷಿಕೆಯಲ್ಲಿ ಕಾಮಾಕ್ಷಮ್ಮ ತಾನು ಕಂಡ ಶಿಬಿರವನ್ನೂ ಅಲ್ಲಿಯ ಜೀವನವನ್ನೂ ವಿವರಿಸಿದ್ದಾರೆ.

"ಬೋರಿವಿಲಿಯಲ್ಲಿ ಶಿಬಿರದ ಏರ್ಪಾಡಾಗಿದ್ದುದು ವಿಶಾಲವಾದ ಮಾವಿನ ತೋಪಿನ ಮಧ್ಯೆ. ಮೂರು ಮೈಲಿ ಸುತ್ತಳತೆ ಇದ್ದ ಆ ತೋಟದಲ್ಲಿ ಬಿದಿರಿನ ತಡಿಕೆ ಗಳಿಂದ ಕೋಣೆಗಳು ನಿರ್ಮಾಣವಾಗಿದ್ದವು. ಇದೊಂದು ಹೊಸ ಪ್ರಪಂಚದಂತಿತ್ತು. ಐದನೆಯ ದಿನ ಮಹಾತ್ಮರು ಬರುವರೆಂಬ ಸುದ್ದಿ ಕೇಳಿ ಪಾರವಿಲ್ಲದ ಆನಂದವಾಯಿತು ಶಾಂತಿಯ ಕ್ರಾಂತಿಕಾರಕ ಪುರುಷನನ್ನು ಸ್ವಾಗತಿಸುವ ಸಂಭ್ರಮದಲ್ಲಿ ಮೈಮರೆಯು ವಂತಾಯಿತು, ಅದೋ, ಮುಗುಳುನಗೆ ಬೀರುತ್ತಾ ಮಹಾತ್ಮರು ಬಂದೇಬಿಟ್ಟರು

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri


ಎಂದ ಕೂಡಲೇ ಮೈಯೆಲ್ಲಾ ಕಣ್ಣಾಗಿಸಿ ದರ್ಶನ ಮಾಡಿದೆವು. ಸಾಲಾಗಿ ನಿಂತು ಒಬ್ಬೊಬ್ಬರಾಗಿ ನಮಸ್ಕರಿಸಿದೆವು. ತೋಟದ ಮಧ್ಯೆ ಇದ್ದ ಪುಟ್ಟ ಬಂಗಲೆಯಲ್ಲಿ ಬಾಪೂ ತಂಗಿದರು. ಸಾಯಂಕಾಲ ಪ್ರಾರ್ಥನಾ ಸಭೆ ನಡೆದುದು ಅಲ್ಲಿಂದ ಮೂರು ಮೈಲಿ ದೂರದಲ್ಲಿದ್ದ ಕಾಂದಿವಿಲಿ ಎಂಬಲ್ಲಿ. ಅಲ್ಲಿ ನೆರೆದಿದ್ದ ಜನಸ್ತೋಮವನ್ನು ನನ್ನ ಜೀವಮಾನದಲ್ಲಿ ಅದೇ ಮೊದಲು ಕಂಡಿದ್ದು. ಮಹಾತ್ಮರ ಪ್ರಾರ್ಥನಾ ಸಭೆಗೆ ಸೇರುತ್ತಿದ್ದ ಜನಸ್ತೋಮವನ್ನು ವರ್ಣಿಸಲು ಸಾಧ್ಯವಿಲ್ಲ. ಮಹಾತ್ಮರಿಗಾಗಿಯೇ ನಿರ್ಮಿಸಿದ್ದ ಎತ್ತರದ ಪೀಠದ ಮೇಲೆ ಮಹಾತ್ಮರು ಕುಳಿತ ಕೂಡಲೇ ಸೂಜಿ ಕೆಳಗೆ ಬಿದ್ದರೂ ಕೇಳುವಷ್ಟು ನಿಶ್ಶಬ್ಧತೆ ಉಂಟಾಯಿತು, ಗಾಂಧೀಜಿ ಮೌನ ಪ್ರಾರ್ಥನೆಯಲ್ಲಿ ಲೀನವಾದರು. ಆಶ್ರಮದ ನಿಯಮದಂತೆ ಪ್ರಾರ್ಥನೆ ಜರುಗಿದ ಮೇಲೆ ಮಹಾತ್ಮರ ಭಾಷಣ ನಿಧಾನವಾಗಿ ಮೃದುಮಧುರ ಧ್ವನಿಯಿಂದ ಧೀರ ಗಂಭೀರವಾಗಿ ಆರಂಭವಾಯಿತು. ಅವರ ಒಂದೊಂದು ಶಬ್ದದಲ್ಲೂ ದೃಢತೆ ಮೈವೆತ್ತಿದಂತಿತ್ತು,

"ಭಾಷಣ ಮುಕ್ತಾಯವಾದ ಮೇಲೆ ಚಂದಾ ಎತ್ತಲು ಹೋದೆವು. ಈ ಮಹಾಪುರುಷನು ಜನರಿಗೆ ಮಂತ್ರ ದಂಡದಿಂದ ಮಂತ್ರ ಹಾಕಿರುವನೋ ಎಂಬಂತೆ ಜನ ನಾಮುಂದು, ತಾಮುಂದ ಎಂದು ಕೈ ನೀಡಿ ಹಣ ಸುರಿದರು. ಸೆರೆಗೊಡ್ಡಿ ಅವರು ನೀಡಿದ ಕಾಣಿಕೆಯನ್ನು ತುಂಬಿಸಿಕೊಂಡು ಮಹಾತ್ಮರ ಮುಂದೆ ಸುರಿದೆವು. ಪುನಃ ತುಂಬಿಸಿಕೊಂಡು ಬಂದೆವು. ಹೀಗೆ ಅದೆಷ್ಟು ಸಲ ಹೋಗಿ ಎಷ್ಟು ಹಣ ಸುರಿದೆವೋ?".

ಶಿಬಿರದಲ್ಲಿದ್ದ ದಿನಗಳು ಕಾಮಾಕ್ಷಮ್ಮನಿಗೆ ಜೀವನದ ಸುದಿನಗಳು. ಯಾವ ಉದ್ದೇಶಕ್ಕಾಗಿ ತಂದೆತಾಯಿಯವರನ್ನು ಬಿಟ್ಟು ಬರುವ ಸಾಹಸ ಮಾಡಿದರೋ ಅದು ಸಾರ್ಥಕವಾಯಿತೆನಿಸಿತು. ಮಡಿಮೈಲಿಗೆ ಎಂಬ ವಾತಾವರಣದ ಮಧ್ಯೆ ಬೆಳೆದು ಬಂದಿದ್ದರೂ, ಶಿಬಿರದಲ್ಲ ಕಾಮಾಕ್ಷಮ್ಮನವರ ಜೀವನಗತಿ ಬದಲಾಯಿತು.

ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಸ್ವಚ್ಛತೆ ಮತ್ತು ಸಹ ಬಾಳ್ವೆಯಿಂದ ಮನಸ್ಸು ನಿರ್ಮಲವಾಯಿತು. ಗುದ್ದಲಿ ಹಿಡಿದು ತೋಟಗಾರಿಕೆ ಮಾಡಿದರು. ಶೌಚಗೃಹಗಳನ್ನು ಸ್ವಚ್ಛ ಮಾಡಿದರು. ಭೂತ ದೆವ್ವಗಳು. ಕಳ್ಳಕಾಕರರೆಂಬ ಭಯ ಬಿಟ್ಟು ರಾತ್ರಿ ತೋಟ ಕಾಯುತ್ತಿದ್ದರು. ಈ ಕೆಲಸಗಳೆಲ್ಲಾ ಅತ್ಯಂತ ಆನಂದದಾಯಕವಾಗಿತ್ತು, ಎನ್ನುತ್ತಾರೆ ಕಾಮಾಕ್ಷಮ್ಮ.

ಬಟ್ಟಬಯಲಿನಲ್ಲಿ ತಣ್ಣನೆ ಗಾಳಿಯು ಸುಳಿದು ಮಧ್ಯ ಹಾಸಿಗೆಯ ಮೇಲೆ ಮಲಗಿ ಕಣ್ಣು ಬಿಟ್ಟಾಗ. ಶುಭ್ರ ನೀಲಾಕಾಶದಲ್ಲಿ ಮಿನುಗುವ ಆ ನಕ್ಷತ್ರಗಳ ಆ ದೃಶ್ಯ ಅದೆಷ್ಟು ಹಿತವಾಗಿತ್ತು, ಎಂದು ಆಶ್ರಮದ ನಿರ್ಭಯ ವಾತಾವರಣವನ್ನು ನೆನೆದು ಆನಂದಿಸುವರು, ಅಖಂಡ ಭಾರತದ ಒಂದು ಮಾದರಿಯಂತಿದ್ದ ಶಿಬಿರದಲ್ಲಿ ವಿವಿಧ ಭಾಷೆ, ವೇಷ, ಊಟ, ನಡೆ ನುಡಿಗಳ ಐಕ್ಯತೆಯ ಸಾದೃಶ್ಯವನ್ನು ಕಂಡರು. ದೇವರು ತನ್ನನ್ನು ವಂಚಿಸಲಿಲ್ಲ ಎಂದು ಉದ್ಗರಿಸಿದ ಕಾಮಾಕ್ಷಮ್ಮ. "ನನ್ನಲ್ಲಿ ನನಗೆ ಗೌರವ ಉಂಟಾಗಿ ಆತ್ಮವಿಶ್ವಾಸ ಹುಟ್ಟಿತು"–ಎನ್ನುತ್ತಾರೆ.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



೧೯೪೬ ಜನವರಿಯಲ್ಲಿ ಮದ್ರಾಸಿನಲ್ಲಿ ದಕ್ಷಿಣ ಭಾರತದ ಹಿಂದೀ ಪ್ರಚಾರ ಸಭೆಯ ರಜತ ಜಯಂತಿಯು ಅಭೂತಪೂರ್ವ ಸಮಾರಂಭ ಇಡೀ ಜೀವನದಲ್ಲಿ ಮರೆಯಲಾಗದ ಪವಿತ್ರವಾದ, ಸವಿಯಾದ ನೆನಪು ಎನ್ನುತ್ತಾರೆ ಕಾಮಾಕ್ಷಮ್ಮ. ಮಹಾತ್ಮ ಮುಟ್ಟಿದ್ದು ಚಿನ್ನ. ನೋಡಿದ್ದು ಪಾವನ. ಇಡೀ ಹಿಂದೀ ಪ್ರಚಾರ ಸಭೆ ಗಾಂಧೀಮಯವಾಯ್ತು. ಮದ್ರಾಸ್ ಶಹರೇ ಗಾಂಧಿಯಿಂದ ಶೋಭಿಸಿತು. ಸೈಕಲ್ ರಿಕ್ಷಾದವನು ಕೂಡ ಗಾಂಧಿ ಇಳಿದುಕೊಂಡಿದ್ದ ಭವನಕ್ಕೆ ಸಾಷ್ಟಾಂಗ ಪ್ರಣಾಮ ಮಾಡಿ ಕೈಮುಗಿದು ಭಕ್ತಿ ಗೌರವ ತೋರಿಸಿದನಂತೆ.

ಬಾಪೂ ಎಲ್ಲರಿಗೂ ತಂದೆಯಾಗಿ, ಕಲಿತ. ಕಲಿಯದ ವಿದ್ಯೆ ಬರದ ನಮ್ಮಂತಹ ಪುಕ್ಕಲು ಹೆಂಗಸರನ್ನೂ ದೇಶ ಸೇವೆಗೆ ಹದ ಮಾಡಿ ವೀರ ಮಹಿಳೆಯರಾಗುವಂತೆ ಮಾಡಿದರು. ಎಂದ ಮೇಲೆ ಅವರನ್ನು ದರ್ಶನ ಮಾಡಲು ಹೋದವರು ಹಿಂದಿರುಗ. ತ್ತಿರಲಿಲ್ಲ. ಅವರ ಮಂತ್ರದಂಡದಲ್ಲಿ ಬಂಧಿತರಾಗಿ ಸೇವಾಬದ್ಧ ಕಂಕಣರಾಗುತ್ತಿದ್ದರು

ತೂಕ ಮಾಡಿ ನಿಧಾನವಾಗಿ ಆಡುತ್ತಿದ್ದ ಮಹಾತ್ಮರ ಮಾತಿನ ಒಂದು ದೀರ್ಘ ಸಹ ಶಕ್ತಿಯುತವಾಗಿತ್ತು. ಹೃದಯಾಂತರಾಳದಿಂದ ಹೊರಬರುತ್ತಿದ್ದ ಆ ವಾಣಿ ಮತ್ತೊಬ್ಬರನ್ನು ಅವಶ್ಯ ಪ್ರಭಾವಿತರನ್ನಾಗಿ ಮಾಡುತ್ತಿತ್ತು–ಎಂದು ತಮ್ಮ ಮೇಲೆ ಮಹಾತ್ಮರ ಮಾತಿನ ಪ್ರಭಾವವನ್ನು ಕಾಮಾಕ್ಷಮ್ಮ ವಿವರಿಸುತ್ತಾರೆ.

ತಾ. ೨೮–೧–೪೬ ಮುಂಜಾನೆ, ಕಸ್ತೂರಿಬಾ ಶಿಬಿರವಾಸಿಗಳನ್ನು ತಮ್ಮ ಬಳಿಗೆ ಕರೆಸಿಕೊಂಡು "ಇದೇ ಈಗಲೇ ಹಳ್ಳಿಗೆ ಹೋಗಿ ಕೆಲಸಮಾಡಲು ಯಾರು ಸಿದ್ಧರಾಗಿದ್ದೀರಿ ?" ಎಂದು ಕೇಳಿದ ಕೂಡಲೇ 'ನಾನು ಹೋಗುವೆ' ನೆಂದು ಉತ್ತರ ನೀಡಿದ ಧೈರ್ಯವಂತೆ ಕಾಮಾಕ್ಷಮ್ಮ.

ಶಿಬಿರದ ದಿನಗಳಲ್ಲಿ ರಾಷ್ಟ್ರ ಮುಖಂಡರನ್ನು ನೋಡುವ ಅವಕಾಶ ದೊರೆತು ಸುಶೀಲಾ ನಯ್ಯರ್. ಮಣಿಬೆನ್, ಮೃದುಲಾ ಸಾರಾಬಾಯಿ, ರಾಜಕುಮಾರಿ ಅಮೃತಕೌರ್, ಶ್ರೀ ಪ್ಯಾರೆಲಾಲ್, ಜಮುನಲಾಲ್ ಬಜಾಜ್, ಪುರುಷೋತ್ತಮದಾಸ್ ಟಂಡನ್, ಜಾನಕೀದೇವಿ ಬಜಾಜ್, ಕಿಶೋರ್‌ಲಾಲ್ ಮಶ್ರುವಾಲಾ, ಸರ್ದಾರ್ ವಲ್ಲಭಾಯಿ ಪಟೇಲ್ ಇಂತಹ ಗಾಂಧೀ ಪರಿವಾರದ ಮುಖಂಡರ ಪ್ರಭಾವಕ್ಕೊಳಗಾಗಿ ಕಾಮಾಕ್ಷಮ್ಮನಿಗೆ ಧೈರ್ಯ ಸಾಹಸ ತಾನಾಗಿ ಉಕ್ಕಿತು. ಮಲೆನಾಡಿನ ಮೂಲೆಯೊಂದರ ಹಳ್ಳಿಯಾದ ಹೊಸಹಳ್ಳಿಗೆ ಗ್ರಾಮ ಸೇವಕಿಯಾಗಿ ಬೆಂಗಳೂರಿಂದ ಹೊರಟರು.

ಹಳ್ಳಿಗೆ ಹೋಗಿ ಕೆಲಸ ಮಾಡಿದ ಮೇಲೆ, ಮಹಾತ್ಮರು ಏಕೆ ಹಳ್ಳಿಗೆ ಹೋಗಲು ಹೇಳುತ್ತಿದ್ದರೆಂಬ ಅರಿವಾಯ್ತು ಕಾಮಾಕ್ಷಮ್ಮನಿಗೆ. ಹಳ್ಳಿಗಾಡಿನಲ್ಲಿ ಗಾಂಧೀನಾಮವನ್ನು ಜಪಿಸುತ್ತಾ ಬಂದ ಧೈರ್ಯದಿಂದ ಕಾಮಾಕ್ಷಮ್ಮ ತನಗೆ ಅಸಾಧ್ಯ ವೆನಿಸಿದ್ದ ಕೆಲಸವನ್ನೂ ಮಾಡಿರುವರು. ಇವರ ಈ ಸಾಧನೆ ಗುರ್ತಿಸಲ್ಪಟ್ಟು ಒಂದು ಗ್ರಾಮೋದ್ಧಾರ ಕೇಂದ್ರವನ್ನು ಸಂಘಟಿಸುವ ಜವಾಬ್ದಾರಿಯನ್ನೂ ವಹಿಸಿಕೊಂಡು ಸಫಲರಾದರು. ಈ ಕೇಂದ್ರವನ್ನು ಸಂದರ್ಶಿಸಿದ ಥಕ್ಕರ್ ಬಾಪಾರವರು ತಮ್ಮ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಮೆಚ್ಚಿಗೆಯನ್ನು ವ್ಯಕ್ತಪಡಿಸಿರುವರು. 'ಚಳವಳಿಯಲ್ಲಿ ನೀವು ಸಕ್ರಿಯ ಪಾತ್ರವಹಿಸಿದ್ದು ಯಾವಾಗ, ಎಂಬ ಪ್ರಶ್ನೆಗೆ ಕಾಮಾಕ್ಷಮ್ಮ "ಸಿದ್ದವನಹಳ್ಳಿ ಕೃಷ್ಣಶರ್ಮಾ ಮುಖಂಡತ ವಹಿಸಿಕೊಂಡಾಗ" ಎನ್ನುತ್ತಾರೆ ಕೂಡಲೇ.

"ಪಾದರಸದಂತೆ ಕೆಲಸಮಾಡುತ್ತಿದ್ದ ಕೃಷ್ಣಶರ್ಮ ಚಳವಳಿಯ ವಾತಾವರಣ ವನ್ನು ನಮ್ಮಲ್ಲಿ ಚುರುಕುಗೊಳಿಸುತ್ತಿದ್ದರು. ಮಲ್ಲೇಶ್ವರದಲ್ಲೇ ಇದ್ದ ಕೃಷ್ಣಶರ್ಮ ರವರು ನಮ್ಮ ಮಾರ್ಗದರ್ಶಕರಾಗಿದ್ದರು. ಅವರು ತೊಟ್ಟ ಹಟ ಭೀಷ್ಮ ಪ್ರತಿಜ್ಞೆ ಯಂತೆಯೇ, ಬ್ರಿಟಿಷ್ ಸರ್ಕಾರ ತತ್ತರಿಸಿ ಹೋಗುವಂತಹ ಅವರ ಕಾರ್ಯಕ್ರಮಗಳಲ್ಲಿ ನಾವು ಭಾಗಿಯಾಗುತ್ತಿದ್ದೆವು, ಅವರು ನಿಯಮಿಸಿದ ನಿಬಂಧನೆಗಳನ್ನು ಚಾಚೂ ತಪ್ಪದೆ ಪಾಲಿಸುತ್ತಿದ್ದೆವು. ಅವರಿಂದ ಎಷ್ಟು ಸ್ಫೂರ್ತಿ ಬಂತೆಂದರೆ, ಕೆಲವು ವೇಳೆ ಅವರಿಲ್ಲದ ಸಮಯದಲ್ಲಿ ನಾನೇ ಅವರ ಪಾತ್ರವಹಿಸಿ ನಾಯಕಿಯಾಗುತ್ತಿದ್ದೆ. ಆ ಸಿಂಹ ಘರ್ಜನೆ, ಮಾತಿನ ಠೀವಿ, ಛಲದ ಗಂಭೀರತೆ ನನಗೂ ಬಂತು. ಸಂಘಟನೆಯ ಕೆಲಸವಾಡಿದ್ದೇನೆ. ಸ್ವಾತಂತ್ರ್ಯಗಳಿಸುವ ಹಮ್ಮಸ್ಸು ಹುಟ್ಟಿಸಿದವರು ಅವರೇ ಎಂದು ಕೃಷ್ಣಶರ್ಮ ರವರ ನಾಯಕತ್ವವನ್ನು ವಿವರಿಸುತ್ತಾರೆ.

ಆತ್ಮಾಭಿಮಾನ ಕಾಮಾಕ್ಷಮ್ಮನವರ ಹುಟ್ಟುಗುಣ. ತನ್ನ ಇಚ್ಛೆಗೆ ಅಡ್ಡಿ ಬಂದ ವರನ್ನು ಲಕ್ಷಿಸದ ಧೈರ್ಯ. "ಇಂತಹವಳನ್ನೂ ಹದಿನೆಂಟು ವರುಷ ವಯಸ್ಸಿನವರೆಗೂ ನನ್ನ ತಂದೆ ಕೈಕಟ್ಟಿ ಕುಳಿತಿರುವಂತೆ ಮಾಡಿದ್ದರು, ಅದೇನಾಯಿತೆಂದರೆ, ಒಟ್ಟಿಗೆ ಅಡಗಿಸಿಟ್ಟ ತಡೆಯಲಾರದ ಶಕ್ತಿ ಸೋಡಾಬಾಟಲಿ ತೆರೆದಂತೆ ಸ್ಫೋಟವಾಯಿತು. ಸ್ಫೋಟವಾದ ಆ ಶಕ್ತಿಗೆ ಅಂದಿನ ಪರಿಸರ ಕ್ರಿಯಾ ಶಕ್ತಿಯ ಮಾರ್ಗವನ್ನು ತೋರಿಸಿ ಕೊಟ್ಟಿತು, ಗಾಂಧೀ ಆಶ್ರಮಕ್ಕೆ ಸೇರಿಬಿಡುವ ನಿಶ್ಚಲ ನಿರ್ಧಾರ ಆ ಶಕ್ತಿಯನ್ನು ಪ್ರೇರೇಪಿಸಿತು" ಎಂದು ಅದುಮಿಟ್ಟ ಶಕ್ತಿಯ ರಭಸ ಎಷ್ಟು ಬಿರುಸೆಂದು ವರ್ಣಿಸುತ್ತಾರೆ.

ಇದು ಒಳ್ಳೆಯದಕ್ಕೆ ಆಯಿತು, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಇಂತಹದೊಂದು ಕೂಡಿಟ್ಟ ಶಕ್ತಿಯ ಅವಶ್ಯಕತೆ ಇತ್ತು. ಸಾರ್ಥಕವಾದ ರೀತಿಯಲ್ಲಿ ಶಕ್ತಿ ವಿನಿಯೋಗ ವಾಯಿತೆಂದು ಕಾಮಾಕ್ಷಮ್ಮನಿಗೆ ಸಮಾಧಾನ.

ಇಷ್ಟಾದರೂ ಗಾಂಧೀಜಿಯವರ ಸೇವಾಗ್ರಾಮಾಶ್ರಮದ ವಾಸದ ಅವಕಾಶ ಸಿಕ್ಕಲಿಲ್ಲವೆಂಬ ಕೊರಗನ್ನು ನೀಗಿಕೊಳ್ಳಲು, ಈಗ ಸುಮಾರು ಹನ್ನೆರಡು ವರುಷಗಳ ಹಿಂದೆ ಪೂಜ್ಯ ವಿನೋಬಾರವರ ಸಂಗಡ ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳಲ್ಲಿ ಪಾದಯಾತ್ರೆ ಮಾಡಿದರು. ವಿನೋಬಾರವರೊಂದಿಗೆ ಈ ಯಾತ್ರೆ ಒಂದು ಬೇರೆಯೇ ಪ್ರಪಂಚವನ್ನು ತೆರೆದು ತೋರಿಸಿತು. ವಿನೋಬಾರವರ ಜೊತೆಯಲ್ಲಿದ್ದಾಗ ಒಂದು ಸ್ವಾರಸ್ಯದ ಸಂಗತಿ ನಡೆಯಿತು. ಆಚಾರ್ಯ ವಿನೋಬಾಜಿಗೆ "ಭರತರಾಮ ಮಿಲನ"ದ ರಾಮಾಯಣದ ದೃಶ್ಯ ಅತ್ಯಂತ ಪ್ರಿಯವಾದುದು. ಭ್ರಾತೃಮಿಲನದ ಈ ದೃಶ್ಯವನ್ನು ಸದಾಕಾಲವೂ ನೆನೆಯುತ್ತಿರುವರು. ಒಮ್ಮೆ ಹೊಲದಲ್ಲಿ ಕೆಲಸ ಮಾಡುತ್ತಿದ್ದಾಗ ಅದೇ ದೃಶ್ಯದ ಕೆತ್ತಲ್ಪಟ್ಟ ವಿಗ್ರಹವೊಂದು ಬಂಡೆಯ ಕೆಳಗೆ ನಿಜವಾಗಿಯೂ ಸಿಕ್ಕಿತು. ಅತ್ಯಂತ

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri



ಆಶ್ಚರ್ಯದಿಂದ ಆನಂದದಿಂದ ವಿನೋಬಾ ಆ ಮೂರ್ತಿಯನ್ನು ಅಪ್ಪಿಕೊಂಡು ಪೂಜ್ಯ ಭಾವನೆಯಿಂದ ಅವರಿದ್ದ ಆಶ್ರಮದಲ್ಲಿ ಪ್ರತಿಷ್ಠಾಪಿಸಿದರು. ಇಂದಿಗೂ ಈ ದೃಶ್ಯದ ವಿಗ್ರಹವನ್ನು ಚಿತ್ರಕೂಟವೆಂದು ಕರೆಯಲ್ಪಟ್ಟಪವನಾರ್ ಎಂಬಲ್ಲಿ ನೋಡಬಹುದು ಪರಂಧಾಮ ಎನ್ನುವ ನದಿಯ ದಂಡೆಯ ಮೇಲಿರುವ ಆಶ್ರಮವಿದೆ. ಇದಕ್ಕೆ ಬ್ರಹ್ಮ ವಿದ್ಯಾ ಆಶ್ರಮವೆಂದು ವಿನೋಬಾ ಧ್ಯಾನ ಆಶ್ರಮವೆಂದು ಹೆಸರಿದೆ. "ತಂದೆ ಯಂತಿದ್ದ ಬಾಪೂಜಿ, ಆಚಾರ್ಯರಾಗಿದ್ದ ವಿನೋಬಾಜಿಯನ್ನು ಕಳೆದುಕೊಂಡು ಈಗ ಏಕಾಕಿಯಾಗಿದ್ದೇನೆ. ಜನ್ಮಕೊಟ್ಟ ತಂದೆ ತಾಯಿಯನ್ನೂ ಕಳೆದುಕೊಂಡು ದಿಕ್ಕಿಲ್ಲದವ ಗಳಾಗಿದ್ದೇನೆ ಎಂದು ಕ್ಷಣಮಾತ್ರ ಎನಿಸಿ ಬಾಪೂರವರ ಹಿಂದಿ ಪತ್ರಗಳನ್ನು ಕನ್ನಡಕ್ಕೆ ಅನುವಾದಮಾಡಿ, ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಪಟ್ಟ ಲೇಖನಗಳನ್ನು ಬರೆ ಯುತ್ತಾ ಶಾಂತಿಯಿಂದ ಕಾಲ ಕಳೆಯುತ್ತಿದ್ದೇನೆ" ಎನ್ನುತ್ತಾರೆ ಕಾಮಾಕ್ಷಮ್ಮ.

"ನನ್ನ ಜೀವನದ ಮೂವತ್ತು ವರುಷಗಳ ಹಿಂದಿನ ಹಾದಿಯನ್ನು ತಿರುಗಿ ನೋಡಿದರೆ ನನ್ನಲ್ಲಿ ಅದ್ಭುತ ಮಾರ್ಪಾಟಾಗಿರುವುದು ತಿಳಿಯುತ್ತದೆ" ಎಂದು ತನ್ನನ್ನು ತಾನೇ ಅಳೆದುಕೊಂಡು ಗಾಂಧೀಜಿ ಪ್ರಭಾವವನ್ನು ಕಂಡು ಆಶ್ಚರ್ಯಪಡುತ್ತಾರೆ. ಇದೊಂದು ಮಹಿಮೆ ಇದೊಂದು ಪವಾಡ ಎನ್ನಲೇ ಎಂದು ಹೇಳಿ ನಮ್ಮನ್ನು ಅವರ ಒಳಗಾದ ಪವಾಡದಲ್ಲಿ ಮೂಕರನ್ನಾಗಿ ಮಾಡುತ್ತಾರೆ.

ಜನರೊಡನೆ ಬೆರೆತು ಮಾತನಾಡುವುದೆಂದರೆ ಕಾಮಾಕ್ಷಮ್ಮನಿಗೆ ಇಷ್ಟ. ಸಭೆ ಸಮ್ಮೇಳನಗಳಿಗೆ ಸರ್ವೋದಯ ದಿನಾಚರಣೆಗಳಿಗೆ ಹೋಗಲು ಕಾಲು ನೋವು ಅಡ್ಡಿ ಬರದು.

"ನಾನು ಸಾಯುವುದಕ್ಕೆ ಮುಂಚೆ ನನ್ನ ಪುಸ್ತಕ ಭಂಡಾರವನ್ನು ಸರಿಯಾದವರಿಗೆ ತಲುಪಿಸಬೇಕೆಂದಿದ್ದೇನೆ. ಈಗ ನನ್ನಲ್ಲಿರುವ ಶಕ್ತಿ ಯಾವುದೆಂದರೆ ಮಾತು. ಬರವಣಿಗೆ ಅಷ್ಟೆ. ಬೇರೇನೂ ಮಾಡಲಾರೆ" ಎಂದು ಹೇಳಿ ಅವರ ಅಚ್ಚಾಗಿರುವ, ಅಚ್ಚಾಗ ದಿರುವ ಅಮೂಲ್ಯ ಲೇಖನ ಸಂಪತ್ತನ್ನು ನಮ್ಮ ಮುಂದೆ ಇಡುವರು—ಕಸ್ತೂರಿಬಾ, ಸರೋಜಿನಿ ನಾಯುಡು, ಸುಭಾಷ್ ಚಂದ್ರಬೋಸ್, ಸರ್ವೋದಯ ಕಥೆಗಳು. ಲಾಹೋರಿಂದ ಭಾರತಕ್ಕೆ. ಸ್ವಾತಂತ್ರ್ಯ ಸಂಗ್ರಾಮದ ಸ್ಥಿತಿ. ಆಶ್ರಮ ಸೋದರಿಯರಿಗೆ ಬಾಪೂರವರ ತತ್ವಗಳು, ವಿನೋಬಾ ಪಾದಯಾತ್ರೆಯಲ್ಲಿ ಹಾಸ್ಯ ಪ್ರಸಂಗಗಳು-ಇವೆಲ್ಲಾ ಮುದ್ರಣವಾಗಿ ಹೊರಬರಬೇಕೆಂಬ ಆಕಾಂಕ್ಷೆ ಕಾಮಾಕ್ಷಮ್ಮನವರಿಗೆ ಎಷ್ಟರಮಟ್ಟಿಗಿದೆ ಎನ್ನುವುದು ಅವರೊಡನೆ ಮಾತಾಡಿದವರಿಗೆ ಗೊತ್ತು.

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

# ಶೋಧನ ಪತ್ರಿಕೆ

| ಪುಟ | ಪರಿಚ್ಛೇದ | ಸಾಲು | ಅಶುದ್ಧ | ಶುದ್ಧ |
|---|---|---|---|---|
| 16 | 2 | 10 | ಎಸ್ಟರ | ಎಷ್ಟರ |
| 16 | 4 | 1 | ಭಗಿಸಿ | ಭಗಿನಿ |
| 17 | 3 | ಕೊನೆಯ | ಬಾಯುಂಬ | ಬಾಯ್ತುಂಬ |
| 21 | 3 | 1 | ಕೆಲಸ ಮಾಡುವೆ | ಮಾಡುವ |
| 35 | 2 | ಕೊನೆಯ | ಮಾಡುವಂನೆ | ಮಾಡುವಂತೆ |
| 41 | 4 | 8 | ರ್ಣ | ಸಂಪೂರ್ಣ |
| 42 | 2 | ಕೊನೆಯ | ಆಗಿತು. | ಆಗಿತ್ತು. |
| 52 | | 2 | ಹಿಂಡಿದು | ಹಿಡಿದು |
| 54 | 3 | 3 | ಉಪಯೋಗವಾಯ್ತು | . (ಪೂರ್ಣ ವಿರಾಮ) |
| 57 | 3 | 1 | ಯಯತಾಸ್ಥಳ | ಯಾತ್ರಾಸ್ಥಳ |
| 58 | 6 | 3 | ನಯ್ಕರ್ | ನಯ್ಕಾರ್ |
| 60 | 3 | 1 | ಅಗತ್ಯವಿದೆ. | ಅಗತ್ಯವಿಲ್ಲ |
| 60 | 3 | ಕೊನೆಯ | ಆವರ | ಆವರಣ |
| 76 | 3 | 1 | ಎಂದಸು | ಎಂದರು |
| 77 | 5 | 1 | ನಮಗೆಲಾ | ನಮಗೆಲ್ಲಾ |
| 84 | 2 | ಕೊನೆಯ | ಚಿತ್ತ | ಚಿತ್ರ |
| 86 | 3 | 4 | ಸ್ವಾಸ್ಯ | ಸ್ವಾಸ್ಥ್ಯ |
| 88 | ಕೊನೆಯ | 13 | ಮುಖಂಡರು | ಮುಖಂಡರಲ್ಲಿ |
| 96 | 3 | 2 | ತಾಯೆಯ | ತಾಯಿಯ |

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

| | | | | |
|---|---|---|---|---|
| 96 | 5 | 6 ಮತ್ತು 7 | ಕಲಿತದ್ದು ಗಳಿಸಬೇಕು ಇದೇ ಧ್ಯೇಯವೇ ಏನೆಂದರೆ ಬ್ರಿಟಿಷರ ನಮ್ಮಲ್ಲಿ ಬೇರೂರಿ | ಕಲಿತದ್ದು ಏನೆಂದರೆ, ಬ್ರಿಟಿಷರ ಆಡಳಿತದಲ್ಲಿರ ಬಾರದು. ಸ್ವಾತಂತ್ರ್ಯವನ್ನು ಗಳಿಸಬೇಕು. ಇದೇ ಧ್ಯೇಯವೇ ನಮ್ಮಲ್ಲಿ ಬೇರೂರಿ |
| 101 | ಕೊನೆಯ | 1 | ಹತಿ | ಹತ್ತಿ |
| 112 | 2 | 7 | ಇದನ್ನು ತಿಳಿದ | ಇದನ್ನು ತಿಳಿದ ದೇವಸ್ಥಾನದ ಜನರು ನಮ್ಮನ್ನು ತಡೆ ಯಲು ಪೋಲೀಸರನ್ನು ಇಟ್ಟರು. ದೇವಸ್ಥಾನದ ಬಾಗಿಲಲ್ಲಿ |
| 116 | 1 | 6 | ಜಗದ್ವಂದ್ವ | ಜಗದ್ವಂದ್ಯ |
| 120 | 4 | 1 | ನಾನ | ನಾನು |
| 120 | 4 | 7 | ಗುಸಾಜಿ | ಗುಣಾಜಿ |
| 123 | 2 | ಕೊನೆಯ | ವ್ಯಕೃ | ವ್ಯಕ್ತಿ |
| 125 | 4 | 1 | ದೇವಕ | ದೇವಕ್ಕ |
| 129 | ಕೊನೆಯ | ಕೊನೆಯ | ಘಟನೆಯನೂ | ಘಟನೆಯನ್ನೂ |
| 133 | 1 | 4 | ಎಲ್ಥಾ | ಎಲ್ಲಾ |
| 133 | 2 | 5 | ದೃಷಾಂತ | ದೃಷ್ಟಾಂತ |
| 134 | 2 | 3 | ಹಂಪ | ಹಂಚಿ |
| 134 | 4 | 3 | ಎಲ್ಲ | ಎಲ್ಲಿ |
| 137 | 2 | 3 | ನಿಂತಿದ್ದರ | ನಿಂತಿದ್ದರು |
| 137 | 3 | 5 | ಇಷ್ಣು | ಇಷ್ಟು |
| 138 | 3 | 3 | ಕೊಂದೊಯ್ದು | ಕೊಂಡೊಯ್ದು |
| 159 | 2 | 8 | ದಿನಗರನ್ನು | ದಿನಗಳನ್ನು |
| 159 | 3 | 1 | ಚಿತ್ರ | ಚಿತ್ತ |

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

| | | | | |
|---|---|---|---|---|
| 165 | 2 | ಕೊನೆಯ | ಸುಸಂಸ್ಕೃಯನ್ನು | ಸುಸಂಸ್ಕೃತಿಯ ನ್ನು |
| 170 | 1 | 7 | ನಲೂ | ನಲ್ಲೂ |
| 170 | 2 | 3 | ಯಿತ್ತು | ಗಿತ್ತು |
| 170 | 3 | 6 | ದೊರೆತಿದ್ದುದ | ದೊರೆತಿದ್ದುದು |
| 173 | 4 | 1 | ಕಂನಿರಾ | ಕರನಿದಾ |
| 173 | 4 | 3 | ಯೂಡು | ಹೂಡು |
| 183 | 4 | | ಸಗತಿ | ಸಂಗತಿ |
| 194 | 3 | 11 | ಸಯಂ | ಸ್ವಯಂ |
| 201 | 2 | 1 | ೧೯೬೧ | ೧೯೪೧ |
| 203 | 2 | 11 | ಯುವರು | ಯುವರನ್ನು |
| 213 | 1 | 7 | ಮತು | ಮತ್ತು |
| 217 | 2 | 4 | ಸೋರಲೆ | ಸೋಸಲೆ |
| 217 | 3 | 1 | ವ್ಯಕ್ತಿಗತವಾಗಿ | ವ್ಯಕ್ತಿಗತವಾಗಿದೆ |
| 217 | 3 | 12 | ಕಲಿತಿಧ್ದೇನೆ | ಕಲಿತಿದ್ದೇನೆ |
| 225 | 4 | 11 | ಎಸ್. ಪಿ. ರಾಮಾನುಜಂ | ಪಿ. ಎಸ್. ರಾಮಾನುಜಂ |
| 233 | 4 | ಕೊನೆಯ | ಹೋದರೆಂದೇ | ಹೋದರೆಂದೆ |
| 235 | 2 | 6 | ಕಣ್ಣಗರ್ಗರೆದ | ಕಣ್ಣೀರ್ಗರೆದ |
| 237 | 2 | 1 | ಹೆಚ್ಚೆಗ್ರಾಮ | ಹೆಜ್ಜೆಗ್ರಾಮ |
| 237 | 5 | 2 | ಘರ್ಷಣೆಯಹಾವಾಗ | ಯಾದಾಗ |
| 252 | 2 | 2 | ಸಿಗಲಾರದಂದಿದ್ದನು | ದಂದಿದ್ದವು |
| 253 | 6 | 4 | ಲೆಕ್ಕ ಇರುವುದಿಲ್ಲ | ಇಡುವುದಿಲ್ಲ |
| 258 | 3 | 5 | ಗುಡಿಗೆ | ಗುಂಡಿಗೆ |
| 263 | 6 | 4 | ಬಂದು ಬಂದು | ಬಂದು |
| 273 | 4 | 3 | ಸಲಹ | ಸಲದ |
| 282 | 3 | 1 | ೧೫-೮-೨೭ | ೧೫-೮-೪೭ |

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

| | | | | |
|---|---|---|---|---|
| 284 | ಕೊನೆಯ | 1 | ಕಡಾಯ | ಕಡ್ಡಾಯ |
| 286 | 2 | 2 | ವಾಡಿಕೆಯಿತು | ವಾಡಿಕೆಯಿತ್ತು |
| 289 | 6 | 6 | ಸಿಕಿತೆಂದು | ಸಿಕ್ಕಿತೆಂದು |
| 291 | 1 | 1 | ಪ್ರಾರಂಭವಾಯಿತು | ಪ್ರಾರಂಭವಾದುದು |
| 294 | 3 | 7 | ಮುರಿದರರು | ಮುರಿದವರು |
| 301 | 3 | 2 | ಕಟ್ಟುಪಾಡುಮಾಡಿ | ಮಾಡಿದರು |
| 303 | 4 | 5 | ನೆನೆ[illegible] | ನೆನೆದರು |

8260

पुस्तकालय
गुरुकुल कांगड़ी विश्वविद्यालय

GURUKUL KANGRI LIBRARY
Accos on
Class on
Cat on
Tag etc.
Checked
Any Other
28/11/13

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

CC-0. In Public Domain. Gurukul Kangri Collection, Haridwar

Digitized by Arya Samaj Foundation Chennai and eGangotri

## ಪರಿಚಯ

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಿಳೆಯರ ಪಾತ್ರ ಪುರುಷರಿಗಿಂತ ಕಡಿಮೆಯೇನಿಲ್ಲ. ಅದಕ್ಕಾಗಿಯೆ ಗಾಂಧೀಜಿಯವರು ಮಹಿಳೆಯರನ್ನು ರಾಜಕೀಯಕ್ಕೆ ಸಕ್ರಿಯವಾಗಿ ತೊಡಗಿಸಿದರು.

" ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಮ್ಮ ವೀರ ವನಿತೆಯರು " ಕೃತಿ ಕರ್ತೃಗಳಾದ ಶ್ರೀಮತಿ ಕಮಲಾ ಸಂಪಳ್ಳಿಯವರು ವೃತ್ತಿಯಿಂದ ಉಪಾಧ್ಯಾಯರಾದರೂ ಆತ್ಮ ಸಂತೋಷದ ಸಾಧನೆಗಾಗಿ ಬೆಳೆಸಿಕೊಂಡ ಹವ್ಯಾಸ, ಸಾಹಿತ್ಯಾಭ್ಯಾಸ. ಸಾಹಿತ್ಯ ಸೃಷ್ಟಿ ಅವರ ದೈವದತ್ತವಾದ ಪ್ರತಿಭೆ ಸ್ವಪ್ರಯತ್ನದಿಂದ ಬೆಳೆಸಿಕೊಂಡ ಪಾಂಡಿತ್ಯ. ಅವರ ಅನುಭವಗಳು ಹೆಪ್ಪುಗಟ್ಟಿ ಆಲೋಚನೆಗಳು ಹರಳುಗೊಳ್ಳುತ್ತಿವೆ.

ಶ್ರೀಮತಿ ಕಮಲಾ ಸಂಪಳ್ಳಿಯವರು ತಮ್ಮ ಸಾಹಿತ್ಯ ಕ್ಷೇತ್ರದ ಅಮೋಘ ಸೇವೆಗಾಗಿ ರಾಜ್ಯ ಪ್ರಶಸ್ತಿ ಪಡೆದಿರುವ ಶ್ರೀ ಜಗ್ಗು ಶಿಂಗರಯ್ಯಂಗಾರ್‌ರವರ ಪುತ್ರಿ. ಆದ್ದರಿಂದ ಕಮಲಾ ಸಂಪಳ್ಳಿಯವರಿಗೆ ಸಾಹಿತ್ಯ ಹುಟ್ಟಿನಿಂದಲೇ ಬಂದದ್ದಾಗಿದೆ.

ಕಮಲಾ ಸಂಪಳ್ಳಿಯವರು ತಮ್ಮ 36 ವರ್ಷಗಳ ವಿದ್ಯಾ ಇಲಾಖೆಯ ಅಮೋಘ ಸೇವೆಯ ನಂತರ ವಾಣಿ ವಿಲಾಸ ವಿದ್ಯಾ ಸಂಸ್ಥೆಯ ಪ್ರಾಂಶುಪಾಲರಾಗಿದ್ದಾರೆ. ಇವರ ಪವಿತ್ರ ಸೇವೆಯನ್ನು ಪುರಸ್ಕರಿಸಿ ರಾಜ್ಯ ಸರ್ಕಾರ ಇವರಿಗೂ ಸಹ ರಾಜ್ಯ ಪ್ರಶಸ್ತಿ ನೀಡಿದೆ. ಸುಸಂಸ್ಕೃತರಾದ ಇವರು ಭಾರತೀಯ ಸಂಸ್ಕೃತಿಯ ಬಗ್ಗೆ ಹೆಚ್ಚಿನ ಆದರ-ಅಭಿಮಾನವುಳ್ಳವರಾಗಿದ್ದಾರೆ. ಇವರೆಲ್ಲ ಲೇಖನಗಳು ಪ್ರಮುಖವಾಗಿ ಸ್ತ್ರೀಯರ ಅಭಿವೃದ್ಧಿ, ಅವರ ಶೋಷಣೆ, ಸಮಾಜದಲ್ಲಿ ಅವರ ಸ್ಥಾನಮಾನಗಳನ್ನು ಕುರಿತದ್ದಾಗಿವೆ. ಇವರ "ರಾಷ್ಟ್ರಕೂಟ", "ಕೃಷ್ಣ", "ವೀರಬಂಕೆಯ" ಇತ್ಯಾದಿ ಪುಸ್ತಕಗಳು ಈಗಾಗಲೇ ಪ್ರಕಟಿತವಾಗಿವೆ. ಹಲವಾರು ಲೇಖನಗಳು ಇನ್ನೂ ಪ್ರಕಟವಾಗಬೇಕಾಗಿವೆ. ಆದ್ದರಿಂದ ಸಾಹಿತ್ಯ ರಚನೆಯಲ್ಲಿ ಸಿದ್ಧಹಸ್ತರಾಗಿರುವ ಕಮಲಾ ಸಂಪಳ್ಳಿಯವರು "ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಮ್ಮ ವೀರ ವನಿತೆಯರು" ಸಲ್ಲಿಸಿದ ಅಮೋಘ ಸೇವೆ, ತೋರಿಸಿದ ತ್ಯಾಗ, ಹೋರಾಟಗಳನ್ನು ಈ ಪುಸ್ತಕದಲ್ಲಿ ಚಿತ್ರಿಸುವಲ್ಲಿ ಸಫಲರಾಗಿದ್ದಾರೆಂದು ಸಂಶಯವಿಲ್ಲದೆ ಹೇಳಬಹುದು.

CC-0. In Public Domain. Gurukul Kangri Collection, Haridwar

ಎಸ್. ಜಿ. ನಾಗವೇಣಿ, ಎಂ. ಎ.,
ಬೆಂಗಳೂರು